ಉದ್ದಿಮೆಗಳು ಮತ್ತು ಸರ್ಕಾರಿ ಅನುದಾನ ಪಡೆಯುತ್ತಿರುವ ಎಲ್ಲ ಸಂಸ್ಥೆಗಳ ಅಧಿಕಾರಿಗಳು ಅಥವ ನೌಕರರನ್ನು ಪ್ರಾಧಿಕಾರದ ಮುಂದೆ ಹಾಜರಾಗುವಂತೆ ನಿರ್ದೇಶಿಸುವ ಅಧಿಕಾರ ನೀಡಲಾಗಿದೆ.

ಪ್ರಾಧಿಕಾರದ ಕೆಲವು ಮುಖ್ಯ ಕಾರ್ಯಗಳು ಈ ರೀತಿ ಇವೆ: ಕನ್ನಡ ಅನುಷ್ಠಾನದ ಬಗೆಗೆ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು, ಸ್ಥಳೀಯ ಸಂಸ್ಥೆಗಳು ಸರ್ಕಾರಿ ಅನುದಾನ ಪಡೆಯುತ್ತಿರುವ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳ ಪರಿಶೀಲನೆ.

ಮಹಿಷಿ ವರದಿಯ ಶಿಫಾರಸುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ತರಲು ಅಗತ್ಯ ಕ್ರಮ ಕೈಗೊಳ್ಳುವುದು.

ಕನ್ನಡ ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವಲ್ಲಿ ಇರುವ ಅಡಚಣೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಸೂಕ್ತ ಕ್ರಮ ಕೈಗೊಳ್ಳುವುದು.

ಅಧಿಕಾರಿಗಳಿಗೆ - ನೌಕರರಿಗೆ ಕನ್ನಡ ಬಳಕೆಗೆ ಅನುಕೂಲವಾದ ತರಬೇತಿ ಮತ್ತು ಆ ಸಂಬಂಧ ಪಠ್ಯಕ್ರಮ ಸಾಹಿತ್ಯ ಸಿದ್ಧಪಡಿಸುವುದು.

ಕನ್ನಡ ಬೆರಳಚ್ಚು ಯಂತ್ರಗಳ ತಯಾರಿಕೆ, ಖರೀದಿ ಮತ್ತು ವಿತರಣೆ ಬಗೆಗೆ ಕಚೇರಿ ಆಧುನೀಕರಣದಲ್ಲಿ ಬಳಸಲಾಗುವ ಕಂಪ್ಯೂಟರ್, ಟೆಲಿಪ್ರಿಂಟರ್, ಟೆಲೆಕ್ಸ್ ಇತ್ಯಾದಿ ಆಧುನಿಕ ಉಪಕರಣಗಳಲ್ಲಿ ಕನ್ನಡ ಬಳಕೆ ಬಗೆಗೆ ಅಧ್ಯಯನ,

"ಆರು ವರ್ಷದಿಂದ ಕಾಳಸಂತೆಯಲ್ಲಿ ಸೀಮೆಎಣ್ಣೆ ಮಾರುವುದೇ ನನ್ನ ಕಸುಬು. ಅದಕ್ಕಾಗಿ ಎರಡು ತಿಂಗಳು ಜೈಲುಶಿಕ್ಷೆಯನ್ನೂ ಅನುಭವಿಸಿಯಾಗಿದೆ. ಆದರೆ ಎರಡು ತಿಂಗಳಿಂದ ನನ್ನಲ್ಲೇ ನಾನು ಬದಲಾವಣೆ ಕಂಡಿದ್ದೇನೆ. ಕುಡಿತ ನಿಂತುಹೋಗಿದೆ. ಕಾಳಸಂತೆ ವ್ಯವಹಾರ ಮಾಡಲು ಮನಸ್ಸು ಬರುತ್ತಿಲ್ಲ."

ಇವರೆಲ್ಲರೂ ಅಪರಾಧ ಎಸಗಿ, ಕಾನೂನು ರೀತ್ಯ ಶಿಕ್ಷೆ ಅನುಭವಿಸಿದವರು. ಒಮ್ಮೆ ಜೀವನದಲ್ಲಿ ಮಾಡಿದ ತಪ್ಪನ್ನು ಸರಿಮಾಡಿಕೊಳ್ಳಲಾಗದೇ ಮತ್ತೆ ಅದೇ ದಂಧೆಗೆ ಇಳಿದವರು. ಪೊಲೀಸರ ಬೇಟೆ, ಸಮಾಜದ ವ್ಯಂಗ್ಯ ನೋಟ, ತಿರಸ್ಕಾರಗಳಿಂದ ಹೊರಬರಲು ಸಾಧ್ಯವಾಗದೇ ನೋವು ಹುದುಗಿಟ್ಟುಕೊಂಡು ದಿನ ನಡೆಸುವವರಿಗೆ ಸಾಲ ಕೊಡಿಸಿದರು.

ಎಲ್ಲದಕ್ಕಿಂತ ಶಿಸ್ತು ಎಂಬ ಪದವನ್ನೇ ಜೀವನದಲ್ಲಿ ಅರಿಯದ 200 ಯುವಕರಿಂದ ಎರಡು ತಿಂಗಳಿನಿಂದ ಯೋಗ, ವ್ಯಾಯಾಮದಲ್ಲಿ ನೀಡಿದ ತರಬೇತಿಯ ಫಲಿತಾಂಶದ ಪ್ರದರ್ಶನ ಕೊಡಿಸಿದರು.

ಪವಾಡ

ಬೆಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿ ಡಾ।। ಎಚ್. ನರಸಿಂಹಯ್ಯ ಅವರು ಇದನ್ನೇ "ಪವಾಡ" ಎಂದು ಬಣ್ಣಿಸಿದರು. "ಎಲ್ಲಿಯಾದರೂ ಬಹಿರಂಗವಾಗಿ ನ್ಯಾಯಾಧೀಶರು ಅಪರಾಧಿಯೊಬ್ಬನ ಕೈ ಕುಲುಕುವುದನ್ನು ಯಾರಾದರೂ ನೋಡಿದ್ದೀರಾ? ಅದನ್ನು ನಾವಿಲ್ಲಿ ಇಂದು ಕಂಡಿದ್ದೇವೆ. ಇದು

"ಸಾಲ ನೀಡಿರುವ ಬ್ಯಾಂಕ್‌ಗಳಿಗೆ ನಾನು ವೈಯಕ್ತಿಕವಾಗಿ ಹಣ ಹಿಂತಿರುಗುವ ಬಗ್ಗೆ ಖಾತರಿ ನೀಡುತ್ತೇನೆ. ಪ್ರತಿ ಪೈಸೆಯನ್ನೂ ಈ ಹುಡುಗರು ನೀಡುತ್ತಾರೆ. ಒಂದು ವೇಳೆ ಅದಾಗದಿದ್ದರೆ ನನ್ನ ಕಿಸೆಯಿಂದಲಾದರೂ ನೀಡುತ್ತೇನೆ" ಎಂದು ಘೋಷಿಸಿದರು.

ಅಂತ್ಯದಲ್ಲಿ ಯುವಕರಿಗೆ 2 ತಿಂಗಳ ತರಬೇತಿ ನೀಡಿದ ಇನ್‌ಸ್ಪೆಕ್ಟರ್ ಡಿಸೋಜ ಒಂದು ಮಾತು ಹೇಳಿದರು: "ನನಗೆ ಈಗ ಈ ಎಲ್ಲ ಯುವಕರೂ ನನ್ನ ಸಂಸಾರದಲ್ಲಿನ ಸದಸ್ಯರೇನೋ ಎಂಬ ಭಾವನೆಯುಂಟಾಗಿದೆ."

ಬಹುಶಃ ಎರಡು ಗಂಟೆಗಳ ಶಿಸ್ತುಬದ್ಧ ಕಾರ್ಯಕ್ರಮ ನೋಡಿದ ಎಲ್ಲರಲ್ಲೂ ಆ ಭಾವನೆ ಮೂಡಿದಂತಿತ್ತು.



ಮನವಿಪ ... ಹಾಗೂ ... ಸಲ್ಲಿಸು ... ಕೇರಳಗಳ ವೈಮಾನಿಕ ... ತಿರುವನಂತ ... ಅವರಿಗೆ ಮನವಿಪತ್ರ

ಮೂರ

ಬೆಳಗೆ

ಹದಿನೆ... ಅತಿವೃಷ್ಟಿ... ಅನುಭವಿಸಿ... ಧಾರವಾ...

ಹಣಕಾಸು ಸಚಿವ
ಕೃಷಿ ಸಚಿವರಿಗೆ
ೂ ಅವರು ತಿಳಿಸಿದರು.
ತ್ರಿ ಪಿ. ವಿ.
ಅವರು ಡಿಸೆಂಬರ್
ೀಖು ಕರ್ನಾಟಕ -
ಾಹಪೀಡಿತ ಪ್ರದೇಶಗಳ
ೀಕ್ಷೆ ನಡೆಸುವರು. ತಾವು
ದ ವಿಮಾನ ನಿಲ್ದಾಣದಲ್ಲಿ
ತಹುದೇ ಇನ್ನೊಂದು
ಸಲ್ಲಿಸುವುದಾಗಿಯೂ

ಜಿಲ್ಲೆಗಳಲ್ಲಿ
ರಿ ಹಾನಿ

ಪ್ರಭ ವಾರ್ತೆ
ೂರು, ನ. 27

ದಿನಗಳ ಹಿಂದೆ
ಹಾನಿ ಸಾವು-ನೋವು
ಳ್ಳಾರಿ, ರಾಯಚೂರು,
ಗಳು ಕಳೆದ ವಾರವೂ
ುಳೆಯಿಂದ ತತ್ತರಿಸಿದೆ.
ಕ್ಕೈರು ಭೂಮಿಯಲ್ಲಿ
, ಹತ್ತಿ, ಸೂರ್ಯಕಾಂತಿ,
, ಮೆಣಸಿನ ಕಾಯಿ
ಹೋಗಿದೆ. ತಡವಾಗಿ
ಫಸಲಿಗೆ
ಮುಸುಕಿನ

ಇಂದು ಟಿ.ಸಿ.ಎಚ್. ಪರೀಕ್ಷೆ ಫಲಿತಾಂಶ

ಬೆಂಗಳೂರು, ನ. 27

ಕಳೆದ ತಿಂಗಳು ನಡೆದ ಟಿ.ಸಿ.ಎಚ್. ಪೂರಕ ಪರೀಕ್ಷೆ ಫಲಿತಾಂಶ ಶನಿವಾರ (ನ. 28) ಬೆಳಿಗ್ಗೆ 11ಕ್ಕೆ ಮಾನ್ಯತೆ ಪಡೆದ ಎಲ್ಲಾ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಚೇರಿಯಲ್ಲಿ ಪ್ರಕಟವಾಗಲಿದೆ.

ಮರು ಎಣಿಕೆಗೆ ಅರ್ಜಿ ಸಲ್ಲಿಸಲು ಕೊನೆ ದಿನ ಡಿಸೆಂಬರ್ 14. 1993ರ ಮೇನಲ್ಲಿ ನಡೆಯುವ ಪ್ರಥಮ ಮತ್ತು ದ್ವಿತೀಯ ಟಿ.ಸಿ.ಎಚ್. ಹಾಗೂ ಪಿಪಿ.ಟಿ. ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಕೊನೆ ದಿನ ಡಿಸೆಂಬರ್ 21. 20 ರೂ. ದಂಡ ಶುಲ್ಕ ಸಹಿತ ಅರ್ಜಿ ಸಲ್ಲಿಸಲು ಕೊನೆ ದಿನ ಡಿ. 28.

ಅಂಕ ಪಟ್ಟಿಗಳನ್ನು ಸಂಬಂಧಿಸಿದ ಶಿಕ್ಷಕರ ತರಬೇತಿ ಸಂಸ್ಥೆಗಳಿಂದ ಡಿಸೆಂಬರ್ 7ರಂದು ಅಥವ ಅನಂತರ ಪಡೆಯಬಹುದೆಂದು ಮಂಡಳಿ ಪ್ರಕಟಿಸಿದೆ.

ಕೂಡಲಸಂಗಮ ಶರಣ ಮೇಳಕ್ಕೆ, ವಿಶೇಷ

ನಡೆಯಲಿದ್ದು ... ದಿನಗಳು ಮಾತ್ರ. ಡಿಸೆಂಬರ್ 19, 20, 25, 26 ಮತ್ತು 27ರಂದು ವಿಧಾನ ಪರಿಷತ್ತು ಸಭೆ ಸೇರುವುದಿಲ್ಲ.

ಮತ್ತು ... - ನೌಕರರು ಉಲ್ಲಂಘಿಸಿದ ... ಉಲ್ಲಂಘನೆಯನ್ನು ಕರ್ತವ್ಯ ಲೋ...

ಹಿಂಗಾರು ಬೆಳೆಗೆ ಹೆಚ್ಚಿ... ಬೆಲೆ: ಜಾಖಡ್ ಇ...

ನವದೆಹಲಿ, ನ. 27

ರೈತರ ಹಿಂಗಾರು ಬೆಳೆಗೆ ಈ ಸಲ ಹೆಚ್ಚಿನ ಬೆಲೆ ದೊರಕಿಸಿಕೊಡಲು ಸಾಧ್ಯವಾಗಬಹುದು ಎಂದು ಕೇಂದ್ರ ಕೃಷಿ ಸಚಿವ ಬಲರಾಮ್ ಜಾಖಡ್ ಲೋಕಸಭೆಯಲ್ಲಿ ಗುರುವಾರ ತಿಳಿಸಿದರು.

ಮುಂಗಾರು ಬೆಳೆಗೂ ಹಿಂದಿನ ವರ್ಷ ನೀಡಿದ್ದಕ್ಕಿಂತ ಹೆಚ್ಚಿನ ಬೆಲೆ ನೀಡುವ ಇಂಗಿತವನ್ನು ಅವರು ವ್ಯಕ್ತಪಡಿಸಿದರು.

ಕೃಷಿ ಕ್ಷೇತ್ರದಲ್ಲಿ ತಲಾ ಆದಾಯ ಕಡಿಮೆಯಾಗಿದೆಯೆಂಬುದನ್ನು ಅವರು ನಿರಾಕರಿಸಿದರು. 1980-81ರಲ್ಲಿ ತಲಾ ಆದಾಯ 683 ರೂ. ಇತ್ತು. 1990-91ರಲ್ಲಿ ಅದು 756 ರೂ.ಗೆ ಏರಿದೆ ಎಂದು ಜಾಖಡ್ ತಿಳಿಸಿದರು.

ಗೋಧಿ ಉತ್ಪಾದನೆ ಕಡಿಮೆಯಾಗಲಿಕ್ಕಿಲ್ಲ. ಆದರೆ ಇತರ ಆಹಾರಧಾನ್ಯಗಳ ಉತ್ಪಾದನೆ ... ಗೋಧಿಗೆ ಬೇಡಿಕೆ ... ಅವರು

ಖಾತೆ ಸ್ಟೇಟ್ ಸಚಿವ ರಾಮಚಂದ್ರನ್ ತಿಳಿಸಿದರು. ... ಎಂಟನೆ ಯೋಜನೆ... ಯೋಜನೆಗೆ 30 ಕೋಟಿ ... ಮಂಜೂರು ಮಾಡಲಾ... ಅವರು ನುಡಿದರು.

ಈ ಯೋಜನೆಯ... ಆಂಧ್ರ, ಗೋವಾ, ... ಮಹಾರಾಷ್ಟ್ರ, ಒರಿಸ್ಸಾ... ತಮಿಳುನಾಡಿನಲ್ಲಿ ಜಾರಿಗೊಳಿಸಲಾಗುವು... ರಾಮಚಂದ್ರನ್ ಹೇ...

ಬಿ.ಇ.ಎಲ್. ... ಸಂಶೋ...

... ಹಗಳನ್ನ ... ರಕ್ಷಣಾ ... ಉಪಕರಣವಾದ್ರ-1 ... ನಿರ್ಮಾಣಕ್ಕಾಗಿ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೨



ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀ

ಆನಂದರಾಮಾಯಣಂ

(ಸಂಸ್ಕೃತಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ಸಾರಕಾಂಡ—ಒಂದನೆಯ ಭಾಗ

(೧—೯ ಸರ್ಗಗಳು)

ಅನುವಾದಕ:

ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ

ಸಾಹಿತ್ಯ ವಿದ್ವಾನ್

ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸು)

೧೯೪೭

॥ ಶ್ರೀರಸ್ತು ॥

ಪೀಠಿಕೆ

ಪ್ರಪಂಚದಲ್ಲಿ ರಾಮಾಯಣದ ಕಥೆಯನ್ನು ಕೇಳದವರೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಅದರಲ್ಲಿಯೂ ನಮ್ಮ ಹಿಂದೂದೇಶದವರಂತೂ ವಿಶೇಷ ಶ್ರದ್ಧೆಯಿಂದಲೇ ಕೇಳುವರು. ರಾಮಾಯಣದ ಕಥೆಯು ಒಂದಾಗಿದ್ದರೂ ಆ ರಾಮಾಯಣವನ್ನು ಅನೇಕರು ರಚಿಸಿರುವರು. ಆದರೆ ಮುಖ್ಯವಾದ ಕಥೆಯು ಒಂದೇ ಆಗಿದ್ದರೂ ಅವುಗಳು ಬೋಧಿಸುವ ವಿಷಯಗಳು ಬೇರೆ ಬೇರೆಯಾಗಿರುವುವು.

ಇವುಗಳಲ್ಲಿ ವಾಲ್ಮೀಕಿಯು ರಚಿಸಿರುವ ರಾಮಾಯಣವೇ ಎಲ್ಲರಿಂದಲೂ ಆದೃತವಾಗಿ ಬಹುಮಾನಿತವಾಗಿರುವುದು. ಪ್ರಕೃತದಲ್ಲಿ ಈಗ ಅನುವಾದಿಸಲು ಹೊರಟಿರುವ ಈ ಆನಂದರಾಮಾಯಣವು ವಾಲ್ಮೀಕಿಯಿಂದ ರಚಿತವಾದುದೆಂದು ಹೇಳಲ್ಪಟ್ಟಿದ್ದರೂ ಶ್ರೀಮದ್ರಾಮಾಯಣವನ್ನು ವಾಲ್ಮೀಕಿ ರಚಿತವೆಂದು ಭಾವಿಸಿಕೊಂಡು ನೋಡಿದರೆ ಇವೆರಡರ ಶೈಲಿ, ಥಾಟಿ, ಕವಿತೆಯ ಸರಸತೆಗಳಲ್ಲಿ ಅಜಗಜಾಂತರವಿರುವುದರಿಂದ ಈ ಆನಂದರಾಮಾಯಣವು ಬೇರೆಯವರಿಂದ ರಚಿತವಾಗಿರಬಹುದೆನ್ನಿಸುತ್ತದೆ.

ಆದರೂ ಇದರಲ್ಲಿರುವ ರಾಮನ ಚರ್ಯೆಗಳು ಅನೇಕ ಮನೋಹರವಾದ ರೀತಿಯಲ್ಲಿ ಹೇಳಲ್ಪಟ್ಟ ಅಪೂರ್ವಾಂಶಗಳಾಗಿವೆ. ಒಟ್ಟಿನಲ್ಲಿ ಇದನ್ನು ಓದಿದವರಿಗೆ ಇದು ಕೃಷ್ಣಾವತಾರಕ್ಕೆ ಉಪಷ್ಟಂಭಕವಾದ ಗ್ರಂಥವೆಂದೂ, ರಾಮಾವತಾರದಲ್ಲಿ ಸ್ವಾಮಿಯ ಚರ್ಯೆಯಲ್ಲಿ ಊಹಿಸಬಹುದಾದ ಲೋಪಗಳ ಪರಿಹಾರಕವೆಂದೂ ಹೇಳದಿರಲವಕಾಶವಿಲ್ಲ.

ಈ ಆನಂದರಾಮಾಯಣದಲ್ಲಿ ರಾಮನು ಹುಟ್ಟಿದ ಮೊದಲುಗೊಂಡು ತಾನು ಮಾಡುತ್ತಿದ್ದ ಸಾಮಾನ್ಯ ಮತ್ತು ವಿಶೇಷಕಾರ್ಯಗಳು ವರ್ಣಿತವಾಗಿವೆ. ಅವು ಬಹು ಮನೋಹರವೂ ಆಗಿವೆ. ಈ ರಾಮಾಯಣವು ರಾಮನಲ್ಲಿರುವ ಕೃಷ್ಣಾವತಾರಕ್ಕೆ ಉಪಷ್ಟಂಭಕವಾದ ಶಕ್ತಿಯನ್ನು ಹೇಳುವುದಕ್ಕೆ ಹೊರಟು ಅವನ ಏಕಪತ್ನಿತ್ವವನ್ನು ದೃಢಪಡಿಸಿ ಅವನಮೇಲೆ ನಾವು ಸಂದೇಹಿಸ ಬಹುದಾದ ಕೆಲವು ವಿಷಯಗಳಿಗೆಲ್ಲಕ್ಕೂ ಸಮಾಧಾನವನ್ನು ವಿವರಿಸಿದೆ.

ಕವಿಯು ಈ ಗ್ರಂಥವನ್ನು 1) ಸಾರಕಾಂಡ, 2) ಯಾತ್ರಾಕಾಂಡ, 3) ಯಾಗಕಾಂಡ, 4) ವಿಲಾಸಕಾಂಡ, 5) ಜನ್ಮಕಾಂಡ, 6) ವಿವಾಹಕಾಂಡ, 7) ರಾಜ್ಯಕಾಂಡ, 8) ಮನೋಹರಕಾಂಡ, 9) ಪೂರ್ಣಕಾಂಡಗಳಿಂದು ಒಂಭತ್ತು ಭಾಗವಾಗಿ ವಿಂಗಡಿಸಿದ್ದಾನೆ. ಸಾರಕಾಂಡವನ್ನು ಪೂರ್ತಿಯಾಗಿ ಒಂದು ಭಾಗವನ್ನಾಗಿ ಪ್ರಕಟಿಸಲು ಪುಸ್ತಕದ ಗಾತ್ರವು ಹೆಚ್ಚಿ ಓದುಗರಿಗೆ ತೊಂದರೆಯಾಗಬಹುದೆಂಬ ಉದ್ದೇಶದಿಂದ ಒಂಭತ್ತು ಸರ್ಗಗಳಿಗೆ ಒಂದು ಪುಸ್ತಕವನ್ನು ವಿಭಾಗಿಸಲಾಗಿದೆ.

ಇದರಲ್ಲಿ ಮೊದಲು ವಂಶಪರಂಪರೆಯನ್ನು ಹೇಳಿ ದಶರಥನು ಪುತ್ರಪ್ರಾಪ್ತಿ ಗೋಸ್ಕರವಾಗಿ ಋಷ್ಯಶೃಂಗನಿಂದ ಪುತ್ರಕಾಮೇಷ್ಟಿಯಾಗವನ್ನು ಮಾಡಿಸಿ ಪುತ್ರರನ್ನು ಹೊಂದುವನು. ವಿದ್ಯಾಭ್ಯಾಸವೆಲ್ಲವೂ ಮುಗಿಯುವಷ್ಟರಲ್ಲಿಯೇ ವಿಶ್ವಾಮಿತ್ರನು ಬಂದು ತನ್ನ ಯಾಗರಕ್ಷಣೆಯ ನೆವದಿಂದ ರಾಮಲಕ್ಷ್ಮಣರನ್ನು ಕರೆದುಕೊಂಡು ಹೋಗಿ ತಾನು ತನ್ನಲ್ಲಿರುವ ವಿದ್ಯೆಗಳನ್ನು ಉಪದೇಶಿಸುವನು. ಅಂತೆಯೇ ಆ ರಾಮನಿಂದ ಅಹಲ್ಯಾ ಮೋಕ್ಷವನ್ನು ಮಾಡಿಸಿ, ಮಿಥಿಲೆಗೆ ಹೋಗಿ ಜನಕನಲ್ಲಿದ್ದ ಶಿವಧನುಸ್ಸನ್ನು ಎತ್ತಿಸಿ ಮುರಿಸುವನು. ಈ ಮಧ್ಯದಲ್ಲಿ ಶತಾನಂದನು ಸೀತೆಯ ಪೂರ್ವಜನ್ಮದ ವಿಷಯವನ್ನು ಸಾಂಗವಾಗಿ ವಿವರಿಸುವನು. ಅನಂತರ ವೈಭವದಿಂದ ಸೀತಾವಿವಾಹಕಾರ್ಯವು ನೆರವೇರುವುದು. ವಿವಾಹಾನಂತರ ಪತ್ನೀಸಮೇತನಾಗಿ ಶ್ರೀರಾಮನು ಅಯೋಧ್ಯೆಗೆ ಹಿಂದಿರುಗುತ್ತಿರುವಾಗ ಪರಶು ರಾಮನು ಸಿಕ್ಕಲು ಆತನ ಬ್ರಹ್ಮತೇಜಸ್ಸನ್ನು ಹೀರಿ ಅವನನ್ನು ಶ್ರೀರಾಮನು ಜಯಿಸುವನು.

"ರಾವಣೇನ ಜಿತಾ ದೇವಾಃ ಸಗರ್ವೋ ರಾವಣೋ ಮಹಾನ್ ।
ಸಹಸ್ರಬಾಹುನಾಬದ್ಧಃ ಸೋಽರ್ಜುನೋ ಭಾರ್ಗವೇಣ ಹಿ ॥
ಹತಃ ಕ್ಷಣೇನ ಸಮರೇ ಸೋದ್ಯ ಶ್ರೀಭಾರ್ಗವೋಪಿ ಚ ।
ಜಿತಸ್ತದ್ಧನುಷಾ ಬಾಣಮೋಕ್ಷಣಾದ್ರಾಘವೇಣ ಹಿ ॥"

"ರಾವಣನು ದೇವತೆಗಳನ್ನು ಜಯಿಸಿ ಗರ್ವಪಡುತ್ತಲಿದ್ದನು. ಆ ರಾವಣನನ್ನು ಕಾರ್ತವೀರ್ಯಾರ್ಜುನನು ತನ್ನ ಮಗುವಿನ ಮಂಚದಮೇಲೆ ಆಟದ ಬೊಂಬೆಯನ್ನಾಗಿ ಕಟ್ಟಿದ್ದನು. ಅಂತಹ ಕಾರ್ತವೀರ್ಯಾರ್ಜುನನನ್ನು ಪರಶು ರಾಮನು ಕೊಂದನು. ಆ ಪರಶುರಾಮನ ಶಕ್ತಿಯೆಲ್ಲವನ್ನೂ ಈ ಶ್ರೀರಾಮನು ಅವನ ಧನುಸ್ಸಿನ ಮೂಲಕ ಎಳೆದುಕೊಂಡನು" ಎಂದಮೇಲೆ ಪ್ರಪಂಚದಲ್ಲಿ ದೊಡ್ಡವನೆಂಬುವನು ಇರುವುದೇ ಇಲ್ಲ. ಅದು ತತ್ಕಾಲಿಕವಾದುದು.

ಒಬ್ಬರಿಗಿಂತಲೂ ಮತ್ತೊಬ್ಬರು ಶ್ರೇಷ್ಠರಿದ್ದೇ ಇರುವರು, ಎಂಬುದನ್ನು ಕವಿಯು ಬಹು ಚೆನ್ನಾಗಿ ವಿವರಿಸಿ ತೋರಿಸಿದ್ದಾನೆ.

ಅನಂತರ ರಾಜಪುತ್ರರಾದ ರಾಮಾದಿಗಳು ದೀಪಾವಳಿಯ ಹಬ್ಬಕ್ಕೆ ಮಾವನ ಮನೆಗೆ ಹೋಗಿ ಬರುತ್ತಿರುವರು. ಮಧ್ಯಮಾರ್ಗದಲ್ಲಿ ಇತರ ದೇಶಗಳ ಅನೇಕ ರಾಜರು ದಶರಥನನ್ನು ಮುತ್ತಿ ರಾಮನಿಂದ ಪರಾಜಿತರಾಗುವರು. ಈ ಸಂದರ್ಭದಲ್ಲಿ ಮೃತನಾಗಿ ಹೋಗಿದ್ದ ಭರತನನ್ನು ಶ್ರೀರಾಮನು ಸಂಜೀವಿನಿಯಿಂದ ಬದುಕಿಸುವನು. ಕೈಕೇಯಿಯು ಚಂಡಿಯಾಗಲು ಕಾರಣವೇನೆಂಬುದಕ್ಕೆ ಆಕೆಯು ಹಿಂದೆ ಚಂಡಿಯಾಗಿದ್ದು ಪುಣ್ಯವಿಶೇಷದಿಂದ ದಶರಥನ ಪತ್ನಿಯಾಗಿ ಅವತರಿಸಿದ ಪೂರ್ವಕಥೆಯು ಬಹು ರಮ್ಯವಾಗಿ ವರ್ಣಿತವಾಗಿರುವುದು. ರಾಮನಿಗೆ ರಾಜ್ಯಾಭಿಷೇಕವು ನಡೆಯಲು ಕೈಕೇಯಿಯ ವಿಘ್ನ, ಅಂತೆಯೇ ರಾಮನು ಕಾಡಿಗೆಹೋಗುವುದು. ಇತ್ತ ರಾಮನ ಅಗಲುವಿಕೆಯಿಂದ ದುಃಖಿತನಾದ ದಶರಥನು ಸ್ವರ್ಗಸ್ಥನಾಗಲು ಭರತನು ಬಂದು ಉತ್ತರಕ್ರಿಯಾದಿಗಳನ್ನು ಮಾಡುವನು. ಅವನು ರಾಮನ ಬಳಿಗೆ ಬಂದು ಹಿಂತಿರುಗಿಸಲಾರದೆ ಆ ರಾಮನ ಪಾದುಕೆಗಳನ್ನು ತೆಗೆದುಕೊಂಡು ಅಯೋಧ್ಯೆಗೆ ಹೋಗಿ ರಾಜ್ಯಭಾರಮಾಡುತ್ತಿರುವನು. ಎಂಬ ವಿಚಾರದಲ್ಲಿ ಭರತನ ಭ್ರಾತೃಭಕ್ತಿ ಮತ್ತು ಶ್ರೀರಾಮನ ಸತ್ಯನಿಷ್ಠತೆಯು ಎಷ್ಟರಮಟ್ಟಿನ ಉನ್ನತಸ್ಥಿತಿಯಲ್ಲಿತ್ತೆಂಬುದು ಪ್ರಶಂಸನೀಯವಾದ ವಿಷಯವಾಗಿದೆ.

ಮುಂದೆ ರಾಮನು ಆನೇಕ ಋಷಿಗಳನ್ನು ಸೇವಿಸಿ, ವಿರಾಧನೇ ಮುಂತಾದ ರಾಕ್ಷಸರನ್ನು ಕೊಂದು, ಒಂಭತ್ತು ವರ್ಷಗಳಕಾಲ ದಂಡಕೆಯಲ್ಲಿರುವನು. ಒಂದುಸಾರಿ ಮಗನಾದ ಸಾಂಬನನ್ನು ಕೊಂದ ಕ್ರೋಧದಿಂದ ಶೂರ್ಪಣಖಿ ಎಂಬ ದೈತ್ಯಳು ರಾಮನನ್ನು ಕೊಲ್ಲಲು ಬಂದು, ರಾಮನ ರೂಪಲಾವಣ್ಯಗಳಿಗೆ ಬೆರಗಾಗಿ ಅವನನ್ನು ಮೋಹಿಸಲು ಅವನಿಂದ ತಿರಸ್ಕೃತಳಾಗಿ ಲಕ್ಷ್ಮಣನಿಂದ ಅವಮಾನಿತಳಾಗಿ, ರೋದಿಸುತ್ತಾ ಅಣ್ಣನಾದ ರಾವಣನಲ್ಲಿ ಹೋಗಿ ನಡೆದ ವೃತ್ತಾಂತವನ್ನು ತಿಳಿಸುವಳು. ವ್ಯಾಕುಲಿತನೂ ಅಂತೆಯೇ ಕೋಪಗೊಂಡವನೂ ಆದ ರಾವಣನು ಮಾರೀಚನ ಹಿತೋಕ್ತಿಗಳನ್ನೂ ಲೆಕ್ಕಿಸದೆ ಸೀತಾಪಹರಣ ಕಾರ್ಯದಲ್ಲಿ ಉದ್ಯುಕ್ತನಾಗಿ ಮಾರೀಚನನ್ನೇ ಸಹಾಯಕ್ಕೆ ಕರೆದುಕೊಂಡು ಹೋಗಿ ಶ್ರೀರಾಮಲಕ್ಷ್ಮಣರನ್ನು ವಂಚಿಸಿ, ಸೀತೆಯನ್ನು ಅಪಹರಿಸಿಕೊಂಡು ಹೋಗುವಾಗ ಬಿಡಿಸಿಕೊಳ್ಳಲು ಬಂದ ಜಟಾಯುವನ್ನು ನೋಯಿಸಿ ಹೋಗುವನು. ಈ ವಿಷಯವು ಸಜ್ಜನರಿಗೆ ಆಗತಕ್ಕ ಪುರಸ್ಕಾರ, ದುಷ್ಟರಿಗೆ ಆಗತಕ್ಕ ಶಿಕ್ಷೆಗಳನ್ನು ವಿವರಿಸುವುದಲ್ಲದೆ ಹಾಸ್ಯಭರಿತವಾಗಿ ವರ್ಣಿತವಾಗಿದೆ.

ರಾವಣನು ಅಪಹರಿಸಿಕೊಂಡು ಹೋದ ಸೀತೆಯನ್ನು ಹುಡುಕುತ್ತ ಶ್ರೀರಾಮನು ಋಷ್ಯಮೂಕ ಪರ್ವತವನ್ನು ಸೇರಿ ಅಲ್ಲಿ ಸುಗ್ರೀವ ಸಖ್ಯವನ್ನು ಬೆಳೆಸಿ ಅವನ ಅಣ್ಣನಾದ ದುಷ್ಟವಾಲಿಯನ್ನು ಕೊಂದು ಆತನಿಗೆ ಸಹಕರಿಸಿ, ತನ್ನ ಕೆಲಸವಾದ ಸೀತಾನ್ವೇಷಣಕಾರ್ಯದಲ್ಲಿ ಆತನ ಭೃತ್ಯರಲ್ಲೊಬ್ಬನಾದ ಹನುಮಂತನಿಗೆ ಮಂತ್ರೋಪದೇಶವನ್ನು ಮಾಡಿ ಆತನನ್ನು ತನ್ನ ದಾಸನನ್ನಾಗಿ ಅಂಗೀಕರಿಸಿ ಆತನನ್ನು ಸೀತಾನ್ವೇಷಣಕ್ಕೆ ಕಳುಹಿಸುವನು. ಅನಂತರ ಹನುಮಂತನು ಮಾರ್ಗಮಧ್ಯದಲ್ಲಿ ಒದಗಿದ ತೊಂದರೆಗಳನ್ನು ರಾಮನಾಮದ ಮಹಿಮೆಯಿಂದ ನಿವಾರಿಸಿಕೊಂಡು ಲಂಕೆಯಲ್ಲಿ ಸೀತೆಯನ್ನು ಕಂಡು ಶ್ರೀರಾಮ ಮುದ್ರಿಕೆಯನ್ನು ಆಕೆಗೆ ಒಪ್ಪಿಸಿ ಆಕೆಯಿಂದ ಚೂಡಾಮಣಿಯನ್ನು ಪಡೆದು, ಅಶೋಕವನದ ಭಂಗವನ್ನು ಮಾಡಿ, ರಾವಣನ ಆಗ್ರಹಕ್ಕೆ ಪಾತ್ರನಾಗಿ, ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದು, ರಾವಣನ ಆಸ್ಥಾನದಲ್ಲಿ ಅವನ ಮುಖಭಂಗಮಾಡಿ, ಲಂಕಾದಹನವನ್ನು ಮಾಡಿ ಪುನಃ ಸೀತೆಯ ಅಪ್ಪಣೆಯನ್ನು ಪಡೆದು, ಶ್ರೀರಾಮನ ಸನ್ನಿಧಿಗೆ ಹಿಂದಿರುಗಿ ಬಂದು, ನಡೆದ ವೃತ್ತಾಂತವನ್ನೆಲ್ಲಾ ತಿಳಿಸಿದ ನೆಂಬಲ್ಲಿಗೆ ಈ ಪುಸ್ತಕವು ಪೂರ್ಣವಾಗುತ್ತದೆ.

ಇದರಿಂದ ಹನುಮಂತನ ಸ್ವಾಮಿಭಕ್ತಿ, ಸೇವೆ ಮುಂತಾದ ಪ್ರತಿಯೊಂದು ವಿಷಯಗಳೂ, ಪ್ರತಿಯೊಬ್ಬರೂ ತಮ್ಮ ಕಾರ್ಯಗಳಲ್ಲಿ ಎಷ್ಟರಮಟ್ಟಿನ ನಿಷ್ಠೆ ಯಿಂದಿರಬೇಕೆಂಬುದನ್ನು ಬೋಧಿಸುತ್ತ ಅತ್ಯಂತ ಆಕರ್ಷಣೀಯವಾಗಿ ವಿವರಿತವಾಗಿವೆ. ಒಟ್ಟಿನಲ್ಲಿ ಇದು ಎಲ್ಲಾ ರಾಮಾಯಣದಂತೆಯೇ ಇರುವ ವಿಷಯವಾದರೂ ಅನೇಕ ಹೊಸ ವಿಷಯಗಳು ಇದರಲ್ಲಿ ಅಡಕವಾಗಿವೆ.

ಜನರಿಗೆ ಅಪೂರ್ವವಿಷಯಗಳು ಕನ್ನಡದಲ್ಲಿ ಸುಲಭವಾಗಿ ತಿಳಿಯಲು ಅವಕಾಶವನ್ನು ಕಲ್ಪಿಸಿಕೊಟ್ಟಿರುವ ನಮ್ಮನ್ನಾಳುವ ಶ್ರೀಮನ್ಮಹಾರಾಜರವರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುಗಳವರಿಗೆ ಶ್ರೀರಾಮಚಂದ್ರದೇವನು ಪುತ್ರ ಪೌತ್ರಾಭಿವೃದ್ಧಿಯನ್ನೂ ಇನ್ನಿತರ ಸಕಲ ಸನ್ಮಂಗಳವನ್ನೂ ಕರುಣಿಸಿ ಕಾಪಾಡ ಲೆಂದು ಅನನ್ಯಮನಸ್ಕನಾಗಿ ಪ್ರಾರ್ಥಿಸುತ್ತೇನೆ.

ಮೈಸೂರು, } ಅನುವಾದಕ,
25—4—1947 } ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಸಾರಕಾಂಡದ

ವಿಷಯಾನುಕ್ರಮಣಿಕೆ.

ಎರಡನೆಯ ಸರ್ಗವು

ಮೂರನೆಯ ಸರ್ಗವು

ಪುಟಸಂಖ್ಯೆ

ಪುಟಸಂಖ್ಯೆ

ಏಳನೆಯ ಸರ್ಗವು

ಪುಟಸಂಖ್ಯೆ

ಎಂಟನೆಯ ಸರ್ಗವು

ಪುಟಸಂಖ್ಯೆ

ಒಂಭತ್ತನೆಯ ಸರ್ಗವು

॥ ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರಸ್ವಾಮಿನೇ ನಮಃ ॥



ಶ್ರೀ ಆನಂದರಾಮಾಯಣಂ

ಜೈ ರಘುವೀರ ಸಮರ್ಥ



ಭಕ್ತ ಹನುಮಾನ್

॥ ಶ್ರೀರಸ್ತು ॥

॥ ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರಸ್ವಾಮಿನೇ ನಮಃ ॥

ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಾನಂದ ರಾಮಾಯಣಂ

॥ ಸಾರಕಾಂಡೇ ಪ್ರಥಮಸ್ಸರ್ಗಃ ॥

॥ ವಾಲ್ಮೀಕಿರುವಾಚ ॥

ವಾಮೇ ಭೂಮಿಸುತಾ ಪುರಸ್ತು ಹನುಮಾನ್ ಪೃಷ್ಠೇ ಸುಮಿತ್ರಾ ಸುತಃ
ಶತ್ರುಘ್ನೋ ಭರತಶ್ಚ ಪಾರ್ಶ್ವದಳಯೋರ್ವಾಯುವ್ಯಕೋಣಾದಿಷು ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ತಾರಾಸುತೋ ಜಾಂಬವಾನ್
ಮಧ್ಯೇ ನೀಲಸರೋಜಕೋಮಲರುಚಿಂ ರಾಮಂ ಭಜೇ ಶ್ಯಾಮಲಂ ॥ ೧ ॥

ಶ್ರೀಮದಾನಂದರಾಮಾಯಣದಲ್ಲಿ ಸಾರಕಾಂಡವು

ಒಂದನೆಯ ಸರ್ಗವು

೧. ವಾಲ್ಮೀಕಿಯು ಹೇಳಿದನು–ಸೀತಾದೇವಿಯನ್ನು ಎಡಗಡೆಯಲ್ಲಿಯೂ ಹನುಮಂತನನ್ನು ಎದುರಿನಲ್ಲಿಯೂ, ಲಕ್ಷ್ಮಣನನ್ನು ಹಿಂದುಗಡೆಯಲ್ಲಿಯೂ, ಭರತ ಶತ್ರುಘ್ನರನ್ನು ಅಕ್ಕಪಕ್ಕಗಳಲ್ಲಿಯೂ, ವಾಯುವ್ಯದಲ್ಲಿ ಸುಗ್ರೀವನನ್ನೂ, ಈಶಾನ್ಯದಲ್ಲಿ ವಿಭೀಷಣನನ್ನೂ, ಆಗ್ನೇಯದಲ್ಲಿ ಅಂಗದನನ್ನೂ, ನೈರುತ್ಯದಲ್ಲಿ ಜಾಂಬವನನ್ನೂ, ಕೂರಿಸಿಕೊಂಡು ಮಧ್ಯದಲ್ಲಿ ತಾನು ಕುಳಿತಿರುವ ನೀಲಮೇಘ ಶ್ಯಾಮನಾದ ಶ್ರೀರಾಮಚಂದ್ರನನ್ನು ಧ್ಯಾನಿಸುತ್ತೇನೆ.

ಆದೌ ರಾವಣಮರ್ದನಂ ದ್ವಿಜಗಿರಾ ತೀರ್ಥಾಟನಂ ಸೀತಯಾ ।
ಸಾಕೇತೇ ದಶವಾಜಿಮೇಧಕರಣಂ ಪತ್ನ್ಯಾ ವಿಲಾಸಾಟನಂ ॥
ಸ್ತ್ರೀಪುತ್ರಗ್ರಹಣಂ ಸ್ನುಷಾರ್ಥಮಟನಂ ಪೃಥ್ವ್ಯಾಶ್ಚ ಸಂರಕ್ಷಣಂ ।
ರಾಮಾರ್ಚಾದಿನಿರೂಪಣಂ ದಯಿತಯಾ ಸ್ವೀಯಸ್ಥಲಾರೋಹಣಂ ॥ ೧ ॥

ಏಕದಾ ಪಾರ್ವತೀ ದೇವೀ ಶಂಕರಂ ಪ್ರಾಹ ಹರ್ಷಿತಾ ।
ಕೈಲಾಸವಾಸಿನಂ ನತ್ವಾ ರಾಮಭಕ್ತ್ಯೈಕತತ್ಪರಾ ॥ ೩ ॥

॥ ಪಾರ್ವತ್ಯುವಾಚ ॥

ಶಂಭೋ ತ್ವಯಾ ಪುರಾಣಾನಿ ಕಥಿತಾನಿ ಮಮಾಂತಿಕೇ ।
ರಘುನಾಥಸ್ಯ ಚರಿತಂ ಜನ್ಮಕರ್ಮ ಸಮನ್ವಿತಂ ॥ ೪ ॥

---

೧. ಮೊದಲನೆಯದಾದ ಸಾರಕಾಂಡದಲ್ಲಿ ರಾವಣಸಂಹಾರವೇ ಮುಂತಾದುವನ್ನೂ, ಎರಡನೆಯದಾದ ಯಾತ್ರಾಕಾಂಡದಲ್ಲಿ ಬ್ರಾಹ್ಮಣನ ಮಾತಿನಮೇರೆಗೆ ಸೀತೆಯೊಡನೆ ತೀರ್ಥಯಾತ್ರಾದಿಗಳನ್ನೂ, ಮೂರನೆಯದಾದ ಯಾಗಕಾಂಡದಲ್ಲಿ ಅಯೋಧ್ಯೆಯಲ್ಲಿ ದಶಾಶ್ವಮೇಧಿಕ ಯಾಗಾದಿಗಳನ್ನೂ, ನಾಲ್ಕನೆಯದಾದ ವಿಲಾಸಕಾಂಡದಲ್ಲಿ ಹೆಂಡತಿಯೊಡನೆ ವಿನೋದವಾದ ಸಂಚಾರಾದಿಗಳನ್ನೂ, ಐದನೆಯದಾದ ಜನ್ಮಕಾಂಡದಲ್ಲಿ ಹೆಂಡತಿ ಮಕ್ಕಳ ಪರಿಗ್ರಹವನ್ನೂ, ಆರನೆಯದಾದ ವಿವಾಹಕಾಂಡದಲ್ಲಿ ಸೊಸೆಯರಿಗೋಸ್ಕರ ಸುತ್ತುವಿಕೆಯನ್ನೂ, ಏಳನೆಯದಾದ ರಾಜ್ಯಕಾಂಡದಲ್ಲಿ ರಾಜ್ಯದ ರಕ್ಷಣೆಯನ್ನೂ ಎಂಟನೆಯದಾದ ಮನೋಹರಕಾಂಡದಲ್ಲಿ ರಾಮಾರ್ಚನೆಯೇ ಮುಂತಾದುವುಗಳ ನಿರೂಪಣವನ್ನೂ ಒಂಭತ್ತನೆಯದಾದ ಪೂರ್ಣಕಾಂಡದಲ್ಲಿ ತನ್ನ ಪ್ರಿಯ ಪತ್ನಿಯೊಡನೆ ತನ್ನ ಸ್ಥಾನಕ್ಕೆ ಹೊರಟು ಹೋಗುವುದನ್ನೂ ವರ್ಣಿಸಿರುತ್ತದೆ.

೩. ಒಂದುಸಾರಿ ರಾಮಭಕ್ತಿಯಿಂದ ಕೂಡಿದ ಪಾರ್ವತಿಯು ಕೈಲಾಸದಲ್ಲಿ ವಾಸವಾಗಿರುವ ಶಂಕರನನ್ನು ನಮಸ್ಕರಿಸಿ ಹರ್ಷದಿಂದ ಇಂತೆಂದಳು.

೪. ಪಾರ್ವತಿಯು ಹೇಳಿದಳು–ಎಲೈ ಶಂಭುವೇ! ನೀನು ನನಗೆ ಅನೇಕವಾದ ಪುರಾಣಗಳನ್ನು ಹೇಳಿದ್ದೀಯೆ! ರಘುನಾಥನಾದ ಶ್ರೀರಾಮನ ಜನ್ಮ, ಅವನ ಕೆಲಸ ಮುಂತಾದುವನ್ನೂ ಹೇಳು.

ಕಥಯಸ್ವಾಧುನಾ ದೇವ ಮಮ ಪ್ರೀತಿವಿವರ್ಧನಂ ।
ಆನಂದದಾಯಕಂ ಕರ್ಮ ರಘುವೀರೇಣ ಯತ್ಕೃತಂ ॥ ೫ ॥

॥ ಶ್ರೀ ಶಿವ ಉವಾಚ ॥

ಸಮ್ಯಕ್ಪೃಷ್ಟಂ ತ್ವಯಾ ಕಾಂತೇ ರಾಮಚಂದ್ರಕಥಾನಕಂ ।
ಕಥಯಾಮಿ ಸವಿಸ್ತಾರಂ ಮಹಾಮಂಗಳಕಾರಕಂ ॥ ೬ ॥

ಆದಿನಾರಾಯಣಾದ್ಬ್ರಹ್ಮಾಭೂನ್ಮರೀಚಿರ್ವಿಧೇಸ್ಸುತಃ ।
ಮರೀಚೇಃ ಕಶ್ಯಪಃ ಪುತ್ರಸ್ತತ್ಸುತಸ್ಸೂರ್ಯ ಉಚ್ಯತೇ ॥ ೭ ॥

ಸೂರ್ಯಪುತ್ರ ಶ್ಯ್ರಾದ್ಧದೇವೋ ಮನುರ್ವೈವಸ್ವತಸ್ತ್ವಿತಿ ।
ಸ ಏವ ಪ್ರೋಚ್ಯತೇ ತಸ್ಯೇಕ್ಷ್ವಾಕುಃ ಪುತ್ರಃ ಪ್ರತಾಪವಾನ್ ॥ ೮ ॥

---

೫. ಈಗ ಅದನ್ನು ಕೇಳಬೇಕೆಂದು ನನಗೆ ಆಸೆಯಾಗುತ್ತದೆ. ಆ ರಘುರಾಮನು ಆನಂದವನ್ನು ಉಂಟುಮಾಡುವ ಯಾವ ಕೆಲಸವನ್ನು ಮಾಡಿದನು ? ಎಂಬುದೆಲ್ಲವನ್ನೂ ವಿಸ್ತಾರವಾಗಿ ಹೇಳು.

೬. ಶ್ರೀ ಶಿವನು ಹೇಳಿದನು—ಕಾಂತೆಯೇ ! ನೀನು ಕೇಳಿದುದು ಚೆನ್ನಾಗಿದೆ. ಬಹುವಾಗಿ ಮಂಗಳವನ್ನು ಉಂಟುಮಾಡುವ ರಾಮಚಂದ್ರನ ಕಥೆಯನ್ನು ವಿಸ್ತಾರವಾಗಿ ಹೇಳುತ್ತೇನೆ.

೭. ಆದಿಭೂತನಾದ ನಾರಾಯಣನಿಂದ ಬ್ರಹ್ಮನು ಉತ್ಪನ್ನನಾದನು. ಆ ಬ್ರಹ್ಮನಿಗೆ ಮರೀಚಿಯು ಮಗನು. ಮರೀಚಿಗೆ ಕಶ್ಯಪನು ಮಗನು. ಆ ಕಶ್ಯಪನಿಗೆ ಸೂರ್ಯನು ಮಗನು.

೮. ಸೂರ್ಯನಿಗೆ ಯಮನು ಮಗನು. ಅವನಿಗೆ ವೈವಸ್ವತಮನುವೆಂದು ಹೆಸರು. ಆ ವೈವಸ್ವತನನ್ನು ಮನುವೆಂದೂ ಕರೆಯುತ್ತೇವೆ. ಆ ಮನುವಿಗೆ ಇಕ್ಷ್ವಾಕು ಎಂಬುವನು ಮಗನು. ಅವನು ಬಹು ಪ್ರತಾಪಶಾಲಿಯು.

ಇಕ್ಷ್ವಾಕೋಸ್ತು ವಿಕುಕ್ಷಿರ್ಹಿ ಶಶಾದಶ್ಚ ಸ ಏವ ಹಿ ।
ವಿಕುಕ್ಷೇಸ್ತು ಕಕುತ್ಸ್ಥಶ್ಚ ಸ ಏವಾತ್ರ ಪುರಂಜಯಃ ॥ ೯ ॥

ಸ ಏವೋಕ್ತಶ್ಚೇಂದ್ರವಾಹಃ ಕಕುತ್ಸ್ಥನೃಪತೇಸ್ಸುತಃ ।
ಅನೇನಾಸ್ತಸ್ಯ ಪುತ್ರೋऽಭೂದ್ವಿಶ್ವರಂಧಿಶ್ಚ ತತ್ಸುತಃ ॥ ೧೦ ॥

ಚಂದ್ರಶ್ಚಂದ್ರಸ್ಯ ಪುತ್ರೋऽಭೂದ್ಯುವನಾಶ್ವಃ ಪ್ರತಾಪವಾನ್ ।
ಶಾಬಸ್ತೋ ಯುವನಾಶ್ವಸ್ಯ ಶಾಬಸ್ತಸ್ಯ ಸುತೋ ಮಹಾನ್ ॥ ೧೧ ॥

ಬೃಹದಶ್ವ ಇತಿ ಖ್ಯಾತಸ್ತಸ್ಮಾಜ್ಜಜ್ಞೇ ನೃಪೋತ್ತಮಃ ।
ಕುವಲಯಾಶ್ವನೃಪತಿಃ ದೃಢಾಶ್ವಸ್ತತ್ಸುತಃ ಸ್ಮೃತಃ ॥ ೧೨ ॥

ಹರ್ಯಶ್ವ ಇತಿ ತತ್ಪುತ್ರೋ ನಿಕುಂಭಸ್ತತ್ಸುತಃ ಸ್ಮೃತಃ ।
ಬರ್ಹಣಾಶ್ವೋ ನಿಕುಂಭಸ್ಯ ಬರ್ಹಣಾಶ್ವನೃಪೋತ್ತಮಾತ್ ॥ ೧೩ ॥

---

೯. ಆ ಇಕ್ಷ್ವಾಕುವಿಗೆ ವಿಕುಕ್ಷಿಯೆಂಬುವನು ಮಗನು. ಇವನಿಗೆ ಶಶಾದನೆಂದು ಮತ್ತೊಂದು ಹೆಸರುಂಟು. ವಿಕುಕ್ಷಿಗೆ ಕಕುತ್ಸ್ಥನೆಂಬುವನು ಮಗನು. ಅವನಿಗೆ ಪುರಂಜಯನೆಂದು ಮತ್ತೊಂದು ಹೆಸರುಂಟು.

೧೦. ಆ ಕಕುತ್ಸ್ಥನಿಗೆ ಇಂದ್ರವಾಹನನೆಂದು ಮತ್ತೊಂದು ಹೆಸರೂ ಇರುವುದು. ಈ ಕಕುತ್ಸ್ಥನಿಗೆ ಅನೇನನೆಂಬ ಮಗನಾದನು. ಅನೇನನಿಗೆ ವಿಶ್ವರಂಧಿ ಎಂಬ ಮಗನಾದನು.

೧೧. ವಿಶ್ವರಂಧಿಗೆ ಚಂದ್ರನು ಮಗನು. ಚಂದ್ರನಿಗೆ ಯುವನಾಶ್ವನೆಂಬುವನು ಮಗನು. ಆ ಯುವನಾಶ್ವನಿಗೆ ಶಾಬಸ್ತನೆಂಬುವನು ಮಗನು.

೧೨. ಆ ಶಾಬಸ್ತನಿಗೆ ಬೃಹದಶ್ವನು ಮಗನು. ಆ ಬೃಹದಶ್ವನಿಗೆ ಕುವಲಯಾಶ್ವನೆಂಬುವನು ಮಗನು. ಆ ಕುವಲಯಾಶ್ವನಿಗೆ ದೃಢಾಶ್ವನೆಂಬುವನು ಮಗನು.

೧೩. ದೃಢಾಶ್ವನಿಗೆ ಹರ್ಯಶ್ವನೆಂಬುವನು ಮಗನು. ಹರ್ಯಶ್ವನ ಮಗನು ನಿಕುಂಭನು. ನಿಕುಂಭನಿಗೆ ಬರ್ಹಣಾಶ್ವನೆಂಬುವನು ಮಗನು.

ಕೃತಾಶ್ವ ನೃಪತಿಃ ಪ್ರೋಕ್ತಃ ಶ್ಯೇನಜಿತ್ತತ್ಸುತಃ ಸ್ಮೃತಃ ।
ಯುವನಾಶ್ವಶ್ಶ್ಯೇನಜಿತೋ ಯುವನಾಶ್ವನೃಪೋತ್ತಮಾತ್ ॥ ೧೪ ॥

ಮಾಂಧಾತಾ ತು ತ್ರಸದ್ದಸ್ಯುಃ ಸ ಏವ ಕಥಿತೋ ಭುವಿ ।
ಪುರುಕುತ್ಸಶ್ಚ ಮಾಂಧಾತುಃ ಪುರುಕುತ್ಸಸ್ಯ ವೈ ಪುನಃ ॥ ೧೫ ॥

ತ್ರಸದ್ದಸ್ಯುರಿತಿ ಖ್ಯಾತಸ್ತ್ವನರಣ್ಯಶ್ಚ ತತ್ಸುತಃ ।
ಅನರಣ್ಯಸ್ಯ ಹರ್ಯಶ್ವೋ ಹರ್ಯಶ್ವಸ್ಯಾರುಣಸ್ಸುತಃ ॥ ೧೬ ॥

ತ್ರಿಬಂಧನೋರುಣಾಜ್ಜಾತಸ್ತ್ರಿಬಂಧಸ್ಯ ಸುತೋ ಮಹಾನ್ ।
ಸತ್ಯವ್ರತಸ್ಸ ಏವಾತ್ರ ತ್ರಿಶಂಕುರಿತಿ ವೈ ಸ್ಮೃತಃ ॥ ೧೭ ॥

ಸತ್ಯವ್ರತಸ್ಯ ಪುತ್ರೋಽಭೂದ್ಧರಿಶ್ಚಂದ್ರಃ ಪ್ರತಾಪವಾನ್ ।
ರೋಹಿತಸ್ತತ್ಸುತಃ ಪ್ರೋಕ್ತಸ್ತಸ್ಮಾಚ್ಚ ಹರಿತಃ ಸ್ಮೃತಃ ॥ ೧೮ ॥

---

೧೪. ಆ ಬರ್ಹಣಾಶ್ವನಿಗೆ ಕೃತಾಶ್ವನು ಮಗನು. ಕೃತಾಶ್ವನಿಗೆ ಶ್ಯೇನಜಿತ್ ಎಂಬುವನು ಮಗನು. ಶ್ಯೇನಜಿತ್ತಿಗೆ ಯುವನಾಶ್ವನು ಮಗನು.

೧೫. ಯುವನಾಶ್ವನಿಗೆ ಮಾಂಧಾತನೆಂಬುವನು ಮಗನು. ಇವನಿಗೆ ತ್ರಸದ್ದಸ್ಯು ಎಂದೂ ಮತ್ತೊಂದು ಹೆಸರುಂಟು. ಮಾಂಧಾತುವಿಗೆ ಪುರುಕುತ್ಸನೆಂಬುವನು ಮಗನಾದನು.

೧೬. ಪುರುಕುತ್ಸನಿಗೆ ತ್ರಸದ್ದಸ್ಯುವೆಂಬುವನು ಮಗನು. ಈ ಎರಡನೆಯ ತ್ರಸದ್ದಸ್ಯುವಿಗೆ ಅನರಣ್ಯನೆಂಬುವನು ಮಗನು. ಅನರಣ್ಯನಿಗೆ ಹರ್ಯಶ್ವನೆಂಬುವನು ಮಗನು. ಹರ್ಯಶ್ವನಿಗೆ ಅರುಣನೆಂಬುವನು ಮಗನು.

೧೭. ಅರುಣನಿಗೆ ತ್ರಿಬಂಧನನೆಂಬುವನು ಮಗನು. ತ್ರಿಬಂಧನನಿಗೆ ಸತ್ಯವ್ರತನೆಂಬುವನು ಮಗನು. ಈ ಸತ್ಯವ್ರತನೇ ತ್ರಿಶಂಕುವೆಂದು ಪ್ರಸಿದ್ಧನಾಗಿದ್ದಾನೆ.

೧೮. ಸತ್ಯವ್ರತ ಅಥವಾ ತ್ರಿಶಂಕುವಿಗೆ ಹರಿಶ್ಚಂದ್ರನು ಮಗನು. ಹರಿಶ್ಚಂದ್ರನಿಗೆ ರೋಹಿತನೆಂಬುವನು ಮಗನಾದನು. ರೋಹಿತನಿಗೆ ಹರಿತನೆಂಬುವನು ಮಗನು.

ಹರಿತಸ್ಯ ಸುತಶ್ಚಂಪಸ್ಸುದೇವಶ್ಚಂಪದೇಹಜಃ |
ಸುದೇವಾದ್ವಿಜಯಃ ಪ್ರೋಕ್ತಸ್ತತ್ಪುತ್ರೋ ಭರುಕಃ ಸ್ಮೃತಃ ॥ ೧೯ ॥

ಭರುಕಸ್ಯ ವೃಕಃ ಪುತ್ರೋ ವೃಕಪುತ್ರಸ್ತು ಬಾಹುಕಃ |
ಬಾಹುಕಾತ್ಸಗರೋ ಜಜ್ಞೇಽಸಮಂಜಾಸ್ಸಗರಾತ್ಮಜಃ ॥ ೨೦ ॥

ಅಸಮಂಜಸಃ ಪುತ್ರೋಽಭೂದಂಶುಮಾನಿತಿ ನಾಮತಃ |
ತಸ್ಯ ಪುತ್ರೋ ದಿಲೀಪಸ್ತು ದಿಲೀಪಾಚ್ಚ ಭಗೀರಥಃ ॥ ೨೧ ॥

ಭಗೀರಥಾಚ್ಛ್ರುತೋ ಜಾತಃ ಶ್ರುತಾನ್ನಾಭಃ ಪ್ರಕೀರ್ತ್ಯತೇ |
ನಾಭಸ್ಯ ಸಿಂಧುದ್ವೀಪಶ್ಚ ಹ್ಯಯುತಾಯುಶ್ಚ ತತ್ಸುತಃ ॥ ೨೨ ॥

ಋತುಪರ್ಣಸ್ತ್ವಯುತಾಯೋಸ್ಸುದಾಸಸ್ತಸ್ಯ ಕೀರ್ತ್ಯತೇ |
ಮಿತ್ರಸಹಸ್ಸ ಏವಾತ್ರ ಕಲ್ಮಾಷಾಂಘ್ರಿಸ್ಸ ಏವ ಹಿ ॥ ೨೩ ॥

---

೧೯. ಹರಿತನಿಗೆ ಚಂಪನೆಂಬುವನು ಮಗನು. ಚಂಪನಿಗೆ ಸುದೇವನೆಂಬ ಮಗನಾದನು. ಸುದೇವನಿಗೆ ವಿಜಯನು ಮಗನು. ವಿಜಯನಿಗೆ ಭುರಕನೆಂಬುವನು ಮಗನು.

೨೦. ಭರುಕನಿಗೆ ವೃಕನೆಂಬುವನು ಮಗನು. ವೃಕನಿಗೆ ಬಾಹುಕನೆಂಬುವನು ಮಗನು. ಬಾಹುಕನ ಮಗನು ಸಗರನು. ಸಗರನಿಗೆ ಅಸಮಂಜನೆಂಬುವನು ಮಗನು.

೨೧. ಅಸಮಂಜನಿಗೆ ಅಂಶುಮಂತನೆಂಬುವನು ಮಗನು. ಆ ಅಂಶುಮಂತನಿಗೆ ದಿಲೀಪನೆಂಬುವನು ಮಗನು. ದಿಲೀಪನಿಗೆ ಭಗೀರಥನೆಂಬುವನು ಮಗನು.

೨೨. ಭಗೀರಥನಿಗೆ ಶ್ರುತನೆಂಬುವನು ಮಗನು. ಶ್ರುತನಿಗೆ ನಾಭನೆಂಬುವನು ಮಗನು. ನಾಭನಿಗೆ ಸಿಂಧುದ್ವೀಪನೆಂಬುವನು ಮಗನು. ಸಿಂಧುದ್ವೀಪನಿಗೆ ಅಯುತಾಯು ಎಂಬುವನು ಮಗನು.

೨೩. ಅಯುತಾಯುವಿಗೆ ಋತುಪರ್ಣನೆಂಬುವನು ಮಗನು. ಋತುಪರ್ಣನಿಗೆ ಸುದಾಸನೆಂಬುವನು ಮಗನು. ಈ ಸುದಾಸನಿಗೆ ಮಿತ್ರಸಹನೆಂದೂ ಕಲ್ಮಾಷಾಂಘ್ರಿ ಎಂದೂ ಬೇರೆ ಬೇರೆ ಹೆಸರುಗಳುಂಟು.

ಸುದಾಸಸ್ಯಾಶ್ಮಕಃ ಪುತ್ರೋ ಮೂಲಕೋಽಶ್ಮಕ ದೇಹಜಃ ।
ಸ ಏವ ನಾರೀಕವಚೋ ಮೂಲಕಸ್ಯ ಸುತೋ ಮಹಾನ್ ॥ ೨೪ ॥

ನಾಮ್ನಾ ದಶರಥಃ ಪ್ರೋಕ್ತಸ್ತಸ್ಯ ಪುತ್ರಃ ಪ್ರತಾಪವಾನ್ ।
ನಾಮ್ನಾ ತ್ವೈಡವಿಡಃ ಪ್ರೋಕ್ತಸ್ತಸ್ಯ ವಿಶ್ವಸಹಸ್ಸ್ಮೃತಃ ॥ ೨೫ ॥

ತಸ್ಯ ಪುತ್ರಸ್ತು ಖಟ್ವಾಂಗಃ ಖಟ್ವಾಂಗಾದ್ದೀರ್ಘ ಬಾಹುಕಃ ।
ದಿಲೀಪಶ್ಚ ಸ ಏವಾತ್ರ ತಸ್ಯ ಪುತ್ರೋ ರಘುಸ್ಸ್ಮೃತಃ ॥ ೨೬ ॥

ರಘೋಃ ಪುತ್ರೋ ಹ್ಯಜಃ ಪ್ರೋಕ್ತಸ್ತಸ್ಮಾದ್ದಶರಥಃ ಸ್ಮೃತಃ ।
ರಾಜ್ಞೋ ದಶರಥಾಜ್ಜಾತಃ ಶ್ರೀರಾಮಃ ಪರಮೇಶ್ವರಃ ॥ ೨೭ ॥

---

೨೪ ಸುದಾಸನಿಗೆ ಅಶ್ಮಕನೆಂಬುವನು ಮಗನು. ಅಶ್ಮಕನಿಗೆ ಮೂಲಕನೆಂಬುವನು ಮಗನು. ಈ ಮೂಲಕನಿಗೆ ನಾರೀಕವಚನೆಂದು ಮತ್ತೊಂದು ಹೆಸರುಂಟು.

೨೫. ಈ ಮೂಲಕನಿಗೆ ದಶರಥನು ಮಗನು. ಆ ದಶರಥನಿಗೆ ಏಲವಿಲನೆಂಬುವನು ಮಗನು. ಆ ಏಲವಿಲನಿಗೆ ವಿಶ್ವಸಹನು ಮಗನು.

೨೬. ಆ ವಿಶ್ವಸಹನಿಗೆ ಖಟ್ವಾಂಗನೆಂಬುವನು ಮಗನು. ಖಟ್ವಾಂಗನಿಗೆ ದೀರ್ಘಬಾಹುಕನೆಂಬುವನು ಮಗನು. ಈ ದೀರ್ಘಬಾಹುಕನನ್ನು ದಿಲೀಪನೆಂದು ಕರೆಯುತ್ತಾರೆ. ಈ ದಿಲೀಪನಿಗೆ ರಘುವೆಂಬುವನು ಮಗನು.

೨೭. ರಘುವಿಗೆ ಅಜನೆಂಬುವನು ಮಗನು. ಈ ಅಜನಿಗೆ ದಶರಥನೆಂಬುವನು ಮಗನು. ಇವನು ಎರಡನೇ ದಶರಥನು. ಈ ದಶರಥನಿಗೆ ಪರಮೇಶ್ವರನೇ ರಾಮನೆಂಬ ಹೆಸರಿನಿಂದ ಹುಟ್ಟಿದನು.

ಯಸ್ಯ ನಾಮಾನ್ಯನಂತಾನಿ ಗೃಣಂತಿ ಮುನಯಸ್ಸದಾ ।
ವಿಷ್ಣೋರಾರಭ್ಯ ಕಥಿತಾ ಏಕಷಷ್ಟಿರ್ನೃಪಾ ಮಯಾ ॥ ೨೮ ॥

ಏಕಷಷ್ಟಿನೃಪಾಶ್ಚಾಗ್ರೇ ಮಧ್ಯೇ ರಾಮೋ ವಿರಾಜತೇ ।
ತಸ್ಯ ತೇ ಚರಿತಂ ಕೃತ್ಸ್ನಂ ಸಂಕ್ಷೇಪಾಚ್ಚ ಬ್ರವೀಮ್ಯಹಂ ॥ ೨೯ ॥

ಇಕ್ಷ್ವಾಕುವಂಶಪ್ರವರಃ ಕ್ಷತ್ರಿಯೋ ಲೋಕವಿಶ್ರುತಃ ।
ಬಲವಾನ್ಸರಯೂತೀರೇಽಯೋಧ್ಯಾಯಾಂ ಪಾರ್ಥಿವೋತ್ತಮಃ ॥ ೩೦ ॥

ನಾಮ್ನಾ ದಶರಥಃ ಶ್ರೀಮಾನ್ ಜಂಬುದ್ವೀಪಪತಿರ್ಮಹಾನ್ ।
ಶಶಾಸ ರಾಜ್ಯಂ ಧರ್ಮೇಣ ಸೈನ್ಯೇನ ಮಹತಾ ವೃತಃ ॥ ೩೧ ॥

---

೨೮. ಯಾವ ಪರಮೇಶ್ವರನ ಹೆಸರುಗಳು ಅನಂತವಾಗಿವೆಯೆಂದು ಮುನಿಗಳು ಹೇಳುವರೋ ಅವನೇ ಈ ರಾಮನೆಂಬ ಹೆಸರಿನಿಂದ ದಶರಥನಲ್ಲಿ ಹುಟ್ಟಿದನು. ಈ ರೀತಿಯಾಗಿ ಆದಿವಿಷ್ಣುವಿನಿಂದ ಮೊದಲುಗೊಂಡು ಮತ್ತೆ ವಿಷ್ಣುವು ಅವತರಿಸುವವರೆಗೂ ಅರವತ್ತೊಂದು ಜನ ರಾಜರ ಕಥೆಯನ್ನು ಹೇಳಿದೆನು.

೨೯. ತನಗೆ ಮುಂದುಗಡೆಯಲ್ಲಿ ಅರವತ್ತೊಂದು ಜನ ರಾಜರೂ ಹಿಂದುಗಡೆ ಅರವತ್ತೊಂದು ಜನ ರಾಜರೂ ವಿರಾಜಿಸುತ್ತಿರಲು ಈ ಮಧ್ಯದಲ್ಲಿ ರಾಮನು ಅವತರಿಸಿರುವನು. ಈ ರಾಮನಚರಿತ್ರೆಯನ್ನೇ ಸಂಕ್ಷೇಪದಿಂದ ನಿನಗೆ ಹೇಳುತ್ತೇನೆ.

೩೦-೩೧. ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಕ್ಷತ್ರಿಯ ಶ್ರೇಷ್ಠನಾಗಿ ಲೋಕಖ್ಯಾತನಾದ, ವೀರನಾದ, ಜಂಬೂದ್ವೀಪಕ್ಕೇನೇ ಒಡೆಯನಾದ ದಶರಥನೆಂಬುವನು ರಾಜ್ಯವಾಳುತ್ತಿದ್ದನು. ಇವನು ಬಹುವಾಗಿ ಸೈನ್ಯವನ್ನು ಇಟ್ಟುಕೊಂಡು ಧರ್ಮದಿಂದ ರಾಜ್ಯವಾಳುತ್ತಿದ್ದನು.

ಅಯೋಧ್ಯಾಯಾಸ್ತು ಸಾನ್ನಿಧ್ಯೇ ದೇಶೇ ಶ್ರೀಕೋಸಲಾಹ್ವಯೇ।
ಕೋಸಲಾಯಾಂ ಮಹಾಪುಣ್ಯಃ ಕೋಸಲಾಖ್ಯೋ ನೃಪೋ ಮಹಾ್ ॥೩೨॥

ತಸ್ಯಾಸೀದ್ದುಹಿತಾ ರಮ್ಯಾ ಕೌಸಲ್ಯಾ ಪತಿಕಾಮುಕಾ ।
ತಸ್ಯಾ ದಶರಥೇನೈವ ವಿವಾಹೋ ನಿಶ್ಚಿತೋ ಮುದಾ ॥ ೩೩ ॥

ಲಗ್ನಾರ್ಥಂ ತಂ ಸಮಾನೇತುಂ ದೂತಾ ದಶರಥಂ ನೃಪಂ ।
ಯಯುರ್ವಿನಿಶ್ಚಯಂ ಕೃತ್ವಾ ವಿವಾಹದಿವಸಸ್ಯ ಚ ॥ ೩೪ ॥

ತದಾ ದಶರಥಶ್ಚಾಪಿ ಸಾಕೇತೇ ಸರಯೂಜಲೇ ।
ನೌಕಾಸ್ಥೋ ಜಲಜಾಂ ಕ್ರೀಡಾಂ ಚಕ್ರೇ ವೈ ಮಂತ್ರಿಬಂಧುಭಿಃ ॥ ೩೫ ॥

ನಿಶಾಯಾಂ ಸೇನಯಾ ಯುಕ್ತಸ್ತತೋ ಮಾಗಧವಂದಿಭಿಃ ।
ರತ್ನದೀಪಪ್ರಕಾಶೈಶ್ಚ ನನೃತುರ್ವಾರಯೋಷಿತಃ ॥ ೩೬ ॥

೩೨-೩೩. ಅಯೋಧ್ಯೆಗೆ ಸಮೀಪದಲ್ಲಿರುವ ಕೋಸಲವೆಂಬ ಹೆಸರುಳ್ಳ ದೇಶಕ್ಕೆ ರಾಜಧಾನಿಯಾದ ಕೋಸಲನಗರದಲ್ಲಿ ಕೋಸಲನೆಂಬ ರಾಜನು ರಾಜ್ಯವಾಳುತ್ತಿದ್ದನು. ಅವನಿಗೆ ಒಬ್ಬಳು ಕೌಸಲ್ಯೆಯೆಂಬ ಮಗಳಿದ್ದಳು. ಅವಳಿಗೆ ಮದುವೆಯ ವಯಸ್ಸು ಬಂದಿದ್ದಿತು. ಆಕೆಯನ್ನು ಈ ದಶರಥನಿಗೆ ಕೊಟ್ಟು ಮದುವೆಯಾಗುವಂತೆ ನಿಶ್ಚಯವಾಯಿತು.

೩೪. ಲಗ್ನಕ್ಕೋಸ್ಕರ ದಶರಥನನ್ನು ಕರೆತರಲು ದೂತರು ಆ ದಶರಥನ ರಾಜಧಾನಿಯಾದ ಅಯೋಧ್ಯೆಗೆ ಹೋದರು.

೩೫. ಈ ದೂತರು ಅಯೊಧ್ಯೆಗೆ ಹೋದ ಸಮಯದಲ್ಲಿ ಆ ದಶರಥನು ಅಯೋಧ್ಯೆಯ ಸಮೀಪದಲ್ಲಿರುವ ಸರಯೂನದಿಯ ನೀರಿನಲ್ಲಿ ಮಂತ್ರಿಗಳೊಡನೆಯೂ, ಬಂಧುಗಳೊಡನೆಯೂ, ದೋಣಿಯಲ್ಲಿ ಕುಳಿತುಕೊಂಡು ಜಲಕ್ರೀಡೆಯನ್ನಾಡುತ್ತಿದ್ದನು.

೩೬. ಅದು ರಾತ್ರಿಯ ಕಾಲವಾಗಿದ್ದಿತು. ಸುತ್ತಲೂ ಸೇನೆಗಳು ನಿಂತಿದ್ದುವು. ವಂದಿಗಳು ಮಾಗಧರು ಆ ದಶರಥನನ್ನು ಹೊಗಳುತ್ತಿದ್ದರು. ರತ್ನದ ದೀಪಗಳು ಎಲ್ಲಾ ಕಡೆಗಳಲ್ಲಿಯೂ ಬೆಳಗುತ್ತಿದ್ದುವು. ಆಗ ಸೂಳೆಯರು ಕುಣಿಯುತ್ತಿದ್ದರು. ದಶರಥನು ಈ ರೀತಿಯಾಗಿ ಕ್ರೀಡಿಸುತ್ತಿದ್ದನು.

ತಸ್ಮಿನ್ ಕಾಲೇ ತು ಲಂಕಾಯಾಂ ವಿಧಿಂ ಪಪ್ರಚ್ಛ ರಾವಣಃ ।
ಕಸ್ಮಾನ್ಮೇ ಮರಣಂ ಬ್ರಹ್ಮನ್ ತತ್ತ್ವಂ ಮಾಂ ವಕ್ತುಮರ್ಹಸಿ ॥ ೩೭ ॥

ತದ್ರಾವಣವಚಶ್ಶ್ರುತ್ವಾ ಕಥಯಾಮಾಸ ತಂ ವಿಧಿಃ ।
ಕೌಸಲ್ಯಾಯಾಂ ದಶರಥಾದ್ರಾಮಸ್ಸಾಕ್ಷಾಜ್ಜನಾರ್ದನಃ ॥ ೩೮ ॥

ಚತುರ್ಧಾ ಪುತ್ರರೂಪೇಣ ಭೂತ್ವಾ ತ್ವಾಂ ಸ ಹನಿಷ್ಯತಿ ।
ಪಂಚಮೇಽಹನಿ ಲಗ್ನಸ್ಯ ರಾಜ್ಞೋ ದಶರಥಸ್ಯ ಹಿ ॥ ೩೯ ॥

ದಿವಸೋ ನಿಶ್ಚಿತೋ ವಿಪ್ರೈಃ ಕೋಸಲಾಖ್ಯೇನ ರಾವಣ ।
ತದ್ವಿಧೇರ್ವಚನಂ ಶ್ರುತ್ವಾ ಪುಷ್ಪಕಸ್ಥೋ ದಶಾನನಃ ॥ ೪೦ ॥

ಅಯೋಧ್ಯಾಂ ಸತ್ವರಂ ಗತ್ವಾ ರಾಕ್ಷಸೈಃ ಪರಿವೇಷ್ಟಿತಃ ।
ನೌಕಾಸ್ಥಂ ತಂ ದಶರಥಂ ಜಿತ್ವಾ ಯುದ್ಧೈಸ್ಸುದಾರುಣೈಃ ॥ ೪೧ ॥

---

೩೭. ಅದೇ ಸಮಯದಲ್ಲಿ ರಾವಣನು ಬ್ರಹ್ಮನನ್ನು ಕುರಿತು ಎಲೈ ಬ್ರಹ್ಮನೆ ! ನನಗೆ ಯಾರಿಂದ ಮರಣವು ಸಂಭವಿಸುತ್ತದೆ ? ಅದನ್ನು ನಿಶ್ಚಯವಾಗಿ ಹೇಳು. ಎಂದು ಕೇಳಿದನು.

೩೮. ರಾವಣನ ಈ ಮಾತನ್ನು ಕೇಳಿ ಬ್ರಹ್ಮನು ಇಂತೆಂದನು:— ಕೌಸಲ್ಯೆಯಲ್ಲಿ ದಶರಥನಿಗೆ ರಾಮನೆಂಬ ಮಗನು ಹುಟ್ಟುವನು. ಅವನು ನಾರಾಯಣನ ಅವತಾರವು.

೩೯. ಆ ನಾರಾಯಣನು ತಾನು ನಾಲ್ಕು ಅಂಶವಾಗಿ ಆ ದಶರಥನಿಂದ ಹುಟ್ಟುವನು. ಅವನು ನಿನ್ನನ್ನು ಕೊಲ್ಲುವನು. ಆ ದಶರಥನಿಗೆ ಇಂದಿಗೆ ಐದನೆಯ ದಿವಸವು ಲಗ್ನಕ್ಕೆ ನಿಶ್ಚಿತವಾಗಿದೆ.

೪೦–೪೧. ಆ ಕೋಸಲರಾಜನು ಬ್ರಾಹ್ಮಣರಿಗೆ ಹೇಳಿ ಇಂತು ಲಗ್ನ ವನ್ನು ನಿಶ್ಚಯಿಸಿರುವನು. ಬ್ರಹ್ಮನು ಹೀಗೆ ಹೇಳಿದುದನ್ನು ದಶಾಸ್ಯನು ಕೇಳಿ ಪುಷ್ಪಕದಲ್ಲಿ ಹೊರಟನು. ಜೊತೆಯಲ್ಲಿ ರಾಕ್ಷಸರನ್ನು ಕರೆದುಕೊಂಡು ಅಯೋಧ್ಯೆಗೆ ಹೋದನು. ಅಲ್ಲಿ ದೋಣಿಯಲ್ಲಿ ವಿಹರಿಸುತ್ತಿದ್ದ ದಶರಥನೊಡನೆ ಯುದ್ಧಮಾಡಿ ಅವನನ್ನು ಜಯಿಸಿದನು.

ಬಭಂಜ ನಿಜಪಾದೇನ ತಾಂ ನೌಕಾಂ ಸರಯೂಜಲೇ |
ತದಾ ಸರ್ವೇ ಮೃತಾಸ್ತತ್ರ ಸರಯ್ವಾ ನಿರ್ಮಲೇ ಜಲೇ ॥ ೪೨ ॥

ದಶರಥ ಸುಮಂತ್ರೌ ದ್ವೌ ನೌಕಾಖಂಡೋಪರಿಸ್ಥಿತೌ |
ಶನೈಃ ಶನೈಃ ಪ್ರವಾಹೇಣ ಗತ್ವಾ ಭಾಗೀರಥೀಂ ನದೀಂ ॥ ೪೩ ॥

ತತಸ್ಸಮುದ್ರಮಧ್ಯೇ ಹಿ ಜೀವಂತಾವೀಶ್ವರೇಚ್ಛಯಾ |
ರಾವಣಃ ಕೋಸಲಾಂ ಗತ್ವಾ ಕೃತ್ವಾ ಪರಮಸಂಗರಂ ॥ ೪೪ ॥

ಕೋಸಲಾಖ್ಯಂ ನೃಪಂ ಜಿತ್ವಾ ಕೌಸಲ್ಯಾಂ ತಾಂ ಜಹಾರ ಸಃ |
ತತಃ ಪ್ರಮುದಿತೋ ಲಂಕಾಂ ಯಯಾವಾಕಾಶವರ್ತ್ಮನಾ ॥ ೪೫ ॥

ದೃಷ್ಟ್ವಾ ತಿಮಿಂಗಿಲಂ ಮತ್ಸ್ಯಂ ವಸಂತಂ ಲವಣಾರ್ಣವೇ |
ಚಿತ್ತೇ ವಿಚಾರಯಾಮಾಸ ದೇವಾಸ್ತೇ ಮಮ ಶತ್ರವಃ ॥ ೪೬ ॥

---

೪೨. ಮತ್ತು ಕಾಲಿನಿಂದ ಒದ್ದು ಆ ದೋಣಿಯನ್ನು ಮುರಿದು ಹಾಕಿದನು. ಅದರೊಳಗಿದ್ದವರೆಲ್ಲರೂ ಆ ಸರಯೂನದಿಯ ನೀರಿನಲ್ಲಿ ಬಿದ್ದು ಮುಳುಗಿ ಸತ್ತುಹೋದರು.

೪೩. ಅವರೊಳಗೆ ದಶರಥನೂ ಸುಮಂತ್ರನೆಂಬ ಮಂತ್ರಿಯೂ ಆ ದೋಣಿಯ ಒಂದು ತುಂಡನ್ನು ಹಿಡಿದುಕೊಂಡರು. ಆ ನೀರು ಅವರನ್ನು ಮೆಲ್ಲ ಮೆಲ್ಲನೆ ಎಳೆದುಕೊಂಡು ಹೋಗಿ ಗಂಗಾನದಿಗೆ ಅವರನ್ನು ಸೇರಿಸಿತು

೪೪ ಆ ಗಂಗೆಯ ಪ್ರವಾಹದಿಂದ ಸಮುದ್ರಕ್ಕೆ ತೇಲಿಹೋಗಿ ಅಲ್ಲಿಯ ಒಂದು ಗಡ್ಡೆಯಲ್ಲಿ ದೇವರ ದಯೆಯಿಂದ ಬದುಕಿ ತಂಗಿದರು. ರಾವಣನು ಇಲ್ಲಿ ಈ ರೀತಿಯಾಗಿ ಯುದ್ಧಮಾಡಿ ಕೋಸಲೆಗೆ ಹೊರಟುಹೋದನು.

೪೫–೪೬ ಅನಂತರವೂ ರಾವಣನು ಕೋಸಲೆಗೆ ಹೋಗಿ ಅಲ್ಲಿ ಕೋಸಲರಾಜನನ್ನು ಯುದ್ಧದಲ್ಲಿ ಸೋಲಿಸಿ ಆ ವಧುವಾದ ಕೌಸಲ್ಯೆಯನ್ನು ಕದ್ದುಕೊಂಡು ಸಂತೋಷದಿಂದ ಆಕಾಶದ ದಾರಿಯಲ್ಲಿಯೇ ತೆಗೆದುಕೊಂಡು ಹೋದನು. ಆಗ ಲವಣಸಮುದ್ರದಲ್ಲಿ ವಾಸಮಾಡುತ್ತಿರುವ ತಿಮಿಂಗಿಲವೆಂಬ ದೊಡ್ಡಮೀನು ಅವನ ಕಣ್ಣಿಗೆ ಬಿದ್ದಿತು. ಆಗ ಇಂತೆಂದು ಮನಸ್ಸಿನಲ್ಲಿ ಯೋಚಿಸಿದನು.

ಲಂಕಾಯಾಶ್ಚ ಹರಿಷ್ಯಂತಿ ಕೌಸಲ್ಯಾಂ ಗುಪ್ತವಿಗ್ರಹಾಃ ।
ಅತಸ್ತಿಮಿಂಗಿಲಾಯೇಮಾಂ ನ್ಯಾಸಭೂತಾಂ ಕರೋಮ್ಯಹಂ ॥ ೪೭ ॥

ಇತಿ ನಿಶ್ಚಿತ್ಯ ಮನಸಿ ಪೇಟಿಕಾಯಾಂ ನಿಧಾಯ ತಾಂ ।
ಮತ್ಸ್ಯಂ ಸಮರ್ಪ್ಯ ಹೃಷ್ಟಾತ್ಮಾ ಯಯೌ ಲಂಕಾಂ ದಶಾನನಃ ॥ ೪೮ ॥

ತಿಮಿಂಗಿಲೋಽಪಿ ತಾಮಾಸ್ಯೇ ಧೃತ್ವಾಬ್ಧೌ ವ್ಯಚರತ್ಸುಖಂ ।
ಅಗ್ರೇ ದೃಷ್ಟ್ವಾ ರಿಪುಂ ಸ್ವೀಯಂ ತೇನ ಯುದ್ಧಾರ್ಥಮುದ್ಯತಃ ॥ ೪೯ ॥

ದ್ವೀಪೇ ತಾಂ ಪೇಟಿಕಾಂ ಸ್ಥಾಪ್ಯ ಸಂಗ್ರಾಮಂ ರಿಪುಣಾಕರೋತ್ ।
ಏತಸ್ಮಿನ್ನಂತರೇ ನೌಕಾಖಂಡಸ್ತಂ ದ್ವೀಪಮಾಗತಃ ॥ ೫೦ ॥

ತದಾ ತೌ ಮಂತ್ರಿನೃಪತೀ ದ್ವೀಪಂ ತಮಾರುರುಹತುಃ ।
ತತ್ರ ತಾಂ ಪೇಟಿಕಾಂ ದೃಷ್ಟ್ವಾ ಸಮುದ್ಘಾಟ್ಯಾತಿವಿಸ್ಮಿತೌ ॥ ೫೧ ॥

---

೪೭. ದೇವತೆಗಳು ನನಗೆ ಶತ್ರುಗಳು. ಅವರು ಗುಟ್ಟಾಗಿ ಆಲೋಚನೆ ಮಾಡಿಕೊಂಡು ಈ ಲಂಕೆಯಿಂದಲೂ ಕೌಸಲ್ಯೆಯನ್ನು ಕದ್ದುಕೊಂಡು ಹೋಗುವರು. ಆದುದರಿಂದ ಈ ಕೌಸಲ್ಯೆಯನ್ನು ನ್ಯಾಸವನ್ನಾಗಿ ಇಟ್ಟಿರುವಂತೆ ಈ ತಿಮಿಂಗಿಲದ ಕೈಯ್ಯಲ್ಲಿಯೇ ಕೊಡುತ್ತೇನೆ.

೪೮. ಹೀಗೆಂದು ನಿಶ್ಚಯಿಸಿಕೊಂಡು ಒಂದು ಪೆಟ್ಟಿಗೆಯಲ್ಲಿ ಆ ಕೌಸಲ್ಯೆಯನ್ನಿಟ್ಟು ಆ ಮತ್ಸ್ಯದ ಕೈಗೆ ಕೊಟ್ಟು ಸಂತೋಷದಿಂದ ಲಂಕೆಗೆ ಹೊರಟುಹೋದನು.

೪೯. ತಿಮಿಂಗಲವು ಆ ಪೆಟ್ಟಿಗೆಯನ್ನು ದವಡೆಯಲ್ಲಿಟ್ಟುಕೊಂಡು ಸಂಚರಿಸುತ್ತಿದ್ದಿತು. ಹೀಗಿರುತ್ತಿರಲು ಒಂದುಸಾರಿ ಎದುರಿಗೆ ಅದರ ಶತ್ರುವು ಬರಲು ಅದರೊಡನೆ ಯುದ್ಧಕ್ಕೆ ನಿಲ್ಲಬೇಕಾಗಿ ಬಂದಿತು.

೫೦. ಆಗ ಆ ಪೆಟ್ಟಿಗೆಯನ್ನು ಅಲ್ಲಿರುವ ದ್ವೀಪದಲ್ಲಿ ಇಟ್ಟು ಶತ್ರುವಿನೊಡನೆ ಯುದ್ಧಮಾಡುತ್ತಿದ್ದಿತು. ಹೀಗೆ ಯುದ್ಧಮಾಡುತ್ತಿರುವಾಗ ಸಮುದ್ರದಲ್ಲಿ ತೇಲಿಬರುತ್ತಿದ್ದ ಆ ದೋಣಿಯ ತುಂಡು ಆ ದ್ವೀಪಕ್ಕೆ ಬಂದಿದ್ದಿತು.

೫೧. ಆಗ ದಶರಥನೂ ಸುಮಂತ್ರನೂ ಆ ದ್ವೀಪಕ್ಕೆ ಹತ್ತಿಹೋದರು. ಅಲ್ಲಿ ಪೆಟ್ಟಿಗೆಯು ಇರುವುದನ್ನು ನೋಡಿ ಅದರ ಬಾಯನ್ನು ತೆಗೆದರು.

ತಸ್ಯಾಂ ದೃಷ್ಟ್ವಾಽಥ ಕೌಸಲ್ಯಾಂ ಜ್ಞಾತ್ವಾ ವೃತ್ತಂ ಪರಸ್ಪರಂ
ತಯಾ ಮುಹೂರ್ತಸಮಯೇ ದ್ವೀಪೇ ದಶರಥೇ ನೃಪಃ | ॥ ೫೨ ॥

ಗಾಂಧರ್ವಾಖ್ಯವಿವಾಹಂ ಚ ಚಕಾರ ಮುದಿತಾನನಃ |
ತತೋ ರಾಜಾಥ ಕೌಸಲ್ಯಾ ಸುಮಂತ್ರೋ ಮಂತ್ರಿಸತ್ತಮಃ ॥ ೫೩ ॥

ತ್ರಯಸ್ಥಿತ್ವಾ ಪೇಟಿಕಾಯಾಂ ತದ್ದ್ವಾರಂ ಪಿದಧುಃ ಪುನಃ |
ತಿಮಿಂಗಿಲೋ ರಿಪುಂ ಜಿತ್ವಾ ಚಕಾರಾಸ್ಯೇ ತು ಪೇಟಿಕಾಂ ॥ ೫೪ ॥

ಲಂಕಾಯಾಂ ರಾವಣಶ್ಚಾಪಿ ಸಮಾಹೂಯ ವಿಧಿಂ ಪುನಃ |
ಉವಾಚ ಪ್ರಹರ್ಸ ವಾಕ್ಯಂ ಸಭಾಯಾಂ ಸಂಸ್ಥಿತಸ್ಸುಖಂ ॥ ೫೫ ॥

ವಿಧೇ ತವ ಮೃಷಾ ವಾಕ್ಯಂ ರಾವಣೇನ ಮಯಾ ಕೃತಂ |
ಹತೋ ದಶರಥಸ್ತೋಯೇ ಕೌಸಲ್ಯಾ ಗೋಪಿತಾ ಮಯಾ ॥ ೫೬ ॥

---

೫೨. ಆದರಲ್ಲಿ ಕೌಸಲ್ಯೆಯು ಇರುವುದನ್ನು ನೋಡಿ ಬಹು ಆಶ್ಚರ್ಯ ಗೊಂಡರು. ಮತ್ತು ಒಬ್ಬರಿಗೊಬ್ಬರು ವಿಷಯಗಳನ್ನು ವಿಚಾರಿಸಿ ತಿಳಿದು ಕೊಂಡರು.

೫೩-೫೪. ಅವರು ಕಟ್ಟಿದ ಅದೇ ಮುಹೂರ್ತದಲ್ಲಿ, ದಶರಥನು ಅವಳನ್ನು ಗಾಂಧರ್ವ ವಿವಾಹದಿಂದ ಮದುವೆಯಾದನು. ಅನಂತರ ಆ ದಶರಥ, ಕೌಸಲ್ಯೆ, ಸುಮಂತ್ರರು ಆ ಪೆಟ್ಟಿಗೆಯಲ್ಲಿ ಕುಳಿತುಕೊಂಡರು. ಮತ್ತು ಬಾಗಿಲನ್ನು ಮುಚ್ಚಿ ಕೊಂಡರು. ತಿಮಿಂಗಿಲವು ಶತ್ರುವನ್ನು ಜಯಿಸಿ ಆ ಪೆಟ್ಟಗೆಯನ್ನು ಬಾಯಲ್ಲಿ ಮತ್ತೆ ಇಟ್ಟುಕೊಂಡಿತು.

೫೫. ರಾವಣನು ಲಂಕೆಯಲ್ಲಿದ್ದುಕೊಂಡಿರುತ್ತ ಮತ್ತೆ ಬ್ರಹ್ಮನನ್ನು ಕರೆಸಿದನು. ಅವನನ್ನು ಸಭೆಯಲ್ಲಿ ಕೂರಿಸಿಕೊಂಡು ನಗುತ್ತ ಇಂತೆಂದನು.

೫೬. ಎಲೈ ಬ್ರಹ್ಮನೇ ! ರಾವಣನಾದ ನಾನು ಬ್ರಹ್ಮನಾದ ನಿನ್ನ ಮಾತನ್ನು ಸುಳ್ಳನ್ನಾಗಿ ಮಾಡಿದೆನು. ದಶರಥನು ನೀರಿನಲ್ಲಿ ಬಿದ್ದು ಸತ್ತನು. ಕೌಸಲ್ಯೆಯನ್ನು ನಾನು ತೆಗೆದುಕೊಂಡು ಬಂದಿದ್ದೇನೆ. ಮತ್ತು ಗುಟ್ಟಾಗಿಟ್ಟದ್ದೇನೆ.

ತದ್ರಾವಣವಚಶ್ಶ್ರುತ್ವಾ ಸಭಾಯಾಂ ಪದ್ಮಸಂಭವಃ ।
ದೀರ್ಘಸ್ವರೇಣ ಪ್ರೋವಾಚ ಓಂ ಪುಣ್ಯಾಹಮಿತಿ ಸ್ಫುಟಂ ॥ ೫೭ ॥

ರಾವಣಸ್ಸಂಭ್ರಮಾತ್ಪ್ರಾಹ ಕಿಮಿದಂ ವ್ಯಾಹೃತಂ ತ್ವಯಾ ।
ವಿಧಿಃ ಪ್ರೋವಾಚ ಲಗ್ನಂ ಹಿ ಜಾತಂ ದಶರಥಸ್ಯ ಹಿ ॥ ೫೮ ॥

ತದಾ ವಿಧಿಂ ಮೃಷಾ ಕರ್ತುಂ ದೂತಾನ್ ಸಂಪ್ರೇಷ್ಯ ಸಾದರಂ ।
ತಿಮಿಂಗಿಲಾತ್ಸಮಾನೀಯ ಪೇಟಿಕಾಂ ಬ್ರಹ್ಮಣೋಂತಿಕೇ ॥ ೫೯ ॥

ಸಮುದ್ಘಾಟ್ಯ ದದರ್ಶಾಸೌ ತತ್ರ ತಸ್ಯಾಂ ದಶಾನನಃ ।
ತದಾತಿಚಕಿತಃ ಕ್ರುದ್ಧಸ್ತ್ವರ್ಥ ಹಂತುಂ ಖಡ್ಗಮಾದದೇ ॥ ೬೦ ॥

ತದಾತಿಸಂಭ್ರಮಾದ್ವೇಧಾ ರಾವಣಂ ವಾಕ್ಯಮಬ್ರವೀತ್ ।
ಕಿಂ ಕರೋಷಿ ದಶಾಸ್ಯ ತ್ವಂ ಮಾಧುನಾ ಸಾಹಸಂ ಕುರು ॥ ೬೧ ॥

---

೫೭. ರಾವಣನು ಸಭೆಯಲ್ಲಿ ಆಡಿದ ಈ ಮಾತನ್ನು ಬ್ರಹ್ಮನು ಕೇಳಿ ದೀರ್ಘವಾದ ಧ್ವನಿಯಿಂದ "ಓಂ ಪುಣ್ಯಾಹಂ" (ಒಳ್ಳೆಯದಾಗಲಿ. ಶುಭ ದಿವಸವು) ಎಂದು ಹೇಳಿದನು.

೫೮. ಆಗ ರಾವಣನು ಅವಸರಪಡುತ್ತ ಎಲೈ ಬ್ರಹ್ಮನೆ! ನೀನು ಏನೆಂದು ಹೇಳಿದೆ? ಎಂದನು. ಅದಕ್ಕೆ ಬ್ರಹ್ಮನು ದಶರಥನಿಗೆ ಮದುವೆ ಯಾಯಿತು! ಎಂದನು.

೫೯. ಒಡನೆಯೇ ಬ್ರಹ್ಮನ ಮಾತು ಸುಳ್ಳೆಂಬುದನ್ನು ನಿದರ್ಶನವನ್ನಾಗಿ ತೋರಿಸಲು ದೂತರನ್ನು ಕಳುಹಿಸಿ ತಿಮಿಂಗಿಲದ ಹತ್ತಿರದಿಂದ ಪೆಟ್ಟಿಗೆಯನ್ನು ತರಿಸಿದನು.

೬೦. ಆ ಪೆಟ್ಟಿಗೆಯನ್ನು ಬ್ರಹ್ಮನ ಬಳಿಗೆ ತಂದು ತೆರೆಯಲು ಅದರಲ್ಲಿ ರುವ ಇವರನ್ನು ನೋಡಿ ಬೆಚ್ಚಿಬಿದ್ದು ಅವರನ್ನು ಕೊಲ್ಲುವುದಕ್ಕೆ ಕತ್ತಿಯನ್ನು ಹಿರಿದನು.

೬೧. ಆಗ ಬ್ರಹ್ಮನು ಆತುರದಿಂದ ಇದೇನು? ದಶಾಸ್ಯನೇ! ನೀನು ಏನು ಮಾಡುತ್ತೀಯೆ? ಈ ಸಾಹಸಕಾರ್ಯವನ್ನು ಮಾಡಬೇಡ. ಎಂದು ತಡೆದನು.

ಕೌಸಲ್ಯೈಕಾ ಸ್ಥಾಪಿತಾಸ್ಯಾಂ ಪೇಟಿಕಾಯಾಂ ತ್ವಯಾ ಪುರಾ ।
ತ್ರಯಸ್ತತ್ರ ತು ಸಂಜಾತಾ ಭವಿಷ್ಯಂತ್ಯತ್ರ ಕೋಟಿಶಃ ॥ ೬೨ ॥

ಭವಿಷ್ಯತಿ ವಧಸ್ತೇದ್ಯ ರಾಮೋದ್ಯೈವ ಜನಿಷ್ಯತಿ ।
ಸಾಹಸಂ ಕುರು ಮಾದ್ಯೈವ ಸತ್ಯಾಯುಷಿ ದಶಾನನ ॥ ೬೩ ॥

ಯದ್ಭವಿಷ್ಯತದ್ಭವತು ತದಗ್ರೇ ಮಾಸ್ತು ಸಾಂಪ್ರತಂ ।
ಏತಾನ್ ದೂತೈಃ ಪ್ರೇಷಯಾದ್ಯ ಸಾಕೇತಂ ತ್ವಂ ಸುಖೀ ಭವ ॥ ೬೪ ॥

ನ ಭವಿಷ್ಯತಿ ಮದ್ವಾಣಿರ್ಮೃಷಾ ಜಾನೀಹಿ ನಿಶ್ಚಯಂ ।
ಯದ್ಭಾವ್ಯಂ ತದ್ಭವತ್ಯೇವ ಗಹನಾ ಕರ್ಮಣೋ ಗತಿಃ ॥ ೬೫ ॥

ತದ್ವಿಧೇರ್ವಚನಂ ಸತ್ಯಂ ಮತ್ವಾ ಭೀತೋ ದಶಾನನಃ ।
ಪೇಟಿಕಾಂ ಪ್ರೇಷಯಾಮಾಸ ಸಾಕೇತಂ ಸ್ವಭಟೈರ್ಜವಾತ್ ॥ ೬೬ ॥

೬೨–೬೩. ನೀನು ಮೊದಲು ಇದರಲ್ಲಿ ಕೌಸಲ್ಯೆಯೊಬ್ಬಳನ್ನು ಇಟ್ಟಿದ್ದೆ. ಈಗ ಅದರಲ್ಲಿ ಮೂರು ಜನರು ಆದರು. ಇದೇ ರೀತಿಯಲ್ಲಿ ಕೋಟಿ ಜನರೂ ಆಗುವರು. ಈಗಲೇ ನಿನ್ನ ವಧೆಯೂ ಆಗುವುದು. ರಾಮನು ಈಗಲೇ ಹುಟ್ಟುವನು. ಈಗ ಮಿತಿಮೀರಿದ ಕೆಲಸಕ್ಕೆ ಕೈಹಾಕಬೇಡ. ಇನ್ನೂ ನಿನಗೆ ಆಯುಸ್ಸು ಉಳಿದಿದೆ.

೬೪. ಏನು ಆಗುತ್ತದೆಯೋ ಆದು ಮುಂದೆ ಆಗಲಿ. ಈಗ ಬೇಡ ಇವರನ್ನು ದೂತರ ಜೊತೆಯಲ್ಲಿ ಅಯೋಧ್ಯೆಗೆ ಕಳುಹಿಸಿಬಿಡು. ನೀನು ಸುಖವಾಗಿರು.

೬೫. ಎಲೈ ರಾವಣನೆ! ನನ್ನ ಮಾತು ಸುಳ್ಳಾಗುವುದೇ ಇಲ್ಲ. ಅದನ್ನು ನಿಶ್ಚಯವೆಂದು ತಿಳಿ. ಯಾವುದು ಆಗಬೇಕೋ ಅದು ಆಗಿಯೇ ಆಗುತ್ತದೆ. ಕರ್ಮಗತಿಯೆಂಬುದನ್ನು ತಿಳಿಯಲಾಗುವುದಿಲ್ಲ.

೬೬. ಇದನ್ನು ಕೇಳಿ ರಾವಣನು ಬ್ರಹ್ಮನ ಮಾತು ನಿಜವೆಂದು ತಿಳಿದು ಹೆದರಿಕೊಂಡವನಾಗಿ ಆ ಪೆಟ್ಟಿಗೆಯನ್ನು ತನ್ನ ದೂತರ ಕೈಯ್ಯಲ್ಲಿ ಕೊಟ್ಟು ಅಯೋಧ್ಯೆಗೆ ಬೇಗ ಕಳುಹಿಸಿಬಿಟ್ಟನು.

ಸಾಕೇತೇ ಪೇಟಿಕಾಂ ತ್ಯಕ್ತ್ವಾ ಭಟಾಸ್ತೇ ರಾವಣಂ ಗತಾಃ |
ಅಯೋಧ್ಯಾಯಾಂ ಮಹಾನಾಸೀತ್ಸಂಭ್ರಮೋ ನೃಪದರ್ಶನಾತ್ || ೬೭ ||

ಅಯೋಧ್ಯಾವಾಸಿನಾಂ ನೃಣಾಂ ಕೋಸಲಾಧಿಪತೇರಪಿ |
ತತಃ ಪುನರ್ವಿವಾಹಸ್ಯ ಸಂಭ್ರಮಂ ಕೋಸಲಾಧಿಪಃ || ೬೮ ||

ಕೃತ್ವಾ ಸ್ವರಾಜ್ಯಂ ಜಾಮಾತ್ರೇ ದದೌ ಪ್ರೀತ್ಯಾ ಹಿ ಪುತ್ರಿಕಾಂ |
ತದಾರಭ್ಯ ಕೋಸಲೇಂದ್ರಾಃ ಪ್ರೋಚ್ಯಂತೇ ರವಿವಂಶಜಾಃ || ೬೯ ||

ತತೋ ರಾಜಾ ದಶರಥಸ್ಸುಮಿತ್ರಾಂ ಮಗಧೇಶಜಾಂ |
ವಿವಾಹೇನಾಪರಾಂ ಪತ್ನೀಂ ಚಕಾರ ದಯಿತಾಂ ಪ್ರಿಯಾಂ || ೭೦ ||

ಕೈಕೇಯನೃಪತೇಃ ಕನ್ಯಾಂ ಕೈಕೇಯೀಂ ಪದ್ಮಲೋಚನಾಂ |
ವಿವಾಹೇನಾಕರೋದ್ಭಾರ್ಯಾಂ ತೃತೀಯಾಂ ಪರಮಾದರಾತ್ || ೭೧ ||

---

೬೭. ಆ ಭಟರು ಅಯೋಧ್ಯೆಯಲ್ಲಿ ಆ ಪೆಟ್ಟಿಗೆಯನ್ನಿಟ್ಟು ಮತ್ತೆ ರಾವಣನಲ್ಲಿಗೆ ಬಂದರು. ಅತ್ತ ಅಯೋಧ್ಯೆಯಲ್ಲಿ ಆ ತಮ್ಮ ರಾಜನನ್ನು ನೋಡಿ ಅವರಿಗೆಲ್ಲಾ ಬಹು ಸಂತೋಷವಾಯಿತು.

೬೮. ಆ ಕೌಸಲ್ಯೆಯನ್ನು ನೋಡಿ ಕೋಸಲ ದೇಶದವರು ಬಹು ಸಂತೋಷಪಟ್ಟರು. ಅನಂತರ ಮತ್ತೆ ವಿವಾಹ ಮಾಡಲು ಕೋಸಲಾಧಿಪನು ಉತ್ಸಾಹಿಸಿ ಸಿದ್ಧಮಾಡಿದನು.

೬೯. ಮಗಳಿಗೆ ಸಂತೋಷದಿಂದ ವಿವಾಹವನ್ನು ಮಾಡಿ ಕೋಸಲೇಶ್ವರನು ತನ್ನ ರಾಜ್ಯವನ್ನೂ ಅಳಿಯನಿಗೆ ಸಂತೋಷದಿಂದ ಕೊಟ್ಟುಬಿಟ್ಟನು. ಅಲ್ಲಿಂದ ಮೊದಲುಗೊಂಡು ಕೋಸಲ ದೇಶದವರನ್ನೂ ಸೂರ್ಯವಂಶದವರೆಂದು ಹೇಳುತ್ತಾರೆ.

೭೦. ಅನಂತರ ದಶರಥನು ಮಗಧ ದೇಶದ ರಾಜನ ಮಗಳಾದ ಸುಮಿತ್ರೆಯನ್ನೂ ವಿವಾಹವಾಗಿ ಮತ್ತೊಬ್ಬ ಹೆಂಡತಿಯನ್ನಾಗಿ ಮಾಡಿಕೊಂಡನು.

೭೧. ಅನಂತರ ಕೇಕಯ ರಾಜನ ಮಗಳಾದ ಕೈಕೇಯಿಯನ್ನೂ ಮದುವೆಯಾದನು. ಈಕೆಯು ದಶರಥನಿಗೆ ಮೂರನೆಯ ಹೆಂಡತಿಯಾದಳು.

ತಥಾನ್ಯಾನಿ ಸಪ್ತಶತಕಲತ್ರಾಣ್ಯಕರೋನ್ನೃಪಃ ।
ಏವಂ ರಾಜಾ ದಶರಥಶ್ಶಾಸ್ತಾ ಸ ಜಗತೀತಲೇ ॥ ೭೨ ॥

ದಾನೈರ್ಭೋಗೈರ್ದಶರಥೋ ಬಭೂವ ಜರಠೋ ಮಹಾನ್ ।
ನಾಭವತ್ಸಂತತಿಸ್ತಸ್ಯ ಧಾರ್ಮಿಕಸ್ಯಾವನೀಪತೇಃ ॥ ೭೩ ॥

ಕೌಸಲ್ಯಾ ಚ ಸುಮಿತ್ರಾ ಚ ಕೈಕೇಯೀ ಚ ಗಿರೀಂದ್ರಜೇ ।
ಏತಾಃ ಕುಲೀನಾಸ್ಸುಭಗಾ ರೂಪಯೌವನಸಂಯುತಾಃ ॥ ೭೪ ॥

ತಸ್ಮಿನ್ ಶಾಸತಿ ರಾಜ್ಯಂ ತು ಸ್ಥಿತೇಽಯೋಧ್ಯಾಪುರಿ ಪ್ರಿಯೇ ।
ದೇವಾನಾಂ ದಾನವಾನಾಂ ಚ ರಾಜ್ಯಾರ್ಥಂ ವಿಗ್ರಹೋಽಭವತ್ ॥ ೭೫ ॥

ತತ್ರ ವಾಗಭವಚ್ಛ್ರೇಷ್ಠಾ ಯುತ್ರಾಯೋಧ್ಯಾಪತಿರ್ಮಹಾನ್ ।
ಜಯಸ್ತತ್ರ ನ ಸಂದೇಹಸ್ತಾಂ ಶ್ರುತ್ವಾ ಪವನೋ ಜವಾತ್ ॥ ೭೬ ॥

---

೭೨. ಇದರಂತೆಯೇ ಆ ರಾಜನು ಏಳುನೂರು ಜನ ಸ್ತ್ರೀಯರನ್ನು ಮದುವೆಯಾದನು. ಆ ದಶರಥನು ಹೀಗೆ ಸುಖವಾಗಿರುತ್ತ ರಾಜ್ಯವನ್ನು ಆಳುತ್ತಿದ್ದನು.

೭೩. ಹೀಗೆ ರಾಜ್ಯವಾಳುತ್ತಿದ್ದು ದಾನಗಳನ್ನು ಮಾಡುತ್ತ ಭೋಗಗಳನ್ನು ಭೋಗಿಸುತ್ತಲಿದ್ದು ಮುದುಕನಾದನು. ಈ ರೀತಿಯಾಗಿ ಅನೇಕ ಜನ ಹೆಂಡತಿಯರಿದ್ದರೂ ಧರ್ಮ ಮಾಡುತ್ತಿದ್ದರೂ ಮಕ್ಕಳೇ ಆಗಲಿಲ್ಲ.

೭೪. ಕೌಸಲ್ಯೆ, ಸುಮಿತ್ರೆ, ಕೈಕೇಯಿ ಇವರು ಒಳ್ಳೆಯ ವಂಶದಲ್ಲಿ ಹುಟ್ಟಿದವರು. ರಮಣೀಯರಾಗಿದ್ದರು. ರೂಪದಿಂದಲೂ ಯೌವನದಿಂದಲೂ ಕೂಡಿದ್ದರು.

೭೫. ಈ ದಶರಥನು ಹೀಗೆ ರಾಜ್ಯವನ್ನಾಳುತ್ತಿರಲು, ದೇವತೆಗಳಿಗೂ ದಾನವರಿಗೂ ರಾಜ್ಯಕ್ಕೋಸ್ಕರ ಯುದ್ಧವು ಮೊದಲಾಯಿತು.

೭೬. ಆಗ ಅಂತರಿಕ್ಷವಾಣಿಯು ಅಯೋಧ್ಯಾಧಿಪತಿಯು ಯಾವ ಕಡೆಯಲ್ಲಿರುವನೋ ಆ ಕಡೆಗೆ ಜಯವಾಗುತ್ತದೆ. ಸಂದೇಹವಿಲ್ಲ. ಎಂದೆನ್ನಲು ಈ ಮಾತನ್ನು ಎಲ್ಲರೂ ಕೇಳಿದರು. ಒಡನೆಯೇ ವಾಯುವು ಇವನ ಬಳಿಗೆ ಬಂದನು.

ಪ್ರಾರ್ಥಯಾಮಾಸ ನೃಪತಿಂ ಯಯೌ ಯೋದ್ಧುಂ ನೃಪಸ್ತತಃ ।
ತತ್ರ ಗತ್ವಾ ದಶರಥಶ್ಚಕಾರ ಕದನಂ ಮಹತ್ ॥ ೭೭ ॥

ಏತಸ್ಮಿನ್ನಂತರೇ ತತ್ರ ಸಂಗ್ರಾಮೇತಿಭಯಾವಹೇ ।
ಭಿನ್ನಾಕ್ಷಂ ಸ್ವರಥಂ ರಾಜಾ ನಾವಿಂದದ್ರಣಸಂಭ್ರಮಾತ್ ॥ ೭೮ ॥

ರಾಜ್ಞೋಽಂತಿಕೇ ಸ್ಥಿತಾ ಸುಭ್ರೂಃ ಕೈಕೇಯೀ ರಣಕೌತುಕಂ ।
ಪಶ್ಯಂತೀ ಸ್ವರಥಂ ಭಿನ್ನಂ ದದರ್ಶ ಸಮರಾಂಗಣೇ ॥ ೭೯ ॥

ಅಕ್ಷವಚ್ಚ ನಿಜಂ ಹಸ್ತಂ ಚಕಾರ ಜಯಹೇತವೇ ।
ತಯಾ ತು ಪೂರ್ವಂ ಬಾಲ್ಯತ್ವಾನ್ಮಷ್ಯಾಸ್ಯಂ ಕಸ್ಯಚಿನ್ಮುನೇಃ ॥ ೮೦ ॥

ಕೃಷ್ಣವರ್ಣಂ ಕೃತಂ ತೇನ ಶಪ್ತಾ ತೇಽಪ್ಯಪವಾದತಃ ।
ಮುಖಮಗ್ರೇ ನಿರೀಕ್ಷ್ಯಂತಿ ನೈವ ಲೋಕಾಃ ಕದಾಚನ ॥ ೮೧ ॥

---

೭೭. ವಾಯುವು ಬಂದು ಆಗ ಈತನನ್ನು ಪ್ರಾರ್ಥಿಸಲು ದೇವತೆಗಳ ಕಡೆಯಿಂದ ಯುದ್ಧಮಾಡಲು ದಶರಥನು ಹೋದನು. ಹೋಗಿ ಅವರೊಡನೆ ಬಹು ಘೋರವಾದ ಯುದ್ಧವನ್ನು ಮಾಡಿದನು.

೭೮. ಈ ಯುದ್ಧವು ಬಹು ಘೋರವಾಗಿ ನಡೆಯುತ್ತಿದ್ದಾಗ ದಶರಥನ ರಥದ ಅಚ್ಚು ಮುರಿದು ಹೋಯಿತು. ಆ ಯುದ್ಧರಂಗದಲ್ಲಿ ರಾಜನಿಗೆ ಅದು ತಿಳಿಯಲೇ ಇಲ್ಲ. ಅವನು ಅಷ್ಟು ಘೋರವಾಗಿ ಯುದ್ಧಮಾಡುತ್ತಿದ್ದನು.

೭೯-೮೦. ಕೈಕೇಯಿಯು ಯುದ್ಧವನ್ನು ನೋಡಬೇಕೆಂಬ ಆಸೆಯಿಂದ ಆ ರಾಜನ ಬಳಿಯಲ್ಲಿಯೇ ಇದ್ದಳು. ಈಕೆಯು ತನ್ನ ರಥದ ಅಚ್ಚು ಮುರಿದುದನ್ನು ನೋಡಿದಳು. ಒಡನೆಯೇ ಈಕೆಯು ತನ್ನ ಕೈಯ್ಯನ್ನು ಆ ಅಚ್ಚಿನಂತೆ ಸಂದಿಯಲ್ಲಿ ಹಾಕಿ ಹಿಡಿದಳು. ಒಂದು ಸಾರಿ ಈಕೆಯು ಬಾಲ್ಯದಲ್ಲಿ ಹುಡುಗಾಟಕ್ಕೋಸ್ಕರ ಒಬ್ಬ ಮುನಿಯ ಮುಖಕ್ಕೆ ಮಸಿಯನ್ನು ಪೂಸಿ ಕಪ್ಪುಮಾಡಿದಳು.

೮೧. ಆಗ ಆ ಋಷಿಯು ಇದನ್ನು ನೋಡಿ ಎಲೈ ಕೈಕೇಯಿಯೆ! "ನೀನು ಅಪವಾದವನ್ನು ಹೊಂದುವುದರಿಂದ ನಿನ್ನ ಮುಖವನ್ನು ಇನ್ನು ಮುಂದೆ ಒಬ್ಬರೂ ನೋಡದೆ ಹೋಗಲಿ" ಎಂದು ಶಪಿಸಿದನು.

ತತಸ್ತಂ ಗಂತುಮುದ್ಯುಕ್ತಂ ಕೈಕೇಯೀ ವಾಮಹಸ್ತತಃ ।
ದಂಡಾದಿಕಂ ದದೌ ತಸ್ಯ ಮುನೇರ್ಹರ್ಷಾತಿಭಕ್ತಿತಃ ॥ ೬೨ ॥

ತಸ್ಯೈ ದದೌ ವರಂ ವಿಪ್ರಸ್ತವ ವಾಮಕರೋ ವರಾತ್ ।
ಭವಿತಾ ವಜ್ರಕಠಿಣಃ ಕ್ವಾಪಿ ನಾಶಂ ನ ಯಾಸ್ಯತಿ ॥ ೬೩ ॥

ಕೈಕೇಯೀ ತಂ ವರಂ ಸ್ಮೃತ್ವಾ ಸ್ವಂ ಚಕಾರಾಕ್ಷವತ್ಕರಂ ।
ಅಥ ಜಿತ್ವಾ ರಣೇ ದೈತ್ಯಾನ್ ದೃಷ್ಟ್ವಾ ತತ್ಕರ್ಮ ಪಾರ್ಥಿವಃ ॥ ೬೪ ॥

ದದೌ ವರೌ ದ್ವೌ ತಸ್ಯೈ ಸ ನ್ಯಾಸಭೂತೌ ಕೃತೌ ತಯಾ ।
ಯದಾಹಂ ಯಾಚಯಿಷ್ಯಾಮಿ ತದಾ ತ್ವಂ ದೇಹಿ ತೌ ಮಮ ॥ ೬೫ ॥

ತಥೇತ್ಯುಕ್ತ್ವಾ ನೃಪಃ ಪತ್ನೀಂ ಯಯೌ ಸ್ವನಗರೀಂ ಪ್ರತಿ ।
ಏಕದಾ ಸ ನಿಶಾಯಾಂ ತು ಮೃಗಯಾಯಾಂ ಮಹಾವನೇ ॥ ೬೬ ॥

---

೬೨. ಅವನು ಅನಂತರ ಹೊರಟು ಹೋಗಲು ಪ್ರಯತ್ನಪಟ್ಟಾಗ ಕೈಕೇಯಿಯು ಎಡಗೈಯ್ಯಿಂದ ಅವನ ದಂಡ ಮುಂತಾದುವುಗಳನ್ನೆಲ್ಲಾ ಅತಿ ಭಕ್ತಿಯಿಂದ ಎತ್ತಿಕೊಟ್ಟಳು.

೬೩. ಅದನ್ನು ನೋಡಿ ಆ ಮುನಿಯು ನಿನ್ನ ಕೈಯ್ಯು ನನ್ನ ವರದಿಂದ ವಜ್ರದಂತೆ ಕಠಿಣವಾಗಲಿ. ಎಲ್ಲಿಯೂ ಯಾವುದರಿಂದಲೂ ನಾಶವಾಗಲೇಬೇಡ. ಎಂದು ವರವನ್ನು ಕೊಟ್ಟನು.

೬೪. ಕೈಕೇಯಿಯು ಆ ವರವನ್ನು ಜ್ಞಾಪಿಸಿಕೊಂಡು ತನ್ನ ಕೈಯ್ಯನ್ನು ದೂರಿಯಂತೆ ಒಳಕ್ಕೆ ಕೊಟ್ಟಳು. ಆ ದಶರಥನು ಯುದ್ಧದಲ್ಲಿ ಶತ್ರುಗಳನ್ನು ಜಯಿಸಿ ತನ್ನ ಹೆಂಡತಿಯು ಮಾಡಿರುವ ಕೆಲಸವನ್ನು ನೋಡಿದನು.

೬೫. ಆಗ ಅದರಿಂದ ಸಂತೋಷಗೊಂಡವನಾಗಿ ಆಕೆಗೆ ಎರಡು ವರಗಳನ್ನು ಕೊಟ್ಟನು. ಆಕೆಯು ಅವುಗಳನ್ನು ಬೇಕಾದಾಗ ಕೇಳುವೆನೆಂದು ಹೇಳಿ ನ್ಯಾಸವಾಗಿ ಅವನಲ್ಲಿಯೇ ಇರಲೆಂದಳು.

೬೬. ಹಾಗೆಯೇ ಆಗಲೆಂದು ಹೇಳಿ ದಶರಥನು ಊರಿಗೆ ಬಂದನು. ಹೀಗಿರಲು ಒಂದು ದಿನ ರಾತ್ರಿಯಲ್ಲಿ ಕಾಡಿಗೆ ಬೇಟೆಯಾಡುವುದಕ್ಕೆ ಹೋದನು.

ಚಕಾರ ವಾರಿಬಂಧಂ ಚಾವಧೀದ್ವನಚರಾನ್ ಬಹೂನ್ ।
ಏತಸ್ಮಿನ್ನಂತರೇ ತತ್ರ ವನೇ ವಾರಾಣಸೀಪಥಾ ॥ ೮೭ ॥

ಕರಂಡಸ್ಥೌ ಸ್ವಪಿತರೌ ಸ್ವಸ್ಕಂಧೇ ಶ್ರವಣೋ ವಹನ್ ।
ಕಾಶೀಂ ನೇತುಂ ಯಯೌ ವೈಶ್ಯೋ ಘರ್ಮಬಾಧಾಭಯಾನ್ನಿಶಿ ॥ ೮೮ ॥

ನೀರಂ ಪಾತುಂ ಶಿಶೋ ದೇಹಿ ಚಾವಯೋಶ್ಚೇತಿ ಪ್ರಾರ್ಥಿತಃ ।
ತಾಭ್ಯಾಂ ಕರಂಡಕಂ ನ್ಯಸ್ಯ ತಟಾಕೇ ಜಲಸನ್ನಿಧೌ ॥ ೮೯ ॥

ಗತ್ವಾ ಕೃತ್ವಾ ಜಲೇ ಕುಂಭಂ ನ್ಯುಬ್ಜಂ ತಸ್ಥೌ ಜಲೇ ಕ್ಷಣಂ ।
ಕುಂಭಸ್ಯ ನ್ಯುಬ್ಜತಶ್ಶಬ್ದೋ ಬಭೂವ ಕರಿಣೋ ಯಥಾ ॥ ೯೦ ॥

---

೮೭. ಆ ಕಾಡಿನಲ್ಲಿದ್ದ ಒಂದು ನೀರು ಕುಡಿಯುವ ಸ್ಥಳದಲ್ಲಿ ಅಡ್ಡಲಾಗಿ ಕುಳಿತು ನೀರಿಗೆ ಬರುತ್ತಿರುವ ಮೃಗಗಳನ್ನು ಕೊಲ್ಲುತ್ತಾ ಬಂದನು. ಹೀಗೆ ಇವನು ಬೇಟೆಯಾಡುತ್ತಿದ್ದಾಗ ಕಾಶಿಗೆ ಹೋಗಲು ಹೊರಟು ಒಬ್ಬನು ಆ ದಾರಿಯಲ್ಲಿ ಬಂದನು.

೮೮. ಅವನು ಒಂದು ಅಡ್ಡೆಯಂತೆ ಕಾಗಡಿಯನ್ನು ಮಾಡಿಕೊಂಡು ಅದರಲ್ಲಿ ಅವನ ತಾಯಿತಂದೆಗಳನ್ನು ಕೂರಿಸಿಕೊಂಡು ಹೆಗಲಿನ ಮೇಲೆ ಹೊತ್ತುಕೊಂಡು ಬಂದಿದ್ದನು. ಅವನ ಹೆಸರು ಶ್ರವಣನು. ಜಾತಿಯಲ್ಲಿ ವೈಶ್ಯನು. ಕಾಶಿಗೆ ಆ ತಾಯಿತಂದೆಗಳನ್ನು, ಯಾತ್ರೆಗೆ ಕರೆದುಕೊಂಡು ಹೋಗುತ್ತಿದ್ದನು. ಹಗಲು ಬಿಸಿಲಿನ ಬೇಗೆಯನ್ನು ತಡೆಯಲಾರದೆ ರಾತ್ರಿಯಲ್ಲಿ ಹೋಗುತ್ತಿದ್ದನು.

೮೯. ಆಗ ತಾಯಿತಂದೆಗಳು ಬಾಯಾರಿದವರಾಗಿ ಮಗನನ್ನು ಕುರಿತು ಕುಡಿಯುವುದಕ್ಕೆ ನೀರನ್ನು ಕೊಡೆಂದು ಕೇಳಲು ಆ ಕಾಗಡಿಯನ್ನು ಆ ದಾರಿಯಲ್ಲಿಯೇ ಇಳಿಸಿ ತಾನು ನೀರನ್ನು ತರಲು ಕೆರೆಗೆ ಹೊರಟನು.

೯೦. ನೀರಿಗೆ ಇಳಿದು ಹೂಜಿಯನ್ನು ನೀರು ತುಂಬಲು ಬಗ್ಗಿಸಿದನು. ಆ ಬಗ್ಗಿಸಿರುವ ಹೂಜಿಯು ಕ್ಷಣಕಾಲ ನೀರು ತುಂಬುವಾಗ ಶಬ್ದವಾಯಿತು. ಆ ಶಬ್ದವು ಆನೆಯು ನೀರು ಕುಡಿಯುವಾಗ ಆಗುವ ಶಬ್ದದಂತೆ ಆಯಿತು.

ವನದ್ವಿಪೋ ನ ಹಂತವ್ಯಶ್ಚೇತಿ ಜಾನನ್ನಪಿ ನೃಪಃ ।
ವೈಶ್ಯಂ ರಾಜಾ.ದ್ವಿಪಂ ಮತ್ವಾ ವಿವ್ಯಾಧ ಸ ಪತತ್ರಿಣಾ ॥ ೯೧ ॥

ಪಪಾತ ಶ್ರವಣಸ್ತೋಯೇ ಹಾ ಕೇನಾಹಂ ಪ್ರತಾಡಿತಃ ।
ಬ್ರುವತಶ್ಚೇತಿ ತದ್ವಾಕ್ಯಂ ಶ್ರುತ್ವಾಭೂದ್ವಿಹ್ವಲೋ ನೃಪಃ ॥ ೯೨ ॥

ಗತ್ವಾ ಜಲಾದ್ಬಹಿರ್ವೇಗಾತ್ತಂ ಕೃತ್ವಾಕರ್ಣ್ಯ ತದ್ಗಿರಂ ।
ಸರ್ವಂ ವೃತ್ತಂ ವಿಶಲ್ಯಂ ತಂ ಚಕಾರ ಭಯವಿಹ್ವಲಃ ॥ ೯೩ ॥

ತಾವಂಧಾವಪಿ ತತ್ಪುತ್ರವಧಂ ಶ್ರುತ್ವಾ ರುರುದತುಃ ।
ಕಾರಯಿತ್ವಾ ನೃಪತಿನಾ ಚಿತಿಂ ಪುತ್ರ ಸಮನ್ವಿತೌ ॥ ೯೪ ॥

---

೯೧. ಕಾಡಾನೆಯನ್ನು ಕೊಲ್ಲಬಾರದೆಂದು ದಶರಥನಿಗೆ ತಿಳಿದಿದ್ದರೂ ಕೂಡ ನೀರು ತುಂಬುತ್ತಿರುವ ಈ ವೈಶ್ಯನನ್ನು ಆನೆಯೆಂದು ತಿಳಿದು ಬಾಣದಿಂದ ಹೊಡೆದನು

೯೨. ಒಡನೆಯೇ ಆ ಶ್ರವಣನು ಕೆಟ್ಟೆನಲ್ಲಾ ! ಯಾರೋ ನನ್ನನ್ನು ಹೊಡೆದರಲ್ಲಾ ! ಎಂಬುದಾಗಿ ಹೇಳುತ್ತಾ ಆ ನೀರಿನಲ್ಲಿಯೇ ಬಿದ್ದುಬಿಟ್ಟನು. ಇದನ್ನು ಕೇಳಿ ರಾಜನು ಭಯದಿಂದ ಕಾತರನಾದನು.

೯೩. ಒಡನೆಯೇ ಅಲ್ಲಿಗೆ ಓಡಿಹೋಗಿ ಆ ಶ್ರವಣನನ್ನು ನೀರಿನಿಂದ ಮೇಲಕ್ಕೆ ಎತ್ತಿ ಅವನಿಂದ ಅವನ ವಿಷಯಗಳನ್ನೆಲ್ಲವನ್ನೂ ತಿಳಿದುಕೊಂಡು ಅವನಿಗೆ ಚುಚ್ಚಿಕೊಂಡಿದ್ದ ಬಾಣವನ್ನು ತೆಗೆದನು. ಆದರೆ ಅವನ ಸಮಾಚಾರ ವನ್ನು ಕೇಳಿ ಭಯಗೊಂಡನು.

೯೪. ಅನಂತರ ಆ ಅಂಧರಾದ ತಾಯಿ ತಂದೆಗಳು ಈ ದಶರಥನಿಂದ ಮಗನ ಸಾವನ್ನು ಕೇಳಿ ದುಃಖಿಸಿದರು. ಒಡನೆಯೇ ಆ ದಶರಥನಿಂದಲೇ ಅಲ್ಲೊಂದು ಚಿತಿಯನ್ನು ಮಾಡಿಸಿ ಅದರಲ್ಲಿ ಮೂವರೂ ದಗ್ಧರಾದರು.

ದಶರಥಾಯ ತೌ ಶಾಪಂ ದದತುಃ ಪುತ್ರದುಃಖಿತಾ |
ಪುತ್ರಶೋಕಾದಾವಯೋರ್ಹಿ ಯಥಾ ಮೃತ್ಯುಸ್ತವಾಸ್ತ್ವಿತಿ || ೯೫ ||

ಯಯೌ ನೃಪೋಽಪಿ ನಗರೀಂ ಗುರುಂ ವೃತ್ತಂ ನ್ಯವೇದಯತ್ |
ವಸಿಷ್ಠೋ ನೃಪತೇರ್ದೋಷಶಾಂತ್ಯರ್ಥಂ ತುರಗಾಧ್ವರಂ || ೯೬ ||

ನೃಪೇಣ ಕಾರಯಾಮಾಸ ಸಾಕೇತೇ ಸರಯೂತಟೇ |
ರೋಮಪಾದ ಇತಿ ಖ್ಯಾತಸ್ತಸ್ಯ ದಶರಥಸ್ಸಖಾ || ೯೭ ||

ಶಾಂತಾಂ ಸ್ವಕನ್ಯಾಂ ಪ್ರಾಯಚ್ಛತ್ತದ್ರಾಷ್ಟ್ರೇಽಭೂದವರ್ಷಣಂ |
ವಿಭಾಂಡಕಾಶ್ರಮಂ ವಾರನಾರೀಸ್ಸಂಪ್ರೇಷ್ಯ ತತ್ಸುತಂ || ೯೮ ||

---

೯೫. ಆಗ ಅವರು ಆ ದಶರಥನಿಗೆ ಮಗನು ಸತ್ತ ದುಃಖದಿಂದ ನಮ್ಮ ಗಳಿಗೆ ಮೃತ್ಯುವು ಒದಗಿದಂತೆ ನಿನಗೂ ಪುತ್ರಶೋಕದಿಂದಲೇ ಮರಣವು ಒದಗಲಿ ಎಂದು ಶಾಪವನ್ನು ಕೊಟ್ಟರು.

೯೬. ಅನಂತರ ರಾಜನು ರಾಜಧಾನಿಯಾದ ಅಯೋಧ್ಯೆಗೆ ಹೋಗಿ ಅಲ್ಲಿ ತನ್ನ ಗುರುವಾದ ವಸಿಷ್ಠನಿಗೆ ಈ ವಿಷಯಗಳೆಲ್ಲವನ್ನೂ ತಿಳಿಸಿದನು. ಅದನ್ನು ಕೇಳಿ ಗುರುವು ಅಶ್ವಮೇಧಯಾಗವನ್ನು ಮಾಡಿದರೆ ಆ ದೋಷವು ಶಾಂತ ವಾಗುವುದೆಂದು ಹೇಳಿದನು.

೯೭. ಅಂತೆಯೇ ಅಯೋಧ್ಯೆಯ ಬಳಿ ಸರಯೂನದಿಯ ದಡದಲ್ಲಿ ವಸಿಷ್ಠನು ರಾಜನಿಂದ ಯಾಗವನ್ನು ಮಾಡಿಸಿದನು. ರೋಮಪಾದನೆಂಬುವ ನೊಬ್ಬನು ದಶರಥನ ಸ್ನೇಹಿತನಿದ್ದನು.

೯೮. ಆ ರೋಮಪಾದನಿಗೆ ದಶರಥನು ತನ್ನ ಮಗಳನ್ನು ದತ್ತುರೂಪವಾಗಿ ಕೊಟ್ಟಿದ್ದನು. ಒಂದು ಸಾರಿ ಆ ರೋಮಪಾದನ ರಾಜ್ಯದಲ್ಲಿ ಮಳೆಬಾರದೆ ಕ್ಷಾಮವು ಪ್ರಾಪ್ತವಾಯಿತು. ಆಗ ವಿಭಾಂಡಕನೆಂಬ ಋಷಿಯ ಆಶ್ರಮಕ್ಕೆ ಸೂಳೆಯರನ್ನೂ ಮಂತ್ರಿಗಳನ್ನೂ ಕಳುಹಿಸಿದನು. ವಿಭಾಂಡಕನ ಮಗನಾದ ಋಷ್ಯಶೃಂಗನು ಬಂದ ಜಾಗದಲ್ಲಿ ಮಳೆಯಾಗುವುದೆಂದು ಕೇಳಿದ್ದನು.

ರೋಮಪಾದೋ ಮೋಹಯಿತ್ವಾ ಋಷ್ಯಶೃಂಗಂ ಸಮಾನಯತ್ ।
ವಾರಸ್ತ್ರಿಯೋ ವನೇ ಗತ್ವಾ ಸಮಾನಿನ್ಯುರ್ಮೃಗೀಸುತಂ ॥ ೯೯ ॥

ನಾಟ್ಯಸಂಗೀತವಾದಿತ್ರೈರ್ವಿಭ್ರಮಾಲಿಂಗನಾರ್ಹಣೈಃ ।
ತತ್ಪ್ರಭಾವಾದಭೂದ್ವೃಷ್ಟಿಃ ಪುತ್ರೋಽಪಿ ನೃಪತೇರಭೂತ್ ॥ ೧೦೦ ॥

ತತಸ್ತುಷ್ಟೋ ರೋಮಪಾದಸ್ತಸ್ಮೈ ಶಾಂತಾಂ ದದೌ ಸುತಾಂ ।
ದಶರಥೋಽಪಿ ಸ್ವಪುರೀಮಾನಯಾಮಾಸ ತಂ ಮುನಿಂ ॥ ೧೦೧ ॥

ಸ ತು ರಾಜ್ಞೋಽನಪತ್ಯಸ್ಯ ನಿರೂಪ್ಯೇಷ್ಟಿಂ ಮರುತ್ವತಃ ।
ಪ್ರತ್ಯಕ್ಷಂ ಹಿ ಚಕಾರಾಗ್ನಿಂ ಯಜ್ಞಕುಂಡಾತ್ಸಪಾಯಸಂ ॥ ೧೦೨ ॥

---

೯೯. ಕೊನೆಗೆ ಮಂತ್ರಿಗಳಿಂದಲೂ ಸೂಳೆಯರಿಂದಲೂ ಋಷ್ಯಶೃಂಗನನ್ನು ಮೋಹಪಡಿಸಿ ಅವರಿಂದ ಅವನನ್ನು ಕರೆತರಿಸಿದನು.

೧೦೦. ನಾಟ್ಯ, ವಾದ್ಯ, ಸಂಗೀತವೇ ಮುಂತಾದುವುಗಳನ್ನು ಮಾಡುತ್ತ ಮೋಹಿಸಿ ಕರೆತಂದರು. ಅವನು ದೇಶಕ್ಕೆ ಬಂದೊಡನೆಯೇ ಅವನ ಪ್ರಭಾವದಿಂದ ಮಳೆಯಾಯಿತು. ಮಕ್ಕಳಿಲ್ಲದಿದ್ದ ಆ ರೋಮಪಾದನಿಗೆ ಮಕ್ಕಳೂ ಆದುವು.

೧೦೧. ಆಗ ರೋಮಪಾದನಿಗೆ ಸಂತೋಷವಾಗಲು ಋಷ್ಯಶೃಂಗನಿಗೆ ತಾನು ದತ್ತು ತೆಗೆದುಕೊಂಡಿದ್ದ ಆ ಶಾಂತೆಯನ್ನು ಮದುವೆ ಮಾಡಿಕೊಟ್ಟನು. ಇದನ್ನು ತಿಳಿದಿದ್ದ ದಶರಥನು ಆ ಋಷಿಯನ್ನು ತನ್ನ ಊರಿಗೆ ಕರೆತಂದನು.

೧೦೨. ಆ ಋಷ್ಯಶೃಂಗನು ರಾಜನಿಗೆ ಮಕ್ಕಳಿಲ್ಲದಿರುವುದನ್ನು ತಿಳಿದು ಪುತ್ರಕಾಮೇಷ್ಟಿ ಯಾಗವನ್ನು ರಾಜನಿಂದ ಮಾಡಿಸಿ ಯಜ್ಞಪುರುಷನನ್ನು ಪ್ರತ್ಯಕ್ಷನನ್ನಾಗಿ ಮಾಡಿಕೊಳ್ಳಲು ಆ ಯಜ್ಞಪುರುಷನು ಯಜ್ಞಕುಂಡದಿಂದ ಪಾಯಸವನ್ನು ತೆಗೆದುಕೊಂಡು ಬಂದನು.

ಅವಿಭೂರ್ಯತ್ವಾ ಸ್ವಯಂ ವಹ್ನಿರ್ದದೌ ರಾಜ್ಞೇ ಸುಪಾಯಸಂ |
ರಾಜ್ಞಾ ವಿಭಕ್ತಂ ಸ್ತ್ರೀಭ್ಯಸ್ತತ್ಕೈಕೇಯ್ಯಾ ದುಷ್ಟಭಾವತಃ ॥ ೧೦೩ ॥

ಅಹರತ್ಪಾಯಸಂ ಹಸ್ತಾದ್ಗೃಧ್ರೀ ಶಾಪವಿಮೋಚಕಂ |
ಸುವರ್ಚಲಾಪ್ಸರೋಮುಖ್ಯಾ ನೃತ್ಯಭಂಗಾತ್ಸ್ವಯಂಭುವಾ ॥ ೧೦೪ ॥

ಶಪ್ತಾ ಜಾತಾ ತು ಸಾ ಗೃಧ್ರೀ ತಯಾ ವೇಧಾಸ್ಸುತೋಷಿತಃ |
ತಸ್ಯೈ ತುಷ್ಟೋ ವಿಧಿಃ ಪ್ರಾಹ ಕೈಕೇಯೀ ಪಾಯಸಂ ಯದಾ ॥ ೧೦೫ ॥

ಪ್ರಕ್ಷೇಪ್ಸ್ಯಸ್ಯಂಜನಗಿರೌ ತದಾ ತೇ ಭವಿತಾ ಗತಿಃ |
ಅಪ್ಸರಾ ತ್ವಂ ಪೂರ್ವವಚ್ಚ ಭವಿಷ್ಯಸಿ ನ ಸಂಶಯಃ ॥ ೧೦೬ ॥

---

೧೦೩. ಹಾಗೆ ತಾನಾಗಿಯೇ ಪಾಯಸವನ್ನು ಯಜ್ಞಪುರುಷನು ತಂದು ಆ ರಾಜನಿಗೆ ಕೊಟ್ಟನು. ರಾಜನು ತನ್ನ ಕೌಸಲ್ಯೆ, ಸುಮಿತ್ರೆ, ಕೈಕೆಯಿಯರಿಗೆ ಆ ಪಾಯಸವನ್ನು ಭಾಗಮಾಡಿ ಕೊಟ್ಟನು.

೧೦೪. ಅವರಲ್ಲಿ ಕೈಕೆಯಿಯು ಆ ಪಾಯಸವನ್ನು ಸರಿಯಾಗಿ ಕಾಪಾಡಿ ಕೊಳ್ಳದ್ದರಿಂದ ಒಂದು ಹೆಣ್ಣುಹದ್ದು "ಇದು ತನ್ನ ಶಾಪವಿಮೋಚಕವಾದುದೆಂದು ತಿಳಿದು" ಅಜಾಗರೂಕಳಾದ ಆಕೆಯ ಕೈಯ್ಯಿಂದ ಆ ಪಾಯಸವನ್ನು ಕದ್ದು ಕೊಂಡು ಹೋಯಿತು.

೧೦೫. ಸುವರ್ಚಲಳೆಂಬ ಒಬ್ಬಳು ಅಪ್ಸರ ಸ್ತ್ರೀಯು ತಾನು ಕುಣಿಯು ವುದರಲ್ಲಿ ತಪ್ಪಿದ್ದರಿಂದ ಬ್ರಹ್ಮನು ಅವಳಿಗೆ ಹದ್ದಾಗೆಂದು ಶಾಪವನ್ನು ಕೊಟ್ಟನು. ಅನಂತರ ಆಕೆಯು ಕೇಳಿಕೊಳ್ಳಲು ಪ್ರಸನ್ನನಾದನು.

೧೦೬. ಎಲೈ ಅಪ್ಸರೆಯೇ! ಕೈಕೆಯಿಯ ಪಾಯಸವನ್ನು ನೀನು ಅಂಜನಪರ್ವತದಲ್ಲಿ ಎಸೆದಾಗ ನಿನಗೆ ಈ ಹದ್ದಿನ ದೇಹದಿಂದ ಬಿಡುಗಡೆಯಾಗಿ ಮೊದಲಿನಂತೆಯೇ ಆಗುತ್ತೀಯೆ. ಇದರಲ್ಲಿ ಸಂಶಯವಿಲ್ಲ. ಎಂದು ಹೇಳಿದ್ದನು.

ತಸ್ಮಾತ್ಸಾ ಪಾಯಸಂ ನೀತ್ವಾಽಕ್ಷಿಪದಂಜನಪರ್ವತೇ ।
ನಿಜಂ ಸ್ವರೂಪಂ ಸಾ ಲಬ್ಧ್ವಾ ಜಗಾಮ ಸುರಮಂದಿರಂ ॥ ೧೦೭ ॥

ತತಸ್ತಾಭ್ಯಾಂ ತು ಕೈಕೇಯ್ಯೈ ದತ್ತಂ ಕಿಂಚಿತ್ತು ಪಾಯಸಂ ।
ಅಥ ತಾ ಭಕ್ಷಯಾಮಾಸುರಂತಗರ್ಭಾಸ್ತದಾಭವನ್ ॥ ೧೦೮ ॥

ಆಸಂಸ್ತಾಸಾಂ ದೋಹದಾಸ್ತೇ ಪುತ್ರಾಣಾಂ ಭಾವಿಕರ್ಮಭಿಃ ।
ಪುತ್ರಾಣಾಂ ಭಾವಿಕರ್ಮಾಣಿ ವಿದುಸ್ತೇ ದೋಹದೈರ್ಜನಾಃ ॥ ೧೦೯ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ
ರಾಮಾಯಣೇ ವಾಲ್ಮೀಕೀಯೇ ಸಾರಕಾಂಡೇ
ಪ್ರಥಮಸ್ಸರ್ಗಸ್ಸಮಾಪ್ತಃ

---

೧೦೭. ಆದುದರಿಂದ ಆ ಹದ್ದು ಈ ಕೈಕೇಯಿಯ ಪಾಯಸವನ್ನು ತೆಗೆದುಕೊಂಡು ಹೋಗಿ ಅಂಜನಪರ್ವತದಲ್ಲಿ ಹಾಕಿತು. ಒಡನೆಯೇ ಶಾಪದಿಂದ ನಿವೃತ್ತಿಯಾಗಿ ಅಪ್ಸರದೇಹವು ಬಂದು ತನ್ನ ಮನೆಗೆ ಹೊರಟುಹೋದಳು.

೧೦೮. ಈ ಹದ್ದು ಕೈಕೇಯಿಯ ಪಾಯಸವನ್ನು ಕದ್ದುಕೊಂಡು ಹೋಗಲು ಇದನ್ನು ನೋಡಿ ಕೌಸಲ್ಯೆ, ಸುಮಿತ್ರೆಯರು, ತಮ್ಮ ತಮ್ಮ ಪಾಯಸದಲ್ಲಿ ಅವಳಿಗೆ ಅರ್ಧ ಅರ್ಧವನ್ನು ಕೊಟ್ಟರು. ಅದನ್ನು ಅವರೆಲ್ಲರೂ ಕುಡಿಯಲು ಎಲ್ಲರೂ ಗರ್ಭಿಣಿಯರಾದರು.

೧೦೯. ಗರ್ಭಿಣಿಯರಾದ ಅವರಿಗೆ ಅವರವರ ಹೊಟ್ಟೆಯಲ್ಲಿರುವ ಮಕ್ಕಳ ಮುಂದಿನ ಕರ್ಮಕ್ಕೆ ಅನುಸಾರವಾಗಿ ಬಯಕೆಗಳಾಗುತ್ತಾ ಬಂದುವು. ಈ ಬಯಕೆಗಳಿಂದ ತಮ್ಮ ತಮ್ಮ ಮಕ್ಕಳ ಮುಂದಿನ ಗತಿಯು ಹೇಗಿರುವುದೆಂಬುದನ್ನು ಅವರು ತಿಳಿದುಕೊಂಡರು.

ಇಂತು ಶ್ರೀ ಶತಕೋಟಿ ರಾಮಾಯಣಾಂತರ್ಗತವಾದ ವಾಲ್ಮೀಕಿ
ವಿರಚಿತವಾದ ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ
ಮೊದಲನೆಯ ಸರ್ಗವು ಮುಗಿದುದು.

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ
॥ ಪ್ರಥಮಸರ್ಗದ ಸಾರಾಂಶವು ॥

ಶ್ರೀಮದ್ವಾಲ್ಮೀಕಿ ಕವಿಯು ಶ್ರೀರಾಮನವಾಯತನರೀತಿಯಲ್ಲಿ ಮಂಗಳಾಚರಣೆಯನ್ನು ಮಾಡಿ ತಾನು ರಚಿಸುವ ಗ್ರಂಥದಲ್ಲಿ ಸೇರಿಸಿರುವ ವಿಷಯಗಳನ್ನು ಸಂಕ್ಷೇಪಿಸಿರುವನು. ಪಾರ್ವತಿ ದೇವಿಯು ಕೈಲಾಸಪರ್ವತದಲ್ಲಿ ಸುಖವಾಗಿ ಕುಳಿತಿರುವ ಶಿವನನ್ನು ಕುರಿತು ರಾಮನ ವಿಷಯವನ್ನು ಪ್ರಶ್ನಿಸಲು ಅತನು ವಿವರಿಸುವನು. ಮೊದಲು ಆದಿನಾರಾಯಣನಿಂದ ಮೊದಲುಮಾಡಿಕೊಂಡು ಶ್ರೀರಾಮನನ್ನು ಸೇರಿಸಿಕೊಂಡು ಅರವತ್ತೊಂದು ಜನರನ್ನು ತಂದೆಮಕ್ಕಳ ಕ್ರಮದಿಂದ ಹೇಳಿರುವನು. ಅನಂತರ ಶ್ರೀರಾಮನ ತಂದೆಯಾದ ದಶರಥನ ವಿಷಯವನ್ನು ವಿಸ್ತಾರಗೊಳಿಸಿರುವನು. ದಶರಥನು ಅಜನ ಮಗನು. ಅವನು ಜಂಬೂದ್ವೀಪಕ್ಕೆಲ್ಲ ಒಡೆಯನು. ಅಯೋಧ್ಯೆಯೇ ಅವನ ರಾಜಧಾನಿಯು. ಕೋಸಲದೇಶದ ರಾಜನು ತನ್ನ ಮಗಳಾದ ಕೌಸಲ್ಯೆಯನ್ನು ದಶರಥನಿಗೆ ಕೊಡಲು ನಿಶ್ಚಯಿಸಿ ಅಯೋಧ್ಯೆಗೆ ದೂತರನ್ನು ಕಳುಹಿಸಿದನು. ಆಗ ದಶರಥನು ಸರಯೂನದಿಯ ನೀರಿನಲ್ಲಿ ರಾತ್ರಿಯಲ್ಲಿ ದೋಣಿಯಲ್ಲಿ ಮಂತ್ರಿಗಳೊಡನೆ ಕುಳಿತು ಜಲವಿಹಾರಮಾಡುತ್ತಿರುವನು.

ಇದೇ ಕಾಲದಲ್ಲಿ ಇತ್ತ ಲಂಕೆಯಲ್ಲಿ ರಾವಣನು ಒಡ್ಡೋಲಗದಲ್ಲಿದ್ದು ಕೊಂಡು ಸಭೆಯಲ್ಲಿರುವ ಬ್ರಹ್ಮದೇವನನ್ನು ಕುರಿತು ಎಲೈ ದೇವನೆ! ನನಗೆ ಮರಣವು ಯಾರಿಂದ ಸಂಭವಿಸುತ್ತದೆ ಎಂದೆನಲು ಕೌಸಲ್ಯೆ ದಶರಥರಲ್ಲಿ ಜನಾರ್ದನನು ನಾಲ್ಕು ಭಾಗವಾಗಿ ಜನಿಸುವನು. ಅದರಲ್ಲಿ ರಾಮನ ರೂಪದಿಂದ ನಿನ್ನನ್ನು ಸಂಹರಿಸುವನು. ಆ ದಶರಥಕೌಸಲ್ಯೆಯರಿಗೆ ಇಂದಿಗೆ ಐದನೆಯ ದಿವಸವೇ ವಿವಾಹವು ನಿಶ್ಚಿತವಾಗಿರುವುದು. ಎಂದನು.

ರಾವಣನು ಬ್ರಹ್ಮದೇವನ ಈ ಮಾತನ್ನು ಕೇಳಿ ಪುಷ್ಪಕದಲ್ಲಿ ಕುಳಿತು ಜಾಗ್ರತೆಯಾಗಿ ಅಯೋಧ್ಯೆಗೆ ಹೋಗಿ ಸರಯೂನದಿಯಲ್ಲಿ ದೋಣಿಯಲ್ಲಿ ಜಲಕ್ರೀಡೆಯಾಡುತ್ತಿದ್ದ ದಶರಥನೊಡನೆ ಯುದ್ಧಮಾಡಿ ಜಯಿಸಿ ಆ ದೋಣಿಯನ್ನು ಕಾಲಿನಿಂದ ಒದೆದು ಪುಡಿಪುಡಿಮಾಡಿ ಅದರಲ್ಲಿರುವವರು ನೀರಿನಲ್ಲಿ ಬಿದ್ದು ಸಾಯುವಂತೆ ಮಾಡಿದನು. ಅವರಲ್ಲಿ ದಶರಥನೂ ಮಂತ್ರಿಯಾದ ಸುಮಂತ್ರನೂ ಒಂದು

ಮರದ ತುಂಡನ್ನು ಹಿಡಿದುಕೊಂಡು ತೇಲುತ್ತ ಆ ಪ್ರವಾಹದ ಭರದಿಂದ ಗಂಗಾ ನದಿಗೆ ಸೇರಿ ಅಲ್ಲಿಂದ ಸಮುದ್ರಕ್ಕೆ ಒಯ್ಯಲ್ಪಟ್ಟು ತೇಲುತ್ತಿದ್ದರು.

ರಾವಣನು ಆಗಲೇ ಕೋಸಲೆಗೆ ಹೋಗಿ ಆ ರಾಜನೊಡನೆ ಯುದ್ಧವನ್ನು ಮಾಡಿ ಜಯಿಸಿ ಅವನ ಮಗಳಾದ ಕೌಸಲ್ಯೆಯನ್ನು ಅಪಹರಿಸಿಕೊಂಡು ಬರುತ್ತ ಈಕೆಯನ್ನು ಲಂಕೆಯಲ್ಲಿಟ್ಟರೆ ನನ್ನ ಶತ್ರುಗಳಾದ ದೇವತೆಗಳು ಈಕೆಯನ್ನು ಅಪಹರಿಸಿಯಾರು? ಎಂದು ಯೋಚಿಸಿ ಸಮುದ್ರದಲ್ಲಿ ಸಂಚರಿಸುತ್ತಿರುವ ತಿಮಿಂಗಿಲದ ಕೈಯ್ಯಲ್ಲಿ ಆಕೆಯನ್ನು ಪೆಟ್ಟಿಗೆಯಲ್ಲಿಟ್ಟು ಆ ಪೆಟ್ಟಿಗೆಯನ್ನು ಇಟ್ಟು ಕೊಂಡಿರುವಂತೆ ಕೊಟ್ಟು ತಾನು ಸಂತೋಷದಿಂದ ಲಂಕೆಗೆ ಹೊರಟುಹೋದನು.

ಇತ್ತ ತಿಮಿಂಗಿಲವು ಆ ಪೆಟ್ಟಿಗೆಯನ್ನು ದವಡೆಯಲ್ಲಿಟ್ಟುಕೊಂಡು ಸಂಚರಿಸು ತ್ತಿರಲು ಒಂದು ದಿನ ತನ್ನ ಎದುರಿಗೆ ಶತ್ರುಭೂತವಾದ ಮತ್ತೊಂದು ಮೀನು ಬರುತ್ತಿರುವುದನ್ನು ನೋಡಿ ಅದರೊಡನೆ ಯುದ್ಧಮಾಡಲು ಉದ್ದೇಶಿಸಿ ಆ ಪೆಟ್ಟಿಗೆ ಯನ್ನು ಹತ್ತಿರದಲ್ಲಿಯೇ ಇದ್ದ ಅಲ್ಲೊಂದು ದ್ವೀಪದ ಮೇಲೆ ಇಟ್ಟಿತು.

ಇಷ್ಟರವೇಳೆಗೆ ದಶರಥಸುಮಂತ್ರರು ತೇಲುತ್ತಿದ್ದ ಆ ಮರದ ತುಂಡೂ ಕೂಡ ಆ ದ್ವೀಪದ ಹತ್ತಿರಕ್ಕೆ ಬರಲು ಅವರು ಈ ಮರದ ತುಂಡನ್ನು ಬಿಟ್ಟು ಆ ದ್ವೀಪಕ್ಕೆ ಹೋದರು. ಅಲ್ಲಿದ್ದ ಪೆಟ್ಟಿಗೆಯನ್ನು ತೆರೆದು ನೋಡಲು ಅದರಲ್ಲಿ ಈ ಕೌಸಲ್ಯೆಯು ಕುಳಿತಿದ್ದಳು. ಅನಂತರ ಒಬ್ಬರಿಗೊಬ್ಬರು ವಿಷಯ ಗಳನ್ನು ವಿಚಾರಿಸಿ ತಿಳಿದುಕೊಂಡರು. ಆಗಲೇ ದಶರಥನು ಅಲ್ಲಿಯೇ ಆಕೆಯನ್ನು ಗಾಂಧರ್ವವಿವಾಹದಿಂದ ಮದುವೆಯಾದನು. ಅನಂತರ ಆ ಪೆಟ್ಟಿಗೆಯಲ್ಲಿಯೇ ಆ ಮೂವರೂ ಕುಳಿತು ಬಾಗಿಲನ್ನು ಮುಚ್ಚಿಕೊಂಡುಬಿಟ್ಟರು. ವೈರಿಯೊಡನೆ ಯುದ್ಧವನ್ನು ಮುಗಿಸಿಕೊಂಡು ಬಂದ ಆ ತಿಮಿಂಗಿಲವು ಆ ಪೆಟ್ಟಿಗೆಯನ್ನು ಮತ್ತೆ ತೆಗೆದುಕೊಂಡು ತನ್ನ ದವಡೆಯಲ್ಲಿ ಎಂದಿನಂತೆ ಇಟ್ಟುಕೊಂಡಿತು.

ಇತ್ತ ಲಂಕೆಯಲ್ಲಿ ರಾವಣನು ಬ್ರಹ್ಮದೇವನನ್ನು ಕುರಿತು ಸಭೆಯಲ್ಲಿ ನಗುತ್ತ ಎಲೈ ಬ್ರಹ್ಮನೇ! ರಾವಣನಾದ ನಾನು ನಿನ್ನ ಮಾತನ್ನು ಸುಳ್ಳನ್ನಾಗಿ ಮಾಡಿದೆನು. ದಶರಥನನ್ನು ನೀರಿಗೆ ಕೆಡಗಿ ಕೊಂದೆನು. ಕೌಸಲ್ಯೆಯನ್ನು ಯಾರಿಗೂ ಸಿಕ್ಕದಂತೆ ಗುಟ್ಟಾಗಿಟ್ಟದ್ದೇನೆ ಎಂದನು.

ಅಂದಿನ ದಿನವೇ ಅವರಿಗೆ ಮದುವೆಗೆ ಗೊತ್ತುಮಾಡಿದ ದಿನವಾಗಿದ್ದಿತು. ರಾವಣನ ಈ ಮಾತನ್ನು ಕೇಳಿ ಬ್ರಹ್ಮನು ಗಟ್ಟಿಯಾಗಿ "ಓಂ ಪುಣ್ಯಾಹಂ"

ಈ ದಿನವೇ ಸುದಿನವೆಂದನು. ಈ ಪುಣ್ಯಾಹವೆಂಬ ಶಬ್ದವನ್ನು ಕೇಳಿದೊಡನೆಯೇ ಏಕೆ ಹೀಗೆ ಹೇಳುತ್ತಿದ್ದೀಯೆ? ಎಂದೆನಲು ಬ್ರಹ್ಮನು ದಶರಥ ಕೌಸಲ್ಯೆಯರಿಗೆ ಮದುವೆಯಾಯಿತು. ಎಂದನು.

ಆಗ ಬ್ರಹ್ಮನ ಮಾತು ಸುಳ್ಳು ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸಲು ದೂತರನ್ನು ಕರೆದು ಆ ತಿಮಿಂಗಿಲದಿಂದ ಪೆಟ್ಟಿಗೆಯನ್ನು ತರುವಂತೆ ಹೇಳಿಕಳುಹಿಸಿದನು. ಅಂತೆಯೇ ಅವರು ಹೋಗಿ ತರಲು ಬ್ರಹ್ಮನ ಎದುರಿಗೇನೇ ಆ ಪೆಟ್ಟಿಗೆಯ ಬಾಗಿಲನ್ನು ತೆರೆದನು. ಅದರಲ್ಲಿ ಈ ಮೂವರೂ ಇರುವುದನ್ನು ನೋಡಿದನು. ಆಗ ಈತನಿಗೆ ಬಹು ಆಶ್ಚರ್ಯವುಂಟಾಯಿತು. ಅಲ್ಲದೆ ಕೋಪವೂ ಬಂದಿತು. ಅವರನ್ನು ಕೊಲ್ಲಲು ಕತ್ತಿಯನ್ನು ಹಿರಿದನು. ಒಡನೆಯೇ ಬ್ರಹ್ಮನು ಆತುರದಿಂದ ಎಲೈ ರಾವಣನೇ! ಸಾಹಸಕಾರ್ಯಕ್ಕೆ ಕೈಹಾಕಬೇಡ. ನೀನು ಪೆಟ್ಟಿಗೆಯಲ್ಲಿ ಒಬ್ಬಳನ್ನು ಇರಿಸಿದ್ದೆ. ಈಗ ನೋಡಲು ಅಲ್ಲಿ ಮೂವರು ಇರುವರು. ನೀನು ಅವರನ್ನು ಕೊಂದರೆ ಅವರಲ್ಲಿ ಕೋಟಿ ಜನರು ಹುಟ್ಟಿಯಾರು? ರಾಮನು ಈಗಲೇ ಹುಟ್ಟಿ ನಿನ್ನ ವಧೆಯಾದೀತು? ನಿನಗಾದರೋ ಇನ್ನೂ ಆಯುಸ್ಸು ಇರುವುದು. ಮುಂದೆ ಏನಾಗುವುದೋ ಅದು ಆಗಲಿ. ಅದನ್ನು ತಪ್ಪಿಸಲು ಸಾಧ್ಯವಿಲ್ಲ. ಕರ್ಮಗತಿಯೆಂಬುದು ಬಹು ಗಹನವಾದುದು. ದೂತರನ್ನು ಜೊತೆ ಮಾಡಿ ಇವರನ್ನು ಅಯೋಧ್ಯಗೆ ಕಳುಹಿಸಿಬಿಡು. ನನ್ನ ಮಾತು ಖಂಡಿತವಾಗಿಯೂ ಸುಳ್ಳಾಗುವುದೇ ಇಲ್ಲ. ಎಂದನು.

ರಾವಣನು ಬ್ರಹ್ಮನ ಈ ಮಾತನ್ನು ಕೇಳಿ ದೂತರ ಕೈಯ್ಯಲ್ಲಿ ಆ ಪೆಟ್ಟಿಗೆಯನ್ನು ಕೊಟ್ಟು ಕಳುಹಿಸಿ ಅಯೋಧ್ಯೆಯಲ್ಲಿ ಇಡಿಸಿದನು. ರಾಜನನ್ನು ಅಯೋಧ್ಯೆಯ ಜನರು ನೋಡಿ ಸಂತೋಷಗೊಂಡರು. ಮತ್ತು ಕ್ರಮವಾಗಿ ಅವರಿಬ್ಬರಿಗೂ ಮದುವೆಯಾಯಿತು.

ಅನಂತರ ಈ ದಶರಥನು ಸುಮಿತ್ರೆಯೆಂಬುವಳನ್ನು ಕೈಕೇಯಿ ಎಂಬುವಳನ್ನೂ ಮದುವೆಯಾದನು. ಈ ಮೂವರು ಹೆಂಡಿರಲ್ಲದೆ ದಶರಥನು ಏಳುನೂರು ಜನ ಕನ್ನಿಕೆಯರನ್ನು ವಿವಾಹವಾದನು.

ಅನಂತರ ದಶರಥನು ದಾನವನ್ನು ಮಾಡುತ್ತಲೂ ಭೋಗಗಳನ್ನು ಅನುಭವಿಸುತ್ತಲೂ ಧರ್ಮದಿಂದ ರಾಜ್ಯಪರಿಪಾಲನೆಮಾಡುತ್ತಿದ್ದನು. ಕೌಸಲ್ಯೆ ಸುಮಿತ್ರೆ ಕೈಕೇಯಿಯರೂ ಯೌವನ, ಕುಲಗಳಿಂದ ಮುಖ್ಯರಾಗಿ ಈ ರಾಜನಿಗೆ ಪ್ರಿಯೆಯರಾಗಿಯೂ, ಮುಖ್ಯರಾಗಿಯೂ ಆದರು. ಆದರೆ ಈತನಿಗೆ ಯಾರಲ್ಲಿಯೂ ಮಕ್ಕಳೇ ಆಗಲಿಲ್ಲ.

ಈ ದಶರಥನು ರಾಜ್ಯವಾಳುತ್ತಿರಲು ದೇವತೆಗಳಿಗೂ ದಾನವರಿಗೂ ಯುದ್ಧಕ್ಕೆ ಉಪಕ್ರಮವಾಯಿತು. ಆಗ ಅಯೋಧ್ಯಾಧಿಪತಿಯು ಸೇರುವ ಕಡೆಗೆ ಜಯವಾಗುವುದೆಂದು ಆಕಾಶವಾಣಿಯಾಯಿತು. ಆದರಿಂದ ದೇವತೆಗಳು ಈತನನ್ನು ಪ್ರಾರ್ಥಿಸಲು ದೇವತೆಗಳ ಪರವಾಗಿ ಯುದ್ಧಕ್ಕೆ ಹೊರಟನು. ಜೊತೆಯಲ್ಲಿ ಕೈಕೇಯಿಯೂ ಹೋದಳು. ದಶರಥನು ಯುದ್ಧಮಾಡುತ್ತಿದ್ದಾಗ ರಥದ ದೂರಿಯು ಮುರಿದುಹೋಯಿತು. ಅದು ದಶರಥನಿಗೆ ತಿಳಿಯಲೇ ಇಲ್ಲ.

ಕೈಕೇಯಿಯು ತನ್ನ ಬಾಲ್ಯದಲ್ಲಿ ಹುಡುಗಾಟಕ್ಕೋಸ್ಕರ ಒಬ್ಬ ಮುನಿಯ ಮುಖಕ್ಕೆ ಮಸಿಯನ್ನು ಪೂಸಿದುದರ ಫಲವಾಗಿ ಶಾಪಗ್ರಸ್ತಳಾದುದಲ್ಲದೆ ಪುನಃ ಆ ಮುನಿಗೇ ಶರಣಾಗತಳಾಗಿ ಆ ಮುನಿಯಿಂದಲೇ ತನ್ನ ಕೈ ವಜ್ರದಂತೆ ಕಠಿಣವಾಗಿರುವಂತೆ ವರವನ್ನೂ ಪಡೆದಿದ್ದಳು. ಈ ವರವನ್ನು ಜ್ಞಾಪಿಸಿಕೊಂಡ ಕೈಕೇಯಿಯು ತನ್ನ ಕೈಯ್ಯನ್ನೇ ದೂರಿಯಂತೆ ಕೊಟ್ಟು ಚಕ್ರವು ಬೀಳದಂತೆ ಹಿಡಿದಳು. ಯುದ್ಧವೆಲ್ಲವೂ ಮುಗಿದಮೇಲೆ ದಶರಥನು ಕೈಕೇಯಿಯ ಕೆಲಸವನ್ನು ನೋಡಿ ಅತ್ಯಂತ ಸಂತೋಷಗೊಂಡು ಆಕೆಗೆ ಎರಡು ವರಗಳನ್ನು ಕೊಟ್ಟನು. ಅವನ್ನು ಆಕೆಯು ತನಗೆ ಬೇಕಾದಾಗ ತೆಗೆದುಕೊಳ್ಳುತ್ತೇನೆಂದು ಹೇಳಿದಳು.

ಒಂದುಸಾರಿ ದಶರಥನು ರಾತ್ರಿಯ ಹೊತ್ತಿನಲ್ಲಿ ಕಾಡಿಗೆ ಹೋಗಿ ಬೇಟೆಯನ್ನಾಡುತ್ತಾ ನೀರಿರುವ ಜಾಗದಲ್ಲಿ ನೀರಿಗೆ ಬರುವ ಪ್ರಾಣಿಗಳನ್ನು ಹೊಡೆಯಲು ಮರೆಯಾಗಿ ನಿಂತನು. ಆಗ ಕುರುಡರಾದ ತಾಯಿತಂದೆಗಳನ್ನು ಕಾಗಡಿಯಲ್ಲಿ ಕೂರಿಸಿಕೊಂಡು ಒಬ್ಬ ಶ್ರವಣನು ಹಗಲಿನ ಬಿಸಿಲಿನ ತಾಪಕ್ಕೆ ರಾತ್ರಿಯ ಹೊತ್ತು ಪ್ರಯಾಣಮಾಡುತ್ತ ಕಾಶಿಗೆ ಯಾತ್ರೆಗೋಸ್ಕರ ಹೊರಟು ಆ ರಾತ್ರಿಯಲ್ಲಿ ಆ ದಶರಥನಿದ್ದ ನೀರಿನ ಸಮೀಪದ ದಾರಿಯಲ್ಲಿ ಹೋಗುತ್ತಿದ್ದನು. ಆ ತಾಯಿತಂದೆಗಳು ಬಾಯಾರಿ ನೀರನ್ನು ಕೇಳಲು ಆ ಶ್ರವಣನು ಕಾಗಡಿಯನ್ನು ಅಲ್ಲಿಟ್ಟು ಹೂಜಿಯನ್ನು ತೆಗೆದುಕೊಂಡು ನೀರಿಗೆ ಹೋಗಿ ನೀರನ್ನು ತುಂಬುತ್ತಿರಲು ಅದು ಆನೆಯು ನೀರನ್ನು ಕುಡಿಯುವ ಶಬ್ದದಂತೆ ಶಬ್ದವಾಯಿತು. ಕಾಡಾನೆಯನ್ನು ಕೊಲ್ಲಕೂಡದೆಂಬ ವಿಷಯವು ದಶರಥನಿಗೆ ತಿಳಿದಿದ್ದರೂ ಆ ಸದ್ದನ್ನು ಕೇಳಿ ಆನೆಯೆಂದು ಭಾವಿಸಿ ಸದ್ದನ್ನು ಅನುಸರಿಸಿ ಗುರಿಯಿಟ್ಟು ಬಾಣವನ್ನು ಬಿಟ್ಟು ಹೊಡೆದನು. ಆ ಬಾಣವು ಶ್ರವಣನಿಗೆ ತಗುಲಿ ಅವನು ಅಯ್ಯೋ ಕೆಟ್ಟೆನೆಂದು ಬಿದ್ದುಬಿಟ್ಟನು. ಒಡನೆಯೇ ರಾಜನು ಅಲ್ಲಿಗೆ ಹೋಗಿ ಅವನನ್ನು ನೋಡಿ ಉಪಚರಿಸಿದನು. ಅವನ ಮರಣವನ್ನು ಅವನ ತಾಯಿತಂದೆಗಳಿಗೆ ತಿಳಿಸಿ ಅವರ ಒಪ್ಪಿಗೆಯಂತೆ ಚಿತೆಯನ್ನು ನಿರ್ಮಿಸಿದನು. ಆದರಲ್ಲಿ ತಾಯಿತಂದೆಗಳೂ ಮಗನೂ

ದಹಿಸಿಕೊಂಡರು. ಆಗ ಆ ಮುದುಕರು ದಶರಥನನ್ನು ಕುರಿತು ನೀನೂ ನಮ್ಮಂತೆ ಪುತ್ರಶೋಕದಿಂದ ಮರಣವನ್ನು ಹೊಂದು ಎಂದು ಶಪಿಸಿದರು.

ದಶರಥನು ಊರಿಗೆ ಹೋಗಿ ಗುರುವಿಗೆ ಈ ವಿಷಯವನ್ನು ತಿಳಿಸಲು ಗುರುವು ಅದರ ಶಾಂತಿಗೋಸ್ಕರ ಅಶ್ವಮೇಧಯಾಗವನ್ನು ಮಾಡುವಂತೆ ಹೇಳಿ ಮಾಡಿಸಿದನು. ಈ ದಶರಥನಿಗೆ ರೋಮಪಾದನೆಂಬುವನೊಬ್ಬ ಸ್ನೇಹಿತನಿದ್ದನು. ಅವನಿಗೆ ಶಾಂತೆಯೆಂಬ ತನ್ನ ಮಗಳನ್ನು ಸಾಕುಮಗಳನ್ನಾಗಿ ಕೊಟ್ಟಿದ್ದನು. ಒಂದುಸಾರಿ ಅವನ ರಾಜ್ಯದಲ್ಲಿ ಮಳೆಯಿಲ್ಲದೆ ಹೋಗಲು ವಿಭಂಡಕನ ಆಶ್ರಮಕ್ಕೆ ಮಂತ್ರಿಯನ್ನು ಕಳುಹಿಸಿ ಅವನ ಮಗನಾದ ಋಷ್ಯಶೃಂಗನನ್ನು ಕರೆಸಿದನು. ಅವನು ಬಂದೊಡನೆಯೇ ಮಳೆಯು ಬಂದು ಸಂತೋಷವಾಯಿತು. ಆ ರೋಮ ಪಾದನಿಗೆ ಮಕ್ಕಳೂ ಆದುವು ಆ ಸಂತೋಷದಿಂದ ಋಷ್ಯಶೃಂಗನಿಗೆ ಶಾಂತೆ ಯನ್ನು ಕೊಟ್ಟು ಮದುವೆಮಾಡಿದನು. ಇದನ್ನು ತಿಳಿದು ದಶರಥನೂ ಕೂಡ ಆ ಋಷ್ಯಶೃಂಗಋಷಿಯನ್ನು ಕರೆಸಿ ಪುತ್ರಕಾಮೇಷ್ಟಿಯನ್ನು ಮಾಡಿದನು. ಇದರಿಂದ ಪ್ರಸನ್ನನಾದ ಯಜ್ಞೇಶ್ವರನು ಪಾಯಸವನ್ನು ತಂದು ರಾಜನಿಗೆ ಕೊಟ್ಟನು. ಆ ರಾಜನು ಅದನ್ನು ಮೂರು ಪಾಲುಮಾಡಿ ಕೌಸಲ್ಯೆ, ಸುಮಿತ್ರೆ, ಕೈಕೇಯಿ ಯರಿಗೆ ಕೊಟ್ಟನು. ಸುವರ್ಚಲೆಯೆಂಬ ಒಬ್ಬ ಅಪ್ಸರ ಸ್ತ್ರೀಯು ಬ್ರಹ್ಮನ ಸಭೆ ಯಲ್ಲಿ ನರ್ತನ ಮಾಡುತ್ತಿದ್ದಾಗ ತಪ್ಪಿದಳು. ಇದರಿಂದ ಬ್ರಹ್ಮನಿಗೆ ಕೋಪ ಬಂದು ಹದ್ದಾಗಿ ಹುಟ್ಟುಯೆಂದು ಶಪಿಸಿದನು. ಆವಳು ಬಹು ವಿಧವಾಗಿ ಕೇಳಿ ಕೊಳ್ಳಲು ಆಗ ಬ್ರಹ್ಮನು ಕೈಕೇಯಿಯ ಪಾಯಸವನ್ನು ಅಂಜನಗಿರಿಯಲ್ಲಿ ನೀನು ಎಸೆದಾಗ ನಿನಗೆ ಹಿಂದಿನ ಗತಿಯು ಬರುವುದೆಂದು ಹೇಳಿದನು. ದಶರಥನು ಕೈಕೇಯಿಗೆ ಕೊಟ್ಟ ಆ ಪಾಯಸವನ್ನು ಸಮಯವನ್ನು ನಿರೀಕ್ಷಿಸುತ್ತಿದ್ದ ಆ ಹದ್ದು ಕದ್ದುಕೊಂಡು ಹೋಯಿತು.

ಕೈಕೇಯಿಯು ಪಾಯಸವನ್ನು ಕಳೆದುಕೊಂಡುದನ್ನು ನೋಡಿ ಆ ಕೌಸಲ್ಯೆಯೂ ಸುಮಿತ್ರೆಯೂ ತಮ್ಮ ತಮ್ಮ ಭಾಗದಿಂದ ಅರ್ಧರ್ಧವನ್ನು ತೆಗೆದು ಆಕೆಗೆ ಕೊಟ್ಟರು. ಅದನ್ನು ಅವರು ಸೇವಿಸಲು ಅವರಿಗೆ ಗರ್ಭವುಂಟಾಯಿತು. ಆಗ ಅವರವರ ಮಕ್ಕಳು ಮುಂದೆ ತಾವು ಮಾಡುವ ಕೆಲಸಕ್ಕೆ ಅನುಗುಣವಾಗಿ ಬಯಕೆಗಳಾಗುತ್ತ ಬಂದುವು. ಇದರಿಂದಲೇ ಜನಗಳಿಗೆ ಅವರಿಗೆ ಹುಟ್ಟುವ ಮಕ್ಕಳು ಹೇಗಿರುವರೆಂಬುದು ತಿಳಿಯಿತು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಸಾರಕಾಂಡೇ

॥ ದ್ವಿತೀಯಸ್ಸರ್ಗಃ ॥

ಏತಸ್ಮಿನ್ನಂತರೇ ಭೂಮಿರ್ದಶಾಸ್ಯಾದಿಪ್ರಪೀಡಿತಾ ।
ಬ್ರಹ್ಮಾಣಂ ಪ್ರಾರ್ಥಯಾಮಾಸ ವಿಷ್ಣುಂ ಸೋಽಪಿ ತದಾಬ್ರವೀತ್ ॥ ೧ ॥

ಭೂಮ್ಯಾಮವತರಿಷ್ಯಾಮಿ ಭವಂತು ಕಪಯಸ್ಸುರಾಃ ।
ಗಂಧರ್ವೀ ದುಂದುಭೀ ನಾಮ್ನೀ ಭೂಮ್ಯಾಃ ಕಾರ್ಯಾರ್ಥಸಿದ್ಧಯೇ ॥ ೨ ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ ಎರಡನೆಯ ಸರ್ಗವು

೧. ಶ್ರೀಶಿವನು ಹೇಳಿದನು–ಇಷ್ಟರೊಳಗೆ ಭೂಮಿಯು ದಶಾಸ್ಯನೇ ಮುಂತಾದ ರಾಕ್ಷಸರಿಂದ ತೊಂದರೆಗೊಂಡು ಬ್ರಹ್ಮನನ್ನು ಪ್ರಾರ್ಥಿಸಿಕೊಳ್ಳಲು ಬ್ರಹ್ಮನು ವಿಷ್ಣುವಿನ ಬಳಿಗೆ ಹೋಗಿ ಭೂಮಿಯು ಹೇಳಿದ ವಿಷಯವನ್ನು ಹೇಳಿದನು.

೨. ಆಗ ವಿಷ್ಣುವು ಎಲೈ ಬ್ರಹ್ಮನೆ! ನಾನು ಭೂಮಿಯಲ್ಲಿ ಅವತರಿಸುತ್ತೇನೆ ದೇವತೆಗಳು ಕಪಿಗಳಾಗಿ ಹುಟ್ಟಲಿ. ದುಂದುಭಿಯೆಂಬ ಗಂಧರ್ವಿಯು ಭೂಮಿಯಲ್ಲಿ ನಮ್ಮ ಕಾರ್ಯಸಿದ್ಧಿಗೋಸ್ಕರವಾಗಿ ಅವತರಿಸಲಿ.

ಮಂಥರಾಗ್ರೇ ಭವತ್ವದ್ಧಾ ರಾಜ್ಯವಿಘ್ನಾರ್ಥಸಿದ್ಧಯೇ ।
ಪಶ್ಚಾತ್ಪುನರ್ದ್ವಾಪರಾಂತೇ ಕುಬ್ಜಾತ್ವಂ ಕಂಸಮಂದಿರೇ ॥ ೩ ॥

ಅಥ ವಿಷ್ಣುಶ್ಚೈತ್ರಮಾಸೇ ನವಮ್ಯಾಂ ಮಧ್ಯಗೇ ರವೌ ।
ಸೂತಿಕಾಗೃಹಮಧ್ಯೇತ್ರ ಕೌಸಲ್ಯಾಯಾಃ ಪುರೋಭವತ್ ।
ಚತುರ್ಭುಜಃ ಪೀತವಾಸಾ ಮೇಘಶ್ಯಾಮೋ ಮಹಾದ್ಯುತಿಃ ॥ ೪ ॥

ಸಾಪಿ ದೃಷ್ಟ್ವಾ ಬಾಲಭಾವಂ ಪ್ರಾರ್ಥಯಾಮಾಸ ತಂ ಹರಿಂ ।
ತತೋ ಜಾತಸ್ತದಾ ಬಾಲಃ ಕ್ಷಣಾದ್ರತ್ನವಿಭೂಷಿತಃ ॥ ೫ ॥

ಹೇಮವರ್ಣಃ ಕಂಜನೇತ್ರಶ್ಚಂದ್ರಾಸ್ಯಸ್ತಪನಪ್ರಭಃ ।
ತತಸ್ಸುಮಿತ್ರಾಪುರತಶ್ಶೇಷೋ ಭೂದ್ಬಾಲರೂಪಧೃಕ್ ॥ ೬ ॥

---

೩. ಅವಳು ಮಂಥರೆಯೆಂಬ ಹೆಸರಿನಿಂದ ಪ್ರಸಿದ್ಧಳಾಗಿ ರಾಮನಿಗೆ ರಾಜ್ಯವು ಸಿಕ್ಕದಂತೆ ವಿಘ್ನವನ್ನುಂಟುಮಾಡಲಿ. ಅನಂತರ ದ್ವಾಪರಯುಗದ ಕೊನೆಯಲ್ಲಿ ಕಂಸನ ಮನೆಯಲ್ಲಿ ಕುಬ್ಜೆಯಾಗಿ ಹುಟ್ಟಲಿ. ಎಂದು ಹೇಳಿದನು

೪. ಅನಂತರ ವಿಷ್ಣುವು ಚೈತ್ರಮಾಸದ ಶುದ್ಧ ನವಮಿಯ ದಿನ ಮಧ್ಯಾಹ್ನದಲ್ಲಿ ಸೂತಿಕಾಗೃಹದ ಮಧ್ಯವನ್ನು ಹೊಂದಿ ಚತುರ್ಭುಜನೂ, ಹೊಂಬಣ್ಣದ ಬಟ್ಟೆಯುಳ್ಳವನೂ, ಮೇಘಶ್ಯಾಮನೂ, ಆಗಿ ಕೌಸಲ್ಯೆಗೆ ಕಾಣಿಸಿಕೊಂಡನು.

೫ ಆ ಕೌಸಲ್ಯೆಯು ಆ ಸ್ವಾಮಿಯು ಎದುರಿಗೆ ನಿಂತಿರುವುದನ್ನು ನೋಡಿ ನೀನು ಬಾಲಭಾವದಿಂದ ನನ್ನಲ್ಲಿರಬೇಕೆಂದು ಕೇಳಿಕೊಂಡಳು. ಒಡನೆಯೇ ಬಾಲನಾಗಿ ರತ್ನದಿಂದ ಅಲಂಕೃತನಾಗಿ ನಿಂತನು.

೬. ಚಿನ್ನದ ಬಣ್ಣಕ್ಕಿದ್ದನು. ಪದ್ಮದಂತೆ ಕಣ್ಣುಗಳಿದ್ದುವು. ಚಂದ್ರನಂತೆ ಮುಖವಿದ್ದಿತು. ಸೂರ್ಯನಂತೆ ಪ್ರಭೆಯಿದ್ದಿತು. ಇದೇ ರೀತಿಯಲ್ಲಿ ಸುಮಿತ್ರೆಯ ಮುಂದೆ ಆದಿಶೇಷನು ಬಾಲಕನ ರೂಪದಿಂದಿದ್ದನು.

ಆವಿರ್ಭೂತೌ ದ್ವೌ ಯಮಲೌ ಕೈಕೇಯ್ಯಾಶ್ಶಂಖಚಕ್ರಕೇ ।
ಏವಂ ತೇ ಜನಿತಾ ಬಾಲಾಶ್ಚತ್ವಾರಸ್ಸಮಯೇ ಶುಭೇ ॥ ೭ ॥

ದೇವದುಂದುಭಯೋ ನೇದುಃ ಪುಷ್ಪವೃಷ್ಟಿಶ್ಶ್ಯಭಾಪತತ್ ।
ಜಾತಕರ್ಮಾದಿ ಸಂಸ್ಕಾರಾನ್ ಗುರುಣಾ ನೃಪತಿಸ್ತದಾ ॥ ೮ ॥

ಕಾರಯಾಮಾಸ ವಿಧಿವನ್ನನೃತುರ್ವಾರಯೋಷಿತಃ ।
ಜ್ಯೇಷ್ಠಂ ರಾಮಂ ತು ಕೌಸಲ್ಯಾತನಯಂ ಪ್ರಾಹ ವೈ ಗುರುಃ ॥ ೯ ॥

ಸುಮಿತ್ರಾತನಯಂ ನಾಮ್ನಾ ಲಕ್ಷ್ಮಣಂ ಗುರುರಬ್ರವೀತ್ ।
ತತೋ ಭರತಶತ್ರುಘ್ನನಾಮನೀ ಪ್ರಾಹ ವೈ ಗುರುಃ ॥ ೧೦ ॥

ರಮಣಾದ್ರಾಮ ಏವಾಸೌ ಲಕ್ಷಣೈರ್ಲಕ್ಷ್ಮಣ ಸ್ತ್ವಿತಿ ।
ಭರಣಾದ್ಭರತಶ್ಚೇತಿ ಶತ್ರುಘ್ನಶ್ಶತ್ರುತರ್ಜನಾತ್ ॥ ೧೧ ॥

---

೭. ಶಂಖ ಚಕ್ರಗಳೆರಡೂ ಇಬ್ಬರು ಮಕ್ಕಳಾಗಿ ಕೈಕೇಯಿಗೆ ಮಕ್ಕಳಾಗಿ ನಿಂತುವು. ಈ ರೀತಿಯಾಗಿ ನಾಲ್ವರು ಮಕ್ಕಳು ಶುಭ ಸಮಯದಲ್ಲಿ ಹುಟ್ಟಿದರು.

೮. ಆ ಕಾಲದಲ್ಲಿ ಅಂತರಿಕ್ಷದಲ್ಲಿ ದೇವ ದುಂದುಭಿಗಳು ಮೊಳಗಿದುವು. ಪುಷ್ಪವೃಷ್ಟಿಯು ಅಂತರಿಕ್ಷದಿಂದ ಬಿದ್ದಿತು. ಆಗ ದಶರಥನು ಗುರುವಿನಿಂದ ಜಾತಕರ್ಮಾದಿ ಸಂಸ್ಕಾರಗಳನ್ನು ಅವರಿಗೆ ಮಾಡಿಸಿದನು.

೯. ಆಗ ಉತ್ಸವವು ಬಹುವಾಗಿ ನಡೆಯಿತು. ಸೂಳೆಯರು ನರ್ತನ ಮಾಡಿದರು. ಕೌಸಲ್ಯೆಯ ಮಗನಿಗೆ ಗುರುವು ರಾಮನೆಂದು ಹೆಸರಿಟ್ಟನು.

೧೦. ಸುಮಿತ್ರೆಯ ಮಗನನ್ನು ಲಕ್ಷ್ಮಣನೆಂದು ಕರೆದನು. ಉಳಿದವರಿಗೂ ಗುರುವು ಭರತ ಶತ್ರುಘ್ನರೆಂದು ಹೆಸರಿಟ್ಟನು.

೧೧. ಯೋಗಿಗಳು ಈ ಪರಮಾತ್ಮನಲ್ಲಿ ರಮಿಸುವುದರಿಂದ ಪರಮಾತ್ಮನ ಅವತಾರಭೂತನಿಗೆ ರಾಮನೆಂದೂ, ಲಕ್ಷಣಗಳಿಂದ ಕೂಡಿದವನಿಗೆ ಲಕ್ಷ್ಮಣ ನೆಂದೂ, ಭರಣ ಎಂದರೆ ಕಾಪಾಡುವುದರಿಂದ ಭರತನೆಂದೂ, ಶತ್ರುಗಳನ್ನು ಜಯಿಸುವುದರಿಂದ ಶತ್ರುಘ್ನನೆಂದೂ, ಅನ್ವರ್ಥವಾಗಿ ಅವರಿಗೆ ಹೆಸರಿಟ್ಟನು.

ಏವಂ ವವೃಧಿರೇ ಸರ್ವೇ ಲಕ್ಷ್ಮಣೋ ರಾಘವೇಣ ಹ ।
ಶತ್ರುಘ್ನೋ ಭರತೇನಾಪಿ ಚಕಾರ ಕ್ರೀಡನಾದಿಕಂ ॥ ೧೨ ॥

ರುಕ್ಮಕಂಕಣಮಂಜೀರೈರ್ನೂಪುರೈಸ್ತೇ ವಿಭೂಷಿತಾಃ ।
ಕೇಯೂರರಶನಾಹಾರಕುಂಡಲೈರಪಿ ಶೋಭಿತಾಃ ॥ ೧೩ ॥

ಅನೇಕರುಕ್ಮರತ್ನಾದಿನಿರ್ಮಿತೇಷು ವರೇಷು ಚ ।
ಮಂಚಕೇಷು ಕುಮಾರಾಸ್ತೇ ವಿರೇಜೂ ರುಕ್ಮಮಾಲಿನಃ ॥ ೧೪ ॥

ಘಾಲೇ ಸ್ವರ್ಣಮಯಾಶ್ವತ್ಥಪರ್ಣಾನ್ಯತಿಮಹಾಂತಿ ಚ ।
ಮುಕ್ತಾಫಲಾಗ್ರಲಂಬೀನಿ ಶೋಭಯಂತಿ ಸ್ಮ ಬಾಲಕಾನ್ ॥ ೧೫ ॥

ಕಂಠೇ ರತ್ನಮಣಿವ್ರಾತಮಧ್ಯದ್ವೀಪಿನಖಾಂಚಿತಾಃ ।
ಕರ್ಣಯೋಸ್ಸ್ವರ್ಣಸಂಪನ್ನರತ್ನಾರ್ಜುನಶಲಾಟುಕಾಃ ॥ ೧೬ ॥

---

೧೨. ಇವರು ಹೀಗೆಯೇ ಬೆಳೆಯುತ್ತಾ ಬಂದರು ಲಕ್ಷ್ಮಣನು ರಾಮನೊಡನೆಯೂ, ಶತ್ರುಘ್ನನು ಭರತನೊಡನೆಯೂ, ಆಟಪಾಟಗಳನ್ನಾಡುತ್ತ ಜೊತೆಯಾಗಿ ಕೂಡಿಕೊಂಡರು.

೧೩. ಚಿನ್ನದ ಬಳೆ, ಕಾಲು ಬಳೆ, ಕಾಲುಕಡಗ ಇವೆಲ್ಲವನ್ನೂ ಆ ಮಕ್ಕಳಿಗೆ ಹಾಕಿದ್ದರು. ಭುಜಕೀರ್ತಿ, ಉಡಿದಾರ, ಹಾರ, ಕಿವಿಯ ಆಭರಣ ಇವೆಲ್ಲವನ್ನೂ ಧರಿಸಿದ್ದರು.

೧೪. ಚಿನ್ನ ರತ್ನಗಳಿಂದ ಪ್ರಕಾಶಮಾನವಾದ ಉತ್ತಮವಾದ ಅನೇಕವಾದ ಮಂಚಗಳಮೇಲೆ ಆ ಮಕ್ಕಳು ಮಲಗಿರುತ್ತ ಪ್ರಕಾಶಿಸಿದರು.

೧೫. ಹಣೆಯಲ್ಲಿ ಚಿನ್ನದ ಅರಳಿ ಎಲೆಯೆಂಬ ಒಡವೆಯನ್ನು ಹಾಕಿದ್ದರು. ಅವು ಬಹು ಪ್ರಕಾಶಮಾನವಾಗಿದ್ದುವು. ಇವೆಲ್ಲವೂ ಆ ಬಾಲಕರನ್ನು ಅಲಂಕರಿಸುತ್ತಿದ್ದುವು.

೧೬. ಕತ್ತಿಗೆ ರತ್ನದ ಮಣಿಗಳನ್ನು ಹಾಕಿದ ಹಾರವನ್ನು ಹಾಕಿದ್ದರು. ಆ ಹಾರಗಳ ಮಧ್ಯದಲ್ಲಿ ರಕ್ಷಣಾರ್ಥವಾಗಿ ಹುಲಿಯ ಉಗುರುಗಳನ್ನು ಹಾಕಿ ಪೋಣಿಸಿದ್ದರು. ಕಿವಿಗಳಿಗೆ ಚಿನ್ನದ ಆಭರಣಗಳನ್ನು ಮಾಡಿಸಿ ಚಿನ್ನದ ಕಟ್ಟಡದಲ್ಲಿ ರತ್ನಗಳನ್ನೂ ಮುತ್ತಿಯ ಮಗ್ಗುಗಳನ್ನೂ ಹಾಕಿ ಕಟ್ಟಿದ್ದರು.

ಸಿಂಜಾನಮಣಿಮಂಜೀರಕಟಿಸೂತ್ರಾಂಗದೈರ್ಯುತಾಃ ।
ಸ್ಮಿತವಕ್ತ್ರಾಲ್ಪದಶನಾ ಇಂದ್ರನೀಲಮಣಿಪ್ರಭಾಃ ॥ ೧೭ ॥

ಅಂಗಣೇ ರಿಂಗಮಾಣಾಶ್ಚ ಸಂಸ್ಕಾರೈಸ್ಸಂಸ್ಕೃತಾ ಶ್ಶುಭಾಃ ।
ತೇ ತಾತಂ ರಂಜಯಾಮಾಸುರ್ಮಾತೄಂಶ್ಚಾಪಿ ವಿಶೇಷತಃ ॥ ೧೮ ॥

ಕೌಸಲ್ಯಾ ನೃಪತಿಶ್ಚಾಪಿ ನಾನಾವಸ್ತ್ರೈಸ್ಸುಭೂಷಣೈಃ ।
ಶೋಭಯಾಮಾಸತುರ್ಬಾಲಾನ್ನಾನಾವ್ಯಾಘ್ರನಖಾದಿಭಿಃ ॥ ೧೯ ॥

ರಾಮಸ್ಸ ಪಿತರಂ ದೃಷ್ಟ್ವಾ ಭೋಜನಸ್ಥಂ ತ್ವರಾನ್ವಿತಃ ।
ದುದ್ರಾವ ಕಬಳಂ ಪಾತ್ರಾದ್ಗೃಹೀತ್ವಾ ಸ ಪುನರ್ಬಹಿಃ ॥ ೨೦ ॥

---

೧೭. ನಡುವಿಗೆ ಉಡಿದಾರವನ್ನು ಮಾಡಿಸಿ ಅದಕ್ಕೆ ಕಿರುಗೆಜ್ಜೆಯನ್ನು ಸೇರಿಸಿ ಕಟ್ಟಿದ್ದರು. ಭುಜಕ್ಕೆ ಭುಜಕೀರ್ತಿಗಳನ್ನು ಹಾಕಿದ್ದರು. ಯಾವಾಗಲೂ ನಗುತ್ತಿದ್ಧರು. ಸ್ವಲ್ಪ ಸ್ವಲ್ಪ ಹಲ್ಲುಗಳೇ ಹುಟ್ಟಿದ್ದುವು. ಇಂದ್ರನೀಲಮಣಿ ಯಂತೆ ಕಾಂತಿಯನ್ನು ಹೊಂದಿದ್ದರು.

೧೮. ಅಂಗಳದಲ್ಲಿ ಈಜುತ್ತ ಅಂಬೆಗಾಲಿಡುತ್ತ ಆಟವಾಡುತ್ತ ತಂದೆಗೆ ಸಂತೋಷವನ್ನುಂಟುಮಾಡುತ್ತಿದ್ದರು. ತಾಯಿಯರಿಗಂತೂ ಬಹುವಾಗಿ ಸಂತೋಷಪಡಿಸುತ್ತಿದ್ದರು.

೧೯. ಕೌಸಲ್ಯೆಯೂ, ದಶರಥನೂ, ಅನೇಕ ಬಗೆಯಾದ ವಸ್ತ್ರಗಳಿಂದಲೂ, ಒಡವೆಗಳಿಂದಲೂ, ಅಲಂಕರಿಸಿ ಹುಲಿಯುಗುರು ಮುಂತಾದ ರಕ್ಷಣೆಯ ಪದಾರ್ಥಗಳನ್ನು ಹಾಕಿ ಅಲಂಕರಿಸುತ್ತಿದ್ದರು.

೨೦. ದಶರಥನು ಊಟಕ್ಕೆ ಕುಳಿತಿರಲು ರಾಮನು ಅಲ್ಲಿಗೆ ಓಡಿಹೋಗಿ ಅವನ ಭೋಜನ ಪಾತ್ರೆಯಿಂದ ತುತ್ತನ್ನು ತೆಗೆದುಕೊಂಡು ಮತ್ತೆ ಹೊರಕ್ಕೆ ಓಡಿಹೋಗುತ್ತಿದ್ದನು.

ಕೌಸಲ್ಯಾ ಬಾಲಕಂ ಧರ್ತುಂ ದುದ್ರಾವ ನೃಪಚೋದಿತಾ ।
ನ ತಸ್ಯಾಃ ಕರಗಶ್ಚಾಸೀದ್ಯೋಗಿನಾಮಪ್ಯಗೋಚರಃ ॥ ೨೧ ॥

ಪರಿವೃತ್ಯ ಸ್ವಯಂ ರಾಮಃ ಕರೇಣ ಮೃದುಲೇನ ಚ ।
ಕೌಸಲ್ಯಾಸ್ಯೇ ನೃಪಾಸ್ಯೇ ಚ ಕಬಲಂ ತಂ ದದೌ ಮುದಾ ॥ ೨೨ ॥

ಏವಂ ನಾನಾಕೌತುಕೈಶ್ಚ ರಂಜಯಾಮಾಸ ರಾಘವಃ ।
ನಾನಾಶಿಶುಕ್ರೀಡನಕೈಶ್ಚೇಷ್ಟಿತೈರ್ಮುಗ್ಧಭಾಷಿತೈಃ ॥ ೨೩ ॥

ಬಾಲಕೃತ್ರಿಮಯುದ್ಧೈಶ್ಚ ಗಮನೈರ್ಮುಖಚುಂಬನೈಃ ।
ಪಿತರೌ ನಿಜಚಾರಿತ್ರೈರ್ವಾಹನಾರೋಹಣಾದಿಭಿಃ ॥ ೨೪ ॥

---

೨೧ ರಾಜನು ಮಗುವನ್ನು ಹಿಡಿದುಕೊಂಡು ಬರುವಂತೆ ರಾಣಿಗೆ ಹೇಳಲು ಅವಳು ಯೋಗಿಗಳಿಗೂ ಸಿಕ್ಕತಕ್ಕವನಲ್ಲದ ಆ ಮಗುವನ್ನು ಹಿಡಿದುಕೊಳ್ಳಲು ಅದರ ಹಿಂದೆ ಓಡುತ್ತಿದ್ದಳು. ಅವನು ಆಕೆಯ ಕೈಯ್ಯಿಗೆ ಸಿಕ್ಕುತ್ತಲೇ ಇರಲಿಲ್ಲ.

೨೨. ಅನಂತರ ರಾಮನು ತಾನಾಗಿಯೇ ಹಿಂದಕ್ಕೆ ಬಂದು ಪಾತ್ರೆಯಿಂದ ತುತ್ತುಗಳನ್ನು ತೆಗೆದುಕೊಂಡು ದಶರಥನ ಬಾಯಿಗೂ ಕೌಸಲ್ಯೆಯ ಬಾಯಿಗೂ ಸಂತೋಷದಿಂದ ಕೊಡುತ್ತಿದ್ದನು.

೨೩. ಇಂತಿವೇ ಮುಂತಾದ ಆಶ್ಚರ್ಯಕರವಾದ ಆಟಗಳಿಂದ ರಾಮನು ಸಂತೋಷಪಡಿಸುತ್ತಿದ್ದನು. ಇದಲ್ಲದೆ ಬಗೆಬಗೆಯ ಆಟಗಳಿಂದಲೂ, ಚೇಷ್ಟೆಗಳಿಂದಲೂ, ಮುದ್ದುಮಾತುಗಳಿಂದಲೂ ಸಂತೋಷಪಡಿಸುತ್ತಿದ್ದನು.

೨೪. ಹುಡುಗಾಟದ ಹೊಡೆದಾಟಗಳಿಂದಲೂ, ಓಡಿಯಾಟಗಳಿಂದಲೂ, ಚುಂಬನಗಳಿಂದಲೂ, ವಾಹನಗಳನ್ನು ಹತ್ತುವುದೇ ಮೊದಲಾದವುಗಳಿಂದಲೂ ಸಂತೋಷಪಡಿಸುತ್ತಿದ್ದನು.

ತತಸ್ತೇ ಬಾಲಕಾಸ್ಸರ್ವೇ ವಸ್ತ್ರಾಲಂಕಾರಭೂಷಿತಾಃ ।
ಸಭಾಯಾಂ ಪಿತರಂ ನತ್ವಾ ತಸ್ಥುಸ್ಸಿಂಹಾಸನೋಪರಿ ॥ ೨೫ ॥

ಅಥ ಪಿತ್ರೋಪನೀತಾಸ್ತೇ ಗುರುಣಾ ಮುನಿಭಿರ್ಮುದಾ ।
ಗರ್ಭಾತ್ಸಂವತ್ಸರೇ ಷಷ್ಠೇ ಜನ್ಮತಃ ಪಂಚಮೇ ಸಮೇ ॥ ೨೬ ॥

ಬ್ರಹ್ಮವರ್ಚಸಕಾಮಸ್ಯ ಕಾರ್ಯಂ ವಿಪ್ರಸ್ಯ ಪಂಚಮೇ ।
ರಾಜ್ಞೋ ಬಲಾರ್ಥಿನಷ್ಷಷ್ಠೇ ವೈಶ್ಯಸ್ಯಾರ್ಥಾರ್ಥಿನೋಽಷ್ಟಮೇ ॥ ೨೭ ॥

ವಿದ್ವದ್ಭಿಶ್ಚೋಪನಯನಮೇವಂ ಶಾಸ್ತ್ರೇಷು ನಿರ್ಣಯಃ ।
ಗುರೋರಾಸ್ಯಾತ್ಸುಮುಹೂರ್ತೇ ವೇದಾನ್ ಸಾಂಗಾಂಶ್ಚತುರ್ವಿಧಾನ್ ॥ ೨೮ ॥

---

೨೫. ಒಂದುಸಾರಿ ಆ ಬಾಲಕರೆಲ್ಲರೂ ಬಟ್ಟೆ ಒಡವೆಗಳನ್ನು ಧರಿಸಿಕೊಂಡು ಅಲಂಕೃತರಾಗಿ ಸಭೆಗೆ ಹೋಗಿ ತಂದೆಗೆ ನಮಸ್ಕರಿಸಿ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಿದ್ದರು.

೨೬. ಹೀಗಿರುತ್ತಿರಲು ಗರ್ಭವನ್ನೂ ಸೇರಿಸಿಕೊಂಡರೆ ಆರುವರ್ಷವಾದಾಗ ಹುಟ್ಟಿದಂದಿನಿಂದ ಐದು ವರ್ಷಗಳು ತುಂಬುತ್ತಿರುವಾಗ ತಂದೆಯು ಗುರುವಿನಿಂದಲೂ ಮುನಿಗಳಿಂದಲೂ ಇವರಿಗೆ ಉಪನಯನವನ್ನು ಮಾಡಿಸಿದನು.

೨೭. ಬ್ರಾಹ್ಮಣನಿಗೆ ಬ್ರಹ್ಮವರ್ಚಸ್ಸು ಮುಖ್ಯವಾದುದು. ಅದನ್ನು ಅಪೇಕ್ಷಿಸುವ ಬ್ರಾಹ್ಮಣನಿಗೆ ಐದನೆಯ ವರ್ಷದಲ್ಲಿ ಉಪನಯನವನ್ನು ಮಾಡಬೇಕು. ರಾಜನಿಗೆ ಬಲವು ಮುಖ್ಯವು. ಅದನ್ನು ಅಪೇಕ್ಷಿಸುವ ರಾಜನಿಗೆ, ಆರನೆಯ ವರ್ಷದಲ್ಲಿ ಉಪನಯನವನ್ನು ಮಾಡಬೇಕು. ವೈಶ್ಯನಿಗೆ ಧನವು ಮುಖ್ಯವಾದುದು. ಅದನ್ನು ಅಪೇಕ್ಷಿಸುವ ವೈಶ್ಯನಿಗೆ ಎಂಟನೆಯ ವರ್ಷದಲ್ಲಿ ಉಪನಯನವನ್ನು ಮಾಡಬೇಕು. ಎಂದರೆ ಆಯಾ ಜಾತಿಗೆ ಆಯಾ ವರ್ಷದಲ್ಲಿ ಉಪನಯನ ಮಾಡಿದರೆ ಆಯಾ ಫಲವುಂಟಾಗುತ್ತದೆ.

೨೮. ಈ ರೀತಿಯಾಗಿ ಉಪನಯನಗಳನ್ನು ಮಾಡಬೇಕೆಂದು ವಿದ್ವಾಂಸರು ಶಾಸ್ತ್ರದಲ್ಲಿ ನಿರ್ಣಯಿಸಿದ್ದಾರೆ. ಒಳ್ಳೆಯ ಮುಹೂರ್ತದಲ್ಲಿ ವೇದಾರಂಭಕ್ಕೆ ಮೊದಲುಮಾಡಿ ಗುರುವಿನ ದೆಸೆಯಿಂದ ಕಲಿಯುತ್ತ ಬಾಯಿನಲ್ಲಿಯೇ ಬರುವಂತೆ

ಚಕ್ರುರ್ಮುಖೋದ್ಗತಾನೇವ ಕಲಾಶ್ಶಾಸ್ತ್ರಾದಿಕಾನ್ಯಪಿ ।
ಬ್ರಹ್ಮಚರ್ಯಸಮಾಪ್ತೌ ತೇ ತೀರ್ಥಾನ್ಯಾಜಗ್ಮುರಾದರಾತ್ ॥ ೨೯ ॥

ಸೇನಯಾ ಮಂತ್ರಿಸಹಿತಾ ವಸಿಷ್ಠೇನ ಸಮನ್ವಿತಾಃ ।
ಷಣ್ಮಾಸೈಃ ಪುನರಾಗತ್ಯ ಸಾಕೇತಂ ವಿವಿಶುರ್ಮುದಾ ॥ ೩೦ ॥

ಏವಂ ತೇ ಮತಿಮಂತಶ್ಚ ಪ್ರಿಯಾ ರಾಜ್ಞೋ ವಶೇ ಸ್ಥಿತಾಃ ।
ಪಿತರಂ ರಂಜಯಾಮಾಸುಃ ಪೌರಾನ್ ಜಾನಪದಾನಪಿ ॥ ೩೧ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಸಾರಕಾಂಡೇ ರಾಮಜನ್ಮ ನಾಮ ದ್ವಿತೀಯಸ್ಸರ್ಗಸ್ಸಮಾಪ್ತಃ

ಮಾಡಿಕೊಂಡರು. ಆ ವೇದಗಳಲ್ಲಿ ನಾಲ್ಕನ್ನೂ ಆವುಗಳ ಅಂಗಗಳನ್ನೂ ಬಾಯಲ್ಲಿಯೇ ಬರುವಂತೆ ಮಾಡಿಕೊಂಡರು. ಮತ್ತು ಆನೇಕ ಶಾಸ್ತ್ರಗಳನ್ನೂ ಕಲೆಗಳನ್ನೂ ಚೆನ್ನಾಗಿ ಕಲಿತರು. ಬ್ರಹ್ಮಚರ್ಯವು ಮುಗಿಯಲು ಸ್ನಾತಕರಾಗಿ ತೀರ್ಥಕ್ಕೆ ಹೋದರು.

೩೦. ಅವರ ಜೊತೆಯಲ್ಲಿ ಸೇನೆಯೂ ಮಂತ್ರಿಗಳೂ ಹೋದರು. ವಸಿಷ್ಠನೂ ಹೋದನು. ಆರು ತಿಂಗಳವರೆಗೂ ತೀರ್ಥಯಾತ್ರೆಗಳನ್ನು ಮಾಡುತ್ತ ಮತ್ತೆ ಸೇನೆಯೊಂದಿಗೆ ಅಯೋಧ್ಯೆಗೆ ಬಂದರು.

೩೧. ಆವರೆಲ್ಲರೂ ಈ ರೀತಿಯಲ್ಲಿ ಬುದ್ಧಿವಂತರಾಗಿ ರಾಜನಿಗೆ ಪ್ರೀತಿ ಪಾತ್ರರಾಗಿ ಅವನು ಹೇಳಿದಂತೆ ಕೇಳುತ್ತ ಅವನ ವಶದಲ್ಲಿಯೇ ಇದ್ದರು. ಈ ರೀತಿ ತಮ್ಮ ಒಳ್ಳೆಯ ಗುಣಗಳಿಂದ ತಂದೆಯರನ್ನೂ ತಾಯಿಯರನ್ನೂ ಪಟ್ಟಣಿಗರನ್ನೂ ದೇಶದವರನ್ನೂ ಸಂತೋಷಪಡಿಸುತ್ತಿದ್ದರು.

ಇಂತು ಶ್ರೀ ಶತಕೋಟಿ ರಾಮಾಯಣಾಂತರ್ಗತವಾದ ವಾಲ್ಮೀಕಿ ವಿರಚಿತವಾದ ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ ರಾಮಜನ್ಮವೆಂಬ ಎರಡನೆಯ ಸರ್ಗವು ಮುಗಿದುದು.

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

॥ ದ್ವಿತೀಯಸರ್ಗದ ಸಾರಾಂಶವು ॥

ರಾವಣನೇ ಮುಂತಾದ ದುಷ್ಟರಿಂದ ತೊಂದರೆಗೊಳಗಾದ ಭೂಮಿಯು ಬ್ರಹ್ಮನೊಡನೆ ತನ್ನ ಕಷ್ಟವನ್ನು ಹೇಳಿಕೊಳ್ಳಲು ಆ ಬ್ರಹ್ಮನು ವಿಷ್ಣುವಿಗೆ ವಿಜ್ಞಾಪಿಸಿದನು. ಆಗ ವಿಷ್ಣುವು ತಾನು ಭೂಮಿಯಲ್ಲಿ ಅವತರಿಸುವುದಾಗಿ ಹೇಳಿ ದೇವತೆಗಳನ್ನು ಕಪಿಗಳಾಗಿ ಹುಟ್ಟುವಂತೆ ಹೇಳಿದನು.

ದುಂದುಭಿಯೆಂಬ ಗಂಧರ್ವಸ್ತ್ರೀಗೆ ದೇವಕಾರ್ಯಕ್ಕೋಸ್ಕರವಾಗಿ ಮಂಥರೆಯಾಗಿ ಹುಟ್ಟಿ ರಾಮನಿಗೆ ರಾಜ್ಯದಾನ ವಿಘಾತವನ್ನು ಮಾಡುವಂತೆಯೂ ಅನಂತರ ದ್ವಾಪರಯುಗದಲ್ಲಿ ಕಂಸನ ಮನೆಯಲ್ಲಿ ಕುಬ್ಜೆಯಾಗಿ ಹುಟ್ಟುವಂತೆಯೂ ಆಜ್ಞಾಪಿಸಿದನು.

ಇತ್ತ ಗರ್ಭಿಣಿಯರಾಗಿದ್ದ ರಾಜಪತ್ನಿಯರು ಗಂಡುಮಕ್ಕಳನ್ನು ಹಡೆದರು. ಕೌಸಲ್ಯೆ ಸುಮಿತ್ರೆಯರು ಒಬ್ಬೊಬ್ಬರನ್ನೂ ಕೈಕೇಯಿಯು ಇಬ್ಬರನ್ನೂ ಹೆತ್ತರು. ಆಗ ದೇವದುಂದುಭಿಯು ಮೊಳಗಿತು. ಪುಷ್ಪವೃಷ್ಟಿಯಾಯಿತು. ದಶರಥನು ವಸಿಷ್ಠನಿಂದ ಜಾತಕರ್ಮ ನಾಮಕರಣಗಳನ್ನು ಮಾಡಿಸಿದನು. ರಾಮ ಲಕ್ಷ್ಮಣ ಭರತ ಶತ್ರುಘ್ನರೆಂದು ಆ ಮಕ್ಕಳಿಗೆ ಅನ್ವರ್ಥವಾದ ಹೆಸರನ್ನಿಡಿಸಿದನು. ರಾಮ ಲಕ್ಷ್ಮಣರೂ ಭರತಶತ್ರುಘ್ನರೂ ಒಂದೊಂದು ಜೊತೆಯಾಗಿ ಬೆಳೆದರು. ಆ ಮಕ್ಕಳಿಗೆ ಬಾಲಭಾವಕ್ಕೆ ತಕ್ಕಂತೆ ಉಡಿಗೆ ತೊಡಿಗೆಗಳನ್ನು ಹಾಕುತ್ತಿದ್ದರು. ಇವರೆಲ್ಲರೂ ಅನೇಕ ಬಗೆಯಾದ ಆಟಪಾಟಗಳಿಂದ ತಾಯಿತಂದೆಗಳನ್ನು ಸಂತೋಷಪಡಿಸುತ್ತಿದ್ದರು ಇವರು ಸಭೆಗೂ ಹೋಗಿ ತಂದೆಗೆ ನಮಸ್ಕರಿಸಿ ಕುಳಿತಿರುತ್ತಿದ್ದರು. ಕಾಲಕ್ಕನುಸಾರವಾಗಿ ಉಪನಯನವಾಯಿತು. ಅನಂತರ ಇವರೆಲ್ಲರೂ ಆರು ತಿಂಗಳುಕಾಲ ತೀರ್ಥಯಾತ್ರೆಯನ್ನು ಮಾಡಿದರು ಇವರು ತಮ್ಮ ನಡೆನುಡಿಗಳಿಂದ ತಾಯಿತಂದೆಗಳನ್ನು ಅಂತೆಯೇ ಜನರನ್ನೂ ಸಂತೋಷಪಡಿಸುತ್ತಿದ್ದರು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಸಾರಕಾಂಡೇ

॥ ತೃತೀಯಸ್ಸರ್ಗಃ ॥

॥ ಶ್ರೀಶಿವ ಉವಾಚ ॥

ಏತಸ್ಮಿನ್ನಂತರೇಯೋಧ್ಯಾಂ ವಿಶ್ವಾಮಿತ್ರೋ ಯಯೌ ಮುನಿಃ ।
ಯಜ್ಞಸಂರಕ್ಷಣಾರ್ಥಾಯ ರಾಜಾನಂ ಮುನಿರಬ್ರವೀತ್ ॥ ೧ ॥

ರಾಮಂ ಚ ಲಕ್ಷಣಂ ಚಾಪಿ ಮಹ್ಯಂ ದೇಹಿ ಕಿಯದ್ದಿನಂ ।
ಗುರುಣಾಮಂತ್ರ್ಯ ರಾಜಾಪಿ ಪ್ರೇಷಯಾಮಾಸ ತೌ ತದಾ ॥ ೨ ॥

ಜಗ್ಮತುರ್ಯಜ್ಞರಕ್ಷಾರ್ಥಂ ಗಾಧಿಜೇನ ರಥಸ್ಥಿತೌ ।
ತತಃ ಪ್ರಹೃಷ್ಟೋ ಗಾಧೇಯಸ್ಸ್ಥಿತ್ವಾ ಕಾಮಾಶ್ರಮೇ ಪಥಿ ॥ ೩ ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ ಮೂರನೆಯ ಸರ್ಗವು

೧. ಶ್ರೀ ಶಿವನು ಹೇಳಿದನು—ಈ ಮಧ್ಯದಲ್ಲಿ ವಿಶ್ವಾಮಿತ್ರನೆಂಬ ಮುನಿಯು ಅಯೋಧ್ಯೆಗೆ ಬಂದು ತನ್ನ ಯಜ್ಞಸಂರಕ್ಷಣೆ ಮಾಡಲು ರಾಜನನ್ನು ಕುರಿತು ಇಂತೆಂದನು.

೨. ಎಲೈ ರಾಜನೆ! ರಾಮನನ್ನೂ ಲಕ್ಷ್ಮಣನನ್ನೂ ಸ್ವಲ್ಪದಿನಗಳ ಮಟ್ಟಿಗೆ ನನ್ನ ಜೊತೆಯಲ್ಲಿ ಕಳುಹಿಸು. ಅವರಿಂದ ಯಜ್ಞರಕ್ಷಣೆಯನ್ನು ಮಾಡಿಸಿಕೊಳ್ಳುತ್ತೇನೆ. ಎನ್ನಲು ಆ ರಾಜನು ಗುರುವಾದ ವಸಿಷ್ಠನೊಡನೆ ಆಲೋಚಿಸಿ ಅವರಿಬ್ಬರನ್ನೂ ಕಳುಹಿಸಿದನು.

೩. ಆ ರಾಜಪುತ್ರರಿಬ್ಬರೂ ರಥದಮೇಲೆ ಕುಳಿತು ಆ ವಿಶ್ವಾಮಿತ್ರನ ಯಾಗರಕ್ಷಣೆಗೆ ಹೊರಟರು. ಅಲ್ಲಿಂದ ಹೊರಟು ಇವರುಗಳು ಬರಲು ಹೋಗುತ್ತ ದಾರಿಯಲ್ಲಿ ಸಿಕ್ಕಿದ ಕಾಮಾಶ್ರಮದಲ್ಲಿ ನಿಂತರು.

ಪ್ರಭಾತೇ ಸ್ನಾತಯೋಸ್ಸ್ನಾತಃ ಸ್ವಾಪ್ರದಾದ್ವಿದ್ಯಾಸ್ತಯೋರ್ಮುದಾ ।
ಮಾಹೇಶ್ವರೀಂ ಚ ಮದ್ವಿದ್ಯಾಂ ಧನುರ್ವಿದ್ಯಾಪುರಸ್ಸರಾಂ　　॥ ೪ ॥

ಶಾಸ್ತ್ರೀಮಾಸ್ತ್ರೀಂ ಲೌಕಿಕೀಂ ಚ ರಥವಿದ್ಯಾಂ ಗಜೋದ್ಭವಾಂ ।
ಅಶ್ವವಿದ್ಯಾಂ ಗದಾವಿದ್ಯಾಂ ಮಂತ್ರಾಹ್ವಾನವಿಸರ್ಜನೇ　　॥ ೫ ॥

ಕ್ಷುತ್ತೃಟ್‌ಶ್ರಮವಿಲೋಪಿನ್ಯೌ ಬಲಾಮತಿಬಲಾಮಪಿ ।
ಸರ್ವವಿದ್ಯಾಸ್ತ್ವವಾಪ್ಯಾಥ ಹ್ಯುಭೌ ತೌ ರಾಮಲಕ್ಷ್ಮಣೌ　　॥ ೬ ॥

ವನೌಕಸಾಂ ಹಿತಾರ್ಥಾಯ ಜಘ್ನತುಸ್ತತ್ರ ರಾಕ್ಷಸಾನ್ ।
ಪಥಿ ಪಾಂಥಜನಧ್ವಂಸಹಾರಿಣೀಂ ನಾಮ ತಾಟಿಕಾಂ　　॥ ೭ ॥

---

೪. ಬೆಳಗ್ಗೆ ಆ ರಾಜಕುಮಾರರನ್ನು ಸ್ನಾನಮಾಡಿಸಿ ಋಷಿಯು ತಾನೂ ಸ್ನಾನಮಾಡಿ ಅವರಿಗೆ ಅಲ್ಲಿ ಅನೇಕವಾದ ವಿದ್ಯೆಗಳನ್ನು ಹೇಳಿಕೊಟ್ಟನು. ನನ್ನ ಸಂಬಂಧವಾದ ಮಾಹೇಶ್ವರೀ ವಿದ್ಯೆಯನ್ನೂ ಇನ್ನೂ ಅನೇಕವಾದ ಧನುರ್ವಿದ್ಯೆಗಳನ್ನೂ ಹೇಳಿಕೊಟ್ಟನು.

೫–೬. ಶಸ್ತ್ರವಿದ್ಯೆ, ಅಸ್ತ್ರವಿದ್ಯೆ, ಲೌಕಿಕ ವಿದ್ಯೆಗಳು, ರಥವಿದ್ಯೆ, ಗಜವಿದ್ಯೆ ಅಶ್ವವಿದ್ಯೆ, ಗದಾವಿದ್ಯೆ, ಮಂತ್ರಗಳ ಆಹ್ವಾನ, ಅವುಗಳ ವಿಸರ್ಜನೆ, ಹಸಿವು ಬಾಯಾರಿಕೆಗಳನ್ನು ನಾಶಮಾಡುವ ವಿದ್ಯೆ, ಬಲಾ ಅತಿಬಲಗಳು ಈ ವಿದ್ಯೆಗಳೆಲ್ಲವನ್ನೂ ಹೇಳಿಕೊಟ್ಟನು.

೭. ಈ ರಾಮಲಕ್ಷ್ಮಣರು ಎಲ್ಲಾ ವಿದ್ಯೆಗಳನ್ನೂ ಕಲಿತು ಅಲ್ಲಿರುವ ತಾಪಸರಿಗೆ ಅನುಕೂಲಮಾಡಿಕೊಡುವುದಕ್ಕೋಸ್ಕರ ಅಲ್ಲಿದ್ದ ರಾಕ್ಷಸರನ್ನು ಕೊಂದರು. ಪ್ರಯಾಣಿಕರಿಗೆ ತೊಂದರೆಯನ್ನುಂಟುಮಾಡುತ್ತಿದ್ದ ತಾಟಕಿಯನ್ನೂ ಕೊಂದರು.

ರಾಕ್ಷಸೀಮೇಕಬಾಣೇನ ಜಘಾನ ರಘುನಂದನಃ ।
ಅಪ್ಸರಸ್ಸಾ ಮುನಿಂ ಪೂರ್ವಂ ಕ್ಷೋಭಯಾಮಾಸ ಕಾನನೇ ॥ ೮ ॥

ರಾಕ್ಷಸೀ ತಸ್ಯ ಶಾಪೇನ ಬಭೂವ ಸುಂದಕಾಮಿನೀ ।
ಮಾರೀಚಶ್ಚ ಸುಬಾಹುಶ್ಚ ಸುಂದಾತ್ತಸ್ಯಾಸ್ಸುತಾವುಭೌ ॥ ೯ ॥

ರಾಮಬಾಣಾದ್ಗತಿಸ್ತಸ್ಯೈ ಕೀರ್ತಿತಾ ಮುನಿನಾ ಪುರಾ ।
ಸಾ ಪ್ರಾಪ್ಯ ದಿವ್ಯದೇಹತ್ವಂ ನತ್ವಾ ರಾಮಂ ದಿವಂ ಗತಾ ॥ ೧೦ ॥

ವಿಶ್ವಾಮಿತ್ರಾಶ್ರಮಂ ರಾಮೋ ಗತ್ವಾ ತದ್ಯಜ್ಞಘಾತಕಾನ್ ।
ರಾಕ್ಷಸಾನ್ನಿಶಿತೈರ್ಬಾಣೈರ್ಜಘಾನ ರಘುನಂದನಃ ॥ ೧೧ ॥

---

೮. ಆ ತಾಟಕಿಯನ್ನು ರಾಮನು ಒಂದೇ ಬಾಣದಿಂದ ಕೊಂದನು. ಅವಳು ಆ ಕಾಡಿನಲ್ಲಿದ್ದವರನ್ನೆಲ್ಲಾ ಬಹುವಾಗಿ ಪೀಡಿಸುತ್ತಿದ್ದಳು. ಆಕೆಯು ಪೂರ್ವದಲ್ಲಿ ಒಬ್ಬ ಅಪ್ಸರ ಸ್ತ್ರೀಯು.

೯. ಅವಳು ಒಬ್ಬ ಮುನಿಯ ಶಾಪದಿಂದ ರಾಕ್ಷಸಿಯಾಗಿ ಹುಟ್ಟಿ ಸುಂದನನ್ನು ಮದುವೆಯಾದಳು. ಆ ಸುಂದನಿಂದ ಅವಳಲ್ಲಿ ಮಾರೀಚ ಸುಬಾಹುಗಳೆಂಬ ಮಕ್ಕಳು ಹುಟ್ಟಿದರು.

೧೦. ಆ ಶಾಪಕೊಟ್ಟ ಮುನಿಯು ರಾಮಬಾಣದಿಂದ ಶಾಪವಿಮೋಚನೆಯಾಗುವುದೆಂದು ಹೇಳಿದ್ದನು. ಆಕೆಯು ಶಾಪಹೋದೊಡನೆಯೇ ಅಪ್ಸರ ಸ್ತ್ರೀಯಾಗಿ ರಾಮನಿಗೆ ನಮಸ್ಕರಿಸಿ ಸ್ವರ್ಗಲೋಕಕ್ಕೆ ಹೊರಟುಹೋದಳು.

೧೧. ಅಲ್ಲಿಂದ ಮುಂದಕ್ಕೆ ರಾಮನು ವಿಶ್ವಾಮಿತ್ರನ ಆಶ್ರಮಕ್ಕೆ ಹೋದನು. ಅಲ್ಲಿ ಆ ಋಷಿಯ ಯಜ್ಞಕ್ಕೆ ತೊಂದರೆಯನ್ನುಂಟುಮಾಡುವ ರಾಕ್ಷಸರನ್ನು ಹರಿತವಾದ ಬಾಣಗಳಿಂದ ಕೊಂದನು.

ಪ್ರಾರಂಭಂ ರಣಯಜ್ಞಸ್ಯ ಚಕಾರ ರಘುನಂದನಃ ।
ಹತ್ವಾ ಸಹಸ್ರಶಸ್ತ್ರೀವರ್ಗಾ ರಾಕ್ಷಸಾ ನಿಶಿತೈಶ್ಶರೈಃ ॥ ೧೨ ॥

ಕ್ಷಿಪ್ತ್ವಾ ಬಾಣೇನ ಮಾರೀಚಂ ಶತಯೋಜನಸಾಗರೇ ।
ಹತ್ವಾ ಸುಬಾಹುಂ ಚೈಕೇನ ಬಾಣೇನ ರಘುಸತ್ತಮಃ ॥ ೧೩ ॥

ಕೃತ್ವಾ ಗಾಧಿಜಯಜ್ಞಸ್ಯ ಸಮಾಪ್ತಿಂ ರಘುನಂದನಃ ।
ನಾಕರೋದ್ರಣಯಜ್ಞಸ್ಯ ಸಮಾಪ್ತಿಂ ಸ್ವಕೃತಸ್ಯ ಚ ॥ ೧೪ ॥

ಕಾಲಾನಲಮತೃಪ್ತಂ ತಂ ದೃಷ್ಟ್ವಾ ತತ್ತೃಪ್ತಿಹೇತವೇ ।
ಶ್ರುತ್ವಾ ಜನಕಗೇಹೇ ವೈ ತತ್ಕನ್ಯಾಯಾಃ ಸ್ವಯಂವರಂ ॥ ೧೫ ॥

---

೧೨. ರಘುರಾಮನು ರಣಯಜ್ಞಕ್ಕೆ ಇಲ್ಲಿಯೇ ಪ್ರಾರಂಭಮಾಡಿದಂತಾಯಿತು. ಆ ಯಜ್ಞದಲ್ಲಿ ಸಾವಿರಾರುಜನ ರಾಕ್ಷಸರನ್ನು ರಾಮನು ಕೊಂದನು.

೧೩. ಮಾರೀಚನೆಂಬ ರಾಕ್ಷಸನನ್ನು ಬಾಣಬಿಟ್ಟು ಸಮುದ್ರದಮೇಲೆ ನೂರುಯೋಜನಗಳ ಆಚೆಗೆ ಬೀಳುವಂತೆ ಆ ಬಾಣದಿಂದ ಎಸೆದನು. ಸುಬಾಹುವನ್ನು ಒಂದೇ ಬಾಣದಿಂದ ಕೊಂದನು.

೧೪. ವಿಶ್ವಾಮಿತ್ರನ ಯಜ್ಞವು ಪೂರ್ತಿಯಾಗುವವರೆಗೂ ರಾಮನು ಅದನ್ನು ರಕ್ಷಿಸಿದನು. ಆ ಯಜ್ಞವು ಪೂರ್ತಿಯಾಯಿತು. ಆದರೆ ಕಾಲವೆಂಬ ಅಗ್ನಿಯು ತೃಪ್ತಿಪಡದಿದ್ದುದನ್ನು ಶ್ರೀರಾಮನು ತಿಳಿದು ತಾನು ಪ್ರಾರಂಭಿಸಿದ ರಣಯಜ್ಞವನ್ನು ಮಾತ್ರ ಪೂರ್ಣವನ್ನಾಗಿ ಮಾಡಲಿಲ್ಲ.

೧೫. ಈ ಕಾಲವೆಂಬ ಅಗ್ನಿಯನ್ನು ತೃಪ್ತಿಪಡದಿರುವವನನ್ನಾಗಿ ತಿಳಿದು ಅವನಿಗೆ ತೃಪ್ತಿಪಡಿಸಬೇಕೆಂದು ಮುನಿಯು ಯೋಚಿಸಿದನು. ಆಗ ಜನಕರಾಜನು ತನ್ನ ಮಗಳಿಗೆ ಸ್ವಯಂವರ ಮಾಡುವನೆಂದು ತಿಳಿಯಬಂದಿತು.

ರಾಮಲಕ್ಷ್ಮಣಸಂಯುಕ್ತೋ ಮುನಿಸ್ತಂ ನಗರಂ ಯಯೌ ।
ಗಮನಾವಸರೇ ಮಾರ್ಗೇ ಭರ್ತೃಶಪ್ತಾಂ ಶಿಲಾಂ ಮುನಿಃ ॥ ೧೬ ॥

ಮುನಿರೂಪಮಹೇಂದ್ರೇಣ ಭುಕ್ತಾಂ ರಹಸಿ ಶೋಭನಾಂ ।
ಗೌತಮಸ್ಯಾಂಗನಾಂ ನಾಮ್ನಾ ಹ್ಯಹಲ್ಯಾಂ ಕಥಯತ್ತಯೋಃ ॥ ೧೭ ॥

ಬ್ರಹ್ಮಣಾ ನಿರ್ಮಿತಾಹಲ್ಯಾ ದ್ವಿಮುಖೀ ಗೋಃ ಪರಿಕ್ರಮಾತ್ ।
ದತ್ತಾ ಪುರಾ ಗೌತಮಾಯ ವಿಸೃಜ್ಯೇಂದ್ರಾದಿಕಾನ್ ಸುರಾನ್ ॥ ೧೮ ॥

ತತ್ಸ್ಮರನ್ಮಘವಾ ವೈರಂ ತಾಂ ಭುಕ್ತ್ವಾ ಮುನಿಶಾಪತಃ ।
ಸಹಸ್ರಭಗವಾನ್ ಜಾತಸ್ಸಹಸ್ರಲೋಚನಸ್ತತಃ ॥ ೧೯ ॥

---

೧೬. ವಿಶ್ವಾಮಿತ್ರನು ಆ ರಾಮಲಕ್ಷ್ಮಣರನ್ನು ಕರೆದುಕೊಂಡು ಆ ನಗರಕ್ಕೆ ಹೋದನು. ಹೋಗುತ್ತಿರುವ ದಾರಿಯಲ್ಲಿ ಗೌತಮನಿಂದ ಶಾಪಹೊಂದಿ ಕಲ್ಲಾಗಿರುವ ಅಹಲ್ಯೆಯು ಸಿಕ್ಕಿದಳು.

೧೭. ಮಹೇಂದ್ರನು ಆಕೆಯನ್ನು ಭೋಗಿಸಿದುದನ್ನೂ ಅವಳು ಗೌತಮನ ಹೆಂಡತಿಯೆಂಬುದನ್ನೂ ತಿಳಿಸಿ ಆ ಪೂರ್ವಚರಿತ್ರೆಯನ್ನೆಲ್ಲಾ ಅವರಿಗೆ ವಿವರಿಸಿ ಆಕೆಯು ಕಲ್ಲಾದುದನ್ನೂ ಹೇಳಿದನು.

೧೮. ಪೂರ್ವದಲ್ಲಿ ತನ್ನಿಂದ ನಿರ್ಮಿತಳಾದ ಅಹಲ್ಯೆಯನ್ನು ಬ್ರಹ್ಮನು ಗೌತಮನು ಎರಡು ತಲೆಯುಳ್ಳ ಎಂದರೆ ಹಿಂದುಗಡೆ ಕರುವನ್ನು ಹಾಕುವಾಗ ಕರುವಿನ ತಲೆಯು ಅರ್ಧಬಂದಿರುವ ಹಸುವನ್ನು ಪ್ರದಕ್ಷಿಣೆಮಾಡಿದುದರಿಂದ ಇಂದ್ರನೇ ಮುಂತಾದವರಿಗೆ ಆಕೆಯನ್ನು ಕೊಡದೆ ಅವನಿಗೇ ಕೊಟ್ಟನು.

೧೯. ಆಕೆಯನ್ನು ತಾನು ಮದುವೆಯಾಗದಿದ್ದುದೂ ಗೌತಮನು ಮದುವೆಯಾದುದೂ ಇಂದ್ರನಿಗೆ ವೈರವಾಗಿ ನಿಂತಿತು. ಆದ್ದರಿಂದ ಅವನು ಅವಳನ್ನು ಕಳ್ಳತನದಲ್ಲಿ ರಮಿಸಲು ಆ ಮುನಿಯು ಶಾಪವನ್ನು ಕೊಟ್ಟನು. ಅದರಿಂದ ಇಂದ್ರನ ಮೈಯೆಲ್ಲವೂ ಹೆಂಗಸರ ಗುಹ್ಯಪ್ರದೇಶವಾಗಿ ಪರಿಣಮಿಸಿತು. ಅನಂತರ ದೇವತೆಗಳ ಪ್ರಾರ್ಥನೆಯಂತೆ ಅವೆಲ್ಲವೂ ಕಣ್ಣುಗಳಂತೆ ಕಾಣಬರುವಂತೆ ಮಾಡಿದನು.

ಶ್ರೀರಾಮಚಂದ್ರೋ ನಿಜಪಾದಪದ್ಮಸ್ಪರ್ಶೇನ ತಾಂ ಗೌತಮಧರ್ಮಪತ್ನೀಂ ।
ನಿಷ್ಕಲ್ಮಷಾಮದ್ಭುತರೂಪಯುಕ್ತಾಂ ಚಕಾರ ದೇವಃ ಕರುಣಾಸಮುದ್ರಃ ॥

ನದೀರೂಪಾ ಜನಸ್ಥಾನೇಽಹಲ್ಯಾ ಗೌತಮಶಾಪತಃ ।
ರಾಮೇಣ ಭ್ರಮತಾರಣ್ಯೇ ಸ್ವಾಂಘ್ರಿಸ್ಪರ್ಶಾತ್ಸಮುದ್ಧೃತಾ ॥ ೨೧ ॥

ಕಲ್ಪಭೇದಾದ್ವದಂತೀತ್ಥಂ ಮುನಯಶ್ಚಾಪಿ ಕೇಚನ ।
ನೈಕರೂಪಾಸ್ತಿ ಸರ್ವೇಷು ಕಲ್ಪೇಷು ರಾಮಸತ್ಕಥಾ ॥ ೨೨ ॥

ತತಸ್ತೌ ಸುರಗಂಧರ್ವೈಃ ವರ್ಷಿತೌ ಪುಷ್ಪವೃಷ್ಟಿಭಿಃ ।
ದತ್ವಾಹಲ್ಯಾಂ ಗೌತಮಾಯ ಜಗ್ಮತುರ್ಜಾಹ್ನವೀಂ ಪ್ರತಿ ।
ರಾಮೋ ನೌಕಾಂ ಕಾಂಕ್ಷಮಾಣೋ ನೌಕಾಪೋ ವಾಕ್ಯಮಬ್ರವೀತ್ ॥ ೨೩ ॥

---

೨೦. ಶ್ರೀರಾಮನು ಕಲ್ಲಾಗಿರುವ ಆ ಗೌತಮನ ಧರ್ಮಪತ್ನಿಯನ್ನು ತನ್ನ ಪಾದಸ್ಪರ್ಶದಿಂದ ಪಾಪವನ್ನು ಕಳೆದುಕೊಂಡವಳನ್ನಾಗಿಯೂ ಒಳ್ಳೆಯ ರೂಪುಳ್ಳವಳನ್ನಾಗಿಯೂ ಕರುಣೆಯುಳ್ಳವನಾಗಿ ಮಾಡಿದನು.

೨೧. ಅಹಲ್ಯೆಯು ಗೌತಮನ ಶಾಪದಿಂದ ಜನಸ್ಥಾನದಲ್ಲಿ ನದಿಯ ರೂಪದಲ್ಲಿದ್ದಳೆಂದೂ ರಾಮನು ಅರಣ್ಯದಲ್ಲಿ ಸಂಚರಿಸುವಾಗ ತನ್ನ ಪಾದ ಸ್ಪರ್ಶದಿಂದ ಉದ್ಧಾರ ಮಾಡಿದನೆಂದೂ ಹೇಳುತ್ತಾರೆ.

೨೨. ಕಲ್ಪಭೇದದಿಂದ ಹೀಗೂ ಉಂಟೆಂದು ಕೆಲವರು ಮುನಿಗಳು ಹೇಳುತ್ತಾರೆ. ಈ ರಾಮಚಂದ್ರನ ಕಥೆಯು ಎಲ್ಲಾ ಕಲ್ಪಗಳಲ್ಲಿಯೂ ಒಂದೇ ರೀತಿಯಾಗಿ ಇರುವುದಿಲ್ಲ. ವ್ಯತ್ಯಾಸವಾಗಿರುವುದೇ ಹೀಗೆ ಹೇಳಲು ಕಾರಣ ವಾಗಿರುವುದು.

೨೩. ಈ ಶಾಪವಿಮೋಚನೆಯನ್ನು ಮಾಡಿದುದರಿಂದ ಸುರರೂ, ಗಂಧರ್ವರೂ ಆ ರಾಮನ ಮೇಲೆ ಹೂಮಳೆಯನ್ನು ಕರೆದರು. ಅನಂತರ ಆ ಅಹಲ್ಯೆಯನ್ನು ಗೌತಮನಿಗೆ ಒಪ್ಪಿಸಿ ಅವರು ಗಂಗಾನದಿಯ ಬಳಿಗೆ ಹೋದರು. ಅಲ್ಲಿ ಗಂಗೆಯನ್ನು ದಾಟಲು ರಾಮನು ದೋಣಿಯನ್ನು ನಿರೀಕ್ಷಿಸುತ್ತಿರಲು ಆ ದೋಣಿಯವನು ರಾಮನನ್ನು ನೋಡಿ ಇಂತೆಂದನು.

॥ ನಾವಿಕ ಉವಾಚ ॥

ಆದಾವಹಂ ಕ್ಷಾಳಯಿತ್ವಾ ಪಾದರೇಣೂರ್ ತವ ಪ್ರಭೋ ।
ಪಶ್ಚಾನ್ನೌಕಾಂ ಸ್ಪರ್ಶಯಾಮಿ ತವ ಪಾದೌ ರಘೂದ್ವಹ ।
ನೋಚೇತ್ತ್ವತ್ಪಾದರಜಸಾ ಸ್ಪೃಷ್ಟಾ ನಾರೀ ಭವಿಷ್ಯತಿ ॥ ೨೪ ॥

ಕ್ಷಾಳಯಾಮಿ ತವ ಪಾದಪಂಕಜೇ
ನಾಥ ದಾರುದೃಷದೋಃ ಕಿಮಂತರಂ
ಮಾನುಷೀಕರಣಚೂರ್ಣಮಸ್ತಿ ತೇ ।
ಪಾದಯೋರಿತಿ ಕಥಾ ಪ್ರಥೀಯಸೀ ॥ ೨೫ ॥

ಅಸ್ತಿ ಮೇ ಗೃಹಿಣೀ ಗೇಹೇ ಕಿಂ ಕರೋಮ್ಯಪರಾಂ ಸ್ತ್ರಿಯಂ ।
ಇತಿ ತದ್ವಾಕ್ಯಮಾಕರ್ಣ್ಯ ವಿಹಸ್ಯ ರಘುನಂದನಃ ॥ ೨೬ ॥

---

೨೪. ನಾವಿಕನು ಹೇಳಿದನು–ಎಲೈ ಪ್ರಭುವೇ ! ಮೊದಲು ನಾನು ನಿನ್ನ ಪಾದಗಳಲ್ಲಿನ ಧೂಳನ್ನು ತೊಳೆದು ಅನಂತರ ದೋಣಿಯಲ್ಲಿ ಆ ಪಾದಗಳನ್ನು ಇಡಲು ಅವಕಾಶವನ್ನು ಕೊಡುತ್ತೇನೆ. ಹಾಗೆ ಮಾಡದಿದ್ದರೆ ನಿನ್ನ ಕಾಲುಗಳ ಧೂಳು ಬಿದ್ದೊಡನೆಯೇ ನನ್ನ ದೋಣಿಯು ಹೆಣ್ಣಾಗುತ್ತದೆ.

೨೫. ಎಲೈ ಸ್ವಾಮಿಯಾದ ಶ್ರೀರಾಮನೆ ! ನಿನ್ನ ಕಮಲದಂತಿರುವ ಕಾಲುಗಳನ್ನು ತೊಳೆಯುತ್ತೇನೆ. ಅಪ್ಪಣೆಯನ್ನು ಕೊಡು. ನಿನ್ನ ಕಾಲಿನಲ್ಲಿ ಮನುಷ್ಯರನ್ನು ಮಾಡುವ ಚೂರ್ಣವು ಇದೆ ಎಂಬುದಾಗಿ ಪ್ರಪಂಚದಲ್ಲಿ ಎಲ್ಲರೂ ಹೇಳುತ್ತಾರೆ. ಅಲ್ಲದೆ ಕಲ್ಲನ್ನು ತುಳಿದುದರಿಂದ ಆ ಕಲ್ಲು ಹೆಣ್ಣಾಗಿ ಪರಿಣಮಿಸಿತು. ಅಂತೆಯೇ ನನ್ನ ದೋಣಿಯೂ ಹೆಣ್ಣಾಗಬಹುದು. ಕಲ್ಲಿಗೂ ಮರಕ್ಕೂ ಯಾವ ವ್ಯತ್ಯಾಸವು ತಾನೆ ಇರುವುದು ?

೨೬. ನನಗೆ ಮನೆಯಲ್ಲಿ ಒಬ್ಬಳು ಹೆಂಡತಿ ಇರುವಳು. ಮತ್ತೊಬ್ಬಳನ್ನೂ ಕಟ್ಟಿಕೊಂಡು ನಾನೇನು ಮಾಡಲಿ ? ಆ ನಾವಿಕನು ಹೇಳಿದ ಈ ಮಾತನ್ನು ಕೇಳಿ ರಾಮನು ನಕ್ಕನು.

ತೇನ ಸಂಕ್ಷಾಳಿತಪದೋ ನೌಕಾಂ ತಾಮಾರುರೋಹ ಸಃ |
ತತಸ್ತೀರ್ತ್ವಾ ಜಾಹ್ನವೀಂ ತೇ ಮಿಥಿಲಾಂ ಮುನಿಭಿರ್ಯಯುಃ || ೨೭ ||

ಮಿಥಿಲಾಯಾಂ ಸಮಾಹೂತಾಃ ಕೋಟಿಶಃ ಪಾರ್ಥಿವಾ ಯಯುಃ |
ಸಾರಣಾಸ್ಯಾದ್ದಶಾಸ್ಯೋಽಪಿ ಯಯೌ ಶ್ರುತ್ವಾ ಸ್ವಮಂತ್ರಿಭಿಃ || ೨೮ ||

ಅನಾಹೂತೋ ಪುಷ್ಪಕೇಣ ಸೇನಯಾ ಪರಿವಾರಿತಃ |
ನ ಯಯೌ ಪುತ್ರವಿರಹಾದ್ರಾಜಾ ದಶರಥಸ್ತದಾ || ೨೯ ||

ಅತ್ಯಾದರೈರ್ವಿದೇಹೇನ ಸಮಾಹೂತೋಽಪಿ ಶಕ್ತಿತಃ |
ಶ್ರೀರಾಮಲಕ್ಷ್ಮಣಾಭ್ಯಾಂ ಚ ವಿಶ್ವಾಮಿತ್ರೋ ಮುನೀಶ್ವರೈಃ || ೩೦ ||

---

೨೭. ಆಗ ಆ ನಾವಿಕನು ರಾಮನ ಕಾಲನ್ನು ತೊಳೆಯಲು ಅನಂತರ ರಾಮನು ಆ ನಾವೆಯನ್ನು ಹತ್ತಿದನು. ಎಲ್ಲರೂ ದೋಣಿಯನ್ನು ಹತ್ತಿ ಆ ಗಂಗಾನದಿಯನ್ನು ದಾಟಿ ಮುನಿಗಳೊಡನೆ ಮಿಥಿಲೆಗೆ ಹೋದರು.

೨೮. ಮಿಥಿಲಾಧಿಪನು ರಾಜರಿಗೆಲ್ಲಾ ಹೇಳಿ ಕಳುಹಿಸಿರಲು ಅವರೆಲ್ಲರೂ ಕೋಟಿಸಂಖ್ಯೆಯಲ್ಲಿ ಮಿಥಿಲೆಗೆ ಬಂದಿದ್ದರು. ಮಿಥಿಲಾಪಟ್ಟಣದಲ್ಲಿ ಸ್ವಯಂವರವು ನಡೆಯುತ್ತದೆ ಎಂಬುದನ್ನು ಸಾರಣನೆಂಬ ಚಾರನಿಂದ ಕೇಳಿ ದಶಕಂಠನೂ ಮಂತ್ರಿಗಳೊಡನೆ ಹೊರಟನು.

೨೯. ಅವನಿಗೆ ಹೇಳಿ ಕಳುಹಿಸದೇ ಇದ್ದರೂ ಪುಷ್ಪಕದಲ್ಲಿ ಕುಳಿತು ಮಂತ್ರಿಗಳನ್ನೂ ಕರದುಕೊಂಡು ಸೇನೆಯೊಡನೆ ಕೂಡಿಕೊಂಡು ಆ ರಾವಣನು ಹೋದನು. ದಶರಥನು ಮಾತ್ರ ಮಕ್ಕಳು ಪರಸ್ಥಳಕ್ಕೆ ಹೋಗಿದ್ದುದರಿಂದ ಅವರ ವಿರಹದಿಂದ ಮಿಥಿಲೆಗೆ ಹೋಗಲಿಲ್ಲ.

೩೦. ವಿದೇಹರಾಜನಾದ ಜನಕನು ಬಹುವಾದ ಆದರದಿಂದಲೂ, ಶಕ್ತಿಗನುಗುಣವಾದ ಉಪಚಾರಗಳಿಂದಲೂ, ಆ ರಾಮಲಕ್ಷ್ಮಣರನ್ನೂ, ವಿಶ್ವಾಮಿತ್ರರನ್ನೂ, ಬರಮಾಡಿಕೊಂಡು ಉಪಚರಿಸಿದನು. ಅಲ್ಲಿಗೆ ಬಂದಿದ್ದ ಮುನೀಶ್ವರರೂ ಅವರನ್ನು ಗೌರವಿಸಲು ಸಿದ್ಧರಾದರು.

ಶನೈರ್ಮುದಾ ಸ ಮಿಥಿಲಾಂ ಬಹಿಶ್ಚೋಽಪವನಂ ಯಯೌ ।
ವಿಶ್ವಾಮಿತ್ರಂ ಸಮಾನೇತುಂ ಜನಕೋಽ ಮಂತ್ರಿಭಿಸ್ಸಮಂ ॥ ೩೧ ॥

ಯಾವದ್ಗಂತುಂ ಮನಶ್ಚಕ್ರೇ ತಾವಚ್ಛಿಷ್ಯಸ್ಸಮಾಯಯೌ ।
ವಿಶ್ವಾಮಿತ್ರಸ್ಯ ತಂ ದೃಷ್ಟ್ವಾ ನನಾಮ ಜನಕಸ್ತದಾ ॥ ೩೨ ॥

ತತಶ್ಶಿಷ್ಯಃ ಕರಂ ಧೃತ್ವಾ ಜನಕಸ್ಯ ಕರೇಣ ಹಿ ।
ನೀತ್ವಾ ರಹಸಿ ಪ್ರೋವಾಚ ವಚನಂ ಸ್ವಗುರೋಃ ಸ್ಫುಟಂ ॥ ೩೩ ॥

ತ್ವಾಮಾಹ ಗಾಧಿಜೋಽ ರಾಜರ್ಷ ರಾಜ್ಞೋಽ ದಶರಥಸ್ಯ ಹಿ ।
ಮಯಾ ಪುತ್ರೌ ಸಮಾನೀತೌ ವೀರೌ ಶ್ರೀರಾಮಲಕ್ಷ್ಮಣೌ ॥ ೩೪ ॥

ತೌ ಸೀತೋರ್ಮಿಳಯೋಃ ಪಾಣಿಗ್ರಹಣಂ ಹಿ ಕರಿಷ್ಯಥಃ ।
ಪಣೀಕೃತಂ ತ್ವಯಾ ಚಾಪಂ ರಾಮೋಽಯಂ ಖಂಡಯಿಷ್ಯತಿ ॥ ೩೫ ॥

---

೩೧. ಆ ವಿಶ್ವಾಮಿತ್ರನನ್ನೂ ರಾಮಲಕ್ಷ್ಮಣರನ್ನೂ ಕರೆತರಲು ಮಿಥಿಲನು ಮಂತ್ರಿಯೊಡನೆ ಆ ಊರಿನ ಹೊರಗಿರುವ ಉಪವನಕ್ಕೆ ಹೊರಟನು.

೩೨. ಇವರೆಲ್ಲರೂ ಸಿದ್ಧವಾಗಿ ಹೊರಡುವ ಹೊತ್ತಿಗೆ ಸರಿಯಾಗಿ ಒಬ್ಬ ಶಿಷ್ಯನು ಅಲ್ಲಿಗೆ ಬಂದನು. ವಿಶ್ವಾಮಿತ್ರನು ಕಳುಹಿಸಿದ ಈ ಶಿಷ್ಯನನ್ನು ನೋಡಿ ಜನಕನು ಅವನಿಗೆ ನಮಸ್ಕರಿಸಿದನು.

೩೩. ಆ ಶಿಷ್ಯನು ಜನಕನ ಕೈಯ್ಯನ್ನು ತನ್ನ ಕೈಯ್ಯಿಂದ ಹಿಡಿದುಕೊಂಡು ಗೋಪ್ಯವಾದ ಜಾಗಕ್ಕೆ ಕರೆದುಕೊಂಡುಹೋಗಿ ತನ್ನ ಗುರುವು ಹೇಳಿದುದನ್ನು ಸರಿಯಾಗಿ ತಿಳಿಯುವಂತೆ ಹೇಳಿದನು.

೩೪. ಎಲೈ ರಾಜನೆ! ವಿಶ್ವಾಮಿತ್ರನು ನಿನಗೆ ಹೇಳೆಂದು ಹೇಳಿ ಇಂತೆಂದನು–ನಾನು ದಶರಥನ ಮಕ್ಕಳಾದ ರಾಮಲಕ್ಷ್ಮಣರನ್ನು ಕರೆದುಕೊಂಡು ಬಂದಿದ್ದೇನೆ. ಅವರು ಬಹು ಬಲಶಾಲಿಗಳು.

೩೫. ಅವರಿಬ್ಬರೂ ಸೀತೆ ಮತ್ತು ಊರ್ಮಿಳೆಯರನ್ನು ಮದುವೆ ಯಾಗುತ್ತಾರೆ ನೀನು ಬಗ್ಗಿಸಬೇಕೆಂದು ಪಣವಾಗಿಟ್ಟಿರುವ ಶಿವಚಾಪವನ್ನು ಈ ರಾಮನು ಬಗ್ಗಿಸುತ್ತಾನೆ. ಕೊನೆಗೆ ಮುರಿದೂ ಹಾಕುವನು.

ಅತೋ ವರವಿಧಾನೇನ ತೌ ಪುರೀಂ ನೇತುಮರ್ಹಸಿ ।
ಏತದ್ವೃತ್ತಂ ಚಾಪಭಂಗಪರ್ಯಂತಂ ಮಾ ಸ್ಫುಟಂ ಕುರು ॥ ೩೬ ॥

ಇತ್ಯುಕ್ತ್ವಾ ಜನಕಂ ಶಿಷ್ಯಃ ಸ್ವಗುರುಂ ಶೀಘ್ರಮಾಯಯೌ ।
ಜನಕೋಽಪಿ ಮುದಾ ಯುಕ್ತಃ ತೂಷ್ಣೀಮೇವ ನಿಜಾಂ ಪುರೀಂ ॥ ೩೭ ॥

ತೋರಣಾದ್ಯೈಃ ಶೋಭಯಿತ್ವಾ ಸೈನ್ಯೇನ ಪರಿವೇಷ್ಟಿತಃ ।
ವಾರಣೇಂದ್ರಂ ಪುರಸ್ಕೃತ್ಯ ಸಭಾರ್ಯಸ್ತೈರ್ನೃಪೈರ್ಯುತಃ ॥ ೩೮ ॥

ಸುಮೇಧಾದಿಪ್ರಮದಾಭಿರ್ನಾನಾವಾದ್ಯೈರ್ಮನೋಹರೈಃ ।
ವಿಶ್ವಾಮಿತ್ರಾಂತಿಕಂ ಗತ್ವಾ ನತ್ವಾ ಸಂಪೂಜ್ಯ ತಂ ಮುನಿಂ ॥ ೩೯ ॥

ಅಜ್ಞಾತ ಇವ ತಂ ದೃಷ್ಟ್ವಾ ಶ್ರುತ್ವಾ ತದ್ವೃತ್ತಮಾದರಾತ್ ।
ವಸ್ತ್ರಾಲಂಕಾರಭೂಷಾದ್ಯೈಸ್ಸಂಪೂಜ್ಯ ವಿಧಿವನ್ನೃಪಃ ॥ ೪೦ ॥

---

೩೬. ಆದುದರಿಂದ ನೀನು ಅವರನ್ನು ವರನನ್ನು ಕರದುಕೊಂಡು ಹೋಗುವಂತೆ ಉಪಚಾರಮಾಡಿ ಕರೆದುಕೊಂಡು ಹೋಗು. ನಾನು ಹೇಳಿದ ವಿಷಯವನ್ನು ಅವರು ಧನುಸ್ಸನ್ನು ಬಗ್ಗಿಸಿ ಮುರಿಯುವವರೆಗೂ ಪ್ರಕಾಶ ಪಡಿಸಬೇಡ.

೩೭. ಆ ಶಿಷ್ಯನು ಜನಕನಿಗೆ ಇಂತೆಂದು ಹೇಳಿ ತನ್ನ ಗುರುವಾದ ವಿಶ್ವಾಮಿತ್ರನ ಬಳಿಗೆ ಬೇಗನೆ ಹೊರಟುಹೋದನು. ಜನಕನೂ ಕೂಡ ಆ ಋಷಿಯ ಮಾತನ್ನು ಕೇಳಿ ಬಹುವಾಗಿ ಸಂತೋಷಗೊಂಡನು.

೩೮–೩೯. ಒಡನೆಯೇ ತನ್ನ ಪಟ್ಟಣವನ್ನು ತೋರಣ, ಧ್ವಜ ಮುಂತಾದುವುಗಳಿಂದ ಅಲಂಕರಿಸಿ ಸುತ್ತಲೂ ಸೈನ್ಯಗಳನ್ನು ನಿಲ್ಲಿಸಿದನು. ಮತ್ತು ಪಟ್ಟದಾನೆಯನ್ನು ಮುಂದು ಮಾಡಿಕೊಂಡು ಸುಮೇಧೆಯೇ ಮುಂತಾದ ಹೆಂಡತಿಯರು, ಮಂತ್ರಿಗಳು, ಇವರನ್ನು ಕರೆದುಕೊಂಡು ವಾದ್ಯಸಮೇತವಾಗಿ ಹೋಗಿ ವಿಶ್ವಾಮಿತ್ರನನ್ನು ಎದುರುಗೊಂಡು ಅವನಿಗೆ ನಮಸ್ಕರಿಸಿ ಪೂಜಿಸಿದನು.

೪೦. ಜನಕನು ಆ ವಿಶ್ವಾಮಿತ್ರನನ್ನು ಏನೂ ತಿಳಿಯದವನಂತೆ ನೋಡಿ, ಅವನ ವಿಷಯಗಳನ್ನು ಆದರದಿಂದ ಕೇಳಿ ವಸ್ತ್ರ, ಅಲಂಕಾರ, ಭೂಷಣ ಇವುಗಳಿಂದ ವಿಧಿವತ್ತಾಗಿ ಪೂಜಿಸಿದನು.

ಗಜಯೋಸ್ತೌ ಸಮಾರೋಪ್ಯ ಚಾಮರಾದ್ಯೈಸ್ಸವೀಜಿತೌ ।
ವಿಶ್ವಾಮಿತ್ರೇಣ ಮುನಿನಾ ನಿನಾಯ ಮಿಥಿಲಾಂ ಪುರೀಂ ॥ ೪೧ ॥

ನನೃತುರ್ವಾರನಾರ್ಯಶ್ಚ ತುಷ್ಟುವುರ್ವಂದಿಮಾಗಧಾಃ ।
ನೇದುರ್ನಾನಾಸುವಾದ್ಯಾನಿ ಜಗುಸ್ತೇ ತು ನಟಾದಯಃ ॥ ೪೨ ॥

ತದಾ ತೌ ಹಟ್ಟಮಾರ್ಗೇಣ ಜಗ್ಮತುಶ್ಚಾತಿಶೋಭಿನೌ ।
ಶ್ರುತ್ವಾ ಚ ಪುರನಾರ್ಯಶ್ಚ ವೀರೌ ಶ್ರೀರಾಮಲಕ್ಷ್ಮಣೌ ॥ ೪೩ ॥

ಸಮಾಗತಾವಿತಿ ಮುದಾ ಗೋಪುರಾಟ್ಟಾಲಸಂಸ್ಥಿತಾಃ ।
ಕಂಜನೇತ್ರೈರ್ದದೃಶುಸ್ತೇ ವವರ್ಷುಃ ಪುಷ್ಪವೃಷ್ಟಿಭಿಃ ॥ ೪೪ ॥

---

೪೧. ಮತ್ತು ಆ ರಾಮಲಕ್ಷ್ಮಣರನ್ನು ಅವರ ಗೌರವಕ್ಕೆ ತಕ್ಕಂತೆಯೂ ಹಿಂದೆ ಹೇಳಿದಂತೆಯೂ ಪೂಜಿಸಿ ಅವರನ್ನು ಆನೆಯಮೇಲೆ ಕೂರಿಸಿ ಚಾಮರಗಳಿಂದ ಬೀಸಿಸುತ್ತ ಜೊತೆಯಲ್ಲಿ ವಿಶ್ವಾಮಿತ್ರನನ್ನೂ ಕರೆದುಕೊಂಡು ಪಟ್ಟಣಕ್ಕೆ ಬಿಜಯ ಮಾಡಿಸಿದನು.

೪೨. ಆಗ ಉದ್ದಕ್ಕೂ ಸೂಳೆಯರು ಕುಣಿಯುತ್ತಿದ್ದರು. ವಂದಿಗಳೂ ಮಾಗಧರೂ ಹೊಗಳುತ್ತಿದ್ದರು. ಅನೇಕ ಬಗೆಯ ಉತ್ತಮ ವಾದ್ಯಗಳು ಧ್ವನಿ ಮಾಡುತ್ತಿದ್ದುವು. ನಟರೇ ಮುಂತಾದವರು ಹಾಡುತ್ತಿದ್ದರು.

೪೩. ಆಗ ರಾಜಕುಮಾರರು ರಾಜಬೀದಿಯ ಮಾರ್ಗದಿಂದ ಹೋಗುತ್ತಿದ್ದರು. ಆಗ ರಾಮಲಕ್ಷ್ಮಣರು ನೋಡಲು ಬಹು ಚೆನ್ನಾಗಿದ್ದರು. ಈ ರಾಮಲಕ್ಷ್ಮಣರು ಬರುತ್ತಿರುವುದನ್ನು ಕೇಳಿ ಪಟ್ಟಣದ ಹೆಂಗಸರು ಅವರನ್ನು ನೋಡಲು ಬಂದರು.

೪೪. ಹಾಗೆ ಅವರೆಲ್ಲರೂ ಬಂದು ಇವರನ್ನು ನೋಡಲು ಮಹಡಿಯ ಮೇಲೆಯೂ, ಗೋಪುರಗಳ ಮೇಲೆಯೂ ನಿಂತರು. ಅವರೆಲ್ಲರೂ ಕಾಡಿಗೆಯನ್ನು ಇಟ್ಟುಕೊಂಡಿರುವ ಕಣ್ಣುಗಳಿಂದ ನೋಡುತ್ತ ಅವರ ಮೇಲೆ ಹೂಮಳೆಗರೆದರು.

ತತಃ ಪರಸ್ಪರಂ ಪ್ರೋಚುಸ್ಸೀತಾಯೋಗ್ಯೋ ವರಸ್ತ್ವಯಂ ।
ರಾಮೋಽಸ್ಮಾಕಂ ರೋಚತೇ ಹಿ ಕರೋತ್ವೇವಂ ವಿಧಿಸ್ತು ಸಃ ॥ ೪೫ ॥

ಊರ್ಮಿಲಾಯಾಸ್ತು ಯೋಗ್ಯೋಽಯಂ ಲಕ್ಷ್ಮಣೋಽಸ್ತಿ ಸುಲಕ್ಷಣಃ ।
ಅಸ್ಮಾಕಂ ಸುಕೃತೈರದ್ಯ ತಯೋರೇತೌ ಪತೀ ಶುಭೌ ॥ ೪೬ ॥

ಶ್ರೀರಾಮಲಕ್ಷ್ಮಣೌ ರಮ್ಯೌ ಭವತಶ್ಚೋತ್ತಮೌತ್ತಮೌ ।
ಏವಂ ತಾಸಾಂ ಕಾಮಿನೀನಾಂ ವಚನಾನಿ ನೃಪಾತ್ಮಜೌ ॥ ೪೭ ॥

ಶುಶ್ರುವತುಶ್ಶುಭಾನ್ಯೇವ ಹ್ಯೂರ್ಧ್ವಾಸ್ಯೌ ತೌ ದದರ್ಶತುಃ ।
ತತಸ್ತೇ ಮಿಲಿತಾಸ್ಸರ್ವೇ ನೃಪಾಃ ಪ್ರೋಚುಃ ಪರಸ್ಪರಂ ॥ ೪೮ ॥

---

೪೫. ಆಗ ಹೆಂಗಸರೆಲ್ಲರೂ ಒಬ್ಬರಿಗೊಬ್ಬರು ಇವನು ಸೀತೆಗೆ ತಕ್ಕ ವರನು ಎಂದು ಹೇಳಿಕೊಳ್ಳುತ್ತಿದ್ದರು. ನಮಗೇನೋ ರಾಮನು ಚೆನ್ನಾಗಿ ಕಾಣುತ್ತಾನೆ. ದೇವರೂ ಹಾಗೆಯೇ ಮಾಡಲಿ!

೪೬. ಈ ಲಕ್ಷ್ಮಣನು ಒಳ್ಳೆಯ ಲಕ್ಷಣವುಳ್ಳವನಾಗಿದ್ದಾನೆ. ಇವನು ನಮ್ಮ ಊರ್ಮಿಳೆಗೆ ಯೋಗ್ಯನಾಗಿದ್ದಾನೆ. ನಮ್ಮಗಳ ಪುಣ್ಯದಿಂದಲೇ ಅವರಿಗೆ ಇವರು ಪತಿಯಾಗಲು ಬಂದಿರುವಂತಿದೆ.

೪೭. ಈ ರಾಮಲಕ್ಷ್ಮಣರು ಉತ್ತಮರಲ್ಲಿಯೂ ಉತ್ತಮರಾಗಿರುವರು. ಆ ಹೆಂಗಸರು ಹೀಗೆ ಮಾತಾಡುತ್ತಿರುವುದನ್ನು ಈ ರಾಜಪುತ್ರರು ಕೇಳುತ್ತ ಹೋಗುತ್ತಿದ್ದರು

೪೮. ಅವರು ಹೇಳುವ ಈ ಮಾತುಗಳನ್ನು ಕೇಳುತ್ತ ತಲೆಯನ್ನು ಮೇಲಕ್ಕೆ ಎತ್ತಿಕೊಂಡು ಅವರನ್ನು ನೋಡುತ್ತಿದ್ದರು. ಅನಂತರ ಆ ರಾಜರೆಲ್ಲರೂ ಒಟ್ಟಿಗೆ ಸೇರಿಕೊಂಡು ಒಬ್ಬರಿಗೊಬ್ಬರು ಇಂತೆಂದು ಮಾತನಾಡಿಕೊಳ್ಳುತ್ತಿದ್ದರು.

ಏತಾದೃಶೋ ವಿದೇಹೇನ ಯದಾಸ್ಮಾಭಿಸ್ಸಮಾಗತಂ ।
ತದೋತ್ಸವ ಕೃತೋ ನೈವ ಹ್ಯನಯೋಃ ಕ್ರಿಯತೇ ಕಥಂ ॥ ೪೯ ॥

ಕಿಮಂತಸ್ಥೇನ ರಾಜ್ಞಾದ್ಯ ಸೀತಾ ರಾಮಾಯ ಸಾರ್ಪಿತಾ ।
ಕಿಮಸ್ಮಾಕಂ ಸಮಾಹೂಯ ಮಾನಭಂಗೋದ್ಯ ನಃ ಕೃತಃ ॥ ೫೦ ॥

ಏವಂ ತೇಷಾಂ ನೃಪಾಣಾಂ ಚ ವಚನಾನಿ ನೃಪಾತ್ಮಜೌ ।
ಜನಕೋ ಗಾಧಿಜಶ್ಚಾಪಿ ಶುಶ್ರುವುಸ್ತೇ ಸಮಂತತಃ ॥ ೫೧ ॥

ತತಶ್ಶನೈಶ್ಶನೈರ್ವೀರೌ ಗವಾಕ್ಷೈಃ ಸ್ತ್ರೀಭಿರೀಕ್ಷಿತೌ ।
ಜಗ್ಮತುರ್ವಾದ್ಯಘೋಷಾದ್ಯೈರ್ಜನಕಸ್ಯ ಸಭಾಂ ಪ್ರತಿ ॥ ೫೨ ॥

ತತೋಽವತರತುರ್ವೀರೌ ಗಜಾಭ್ಯಾಂ ಮುನಿನಾ ಸಹ ।
ತತ್ಸ್ವಯಂವರಶಾಲಾಯಾಂ ಸೂಪವಿಷ್ಟೇಷು ರಾಜಸು ॥ ೫೩ ॥

---

೪೯. ನಾವುಗಳು ಬಂದಾಗ ನಮ್ಮೊಬ್ಬರಿಗೂ ಇಂತಹ ಉತ್ಸವವನ್ನು ವಿದೇಹನು ಮಾಡಲೇ ಇಲ್ಲ. ಇವರಿಬ್ಬರೂ ಬಂದಾಗ ಈ ರೀತಿಮಾಡಲು ಕಾರಣವೇನು ?

೫೦. ಇದೇನು ? ಈ ರಾಜನಾದ ವಿದೇಹನು ಮನಸ್ಸಿನಲ್ಲಿಯೇ ಸೀತೆಯನ್ನು ರಾಮನಿಗೆ ಕೊಟ್ಟುಬಿಟ್ಟಿರುವನೊ ? ಈತನು ನಮ್ಮನ್ನೇಕೆ ಈಗ ಕರೆದು ಅವಮಾನವನ್ನು ಮಾಡಬೇಕಾಗಿದ್ದಿತು ?

೫೧. ಆ ರಾಜರು ಈ ರೀತಿಯಾಗಿ ಮಾತನಾಡಿಕೊಳ್ಳುತ್ತಿದ್ದುದನ್ನು ಆ ರಾಮಲಕ್ಷ್ಮಣರೂ ವಿಶ್ವಾಮಿತ್ರನೂ ಜನಕನೂ ಕೇಳುತ್ತ ಹೋಗುತ್ತಿದ್ದರು.

೫೨. ಅನಂತರ ಹೆಂಗಸರು ಗವಾಕ್ಷಗಳಿಂದ ನೋಡುತ್ತಿರಲು ಈ ರಾಮಲಕ್ಷ್ಮಣರು ಮೆಲ್ಲಮೆಲ್ಲಗೆ ಜನಕನ ಸಭೆಗೆ ಹೋಗುತ್ತಿದ್ದರು. ಆಗ ವಾದ್ಯಗಳು ಮೊಳಗುತ್ತಿದ್ದುವು.

೫೩. ಅನಂತರ ವಿಶ್ವಾಮಿತ್ರನೂ, ರಾಮಲಕ್ಷ್ಮಣರೂ ಆನೆಯಿಂದ ಇಳಿದರು. ಆಗ ಸ್ವಯಂವರ ಶಾಲೆಯಲ್ಲಿ ರಾಜರೆಲ್ಲರೂ ಕುಳಿತಿದ್ದರು.

ವಿಶ್ವಾಮಿತ್ರಾನುಗೌ ತೌ ಹಿ ಮುನಿಶಾಲಾಂ ಪ್ರಜಗ್ಮತುಃ ।
ಋದ್ಧಾಯಾಂ ಮುನಿಶಾಲಾಯಾಂ ಮುನೇರಗ್ರೇ ನಿಷೀದತುಃ । ॥ ೫೪ ॥

ಏವಂ ಸಭಾಯಾಮೃದ್ಧಾಯಾಂ ರಾಜ್ಞಾ ಕನ್ಯಾಪ್ರತಿಗ್ರಹೇ ।
ಪ್ರತಿಜ್ಞಾತಂ ಮಮ ಧನುಸ್ತತ್ಸಜ್ಜತ್ವಮುಪಸ್ಥಿತಂ ॥ ೫೫ ॥

ಯದಾಧೀತಾ ಧನುರ್ವಿದ್ಯಾ ಮತ್ತಃ ಪರಶುಧಾರಿಣಾ ।
ತದಾ ದತ್ತಂ ಮಯಾ ತಸ್ಮೈ ಧನುಸ್ತ್ರಿಪುರದಾಹಕಂ ॥ ೫೬ ॥

ತೇನೈಕವಿಂಶದ್ವಾರಂ ಹಿ ನಿಕ್ಷತ್ರೀ ಪೃಥಿವೀ ಕೃತಾ ।
ಸಹಸ್ರಬಾಹುರ್ನಿಹತಃ ಸ್ವಪಿತುರ್ಘಾತಕಾರಣಾತ್ ॥ ೫೭ ॥

---

೫೪. ಈ ರಾಮಲಕ್ಷ್ಮಣರು ವಿಶ್ವಾಮಿತ್ರನ ಜೊತೆಯಲ್ಲಿ ಮುನಿಶಾಲೆಗೆ ಹೋದರು. ಆ ದೊಡ್ಡದಾಗಿರುವ ಮುನಿಶಾಲೆಯಲ್ಲಿ ಆ ವಿಶ್ವಾಮಿತ್ರಮುನಿಯ ಮುಂಭಾಗದಲ್ಲಿ ಕುಳಿತರು.

೫೫. ರಾಜಪುತ್ರಿಯ ಸ್ವಯಂವರದಲ್ಲಿ ಈ ರೀತಿಯಾಗಿ ಸಭೆಯು ಸೇರಿ ರಂಜಿಸುತ್ತಿರಲು, ಆಗ ಜನಕನು ಪ್ರತಿಜ್ಞೆ ಮಾಡಿ ಇಟ್ಟಿದ್ದ ಶಿವಧನುಸ್ಸು ಸಿದ್ಧವಾಗಿದ್ದಿತು. ಅದನ್ನು ಬಗ್ಗಿಸುವ ಕಾಲವು ಬಂದಿತು.

೫೬. ಎಲೈ ಪಾರ್ವತಿಯೆ ! ಪರಶುರಾಮನು ನನ್ನಲ್ಲಿ ಧನುರ್ವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದಾಗ ಅವನಿಗೆ ತ್ರಿಪುರದಹನಮಾಡಿದ ನನ್ನ ಧನುಸ್ಸನ್ನು ಕೊಟ್ಟೆನು.

೫೭. ಪರಶುರಾಮನು ಆ ಧನುಸ್ಸನ್ನು ತೆಗೆದುಕೊಂಡು ಇಪ್ಪತ್ತೊಂದು ಸಾರಿ ಭೂಮಿಯಲ್ಲಿರುವ ಕ್ಷತ್ರಿಯರನ್ನೆಲ್ಲಾ ಕೊಂದು ಕ್ಷತ್ರಿಯರು ಇಲ್ಲದಂತೆ ಮಾಡಿದನು. ಆಗ ಸಹಸ್ರ ಬಾಹುವುಳ್ಳ ಕಾರ್ತವೀರ್ಯಾರ್ಜುನನನ್ನು ಅವನು ತನ್ನ ತಂದೆಯನ್ನು ಕೊಂದ ಕಾರಣವನ್ನು ಇಟ್ಟುಕೊಂಡು ಕೊಂದನು.

ತಸ್ಮೈಥಿಲಾಂಗಣೇ ಸ್ಥಾಪ್ಯ ಜಾಮದಗ್ನ್ಯೋ ನೃಪಂ ಯಯೌ |
ಅಶ್ವವತ್ತದ್ಧನುಃ ಕೃತ್ವಾ ಜಾನಕೀ ಕ್ರೀಡನಂ ವ್ಯಧಾತ್ || ೫೮ ||

ಜಾಮದಗ್ನ್ಯಸ್ತೇನ ಸೀತಾಂ ಜ್ಞಾತ್ವಾ ಲಕ್ಷ್ಮೀಂ ತದಿಚ್ಛಯಾ |
ದದೌ ನೃಪಂ ಪಣಾರ್ಥಂ ತದ್ಧನುರನ್ಯೈರ್ದುರಾಸದಂ || ೫೯ ||

ಪಣೀಕೃತಂ ಧನುಸ್ತಚ್ಚ ವಿದೇಹೇನ ಸ್ವಯಂವರೇ |
ತತಸ್ಸಭಾಯಾಮ್ಯುದ್ಧಾಯಾಂ ಜನಕಃ ಪ್ರಾಹ ಶಂಕಿತಃ || ೬೦ ||

ಸಂಸ್ಥಾಪ್ಯ ರಾಜ್ಞಾಂ ಪುರತಸ್ತನ್ಮೇ ಚಾಪಮನುತ್ತಮಂ |
ಶಸ್ತ್ರಾಗಾರಾತ್ಸಮಾನೀತಂ ವೃಷೈಃ ಪಂಚಶತೈಸ್ತು ಯತ್ || ೬೧ ||

---

೫೮. ಇಂತಹ ಧನುಸ್ಸನ್ನು ಕಡೆಯಲ್ಲಿ ಒಂದು ಸಾರಿ ಮೈಥಿಲನ ಮನೆಯಲ್ಲಿಟ್ಟು ಪರಶುರಾಮನು ಜನಕನನ್ನು ನೋಡಲು ಒಳಕ್ಕೆ ಹೋದನು. ಆಗ ಜಾನಕಿಯು ಆ ಧನುಸ್ಸನ್ನು ತೆಗೆದುಕೊಂಡು ಅದನ್ನು ಕುದುರೆಯಂತೆ ಮಾಡಿಕೊಂಡು ಆಟವಾಡಿದಳು.

೫೯. ಆ ಧನುಸ್ಸನ್ನು ಎತ್ತಿಕೊಂಡು ಸೀತೆಯು ಆಟವಾಡುತ್ತಿರಲು ಇದನ್ನು ಪರಶುರಾಮನು ನೋಡಿ ಇದನ್ನು ಎತ್ತಿರುವುದಕ್ಕೆ ಆಶ್ಚರ್ಯಪಡುತ್ತ ಯೋಚಿಸಿ ನೋಡಲು ಸೀತೆಯು ಸಾಕ್ಷಾತ್ ಲಕ್ಷ್ಮಿಯೆಂದೇ ಗೊತ್ತಾಯಿತು. ಆಗ ಧನುಸ್ಸನ್ನು “ ಇದನ್ನು ಸೀತೆಯ ವಿವಾಹಕ್ಕೆ ಪಣವನ್ನಾಗಿ ಇಡು ” ಎಂದು ಜನಕನಿಗೆ ಕೊಟ್ಟನು.

೬೦. ಅದೇ ಧನುಸ್ಸನ್ನು ಈಗ ಸ್ವಯಂವರ ಕಾಲದಲ್ಲಿ ಪಣವನ್ನಾಗಿ ಇಟ್ಟನು. ಈಗ ರಾಜರೂ ರಾಜಪುತ್ರರೂ ವೈದಿಕರೂ ಲೌಕಿಕರೂ ಪಟ್ಟಣಿಗರೂ ಎಲ್ಲರೂ ಬಂದು ಸಭೆಯು ರಂಜಿಸುತ್ತಿರಲು ಜನಕನು ಮನಸ್ಸಿನಲ್ಲಿ ಸ್ವಲ್ಪ ಸಂದೇಹವನ್ನು ಪಡುತ್ತ ಆಳುಗಳಿಗೆ ಧನುಸ್ಸನ್ನು ತರಲು ಹೇಳಿದನು.

೬೧. ಒಡನೆಯೇ ಆಳುಗಳು ಶಸ್ತ್ರದ ಮನೆಯಿಂದ ಐನೂರು ಹೋರಿಗಳ ಸಹಾಯದಿಂದ ಆ ಧನುಸ್ಸನ್ನು ತಂದರು. ಪರಶುರಾಮನು ಕೊಟ್ಟಿದ್ದ ಅಂತಹ ಧನುಸ್ಸನ್ನು ಆ ರಾಜರುಗಳ ಎದುರಿಗೆ ಇಟ್ಟು ಇಂತೆಂದನು.

ಸೀತಾಸ್ವಯಂವರಾರ್ಥಂ ಯನ್ನ್ಯಸ್ತಂ ಪರಶುಧಾರಿಣಾ ।
ನೃಪಃ ಪ್ರಾಹ ಸಭಾಮಧ್ಯೇ ಯೋ ವೀರಸ್ತ್ವದ್ಯ ಸಂಸದಿ ॥ ೬೨ ॥

ಕರಿಷ್ಯತಿ ಧನುಸ್ಸಜ್ಜಂ ತಂ ಮೇ ಸೀತಾ ವರಿಷ್ಯತಿ ।
ತತ್ತಸ್ಯ ವಚನಂ ಶ್ರುತ್ವಾ ಧನುರ್ದೃಷ್ಟ್ವಾಚಲೋಪಮಂ ॥ ೬೩ ॥

ಅಧೋಮುಖಾಸ್ತದಾ ಸರ್ವೇ ಬಭೂವುಃ ಪಾರ್ಥಿವೋತ್ತಮಾಃ ।
ಕೇಚಿದ್ಭೂಮೇಸ್ಸಮುದ್ವೋಢುಂ ಧನುಶ್ಶಕ್ತಾ ನ ಚಾಭವನ್ ॥ ೬೪ ॥

ಭೂಮೇರುಚ್ಚಾಲಿತೇ ಕೇಚಿದೂರ್ಧ್ವಂ ನೇತುಂ ನ ಚಾಶಕನ್ ।
ಸರ್ವೇಪ್ಯುಚ್ಚಾಲನೇ ತಸ್ಯ ನೃಪಾಶ್ಶಕ್ತಾ ನ ಚಾಭವನ್ ॥ ೬೫ ॥

ಸಜ್ಜೀಕಾರಃ ಕುತಸ್ತಸ್ಯ ಮನಸಾಪ್ಯವಿಚಿಂತಿತಃ ।
ಧನುಸ್ಸಜ್ಜೀಕೃತೌ ಸರ್ವಾನ್ನೃಪಾನ್ ಜ್ಞಾತ್ವಾ ಪರಾಙ್ಮುಖಾನ್ ॥ ೬೬ ॥

೬೨–೬೩ ಎಲೈ ಸಭಿಕರಿರಾ! "ಈ ಸಭೆಯಲ್ಲಿ ಯಾವ ವೀರನು ಈ ಧನುಸ್ಸನ್ನು ಹೆದೆಯೇರಿಸುವನೋ ಆ ವೀರನನ್ನು ನನ್ನ ಸೀತೆಯು ವರಿಸುವಳು." ಎಂದೆನಲು ಆ ಜನಕನ ಮಾತನ್ನು ಕೇಳಿ ಎಲ್ಲರೂ ಆ ಧನುಸ್ಸನ್ನೇ ನೋಡಿದರು. ಅದು ಪರ್ವತದಂತೆ ಇದ್ದಿತು.

೬೪. ಆಗ ಅಲ್ಲಿದ್ದ ಶೂರರಾದ ರಾಜರೂ ಕೂಡ ತಲೆಯನ್ನು ಬಗ್ಗಿಸಿಕೊಂಡು ಕುಳಿತರು. ಕೆಲವರು ಆ ಧನುಸ್ಸಿನ ಬಳಿಗೆ ಹೋಗಿ ಅದನ್ನು ನೆಲದಿಂದ ಮೇಲಕ್ಕೆ ಎತ್ತಲು ಕೂಡ ಕೈಲಾಗದವರಾದರು.

೬೫. ಕೆಲವರು ನೆಲದಿಂದ ಮೇಲಕ್ಕೆ ಎತ್ತಿ ಅಲ್ಲಾಡಿಸಿದರೂ ನಿಲ್ಲಿಸುವುದಕ್ಕೆ ಕೈಲಾಗದವರಾದರು. ಕೊನೆಗೆ ಎಲ್ಲಾ ರಾಜರೂ ಸೇರಿಕೊಂಡು ಎತ್ತಿದರೂ ಕೂಡ ಅಲ್ಲಾಡಿಸುವುದಕ್ಕೇ ಆಗಲಿಲ್ಲ.

೬೬. ಹೀಗಿರುವಲ್ಲಿ ಆ ಧನುಸ್ಸಿನ ಹೆದೆಯೇರಿಸುವಿಕೆಯನ್ನು ಮನಸ್ಸಿನಿಂದಲೂ ಊಹಿಸುವುದಕ್ಕೆ ಆಗುತ್ತಿರಲಿಲ್ಲ. ಎಲ್ಲರೂ ಬೇರೆ ಬೇರೆಯಾಗಿಯೂ, ಒಟ್ಟಾಗಿಯೂ ಸೇರಿ ಪ್ರಯತ್ನಪಟ್ಟರು. ಕೊನೆಗೆ ಯಾವರೀತಿಯಲ್ಲಿಯೂ ಸಾಧ್ಯವಾಗಲಿಲ್ಲ ಎಂಬುದು ತಿಳಿಯಬಂದಿತು.

ತದಾತಿಗರ್ವಸಂರೂಢಸ್ಸಭಾಯಾಂ ರಾವಣೋಽಬ್ರವೀತ್ ।
ಧನುಷಸ್ಸನ್ನಿಧಿಂ ಗತ್ವಾ ವಿಹಸನ್ ಜನಕಂ ಪ್ರತಿ ॥ ೬೭ ॥

ಯೇನ ವೈ ನಿರ್ಜಿತಾ ದೇವಾಸ್ತ್ರೈಲೋಕ್ಯಂ ಸ್ವವಶೇ ಕೃತಂ ।
ಆಂದೋಲಿತೋ ಭುಜಾಭಿರ್ಹಿ ಕೈಲಾಸೋ ಯೇನ ವೈ ಮಯಾ ॥ ೬೮ ॥

ತಸ್ಯ ಮೇ ಜನಕಾದ್ಯ ತ್ವಂ ಬಲಂ ಪಾರ್ಥಿವಸಂಸದಿ ।
ದೃಷ್ಟುಮಿಚ್ಛಸಿ ಕಿಂ ತ್ವಸ್ಮಿನ್ ಲಘುಚಾಪೇ ತೃಣೋಪಮೇ ॥ ೬೯ ॥

ಏವಂ ವದನ್ ದಶಾಸ್ಯಸ್ಸ ನಮ್ರೋಭೂತ್ವಾ ಮಹದ್ಧನುಃ ।
ಗೃಹೀತುಂ ವಾಮಹಸ್ತೇನ ಚಾಲಯಾಮಾಸ ವೈ ತದಾ ॥ ೭೦ ॥

ನ ತಚ್ಚಚಾಲ ಕಿಂಚಿಚ್ಚ ತದಾ ದಕ್ಷಿಣಸತ್ಕರಂ ।
ಪುರಃಕೃತ್ವಾ ಗೃಹೀತುಂ ತಚ್ಚಾಲಯಾಮಾಸ ವೈ ಪುನಃ ॥ ೭೧ ॥

---

೬೭. ಆಗ ಬಹು ಗರ್ವಿಷ್ಠನಾದ ರಾವಣನು ಆ ಸಭೆಯಲ್ಲಿ ಎದ್ದು ನಿಂತು ಎಲ್ಲರನ್ನೂ ತಿರಸ್ಕಾರದ ನಗುವಿನಿಂದ ನೋಡಿ ತಿರಸ್ಕರಿಸುತ್ತ ಧನುಸ್ಸಿನ ಬಳಿಗೆ ಹೋಗಿ ಜನಕನನ್ನು ನೋಡಿ ನಗುತ್ತ ಇಂತೆಂದನು.

೬೮. ಎಲೈ ಜನಕನೆ! ನಾನು ದೇವತೆಗಳನ್ನೆಲ್ಲಾ ಸೋಲಿಸಿರುವೆನು. ಮೂರು ಲೋಕವನ್ನೂ ನನ್ನ ವಶದಲ್ಲಿ ಇಟ್ಟುಕೊಂಡಿರುವೆನು. ಆ ಕೈಲಾಸ ಪರ್ವತವನ್ನೇ ನಾನು ನನ್ನ ತೋಳುಗಳಿಂದ ತೂಗಿರುವೆನು.

೬೯. ಅಂತಹ ಶೂರನಾದ ನನ್ನ ಬಲವನ್ನು ಈ ರಾಜರಸಭೆಯಲ್ಲಿ ಈ ಸಣ್ಣ ಧನುಸ್ಸಿನಲ್ಲಿ ನೋಡಬೇಕೆಂದು ಇಚ್ಛಿಸುತ್ತಿರುವೆ! ಆದರೆ ಅಂತಹ ನನ್ನ ಬಲಕ್ಕೆ ಈ ಧನುಸ್ಸು ಸಮವಾದುದಲ್ಲ! ಇದು ಹುಲ್ಲುಕಡ್ಡಿಯಂತಿರುವುದು. ಇದರಲ್ಲಿ ನೀನು ನನ್ನ ಬಲವನ್ನು ತಿಳಿಯುವುದು ತಾನೆ ಹೇಗೆ?

೭೦. ಎಂಬುದಾಗಿ ಹೇಳುತ್ತ ದಶಾಸ್ಯನು ಆ ದೊಡ್ಡ ಧನುಸ್ಸನ್ನು ಎತ್ತಲು ನೆಲಕ್ಕೆ ಬಗ್ಗಿ ತೆಗೆದುಕೊಳ್ಳಲು ಎಡಗೈಯ್ಯನ್ನು ನೀಡಿ ಅಲ್ಲಾಡಿಸಿದನು.

೭೧. ಆಗ ಅದು ಸ್ವಲ್ಪವೂ ಅಲ್ಲಾಡದಿರಲು ಆಮೇಲೆ ತನ್ನ ಬಲಿಷ್ಠವಾದ ಬಲಗೈಯನ್ನೂ ಮುಂದೆ ನೀಡಿ ಅದರಿಂದಲೂ ಎತ್ತಲು ಹಿಡಿದು ಅಲ್ಲಾಡಿಸಿದನು.

ನ ತಚ್ಚಚಾಲ ತದಪಿ ತದಾಶ್ಚರ್ಯೇಣ ರಾವಣಃ ।
ಭುಜಾಭ್ಯಾಂ ಚಾಲಯಾಮಾಸ ತದಾ ಚಾಪಂ ಚಚಾಲ ನ ॥ ೭೨ ॥

ಏವಂ ಕ್ರಮೇಣ ಸರ್ವಾಭಿರ್ಭುಜಾಭಿಶ್ಚಾಲಯನ್ ಧನುಃ ।
ವಿಂಶದ್ದೋರ್ಭಿರೇಕದೇಶಂ ಚಾಪಸ್ಯೋರ್ಧ್ವಂ ಚಕಾರ ಸಃ ॥ ೭೩ ॥

ಏಕೋನವಿಂಶತಿರ್ದ್ದೋರ್ಭಿರ್ಧೃತ್ವಾ ಚೈವ ಚ ತದ್ಧನುಃ ।
ಗುಣಂ ಭೂಮ್ಯಾಂ ನಿಪತಿಂ ಗೃಹೀತುಂ ಹಿ ದಶಾನನಃ ॥ ೭೪ ॥

ಕಿಂಚಿದ್ಭೂತ್ವಾ ವಿನಮ್ರಸ್ಯ ದೋಷ್ಣಾ ಜಗ್ರಾಹ ತಂ ಗುಣಂ ।
ಏತಸ್ಮಿನ್ನಂತರೇ ತಚ್ಚ ಪಪಾತ ಹೃದಯೇ ಧನುಃ ॥ ೭೫ ॥

---

೭೨. ಆಗಲೂ ಕೂಡ ಅದು ಅಲ್ಲಾಡಲೇ ಇಲ್ಲ. ಆಗ ರಾವಣನು ಬಹುವಾಗಿ ಆಶ್ಚರ್ಯಪಡುತ್ತ ಭುಜವನ್ನೇ ಕೊಟ್ಟು ಅಲ್ಲಾಡಿಸಿದನು. ಆಗಲೂ ಆ ಚಾಪವು ಅಲ್ಲಾಡಲೇ ಇಲ್ಲ.

೭೩. ಹೀಗೆ ಅಲ್ಲಾಡದಿರಲು ಎರಡು ತೋಳಾಗುತ್ತಲೂ, ಮೂರು ತೋಳು, ಮೂರರಲ್ಲೂ ಆಗದಿರಲು, ನಾಲ್ಕನೆಯದು ಈ ರೀತಿಯಾಗಿ ತನ್ನ ಇಪ್ಪತ್ತು ತೋಳುಗಳನ್ನೂ ಹಾಕಿ ಅಲ್ಲಾಡಿಸಿದನು. ಆಗ ಧನುಸ್ಸನ್ನು ನಿಲ್ಲಿಸಲು ಪ್ರಯತ್ನಪಟ್ಟು ಎತ್ತಿ ನಿಲ್ಲಿಸಿದನು. ಆದರೂ ಪೂರ್ತಿಯಾಗಿ ಎತ್ತುವುದಕ್ಕಾಗದೆ ಒಂದು ಕಡೆಯನ್ನು ಮಾತ್ರ ಮೇಲಕ್ಕೆತ್ತಿ ನಿಲ್ಲಿಸಿದನು.

೭೪. ಇಪ್ಪತ್ತು ತೋಳುಗಳಿಂದಲೂ ನಿಲ್ಲಿಸಿ ಅನಂತರ ಅದನ್ನು ಹಾಗೆಯೇ ಹತ್ತೊಂಬತ್ತು ತೋಳುಗಳಿಂದ ಹಿಡಿದು ನಿಲ್ಲಿಸಿಕೊಂಡು ಕೆಳಗೆ ಬಿದ್ದಿರುವ ಅದರ ನಾರಿಯ(ಹಗ್ಗವ)ನ್ನು ಎತ್ತಿಕೊಳ್ಳಲು ಒಂದು ಕೈಯ್ಯನ್ನು ನೀಡಿದನು.

೭೫. ಕೈಯ್ಯಿನ ಬೆರಳುಗಳಿಂದ ಸಾಧ್ಯವಾಗದಿರಲು ತೊಲುಗಳಿಂದಲೇ ತೆಗೆಯಲು ಬಗ್ಗಿದನು. ಇಷ್ಟರಲ್ಲಿ ಹತ್ತೊಂಬತ್ತು ತೋಳುಗಳ ಬಿಗಿಯು ಕಡಿಮೆಯಾಗಲು ಆ ಧನುಸ್ಸು ಈ ರಾವಣನ ಎದೆಯಮೇಲೆ ಬಿದ್ದಿತು.

ನ ತದ್ವಿಂಶದ್ಭುಜಾಭಿಶ್ಚ ಚಚಾಲ ಹೃದಯಾದ್ಧನುಃ ।
ತದಾ ಸಭಾಯಾಮೂರ್ಧ್ವಾಸ್ಯಃ ಪಪಾತ ಸ ದಶಾನನಃ ॥ ೭೬ ॥

ಮುಕುಟಃ ಪತಿತೋ ಭೂಮೌ ಮುಕ್ತಕಚ್ಛೋಽಪ್ಯಭೂತ್ತದಾ ।
ತದಾ ವಿಜಹಸುಸ್ಸರ್ವೇ ಸಭಾಯಾಂ ಪಾರ್ಥಿವೋತ್ತಮಾಃ ॥ ೭೭ ॥

ತದಾ ಪ್ರಾಣಾಂತಕಶ್ಚಾಸೀದ್ರಾವಣಸ್ಯ ಸಭಾಂಗಣೇ ।
ಅಕ್ಷಿಣೀ ಭ್ರಾಮಯಾಮಾಸ ಲಾಲಾಸ್ತೇಭ್ಯೋ ವಿನಿರ್ಯಯೌ ॥ ೭೮ ॥

ತದಾ ತಂ ವೇಷ್ಟಯಾಮಾಸುರ್ಮಂತ್ರಿಣೋ ರಾಕ್ಷಸಾಸ್ತದಾ ।
ಧನುರುಚ್ಚಾಲನೇ ಶಕ್ತಾಸ್ತೇಽಭವನ್ನೈವ ಸಂಸದಿ ॥ ೭೯ ॥

---

೭೬. ಆ ಧನುಸ್ಸಿನ ಕೆಳಗೆ ಸಿಕ್ಕಿಕೊಂಡನು. ಅದನ್ನು ನೂಕಿ ಮೇಲಕ್ಕೇಳಲು ತನ್ನ ಇಪ್ಪತ್ತುಕೈಗಳನ್ನು ಉಪಯೋಗಿಸಿ ಪ್ರಯತ್ನಪಟ್ಟನು. ಅದು ಅಲ್ಲಾಡಲೇ ಇಲ್ಲ. ಆಗ ರಾವಣನ ಮೇಲೆ ಧನುಸ್ಸು ಹೇರಿಕೊಂಡಿರಲು ತಾನು ಅಂಗತರನಾಗಿ ಬಿದ್ದು ಮುಖವನ್ನು ಮೇಲಕ್ಕೆ ಮಾಡಿಕೊಂಡಿದ್ದನು.

೭೭. ಆಗ ಕಿರೀಟಗಳು ನೆಲದ ಮೇಲೆ ಬಿದ್ದುಹೋದುವು. ಸೊಂಟಕ್ಕೆ ಕಟ್ಟಿಕೊಂಡಿದ್ದ ಕಚ್ಚೆಯು ಬಿಚ್ಚಿಹೋಯಿತು. ಆಗ ಆ ಸಭೆಯಲ್ಲಿ ಕುಳಿತಿದ್ದ ರಾಜರೆಲ್ಲರೂ ನಕ್ಕರು.

೭೮. ಆಗ ಸಭೆಯ ಮಧ್ಯದಲ್ಲಿ ರಾವಣನಿಗೆ ಪ್ರಾಣವೇ ಹೋಗುವಂತಾಯಿತು. ಕಣ್ಣುಗಳನ್ನು ಮರಳಿಸುತ್ತ ಇದ್ದನು. ಬಾಯಿನಿಂದ ಜೊಲ್ಲು ಸುರಿಯಲು ಮೊದಲಾಯಿತು.

೭೯. ಒಡನೆಯೇ ಅವನ ಮಂತ್ರಿಗಳಾದ ರಾಕ್ಷಸರೆಲ್ಲರೂ ಅವನ ಬಳಿಗೆ ಬಂದು ಸುತ್ತಿಕೊಂಡರು. ಅವರೂ ಕೂಡ ಅವನ ಮೇಲಿನಿಂದ ಆ ಧನುಸ್ಸನ್ನು ತೆಗೆಯಲಾರದವರಾದರು.

ಸಹಸ್ರೇಷು ದಶಾಸ್ಯಸ್ಸ ವಿಷ್ಠಾಮೂತ್ರಂ ತದಾಕರೋತ್ ।
ತತಸ್ಸಭಾಯಾಂ ಜನಕಃ ಪುನಃ ಪ್ರಾಹಾತಿಶಂಕಿತಃ ॥ ೮೦ ॥

ಕೋಽಪಿ ವೀರೋಽಸ್ತಿ ಭೂಮ್ಯಾಂ ವಾ ಕಿಂ ನಿರ್ವೀರಂ ಹಿ ಭೂತಲಂ ।
ಚೇದಸ್ತಿ ಕಶ್ಚಿತ್ಸದಸಿ ತರ್ಹಿ ಸೋಽದ್ಯ ಸಭಾಂಗಣೇ ॥ ೮೧ ॥

ಜೀವದಾನಂ ಕರೋತ್ವಸ್ಮೈ ದಶಾಸ್ಯಾಯ ನೃಪಾಗ್ರತಃ ।
ಇತಿ ವಾಕ್ಯಶರಾಘಾತಭಿನ್ನೌ ತೌ ರಾಮಲಕ್ಷ್ಮಣೌ ॥ ೮೨ ॥

ದದರ್ಶತುರ್ಗಾಧಿಜಸ್ಯ ಮುಖಂ ತೌ ಸ್ಫುರಿತಭ್ರುವೌ ।
ವಿಶ್ವಾಮಿತ್ರಸ್ತದಾ ಪ್ರಾಹ ರಾಮಂ ಚೋತ್ತಿಷ್ಠ ರಾಘವ ॥ ೮೩ ॥

---

೮೦. ಆ ಸಾವಿರಾರು ಮಂದಿಗಳ ಮಧ್ಯದಲ್ಲಿಯೇ ಆ ರಾವಣನು ಆ ಯಾತನೆಯನ್ನು ತಡೆಯಲಾರದೆ ಮಲಮೂತ್ರಗಳ ವಿಸರ್ಜನೆಯನ್ನೂ ಮಾಡಿಕೊಂಡನು ಆಗ ಜನಕನಿಗೆ ಬಹು ಆತಂಕವುಂಟಾಗಿ ಆ ಸಭೆಯವರನ್ನು ಕುರಿತು ಇಂತೆಂದನು.

೮೧-೮೨. "ಈ ಭೂಮಿಯಲ್ಲಿ ಯಾರಾದರೂ ವೀರರಿರುವರೆ? ಅಥವಾ ಭೂಮಿಯೇ ವೀರರಿಲ್ಲದುದಾಯಿತೊ? ಈ ಸಭೆಯಲ್ಲಿ ಅಂತಹ ಶಕ್ತಿವಂತರು ಯಾರಾದರೂ ಇದ್ದರೆ ಈ ರಾಜರ ಎದುರಿಗೆ ಇಲ್ಲಿಗೆ ಬಂದು ಈ ರಾವಣನಿಗೆ ಜೀವದಾನವನ್ನು ಮಾಡಲಿ!" ಈ ರೀತಿಯಾಗಿ ಹೇಳಿದ ಮಾತುಗಳನ್ನು ಕೇಳಿ ರಾಮಲಕ್ಷ್ಮಣರು ಚಾವಟಿಯಿಂದ ಏಟು ಕೊಟ್ಟು ಎಬ್ಬಿಸಿದವರಂತೆ ಆದರು.

೮೩. ಒಡನೆಯೇ ಹುಬ್ಬನ್ನು ಗಂಟಿಕ್ಕಿಕೊಳ್ಳುತ್ತ ತಮ್ಮ ಸ್ಥಿತಿಯನ್ನು ವಿಶ್ವಾಮಿತ್ರನಿಗೆ ತೋರಿಸಿದರು. ಒಡನೆಯೇ ವಿಶ್ವಾಮಿತ್ರನು ರಾಮನನ್ನು ಕುರಿತು ಎಲೈ ರಾಮನೆ! ಮೇಲಕ್ಕೆ ಏಳು.

ಕಿಮಂತಂ ರಾವಣಸ್ಯಾದ್ಯ ತ್ವಂ ಪಶ್ಯಸಿ ಸಭಾಂಗಣೇ ।
ಜೀವಯೈನಂ ರಾಕ್ಷಸೇಂದ್ರಂ ಸಜ್ಜಂ ಕುರು ಧನುಸ್ತ್ವಿದಂ ॥ ೮೪ ॥

ತನ್ಮುನೇರ್ವಚನಂ ಶ್ರುತ್ವಾ ತಥೇತ್ಯುಕ್ತ್ವಾ ಸ ರಾಘವಃ ।
ತದೋತ್ಥಾಯಾಸನಾದ್ವೇಗಾತ್ಪ್ರಣನಾಮ ಮುನೀಶ್ವರಂ ॥ ೮೫ ॥

ನಿಷ್ಕಾಸ್ಯ ಕಂಠಾದ್ಧಾರಾದೀನ್ ಕಟಿಂ ಬದ್ಧ್ವಾ ತದಾ ಪ್ರಭುಃ ।
ಮುಕುಟಾದಿ ದೃಢಂ ಕೃತ್ವಾ ಶನೈಃ ಪ್ರಾಪ ಸಭಾಂಗಣಂ ॥ ೮೬ ॥

ತಂ ರಾಮಮಾಗತಂ ದೃಷ್ಟ್ವಾ ಜನಾಸ್ಸರ್ವೇತಿವಿಸ್ಮಿತಾಃ ।
ಚಕಿತಾಃ ಪಾರ್ಥಿವಾಸ್ಸರ್ವೇ ದದೃಶುರ್ನೇತ್ರಪಂಕಜೈಃ ॥ ೮೭ ॥

---

೮೪. ಇದೇನು ? ಈ ಸಭೆಯಲ್ಲಿ ರಾವಣನು ಸಾಯುತ್ತಿರುವುದನ್ನು ನೋಡುತ್ತಿರುವೆಯಲ್ಲ! ರಾವಣನಿಗೆ ಜೀವದಾನಮಾಡಿ ಬದುಕಿಸು. ಆ ಧನುಸ್ಸನ್ನು ತೆಗೆದು ಹೆದೆಯೇರಿಸು. ಎಂದನು.

೮೫. ವಿಶ್ವಾಮಿತ್ರನ ಈ ಮಾತನ್ನು ಕೇಳಿ ಹಾಗೆಯೇ ಆಗಲೆಂದು ವಿಶ್ವಾಮಿತ್ರನಿಗೆ ಹೇಳುತ್ತ ಆಸನದಿಂದ ಬೇಗನೆ ಎದ್ದು ಆ ವಿಶ್ವಾಮಿತ್ರನಿಗೆ ಮೊದಲು ನಮಸ್ಕರಿಸಿದನು.

೮೬. ಹೊರಡಲು ಸಿದ್ಧನಾಗಿ ಕತ್ತಿನಲ್ಲಿದ್ದ ಹಾರ ಮುಂತಾದುವುಗಳನ್ನು ತೆಗೆದುಹಾಕಿ ಸೊಂಟವನ್ನು ಬಲವಾಗಿ ಕಟ್ಟಿಕೊಂಡು ಮೆಲ್ಲ ಮೆಲ್ಲಗೆ ಸಭೆಯ ಮಧ್ಯಕ್ಕೆ ಹೋದನು.

೮೭. ಆ ರಾಮನು ಬರುತ್ತಿರುವುದನ್ನು ನೋಡಿ ಜನಗಳೆಲ್ಲರೂ ಬಹುವಾಗಿ ಆಶ್ಚರ್ಯಪಟ್ಟರು. ರಾಜರೆಲ್ಲರೂ ಚಕಿತರಾದರು. ಅವನನ್ನು ಕಮಲ ದಂತಿರುವ ಕಣ್ಣುಗಳಿಂದ ಎವೆಯಿಕ್ಕದೆ ನೋಡುತ್ತಿದ್ದರು.

ಪರಸ್ಪರಂ ತದಾ ಪ್ರೋಚುಃ ಕಿಂ ಮೂಢೋಸ್ತಿ ಶಿಶುಸ್ತ್ವಯಂ ।
ಯತ್ರಾಸ್ಮಾಭಿಃ ಸ್ಥಿತಂ ತೂಷ್ಣೀಂ ತತ್ರಾಯಂ ಕಿಂ ಕರಿಷ್ಯತಿ ॥ ೮೮ ॥

ಕೇಚಿದಾಹುರ್ದಶಾಸ್ಯಂ ಹಿ ದ್ರಷ್ಟುಂ ಬಾಲಸ್ಸಮಾಗತಃ ।
ಕೇಚಿದೂಚುರ್ಬಾಲಚೇಷ್ಟಾ ಕ್ರಿಯತೇ ಶಿಶುನಾತ್ರ ಹಿ ॥ ೮೯ ॥

ಕೇಚಿದೂಚುಃ ಕಿಮರ್ಥಂ ಹಿ ಹಾರಾ ಮುಕ್ತಾಸ್ತ್ವನೇನ ಹಿ ।
ಕೇಚಿದೂಚುರ್ಗಾಧಿಜೇನ ಚಾಪಂ ಪ್ರತಿ ಸುಯೋಜಿತಃ ॥ ೯೦ ॥

ಕೇಚಿದೂಚುರ್ವೈರಬುಧ್ಯಾ ಚೋದಿತಃ ಕಿಂ ಶಿಶುಸ್ತ್ವಯಂ ।
ವಧಾರ್ಥಂ ಚಾಪಘಾತೇನ ವಿಶ್ವಾಮಿತ್ರೇಣ ರಾಘವಃ ॥ ೯೧ ॥

---

೮೮. ಆಗ ಒಬ್ಬರಿಗೊಬ್ಬರು ಇಂತೆಂದು ಮಾತನಾಡಿಕೊಳ್ಳುತ್ತಿದ್ದರು. ಕೆಲವರು ಈ ಹುಡುಗನಿಗೇನು ಬುದ್ಧಿಯಿಲ್ಲವೆ ? ಶೂರರಾದ ನಾವುಗಳೇ ಕೈಲಾಗುವುದಿಲ್ಲವೆಂದು ಸುಮ್ಮನಿರುವ ಈ ಕೆಲಸದ ವಿಷಯದಲ್ಲಿ ಚಿಕ್ಕವನಾಗಿರುವ ಇವನೇನು ಮಾಡಬಲ್ಲನು ? ಎನ್ನುತ್ತಿದ್ದರು.

೮೯. ಅದರಲ್ಲಿ ಮತ್ತೆ ಕೆಲವರು ಆ ದಶಾಸ್ಯನನ್ನೇ ನೋಡಲು ಚಾಪಲ್ಯದಿಂದ ಈ ಹುಡುಗನು ಬರುತ್ತಿರುವನು. ಎನ್ನುತ್ತಿದ್ದರು. ಕೆಲವರು ಈ ಹುಡುಗನು ಇಲ್ಲಿಯೂ ಹುಡುಗಾಟವನ್ನೇ ಮಾಡುತ್ತಿರುವನು. ಎನ್ನುತ್ತಿದ್ದರು.

೯೦. ಮತ್ತೆ ಕೆಲವರು ಏತಕ್ಕೋಸ್ಕರ ಹಾರಗಳನ್ನು ತೆಗೆದಿಟ್ಟನು? ಎನ್ನುತ್ತಿದ್ದರು. ಕೆಲವರು ವಿಶ್ವಾಮಿತ್ರನು ಧನುಸ್ಸನ್ನು ಹೆದೆಯೇರಿಸೆಂದು ಹೇಳಿದನು. ಆದುದರಿಂದ ಬರುತ್ತಿರುವನು. ಎನ್ನುತ್ತಿದ್ದರು.

೯೧. ವಿಶ್ವಾಮಿತ್ರನು ಈ ರಾಘವನ ಮೇಲೆ ಯಾವುದೋ ವೈರದಿಂದ "ಆ ಮಗುವು ಚಾಪವನ್ನು ಮೇಲೆ ಹಾಕಿಕೊಂಡು ಸಾಯಲಿ" ಎಂದು ಯೋಚಿಸಿ ಇದನ್ನು ಎತ್ತುವುದಕ್ಕೆ ಕಳುಹಿಸಿರುವನು. ಎಂದು ಮಾತನಾಡಿಕೊಳ್ಳುತ್ತಿದ್ದರು.

ಕೇಚಿದೂಚುರ್ಬಲಂ ತ್ವಸ್ಯ ಮುನಿನಾತ್ರ ನಿರೀಕ್ಷಿತುಂ ।
ಚೋದಿತೋಸ್ತ್ಯತ್ರ ಶ್ರೀರಾಮಶ್ಚಾಪೇಽಯಂ ಕಿಂ ಕರಿಷ್ಯತಿ ॥ ೯೨ ॥

ಏವಂ ನಾನಾವಿಧಾಂಸ್ತರ್ಕಾನ್ಯಾವತ್ಕುರ್ವಂತಿ ಪಾರ್ಥಿವಾಃ ।
ತಾವದ್ದೃಷ್ಟ್ವಾಗ್ರತೋ ರಾಮಂ ಜನಕಃ ಪ್ರಾಹ ಗಾಧಿಜಂ ॥ ೯೩ ॥

ಕಿಮರ್ಥಂ ಪ್ರೇಷಿತಸ್ತ್ವತ್ರ ಮುನೇ ಬಾಲಸ್ಸಭಾಂಗಣೇ ।
ಯತ್ರೈತೇ ರಾವಣಾದ್ಯಾಶ್ಚ ನೃಪಾಸ್ಸರ್ವೇತಿಕುಂಠಿತಾಃ ॥ ೯೪ ॥

ತಸ್ಮಿಂಶ್ಚಾಪೇ ತ್ವಯಂ ಬಾಲಃ ಕಿಮಾಗಮ್ಯ ಕರಿಷ್ಯತಿ ।
ಯತ್ತ್ವಯಾ ಶಿಷ್ಯವಾಕ್ಯೇನ ಪೂರ್ವಂ ಚಾಹಂ ಪ್ರಬೋಧಿತಃ ॥ ೯೫ ॥

---

೯೨. ರಾಮನ ಬಲವು ಎಷ್ಟಿದೆ? ನೋಡಬೇಕೆಂದು ತಿಳಿಯಲು ಆ ವಿಶ್ವಾಮಿತ್ರನು ಈತನನ್ನು ಚಾಪವನ್ನೆತ್ತಲು ಕಳುಹಿಸಿರುವನು. ಈ ಮಗುವು ಚಾಪದ ಬಳಿಗೆ ಹೋಗಿ ಏನುತಾನೆ ಮಾಡಬಲ್ಲದು? ಎಂದು ಕೆಲವರು ಎನ್ನುತ್ತಿದ್ದರು.

೯೩. ಈ ರೀತಿಯಾಗಿ ಅಲ್ಲಿನ ಜನರು ಬಗೆ ಬಗೆಯಾದ ತರ್ಕವಿತರ್ಕಗಳನ್ನು ಮಾಡುತ್ತಿರಲು ಆಗ ಜನಕನು ರಾಮನನ್ನು ಚಾಪದ ಎದುರಿಗೆ ನೋಡಿ ವಿಶ್ವಾಮಿತ್ರನನ್ನು ಕುರಿತು ಇಂತೆಂದನು.

೯೪. ಎಲೈ ಮುನಿಯೆ ? ಈ ಬಾಲನನ್ನು ಈ ಸಭಾಂಗಣಕ್ಕೆ ಧನುಸ್ಸನ್ನು ಎತ್ತಲು ಏತಕ್ಕೆ ಕಳುಹಿಸಿದೆ ? ಈ ಧನುಸ್ಸನ್ನು ಎತ್ತಲು ಹೋಗಿ ರಾವಣನೇ ಮುಂತಾದ ತ್ರೈಲೋಕ್ಯವೀರರೂ ಕೂಡ ಬಲಗುಂದಿರುವರಲ್ಲ!

೯೫. ಅಂತಹ ಧನುಸ್ಸಿನ ಬಳಿಗೆ ಈ ಬಾಲನು ಬಂದು ಏನನ್ನು ತಾನೆ ಮಾಡಬಲ್ಲನು ? ನೀನು ನಿನ್ನ ಶಿಷ್ಯನ ಕೈಯ್ಯಲ್ಲಿಯೂ ಕೂಡ ಇದನ್ನೇ ಹೇಳಿ ಕಳುಹಿಸಿದ್ದೆಯಲ್ಲ !

ತತ್ಸರ್ವಂ ತು ಮೃಷೈವಾದ್ಯ ಚಾಪಾಗ್ರೇ ಮುನಿಸತ್ತಮ ।
ಕ್ವಾಯಂ ಬಾಲಃ ಕೋಮಲಾಂಗಃ ಕ್ವೇದಂ ಚಾಪಂ ಸುದುರ್ಧರಂ ॥ ೯೬ ॥

ಕಿಂ ಚಾತಕಸ್ತೃಷಾಕ್ರಾಂತಸ್ಸಾಗರಂ ಶೋಷಯಿಷ್ಯತಿ ।
ಏತಸ್ಮಿನ್ನಂತರೇ ಸರ್ವಾಸ್ಸುಮೇಧಾದ್ಯಾಸ್ತ್ರಿಯಶ್ಚ ತಾಃ ॥ ೯೭ ॥

ಗವಾಕ್ಷಜಾಲರಂಧ್ರೈಶ್ಚ ಪ್ರಾಸಾದೋಪರಿ ಸಂಸ್ಥಿತಾಃ ।
ದದೃಶುಸ್ಸುಕುಮಾರಾಂಗಂ ರಾಮಂ ಪಂಕಜಲೋಚನಂ ॥ ೯೮ ॥

ದ್ವಿಜರಾಜಾನನಂ ಚಾರುದೋರ್ದಂಡದ್ವಯಶೋಭಿತಂ ।
ಹೇಮವರ್ಣೋಪಮರುಚಿಂ ಶೃಂಖಲಾನೂಪುರಾಂಘ್ರಿಣಂ ॥ ೯೯ ॥

---

೯೬. ನೀನು ಪಟ್ಟಿರುವ ಅಭಿಪ್ರಾಯವೂ ನೀನು ಹೇಳಿ ಕಳುಹಿಸಿರುವ ಮಾತೂ ಕೂಡ ಈ ಚಾಪದ ಎದುರಿಗೆ ಒಂದೂ ನಡೆಯುವುದಿಲ್ಲ. ಕೋಮಲಾಂಗನಾದ ಈ ಬಾಲನೆಲ್ಲಿ ? ಹಿಡಿಯಲೂ ಕೂಡ ಆಗದಿರುವ ಈ ಚಾಪವೆಲ್ಲಿ ?

೯೭. ಚಾತಕ ಪಕ್ಷಿಗೆ ಬಾಯಾರಿಕೆ ಬಹುವಾಗಿರಬಹುದು ಆದರೆ ಅದು ಸಮುದ್ರದ ನೀರೆಲ್ಲವನ್ನೂ ಕುಡಿದು ಬರಿದಾದುದನ್ನಾಗಿ ಮಾಡಬಲ್ಲುದೇ ? ಹಾಗೆ ರಾಮನು ಶಕ್ತನಾಗಿರಬಹುದು. ಆದರೆ ಈ ಈಶಧನುಸ್ಸನ್ನು ಹೆದೆಯೇರಿಸಲು ಈತನು ಎಷ್ಟರವನು ?

೯೮. ಈ ಜನಕನು ಹೀಗೆ ಮಾತನಾಡುತ್ತಿರುವಾಗ ಸುಮೇಧೆಯೇ ಮುಂತಾದ ಅಂತಃಪುರದ ಹೆಂಗಸರು ಮಹಡಿಯ ಮೇಲೆ ನಿಂತುಕೊಂಡು ಕಿಟಕಿಯಿಂದ ಕಮಲಲೋಚನನೂ ಸುಕುಮಾರನೂ ಆದ ಆ ರಾಮನನ್ನು ನೋಡುತ್ತಿದ್ದರು.

೯೯. ಅವನ ಮುಖವು ಚಂದ್ರನಂತಿದ್ದಿತು. ಎರಡು ಭುಜಗಳು ಬಹು ಗಟ್ಟಿಯಾಗಿದ್ದುವು. ಚಿನ್ನದ ಬಣ್ಣಕ್ಕೆ ಕಾಂತಿಯಿದ್ದಿತು. ಕಾಲುಸರಪಣಿಯನ್ನೂ ಕಾಲುಬಳೆಯನ್ನೂ ಹಾಕಿಕೊಂಡಿದ್ದನು.

ಶೃಂಖಲಾಕಂಕಣವರದ್ವಯಶೋಭಿತಸತ್ಕರಂ ।
ದಿವ್ಯಕುಂಡಲಮುಕುಟರತ್ನಾಲಂಕಾರಶೋಭಿತಂ ॥ ೧೦೦ ॥

ಸುಜಂಘಂ ಸುಪದಂ ಶೂರಂ ಸುಜಾನುಂ ಸುಂದರೋದರಂ ।
ಸುಸ್ಕಂಧಂ ಸುಹನುಂ ಕಂಬುಕಂಠಂ ತ್ರಿವಲಿಶೋಭಿತಂ ॥ ೧೦೧ ॥

ಸ್ಮಿತಾಸ್ಯಂ ಕೋಮಲೋಷ್ಠಂ ಚ ಸುದಂತಾವಲಿರಂಜಿತಂ ।
ಸುನಾಸಂ ಸುಕಪೋಲಂ ಚ ಕಂಜಪತ್ರಾಯತೇಕ್ಷಣಂ ॥ ೧೦೨ ॥

ಸುಭ್ರೂಫಾಲಂ ಚ ಸುಸ್ನಿಗ್ಧಂ ಕುಂಚಿತಾಲಕಶೋಭಿತಂ ।
ಮುಕ್ತಾಮಾಣಿಕ್ಯರತ್ನಾದಿನಾನಾಲಂಕಾರಶೋಭಿತಂ ॥ ೧೦೩ ॥

---

೧೦೦. ಕೈಗೆ ಬಳೆಗಳನ್ನೂ ಸರಪಣಿಗಳನ್ನೂ ಹಾಕಿಕೊಂಡಿದ್ದನು. ಕಿವಿಗೆ ಉತ್ತಮವಾದ ಕರ್ಣಾಭರಣಗಳನ್ನೂ ತಲೆಗೆ ಕಿರೀಟವನ್ನೂ ಹಾಕಿಕೊಂಡಿದ್ದನು. ರತ್ನದ ಅಲಂಕಾರಗಳನ್ನೂ ಮಾಡಿಕೊಂಡಿದ್ದನು.

೧೦೧. ಮೊಣಕಾಲುಗಳು ಚೆನ್ನಾಗಿದ್ದುವು. ಪಾದಗಳು ಅಂದವಾಗಿದ್ದುವು. ಬಾಲಕನು ಶೂರನಾಗಿದ್ದನು. ತೊಡೆಗಳು ದುಂಡಗೆ ಗಟ್ಟಿಯಾಗಿದ್ದುವು. ಹೊಟ್ಟೆಯು ಸುಂದರವಾಗಿದ್ದಿತು. ಭುಜಶಿರಸ್ಸುಗಳು ಗಟ್ಟಿಯಾಗಿದ್ದುವು. ಕಪೋಲಗಳು ದುಂಡಗೆ ತುಂಬಿಕೊಂಡಿದ್ದುವು. ಕಂಠವು ಶಂಖದಂತೆ ಇದ್ದಿತು. ಮತ್ತು ಅದರಲ್ಲಿ ಮೂರು ಭಾಗಗಳಿದ್ದುವು.

೧೦೨. ನಗುಮುಖದಿಂದಿದ್ದನು. ಮುಖವು ಮನೋಹರವಾಗಿದ್ದಿತು. ಹಲ್ಲುಗಳು ಸಾಲುಸಾಲಾಗಿ ಚೆನ್ನಾಗಿದ್ದುವು. ಮೂಗು ರಮ್ಯವಾಗಿದ್ದಿತು. ಕಪೋಲಗಳು ತುಂಬಿಕೊಂಡು ಚೆನ್ನಾಗಿದ್ದುವು. ಕಣ್ಣು ಕಮಲದಂತೆ ಇದ್ದಿತು.

೧೦೩. ಹುಬ್ಬುಗಳು ಕಾಮನ ಬಿಲ್ಲಿನಂತೆ ಮನೋಹರವಾಗಿದ್ದುವು. ಹಣೆಯು ಮನೋಹರವಾಗಿ ಗುಂಗುರುಗುಂಗುರಾದ ಮುಂಗುರುಳುಗಳಿಂದ ಕೂಡಿದ್ದಿತು. ಮತ್ತು ಮಾಣಿಕ್ಯ ಮುಂತಾದ ರತ್ನಗಳಿಂದ ಪ್ರಕಾಶಿಸುತ್ತಿದ್ದಿತು.

ಮುಕ್ತಾರತ್ನಪುಷ್ಪಮಾಲಾನ್ಯಸ್ತಮುಷ್ಯತಿಶೋಭಿತಂ ।
ನ್ಯಸ್ತಹಾರಂ ನ್ಯಸ್ತವಸ್ತ್ರಂ ಬದ್ಧಪೀತಾಂಬರಾನ್ವಿತಂ ॥ ೧೦೪ ॥

ದಿವ್ಯಮುದ್ರಾಂಗುಳಿಲಸತ್ಪಂಕಜದ್ವಯಸತ್ಕರಂ ।
ಏವಂ ದೃಷ್ಟ್ವಾ ಸ್ತ್ರಿಯೋ ರಾಮಂ ಸಭಾಂಗಣವಿರಾಜಿತಂ ॥ ೧೦೫ ॥

ನ್ಯಸ್ತಕೋದಂಡತೂಣೀರಂ ಶಿವಚಾಪಾಭಿಸಂಮುಖಂ ।
ಪ್ರಾರ್ಥಯಾಮಾಸುಸ್ತಾಸ್ಸರ್ವಾ ಊರ್ಧ್ವಾಸ್ಯಾ ಊರ್ಧ್ವಸತ್ಕರಾಃ ॥ ೧೦೬ ॥

ಪಶ್ಯಂತ್ಯೋ ಗಗನೇ ಶಂಭುಂ ನೋಹಾನ್ನಾತಾಯಣಂ ವಿಧಿಂ ।
ಸಾಕ್ಷಾನ್ನಾರಾಯಣಂ ರಾಮಂ ನ ಜ್ಞಾತ್ವಾ ತಾಶ್ಚ ವೈ ಸ್ತ್ರಿಯಃ ॥ ೧೦೭ ॥

---

೧೦೪. ಮುತ್ತಿನ ಮಾಲೆ, ರತ್ನಗಳ ಮಾಲೆ, ಹೂಗಳಮಾಲೆಗಳನ್ನು ಹಾಕಿಕೊಂಡು ಮನೋಹರನಾಗಿದ್ದನು. ಹಾರಗಳನ್ನು ತೆಗೆದಿಟ್ಟಿದ್ದನು. ಬಟ್ಟೆಗಳೆಲ್ಲವನ್ನೂ ತೆಗೆದಿಟ್ಟಿದ್ದನು. ಪೀತಾಂಬರವನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದನು.

೧೦೫. ಬೆರಳುಗಳಿಗೆ ಉತ್ತಮವಾದ ಉಂಗುರಗಳನ್ನೇ ಹಾಕಿಕೊಂಡಿದ್ದನು. ಕೈಗಳು ಕಮಲದಂತೆ ಪ್ರಕಾಶಿಸುತ್ತಿದ್ದುವು. ಈ ರೀತಿಯಾಗಿ ಆ ಸಭೆಯಲ್ಲಿ ಪ್ರಕಾಶಿಸುತ್ತಿದ್ದ ರಾಮನನ್ನು ಆ ಹೆಂಗಸರು ನೋಡಿದರು.

೧೦೬. ಧನುಸ್ಸನ್ನೂ ಬತ್ತಳಿಕೆಯನ್ನೂ ಇಟ್ಟು ಬಂದಿದ್ದನು. ಶಿವನ ಧನುಸ್ಸಿಗೆ ಎದುರಾಗಿ ಬರುತ್ತಿದ್ದನು. ಆಗ ಅವರೆಲ್ಲರೂ ಮುಖವನ್ನೂ ಕೈಗಳನ್ನೂ ಮೇಲಕ್ಕೆ ಎತ್ತಿಕೊಂಡು ದೇವರನ್ನು ಪ್ರಾರ್ಥಿಸುತ್ತಿದ್ದರು.

೧೦೭. ಆ ಅಂತರಿಕ್ಷದಲ್ಲಿ ಶಂಭುವನ್ನೂ ನಾರಾಯಣನನ್ನೂ ನೋಡಿದಂತೆ ಭಾವಿಸುಕೊಳ್ಳುತ್ತ ಪ್ರಾರ್ಥಿಸುತ್ತಿದ್ದರು. ಆ ರಾಮನು ಸಾಕ್ಷಾನ್ನಾರಾಯಣ ನೆಂಬುದು ಅವರಿಗೆ ತಿಳಿಯಲಿಲ್ಲ.

ಹೇ ಶಂಭೋ ಹೇ ರಮಾಕಾಂತ ಹೇ ವಿಧೇ ಮತ್ಪುರಾಕೃತೈಃ।
ವ್ರತದಾನಾದಿಪುಣ್ಯೈಶ್ಚ ಚಾಪಂ ಸಜ್ಜೀಕರೋತ್ವಯಂ ॥ ೧೦೮ ॥

ಯುಷ್ಮಾಭಿರ್ನಸ್ಸುಕೃತೈಶ್ಚ ಕರ್ತವ್ಯಂ ಪುಷ್ಪವದ್ಧನುಃ।
ಅದ್ಯಾಸ್ಯ ಕಂಠದೇಶೇತ್ರ ಮಾಲಾಂ ಸೀತಾ ದಧಾತ್ವಿಯಂ ॥ ೧೦೯ ॥

ನೋ ಭವತ್ವದ್ಯ ನೇತ್ರಾಣಾಂ ಸಾಫಲ್ಯಂ ದರ್ಶನಾದಿಹ।
ಸೀತಯಾ ರಾಮಚಂದ್ರಸ್ಯ ವೇದಿಕಾಯಾಂ ಸ್ಥಿತಸ್ಯ ಹಿ ॥ ೧೧೦ ॥

ಏತಸ್ಮಿನ್ನಂತರೇ ಸೀತಾ ರಾಮಂ ದೃಷ್ಟ್ವಾ ಸಭಾಂಗಣೇ।
ದಿವ್ಯಪ್ರಾಸಾದಸಂರೂಢಾ ಸಖೀಭಿಃ ಪರಿವೇಷ್ಟಿತಾ ॥ ೧೧೧ ॥

---

೧೦೮. ಹೇ ಶಂಭುವೆ! ಹೇ ರಮಾಕಾಂತನೆ! ಹೇ ವಿಧಿಯೇ! ನಾವುಗಳು ಪೂರ್ವದಲ್ಲಿ ಮಾಡಿರುವ ವ್ರತದಾನಾದಿಗಳ ಪುಣ್ಯಬಲದಿಂದ ಈ ಬಾಲಕನು ಶಿವಚಾಪವನ್ನು ಎತ್ತಿಕಟ್ಟಲಿ!

೧೦೯. ಎಲೈ ದೇವತೆಗಳಿರಾ! ಈ ನಮ್ಮ ಪುಣ್ಯಗಳಿಂದ ನೀವು ಆ ಧನುಸ್ಸನ್ನು ಹೂವಿನಂತೆ ಹಗುರವನ್ನಾಗಿ ಮಾಡಿರಿ! ಈತನ ಕತ್ತಿಗೆ ಮೂರುಬಾರಿ ಸೀತೆಯು ಮಾಲೆಯನ್ನು ಹಾಕುವಂತೆ ಮಾಡಿರಿ.

೧೧೦. ಈ ರಾಮನನ್ನು ಹೀಗೆಯೇ ನೋಡಿದರೆ ನಮ್ಮ ಕಣ್ಣುಗಳಿಗೆ ಸಾಫಲ್ಯವುಂಟಾಗುವುದಿಲ್ಲ. ರಾಮಚಂದ್ರನು ಸೀತೆಯೊಡನೆ ವಿವಾಹಕ್ಕೋಸ್ಕರ ವೇದಿಕೆಯಲ್ಲಿ ಕುಳಿತಿದ್ದಾಗ ನೋಡಿದರೆ ಆಗ ನಮ್ಮ ಕಣ್ಣುಗಳು ಸಫಲವಾಗುತ್ತವೆ.

೧೧೧. ಈ ಸಮಯದಲ್ಲಿ ಸೀತೆಯು ಆ ಸಭೆಯಲ್ಲಿ ರಾಮನು ಬಂದುದನ್ನು ನೋಡಿ ಉತ್ತಮವಾದ ಮಹಡಿಯ ಮೇಲಕ್ಕೆ ಹತ್ತಿ ಸಖಿಯರೊಡನೆ ಇದ್ದಳು.

ಪ್ರೋಚ್ಚಚಾಲಾಸನಾದ್ವೇಗಾದಾನಂದಸ್ವೇದಸಂಪ್ಲುತಾ ।
ಸಖ್ಯಾಸ್ತುಲಸ್ಯಾಃ ಕಂಠೇ ಸ್ವಾಂ ದೋರ್ಲತಿಕಾಂ ಕ್ಷಿಪ್ಯ ಸಾದರಂ ॥ ೧೧೨ ॥

ಅಬ್ರವೀನ್ಮಧುರಂ ವಾಕ್ಯಂ ರತ್ನಾಲಂಕಾರಮಂಡಿತಾ ।
ಕಿಂ ಪಣೋತ್ರ ಕೃತಃ ಪಿತ್ರಾ ಮಮ ಶತ್ರುಸ್ವರೂಪಿಣಾ ॥ ೧೧೩ ॥

ಕ್ವ ರಾಮಸ್ಸುಕುಮಾರಾಂಗಃ ಕ್ವೇದಂ ಚಾಪಂ ನಗೋಪಮಂ ।
ಹಾ ವಿಧೇ ಕಿಂ ಕರೋಷ್ಯದ್ಯ ಕಿಮಸ್ತ್ಯಂತರ್ಗತಂ ತವ ॥ ೧೧೪ ॥

ರಾಮಾದ್ವಿನಾನ್ಯಂ ಪುರುಷಂ ಮನಸಾಹಂ ನ ರೋಚಯೇ ।
ಯದಿ ತಾತೋ ಬಲಾದನ್ಯಂ ಮಾಂ ದಾಸ್ಯತಿ ತದಾಹ್ಯಹಂ ॥ ೧೧೫ ॥

---

೧೧೨. ಇವನನ್ನು ನೋಡಿದೊಡನೆಯೇ ಆ ಸೀತೆಗೆ ಆನಂದವುಂಟಾಗಿ ಆಸನದಿಂದ ಏಳುವಂತೆ ಅಲ್ಲಾಡಿಬಿಟ್ಟಳು. ಆಗ ತುಳಸಿಯೆಂಬ ಸಖಿಯ ಕತ್ತಿನ ಮೇಲೆ ಕೈಹಾಕಿಕೊಂಡಳು.

೧೧೩. ರತ್ನಮಣಿಗಳ ಅಲಂಕಾರದಿಂದ ಕೂಡಿದ ಆಕೆಯು ಆ ತುಳಸಿಯನ್ನು ಕುರಿತು ತನ್ನ ತಂದೆಯು ಎಂತಹ ಉಗ್ರವಾದ ಪಣವನ್ನು ಮಾಡಿರುವನು? ಹಾಗೆ ಮಾಡಿರುವುದರಿಂದ ಇವನು ನನಗೆ ಶತ್ರುಸ್ವರೂಪಿಯಾಗಿರುವನಲ್ಲ?

೧೧೪. ಸುಕುಮಾರವಾದ ಶರೀರವುಳ್ಳ ಈ ರಾಮನೆಲ್ಲಿ? ಪರ್ವತದಂತೆ ದೊಡ್ಡದಾಗಿರುವ ಈ ಚಾಪವೆಲ್ಲಿ? ಇವನದನ್ನು ಎತ್ತಲು ಸಾಧ್ಯವೆ? ಹಾ ವಿಧಿಯೆ! ಈಗೇನು ಮಾಡಲಿ? ನಿನ್ನ ಮನಸ್ಸಿನಲ್ಲಿ ಹೊರಹೊಮ್ಮದಿರುವ ಬೇರೆ ಯಾವುದಾದರೂ ವಿಷಯವಿರುವುದೆ?

೧೧೫. ಈ ರಾಮನಿಗಿಂತಲೂ ಬೇರೆಯಾದ ಮನುಷ್ಯನನ್ನು ಮನಸ್ಸಿನಿಂದಲೂ ನಾನು ಅಪೇಕ್ಷಿಸುವುದಿಲ್ಲ. ಒಂದುವೇಳೆ ನನ್ನ ತಂದೆಯು ಬಲಾತ್ಕಾರದಿಂದ ಬೇರೆ ಯಾರಿಗಾದರೂ ಕೊಡುವ ಪಕ್ಷದಲ್ಲಿ ಆಗ ನಾನು ಹೀಗೆ ಮಾಡುವೆನು.

ತ್ಯಜಾಮಿ ಜೀವಿತಂ ತ್ವದ್ಯ ಪ್ರಾಸಾದಪತನಾದಿನಾ ।
ಹೇ ಶಂಭೋ ಹೇ ವಿಧೇ ದುರ್ಗೇ ಹೇ ಸಾವಿತ್ರಿ ಸರಸ್ವತಿ ॥ ೧೧೬ ॥

ಹೇ ಗಾಯತ್ರಿ ಸ್ವರೇ ಭಾನೋ ಮಘಮನ್ಯಮ ತೋಯಪ ।
ಹೇ ಕುಬೇರಾನಲ ರಮೇ ಹೇ ವಿಷ್ಣೋ ಖಗನಾಯಕ ॥ ೧೧೭ ॥

ಹೇ ಫಣೀಂದ್ರ ನಿಶಾನಾಥ ಹೇ ಸರ್ವೇ ನಿರ್ಜರಾದಯಃ ।
ಯುಷ್ಮಾಕಂ ಪ್ರಾರ್ಥಯಾಮ್ಯದ್ಯ ಪ್ರಸಾರ್ಯ ನಿಜಪಲ್ಲವಂ ॥ ೧೧೮ ॥

ಸರ್ವೈರೇತನ್ಮಹಚ್ಚಾಪಂ ಕರಣೀಯಂ ತು ಪುಷ್ಪವತ್ ।
ಪ್ರವೇಶನೀಯಂ ಯುಷ್ಮಾಭಿಃ ಶ್ರೀರಾಮಭುಜದಂಡಯೋಃ ॥ ೧೧೯ ॥

ಚತುರ್ದಶವತ್ಸರಾಣಿ ಮುನಿವೃತ್ತ್ಯನುವರ್ತಿನೀ ।
ವಿಚರಾಮಿ ವನೇ ಚಾಹಂ ಧನುಸ್ಸಜ್ಜಂ ಕರೋತ್ವಯಂ ॥ ೧೨೦ ॥

೧೧೬–೧೧೮. ಈ ಮಹಡಿಯಿಂದ ಕೆಳಗೆ ಬಿದ್ದೋ ಅಥವಾ ಮತ್ತೆ ಯಾವುದಾದರೂ ರೀತಿಯಿಂದಲೋ ಪ್ರಾಣವನ್ನು ಕಳೆದುಕೊಳ್ಳುವೆನು. ಶಂಭುವೆ! ವಿಧಿಯೆ! ದುರ್ಗೆಯೆ! ಸಾವಿತ್ರಿಯೆ! ಸರಸ್ವತಿಯೆ! ಗಾಯತ್ರಿಯೆ! ಸ್ವರೆಯೆ! ಭಾನುವೆ! ಇಂದ್ರನೆ! ಯಮನೆ! ವರುಣನೆ! ಕುಬೇರನೆ! ಅನಲನೆ! ರಮೆಯೆ! ವಿಷ್ಣುವೆ! ಗರುಡನೆ! ಫಣೀಂದ್ರನೆ! ಚಂದ್ರನೆ! ಎಲ್ಲೈ ಎಲ್ಲಾ ದೇವತೆಗಳಿರಾ! ನಿಮ್ಮಗಳಿಗೆ ಕೈಗಳನ್ನು ನೀಡಿ ಕೇಳಿಕೊಳ್ಳುವೆನು.

೧೧೯. ನೀವೆಲ್ಲರೂ ಕೂಡ ಈ ಧನುಸ್ಸನ್ನು ಹೂವಿನಂತೆ ಹಗುರವನ್ನಾಗಿ ಮಾಡಿರಿ. ನೀವೆಲ್ಲರೂ ಕೂಡ ರಾಮನ ತೋಳಿನಲ್ಲಿ ಬಲವುಂಟಾಗುವಂತೆ ಅದರೊಳಕ್ಕೆ ಸೇರಿಕೊಳ್ಳಿರಿ.

೧೨೦. ಈ ರಾಮನು ಧನುಸ್ಸನ್ನು ಹೆದೆಯೇರಿಸಿ ನನ್ನನ್ನು ಮದುವೆಯಾದರೆ ಹದಿನಾಲ್ಕುವರ್ಷಗಳ ಕಾಲದವರೆಗೆ ವನದಲ್ಲಿ ಮುನಿವೃತ್ತಿಯಿಂದ ಕಾಡಿನಲ್ಲಿ ಸಂಚರಿಸುವೆನು.

ಏವಂ ನಾನಾವಿಧೈರ್ವಾಕ್ಯೈಃ ಸೀತಾ ದೇವಾನ್ ಪ್ರತೋಷಯತ್ ।
ಏವಂ ಪ್ರಾಸಾದಸಂಸ್ಥಾಯಾಸ್ಸೀತಾಯಾ ವಿವಿಧಾನಿ ಚ ॥ ೧೨೧ ॥

ತಥಾ ತಾಸಾಂ ಹೀ ನಾರೀಣಾಂ ನೃಪಾಣಾಂ ಜನಕಸ್ಯ ಚ ।
ವಾಕ್ಯಾನಿ ಶ್ರುಣ್ವನ್ ಶ್ರೀರಾಮಃ ಕಿಂಚಿತ್ ಕೃತ್ವಾ ಸ್ಮಿತಾಸನಂ ॥ ೧೨೨ ॥

ಯಯೌ ಚಾಪಂ ನಮಸ್ಕೃತ್ಯ ಕೃತ್ವಾ ತಂ ಚ ಪ್ರದಕ್ಷಿಣಂ ।
ಪುನರ್ನತ್ವಾ ಶಿವಂ ಧ್ಯಾತ್ವಾ ಧ್ಯಾತ್ವಾ ದಶರಥಂ ನೃಪಂ ॥ ೧೨೩ ॥

ಕೌಸಲ್ಯಾಂ ಚ ಗುರುಂ ಧ್ಯಾತ್ವಾ ವಾಮಹಸ್ತೇನ ತದ್ಧಧೌ ।
ಸವ್ಯಹಸ್ತೇನ ಚಾಪಸ್ಯ ಗುಣಂ ಧೃತ್ವಾ ರಘೂತ್ತಮಃ ॥ ೧೨೪ ॥

---

೧೨೧. ಸೀತೆಯು ಇವೇ ಮುಂತಾದ ವಾಕ್ಯಗಳಿಂದ ದೇವತೆಗಳನ್ನು ಕೇಳಿಕೊಳ್ಳುತ್ತಿದ್ದಳು. ಮಹಡಿಯ ಮೇಲಿರುವ ಸೀತೆಯು ಈ ರೀತಿಯಾಗಿ ಹೇಳುತ್ತಿದ್ದುದನ್ನು ಕೇಳುತ್ತಾ ರಾಮನು ಹೋಗುತ್ತಿದ್ದನು.

೧೨೨. ಅಲ್ಲದೆ ಆ ಮಹಡಿಯ ಮೇಲಿರುವ ಹೆಂಗಸರು ಆಡುತ್ತಿದ್ದ ಮಾತನ್ನೂ ಸಭಾಂಗಣದಲ್ಲಿದ್ದ ರಾಜರು ಆಡುತ್ತಿದ್ದ ಮಾತನ್ನೂ ಜನಕನು ಹೇಳಿದುದನ್ನೂ ಆ ಶ್ರೀರಾಮನು ಕೇಳಿ ಸ್ವಲ್ಪ ನಕ್ಕನು.

೧೨೩ ಆ ಶಿವಧನುಸ್ಸಿನ ಬಳಿಗೆ ಹೋಗಿ ಅದಕ್ಕೆ ನಮಸ್ಕರಿಸಿ ಮೂರುಬಾರಿ ಪ್ರದಕ್ಷಿಣೆ ಮಾಡಿದನು. ಮತ್ತೆ ನಮಸ್ಕರಿಸಿದನು. ಅದಕ್ಕೆ ಅಧಿಪತಿಯಾದ ಶಿವನನ್ನು ಸ್ಮರಿಸಿಕೊಂಡನು. ತನ್ನ ತಂದೆಯಾದ ದಶರಥನನ್ನೂ ಸ್ಮರಿಸಿದನು.

೧೨೪. ಕೌಸಲ್ಯೆಯನ್ನೂ ಗುರುವಾದ ವಸಿಷ್ಠನನ್ನೂ ಸ್ಮರಿಸಿದನು. ಅನಂತರ ಎಡದಕೈಯ್ಯಲ್ಲಿ ಆ ಧನುಸ್ಸನ್ನು ಎತ್ತಿಹಿಡಿದನು. ಬಲದ ಕೈಯ್ಯಿಂದ ಅದರ ನಾರಿಯನ್ನು ತೆಗೆದುಕೊಂಡನು.

ವಾಮಹಸ್ತೇನ ನಮ್ರಂ ತಚ್ಚಕಾರ ಸದಸಿ ಕ್ಷಣಾತ್ ।
ತದಾ ನಿನೇದುರ್ವಾದ್ಯಾನಿ ತುಷ್ಟುವುರ್ವಂದಿಮಾಗಧಾಃ ॥ ೧೨೫ ॥

ಏತಸ್ಮಿನ್ನಂತರೇ ರಾಮವಾಮಹಸ್ತಬಲಾದ್ಧನುಃ ।
ಮಧ್ಯೇಽಭವ ತ್ರಿಖಂಡಂ ತಚ್ಛೈವಂ ಪ್ರಾಚೀನಮುತ್ತಮಂ ॥ ೧೨೬ ॥

ಚಾಪಭಂಗಾನ್ಮಹಾನಾದಸ್ತದಭೂದ್ಗಗನಾಂಗಣೇ ।
ಚಕಂಪೇ ಧರಣೀ ತ್ವಂ ಚಾಲಿಂಗಯನ್ಮಾಂ ಭಯಾದ್ದೃಢಂ ॥ ೧೨೭ ॥

ಚುಕ್ಷುಭುಸ್ಸಾಗರಾಸ್ಸರ್ವೇ ನಿನೇದುಸ್ತಾ ದಿಶೋ ದಶ ।
ತಾರಾ ನಿಪೇತುರ್ಧರಣೀಂ ಶಿರಶ್ಶೇಷೋಽಪ್ಯಚಾಲಯತ್ ॥ ೧೨೮ ॥

---

೧೨೫. ಎಡಗೈಯ್ಯಿಂದಲೇ ಆ ಧನುಸ್ಸನ್ನು ಬಗ್ಗಿಸಿದನು. ಒಡನೆಯೇ ವಾದ್ಯಗಳು ಮೊಳಗಿದುವು. ವಂದಿ ಮಾಗಧರು ಹೊಗಳಿದರು.

೧೨೬. ಹೀಗೆ ಬಗ್ಗಿಸುತ್ತಿರುವಾಗಲೇ ಆ ಪ್ರಾಚೀನವೂ ಉತ್ತಮವೂ ಆದ ಆ ಧನುಸ್ಸು ರಾಮನ ಈ ಎಡಗೈಯ್ಯಿನ ಬಲದಿಂದಲೇ ಮಧ್ಯದಲ್ಲಿಯೇ ಮೂರುಭಾಗವಾಗಿ ಮುರಿದು ಹೋಯಿತು.

೧೨೭. ಆ ಧನುಸ್ಸು ಮುರಿದುದರಿಂದ ಅದರ ಶಬ್ದವು ಅಂತರಿಕ್ಷದಲ್ಲಿ ಎಲ್ಲಾ ಕಡೆಯಲ್ಲಿಯೂ ಆವರಿಸಿಕೊಂಡಿತು. ಭೂಮಿಯೆಲ್ಲವೂ ಅಲ್ಲಾಡಿತು. ಆಗ ಹೆದರಿಕೆಯಿಂದ ನೀನು (ಪಾರ್ವತಿಯು) ನನ್ನನ್ನು (ಪರಮೇಶ್ವರನನ್ನು) ಧೃಢವಾಗಿ ಆಲಂಗಿಸಿಕೊಂಡೆ.

೧೨೮. ಸಮುದ್ರಗಳು ಅಲ್ಲೋಲಕಲ್ಲೋಲವಾದುವು. ಹತ್ತುದಿಕ್ಕುಗಳೂ ಧ್ವನಿಮಾಡಿದುವು. ನಕ್ಷತ್ರಗಳು ಅಂತರಿಕ್ಷದಿಂದ ಭೂಮಿಗೆ ಬಿದ್ದುವು. ಆದಿಶೇಷನು ತಲೆಯನ್ನು ಅಲ್ಲಾಡಿಸಿದನು.

ವವುರ್ವಾತಾಸ್ಸುಗಂಧಾಶ್ಚ ದೇವಾಸ್ತೇ ಗಗನಾಸ್ಥಿತಾಃ ।
ವಾದಯಾಮಾಸುರ್ವಾದ್ಯಾನಿ ಪುಷ್ಪೌಘೈಸ್ಸಮವಾಕಿರನ್ ॥ ೧೨೯ ॥

ಸ್ವರ್ವೇಶ್ಯಾ ನನೃತುಃ ಖೇ ಹಿ ದೇವಾಸ್ತೋಷಂ ಪ್ರಪೇದಿರೇ ।
ತದಾ ನಿನೇದುಸ್ಸದಸಿ ಭೇರ್ಯೋ ದುಂದುಭಯೋ ವರಾಃ ॥ ೧೩೦ ॥

ನವವಾದ್ಯಸ್ವನಾಸ್ಸರ್ವೇ ಬಭೂವುರ್ಜಯನಿಸ್ವನಾಃ ।
ನನೃತುರ್ವಾರನಾರ್ಯಶ್ಚ ತುಷ್ಟುವುರ್ಮಾಗಧಾದಯಃ ॥ ೧೩೧ ॥

ಸ್ತ್ರಿಯೋ ಗವಾಕ್ಷರಂಧ್ರೈಶ್ಚ ರಾಮಂ ಪುಷ್ಪೈರವಾಕಿರನ್ ।
ತದಾ ಸ ರಾವಣಸ್ತೂಷ್ಣೀಂ ಲಜ್ಜಯಾ ನತಮಸ್ತಕಃ ॥ ೧೩೨ ॥

---

೧೨೯. ಗಾಳಿಯು ಸುಗಂಧವಾಗಿ ಬೀಸಿತು. ದೇವತೆಗಳೆಲ್ಲರೂ ಗಗನದಲ್ಲಿ ನಿಂತುಕೊಂಡು ನೋಡುತ್ತಿದ್ದರು. ಆಗ ಅವರೆಲ್ಲರೂ ದುಂದುಭಿಯನ್ನು ಮೊಳಗಿಸುತ್ತ ಹೂಮಳೆಯನ್ನು ಕರೆದರು.

೧೩೦. ಅಪ್ಸರಸ್ತ್ರೀಯರು ಅಂತರಿಕ್ಷದಲ್ಲಿ ಕುಣಿದರು. ದೇವತೆಗಳೆಲ್ಲರೂ ಸಂತೋಷಪಟ್ಟರು ಆಗ ದೇವತೆಗಳ ಸಭೆಯಲ್ಲಿ ದುಂದುಭಿಗಳು ಮೊಳಗುತ್ತಿದ್ದುವು.

೧೩೧. ನವ ವಾದ್ಯಗಳು ಒಟ್ಟಿಗೆ ಧ್ವನಿಮಾಡಿದುವು. ಜಯದ ಧ್ವನಿಯು ಮೊಳಗಿತು. ಸೂಳೆಯರು ಕುಣಿದರು. ವಂದಿಮಾಗಧರು ಹೊಗಳಿದರು.

೧೩೨. ಹೆಂಗಸರು (ವೃದ್ಧಮುತ್ತೈದೆಯರು) ಕಿಟಕಿಗಳಿಂದ ರಾಮನಮೇಲೆ ಹೂಮಳೆಗರೆದರು. ಆಗ ರಾವಣನು ಲಜ್ಜೆಯಿಂದ ಕತ್ತನ್ನು ಬಗ್ಗಿಸಿಕೊಂಡಿದ್ದನು.

ಮುಕುಟೈರಪಿ ಹೀನಶ್ಚ ಮುಕ್ತಕಚ್ಛೋಽತಿವಿಹ್ವಲಃ ।
ಸಭಾಯಾಂ ನ ಕ್ಷಣಂ ತಸ್ಥೌ ತೂರ್ಣಂ ಲಂಕಾಪುರೀಂ ಯಯೌ ॥ ೧೩೩ ॥

ರಾಮೇಣ ಭಗ್ನಂ ತಚ್ಚಾಪಂ ದೃಷ್ಟ್ವಾ ನಾರ್ಯೋ ಮುದಾನ್ವಿತಾಃ ।
ಚಕ್ರುರ್ಜಯ ಸ್ವನೈರ್ಘೋಷಾನ್ಕರೈಶ್ಚಕ್ರುಶ್ಚ ಕಾಳಿಕಾಃ ॥ ೧೩೪ ॥

ಸೀತಾಪಿ ಮುದಿತಾ ಜಾತಾ ಹರ್ಷರೋಮಾಂಚನಿರ್ಭರಾ ।
ಅನಿಮೇಷಾ ಕಂಜನೇತ್ರಾ ರಾಮಮುತ್ಕಂಠಿತಾ ಹ್ಯಭೂತ್ ॥ ೧೩೫ ॥

ಏತಸ್ಮಿನ್ನಂತರೇ ರಾಜಾ ಜನಕಃ ಪ್ರಾಹ ಮಂತ್ರಿಣಃ ।
ಕರಿಣೀಸ್ಥಾಮತ್ರಸೀತಾಮಾನಯಧ್ವಂ ಸಮುತ್ಸವೈಃ ॥ ೧೩೬ ॥

---

೧೩೩. ತಲೆಯಿಂದ ಕಿರೀಟವು ಕಳಚಿ ಬಿದ್ದುಹೊಗಿದ್ದಿತು. ಕಚ್ಚೆಯೂ ಕೂಡ ಸಡಿಲವಾಗಿ ಬಿಚ್ಚಿಹೋಗಿದ್ದಿತು. ಮನಸ್ಸಿಗೆ ಬಹುವಾಗಿ ನಾಚಿಕೆಯಿಂದ ಕಳವಳವುಂಟಾಯಿತು. ಆ ಸಭೆಯಲ್ಲಿ ಒಂದುಗಳಿಗೆಯೂ ಕೂಡ ನಿಲ್ಲಲಿಲ್ಲ. ಬೇಗನೆ ಲಂಕೆಗೆ ಪ್ರಯಾಣಮಾಡಿದನು.

೧೩೪. ರಾಮನು ಆ ಧನುಸ್ಸನ್ನು ಮುರಿದುದನ್ನು ನೋಡಿ ಹೆಂಗಸರೆಲ್ಲರೂ ಸಂತೋಷಗೊಂಡರು. ಜಯ ಜಯ ಎಂದು ಧ್ವನಿಮಾಡಿದರು. ಮತ್ತು ಕೈಯ್ಯಿಂದ ಚಪ್ಪಾಳೆಯನ್ನು ಹೊಡೆದರು.

೧೩೫. ಸೀತೆಗೆ ಬಹುವಾಗಿ ಸಂತೋಷವಾಯಿತು. ಅವಳಿಗೆ ರೋಮಾಂಚವೆದ್ದಿತು. ಆಗ ಆಕೆಯು ತನ್ನ ಕಮಲದಂತಿರುವ ಕಣ್ಣುಗಳಿಂದ ರೆಪ್ಪೆಯನ್ನೂ ಮುಚ್ಚದೆ ರಾಮನನ್ನು ಬಹು ಸಂತೋಷದಿಂದ ನೋಡುತ್ತಿದ್ದಳು.

೧೩೬. ಈ ಸಮಯದಲ್ಲಿ ರಾಜನಾದ ಜನಕನು ಮಂತ್ರಿಗಳನ್ನು ಕುರಿತು ಇಂತೆಂದನು. ಹೆಣ್ಣಾನೆಯಮೇಲೆ ಸೀತೆಯನ್ನು ಕೂರಿಸಿಕೊಂಡು ಮೆರವಣಿಗೆಯನ್ನು ಮಾಡಿಕೊಂಡು ಕರೆದುಕೊಂಡು ಬನ್ನಿರಿ.

ರಕ್ಷಣೀಯಾ ನಿಜೈಸ್ಸೈನ್ಯೈರ್ವೇಷ್ಟಯಿತ್ವಾ ಸಮಂತತಃ ।
ತಥೇತಿ ತೇ ಮಂತ್ರಿಣಶ್ಚ ಯಯುರ್ವೇಗೇನ ಜಾನಕೀಂ ॥ ೧೩೭ ॥

ಪ್ರೋಚುಸ್ತೇ ಮಧುರಂ ವಾಕ್ಯಂ ಪ್ರಬದ್ಧಕರಸಂಪುಟಾಃ ।
ಹೇ ಸೀತೇ ಕಂಜನಯನೇ ಧನ್ಯಾಸಿ ಗಜಗಾಮಿನಿ ॥ ೧೩೮ ॥

ರವಿವಂಶೋದ್ಭವೇನಾದ್ಯ ದಶರಥಸುತೇನ ಚ ।
ರಾಮೇಣ ಭಗ್ನಂ ಸದಸಿ ಚಾಪಮುತ್ತಿಷ್ಠ ವೇಗತಃ ॥ ೧೩೯ ॥

ಕರಿಣೀಪೃಷ್ಠಮಾರುಹ್ಯ ರಾಮಂ ತ್ವಂ ಗಂತುಮರ್ಹಸಿ ।
ರಾಮಕಂಠೇಽರ್ಪಯಸ್ವಾದ್ಯ ರತ್ನಮಾಲಾಂ ಮುದಾನ್ವಿತಾ ॥ ೧೪೦ ॥

---

೧೩೭. ಅವಳ ಸುತ್ತಲೂ ಸೈನ್ಯವು ಸುತ್ತುವರಿದುಕೊಂಡು ಬಹು ಜಾಗರೂಕತೆಯಿಂದ ಕಾಪಾಡುತ್ತ ಬರಲಿ. ಎನ್ನಲು ಮಂತ್ರಿಗಳು ಹಾಗೆಯೇ ಆಗಲೆಂದು ಹೇಳಿ ಜಾನಕಿಯ ಬಳಿಗೆ ಹೋದರು.

೧೩೮. ಆ ಮಂತ್ರಿಗಳು ಸೀತೆಯ ಬಳಿಗೆಹೋಗಿ ಅವಳನ್ನು ಕುರಿತು ಕೈಮುಗಿದು ಮೃದುವಾಗಿ ಇಂತೆಂದರು ಕಮಲದಂತಿರುವ ಕಣ್ಣುಳ್ಳ ಗಜದಂತೆ ಗಮನವುಳ್ಳ ಎಲೈ ಸೀತೆಯೆ ! ನೀನು ಧನ್ಯಳು.

೧೩೯. ರವಿವಂಶದಲ್ಲಿ ಹುಟ್ಟಿದ ದಶರಥನ ಮಗನಾದ ರಾಮನು ಸಭೆಯಲ್ಲಿ ಆ ಶಿವಧನುಸ್ಸನ್ನು ಬಗ್ಗಿಸಬೇಕಾದುದಿರಲಿ ! ಮುರಿದೇಬಿಟ್ಟನು. ಬೇಗನೆ ಮೇಲಕ್ಕೆ ಏಳು

೧೪೦. ಆನೆಯ ಮೇಲೆ ಕುಳಿತುಕೊಂಡು ಆ ರಾಮನ ಬಳಿಗೆ ಹೋಗುತ್ತೀಯಂತೆ! ಆ ರಾಮನ ಕತ್ತಿಗೆ ರತ್ನಮಾಲೆಯನ್ನು ಸಂತೋಷದಿಂದ ಈಗ ಅರ್ಪಿಸುವವಳಾಗು.

ತನ್ಮಂತ್ರಿಣಾಂ ವಚಶ್ಶ್ರುತ್ವಾ ಸೀತಾ ನತ್ವಾ ಸ್ವಮಾತರಂ ।
ಸಖೀಭಿಃ ಕರಿಣೀಪೃಷ್ಠೇ ಸಂಸ್ಥಿತಾಸೀನ್ಮುದಾನ್ವಿತಾ ॥ ೧೪೧ ॥

ತದೋಗ್ರೇ ನವವಾದ್ಯಾನಿ ನಿನೇದುರ್ಮಂಗಳಾನಿ ಚ ।
ನಿನೇದುಃ ಪೃಷ್ಠಭಾಗೇಪಿ ನಾನಾವಾದ್ಯಾನಿ ವೈ ಮುಹುಃ ॥ ೧೪೨ ॥

ಚಿತ್ರೋಷ್ಣೀಷಾಃ ಕಂಚುಕಿನಶ್ಶತಶೋ ವೇತ್ರಪಾಣಯಃ ।
ಸೀತಾಕರಿಣ್ಯಾಶ್ಚಾಗ್ರೇ ತೇ ದುದ್ರುವುರ್ದೀರ್ಘನಿಸ್ವನಾಃ ॥ ೧೪೩ ॥

ವಾರಯ್ಯ ಜನಸಮ್ಮರ್ದಂ ಸೀತಾಂ ದ್ರಷ್ಟುಂ ಜನೈಃ ಕೃತಂ ।
ನನೃತುರ್ವಾರನಾರ್ಯಶ್ಚ ಬಭೂವುರ್ಯತ್ರ ನಿಸ್ವನಾಃ ॥ ೧೪೪ ॥

---

೧೪೧. ಮಂತ್ರಿಗಳ ಈ ಮಾತನ್ನು ಕೇಳಿ ಸೀತೆಯು ತಾಯಿಗೆ ನಮಸ್ಕರಿಸಿ ಸಖಿಯರ ಜೊತೆಯಲ್ಲಿ ಸಂತೋಷದಿಂದ ಆನೆಯಮೇಲೆ ಕುಳಿತುಕೊಂಡಳು.

೧೪೨. ಆಗ ಮುಂಭಾಗದಲ್ಲಿ ನವವಾದ್ಯಗಳು ಮೊಳಗಿದುವು. ಮಂಗಳಶಬ್ದವು ಬಹುವಾಗಿ ಉಂಟಾಯಿತು. ಹಿಂಭಾಗದಲ್ಲಿಯೂ ಕೂಡ ಅನೇಕ ಬಗೆಯಾದ ವಾದ್ಯಗಳು ಮೊಳಗಿದುವು.

೧೪೩. ಕಂಚುಕಿಗಳು ಚಿತ್ರವಿಚಿತ್ರವಾದ ರುಮಾಲುಗಳನ್ನು ಹಾಕಿಕೊಂಡು ಕೈಯ್ಯಲ್ಲಿ ಬೆತ್ತಗಳನ್ನು ಹಿಡಿದುಕೊಂಡು ನೂರಾರುಜನರು ಸೀತೆಯು ಕುಳಿತಿರುವ ಆನೆಯಮುಂದೆ ಗಟ್ಟಿಯಾಗಿ ಕೂಗುತ್ತ ಓಡುತ್ತಿದ್ದರು.

೧೪೪. ಆಗ ಅವರು ಸೀತೆಯನ್ನು ನೋಡಲು ಗುಂಪುಸೇರಿಕೊಳ್ಳುತ್ತಿದ್ದ ಜನಗಳ ಗಲಭೆಯನ್ನು ನಿವಾರಿಸುತ್ತ ಜನಗಳನ್ನು ಚದರಿಸುತ್ತ ಓಡಾಡುತ್ತಿದ್ದರು. ವಾದ್ಯಗಳನ್ನು ಬಾಜಿಸುವ ಪ್ರದೇಶದಲ್ಲಿ ಸೂಳೆಯರು ಕುಣಿಯುತ್ತಿದ್ದರು.

ತುಷ್ಟುವುರ್ಮಾಗಧಾದ್ಯಾಶ್ಚ ನಟಾಃ ಗಾನಂ ಪ್ರಚಕ್ರಿರೇ ।
ಕರಿಣೀಂ ವೇಷ್ಟಯಾಮಾಸುಸ್ಸೀತಾದಾಸ್ಯಸ್ಸಹಸ್ರಶಃ ॥ ೧೪೫ ॥

ಅಶ್ವಾರೂಢಾಶ್ಚಾಮರಾದಿ ಬಿಭ್ರಂತ್ಯೋ ರುಕ್ಮಶೋಭಿತಾಃ ।
ತತೋಽಶ್ವಸ್ಸಂಸ್ಥಾಶ್ಶತಶಸ್ತಾಂ ಯಯುಶ್ಚೋಪಮಾತರಃ ॥ ೧೪೬ ॥

ಜರತಾಶ್ಶಸ್ತ್ರಧಾರಿಣ್ಯಸ್ಸ್ವರ್ಣದಂಡಲಸತ್ಕರಾಃ ।
ತತಃ ಪುರುಷವದ್ವೇಷಾನ್ಬಿಭ್ರಂತ್ಯಃ ಪ್ರಮದೋತ್ತಮಾಃ ॥ ೧೪೭ ॥

ಯಯುಸ್ತರುಣ್ಯಶ್ಶತಶಶ್ಶಸ್ತ್ರಹಸ್ತಾಸ್ಸುಭೂಷಿತಾಃ ।
ಗೋಪಿತಾಸ್ಸುಃ ಕಂಚುಕಿನ್ಯಸ್ತುರಗಾದಿಷು ಸಂಸ್ಥಿತಾಃ ॥ ೧೪೮ ॥

---

೧೪೫. ಸ್ತುತಿಪಾಠಕರು ಹೊಗಳಿದರು. ನಟ್ವರು ಸಂಗೀತವನ್ನು ಹಾಡಿದರು. ಸೀತೆಯ ದಾಸಿಯರು ಸಾವಿರ ಸಂಖ್ಯೆಯಲ್ಲಿ ಆ ಸೀತೆಯು ಕುಳಿತಿದ್ದ ಆನೆಯ ಸುತ್ತಲೂ ಬರುತ್ತಿದ್ದರು.

೧೪೬. ಅನೇಕಮಂದಿ ಸೀತೆಯ ದಾಸಿಯರು ಚಿನ್ನದ ಒಡವೆಗಳನ್ನು ತೊಟ್ಟುಕೊಂಡು ಕುದುರೆಯಮೇಲೆ ಕುಳಿತು ಸೀತೆಗೆ ಚಾಮರವನ್ನು ಹಿಡಿದಿದ್ದರು. ಅನೇಕಜನ ದಾದಿಯರು ಕುದುರೆಯಮೇಲೆ ಕುಳಿತು ರಕ್ಷಿಸುತ್ತ ಹೊರಟರು.

೧೪೭. ಮುದುಕಿಯರು ಶಸ್ತ್ರಗಳನ್ನು ಹಿಡಿದು ಚಿನ್ನದ ಬೆತ್ತಗಳನ್ನು ಕೈಯ್ಯಲ್ಲಿ ಹಿಡಿದುಕೊಂಡಿದ್ದರು. ಮತ್ತು ಅವರು ಗಂಡಸರಂತೆ ವೇಷವನ್ನು ಹಾಕಿಕೊಂಡಿದ್ದರು.

೧೪೮. ಅನೇಕಜನ ತರುಣಿಯರು ಅಲಂಕರಿಸಿಕೊಂಡು ಶಸ್ತ್ರಗಳನ್ನು ಕೈಯ್ಯಲ್ಲಿಹಿಡಿದು ಈ ಸೀತೆಯನ್ನು ರಕ್ಷಿಸಲು ಕುದುರೆಗಳ ಮೇಲೆ ಕುಳಿತಿದ್ದರು.

ತತಸ್ತೇ ಮಂತ್ರಿಣಸ್ಸರ್ವೇ ನಾನಾವಾಹನಸಂಸ್ಥಿತಾಃ ।
ಸ್ವಸೈನ್ಯೈರ್ನಿಯಮಾ ಸುಸ್ಸೀತಾಯಾಃ ಕರಿಣೀಂ ಮುದಾ ॥ ೧೪೯ ॥

ಚಾಮರೈಃ ವ್ಯಜನೈಸ್ಸಖ್ಯೋ ಮುಹುಸ್ಸೀತಾಮವೀಜಯನ್ ।
ಸ್ತ್ರಿಯೋ ಗವಾಕ್ಷರಂಧ್ರೈಶ್ಚ ಸೀತಾಂ ಪುಷ್ಪೈರವಾಕಿರನ್ ॥ ೧೫೦ ॥

ಏವಂ ನಾನಾಸಮುತ್ಸಾಹೈಶ್ಶನೈಸ್ಸೀತಾ ತಟಿತ್ಪ್ರಭಾ ।
ನವರತ್ನಮಯೀಂ ಮಾಲಾಂ ಬಿಭ್ರತೀ ದಕ್ಷಿಣೇ ಕರೇ ॥ ೧೫೧ ॥

ರಾಮಂ ನೇತ್ರಕಟಾಕ್ಷೈಶ್ಚ ಪಶ್ಯಂತೀ ಮುದಿತಾನನಾ ।
ಸಭಾಯಾಂ ರಾಘವಂ ಗತ್ವಾ ಕರಿಣ್ಯಾಶ್ಚಾವರುಹ್ಯ ಚ ॥ ೧೫೨ ॥

---

೧೪೯. ಮಂತ್ರಿಗಳೆಲ್ಲರೂ ಬಗೆ ಬಗೆಯ ವಾಹನಗಳಮೇಲೆ ಕುಳಿತಿದ್ದರು. ಮತ್ತು ತಾವುಗಳು ತಮಗೆ ನಿಯಮಿತವಾದ ಸೈನ್ಯದಿಂದ ಕೂಡಿಕೊಂಡು ಸೀತೆಯನ್ನು ರಕ್ಷಿಸುತ್ತಿದ್ದರು.

೧೫೦. ಸಖಿಯರು ಚಾಮರಗಳಿಂದಲೂ ಬೀಸಣಿಗೆಗಳಿಂದಲೂ ಆ ಸೀತೆಯನ್ನು ಬೀಸುತ್ತಿದ್ದರು. ಪಟ್ಟಣದ ಹೆಂಗಸರು ಕಿಟಕಿಗಳಲ್ಲಿದ್ದುಕೊಂಡು ಹೂವುಗಳನ್ನು ಸೀತೆಯಮೇಲೆ ಎರಚುತ್ತಿದ್ದರು.

೧೫೧. ಈ ರೀತಿಯಾಗಿ ಎಲ್ಲರೂ ನಾನಾಬಗೆಯಾದ ಸಂತೋಷದಿಂದ ಹೊರಟರು. ಸೀತೆಯು ಬಲದಕೈಯ್ಯಲ್ಲಿ ನವರತ್ನದ ಮಾಲೆಯನ್ನು ಹಿಡಿದಿದ್ದಳು.

೧೫೨. ಆ ಸೀತೆಯು ರಾಮನನ್ನು ಸಂತೋಷದಿಂದ ಕಡೆಗಣ್ಣಿನ ನೋಟದಿಂದ ನೋಡುತ್ತಿದ್ದಳು. ಆಗ ಸಭೆಯಲ್ಲಿ ರಾಘವನಿರುವಲ್ಲಿಗೆ ಆನೆಯ ಮೇಲೆ ಹೋಗಿ ಇಳಿದಳು. ಅನಂತರ ಆ ಸಭೆಯಲ್ಲಿ ಕುಳಿತಿದ್ದ ರಾಘವನ ಬಳಿಗೆ ಹೋದಳು.

ಶನೈಃ ಪದ್ಭ್ಯಾಂ ಯಯೌ ರಾಮಂ ತದ್ಗ್ರೀವಾಯಾಂ ಸುಲಜ್ಜಿತಾ |
ಮುಮೋಚ ನಿಜಬಾಹುಭ್ಯಾಂ ರತ್ನಮಾಲಾಂ ಮುದಾನ್ವಿತಾ ॥ ೧೫೩ ॥

ಚಕಾರ ನಮನಂ ರಾಮಪಾದಯೋಃ ಸ್ಥಾಪ್ಯ ವೈ ಶಿರಃ |
ತಸ್ಥಾವವಾಙ್ಮುಖೀ ಸೀತಾ ಸಭಾಯಾಮತಿಲಜ್ಜಿತಾ ॥ ೧೫೪ ॥

ದದರ್ಶ ಸೀತಾಂ ರಾಮೋಽಪಿ ಹಾರಶೋಭಿತಹೃತ್ಸ್ಥಲಃ |
ಅವಾಪ ತೋಷಂ ನಿತರಾಂ ನನಾಮ ಗಾಧಿಜಂ ಪ್ರಭುಃ ॥ ೧೫೫ ॥

ತದಾ ರಾಮಂ ಸಮಾಲಿಂಗ್ಯ ವಿಶ್ವಾಮಿತ್ರೋ ಮುನೀಶ್ವರಃ |
ಸುನಿವೇಶ್ಯ ನಿಜಾಂಕೇ ತಂ ಪ್ರೇಮ್ಣಾವಘ್ರಾಯ ಮಸ್ತಕೇ ॥ ೧೫೬ ॥

---

೧೫೩. ಕಾಲುನಡಿಗೆಯಲ್ಲಿಯೇ ಮೆಲ್ಲ ಮೆಲ್ಲನೆ ರಾಮನಿರುವಲ್ಲಿಗೆ ಹೋದಳು ಸಂತೋಷದಿಂದ ಕೈಯ್ಯಲ್ಲಿ ರತ್ನಮಾಲೆಯನ್ನು ಹಿಡಿದು ಆ ರಾಮನ ಕತ್ತಿಗೆ ಲಜ್ಜೆಯಿಂದ ಆ ಮಾಲೆಯನ್ನು ಹಾಕಿದಳು.

೧೫೪. ಅನಂತರ ರಾಮನ ಪಾದಗಳಮೇಲೆ ತಲೆಯನ್ನಿಟ್ಟು ನಮಸ್ಕರಿಸಿದಳು. ಅನಂತರ ಬಹುವಾದ ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು ಆ ಸಭೆಯಲ್ಲಿ ನಿಂತಿದ್ದಳು.

೧೫೫. ಆ ಹಾರವನ್ನು ಹೃದಯದಲ್ಲಿ ಧರಿಸಿಕೊಂಡು ರಾಮನು ಸೀತೆಯನ್ನು ನೋಡಿ ಬಹುವಾಗಿ ಸಂತೋಷಗೊಂಡನು. ಅನಂತರ ವಿಶ್ವಾಮಿತ್ರನಿಗೆ ನಮಸ್ಕರಿಸಿದನು.

೧೫೬. ಆಗ ಮುನಿಯಾದ ವಿಶ್ವಾಮಿತ್ರನು ರಾಮನನ್ನು ಆಲಂಗಿಸಿಕೊಂಡನು. ಮತ್ತು ತೊಡೆಯಮೇಲೆ ಕೂರಿಸಿಕೊಂಡು ಪ್ರೀತಿಯಿಂದ ಆ ರಾಮನ ತಲೆಯನ್ನು ಮೂಸಿನೋಡಿದನು.

ತದಾ ಸ ಜನಕಸ್ಸೀತಾಂ ಗಾಧಿಜಾಂಕೇ ನ್ಯವೇಶಯತ್ ।
ಸೀತಯಾ ರಘುನಾಥೇನ ಶುಶುಭೇ ಸ ಮುನಿಸ್ತದಾ ॥ ೧೫೭ ॥

ಮಾನಯಾಮಾಸ ಸ ಮುನಿರ್ಜನ್ಮಸಾಫಲ್ಯತಾಂ ಹೃದಿ ।
ತತಸ್ಸಭಾಯಾಂ ಜನಕೋ ವಿಶ್ವಾಮಿತ್ರಂ ವಚೋಽಬ್ರವೀತ್ ॥ ೧೫೮ ॥

ಪ್ರಸಾದಾತ್ತವ ರಾಮಸ್ಯ ಲಾಭೋ ಜಾತೋಽದ್ಯ ಮೇ ಮುನೇ ।
ಧನ್ಯೋಽಸ್ಮ್ಯಹಂ ಕುಲಂ ಧನ್ಯಂ ಧನ್ಯೌ ತೌ ಪಿತರೌ ಮಮ ॥ ೧೫೯ ॥

ಯೋಽಹಂ ಶ್ರೀರಾಮಶ್ವಶುರಶ್ಚೇತಿ ಲೋಕೇ ಪ್ರಥಾಂ ಗತಃ ।
ಇತ್ಯುಕ್ತ್ವಾ ಗಾಧಿಜಂ ನತ್ವಾ ಪ್ರಣನಾಮ ರಘೂತ್ತಮಂ ॥ ೧೬೦ ॥

---

೧೫೭ ರಾಮನು ವಿಶ್ವಾಮಿತ್ರನ ತೊಡೆಯಮೇಲೆ ಕುಳಿತಿರುವುದನ್ನು ನೋಡಿ ಜನಕನು ಸೀತೆಯನ್ನು ಕರೆದುಕೊಂಡು ಹೋಗಿ ಆ ವಿಶ್ವಾಮಿತ್ರನ ತೊಡೆಯಮೇಲೆ ಕೂರಿಸಿದನು. ಆಗ ಒಂದು ತೊಡೆಯಲ್ಲಿ ರಾಮನನ್ನೂ ಮತ್ತೊಂದು ತೊಡೆಯಲ್ಲಿ ಸೀತೆಯನ್ನೂ ಕೂರಿಸಿಕೊಂಡು ಈ ವಿಶ್ವಾಮಿತ್ರನು ಬಹುವಾಗಿ ರಂಜಿಸಿದನು.

೧೫೮. ಆಗ ವಿಶ್ವಾಮಿತ್ರನು ಪ್ರಪಂಚದ ಸೃಷ್ಟಿಕರ್ತರಾದ ಪುರುಷ ಪ್ರಕೃತಿಗಳನ್ನು ತೊಡೆಯಮೇಲೆ ಕೂರಿಸಿಕೊಂಡಿರುವುದರಿಂದ ಮನಸ್ಸಿನಲ್ಲಿ ತಾನು ಹುಟ್ಟಿದುದು ಸಫಲವಾಯಿತೆಂದುಕೊಂಡನು. ಆಗ ಆ ಸಭೆಯಲ್ಲಿ ಜನಕನು ವಿಶ್ವಾಮಿತ್ರನನ್ನು ಕುರಿತು ಇಂತೆಂದನು.

೧೫೯. ಎಲೈ ಮುನಿಯೆ! ನಿನ್ನ ಅನುಗ್ರಹದಿಂದ ನನಗೆ ಈದಿನ ಈ ರಾಮನು ಸಿಕ್ಕಿದನು. ನಾನು ಧನ್ಯನಾದೆನು. ನನ್ನ ಕುಲವು ಧನ್ಯವಾಯಿತು. ನನ್ನ ಆ ತಾಯಿತಂದೆಗಳೂ ಧನ್ಯರಾದರು.

೧೬೦ ನಾನು ಲೋಕದಲ್ಲಿ ಈ ಶ್ರೀರಾಮನಿಗೆ ಮಾವನು ಎಂದೆನಿಸಿ ಕೊಂಡೆನಲ್ಲ! ಅದೇ ನನಗೆ ಬಹುವಾದ ಸುಕೃತವು. ಹೀಗೆಂದು ಹೇಳಿ ವಿಶ್ವಾಮಿತ್ರನಿಗೆ ನಮಸ್ಕರಿಸಿ ಆ ಶ್ರೀರಾಮನಿಗೂ ನಮಸ್ಕರಿಸಿದನು.

ತದಾ ತೇ ಪಾರ್ಥಿವಾಸ್ಸರ್ವೇ ಸೀತಾಂ ದೃಷ್ಟ್ವಾ ತಟಿತ್ಪ್ರಭಾಂ |
ಬಿಂಬೋಷ್ಠೀಂ ಚಂದ್ರವದನಾಂ ತನ್ನೇತ್ರಶರತಾಡಿತಾಃ || ೧೬೧ ||

ಬಭೂವುರ್ವಿಕಲಾಸ್ತತ್ರ ದುರ್ದೈವಂ ಮೇನಿರೇ ನಿಜಂ |
ಕೇಚಿನ್ಮೂರ್ಛಾಂ ಯಯುಸ್ತತ್ರ ತಾನ್ಸಮಾಗತ್ಯ ಮೈಥಿಲಃ || ೧೬೨ ||

ಪ್ರಾರ್ಥಯಾಮಾಸ ನೃಪತೀನ್ ವಿಷಣ್ಣಾನ್ ಸದಸಿ ಸ್ಥಿತಾನ್ |
ನಷ್ಟಶ್ರೀಮ್ಲಾನವದನಾನ್ ಅಜ್ಜಯಾ ನತಕಂಧರಾನ್ || ೧೬೩ ||

ಯುಷ್ಮಾಭಿರ್ಮೇತ್ರ ಕನ್ಯಾಯಾ ವಿವಾಹಂ ವಿನಿವರ್ತ್ಯ ಚ |
ಗಂತವ್ಯಂ ಸ್ವಪುರಾಣ್ಯೇವ ಕರಣೀಯಾ ಕೃಪಾ ಮಯಿ || ೧೬೪ ||

---

೧೬೧. ಆಗ ಅಲ್ಲಿರುವ ರಾಜರೆಲ್ಲರೂ ಆ ಮಿಂಚಿನಂತೆ ಹೊಳೆಯುತ್ತಿರುವ ಸೀತೆಯನ್ನು ನೋಡಿದರು. ಆಕೆಯು ತೊಂಡೆಯ ಹಣ್ಣಿನಂತೆ ತುಟಿಗಳುಳ್ಳವಳಾಗಿಯೂ ಚಂದ್ರನಂತೆ ಮುಖವುಳ್ಳವಳಾಗಿಯೂ ಇದ್ದಳು. ಅಂತೆಯೇ ಈ ಸೀತೆಯು ಆ ಸಭೆಯಲ್ಲಿದ್ದ ಆ ರಾಜರನ್ನು ಕಡೆಗಣ್ಣಿನಿಂದ ನೋಡಿದಳು.

೧೬೨. ಈ ಸೀತೆಯ ಕಡೆಗಣ್ಣಿನ ನೋಟವನ್ನೂ ಆಕೆಯ ರಮಣೀಯತೆಯನ್ನೂ ನೋಡಿ ಆ ರಾಜರು ತಮ್ಮ ದುರದೃಷ್ಟವನ್ನು ಮನಗಂಡರು. ಕೆಲವರು ಈ ಸಂದರ್ಭದಲ್ಲಿ ಅಲ್ಲಿ ಮೂರ್ಛೆಹೋಗಿದ್ದರು. ಅವರ ಬಳಿಗೆ ಆ ಜನಕನು ಹೋಗುತ್ತಿದ್ದನು.

೧೬೩. ಬಂದಿದ್ದ ಆ ರಾಜರುಗಳು ದುಃಖಿತರಾಗಿಯೂ ಕಂಗೆಟ್ಟವರಾಗಿಯೂ ಮುಖವನ್ನು ಜೋಲು ಬಿಟ್ಟುಕೊಂಡು ಲಜ್ಜೆಯಿಂದ ತಲೆ ತಗ್ಗಿಸಿಕೊಂಡೂ ಇರುತ್ತಿದ್ದರು.

೧೬೪. ಅವರವರ ಬಳಿಗೆ ಈ ಜನಕನು ಹೋಗಿ ನೀವು ನನ್ನ ಈ ಮಗಳ ಮದುವೆಯನ್ನು ನೆರವೇರಿಸಿ ನಿಮ್ಮ ನಿಮ್ಮ ಊರಿಗೆ ಹೋಗಬೇಕು. ನನ್ನ ಮೇಲೆ ಕೃಪೆಯನ್ನು ಮಾಡಬೇಕು. ಎನ್ನುತ್ತಿದ್ದನು.

ತದಾ ತೇ ಪಾರ್ಥಿವಾಸ್ಸರ್ವೇ ಮಂತ್ರಾಂಶ್ಚಕ್ರುಃ ಪರಸ್ಪರಂ ।
ಯದಿ ಯುದ್ಧೇ ವಿಜೇತವ್ಯಃ ಶ್ರೀರಾಮೋದ್ಯ ರಣಾಂಗಣೇ ॥ ೧೬೫ ॥

ತರ್ಹ್ಯಸ್ಮಿನ್ ಸಮಯೇ ದುಷ್ಟೇ ಜಯೋ ನೋ ನ ಭವಿಷ್ಯತಿ ।
ಕುಮುಹೂರ್ತೇ ವಯಂ ಯಾತಾಸ್ತೂಷ್ಣೀಂ ಗತ್ವಾ ಪುರಾಣಿ ಹಿ ॥ ೧೬೬ ॥

ಸುಮುಹೂರ್ತೇ ಪುನರ್ಯೋದ್ಧುಂ ಯಾಸ್ಯಾಮಸ್ಸಕಲಾ ಬಲೈಃ ।
ಭವಿಷ್ಯತಿ ತದಾಸ್ಮಾಕಂ ಜಯೋ ಯುದ್ಧೇ ವಿನಿಶ್ಚಯಾತ್ ॥ ೧೬೭ ॥

ಯದಾ ರಾಮಂ ಬಾಣಭಿನ್ನಂ ಪಶ್ಯಾಮಃ ಪತಿತಂ ರಣೇ ।
ಭವಿಷ್ಯಾಮಃ ಕೃತಕೃತ್ಯಾಸ್ತದಾ ಸರ್ವೇ ವಯಂ ನೃಪಾಃ ॥ ೧೬೮ ॥

---

೧೬೫. ಆಗ ಆ ರಾಜರೆಲ್ಲರೂ ಸೇರಿಕೊಂಡು ಒಬ್ಬರಿಗೊಬ್ಬರು ಇಂತು ಆಲೋಚಿಸಿಕೊಂಡರು. ಈಗ ನಾವೆಲ್ಲರೂ ಸೇರಿ ಆ ಶ್ರೀರಾಮನಮೇಲೆ ಯುದ್ಧಮಾಡಿ ಜಯಿಸಬಹುದು.

೧೬೬. ಆದರೆ ನಾವು ಹೊರಟುಬಂದಿರುವುದು ಸರಿಯಾದ ಸಮಯವಲ್ಲ. ಈ ದುಷ್ಟಸಮಯದಲ್ಲಿ ಯುದ್ಧಕೆ ಹೋದರೆ ನಮಗೆ ಜಯವುಂಟಾಗುವುದಿಲ್ಲ. ನಾವು ಹೊರುಟುದು ಕೆಟ್ಟಮುಹೂರ್ತವಾದುದರಿಂದ ಈಗ ಸುಮ್ಮನೆ ಊರಿಗೆ ಹೊರಟು ಹೋಗೋಣ.

೧೬೭. ಅನಂತರ ಈ ರಾಮನಮೇಲೆ ಯುದ್ಧಮಾಡಲು ಒಳ್ಳೆಯ ಮುಹೂರ್ತವನ್ನು ನೋಡಿಕೊಂಡು ಎಲ್ಲರೂ ಬರೋಣ. ಆಗ ನಮಗೆ ಖಂಡಿತವಾಗಿಯೂ ಜಯವು ಉಂಟಾಗಿಯೇ ಉಂಟಾಗುವುದು.

೧೬೮. ನಾವು ಯುದ್ಧಮಾಡಿ ರಾಮನನ್ನು ಸೋಲಿಸಿ ಬಾಣದಿಂದ ಏಟುತಿಂದು ರಣಾಂಗಣದಲ್ಲಿ ಅವನು ಬಿದ್ದುದನ್ನು ನೋಡಿದರೆ ಆಗ ನಾವೆಲ್ಲರೂ ಕೃತಕೃತ್ಯರಾಗುತ್ತೇವೆ.

ತದ್ಯೈವಾಸ್ಯಾವಮಾನಸ್ಯ ದುಃಖಂ ಮರ್ಮಸ್ಥಲಂ ಗತಂ ।
ತ್ಯಜಾಮಃ ಪಾರ್ಥಿವಾಸ್ಸರ್ವೇ ಜೇಷ್ಯಾಮೋ ರಾಘವಂ ಯದಾ ॥ ೧೬೯ ॥

ಕಿಮರ್ಥಮಧುನಾ ವೈರಂ ದರ್ಶನೀಯಂ ನೃಪಾಯ ವೈ ।
ಇತಿ ಸಮ್ಮಂತ್ರ್ಯ ತೇ ಸರ್ವೇ ತಥೇತ್ಯುಕ್ತ್ವಾ ನೃಪೋತ್ತಮಾಃ ॥ ೧೭೦ ॥

ಕೃತ್ವಾ ಸೀತಾವಿವಾಹಂ ಚ ಗಚ್ಛಾಮಃ ಸ್ವಸ್ಥಲಾನಿ ಹಿ ।
ತದಾ ತಾನ್ ಸಕಲಂ ವಸ್ತು ಗೃಹಾಣಿ ಜನಕೋ ಮುದಾ ॥ ೧೭೧ ॥

ಕಲ್ಪಯಾಮಾಸ ವಿಧಿವನ್ಮುನೀಂಶ್ಚಾಪಿ ರಘೂತ್ತಮಂ ।
ತತೋ ಗಾಧಿಜವಾಕ್ಯೇನ ವಿದೇಹಃ ಪ್ರೇಷ್ಯ ಮಂತ್ರಿಣಃ ॥ ೧೭೨ ॥

---

೧೬೯. ಮರ್ಮಸ್ಥಾನವನ್ನು ಹೊಂದಿರುವ ಈ ಅವಮಾನದ ದುಃಖವನ್ನು ನಾವು ರಾಮನನ್ನು ಜಯಿಸಿದಾಗ ಕಳೆದುಕೊಳ್ಳಬಹುದು. ಆದುದರಿಂದ ಈಗ ಹೊರಟು ಹೋಗಿ ಅನಂತರ ಸುಸಮಯದಲ್ಲಿ ಯುದ್ಧಕ್ಕೆ ಬರೋಣ.

೧೭೦. ಈಗ ರಾಮನಿಗಾಗಲೀ ಜನಕನಿಗಾಗಲೀ ನಾವು ವ್ಯರ್ಥವಾಗಿ ವೈರವನ್ನು ಏಕೆ ತೋರಿಸಬೇಕು? ಎಂಬುದಾಗಿ ಅವರೆಲ್ಲರೂ ಆಲೋಚಿಸಿಕೊಂಡು ಹಾಗೆಯೇ ಆಗಲಿ. ಮದುವೆಯನ್ನು ಮುಗಿಸಿಕೊಂಡು ಹೋಗುತ್ತೇವೆ. ಎಂದರು

೧೭೧. ಸೀತೆಯ ವಿವಾಹವನ್ನು ಮುಗಿಸಿಕೊಂಡು ನಮ್ಮ ನಮ್ಮ ಪಟ್ಟಣಗಳಿಗೆ ಹೋಗುತ್ತೇವೆ ಎಂದೆನ್ನಲು ಆಗ ಅವರಿಗೆ ಬೇಕಾಗುವ ಪದಾರ್ಥಗಳನ್ನೂ ಅವರಿಗೆ ಇಳಿದುಕೊಳ್ಳಲು ಅನುಕೂಲವಾದ ಮನೆಗಳನ್ನೂ ಸಂತೋಷದಿಂದ ಆ ಜನಕನು ಒದಗಿಸಿಕೊಟ್ಟನು.

೧೭೨. ಅವರಿಗೆ ಒದಗಿಸಿಕೊಟ್ಟುದಲ್ಲದೆ ಆ ವಿಶ್ವಾಮಿತ್ರನಿಗೂ ರಾಮಲಕ್ಷ್ಮಣರಿಗೂ ಬೇಕಾದುದನ್ನೆಲ್ಲಾ ಒದಗಿಸಿದನು. ಅನಂತರ ವಿಶ್ವಾಮಿತ್ರನ ಮಾತಿನ ಮೇರೆಗೆ ವಿದೇಹನು ದಶರಥನನ್ನು ಕರೆತರಲು ಮಂತ್ರಿಗಳನ್ನು ಕಳುಹಿಸಿದನು.

ಸಮಾನೇತುಂ ದಶರಥಂ ತತ್ಪ್ರತೀಕ್ಷಾಂ ಚಕಾರ ಸಃ |
ತೇಽಪಿ ಗತ್ವಾ ಮಂತ್ರಿಣಶ್ಚ ದೃಷ್ಟ್ವಾ ದಶರಥಂ ನೃಪಂ ॥ ೧೭೩ ॥

ವೃತ್ತಂ ನಿವೇದ್ಯ ಸಕಲಂ ತನ್ನತ್ವಾ ತತ್ಪುರಃ ಸ್ಥಿತಾಃ |
ವೃತ್ತಂ ದಶರಥಃ ಶ್ರುತ್ವಾ ತುತೋಷ ನಿತರಾಂ ತದಾ ॥ ೧೭೪ ॥

ಸೈನ್ಯೇನ ನಾಗರೈಸ್ಸರ್ವೈಃ ಸ್ತ್ರೀಭಿರ್ಜಾನಪದೈಸ್ಸಹ |
ಮಿಥಿಲಾಮುಗಮುಚ್ಚೀಘ್ರಂ ತದಾ ದಶರಥೋ ನೃಪಃ ॥ ೧೭೫ ॥

ತದಾ ಮಹೋತ್ಸವೇನೈವ ನೃಪಂ ದಶರಥಂ ಪುರೀಂ |
ನೇತುಂ ಗಜಂ ಪುರಸ್ಕೃತ್ಯ ಜನಕಃ ಪಾರ್ಥಿವೈರ್ಯಯೌ ॥ ೧೭೬ ॥

---

೧೭೩. ಆಗ ಮುಹೂರ್ತವನ್ನಿಟ್ಟು ಆ ದಶರಥನ ಬರುವಿಕೆಯನ್ನು ಎದರುನೋಡುತ್ತಿದ್ದನು. ಆ ಮಂತ್ರಿಗಳೆಲ್ಲರೂ ಅಯೋಧ್ಯೆಗೆ ಹೋಗಿ ದಶರಥನನ್ನು ಕಂಡರು.

೧೭೪. ಆ ದಶರಥನಿಗೆ ನಡೆದ ಸಮಾಚಾರವನ್ನೆಲ್ಲಾ ಹೇಳಿ ನಮಸ್ಕರಿಸಿ ಅವನಮುಂದೆ ಉತ್ತರವನ್ನು ನಿರೀಕ್ಷಿಸುತ್ತ ನಿಂತುಕೊಂಡರು. ಈ ವಿಷಯಗಳೆಲ್ಲ ವನ್ನೂ ಕೇಳಿದ ದಶರಥನು ಬಹುವಾಗಿ ಸಂತೋಷಪಟ್ಟನು.

೧೭೫. ಆಗ ದಶರಥನು ಸೈನ್ಯದೊಡನೆಯೂ ಪಟ್ಟಣಿಗರೊಡನೆಯೂ ಅಂತಃಪುರದ ಹೆಂಗಸರೊಡನೆಯೂ ದೇಶದ ಮುಖ್ಯಸ್ಥರೊಡನೆಯೂ ಬೇಗನೆ ಮಿಥಿಲೆಗೆ ಪ್ರಯಾಣಮಾಡಿದನು.

೧೭೬. ದಶರಥನು ಬಂದುದನ್ನು ಕೇಳಿ ಜನಕನು ಉತ್ಸವದಿಂದ ಆ ರಾಜನನ್ನು ಕರೆತರಲು ಆನೆ ಕುದುರೆಗಳನ್ನು ತೆಗೆದುಕೊಂಡು ರಾಜರೊಡನೆ ಎದುರುಗೊಳ್ಳಲು ಹೋದನು.

ತದಾ ದಶರಥಾಗ್ರೇ ತೌ ದೃಷ್ಟ್ವಾ ಕೈಕೇಯುಜಾಸುತೌ |
ಶ್ರೀರಾಮಲಕ್ಷ್ಮಣಾವತ್ರ ಕುತಃ ಪ್ರಾಪ್ತೌ ವ್ಯಚಿಂತಯುತ್ || ೧೭೭ ||

ತಾವದ್ರಾಮಲಕ್ಷ್ಮಣಾಭ್ಯಾಂ ಯುಕ್ತಂ ತಂ ಗಾಧಿಜಂ ಮುನಿಂ |
ಸ್ವಸೇನಾಯಾಂ ನೃಪೋ ದೃಷ್ಟ್ವಾ ವಿಸ್ಮಯಂ ಪ್ರಾಪ ಮೈಥಿಲಃ || ೧೭೮ ||

ತತೋ ದಶರಥಂ ನತ್ವಾ ವಸಿಷ್ಠಂ ಪ್ರಣಿಪತ್ಯ ಚ |
ಗಾಧಿಜಂ ಜನಕಃ ಪ್ರಾಹ ಕಾವೇತೌ ರಾಮರೂಪಿಣೌ || ೧೭೯ ||

ತತಸ್ತಂ ಗಾಧಿಜಃ ಪ್ರಾಹ ರಾಮಾಂಶಾದ್ಭರತಸ್ತ್ವಯಂ |
ಲಕ್ಷ್ಮಣಾಂಶಾಚ್ಚ ಶತ್ರುಘ್ನಃ ಕೈಕೇಯ್ಯಾನಂದನಾವಿಮೌ || ೧೮೦ ||

---

೧೭೭. ಜನಕನು ಕೈಕೇಯಿಯ ಮಕ್ಕಳಾದ ಭರತ ಶತ್ರುಘ್ನರನ್ನು ಆ ದಶರಥನ ಎದುರಿನಲ್ಲಿ ನೋಡಿ ರಾಮಲಕ್ಷ್ಮಣರು ನಮ್ಮ ಮನೆಯಲ್ಲಿ ಇದ್ದುಕೊಂಡಿದ್ದರಲ್ಲ ! ಇಲ್ಲಿಗೆ ಹೇಗೆ ತಾನೆ ಬಂದರು ! ಎಂದು ಯೋಚಿಸಿದನು.

೧೭೮. ಜನಕನು ಹಿಂದಿರುಗಿ ತನ್ನ ಸೇನೆಯಲ್ಲಿ ನೋಡಲು ಅದರೊಳಗೆ ಈ ರಾಮಲಕ್ಷ್ಮಣರೂ ವಿಶ್ವಾಮಿತ್ರಮುನಿಯೂ ಇದ್ದುದನ್ನು ನೋಡಿ ಬಹು ಆಶ್ಚರ್ಯಪಟ್ಟನು.

೧೭೯. ಒಡನೆಯೇ ದಶರಥನ ಬಳಿಗೆಹೋಗಿ ಅವನಿಗೆ ನಮಸ್ಕರಿಸಿದನು. ಆನಂತರ ಗುರುವಾದ ವಸಿಷ್ಠನಿಗೆ ನಮಸ್ಕರಿಸಿದನು. ಇತ್ತ ತಿರುಗಿ ವಿಶ್ವಾಮಿತ್ರನನ್ನು ಕುರಿತು ಜನಕನು ರಾಮಲಕ್ಷ್ಮಣರ ರೂಪಿನಂತಿರುವ ಇವರಾರು? ಎಂದು ಕೇಳಿದನು.

೧೮೦. ಆಗ ವಿಶ್ವಾಮಿತ್ರನು ಜನಕನನ್ನು ಕುರಿತು ರಾಮಾಂಶದಿಂದ ಭರತನೂ ಲಕ್ಷ್ಮಣಾಂಶದಿಂದ ಶತ್ರುಘ್ನನೂ ಹುಟ್ಟಿರುವರು. ಇವರಿಬ್ಬರೂ ಕೈಕೇಯಿಯ ಮಕ್ಕಳು ಎಂದು ಹೇಳಿದನು.

ತಚ್ಛ್ರುತ್ವಾ ಜನಕಃ ಪ್ರಾಹ ರಾಜಾನಂ ಗಾಥಿಜಂ ಗುರುಂ ।
ಸೀತಾಂ ರಾಮಾಯ ದಾಸ್ಯಾಮಿ ಲಬ್ಧಾಂ ಭೂಮ್ಯಾಮಯೋನಿಜಾಂ ॥

ದೇಹಜಾಮೂರ್ಮಿಳಾನಾಮ್ನೀಂ ಲಕ್ಷ್ಮಣಾಯಾರ್ಪಯಾಮ್ಯಹಂ ।
ಕುಶಧ್ವಜಸ್ಯ ಮೇ ಬಂಧೋಃ ಶ್ರುತಕೀರ್ತಿಶ್ಚ ಮಾಂಡವೀ ॥ ೧೮೨ ॥

ಏವಂ ತೇ ಬಾಲಿಕೇ ರಮ್ಯೇ ರೂಪಯೌವನಮಂಡಿತೇ ।
ಸೀತೋರ್ಮಿಲಾಭ್ಯಾಮಪಿ ಯೇ ಮಯಾ ನಿತ್ಯಂ ಪ್ರಲಾಲಿತೇ ॥ ೧೮೩ ॥

ದಾಸ್ಯಾಮ್ಯಹಂ ಭರತಾಯ ಮಾಂಡವೀಂ ಮಂಡನಾನ್ವಿತಾಂ ।
ಶತ್ರುಘ್ನಾಯ ಶ್ರುತಕೀರ್ತಿಮರ್ಪಯಾಮ್ಯಹ ಮಾದರಾತ್ ॥ ೧೮೪ ॥

---

೧೮೧. ಇದನ್ನು ಕೇಳಿ ಜನಕನು ದಶರಥನನ್ನೂ ವಿಶ್ವಾಮಿತ್ರನನ್ನೂ ಕುರಿತು ನನಗೆ ಭೂಮಿಯಲ್ಲಿ ಸಿಕ್ಕಿದ ಅಯೋನಿಜಳಾದ ಮಗಳಿರುವಳು. ಅವಳನ್ನು ರಾಮನಿಗೆ ಕೊಡುತ್ತೇನೆ. ಎಂಬುದು ನಿಶ್ಚಯವಾಗಿದೆಯಂತೆ.

೧೮೨. ನನ್ನ ಸ್ವಂತಮಗಳಾದ ಉರ್ಮಿಳೆಯೆಂಬುವಳನ್ನು ಲಕ್ಷ್ಮಣನಿಗೆ ಕೊಡುತ್ತೇನೆ. ನನ್ನ ತಮ್ಮನಾದ ಕುಶಧ್ವಜನಿಗೆ ಶ್ರುತಕೀರ್ತಿಯೆಂದೂ ಮಾಂಡವಿಯೆಂದೂ ಇಬ್ಬರು ಹೆಣ್ಣುಮಕ್ಕಳಿರುವರು.

೧೮೩. ಆ ಕನ್ಯೆಯರಿಬ್ಬರೂ ಸುಂದರಿಯರಾಗಿದ್ದಾರೆ. ರೂಪದಿಂದಲೂ ಯೌವನದಿಂದಲೂ ಕೂಡಿರುವರು. ಅವರಿಬ್ಬರನ್ನೂ ಸೀತೆ ಊರ್ಮಿಳೆಯರೊಡನೆಯೇ ನಾನು ಕಾಪಾಡಿಕೊಂಡು ಪಾಲಿಸುತ್ತಿರುವೆನು.

೧೮೪. ಅಲಂಕರಿಸಿ ಆ ಮಾಂಡವಿಯನ್ನು ಭರತನಿಗೂ ಶ್ರುತಕೀರ್ತಿಯನ್ನು ಶತ್ರುಘ್ನನಿಗೂ ಪ್ರೀತಿಪೂರ್ವಕವಾಗಿ ಕೊಡುತ್ತೇನೆ.

ಏವಂ ಸ್ನುಷಾಶ್ಚತಸ್ರಶ್ಚ ತ್ವಮಂಗೀಕುರು ಪಾರ್ಥಿವ ।
ಕಥೇತಿ ಜನಕಂ ಪ್ರಾಹ ರಾಜಾ ದಶರಥೋ ಮುದಾ ॥ ೧೮೫ ॥

ತತೋ ದಶರಥಃ ಪ್ರಾಹ ಶತಾನಂದಂ ಪುರೋಹಿತಂ ।
ಅಹಲ್ಯಾ ಜಠರೋದ್ಭೂತಂ ಮೈಥಿಲಾಗ್ರೇ ಸ್ಥಿತಂ ಮುನಿಂ ॥ ೧೮೬ ॥

ಕಥಂ ಲಬ್ಧಾ ಭುವಸ್ಸೀತಾ ತತ್ಸರ್ವಂ ವಕ್ತುಮರ್ಹಸಿ ।
ಶತಾನಂದಸ್ತಥೇತ್ಯುಕ್ತ್ವಾ ಬ್ರವೀದ್ದಶರಥಂ ನೃಪಂ ॥ ೧೮೭ ॥

॥ ಶತಾನಂದ ಉವಾಚ ॥

ಸಮ್ಯಕ್ಪೃಷ್ಟಂ ತ್ವಯಾ ರಾಜನ್ ಶೃಣುಷ್ವೈಕಾಗ್ರಮಾನಸಃ ।
ಆಸೀತ್ಪುರಾ ನೃಪಃ ಕಶ್ಚಿತ್ಪದ್ಮಾಕ್ಷ ಇತಿವಿಶ್ರುತಃ ॥ ೧೮೮ ॥

---

೧೮೫. ಎಲೈ ಪಾರ್ಥಿವನೆ ! ಈ ರೀತಿಯಾಗಿ ನಾಲ್ಕುಜನ ಸೊಸೆಯರನ್ನು ನೀನು ಅಂಗೀಕರಿಸು. ಎಂದನು. ಆಗ ದಶರಥನು ಸಂತೋಷದಿಂದ ಜನಕನಿಗೆ ಹಾಗೆಯೇ ಆಗಲೆಂದು ಹೇಳಿದನು.

೧೮೬. ಆಗ ದಶರಥನು ಪುರೋಹಿತನಾದ ಶತಾನಂದನನ್ನು ಕುರಿತು ಇಂತೆಂದನು. ಆ ಶತಾನಂದನು ಅಹಲ್ಯೆಯ ಮಗನು. ಜನಕನ ಪುರೋಹಿತನು ಉತ್ತಮವಾದ ತಪಸ್ವಿಯು.

೧೮೭. ಎಲೈ ಶತಾನಂದನೆ ! ಈ ಸೀತೆಯು ಭೂಮಿಯಿಂದ ಹೇಗೆ ಸಿಕ್ಕಿದಳು ? ಆ ವಿಷಯವೆಲ್ಲವನ್ನೂ ನೀನು ಹೇಳು ! ಎಂದೆನಲು ಶತಾನಂದನು ಹಾಗೆಯೇ ಆಗಲೆಂದು ಹೇಳಿ ದಶರಥನನ್ನು ಕುರಿತು ಇಂತೆಂದನು.

೧೮೮. ಶತಾನಂದನು ಹೇಳಿದನು—ಎಲೈ ರಾಜನೆ ! ನೀನು ಕೇಳಿದುದು ಸರಿ. ಚೆನ್ನಾಗಿದೆ. ಮನಸ್ಸಿಟ್ಟು ಕೇಳು. ಪೂರ್ವದಲ್ಲಿ ಪದ್ಮಾಕ್ಷನೆಂಬ ರಾಜನೊಬ್ಬನಿದ್ದನು.

ಸ ದೃಷ್ಟ್ವಾ ಸಕಲಾನ್ ಲೋಕಾನ್ ಲಕ್ಷ್ಮೀಕಾನ್ಯೈಕ ತತ್ಪರಾನ್ ।
ಚಿಂತಯಾಮಾಸ ಮನಸಿ ಲಕ್ಷ್ಮೀಂ ಕನ್ಯಾಂ ಕರೋಮ್ಯಹಂ ॥ ೧೮೯ ॥

ತಪಸ್ಯೈವ ನಿಜಾಂಕೇ ತಾಂ ರಂಜಯಾಮಿ ನಿರಂತರಂ ।
ಇತಿ ನಿಶ್ಚಿತ್ಯ ಸ ನೃಪಸ್ತಪ್ತ್ವಾ ತೀವ್ರಂ ಮಹತ್ತಪಃ ॥ ೧೯೦ ॥

ದೃಷ್ಟ್ವಾ ಪ್ರಸನ್ನಾಮಗ್ರೇ ತು ಲಕ್ಷ್ಮೀಂ ವಚನಮಬ್ರವೀತ್ ।
ದುಹಿತಾ ಮೇ ಭವ ತ್ವಂ ಹಿ ಸಾ ಪ್ರಾಹ ನೃಪತಿಂ ಪ್ರತಿ ॥ ೧೯೧ ॥

ಪರತಂತ್ರಾಸ್ಮ್ಯಹಂ ರಾಜನ್ ವಿಷ್ಣುಂ ತ್ವಂ ಪ್ರಾರ್ಥಯಾಧುನಾ ।
ಸ ಚೇದ್ದಾಸ್ಯಾಮಿ ಮಾಂ ತೇ ಹಿ ತರ್ಹ್ಯಹಂ ದುಹಿತಾ ತವ ॥ ೧೯೨ ॥

---

೧೮೯. ಆತನು ಪ್ರಪಂಚದಲ್ಲಿ ಎಲ್ಲರೂ ಲಕ್ಷ್ಮಿಯನ್ನೇ ಅಪೇಕ್ಷಿಸುತ್ತ ಅವಳಲ್ಲಿಯೇ ಅನುರಾಗ ಹೊಂದಿರುವುದನ್ನು ನೋಡಿ ನಾನು ಈ ಲಕ್ಷ್ಮಿಯನ್ನೇ ಮಗಳನ್ನಾಗಿ ಮಾಡಿಕೊಳ್ಳಬೇಕು. ಎಂದು ಯೋಚಿಸಿದನು.

೧೯೦. ತಪೋಬಲದಿಂದ ಆಕೆಯನ್ನೇ ಮಗಳನ್ನಾಗಿ ಹೊಂದಿ ಯಾವಾಗಲೂ ಆಕೆಯನ್ನು ತೊಡೆಯಮೇಲಿಟ್ಟುಕೊಂಡೇ ಸಂತೋಷಪಡುತ್ತೇನೆ ಎಂಬುದಾಗಿ ನಿಶ್ಚಯಿಸಿಕೊಂಡೇ ಬಹು ಉಗ್ರವಾದ ತಪಸ್ಸನ್ನು ಮಾಡಿದನು.

೧೯೧. ಆ ತಪಸ್ಸಿಗೆ ಲಕ್ಷ್ಮಿಯು ಪ್ರತ್ಯಕ್ಷಳಾಗಿ ಎದುರಿಗೆ ಬಂದು ನಿಂತಳು. ಆಗ ಆಕೆಯನ್ನು ಕುರಿತು ನೀನು ನನಗೆ ಮಗಳಾಗಿ ಹುಟ್ಟಬೇಕೆನ್ನಲು ಆಕೆಯು ಆವನಿಗೆ ಇಂತೆಂದಳು.

೧೯೨. ಎಲೈ ರಾಜನೆ! ನಾನು ಪರಾಧೀನಳು. ಆದುದರಿಂದ ನನ್ನ ಸ್ವಾಮಿಯಾದ ವಿಷ್ಣುವನ್ನು ನೀನು ಕೇಳಿಕೊ! ಅವನು ನನ್ನನ್ನು ನಿನಗೆ ಕೊಡುವ ಪಕ್ಷದಲ್ಲಿ ನಾನು ನಿನ್ನ ಮಗಳಾಗಿ ಹುಟ್ಟುತ್ತೇನೆ.

ಭವಿಷ್ಯಾಮಿ ನ ಸಂದೇಹಸ್ತಥೇತ್ಯುಕ್ತ್ವಾ ನೃಪಃ ಪುನಃ !
ತಪ್ತ್ವಾ ತೀವ್ರಂ ತಪೋ ವಿಷ್ಣುಂ ಚಕಾರ ವರದೋನ್ಮುಖಂ ॥ ೧೯೩ ॥

ನತ್ವಾ ತಂ ನೃಪತಿಃ ಪ್ರಾಹ ದೇಹಿ ಕನ್ಯಾಂ ರಮಾಂ ಮಮ ।
ತದ್ರಾಜವಚನಂ ಶ್ರುತ್ವಾ ಮಾತುಲಿಂಗ ಫಲಂ ಹರಿಃ ॥ ೧೯೪ ॥

ಪದ್ಮಾಕ್ಷಾಯ ದದೌ ಶ್ರೇಷ್ಠಂ ಸ್ವಯಮಂತರ್ದಧೇ ವಿಭುಃ ।
ತದ್ಭಿತ್ವಾ ನೃಪತಿಃ ಕನ್ಯಾಂ ದದರ್ಶ ಕನಕಪ್ರಭಾಂ ॥ ೧೯೫ ॥

ತಾಂ ದೃಷ್ಟ್ವಾ ಸಾಭಿಲಾಷಸ್ಸ ಕನ್ಯಾಂ ಮೇನೇ ನಿಜಾಂ ಶುಭಾಂ ।
ಪದ್ಮಾಕ್ಷ ನೃಪತೇಃ ಕನ್ಯಾಂ ಪದ್ಮಾಂ ಲೋಕಾಮುದೇತಿ ತೇ ॥ ೧೯೬ ॥

---

೧೯೩. ಹಾಗೆ ನೀನು ಮಾಡಿದರೆ ನಾನು ಖಂಡಿತವಾಗಿಯೂ ನಿನ್ನ ಮಗಳಾಗಿಯೂ ಹುಟ್ಟುತ್ತೇನೆ. ಎಂದು ಖಂಡಿತವಾಗಿ ಹೇಳಲು ಪದ್ಮಾಕ್ಷನು ಉಗ್ರವಾದ ತಪಸ್ಸನ್ನು ಮಾಡಿ ವಿಷ್ಣುವು ವರಕೊಡುವುದಕ್ಕೆ ಬರುವಂತೆ ಮಾಡಿಕೊಂಡನು.

೧೯೪. ಅದರಂತೆಯೇ ಆ ವಿಷ್ಣುವು ಪ್ರಸನ್ನನಾಗಿ ಬರಲು ಅವನಿಗೆ ಆ ರಾಜನು ನಮಸ್ಕರಿಸಿ ಎಲೈ ವಿಷ್ಣುವೆ ! ಲಕ್ಷ್ಮಿಯನ್ನು ನನಗೆ ಮಗಳನ್ನಾಗಿ ಕೊಡು ! ಎಂದನು.

೧೯೫ ಅದನ್ನು ಕೇಳಿ ಹರಿಯು ಆ ರಾಜನಿಗೆ ಒಂದು ಮಾದಲದ ಹಣ್ಣನ್ನು ಕೊಟ್ಟನು. ತಾನು ಅಂತರ್ಧಾನನಾಗಿ ಹೊರಟು ಹೋದನು. ಆ ರಾಜನು ಆ ಹಣ್ಣನ್ನು ಬಿಚ್ಚಿನೋಡಲು ಅದರೊಳಗೆ ಬಂದು ಸ್ವರ್ಣದಕಾಂತಿಯುಳ್ಳ ಕನ್ಯೆಯಿದ್ದಿತು.

೧೯೬. ಆ ಮಗುವನ್ನು ನೋಡಿ ಅವನು ಇದು ತನ್ನ ಮಗಳೆಂದು ತಿಳಿದುಕೊಂಡು ಸಂತೋಷದಿಂದ ತೆಗೆದುಕೊಂಡನು. ಅವಳು ಪದ್ಮಾಕ್ಷನ ಮಗಳಾದುದರಿಂದ ಜನರೆಲ್ಲರೂ ಆಕೆಯನ್ನು ಪದ್ಮೆಯೆಂದು ಕರೆದರು-

ಆಪ್ಯಯಾಮಾಸುಸ್ತ್ರಾಂ ರಮ್ಯಾಂ ಸರ್ವಚಿತ್ತೈಕರಂಜಿನೀಂ ।
ಶಕಲೇ ಮಾತುಲಿಂಗಸ್ಯ ಭೂತ್ವಾ ತತ್ರ ಫಲಂ ಪುನಃ ॥ ೧೯೭ ॥

ಜಾತಂ ದೃಷ್ಟ್ವಾ ದಧಾರಾಥ ಸ್ವಹಸ್ತೇ ನೃಪತೇಸ್ಸುತಾ ।
ಪ್ರಾವವರ್ಧ ತನ್ನೃಪತೇರಂಕೇ ಚಂದ್ರಕಲಾ ಯಥಾ ॥ ೧೯೮ ॥

ಶುಕ್ಲಪಕ್ಷೇ ಚ ತಾಂ ದೃಷ್ಟ್ವಾ ಪದ್ಮಾಕ್ಷೋ ಚಿಂತಯದ್ಧೃದಿ ।
ಕಸ್ಮೈ ದೇಯಾ ಮಯಾ ಕನ್ಯಾ ಹ್ಯಸ್ಮೈ ಯೋಗ್ಯೋ ವರೋತ್ರ ಕಃ ।

ತತಸ್ಸ ಮಂತ್ರ್ಯ ನೃಪತಿಸ್ಸ್ವಯಂವರಮಥಾರಭತ್ ।
ಸ್ವಯಂವರೇಥ ಪದ್ಮಾಯಾ ಯಜ್ಞಾರಂಭಂ ಚಕಾರ ಸಃ ॥ ೨೦೦ ॥

---

೧೯೭. ಅವಳು ಎಲ್ಲರ ಮನಸ್ಸಿಗೂ ಸಂತೋಷವನ್ನುಂಟುಮಾಡುತ್ತಿದ್ದಳು. ಆ ಹಣ್ಣಿನ ಚೂರುಗಳು ಮತ್ತೆ ಒಂದಾಗಿ ಕೂಡಿಕೊಂಡು ಮೊದಲಿನಂತೆ ಹಣ್ಣಾಗಿ ಒಂದಾದುವು.

೧೯೮. ಆ ಚೂರುಗಳು ಒಂದಾಗಿ ಕೂಡಿ ಮೊದಲಿನಂತೆ ಉಂಡೆಯಾದ ಹಣ್ಣಾದುದನ್ನು ನೋಡಿ ಆ ರಾಜನ ಮಗಳು ಅದನ್ನು ಕೈಯ್ಯಲ್ಲಿ ತೆಗೆದುಕೊಂಡಳು. ಆಗ ಆ ಹುಡುಗಿಯು ಆ ರಾಜನ ತೊಡೆಯಮೇಲೆ ಲಾಲನೆ ಪಾಲನೆಗಳಿಂದ ಶುಕ್ಲಪಕ್ಷದ ಚಂದ್ರಕಲೆಯಂತೆ ವೃದ್ಧಿಹೊಂದಿದಳು.

೧೯೯. ಈಕೆಯು ವೃದ್ಧಿಹೊಂದುತ್ತಿರಲು ಯೌವನ ವಯಸ್ಸು ಬರುತ್ತಿರುವ ಈಕೆಯನ್ನು ನೋಡಿ ಈಕೆಯನ್ನು ಯಾರಿಗೆ ಕೊಡಲಿ? ಈಕೆಗೆ ಯೋಗ್ಯನಾದ ವರನಾರು? ಎಲ್ಲಿರುವನು? ಎಂಬುದಾಗಿ ಮನಸ್ಸಿನಲ್ಲಿ ಯೋಚಿಸುತ್ತಿದ್ದನು.

೨೦೦. ಸರಿಯಾದ ವರನನ್ನು ಎಲ್ಲಿಯೂ ಕಾಣದೆ ಕೊನೆಗೆ ಸ್ವಯಂವರವನ್ನು ಮಾಡಬೇಕೆಂದೇ ನಿರ್ಧರಿಸಿಕೊಂಡನು. ಈ ಪದ್ಮಗೆ ಸ್ವಯಂವರ ಮಾಡುವ ಸಮಯದಲ್ಲಿ ಯಜ್ಞಮಾಡಲು ಮೊದಲು ಮಾಡಿದನು.

ಸ್ವಯಂವರಾಯ ಯಜ್ಞಾಯ ಪತ್ರೈರಾಕಾರಯನ್ನೃಪಾನ್ ।
ತೇಽಪಿ ಶೃಂಗಾರಯುಕ್ತಾಶ್ಚ ಯಯುಃ ಪದ್ಮಾಸ್ವಯಂವರಂ ॥ ೨೦೧ ॥

ಪದ್ಮಾಸ್ವಯಂವರಂ ಶ್ರುತ್ವಾ ಯಯುಸ್ತತ್ರ ಮುನೀಶ್ವರಾಃ ।
ಯಯುರ್ದೇವಾಸ್ಸಗಂಧರ್ವಾ ದಾನವಾ ಮಾನವಾಃ ಖಗಾಃ ॥ ೨೦೨ ॥

ನಗಾ ನದ್ಯಸ್ಸಮುದ್ರಾಶ್ಚ ಭೂರುಹಃ ಕಾಮರೂಪಿಣಃ ।
ಯಯುರ್ಯಕ್ಷಾಃ ಕಿನ್ನರಾಶ್ಚ ರಾಕ್ಷಸಾ ರಾವಣಾದಯಃ ॥ ೨೦೩ ॥

ಸರ್ವಾನ್ ಸಮಾಗತಾನ್ ದೃಷ್ಟ್ವಾ ಪದ್ಮಾಕ್ಷಃ ಪ್ರಾಹ ತಾನ್ಪ್ರತಿ ।
ಆಕಾಶನೀಲವರ್ಣೇನ ಯಸ್ಸ್ವಾಂಗಂ ಪರಿಲೇಪಯೇತ್ ॥ ೨೦೪ ॥

---

೨೦೧. ಸ್ವಯಂವರವೂ ಯಜ್ಞವೂ ನಡೆಯುವುದೆಂದು ಹೇಳಿ ಎಲ್ಲಾ ರಾಜರಿಗೂ ಕಾಗದಗಳನ್ನು ಬರೆದು ಕರೆಸಿದನು. ಅವರೆಲ್ಲರೂ ಅಲಂಕರಿಸಿಕೊಂಡು ಈ ಪದ್ಮೆಯ ಸ್ವಯಂವರಕ್ಕೆ ಬಂದರು.

೨೦೨–೨೦೩. ಈ ಪದ್ಮೆಯ ಸ್ವಯಂವರವನ್ನು ಕೇಳಿ ಅಲ್ಲಿಗೆ ಮುನೀಶ್ವರರೂ ಹೋದರು. ದೇವತೆಗಳೂ ದಾನವರೂ ಮಾನವರೂ ಖಗರೂ ನಗಗಳೂ ನದಿಗಳೂ ಸಮುದ್ರಗಳೂ ಕಾಮರೂಪಿಗಳಾದ ಮರಗಳೂ ಯಕ್ಷರೂ ಕಿನ್ನರರೂ ರಾಕ್ಷಸರೂ ಎಲ್ಲರೂ ಹೋದರು. ರಾವಣನೂ ಬಂದನು.

೨೦೪. ಎಲ್ಲರೂ ಆ ಸಭೆಗೆ ಬಂದು ಸೇರಲು ಪದ್ಮಾಕ್ಷನು ಅವರನ್ನು ನೋಡಿ ಇಂತೆಂದನು—ಎಲೈ ರಾಜರಿರಾ! ಆಕಾಶದಂತಿರುವ ನೀಲಿಯ ಬಣ್ಣದಿಂದ ಯಾವನು ಅಂಗವನ್ನು ಹೊಂದಿ ಬಣ್ಣವುಳ್ಳವನಾಗಿರುವನೋ ಅವನಿಗೆ ನನ್ನ ಮಗಳನ್ನು ಕೊಡುತ್ತೇನೆ.

ದದಾಮಿ ತಸ್ಮೈ ಪದ್ಮೇಯಂ ಸತ್ಯಂ ಜ್ಞೇಯಂ ವಚೋ ಮಮ |
ತದ್ರಾಜವಚನಂ ಶ್ರುತ್ವಾ ದುರ್ಘಟಂ ನೃಪಸತ್ತಮಾಃ || ೨೦೫ ||

ಪದ್ಮಾಸೌಂದರ್ಯ ಸಂಭ್ರಾಂತಾಸ್ತಾಂ ಹರ್ತುಂ ತೇ ಸಮುದ್ಯತಾಃ |
ತಾನ್ ಕನ್ಯಾಹರಣೋದ್ಯುಕ್ತಾನ್ ನೃಪಾನ್ ದೃಷ್ಟ್ವಾ ಸನಿರ್ಜರಾನ್ || ೨೦೬ ||

ಚಕಾರ ಸಂಗರಂ ತೈಸ್ಸಃ ಪದ್ಮಾಕ್ಷೋ ಲೋಮಹರ್ಷಣಂ |
ತದ್ಬಾಣಪೀಡಿತಾ ದೇವಾ ಮಾನವಾ ವಿಮುಖಾ ರಣೇ || ೨೦೭ ||

ಬಭೂವುಸ್ತತ್ರ ದೈತ್ಯೈಶ್ಚ ಪದ್ಮಾಕ್ಷೋ ನಿಹತೋ ರಣೇ |
ತತಸ್ತೇ ಮಿಲಿತಾಸ್ಸರ್ವೇ ತಾಂ ಧರ್ತುಂ ದುದ್ರುವುರ್ಜವಾತ್ || ೨೦೮ ||

---

೨೦೫. ಈ ನನ್ನ ಮಾತನ್ನು ಸತ್ಯವೆಂದು ತಿಳಿಯಿರಿ ! ಎಂದನು. ಇದನ್ನು ಆ ರಾಜರೆಲ್ಲರೂ ಕೇಳಿದರು. ಅವರು ಈ ರಾಜನು ಹೇಳುವ ವರನು ಸಿಕ್ಕುವುದು ಸಾಧ್ಯವಲ್ಲವೆಂದು ತಿಳಿದರು.

೨೦೬. ಈ ಪದ್ಮೆಯ ಸೌಂದರ್ಯದಿಂದ ಮೋಹಗೊಂಡು ಆಕೆಯನ್ನು ಕದ್ದುಕೊಂಡು ಹೋಗಲು ಅವರೆಲ್ಲರೂ ಪ್ರಯತ್ನಪಟ್ಟರು. ದೇವತೆಗಳೂ ರಾಜರೂ ಹೀಗೆ ಪ್ರಯತ್ನಪಟ್ಟು ಬಂದುದನ್ನು ಪದ್ಮಾಕ್ಷನು ನೋಡಿದನು.

೨೦೭. ಆಗ ಅವರೊಡನೆ ಈ ಪದ್ಮಾಕ್ಷನು ಬಹು ಉಗ್ರವಾದ ಯುದ್ಧವನ್ನು ಮಾಡಿದನು. ಅವನ ಬಾಣದ ಏಟನ್ನು ತಡೆಯಲಾರದೆ ಆ ದೇವತೆಗಳೂ ರಾಜರೂ ರಣಾಂಗಣದಲ್ಲಿ ಸೋತು ಹಿಂದಿರುಗಿದರು.

೨೦೮. ಆದರೆ ದೈತ್ಯರು ಆ ಪದ್ಮಾಕ್ಷನನ್ನು ಯುದ್ಧದಲ್ಲಿ ಕೊಂದರು. ಅನಂತರ ಆ ದೈತ್ಯರು ಒಟ್ಟಿಗೆ ಸೇರಿಕೊಂಡು ಆ ಪದ್ಮೆಯನ್ನು ಹಿಡಿದುಕೊಳ್ಳಲು ಬೇಗನೆ ಅವಳಲ್ಲಿಗೆ ಹೋದರು.

ಸಾ ದೃಷ್ಟ್ವಾ ಧರ್ತುಮುದ್ಯುಕ್ತಾನ್ ಜುಹವಾಗ್ನೌ ಕಲೇವರಂ ।
ತಾಮದೃಷ್ಟ್ವಾ ನೃಪಾದ್ಯಾಸ್ತೇ ವಿಚಿನ್ವನ್ನಗರೇ ತದಾ ॥ ೨೦೯ ॥

ಬಭಂಜುರ್ನೃಪಗೇಹಾನಿ ಭೂಮಿಂ ಚಕ್ರುರಿತಸ್ತತಃ ।
ಸ್ಮಶಾನತುಲ್ಯಂ ನಗರಂ ಜಾತಂ ವೈ ಕ್ಷಣಮಾತ್ರತಃ ॥ ೨೧೦ ॥

ಪದ್ಮಾಕ್ಷನೃಪತೇರ್ಲಕ್ಷ್ಮೀಸಂಗಾಜ್ಜಾತೇದೃಶೀ ದಶಾ ।
ತಸ್ಮಾನ್ನ ಮುನಯೋ ಲಕ್ಷ್ಮೀಂ ಕಾಮಯಂತಿ ಕದಾಚನ ॥ ೨೧೧ ॥

ಲಕ್ಷ್ಮ್ಯಾ ಚಿತ್ತಸ್ಯ ಚಾಂಚಲ್ಯಂ ಭಯಂ ಶೋಕೋ ವಧೋಽಪಿ ಚ ।
ಭವತ್ಯೇವ ಮಹದ್ದುಃಖಂ ತಸ್ಮಾತ್ತಾಂ ಪರಿವರ್ಜಯೇತ್ ॥ ೨೧೨ ॥

---

೨೦೯. ಅವರೆಲ್ಲರೂ ತನ್ನನ್ನು ಹಿಡಿದುಕೊಳ್ಳಲು ಬರುತ್ತಿರುವುದನ್ನು ನೋಡಿ ಪದ್ಮೆಯು ಆ ಯಜ್ಞದ ಅಗ್ನಿಯಲ್ಲಿ ಬಿದ್ದು ಸುಟ್ಟುಹೋದಳು. ಆ ಪದ್ಮೆಯನ್ನು ಅಲ್ಲಿ ಕಾಣದೆ ಅವರೆಲ್ಲರೂ ಆ ಪಟ್ಟಣದಲ್ಲೆಲ್ಲಾ ಹುಡುಕಿದರು.

೨೧೦. ಆ ರಾಜನ ಅರಮನೆಯೆಲ್ಲವನ್ನೂ ಒಡೆದುಹಾಕಿದರು. ಭೂಮಿಯನ್ನು ಅಗೆದು ಅತ್ತಿತ್ತ ಕೆಳಗುಮೇಲು ಮಾಡಿದರು. ಆ ಪಟ್ಟಣವೆಲ್ಲವೂ ಕ್ಷಣಕಾಲದಲ್ಲಿ ಸ್ಮಶಾನಕ್ಕೆ ಸಮವಾಗಿ ಹೋಯಿತು.

೨೧೧. ಲಕ್ಷ್ಮಿಯನ್ನು ಮಗಳನ್ನಾಗಿ ಅಪೇಕ್ಷಿಸಿ ಹೊಂದಿದುದರಿಂದ ಆ ಪದ್ಮಾಕ್ಷನಿಗೆ ಈರೀತಿಯಾದ ಸ್ಥಿತಿಯು ಒದಗಿತು. ಆದುದರಿಂದಲೇ ಮುನಿಗಳು ಈ ಲಕ್ಷ್ಮಿಯನ್ನು ಅಪೇಕ್ಷಿಸುವುದೇ ಇಲ್ಲ.

೨೧೨. ಈ ಲಕ್ಷ್ಮಿಯ ಸಹವಾಸವು ಒದಗಿದರೆ ಚಿತ್ತಕ್ಕೆ ಚಾಂಚಲ್ಯವು ಬರುತ್ತದೆ. ಭಯವುಂಟಾಗುತ್ತದೆ. ದುಃಖವು ಬರುತ್ತದೆ. ಕೊನೆಗೆ ಮೃತ್ಯುವೂ ಸಿದ್ಧವಾಗಿರುತ್ತದೆ. ಈರೀತಿಯಾಗಿ ಬಹಳವಾದ ದುಃಖಗಳುಂಟಾಗುತ್ತವೆ. ಆದ್ದರಿಂದ ಆಕೆಯನ್ನು ಮೊದಲಲ್ಲಿಯೇ ಬಿಟ್ಟುಬಿಡಬೇಕು.

ಪದ್ಮಾಕ್ಷೇ ನಿಹತೇ ಯುದ್ಧೇ ನೃಪಪತ್ನ್ಯಸ್ಸಹಸ್ರಶಃ ।
ಭರ್ತ್ರಾ ಸಹೈವ ಗಮನಂ ಚಕ್ರುಸ್ತಾ ಭಯನಿರ್ಭರಾಃ ॥ ೨೧೩ ॥

ತತಸ್ತೇ ದೈತ್ಯವರ್ಯಾದ್ಯಾ ಯಯುಃ ಸ್ವಂ ಸ್ವಂ ಸ್ಥಲಂ ಪ್ರತಿ ।
ಏಕದಾ ವಹ್ನಿಕುಂಡಾತ್ಸಾ ಪದ್ಮಾಶಕ್ತಿಃ ಸ್ಥಿರಾ ಹರೇಃ ॥ ೨೧೪ ॥

ಬಹಿರ್ನಿರ್ಗತ್ಯ ಕುಂಡಸ್ಯ ಸಮೀಪೇ ಸಮುಪಾವಿಶತ್ ।
ಏತಸ್ಮಿನ್ನಂತರೇ ತತ್ರ ಪುಷ್ಪಕಸ್ಥೋ ದಶಾನನಃ ॥ ೨೧೫ ॥

ವಿಚರನ್ ಜಗತೀಂ ಜೇತುಮಾಕಾಶವರ್ತ್ಮನಾ ಯಯೌ ।
ಸಾರಣಸ್ತಾಂ ದದರ್ಶಾಥ ವಹ್ನಿಕುಂಡೇ ಬಹಿಃ ಸ್ಥಿತಾಂ ॥ ೨೧೬ ॥

---

೨೧೩. ಪದ್ಮಾಕ್ಷನು ಯುದ್ಧದಲ್ಲಿ ಸತ್ತುಹೋದನು. ಆ ರಾಜನಿಗೆ ಅನೇಕ ಜನ ಹೆಂಡತಿಯರಿದ್ದರು. ಅವರೆಲ್ಲರೂ ಭಯಗೊಂಡು ಗಂಡನ ದೇಹದೊಡನೆಯೇ ಸಹಗಮನವನ್ನು ಮಾಡಿದರು.

೨೧೪. ಆಮೇಲೆ ಆ ದೈತ್ಯರೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು. ಹೀಗಿರಲು ಒಂದುಸಾರಿ ಆ ಪದ್ಮೆಯ ದೇಹವು ಸುಟ್ಟಮೇಲೆ ಪದ್ಮೆಯಲ್ಲಿದ್ದ ಹರಿಯ ಸ್ಥಿರವಾದ ಶಕ್ತಿಯು ಹೊರಗೆ ಬಂದಿತು.

೨೧೫. ಹೀಗೆ ಆ ಶಕ್ತಿಯು ಹೊರಗೆ ಬಂದು ಯಜ್ಞಕುಂಡದ ಬಳಿಯಲ್ಲಿ ಕುಳಿತುಕೊಂಡಿತು. ಈ ಸಮಯದಲ್ಲಿ ದಶಕಂಠನು ಅಲ್ಲಿಗೆ ಪುಷ್ಪಕವಿಮಾನದಲ್ಲಿ ಸಂಚರಿಸುತ್ತಾ ಬಂದಿದ್ದನು.

೨೧೬. ಆಗ ಅವನ ಪ್ರಯಾಣವು ಜಗತ್ತನ್ನೆಲ್ಲಾ ಜಯಿಸುವುದಕ್ಕಾಗಿ ಮಾಡಿದುದಾಗಿದ್ದಿತು. ಆದಕ್ಕೋಸ್ಕರ ಆಕಾಶಮಾರ್ಗದಿಂದ ಹೊರಟಿದ್ದನು. ಸಾರಣನೆಂಬ ರಾಕ್ಷಸನು ಕುಂಡದ ಬಳಿಯಲ್ಲಿ ಕುಳಿತಿರುವ ಈ ಶಕ್ತಿಯನ್ನು ನೋಡಿದನು.

ಸಾರಣೋ ದರ್ಶಯಾಮಾಸ ರಾವಣಾಯ ವಚೋಽಬ್ರವೀತ್ |
ಪುರಾ ಸುರಾಸುರಾದ್ಯಾಶ್ಚ ಯಾಂ ಧರ್ತುಂ ಸಮುಪಸ್ಥಿತಾಃ || ೨೧೭ ||

ಸೇಯಂ ಪದ್ಮಾಕ್ಷನೃಪತೇಃ ಕನ್ಯಾ ಪದ್ಮಾಗ್ನಿಸನ್ನಿಧೌ |
ತತ್ಸಾರಣವಚಶ್ಶ್ರುತ್ವಾ ತಾಂ ದೃಷ್ಟ್ವಾ ಕಾಮಮೋಹಿತಃ || ೨೧೮ ||

ಯಾನಾಜ್ಜವಾದುತ್ಪಪಾತ ತಾಂ ಧರ್ತುಂ ಸಾನಲೇಽವಿಶತ್ |
ತಾಮಗ್ನೌ ಸಂಪ್ರವಿಷ್ಟಾಂ ಸ ದೃಷ್ಟ್ವಾ ಜ್ಞಾತ್ವಾಥ ತತ್ ಸ್ಥಲಂ || ೨೧೯ ||

ತತಃ ಪ್ರಾಹ ದಶಾಸ್ಯಸ್ಸ ತ್ವಯಾ ದೇವಾ ನೃಪಾದಯಃ |
ಕೃತ್ವಾಗ್ನೌ ವಸತಿಂ ಪದ್ಮೇ ಶ್ರಮಗ್ರಸ್ತಾಃ ಕೃತಾ ಪುರಾ || ೨೨೦ ||

೨೧೭-೨೧೮. ಸಾರಣನು ದಶಾನನನಿಗೆ ಈ ಶಕ್ತಿಯನ್ನು ತೋರಿಸುತ್ತ ಇಂತೆಂದನು. ಪೂರ್ವದಲ್ಲಿ ಸುರಾಸುರರು ಯಾವಳನ್ನು ಹಿಡಿದುಕೊಳ್ಳುವುದಕ್ಕೆ ಪ್ರಯತ್ನಿಸಿದರೋ ಆ ಪದ್ಮಾಕ್ಷನ ಮಗಳಾದ ಪದ್ಮೆಯು ಅಗ್ನಿಕುಂಡದ ಹತ್ತಿರದಲ್ಲಿದ್ದಾಳೆ. ಎಂದು ಹೇಳಲು ದಶಾನನನು ಆ ಸಾರಣನ ಆ ಮಾತನ್ನು ಕೇಳಿ ಅತ್ತನೋಡಲು ಅಲ್ಲಿ ಅವಳು ಕುಳಿತಿದ್ದಳು. ಅವಳನ್ನು ನೋಡಿದ ಒಡನೆಯೇ ಈ ದಶಾನನನು ಕಾಮ ಮೋಹಿತನಾದನು.

೨೧೯. ಒಡನೆಯೇ ಆ ಪುಷ್ಪಕದಿಂದ ಹಾರಿ ಆಕೆಯನ್ನು ಹಿಡಿದುಕೊಳ್ಳಲು ಆಕೆಯ ಬಳಿಗೆ ಹೋಗಲು ಅವಳು ಆದೇ ಕುಂಡದಲ್ಲಿರುವ ಬೆಂಕಿಯಲ್ಲಿ ಬಿದ್ದು ಬಿಟ್ಟಳು. ಅವಳು ಅಗ್ನಿಯಲ್ಲಿ ಪ್ರವೇಶಿಸಿದುದನ್ನು ಅವನು ನೋಡಿ ಆಕೆಯಿರುವ ಆ ಜಾಗವನ್ನು ತಿಳಿದುಕೊಂಡನು.

೨೨೦. ಅಲ್ಲಿಗೆ ಹೋಗಿ ಎಲೈ ಪದ್ಮೆಯೇ ! ನಿನ್ನನ್ನು ಪೂರ್ವದಲ್ಲಿ ಎಲ್ಲರೂ ಮೋಹಿಸಿ ನೀನು ಅಗ್ನಿಯಲ್ಲಿ ವಾಸಮಾಡುವುದನ್ನು ತಿಳಿಯದೆ ಅವರೆಲ್ಲರೂ ಬಹುವಾಗಿ ಹುಡುಕಿ ಶ್ರಮಪಟ್ಟರು.

ತತದ್ಯ ವಾಸಸ್ಥಾನಂ ತೇ ಮಯಾ ಜ್ಞಾತಂ ಮನೋರಮೇ ।
ಪದ್ಮೇಽಧುನಾಹಂ ತ್ವಾಂ ಧರ್ತುಂ ಶೋಧಯಾಮ್ಯನಲಸ್ಥಲಂ ॥ ೨೨೧ ॥

ಇತ್ಯುಕ್ತ್ವಾ ಜಲಕುಂಭೈಶ್ಚ ಸಿಷೇಚಾಗ್ನಿಂ ದಶಾನನಃ ।
ಯಾಪಶ್ಯತಿ ರಕ್ಷಾಯಾಂ ತಾವತ್ತತ್ರ ದದರ್ಶ ಸಃ ॥ ೨೨೨ ॥

ಪಂಚ ರತ್ನಾನಿ ದಿವ್ಯಾನಿ ಗೃಹೀತ್ವಾ ತಾನಿ ರಾವಣಃ ।
ಕರಂಡಿಕಾಯಾಂ ಸಂಸ್ಥಾಪ್ಯ ವಿಮಾನೇನ ಯಯೌ ಪುರೀಂ ॥ ೨೨೩ ॥

ಕರಂಡಿಕಾಂ ದೇವಗೇಹೇ ಸಂಸ್ಥಾಪ್ಯ ರಾವಣಸ್ತದಾ ।
ರಾತ್ರೌ ಮಂಡೋದರೀಂ ಪ್ರಾಹ ಮಂಚಕಸ್ಥಾಂ ರಹಸ್ಥಿತಃ ॥ ೨೨೪ ॥

---

೨೨೧. ಎಲೈ ಸುಂದರಿಯೆ ! ನೀನು ವಾಸಮಾಡುವ ಸ್ಥಾನವು ಈಗ ನನಗೆ ತಿಳಿಯಿತು. ಎಲೈ ಪದ್ಮೆಯೇ ! ಈಗ ನಾನು ನಿನ್ನನ್ನು ಹಿಡಿಯಲು ಈ ಅಗ್ನಿಕುಂಡವನ್ನೆಲ್ಲವನ್ನೂ ಶೋಧಿಸುತ್ತೇನೆ.

೨೨೨. ಹೀಗೆಂದು ಹೇಳುತ್ತ ಆ ದಶಾನನನು ಬಿಂದಿಗೆಗಳಲ್ಲಿ ನೀರನ್ನು ತರಿಸಿ ಆ ಬೆಂಕಿಗೆ ನೀರನ್ನು ಹಾಕಿಸಿದನು. ಬೆಂಕಿಯು ಆರಿದ ಮೇಲೆ ಆ ರಕ್ಷೆ ರೂಪವಾದ ಬೂದಿಯಲ್ಲಿ ಹುಡುಕಿದನು.

೨೨೩. ಅದರಲ್ಲಿ ಐದು ದಿವ್ಯವಾದ ಮಹಾರತ್ನಗಳು ಸಿಕ್ಕಿದುವು. ರಾವಣನು ಅವನ್ನು ತೆಗೆದುಕೊಂಡು ಒಂದು ಭರಣಿಯಲ್ಲಿಟ್ಟು ಜೋಪಾನ ಮಾಡಿಕೊಂಡು ವಿಮಾನದಲ್ಲಿ ಲಂಕೆಗೆ ಹೊರಟುಹೋದನು.

೨೨೪. ರಾವಣನು ಆ ರತ್ನಗಳನ್ನು ತನ್ನ ದೇವರ ಮನೆಯಲ್ಲಿಟ್ಟು ರಾತ್ರಿಯಲ್ಲಿ ಮಂಡೋದರಿಯೊಡನೆ ಮಂಚದಲ್ಲಿ ಮಲಗಿರುವಾಗ ಆಕೆಯೊಡನೆ ಗುಟ್ಟಾಗಿ ಇಂತೆಂದನು.

ಹೇ ಮಂಡೋದರಿ ರತ್ನಾನಿ ಮಯಾ ತ್ವತ್ತೋಷದಾನಿ ಹಿ ।
ಸಮಾನೀತಾನಿ ಯತ್ನೇನ ತ್ವದರ್ಥಂ ಸುರಸದ್ಮನಿ ॥ ೨೨೫ ॥

ಕರಂಡಿಕಾಯಾಂ ವರ್ತಂತೇ ಗಚ್ಛ ಗೃಹ್ಣೀಷ್ವ ತಾನಿ ಹಿ ।
ತದ್ದಶಾಸ್ಯ ವಚಃ ಶ್ರುತ್ವಾ ಸಾ ಯಯೌ ನಿರ್ಜರಾರ್ ಗೃಹಾರ್ ॥ ೨೨೬ ॥

ಕರಂಡಿಕಾಂ ತತ್ರ ದೃಷ್ಟ್ವಾ ತಾಂ ನೇತುಂ ಪತಿಸನ್ನಿಧೌ ।
ಯಾವದುಚ್ಚಾಲಯಾಮಾಸ ನ ಚಚಾಲ ತದಾ ಭುವಃ ॥ ೨೨೭ ॥

ತದಾ ಸಾ ಲಜ್ಜಿತಾ ಗತ್ವಾ ರಾವಣಾಯ ನ್ಯವೇದಯತ್ ।
ತಚ್ಛ್ರುತ್ವಾ ಸ ಪ್ರಸಹ್ಯಾಥ ಸ್ವಯಂ ನೇತುಂ ಯಯೌ ತದಾ ॥ ೨೨೮ ॥

---

೨೨೫. ಎಲೈ ಮಂಡೋದರಿಯೇ! ನಿನಗೆ ಸಂತೋಷವನ್ನುಂಟು ಮಾಡುವ ರತ್ನಗಳನ್ನು ಪ್ರಯತ್ನಪಟ್ಟು ನಿನಗೋಸ್ಕರ ತಂದಿರುವೆನು. ಅವನ್ನು ದೇವರ ಮನೆಯಲ್ಲಿಟ್ಟಿರುವೆನು.

೨೨೬. ಅವು ಭರಣಿಯಲ್ಲಿವೆ. ಹೋಗು! ಅವನ್ನು ತೆಗೆದುಕೊ! ಎಂದೆನ್ನಲು ಮಂಡೋದರಿಯು ಗಂಡನ ಮಾತನ್ನು ಕೇಳಿ ದೇವರಮನೆಗ ಅವನ್ನು ತೆಗೆದುಕೊಳ್ಳಲು ಹೋದಳು.

೨೨೭. ಮಂಡೋದರಿಯು ಆ ದೇವರಮನೆಗೆ ಹೋಗಿ ಭರಣಿಯನ್ನು ನೋಡಿ ಅದನ್ನು ತೆಗೆದುಕೊಂಡು ಗಂಡನ ಬಳಿಗೆ ಹೋಗಲು ಆ ಭರಣಿಯನ್ನು ಹಿಡಿದುಕೊಂಡು ಎತ್ತಿದಳು. ಆಗ ಆ ಭರಣಿಯು ಎತ್ತುವುದಕ್ಕಾಗದೆ ನೆಲದಿಂದ ಮೇಲಕ್ಕೆ ಏಳಲೇ ಇಲ್ಲ.

೨೨೮. ಇದನ್ನು ನೋಡಿ ಅವಳಿಗೆ ಬಹು ನಾಚಿಕೆಯುಂಟಾಯಿತು. ಈ ವಿಷಯವನ್ನು ರಾವಣನಿಗೆ ಹೇಳಿದಳು. ಈ ಮಂಡೋದರಿಯ ಮಾತನ್ನು ಕೇಳಿ ರಾವಣನು ನಕ್ಕು ಅದನ್ನು ಅಲ್ಲಿಂದ ತರಲು ತಾನೇ ಅಲ್ಲಿಗೆ ಹೋದನು.

ತಾಂ ಸೋಽಪ್ಯುಚ್ಚಾಲಯಾಮಾಸ ನ ಚಚಾಲ ಕರಂಡಿಕಾ |
ಯದಾ ವಿಂಶದ್ಭುಜೈರ್ಭ್ರಾಮ್ಯ ನ ಚಚಾಲ ಕರಂಡಿಕಾ || ೨೨೯ ||

ತದಾ ಸ ವಿಸ್ಮಯಾವಿಷ್ಟೋ ಭಯಂ ಮೇನೇ ದಶಾನನಃ |
ತತ್ರೈವೋದ್ಘಾಟಯಾಮಾಸ ರಾವಣಸ್ತಾಂ ಕರಂಡಿಕಾಂ || ೨೩೦ ||

ತಾವದ್ದದರ್ಶ ತಸ್ಯಾಂ ಸಃ ಕನ್ಯಾಂ ಸೂರ್ಯಪ್ರಭೋಪಮಾಂ |
ತತ್ತೇಜೋಹತತೇಜಸ್ಕಾನ್ಯಾಸನ್ ಚಕ್ಷೂಂಷಿ ರಕ್ಷಸಾಂ || ೨೩೧ ||

ತಾಂ ದ್ರಷ್ಟುಂ ಬಾಲಿಕಾಂ ರಮ್ಯಾಂ ಯಯುಸ್ಸುಹೃತ್ಸುತಾದಯಃ |
ತದಾ ಮಂಡೋದರೀಂ ಪ್ರಾಹ ತಸ್ಯಾ ವೃತ್ತಂ ದಶಾನನಃ || ೨೩೨ ||

---

೨೨೯. ಅವನು ಅದನ್ನು ಅಲ್ಲಾಡಿಸಲು ಆ ಭರಣಿಯೂ ಅಲ್ಲಾಡಲೇ ಇಲ್ಲ. ಅನಂತರ ತನ್ನ ಇಪ್ಪತ್ತು ಭುಜಗಳನ್ನೂ ಹಾಕಿ ಎತ್ತಿದನು. ಆಗಲೂ ಅದು ಅಲ್ಲಾಡಲೇ ಇಲ್ಲ.

೨೩೦. ಇದನ್ನು ನೋಡಿ ದಶಾನನನಿಗೆ ಆಶ್ಚರ್ಯವೂ ಭಯವೂ ಉಂಟಾಯಿತು. ಆಗ ಆ ಭರಣಿಯ ಮುಚ್ಚಳವನ್ನು ಅಲ್ಲಿಯೇ ತೆಗೆದು ಒಳಗೆ ನೋಡಿದನು.

೨೩೧. ಅದರೊಳಗೊಬ್ಬಳು ಸೂರ್ಯನ ಕಾಂತಿಯಂತೆ ಕಾಂತಿಯುಳ್ಳ ಕನ್ನಿಕೆಯು ಕಂಡು ಬಂದಳು. ಆ ರಾಕ್ಷಸನ ಕಣ್ಣುಗಳು ಆಕೆಯ ತೇಜಸ್ಸಿನಿಂದ ಕುರುಡಾದಂತೆ ಕಾಣಿಸದೆ ಹೋದವು.

೨೩೨. ಅನಂತರ ಆ ಬಾಲಕಿಯನ್ನು ನೋಡಲು ಅವನ ಮಕ್ಕಳೂ ಸ್ನೇಹಿತರೂ ಎಲ್ಲರೂ ಬಂದರು. ಆಗ ಆಕೆಯ ವಿಷಯವನ್ನೆಲ್ಲಾ ದಶಾನನನು ಮಂಡೋದರಿಗೆ ಹೇಳಿದನು.

ಪದ್ಮಾಕ್ಷಕುಲಜಾತ್ಯಾದಿ ಸರ್ವಂ ವೃತ್ತಂ ರಣೋದ್ಭವಂ ।
ಕ್ರೋಧಾನ್ಮಂಡೋದರೀ ಪ್ರಾಹ ಭಯಭೀತಾ ದಶಾನನಂ ॥ ೨೩೩ ॥

ಇಯಂ ಕೃತ್ಯಾ ಪ್ರಚಂಡಾ ಸ್ವಕುಲವಿಧ್ವಂಸಕಾರಿಣೀ ।
ಲಂಕಾಂ ಕಿಮರ್ಥಮಾನೀತಾ ಹ್ಯಸ್ಯಾ ಜ್ಞಾತ್ವಾಪಿ ಚೇಷ್ಟಿತಂ ॥ ೨೩೪ ॥

ದುಷ್ಟಾಂ ಸ್ವವಂಶಘಾತಾಯ ತ್ಯಜೈನಾಂ ಸತ್ವರಂ ವನೇ ।
ಬಾಲತ್ವೇಪಿ ದೃಶೀ ಗುರ್ವೀ ತಾರುಣ್ಯೇ ಕಿಂ ಕರಿಷ್ಯತಿ ॥ ೨೩೫ ॥

ವಧೋಽಸ್ಯಾಸ್ತವ ಜಾನೇಽಹಂ ಮೃತ್ಯುರೇವ ಭವಿಷ್ಯತಿ ।
ಸ್ಥಾಪನೀಯಾ ನ ಲಂಕಾಯಾಮಿಯಮದ್ಯೈವ ರಾವಣ ॥ ೨೩೬ ॥

---

೨೩೩. ಪದ್ಮಾಕ್ಷನ ವಿಷಯವನ್ನೂ ಪದ್ಮಾಕ್ಷನ ಜಾತಿಯನ್ನೂ ಯುದ್ಧದಲ್ಲಿ ನಡೆದ ವಿಷಯವನ್ನೂ ಬಿಡದೆ ಹೇಳಿದನು. ಆಗ ಮಂಡೋದರಿಗೆ ಭಯವುಂಟಾಗಿ ದಶಾನನನಮೇಲೆ ಕೋಪಗೊಂಡು ಇಂತೆಂದಳು.

೨೩೪. ಎಲೈ ದಶಾನನನೆ! ಇವಳು ಒಬ್ಬಳು ಮಾಟದ ಬೊಂಬೆಯು. ಪ್ರಚಂಡೆಯು. ನಿನ್ನ ಕುಲವನ್ನು ಧ್ವಂಸಮಾಡುವವಳು. ಇವಳ ಕೆಲಸಗಳನ್ನು ತಿಳಿಯದೆ ನೀನು ಇವಳನ್ನೇಕೆ ಲಂಕೆಗೆ ತೆಗೆದುಕೊಂಡು ಬಂದೆ ?

೨೩೫. ಇವಳು ದುಷ್ಟಳು. ನಿನ್ನ ವಂಶವನ್ನೇ ನಾಶಮಾಡುವಳು. ಇವಳನ್ನು ನೀನು ಬೇಗನೆ ಕಾಡಿಗೆ ತೆಗೆದುಕೊಂಡು ಹೋಗಿ ಬಿಟ್ಟುಬಿಡು. ಇವಳು ಮಗುವಾಗಿರುವಾಗಲೇ ಇಷ್ಟು ಭಾರವಾಗಿರುವಾಗ ಯೌವನ ಬಂದಮೇಲೆ ಇನ್ನೇನನ್ನು ಮಾಡುವಳೋ ಯಾರಿಗೆ ಗೊತ್ತು ?

೨೩೬. ಇವಳು ನಿನ್ನನ್ನು ವಧೆಮಾಡುವುದಕ್ಕೆ ಹುಟ್ಟಿರುವಳೆಂದು ನನಗೆ ತೋರುತ್ತದೆ. ಇವಳು ನಿನಗೆ ಮೃತ್ಯುವಾಗಿಯೇ ಆಗುವಳು. ಎಲೈ ರಾವಣನೆ! ಇವಳನ್ನು ಲಂಕೆಯಲ್ಲಿಡಲೇ ಕೂಡದು. ಇವಳನ್ನು ಈಗಲೇ ಎಲ್ಲಿಗಾದರೂ ತೆಗೆದುಕೊಂಡು ಹೋಗು.

ಇತಿ ತಸ್ಯಾ ವಚಶ್ಶ್ರುತ್ವಾ ಸತ್ಯಂ ಮೇನೇ ದಶಾನನಃ ।
ಮಂತ್ರಿಭಿಶ್ಚಾಥ ಸಂಮಂತ್ರ್ಯ ದೂತಾನಾಜ್ಞಾಪಯತ್ತದಾ ॥ ೨೩೭ ॥

ಕರಂಡಿಕೇಯಂ ನೀತ್ವಾದ್ಯ ವಿಮಾನೇ ಸ್ಥಾಪ್ಯ ಯತ್ನತಃ ।
ತ್ಯಕ್ತ್ವಾ ಮಮ ವಾಕ್ಯಾತ್ತು ವನೇ ಗಚ್ಛತ ವೇಗತಃ ॥ ೨೩೮ ॥

ತತಸ್ತೇ ರಾಕ್ಷಸಾಸ್ಸರ್ವೇ ಸಂಮೀಲ್ಯ ಪುಷ್ಪಕೇಽಥ ತಾಂ ।
ಕರಂಡಿಕಾಂ ತು ಸಂಸ್ಥಾಪ್ಯ ನಿನ್ಯುಶ್ಚಾಕಾಶವರ್ತ್ಮನಾ ॥ ೨೩೯ ॥

ದಶಾಸ್ಯಪತ್ನೀ ತಾನಾಹ ಕಾರ್ಯಾ ಭೂಮಿಗತಾ ತ್ವಿಯಂ ।
ಸ್ಥಾಪನೀಯಾ ಬಹಿರ್ನೇಯಂ ದರ್ಶನಾದ್ವಧಕಾರಿಣೀ ॥ ೨೪೦ ॥

---

೨೩೭. ಮಂಡೋದರಿಯ ಈ ಮಾತುಗಳನ್ನು ಕೇಳಿ ಈ ಮಾತುಗಳು ನಿಜವೆಂಬುದಾಗಿ ರಾವಣನು ತಿಳಿದುಕೊಂಡನು. ಮಂತ್ರಿಗಳನ್ನು ಕರೆಸಿ ಅವರೊಡನೆ ಯೋಚಿಸಿ ಅನಂತರ ದೂತರನ್ನು ಕರೆದು ಅವರಿಗೆ ಇಂತೆಂದು ಆಜ್ಞಾಪಿಸಿದನು.

೨೩೮. ಆ ಭರಣಿಯನ್ನು ತೆಗೆದುಕೊಂಡು ಹೋಗಿ ವಿಮಾನದಲ್ಲಿಡಿರಿ. ಮತ್ತು ಆ ವಿಮಾನದಲ್ಲಿ ಬೇಗನೆ ಕಾಡಿಗೆಹೋಗಿ ಅಲ್ಲಿ ನನ್ನ ಅಪ್ಪಣೆಯಂತೆ ಬಿಟ್ಟುಬಿಡಿರಿ.

೨೩೯. ಆಗ ಆ ರಾಕ್ಷಸರೆಲ್ಲರೂ ಸೇರಿ ಆ ಭರಣಿಯನ್ನು ಪ್ರಯತ್ನಪಟ್ಟು ಪುಷ್ಪಕದಲ್ಲಿರಿಸಿ ಆಕಾಶಮಾರ್ಗದಿಂದ ಕಾಡಿಗೆ ತೆಗೆದುಕೊಂಡು ಹೋದರು.

೨೪೦. ಆಗ ಆ ದಶಾಸ್ಯನ ಹೆಂಡತಿಯಾದ ಮಂಡೋದರಿಯು ಆ ರಾಕ್ಷಸರನ್ನು ಕುರಿತು ಎಲೈ ರಾಕ್ಷಸರಿರಾ ! ಇವಳನ್ನು ತೆಗದುಕೊಂಡು ಹೋಗಿ ಭೂಮಿಯಲ್ಲಿ ಹೂತುಬಿಡಿರಿ ! ಹೊರಗೆ ಈಕೆಯು ಕಣ್ಣಿಗೆ ಕಾಣಿಸಲೇ ಕೂಡದು. ಇವಳನ್ನು ನೋಡಿದರೇನೇ ಆ ನೋಡಿದವರು ಸಾಯುವರು.

ಗೃಹಸ್ಥಾಶ್ರಮಯುಕ್ತೋ ಯಸ್ತಥಾ ಚ ವಿಜಿತೇಂದ್ರಿಯಃ ।
ವೃದ್ಧಿಮೇಷ್ಯತಿ ತದ್ಗೇಹೇ ಕುಮಾರೀಯಂ ಶುಭಾನನಾ ॥ ೨೪೧ ॥

ಚರಾಚರೇಷು ಸರ್ವತ್ರ ಆತ್ಮರೂಪೇಣ ಯಃ ಸ್ಥಿತಃ ।
ತಸ್ಯ ಗೇಹೇ ಚಿರಂ ಕಾಲಂ ಸ್ಥಾಸ್ಯತೀಯಂ ನ ಸಂಶಯಃ ॥ ೨೪೨ ॥

ಇತಿ ಮಂಡೋದರೀವಾಕ್ಯಂ ಶ್ರುತ್ವಾ ದೂತಾಸ್ಸವಿಸ್ತರಂ ।
ಯಾವತ್ತೇ ಗಂತುಮುದ್ಯುಕ್ತಾಸ್ತಾವತ್ಕನ್ಯಾ ವಚೋಽಬ್ರವೀತ್ ॥ ೨೪೩ ॥

ಯಾಸ್ಯಾಮ್ಯಹಂ ಪುನರ್ಲಂಕಾಂ ರಾಕ್ಷಸಾನಾಂ ವಧಾಯ ಚ ।
ನಿಧನಾಯ ದಶಾಸ್ಯಸ್ಯ ಸಪುತ್ರಸ್ಯ ಸಮಂತ್ರಿಣಃ ॥ ೨೪೪ ॥

೨೪೧–೨೪೨. ಯಾವನು ಗೃಹಸ್ಥಾಶ್ರಮದಲ್ಲಿದ್ದುಕೊಂಡು ಜಿತೇಂದ್ರಿಯನಾಗಿರುವನೋ ಅವನ ಮನೆಯಲ್ಲಿ ಈಕೆಯು ವೃದ್ಧಿಹೊಂದುವಳು. ಚರಾಚರ ರೂಪವಾದ ಪ್ರಪಂಚದಲ್ಲಿ ಯಾವನು ಆತ್ಮರೂಪದಿಂದ ಇರುವನೋ ಅವನ ಮನೆಯಲ್ಲಿ ಬಹುಕಾಲ ಈಕೆಯು ಇರುವಳು. ಸಂಶಯವಿಲ್ಲ. ಎಂದಳು.

೨೪೩. ಮಂಡೋದರಿಯು ಹೇಳಿದ ಈ ಮಾತನ್ನು ದೂತರು ಚೆನ್ನಾಗಿ ಕೇಳಿ ತಿಳಿದುಕೊಂಡರು. ಮತ್ತು ಈಕೆಯನ್ನು ಕರೆದುಕೊಂಡು ಹೋಗಲು ಹೊರಟಾಗ ಆ ಕನ್ಯೆಯು ಅವರೆಲ್ಲರನ್ನೂ ಕುರಿತು ಇಂತೆಂದಳು.

೨೪೪. ಎಲೈ ರಾಕ್ಷಸರಿರಾ ! ಇದು ನಾನು ಬಂದುದು ಮೊದಲನೆಯ ಬಾರಿಯಾಯಿತು. ನಾನು ಇಲ್ಲಿಗೆ ರಾಕ್ಷಸರ ವಧೆಯಾಗುವುದಕ್ಕೂ ದಶವದನನ ಮತ್ತು ಅವನ ಮಕ್ಕಳು ಮಂತ್ರಿಗಳು ಇವರ ನಾಶಕ್ಕೂ ಮತ್ತೆ ಎರಡನೆಯಬಾರಿ ಬರುವೆನು.

ಅಥ ತೃತೀಯವೇಲಾಯಾಮಾಗತ್ಯಾಹಂ ಪುನಸ್ತ್ವಿಹ ।
ನಿಕುಂಭಜಂ ಪೌಂಡ್ರಕಂ ತಂ ಶತಶೀರ್ಷಂ ಚ ರಾವಣಂ || ೨೪೫ ||

ಹನಿಷ್ಯಾಮಿ ಪುನರ್ಗತ್ವಾ ಪುನರ್ಯಾಸ್ಯಾಮಿ ತ್ವತ್ಪುರೀಂ ।
ಅಹಂ ಚತುರ್ಥವೇಲಾಯಾಮುದ್ಭುತಂ ಮೂಲಕಾಸುರಂ || ೨೪೬ ||

ಕುಂಭಕರ್ಣಸುತಂ ಶೂರಂ ಮರ್ದಯಿಷ್ಯಾಮ್ಯಹಂ ಪುನಃ ।
ತತ್ತಸ್ಯಾ ವಚನಂ ಶ್ರುತ್ವಾ ಹೃದಿ ವಿದ್ಧೋ ದಶಾನನಃ || ೨೪೭ ||

ಜಾತಾಸ್ತೇ ರಾಕ್ಷಸಾಸ್ಸರ್ವೇ ಭಯಭೀತಾಶ್ಶವೋಪಮಾಃ ।
ರಾವಣಶ್ಚಿಂತಯಾಮಾಸ ಹಂತವ್ಯಾದ್ಯೈವ ಬಾಲಿಕಾ || ೨೪೮ ||

---

೨೪೫. ಅನಂತರ ಮೂರನೆಯ ಬಾರಿಯೂ ಬರುವೆನು. ಆಗ ನಿಕುಂಭನ ಮಗನಾದ ಮತ್ತು ಪೌಂಡ್ರಕ ಶತಾನನರಾವಣ ಇವರ ವಧೆಯನ್ನು ಮಾಡಿಸುವೆನು. ಮತ್ತೆ ಹೊರಟು ಹೋಗುವೆನು.

೨೪೬. ಮತ್ತೆ ನಾಲ್ಕನೆಯ ಬಾರಿಯೂ ಲಂಕೆಗೆ ಬರುವೆನು. ಆಗ ಮೂಲಕಾಸುರನೆಂಬ ಶೂರನಾದ ಕುಂಭಕರ್ಣನ ಮಗನನ್ನು ಕೊಲ್ಲುವೆನು. ಎಂದಳು.

೨೪೭. ಅವಳ ಆ ಮಾತನ್ನು ಕೇಳಿ ದಶಾನನನಿಗೆ ಮನಸ್ಸಿನಲ್ಲಿ ಬಹು ಖೇದವಾಯಿತು. ರಾಕ್ಷಸರೆಲ್ಲರೂ ಭಯಗೊಂಡು ಶವಗಳಂತೆ ಆಗಿಬಿಟ್ಟರು.

೨೪೮. ಆಗ ರಾವಣನು ಈಕೆಯು ದುಷ್ಟೆಯು ಒಂದುವೇಳೆ ಇವೆಲ್ಲವೂ ನಿಜವಾದರೂ ಆಗಬಹುದು. ಆದುದರಿಂದ ಇವಳನ್ನು ಈಗಲೇ ಕೊಂದುಬಿಡಬೇಕು. ಎಂದು ಯೋಚಿಸಿದನು.

ತೀಕ್ಷ್ಣಂ ಖಡ್ಗಂ ಕರೇ ಧೃತ್ವಾ ಪದ್ಮಾಂ ದುದ್ರಾವ ರಾವಣಃ ।
ಹಂತುಕಾಮಂ ಪತಿಂ ದೃಷ್ಟ್ವಾ ಮಯಕನ್ಯಾ ನ್ಯವಾರಯತ್ ॥ ೨೪೯ ॥

ಸಾಹಸಂ ಕುರು ಮಾದ್ಯೈವ ಸತ್ಯಾಯುಷಿ ದಶಾನನ ।
ಭವಿಷ್ಯತಿ ವಧಸ್ತ್ವದ್ಯ ತವ ನಾಸ್ಯಾ ವಚೋ ಮೃಷಾ ॥ ೨೫೦ ॥

ಯದ್ಭವಿಷ್ಯತಿ ಭವತು ತದಗ್ರೇ ತ್ಯಜ ಕಾನನೇ ।
ಕಾಲಾಂತರೇಣ ಯೋ ಮೃತ್ಯುಸ್ತಮದ್ಯ ತ್ವಂ ಕಿಮಿಚ್ಛಸಿ ॥ ೨೫೧ ॥

ಇತಿ ಭಾರ್ಯಾವಚಶ್ಶ್ರುತ್ವಾ ತೂಷ್ಣೀಮಾಸ ದಶಾನನಃ ।
ತತಸ್ಸಾ ಪೇಟಿಕಾ ದೂತೈರ್ನೀತಾ ಯಾನೇನ ವೈ ಜವಾತ್ ॥ ೨೫೨ ॥

---

೨೪೯. ಒಡನೆಯೇ ಬಂದು ಹರಿತವಾದ ಕತ್ತಿಯನ್ನು ತೆಗೆದುಕೊಂಡು ಆ ಪದ್ಮೆಯನ್ನು ಕೊಲ್ಲಲು ರಾವಣನು ಓಡಿಹೋದನು. ಈತನು ಕೊಲ್ಲುವುದಕ್ಕೆ ಹೋಗುತ್ತಿರುವುದನ್ನು ನೋಡಿ ಮಯನ ಮಗಳಾದ ಆ ಮಂಡೋದರಿಯು ಬೇಡವೆಂದು ತಡೆದಳು.

೨೫೦. ಎಲೈ ದಶಾನನನೆ ! ಇನ್ನೂ ಆಯುಸ್ಸು ಇರುವಾಗಲೇ ನೀನು ಸಾಹಸಕಾರ್ಯವನ್ನು ಮಾಡಲು ಹೋಗಬೇಡ. ನಿನ್ನ ವಧೆಯು ಈಗಲೇ ಆದೀತು ! ಆಕೆಯ ಮಾತು ಸುಳ್ಳಾಗುವುದಿಲ್ಲ.

೨೫೧. ಮುಂದೆ ಏನಾಗುವುದೊ ಅವೆಲ್ಲವೂ ಮುಂದೆಯೇ ಆಗಲಿ. ಈಗ ಈಕೆಯನ್ನು ಕಾಡಿನಲ್ಲಿ ಬಿಟ್ಟುಬಿಡು ಕಾಲಾಂತರದಲ್ಲಿ ಆಗುವ ಮೃತ್ಯುವನ್ನು ನೀನು ಈಗಲೇ ಏತಕ್ಕೆ ಅಪೇಕ್ಷಿಸುತ್ತೀಯೆ ?

೨೫೨. ಈ ರೀತಿಯಾಗಿ ಹೆಂಡತಿಯು ಹೇಳಿದುದನ್ನು ಕೇಳಿ ದಶಾನನನು ಸುಮ್ಮನಾದನು. ಅನಂತರ ಆ ಪೆಟ್ಟಿಗೆಯನ್ನು ದೂತರು ವೇಗವಾಗಿ ತೆಗೆದು ಕೊಂಡು ಹೊರಟುಹೋದರು.

ಪಶ್ಯಂ ವನಾನಿ ಸರ್ವಾಣಿ ಸೀತಾಯಾಂ ಮೈಥಿಲಸ್ಯ ಚ ।
ಕೃತಾ ಭೂವಿಗತಾ ದೂತೈಸ್ತದಾ ಸರ್ವೈಃ ಕರಂಡಿಕಾ ॥ ೧೫೩ ॥

ತತೋ ಯಯುಃ ಪುನರ್ಲಂಕಾಂ ದೂತಾಸ್ತೇ ರಾವಣಸ್ಯ ಚ ।
ನ್ಯವೇದಯನ್ರಾವಣಾಯ ಸರ್ವವೃತ್ತಂ ಯಥಾಕೃತಂ ॥ ೧೫೪ ॥

ಸಾ ಭೂಮಿಸ್ಸೂರ್ಯಗ್ರಹಣೇ ವಿದೇಹೇನ ಸಮರ್ಪಿತಾ ।
ಬ್ರಾಹ್ಮಣಾಯ ದ್ವಿಜಶ್ಚಾಪಿ ತಾಂ ಕರ್ಷಯಿತುಮುದ್ಯತಃ ॥ ೧೫೫ ॥

ಪಶ್ಯಂ ವಿಪ್ರೋ ಮುಹೂರ್ತಂ ಸ ಪ್ರತ್ಯಬ್ದಂ ವೈ ಪುನಃ ಪುನಃ ।
ಚಿರಕಾಲೇನ ದೃಷ್ಟ್ವಾಥ ಮುಹೂರ್ತಃ ಪರಮೋದಯಃ ॥ ೧೫೬ ॥

---

೧೫೩. ಅವರು ಕಾಡುಗಳೆಲ್ಲವನ್ನೂ ನೋಡಿಕೊಂಡು ಬರುತ್ತ ಕೊನೆಗೆ ಜನಕರಾಜನು ಉತ್ತು ಆಳವಾಗಿ ಮಾಡಿರುವ ನೇಗಿಲಿನ ತೆರೆಯಲ್ಲಿ ಅವರೆಲ್ಲರೂ ಸೇರಿ ಆ ಪೆಟ್ಟಿಗೆಯನ್ನು ಹೂತುಬಿಟ್ಟರು.

೧೫೪. ಅನಂತರ ಆ ರಾವಣನ ದೂತರು ಮತ್ತೆ ಲಂಕೆಗೆ ಹೊರಟು ಹೋದರು. ಅಲ್ಲಿ ರಾವಣನಿಗೆ ತಾವು ಮಾಡಿದ ಕೆಲಸಗಳೆಲ್ಲವನ್ನೂ ಹೇಳಿದರು.

೧೫೫. ಸೂರ್ಯಗ್ರಹಣ ಕಾಲವು ಬಂದಾಗ ಆ ಸೀತೆಯನ್ನು ಹೂಳಿದ್ದ ಭೂಮಿಯನ್ನು ಜನಕನು ಬ್ರಾಹ್ಮಣನಿಗೆ ದಾನವಾಗಿ ಕೊಟ್ಟನು. ಆ ಬ್ರಾಹ್ಮಣನು ಆ ಭೂಮಿಯನ್ನು ಉಳಿಸಲು ಆಲೋಚನೆ ಮಾಡಿದನು.

೧೫೬. ಅದಕ್ಕೋಸ್ಕರ ಪ್ರತಿವರ್ಷವೂ ಅವನು ಮುಹೂರ್ತವನ್ನು ಹುಡುಕುತ್ತಿದ್ದನು. ಬಹುಕಾಲದಮೇಲೆ ಮೂಹೂರ್ತವು ಸಿಕ್ಕಿತು. ಆ ಮುಹೂರ್ತವು ಪರಮೋದಯ ಮುಹೂರ್ತವಾಗಿದ್ದಿತು.

ಶೂದ್ರೇಣ ಕರ್ಷಯಾಮಾಸ ಭೂಮಿಂ ಕೃಷ್ಯರ್ಥಮಾದರಾತ್ ।
ತದಾ ಹಲಶಿರಾಗ್ರೇಣ ನಿರ್ಗತಾ ಸಾ ಕರಂಡಿಕಾ ॥ ೨೫೭ ॥

ತಾಂ ಗೃಹಿತ್ವಾ ಸ ಶೂದ್ರೋಽಪಿ ಯಯೌ ಭೂಮಿಪತಿಂ ದ್ವಿಜಂ ।
ಸ ಮತ್ವಾ ತಂ ನಿಧಾನಂ ತು ಹಷಾತ್ಪ್ರಾಹ ದ್ವಿಜೋತ್ತಮಂ ॥ ೨೫೮ ॥

ಶ್ರೇಷ್ಠಸ್ತವ ಮುಹೂರ್ತೋಽಯಂ ಮಹಾಭಾಗ್ಯಂ ತವ ದ್ವಿಜ ।
ಇಮಾಂ ಹಲಾಗ್ರಸಂಭೂತಾಂ ಗೃಹಾಣ ತ್ವಂ ಕರಂಡಿಕಾಂ ॥ ೨೫೯ ॥

ನಿಧಾನಪೂರಿತಾಂ ಗುರ್ವೀಂ ಮಯಾ ಯತ್ನೇನ ಚಾಹಿತಾಂ ।
ತತಸ್ಸದ್ವಿಜವರ್ಯಸ್ತು ತಾಂ ಜಗ್ರಾಹ ಕರಂಡಿಕಾಂ ॥ ೨೬೦ ॥

---

೨೫೭. ಆಗ ಆ ಬ್ರಾಹ್ಮಣನು ಕೃಷಿಯನ್ನು ಮಾಡಿಸುವುದಕ್ಕೋಸ್ಕರ ರೈತನಿಂದ ಆ ಭೂಮಿಯನ್ನು ಉಳಿಸಿದನು ಆಗ ಆ ನೇಗಿಲಿನ ತುದಿಗೆ ಸಿಕ್ಕಿ ಆ ಪೆಟ್ಟಿಗೆಯು ಮೇಲಕ್ಕೆದ್ದಿತು.

೨೫೮. ಆ ಶೂದ್ರನು ಆ ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗಿ ಭೂಮಿಗೆ ಅಧಿಪತಿಯಾದ ಬ್ರಾಹ್ಮಣನಿಗೆ ಕೊಟ್ಟನು. ಅದನ್ನು ಕೊಟ್ಟು ಅದು ನಿಧಿಯೆಂದು ತಿಳಿದು ಆ ರೈತನು ಸಂತೋಷದಿಂದ ಆ ಬ್ರಾಹ್ಮಣನನ್ನು ಕುರಿತು ಇಂತೆಂದನು.

೨೫೯. ಎಲೈ ಬ್ರಾಹ್ಮಣನೆ! ಈ ನಿನ್ನ ಮುಹೂರ್ತವು ಬಹು ಉತ್ತಮವಾದುದು. ಇದು ನಿನ್ನ ಮಹಾಭಾಗ್ಯವು. ಈ ನಿಧಿಯಿಂದ ಕೂಡಿದ ಪೆಟ್ಟಗೆಯು ನೇಗಿಲಿನ ತುದಿಗೆ ಸಿಕ್ಕಿ ಮೇಲಕ್ಕೆದ್ದಿತು. ಈ ಪೆಟ್ಟಗೆಯನ್ನು ನೀನು ತೆಗೆದುಕೊ.

೨೬೦. ಇದರೊಳಗೆ ಬಹುವಾದ ನಿಧಿಯು ಇರುವುದು. ಬಹು ಭಾರವಾಗಿದೆ. ಬಹು ಕಷ್ಟಪಟ್ಟು ನಾನು ಇದನ್ನು ಇಲ್ಲಿಗೆ ತಂದಿದ್ದೇನೆ. ಎಂದನು. ಇದನ್ನು ಕೇಳಿ ಆ ಬ್ರಾಹ್ಮಣನು ಆ ಪೆಟ್ಟಗೆಯನ್ನು ತೆಗೆದುಕೊಂಡನು.

ತಾಮಾನೀಯ ವಿದೇಹಾಯ ಸಭಾಮಧ್ಯೇ ದದೌ ಮುದಾ ।
ನೃಪತಿಂ ಪ್ರಾಹ ವೃತ್ತಂ ತದ್ವಿಪ್ರಶ್ಶ್ರುತ್ವಾ ನೃಪೋಽಪಿ ಸಃ ॥ ೨೬೧ ॥

ಉವಾಚ ಬ್ರಾಹ್ಮಣಂ ಭಕ್ತ್ಯಾ ಮಯಾ ಭೂಮಿಸ್ಸಮರ್ಪಿತಾ ।
ತಸ್ಯಾಂ ಲಬ್ಧಾ ತ್ವಯಾ ಚೇಯಂ ತವೈವಾಸ್ತು ಕರಂಡಿಕಾ ॥ ೨೬೨ ॥

ವಿದೇಹನೃಪತೇರ್ವಾಕ್ಯಂ ಶ್ರುತ್ವೋವಾಚ ದ್ವಿಜಃ ಪುನಃ ।
ಮಹ್ಯಂ ಸಮರ್ಪಿತಾ ಪೂರ್ವಂ ಭೂಮಿರೇವ ತ್ವಯಾ ನೃಪ ॥ ೨೬೩ ॥

ನೇಯಂ ಕರಂಡಿಕಾ ರಮ್ಯಾ ವಸುಪೂರ್ಣಾ ಸಮರ್ಪಿತಾ ।
ಯದ್ಭೂಮ್ಯಾಂ ವರ್ತತೇ ವಿತ್ತಂ ತನ್ನೃಪಸ್ಯ ನ ಸಂಶಯಃ ॥ ೨೬೪ ॥

---

೨೬೧. ಆ ಬ್ರಾಹ್ಮಣನು ಅದನ್ನು ತೆಗೆದುಕೊಂಡು ಬಂದು ಸಭೆಯ ಮಧ್ಯದಲ್ಲಿ ವಿದೇಹನಿಗೆ ಕೊಟ್ಟನು. ಆ ಬ್ರಾಹ್ಮಣನು ನಡೆದ ವಿಷಯಗಳೆಲ್ಲವನ್ನೂ ರಾಜನಿಗೆ ತಿಳಿಸಿದನು.

೨೬೨. ಆಗ ಆ ಜನಕನು ಆ ಬ್ರಾಹ್ಮಣನನ್ನು ಕುರಿತು ಭಕ್ತಿಯಿಂದ ಎಲೈ ಬ್ರಾಹ್ಮಣನೆ ! ನಾನು ನಿನಗೆ ಭೂಮಿಯನ್ನು ದಾನಮಾಡಿದೆನು. ಅದರಲ್ಲಿ ಸಿಕ್ಕಿದ ಈ ಪೆಟ್ಟಿಗೆಯು ನಿನ್ನದೇ ಆಗಿರುವುದು. ಎಂದನು.

೨೬೩–೨೬೪. ವಿದೇಹ ರಾಜನ ಈ ಮಾತನ್ನು ಕೇಳಿ ಆ ಬ್ರಾಹ್ಮಣನು ಎಲೈ ದೊರೆಯೆ ! ನೀನು ನನಗೆ ಭೂಮಿಯನ್ನು ಮಾತ್ರ ದಾನಮಾಡಿದ್ದೀಯೆ. ಈ ಪೆಟ್ಟಿಗೆಯನ್ನು ನೀನು ನನಗೆ ಕೊಟ್ಟಿಲ್ಲ. ಇದು ಉತ್ತಮವಾದ ಹಣದಿಂದ ತುಂಬಿದೆ. ಅಲ್ಲದೆ ಭೂಮಿಯಲ್ಲಿರುವ ಹಣವು ರಾಜನದೇ ಹೊರತು ಮತ್ತಾರಿಗೂ ಸೇರತಕ್ಕದ್ದಲ್ಲ. ಇದರಲ್ಲಿ ಸಂಶಯವಿಲ್ಲ.

ಮಾ ಮಾಮಧರ್ಮಃ ಸ್ಪೃಶತು ಗೃಹಾಣೇಮಾಂ ಕರಂಡಿಕಾಂ ।
ಏವಂ ನೃಪಸ್ಯ ವಿಪ್ರೇಣ ಕಲಹೋಽಭೂತ್ಸುದಾರುಣಃ ॥ ೨೬೫ ॥

ತದಾ ಸಭಾಸದಸ್ಸರ್ವೇ ನೃಪತಿಂ ವಾಕ್ಯಮಬ್ರುವನ್ ।
ಮಾ ಕಾರ್ಯಃ ಕಲಹೋ ರಾಜನ್ ಪಶ್ಯಾಸ್ಯಾಂ ಕಿಂ ತು ವರ್ತತೇ ॥ ೨೬೬ ॥

ತಾಂ ತದೋದ್ಘಾಟಯಾಮಾಸ ದೂತೈರ್ನೃಪತಿಸತ್ತಮಃ ।
ತಸ್ಯಾಂ ದೃಷ್ಟ್ವಾ ಬಾಲಿಕಾಂ ತು ವಿಸ್ಮಯಂ ಪ್ರಾಪ ಪಾರ್ಥಿವಃ ॥ ೨೬೭ ॥

ದ್ವಿಜಸ್ತ್ಯಕ್ತ್ವಾ ಯಯೌ ಗೇಹಂ ಪಾಲಯಾಮಾಸ ತಾಂ ನೃಪಃ ।
ತದಾ ಖೇಚರವಾದ್ಯಾನಿ ನೇದುಃ ಕುಸುಮವೃಷ್ಟಿಭಿಃ ॥ ೨೬೮ ॥

---

೨೬೫. ನನಗೆ ಅಧರ್ಮವು ಬರಬಾರದು. ಈ ಪೆಟ್ಟಿಗೆಯನ್ನು ತೆಗೆದುಕೊ. ಎಂದನು. ಹೀಗೆ ರಾಜನು ವಿಪ್ರನದೆಂದೂ ವಿಪ್ರನು ರಾಜನದೆಂದೂ ಹೇಳುತ್ತ ಬಹುವಾಗಿ ಜಗಳಕ್ಕೆ ಮೊದಲಾಯಿತು.

೨೬೬. ಆಗ ಸಭೆಯಲ್ಲಿದ್ದವರು ರಾಜನನ್ನು ಕುರಿತು ಇಂತೆಂದರು. ಎಲೈ ದೊರೆಯೇ ! ನೀನು ಜಗಳವಾಡಬೇಡ. ಇದರೊಳಗೆ ಏನಿದೆಯೋ ನೋಡೋಣ ! ಬಾಗಿಲನ್ನು ತೆಗೆಸು. ಎಂದರು.

೨೬೭. ರಾಜನು ಹಾಗೆಯೇ ಆಗಲೆಂದು ದೂತರ ಕೈಯ್ಯಲ್ಲಿ ಬಾಗಿಲನ್ನು ತೆಗೆಸಿದನು. ಅದರಲ್ಲಿ ಒಬ್ಬ ಬಾಲಿಕೆಯಿರುವುದನ್ನು ನೋಡಿ ಆ ದೊರೆಗೆ ಬಹುವಾದ ಆಶ್ಚರ್ಯವಾಯಿತು.

೨೬೮. ಅನಂತರ ಆ ಬ್ರಾಹ್ಮಣನು ಮನೆಗೆ ಹೊರಟು ಹೋದನು. ರಾಜನು ಅವಳನ್ನು ತೆಗೆದುಕೊಂಡು ತಾನು ತನ್ನ ಮಗಳಂತೆ ಕಾಪಾಡಿದನು. ಆಗ ದೇವದುಂದುಭಿಗಳು ಮೊಳಗಿದುವು. ಅಂತರಿಕ್ಷದಿಂದ ಪುಷ್ಪವೃಷ್ಟಿಯು ಬಿದ್ದಿತು.

ವವರ್ಷುಸ್ಸುರಸಂಘಾಶ್ಚ ತಾಂ ಕನ್ಯಾಂ ಜನಕಂ ನೃಪಂ ।
ಗಂಧರ್ವಾ ಗಾಯನಂ ಚಕ್ರುರ್ನನೃತುಃ ಚಾಪ್ಸರೋಗಣಾಃ ॥ ೨೧೯ ॥

ತದಾ ಮೇನೇ ನಿಜಾಂ ಕನ್ಯಾಂ ಜನಕಸ್ತೋಷಮಾಪ ಸಃ ।
ಜಾತಕಂ ಕಾರಯಾಮಾಸ ವಿಪ್ರೈಸ್ತಸ್ಯಾಸ್ಸವಿಸ್ತರಂ ॥ ೨೨೦ ॥

ದದೌ ದಾನಾನಿ ವಿಪ್ರೇಭ್ಯೋ ನನೃತುರ್ವಾರಯೋಷಿತಃ ।
ಮಾತುಲಿಂಗಾನ್ನಿರ್ಗತಾಯಾ ಮಾತುಲಿಂಗೀತಿ ಸಾ ಸ್ಮೃತಾ ॥ ೨೨೧ ॥

ಅಗ್ನಿವಾಸಾದಗ್ನಿಗರ್ಭಾ ತಥಾ ರತ್ನಾವತೀತಿ ಚ ।
ರತ್ನಾಂತರನಿವಾಸಾಚ್ಚ ಪ್ರೋಚ್ಯತೇ ಜಗತೀತಲೇ ॥ ೨೨೨ ॥

---

೨೧೯. ಆ ಜನಕನ ಮೇಲೆಯೂ ಆ ಬಾಲಕಿಯ ಮೇಲೆಯೂ ಪುಷ್ಪವೃಷ್ಟಿಯು ಬಿದ್ದುದಲ್ಲದೆ ಗಂಧರ್ವರು ಗಾನವನ್ನು ಮಾಡಿದರು. ಅಪ್ಸರಸ್ತ್ರೀಯರು ಕುಣಿದರು.

೨೨೦. ಆಗ ಜನಕನು ಅವಳು ತನ್ನ ಮಗಳೆಂದೇ ತಿಳಿದು ಬಹುವಾಗಿ ಸಂತೋಷವನ್ನು ಹೊಂದಿದನು. ಮತ್ತು ಬ್ರಾಹ್ಮಣರ ಕೈಯ್ಯಲ್ಲಿ ಜಾತಕಗಳನ್ನು ಬರೆಸಿದನು.

೨೨೧. ಬ್ರಾಹ್ಮಣರಿಗೆ ಅನೇಕ ದಾನಗಳನ್ನು ಮಾಡಿದನು. ಸೂಳೆಯರು ಕುಣಿದರು. ಮಾತುಲಿಂಗ ಫಲದಿಂದ ಹೊರಟುದರಿಂದಲೂ ಕೈಯ್ಯಲ್ಲಿ ಮಾತುಲಿಂಗ ಫಲವನ್ನು ಹಿಡಿದಿರುವುದರಿಂದಲೂ ಇವಳಿಗೆ ಮಾತುಲಿಂಗೀ ಎಂದೇ ಹೆಸರು ಬಂದಿತು.

೨೨೨. ಅಗ್ನಿಯಲ್ಲಿ ವಾಸವಾಗಿದ್ದುದರಿಂದ ಅಗ್ನಿಗರ್ಭಳೆಂದೂ ರತ್ನಗಳ ರೂಪವಾಗಿದ್ದುದರಿಂದ ರತ್ನಾವತಿಯೆಂತಲೂ ಆಕೆಗೆ ಈ ಪ್ರಪಂಚದಲ್ಲಿ ಹೆಸರುಗಳು ಬಂದುವು.

ಧರಣ್ಯಾ ನಿರ್ಗತಾ ಯಸ್ಮಾತ್ತಸ್ಮಾದ್ಧರಣಿಜೇತಿ ಚ ।
ಜನಕೇನಾವಿತಾ ಯಸ್ಮಾಜ್ಜಾನಕೀತಿ ಪ್ರಕೀರ್ತ್ಯತೇ ॥ ೨೭೩ ॥

ಸೀರಾಗ್ರಾನ್ನಿರ್ಗತಾ ಯಸ್ಮಾತ್ಸೀತೇತ್ಯತ್ರ ಪ್ರಗೀಯತೇ ।
ಪದ್ಮಾಕ್ಷನೃಪತೇಃ ಕನ್ಯಾ ತಸ್ಮಾತ್ಪದ್ಮೇತಿ ಸಾ ಸ್ಮೃತಾ ॥ ೨೭೪ ॥

ಏವಂ ನಾಮಾನ್ಯನಂತಾನಿ ಸೀತಾಯಾಮಾಸ್ಸಂತಿ ಭೋ ನೃಪ ।
ಆಕಾಶನೀಲವರ್ಣಾಭವಪುಷಾನೇನ ಜಾನಕೀ ॥ ೨೭೫ ॥

ಲಬ್ಧಾ ರಾಮೇಣ ಪದ್ಮಾಕ್ಷಪ್ರತಿಜ್ಞಾ ಸಫಲೀಕೃತಾ ।
ಏವಂ ತ್ವಯಾ ಯಥಾ ಪೃಷ್ಟಂ ತಥಾ ತ್ವಾಂ ವಿನಿವೇದಿತಂ ॥ ೨೭೬ ॥

---

೨೭೩. ಭೂಮಿಯಿಂದ ಬಂದುದರಿಂದ ಧರಣಿಜೆಯೆಂದು ಹೆಸರಾಯಿತು. ಜನಕನು ಕಾಪಾಡಿದುದರಿಂದ ಜಾನಕಿಯೆಂದು ಹೆಸರನ್ನು ಹೊಂದಿದಳು.

೨೭೪. ಸೀರ ಎಂಬ ಹೆಸರುಳ್ಳ ನೇಗಿಲಿನ ತುದಿಯಿಂದ ಹೊರಕ್ಕೆ ಬಂದುದರಿಂದ ಸೀತೆಯೆಂಬ ಹೆಸರು ಪ್ರಸಿದ್ಧವಾಯಿತು. ಪದ್ಮಾಕ್ಷನ ಮಗಳಾದುದರಿಂದ ಪದ್ಮ ಎಂಬುದಾಗಿಯೂ ಹೆಸರಾಯಿತು.

೨೭೫. ಎಲೈ ದೊರೆಯೆ! ಈ ರೀತಿಯಾಗಿ ಸೀತೆಗೆ ಅನೇಕವಾದ ಹೆಸರುಗಳು ಬಂದಿವೆ. ಆಕಾಶದಂತೆ ನೀಲವರ್ಣನಾಗಿರುವವನಿಗೆ ಮಗಳನ್ನು ಕೊಡಬೇಕೆಂದು ಪದ್ಮಾಕ್ಷನು ಪ್ರತಿಜ್ಞೆಮಾಡಿಕೊಂಡಿದ್ದನು.

೨೭೬. ಅದರಂತೆಯೇ ನೀಲಿಯ ವರ್ಣವುಳ್ಳ ರಾಮನನ್ನು ಸೀತೆಯು ಮದುವೆಯಾದುದರಿಂದ ಆ ಪದ್ಮಾಕ್ಷನ ಪ್ರತಿಜ್ಞೆಯೂ ಸಫಲವಾದಂತಾಯಿತು. ನೀನು ಕೇಳಿದ ರೀತಿಯನ್ನೆಲ್ಲಾ ಸ್ವಲ್ಪವೂ ಬಿಡದೆ ವಿವರಿಸಿ ಹೇಳಿದ್ದೇನೆ.

ಚತಸ್ರಸ್ತ್ವಂ ಸ್ನುಷಾಸ್ತ್ವತ್ರ ಕರ್ತುಮರ್ಹಸಿ ಭೋ ನೃಪ ।
ಏತಸ್ಮಿನ್ನಂತರೇ ತತ್ರ ಪೂರ್ವಂ ದಶರಥೇನ ಚ ॥ ೨೭೭ ॥

॥ ಶ್ರೀ ಶಿವ ಉವಾಚ ॥

ಸಮಾಹೂರಾ ಯಯುಸ್ಸೈಸ್ಯೈಃ ಸ್ತ್ರೀಪುತ್ರೈಃ ಶ್ವಶುರಾಶ್ಚ ತೇ ।
ಕೋಸಲೋ ಮಾಗಧೇಶಶ್ಚ ಕೈಕೇಯಶ್ಚ ಯುಧಾಜಿತಾ ॥ ೨೭೮ ॥

ಮಾನಯಾಮಾಸ ತಾನ್ ರಾಜಾ ಜನಕೋಽಪಿ ಮುದಾನ್ವಿತಃ ।
ತತೋ ದಶರಥಂ ಪೂಜ್ಯ ಶ್ರೀರಾಮಂ ಲಕ್ಷ್ಮಣಂ ತಥಾ ॥ ೨೭೯ ॥

ಭರತಂ ಚಾಪಿ ಶತ್ರುಘ್ನಂ ಸಂಪೂಜ್ಯಾಭರಣಾದಿಭಿಃ ।
ನಿನಾಯ ಜನಕಸ್ತುಷ್ಟಃ ಸ್ವಪುರೀಂ ಪರಮೋತ್ಸವೈಃ ॥ ೨೮೦ ॥

---

೨೭೭. ಎಲೈ ದಶರಥನೇ ! ನೀನು ಈ ನಾಲ್ಕುಜನರನ್ನೂ ನಿನ್ನ ನಾಲ್ಕುಜನ ಮಕ್ಕಳಿಗೆ ಮದುವೆಮಾಡಿಕೊಂಡು ಸೊಸೆಯರನ್ನಾಗಿ ಮಾಡಿಕೊ. ಎಂದನು.

೨೭೮. ಶಿವನು ಹೇಳಿದನು—ಇದಕ್ಕೆ ಮೊದಲೇ ದಶರಥನು ತನ್ನ ಮಾವಂದರಿಗೆ ಅವರನ್ನು ಕರೆತರುವಂತೆ ಆಳುಗಳನ್ನು ಕಳುಹಿಸಿದ್ದನು.

೨೭೯. ಈ ದೂತರು ಹೇಳಿಬರಲು ಕೋಸಲೇಶ ಮಗಧೇಶ ಕೈಕೇಯೀಶ ಯುಧಾಜಿತ್ ಇವರೆಲ್ಲರೂ ಹೆಂಡತಿ ಮಕ್ಕಳೊಡನೆಯೂ ಸೇನೆಯೊಡನೆಯೂ ಬಂದರು.

೨೮೦. ಜನಕನು ಅವರೆಲ್ಲರನ್ನೂ ಗೌರವದಿಂದ ಕಾಣುತ್ತ ಉಪಚರಿಸಿದನು. ಅನಂತರ ದಶರಥ ರಾಮ ಲಕ್ಷ್ಮಣ ಭರತ ಶತ್ರುಘ್ನ ಇವರನ್ನು ಆಭರಣ ಬಟ್ಟೆ ಮೊದಲಾದುವುಗಳಿಂದ ಗೌರವಿಸಿ ಮಹೋತ್ಸವದಿಂದ ತನ್ನ ಊರಿಗೆ ಕರೆದು ಕೊಂಡು ಹೋದನು.

ತದಾ ರಾಮೋ ನೃಪಂ ನತ್ವಾ ರಾಜ್ಞಾ ಚಾಲಿಂಗಿತೋ ಮುಹುಃ ।
ವಸಿಷ್ಠಂ ಗಾಧಿಜಂ ನತ್ವಾ ಕೌಸಲ್ಯಾದಿ ಪ್ರಣಮ್ಯ ಚ ॥ ೨೮೧ ॥

ರಾಜ್ಞೋ ದಶರಥಸ್ಯಾಗ್ರೇ ತೈಸ್ತ್ರೀಭಿರ್ಬಂಧುಭಿಸ್ಸಹ ।
ಗಜಾರೂಢೋ ಯಯಾವಗ್ರೇ ತೇಪ್ಯಭೂರ್ವ ಗಜಸ್ಥಿತಾಃ ॥ ೨೮೨ ॥

ನದತ್ಸು ವಾದ್ಯಸಂಘೇಷು ಸ್ತುವತ್ಸು ಮಾಗಧಾದಿಷು ।
ನರ್ತತ್ಸು ವಾರನಾರೀಷು ವಿವೇಶ ನಗರೀಂ ಪ್ರಭುಃ ॥ ೨೮೩ ॥

ತದಾಸೀತ್ಸಂಭ್ರಮಃ ಪೌರಸ್ತ್ರೀಣಾಂ ಶ್ರೀರಾಮದರ್ಶನೇ ।
ವಿಸೃಜ್ಯ ಸ್ವೀಯಕೃತ್ಯಾನಿ ದುದ್ರುವುರ್ಗೋಪುರಾದಿಷು ॥ ೨೮೪ ॥

---

೨೮೧. ಆಗ ರಾಮನು ದಶರಥನಿಗೆ ನಮಸ್ಕರಿಸಿದನು. ಆ ರಾಜನು ಅವನನ್ನು ಆಲಿಂಗನಮಾಡಿಕೊಂಡನು. ಅನಂತರ ವಸಿಷ್ಠನಿಗೂ ವಿಶ್ವಾಮಿತ್ರನಿಗೂ ನಮಸ್ಕರಿಸಿದನು. ಕೌಸಲ್ಯೆಯೇ ಮುಂತಾದ ತಮ್ಮ ತಾಯಿಯರಿಗೂ ನಮಸ್ಕರಿಸಿದನು.

೨೮೨. ರಾಜನಾದ ದಶರಥನ ಮುಂದೆ ಹೆಂಗಸರೊಡನೆಯೂ ಬಂಧುಗಳೊಡನೆಯೂ ಆನೆಯಮೇಲೆ ಕುಳಿತುಕೊಂಡು ಮುಂದೆ ಹೊರಟನು. ಉಳಿದವರು ಆನೆಯಮೇಲೆ ಕುಳಿತು ಹೊರಟರು.

೨೮೩. ಆಗ ವಾದ್ಯಗಳು ಮೊಳಗಿದುವು. ವಂದಿ ಮಾಗಧರು ಹೊಗಳುತ್ತಿದ್ದರು. ಸೂಳೆಯರು ಕುಣಿಯುತ್ತಿದ್ದರು. ಇಂತಹ ಉತ್ಸವದಿಂದ ರಾಮನು ಆ ಜನಕನ ಪಟ್ಟಣಕ್ಕೆ ಹೋದನು.

೨೮೪. ಆಗ ಪಟ್ಟಣದ ಹೆಂಗಸರೆಲ್ಲರಿಗೂ ರಾಮನನ್ನು ನೋಡುವುದರಲ್ಲಿ ಬಹುವಾದ ಆಸೆಯು ಹುಟ್ಟಿತು. ಅವರು ಒಡನೆಯೇ ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ಮಹಡಿಯೇ ಮುಂತಾದ ಸ್ಥಳಗಳಿಗೆ ಬೇಗನೆ ಓಡಿದರು.

ಕಟ್ಯಾಂ ನಿಧಾಯ ಬಾಲಾಂಶ್ಚ ದದೃಶೂ ರಘುನಂದನಂ ।
ರಾಜಮಾರ್ಗಂ ಗತಂ ರಾಮಂ ಪವರ್ಷುಃ ಪುಷ್ಪವೃಷ್ಟಿಭಿಃ ॥ ೨೮೫ ॥

ಏವಂ ಮಹೋತ್ಸವೈರ್ವಾಸಸ್ಥಲಂ ದಶರಥಸ್ಸುತೈಃ ।
ಯಯೌ ವಸ್ತ್ರಾನ್ನತೋಯಾದ್ಯೈಃಪರಿಪೂರ್ಣಂ ಮನೋರಮಂ ॥ ೨೮೬ ॥

ಕೃತ್ವಾ ಜ್ಯೋತಿರ್ವಿದಾ ಲಗ್ನದಿವಸಸ್ಯ ವಿನಿಶ್ಚಯಂ ।
ಮಂಟಪಾಂಶ್ಚ ತೋರಣಾನಿ ಪತಾಕಾಂಶ್ಚ ಧ್ವಜಾಂಸ್ತಥಾ ॥ ೨೮೭ ॥

ರೋಪಯಾಮಾಸುಸ್ಸರ್ವತ್ರ ಮಂತ್ರಿಣೋ ಮಿಥಿಲಾಂ ಪುರೀಂ ।
ಮಾರ್ಗಾಶ್ಚಂದನಲಿಪ್ತಾಶ್ಚ ಪುಷ್ಪೈರಾಚ್ಛಾದಿತಾ ಅಪಿ ॥ ೨೮೮ ॥

---

೨೮೫. ಮಕ್ಕಳನ್ನು ಸೊಂಟದಮೇಲೆ ಎತ್ತಿಕೊಂಡು ಆ ರಾಮನನ್ನು ನೋಡುವುದಕ್ಕೆ ಹೋದರು. ರಾಮನು ರಾಜಮಾರ್ಗದಲ್ಲಿ ಬರುತ್ತಿರಲು ಅವನ ಮೇಲೆ ಹೂವನ್ನು ಎರಚಿದರು.

೨೮೬. ಈ ರೀತಿಯಾದ ಮಹೋತ್ಸವದಿಂದ ದಶರಥನು ತನ್ನ ಮಕ್ಕಳುಗಳೊಡನೆ ಬಿಡಾರಕ್ಕೆ ಹೋದನು. ಆ ಬಿಡಾರವು ವಸ್ತ್ರ, ಅನ್ನ, ನೀರು ಮುಂತಾದ ಎಲ್ಲದರಿಂದಲೂ ಪರಿಪೂರ್ಣವಾಗಿದ್ದಿತು. ಮತ್ತು ಸುಂದರವಾಗಿದ್ದಿತು.

೨೮೭. ಆಗ ಜ್ಯೋತಿಷ್ಕರ ಕೈಯ್ಯಲ್ಲಿ ಲಗ್ನವನ್ನು ನಿಷ್ಕರ್ಷೆ ಮಾಡಿಸಿದರು. ಊರಿನಲ್ಲೆಲ್ಲಾ ಮಂಟಪವನ್ನು ಕಟ್ಟಿಸಿದರು. ಧ್ವಜಗಳನ್ನು ಎತ್ತಿ ಕಟ್ಟಿಸಿದರು. ತೋರಣಗಳನ್ನು ಕಟ್ಟಿಸಿದರು. ಪತಾಕೆಗಳನ್ನು ಹಾರಿಸಿದರು.

೨೮೮. ಈ ರೀತಿಯಾಗಿ ಪಟ್ಟಣವನ್ನು ಮಂತ್ರಿಗಳು ಎಲ್ಲಾ ಕಡೆಯುಲ್ಲಿಯೂ ಅಲಂಕರಿಸಿದರು. ಮಾರ್ಗದಲ್ಲೆಲ್ಲಾ ಗಂಧದ ನೀರನ್ನು ಚುಮುಕಿಸಿದರು. ಅಲ್ಲೆಲ್ಲವೂ ಹೂಗಳನ್ನು ಚೆಲ್ಲಿದರು.

ಮಾಲಾಭಿಸ್ತೋರಣೈಃ ಪುಷ್ಪಘೋಷಾದ್ಯೈಸ್ತೇ ಪ್ರಕಾಶಿರೇ ।
ತತೋ ಮುಹೂರ್ತಸಮಯೇ ವಧೂಚ್ಛಿಷ್ಟಾಂ ನಿಶಾಂ ಶುಭಾಂ ॥ ೨೮೯ ॥

ಸುತೈಲಾಢ್ಯಾಂ ಸ್ತ್ರಿಯಃ ಸರ್ವಾಃ ಕೌಸಲ್ಯಾದ್ಯಾಸ್ತು ಮಾತರಃ ।
ರಾಮಾದೀನ್ಪರಿಲಿಪ್ಯಾದೌ ನೀರಾಜನಪುರಸ್ಸರಂ ॥ ೨೯೦ ॥

ಕರಕುಂಭಾಂಸ್ತೋಯಪೂರ್ಣಾನ್ ಚತುರ್ದಿಕ್ಷು ಸದೀಪಕಾನ್ ।
ಸಂಸ್ಥಾಪ್ಯ ಸ್ನಾಪಯಾಮಾಸುರ್ಮಹಾವಾದ್ಯಪುರಸ್ಸರಂ ॥ ೨೯೧ ॥

ತದಾಭ್ಯಂಗಂ ಸ್ವಯಂ ಚಾಪಿ ಕೃತ್ವಾ ಸಸ್ನುಶ್ಚ ಮಾತರಃ ।
ರಾಮಾದೀನ್ಪುರತಃ ಕೃತ್ವಾ ವಸ್ತ್ರಾಲಂಕಾರಭೂಷಿತಾಃ ॥ ೨೯೨ ॥

---

೨೮೯. ಆ ಬೀದಿಗಳೆಲ್ಲವೂ ಮಾಲೆಗಳಿಂದಲೂ ತೋರಣಗಳಿಂದಲೂ ಹೂಗಳಿಂದಲೂ ವಾದ್ಯಘೋಷಗಳಿಂದಲೂ ಪ್ರಕಾಶಿಸಿದುವು. ಮುಹೂರ್ತದ ಸಮಯವು ಬರಲು ಮುತ್ತೈದೆಯರಿಗೆ ಅರಶಿನ ಎಣ್ಣೆಗಳನ್ನು ಕೊಟ್ಟು ಅದರ ಶೇಷವನ್ನು ವರರಿಗೆ ಎಣ್ಣೆಯನ್ನು ತಿಕ್ಕಿದರು.

೨೯೦. ಆಗ ಮುತ್ತೈದೆಯರೂ ರಾಮನ ತಾಯಿಯರೂ ಸೇರಿ ರಾಮ ಲಕ್ಷ್ಮಣರನ್ನು ಹಸೆಯಮೇಲೆ ಕೂರಿಸಿ ಎಣ್ಣೆಶಾಸ್ತ್ರ ಮಾಡಿ ಆರತಿಯೆತ್ತಿ ಸುವಾಸನೆಯುಳ್ಳ ಎಣ್ಣೆಯನ್ನು ತೊಡೆದರು.

೨೯೧. ಅನಂತರ ಅವರು ನಾಲ್ಕುಕಡೆಗೂ ದೀಪಗಳನ್ನಿಟ್ಟರು. ಅಲ್ಲದೆ ತೋಡಿಕೊಳ್ಳುವ ಪಾತ್ರೆಗಳನ್ನೂ ಸಣ್ಣ ಪಾತ್ರೆಗಳನ್ನೂ ತೆಗೆದುಕೊಂಡು ಮಹಾ ವಾದ್ಯಗಳು ಮೊಳಗುತ್ತಿರಲು ಅಭ್ಯಂಜನ ಮಾಡಿಸಿದರು.

೨೯೨. ಕೌಸಲ್ಯೆಯೇ ಮೊದಲಾದ ತಾಯಿಯರೂ ಕೂಡ ತಾವೂ ಅಭ್ಯಂಜನ ಮಾಡಿದರು. ರಾಮಾದಿಗಳಿಗೂ ಕೂಡ ವಸ್ತ್ರಾಲಂಕಾರಗಳಿಂದ ಅಲಂಕರಿಸಿ ತಾವೂ ಅಲಂಕರಿಸಿಕೊಂಡರು.

ಅಭ್ಯಂಗಪೂರ್ವಕಂ ಸಸ್ನೌ ರಾಜಾ ದಶರಥೋऽಪಿ ಸಃ ।
ಸಮಾಹೂಯ ನೃಪಸ್ತ್ರೀಶ್ಚ ಸಭಾಯಾಂ ಸ್ವಸ್ತಿಕೇ ಗುರುಃ ॥ ೨೯೩ ॥

ಮುಕ್ತಾವಿನಿರ್ಮಿತೇ ರಾಜ್ಞಃ ಪಾರ್ಶ್ವೇ ವಾಮೇ ನ್ಯವೇಶಯತ್ ।
ಅಗ್ರೇ ರಾಮಾದಿಕಾನ್ ಕೃತ್ವಾ ತಾಃ ಸ್ತ್ರಿಯೋऽವನತಾನನಾಃ ॥ ೨೯೪ ॥

ಹರಿದ್ರಾಕುಂಕುಮಾಲಿಪ್ತಚರಣಾ ರೇಜಿರೇಂಗಣೇ ।
ವಸಿಷ್ಠೋ ಬ್ರಾಹ್ಮಣೈರ್ಯುಕ್ತೋ ರಾಜ್ಞಾ ರಾಮಾದಿಭಿರ್ಮುದಾ ॥ ೨೯೫ ॥

ಕೃತ್ವಾ ಗಣಪತೇಃ ಪೂಜಾಂ ಪುಣ್ಯಾಹಾದಿತ್ರಯಂ ಕ್ರಮಾತ್ ।
ಕಾರಯಾಮಾಸ ವಿಧಿವತ್ ಪ್ರತಿಷ್ಠಾಂ ದೇವಕಸ್ಯ ಚ ॥ ೨೯೬ ॥

---

೨೯೩. ರಾಜನಾದ ದಶರಥನೂ ಕೂಡ ಅಭ್ಯಂಜನ ಸ್ನಾನವನ್ನು ಮಾಡಿದನು. ಅನಂತರ ಗುರುವು ರಾಜನನ್ನೂ ರಾಜನ ಪತ್ನಿಯರನ್ನೂ ಮಕ್ಕಳನ್ನೂ ಹಸೆಯ ಮೇಲಕ್ಕೆ ಕರೆಸಿದನು.

೨೯೪. ಆ ಪೀಠವು ಮುತ್ತಿನಿಂದ ಕೂಡಿಸಿ ಮಾಡಲ್ಪಟ್ಟಿದ್ದಿತು. ಆ ಪೀಠದಲ್ಲಿ ರಾಜನನ್ನು ಕೂರಿಸಿ ಅವನ ಎಡಗಡೆಯಲ್ಲಿ ರಾಜನ ಹೆಂಡತಿಯರನ್ನು ಕೂರಿಸಿದನು. ಅವರ ಮುಂದೆ ರಾಮ ಲಕ್ಷ್ಮಣ ಭರತ ಶತ್ರುಘ್ನರು ಕುಳಿತರು. ಹೆಂಗಸರು ನಾಚಿಕೆಯಿಂದ ತಲೆಯನ್ನು ತಗ್ಗಿಸಿಕೊಂಡು ಕುಳಿತರು.

೨೯೫. ಆ ಹೆಂಗಸರು ಕಾಲಿಗೆ ಅರಸಿನ ಕುಂಕುಮಗಳನ್ನು ಹಚ್ಚಿಕೊಂಡಿದ್ದರು ಆಗ ವಸಿಷ್ಠನು ಬ್ರಾಹ್ಮಣರೊಡನೆಯೂ ರಾಜನೊಡನೆಯೂ ರಾಮ ಲಕ್ಷ್ಮಣ ಭರತ ಶತ್ರುಘ್ನರೊಡನೆಯೂ ಗಣಪತಿ ಪೂಜೆಯನ್ನು ಮಾಡಿದನು.

೨೯೬. ಗಣಪತಿಯ ಪೂಜೆಯನ್ನು ಮಾಡಿ ಅನಂತರ ಪುಣ್ಯಾಹ ನಾಂದಿ ನವಗ್ರಹಮುಖಗಳನ್ನು ಕ್ರಮವಾಗಿ ಮಾಡಿದನು. ಅನಂತರ ಮನೆದೇವರ ಪ್ರತಿಷ್ಠೆಯನ್ನೂ ಮಾಡಿದನು.

ಗ್ರಾಮಾಚಾರಂ ಕುಲಾಚಾರಂ ವೃದ್ಧಾಚಾರಂ ತಥಾ ಪುನಃ ।
ದೇಶಾಚಾರಪ್ರಮದಾಚಾರಾದೀನಕರೋನ್ನೃಪಃ ॥ ೨೯೭ ॥

ತೋಯಕುಂಭಂ ಮಂಟಪಾದಿಕಾನಾಪೂಜನಮಾಕರೋತ್ ।
ಕೌಸಲ್ಯಾದ್ಯಾಃ ಸ್ತ್ರಿಯಸ್ಸರ್ವಾ ಹರಿತ್ಪೀತಾರುಣೈರ್ವರೈಃ ॥ ೨೯೮ ॥

ಹೇಮತಂತ್ವರ್ಚಿತೈರ್ವಸ್ತ್ರೈರ್ವಿರೇಜುರ್ಮಂಟಪಾಂಗಣೇ ।
ಜನಕಶ್ಚ ನೃಪೈರ್ಯುಕ್ತೋ ಮಹಾವಾದ್ಯಪುರಸ್ಸರಂ ॥ ೨೯೯ ॥

ರಾಮಾದೀನ್ ತಾನ್ನಿಜಂ ಗೇಹಂ ನೇತುಕಾಮಸ್ಸಮಾಯಯೌ ।
ಮಂಟಪೇ ಪೂಜಯಾಮಾಸ ರಾಮಾದೀನ್ ಜನಕಸ್ತದಾ ॥ ೩೦೦ ॥

---

೨೯೭. ಅನಂತರ ಗ್ರಾಮಾಚಾರ ವೃದ್ಧಾಚಾರಗಳನ್ನು ಬಿಡದೆ ಅನುಸರಿಸಿದನು. ದೇಶಾಚಾರಗಳನ್ನೂ ಅನುಸರಿಸಿ ಹೆಂಗಸರ ಆ ವಿಚಾರವನ್ನೂ ಬಿಡದೆ ಅನುಸರಿಸಿ ಅದರಂತೆ ಮಾಡಿದನು.

೨೯೮. ಕುಂಭಪೂಜೆ ಮಂಟಪಪೂಜೆಗಳನ್ನೂ ಮಾಡಿದನು. ಅನಂತರ ಆ ಕೌಸಲ್ಯೆ ಮುಂತಾದವರೂ ಮದುವೆಯ ಮನೆಯಲ್ಲಿ ಧಾರೆಯೆರೆಯ ತಕ್ಕವರೂ ತಾವು ಉಟ್ಟುಕೊಳ್ಳಬೇಕಾದ ದೀಕ್ಷಾವಸ್ತ್ರವನ್ನು ಉಟ್ಟುಕೊಂಡರು.

೨೯೯. ಆ ದೀಕ್ಷಾವಸ್ತ್ರಗಳು ಸ್ವಲ್ಪ ಬಿಳುಪು ಹೆಚ್ಚಾದ ಅರಿಸಿನದ ಬಣ್ಣವುಳ್ಳವುಗಳಾಗಿಯೂ ಇದ್ದುವು. ಅಂಚಿಗೆಲ್ಲವೂ ಕಲಾಪತ್ತುಗಳನ್ನು ಹಾಕಿ ಅವುಗಳಿಂದ ಬಗೆಬಗೆಯಾಗಿ ಚಿತ್ರಿಸಿದ್ದರು.

೩೦೦. ಜನಕನು ವಾದ್ಯವನ್ನು ಮಾಡಿಸಿಕೊಂಡು ಅನೇಕಜನ ದೊರೆಗಳೊಂದಿಗೆ ರಾಮನೇ ಮುಂತಾದವರನ್ನು ತನ್ನ ಮನೆಗೆ ಕರೆದುಕೊಂಡು ಹೋಗುವುದಕ್ಕೆ ಬಂದನು. ಆಗ ಆ ಮಂಟಪದಲ್ಲಿ ಜನಕನು ರಾಮಾದಿಗಳಿಗೆ ವರಪೂಜೆಯನ್ನು ಮಾಡಿದನು.

ಹೇಮತಂತೂದ್ಭವೈರ್ದಿವ್ಯವಸ್ತ್ರೈರಾಭರಣಾದಿಭಿಃ ।
ತದಾ ವಿರೇಜುಸ್ತೇ ಬಾಲಾ ಸರ್ವೇ ಪ್ರಮುದಿತಾನನಾಃ ॥ ೩೦೧ ॥

ತತಸ್ತೇ ವಾರಣೇಂದ್ರಸ್ಥಾ ದಿವ್ಯಚಾಮರವೀಜಿತಾಃ ।
ಶೃಣ್ವಂತೋ ವಾದ್ಯಘೋಷಾಂಶ್ಚ ವರ್ಷಿತಾಃ ಪುಷ್ಪವೃಷ್ಟಿಭಿಃ ॥ ೩೦೨ ॥

ಹರಿದ್ರಾಂಕಿತಧಾನ್ಯೈಶ್ಚ ಮಾಂಗಲ್ಯೈರ್ಮೌಕ್ತಿಕಾದಿಭಿಃ ।
ಮಾತೃಭಿರ್ವಾರಣಸ್ತ್ರೀಷು ಸಂಸ್ಥಿತಾಭಿರ್ಮುಹುರ್ಮುಹುಃ ॥ ೩೦೩ ॥

ಏವಂ ತೇ ರಾಘವಾದ್ಯಾಶ್ಚ ಪುರಸ್ತ್ರೀಭಿರ್ನಿರೀಕ್ಷಿತಾಃ ।
ಪ್ರಾಸಾದೋಪರಿಸಂಸ್ಥಾಭಿಃ ಲಾಜಾಭಿರ್ವರ್ಷಿತಾ ಮುಹುಃ ॥ ೩೦೪ ॥

---

೩೦೧. ಚಿನ್ನದ ಸರಿಗೆಯುಳ್ಳ ಬಟ್ಟೆಗಳನ್ನು ಕೊಟ್ಟು ಅನೇಕ ಒಡವೆಗಳನ್ನು ತೊಡಿಸಿ ವರಪೂಜೆಯನ್ನು ಮಾಡಿದನು. ಈ ರೀತಿಯಾದ ಅಲಂಕಾರದಿಂದ ಅವರೆಲ್ಲರೂ ಸಂತೋಷಪಟ್ಟು ಅವನ್ನು ಧರಿಸಿಕೊಂಡು ಪ್ರಕಾಶಿಸಿದರು.

೩೦೨. ಅಲ್ಲಿಂದ ಜನಕನಮನೆಗೆ ಹೋಗಲು ಆನೆಯಮೇಲೆ ಅವರೆಲ್ಲರೂ ಕುಳಿತರು. ಅವರಿಗೆ ಛತ್ರಿಯನ್ನು ಹಿಡಿದು ಚಾಮರವನ್ನು ಬೀಸಿದರು. ವಾದ್ಯಗಳು ಬಹುವಾಗಿ ಮೊಳಗಿದುವು. ಪಟ್ಟಣಿಗರೂ ಮುತ್ತೈದೆಯರೂ ಇವರ ಮೇಲೆ ಪುಷ್ಪವೃಷ್ಟಿಯನ್ನು ಕರೆಯುತ್ತಿದ್ದರು.

೩೦೩. ಅರಶಿನದಿಂದ ಕಲಸಿ ಬಣ್ಣಮಾಡಿರುವ ಮಂತ್ರಾಕ್ಷತೆಯನ್ನೂ ಮಂಗಳಧಾನ್ಯಗಳನ್ನೂ ಹಿಡಿದುಕೊಂಡು ಈ ತಾಯಿಯರು ಹೆಣ್ಣಾನೆಯಮೇಲೆ ಕುಳಿತರು.

೩೦೪ ಆ ರಾಮಲಕ್ಷ್ಮಣ ಭರತ ಶತ್ರುಘ್ನರು ಈ ರೀತಿಯಾಗಿ ಆನೆಯಮೇಲೆ ಕುಳಿತು ರಾಜಬೀದಿಯಲ್ಲಿ ಹೋಗುತ್ತಿರಲು ಆ ಪಟ್ಟಣದ ಹೆಂಗಸರು ಮಹಡಿಯಮೇಲಿನ ಕಿಟಕಿಗಳಲ್ಲಿ ನೋಡುತ್ತ ಇವರಮೇಲೆ ಅರಳು ಅಕ್ಕಿ ಹೂಗಳನ್ನು ಎರಚಿದರು.

ದದೃಶುರ್ನರ್ತಸಾನ್ಯಗ್ರೇ ವಾರಸ್ತ್ರೀಣಾಂ ಸ್ಮಿತಾನನಾಃ ।
ವಾಟಿಕಾಃ ಪುಷ್ಪವೃಕ್ಷಾಣಾಂ ವರಮೃತ್ಪಾತ್ರನಿರ್ಮಿತಾಃ ॥ ೩೦೫ ॥

ತಥಾ ಕೃತ್ರಿಮವೃಕ್ಷಾಂಶ್ಚ ಪತಾಕಾಂಶ್ಚ ಧ್ವಜಾಂ ಸ್ತಥಾ ।
ವಹ್ನಿಸಂಗಾದೌಷಧೀನಾಂ ಪುಷ್ಪವೃಕ್ಷವಿನಿರ್ಮಿತಾನ್ ॥ ೩೦೬ ॥

ತಟಿತ್ಪ್ರಭೋಪಮಾಂಶ್ಚಾಪಿ ಗಗನಾಂತರ್ವಿರಾಜಿತಾನ್ ।
ವಹ್ನಿಸಂಗಾದೌಷಧೀಭ್ಯಃ ಪ್ರಕಾರಾನ್ ವಿವಿಧಾನ್ ವರಾನ್ ॥ ೩೦೭ ॥

ಚಂದ್ರಜ್ಯೋತ್ಸ್ನಾಂ ಕೃತ್ರಿಮಾಂಶ್ಚ ದೀಪವೃಕ್ಷಾನ್ ಸಹಸ್ರಶಃ ।
ದೀಪಮಾಲಾಶ್ಚ ವ್ಯಾಘ್ರಾದೀನ್ ಕೃತ್ರಿಮಾನ್ ರಥಸಂಸ್ಥಿತಾನ್ ॥ ೩೦೮ ॥

---

೩೦೫. ಸೂಳೆಯರು ಮುಂಭಾಗದಲ್ಲಿ ಕುಣಿಯುತ್ತಿದ್ದರು. ಅವರನ್ನು ನೋಡಿ ಇವರು ಸಂತೋಷದಿಂದ ನಗುತ್ತಿದ್ದರು. ಹೀಗೆ ಹೋಗುತ್ತಿರುವ ದಾರಿಯಲ್ಲಿ ಮಣ್ಣಿನ ಕುಂಡಗಳಲ್ಲಿ ಹೂವಿನ ಗಿಡಗಳನ್ನು ಮಾಡಿ ಉಪವನಗಳನ್ನು ಮಾಡಿದ್ದರು.

೩೦೬. ಇವೂ ಅಲ್ಲದೆ ಮರಗಳಂತೆ ಬಟ್ಟೆಕಾಗದ ಮುಂತಾದುವುಗಳಿಂದ ಮಾಡಿದ್ದರು. ಪತಾಕೆಗಳನ್ನೂ ಧ್ವಜಗಳನ್ನೂ ಉದ್ದಕ್ಕೂ ನೆಟ್ಟಿದ್ದರು. ಮದ್ದಿನಿಂದ ಹೂಬಾಣಮುಂತಾದುವನ್ನು ಮಾಡಿದ್ದರು. ಬಗೆ ಬಗೆಯಾದ ಮರಗಳನ್ನೂ ಹೂಗಳನ್ನೂ ಮಾಡಿ ಅವಕ್ಕೆ ಬೆಂಕಿಯನ್ನು ಹಚ್ಚುವುದರಿಂದ ಅವೆಲ್ಲವೂ ಬಹು ರಮ್ಯವಾಗಿದ್ದುವು.

೩೦೭. ಆಕಾಶಬಾಣಗಳೆಂಬ ಮಿಂಚಿನಂತೆ ಆಕಾಶದಲ್ಲಿ ಓಡಾಡುವ ಬಾಣಗಳನ್ನೂ ಹತ್ತಿಸಿದರು. ಈ ರೀತಿಯಾಗಿ ಮದ್ದುಗಳಿಂದ ಅನೇಕ ಬಗೆಯಾದ ಬಾಣಗಳನ್ನು ಮಾಡಿ ಹತ್ತಿಸಿದರು.

೩೦೮. ಚಂದ್ರಿಕೆಯಂತಿರುವಂತೆ ಬೆಳಕನ್ನು ಕೃತ್ರಿಮವಾಗಿ ಮಾಡಿದ್ದರು. ಮರಗಳಂತೆ ಕಾಣುವಂತೆ ದೀಪಗಳನ್ನು ಹಚ್ಚಿದರು. ದೀಪಮಾಲೆಗಳನ್ನು ಮಾಡಿದರು. ದೀಪಗಳಿಂದ ಹುಲಿಯನ್ನು ಮಾಡಿ ಅವನ್ನು ರಥದಲ್ಲಿಟ್ಟು ಕೊಂಡೊಯ್ಯುತ್ತಿದ್ದರು.

ಔಷಧೀಭಿಃ ಪೂರಿತಾಂಶ್ಚ ಕೇಕೀಚಕ್ರೋಪಮಾದಿಕಾ |
ದದೃಶುರ್ವಾರಣೇಂದ್ರಸ್ಥಾ ಏವಂ ತೇ ರಾಘವಾದಯಃ || ೩೦೯ ||

ತದಾ ದೇವಾ ವಿಮಾನಸ್ಥಾ ದದೃಶುಃ ಕೌತುಕಂ ಮುದಾ |
ಏವಂ ನಾನೋತ್ಸವೈರ್ಬಾಲಾ ಯಯುರ್ಜನಕಮಂದಿರಂ || ೩೧೦ ||

ಅವರುಹ್ಯ ಗಜೇಂದ್ರೇಭ್ಯಸ್ತಸ್ಥುಸ್ತೇ ಮಂಟಪಾಂಗಣೇ |
ಮಧುಪರ್ಕವಿಧಾನಾನಿ ವಿಷ್ಟರಾದೀನಿ ಚ ಕ್ರಮಾತ್ || ೩೧೧ ||

ತಯೋರ್ಗುರೂ ಚಕ್ರತುಸ್ತೌ ವಸಿಷ್ಠಗೌತಮಾತ್ಮಜಾ |
ವಾಲ್ಮೀಕಾದಿಮುನಿವೃಂದವೇಷ್ಟಿತೌ ತುಷ್ಟಮಾನಸೌ || ೩೧೨ ||

---

೩೦೯. ಹೂವಿನ ಬಾಣಗಳು ಚಕ್ರಬಾಣಗಳು ನವಿಲುಬಾಣಗಳು ಮುಂತಾದುವುಗಳನ್ನು ಮಾಡಿ ಹತ್ತಿಸುತ್ತಿದ್ದರು. ಈ ರಾಮಾದಿಗಳು ಆನೆಯ ಮೇಲೆ ಕುಳಿತುಕೊಂಡು ಹೋಗುತ್ತ ಇವೆಲ್ಲವನ್ನೂ ನೋಡುತ್ತಿದ್ದರು.

೩೧೦. ಆಗ ದೇವತೆಗಳೂ ಕೂಡ ಅಂತರಿಕ್ಷದಲ್ಲಿ ವಿಮಾನದಲ್ಲಿದ್ದು ಕೊಂಡು ಈ ಕೌತುಕಗಳನ್ನು ನೋಡುತ್ತಿದ್ದರು. ಈರೀತಿಯಾಗಿ ಬಗೆ ಬಗೆಯ ಉತ್ಸವಗಳಿಂದ ಜನಕನು ವರರನ್ನು ಮನೆಗೆ ಕರೆದುಕೊಂಡು ಹೋದನು.

೩೧೧. ಅವರೆಲ್ಲರೂ ಆ ಆನೆಯಿಂದಿಳಿದು ಮಂಟಪದೊಳಗೆ ನಿಂತು ಕೊಂಡರು. ಆಗ ಜನಕನು ಮಧುಪರ್ಕವನ್ನು ಕೊಟ್ಟು ಆಸನಗಳನ್ನು ಕ್ರಮವಾಗಿ ಕೊಟ್ಟನು.

೩೧೨. ಇವೆಲ್ಲವನ್ನೂ ಆ ಗುರುಗಳಾದ (ಪುರೋಹಿತರಾದ) ವಸಿಷ್ಠನೂ ಶತಾನಂದನೂ ಮಾಡುತ್ತಿದ್ದರು. ವಾಲ್ಮೀಕಿಯೇ ಮುಂತಾದ ಮುನಿಗಳು ಅವರ ಸುತ್ತಲೂ ಸುತ್ತಿಕೊಂಡಿದ್ದರು.

ತತಃ ಪೂಜಾಂ ವಧೂನಾಂ ಚ ಮುದಾ ದಶರಥೋ ನೃಪಃ ।
ಚಕಾರ ಗುರುಣಾ ಯುಕ್ತಸ್ತದಾ ಸ ಮಂಟಪಾಂಗಣೇ ॥ ೩೧೩ ॥

ತತೋ ಲಗ್ನಮುಹೂರ್ತೇ॰ರ್ತಾ ವಧೂಭಿಶ್ಚ ಪೃಥಗ್ವರಾ್ ।
ವೇದಿಕಾಸು ಸ್ಥಿತಾ್ ಕೃತ್ವಾ ದಂಪತ್ಯೋರಂತರೇ ಪಟಾ್ ॥ ೩೧೪ ॥

ಧೃತ್ವಾ ಮಂಗಳಘೋಷಾಂಶ್ಚ ಮುನಿಭಿಶ್ಚಕ್ರತುರ್ಗುರೂ ।
ತದಾ ತೂಷ್ಣೀಂ ಸಭಯಾಂ ತೇ ಶುಶ್ರುವುಸ್ಸಕಲಾ ಜನಾಃ ॥ ೩೧೫ ॥

ಪುಷ್ಪೈಃ ಪೀತಧಾನ್ಯೈಶ್ಚ ವವರ್ಷುರ್ದಂಪತೀ್ ಸ್ತ್ರಿಯಃ ।
ಶ್ರೀದೇವೀತನಯೌ ಶಿವಸ್ಸುಖಕರೋ ಮಿತ್ರಶ್ಶಶೀ ಕಂಪನಃ ।
ಸರ್ವೇ ತೇ ಮುನಯಶ್ಚಲಾ ದಶದಿಶಸರ್ಪಾ ಮೃಗೇಂದ್ರಾಃ ಖಗಾಃ ।

---

೩೧೩. ಅನಂತರ ಆ ದಶರಥನು ವಧುಗಳ ಪೂಜೆಯನ್ನು ಸಂತೋಷದಿಂದ ಆ ಮಂಟಪದೊಳಗೆ ಮಾಡಿದನು. ಇವೆಲ್ಲವನ್ನೂ ವಸಿಷ್ಠನು ಕ್ರಮವಾಗಿ ಮಾಡಿಸುತ್ತಿದನು.

೩೧೪. ಅನಂತರ ಲಗ್ನವು ಬಂದು ಮುಹೂರ್ತವೂ ಬರಲು ವರರನ್ನೂ ವಧುಗಳನ್ನೂ ಬೇರೆ ಬೇರೆಯಾಗಿ ವೇದಿಕೆಯಲ್ಲಿ ನಿಲ್ಲಿಸಿ ಆ ದಂಪತಿಗಳ ನಡುವೆ ಅಂತರಪಟ (ತೆರೆಬಟ್ಟೆ)ವನ್ನು ಹಿಡಿದರು.

೩೧೫. ಮುನಿಗಳೂ ಪುರೋಹಿತರೂ ಮಂಗಳಾಷ್ಟಕಗಳನ್ನೂ ಹೇಳುತ್ತ ಮಂಗಳಘೋಷಗಳನ್ನು ಮಾಡುತ್ತಿದ್ದರು. ಆಗ ಆ ಸಭೆಯಲ್ಲಿದ್ದ ಜನರೆಲ್ಲರೂ ಗಲಭೆಮಾಡದೆ ಒಂದೇ ಮನಸ್ಸಿನಿಂದ ಕೇಳುತ್ತಿದ್ದರು.

೩೧೬. ಮುತ್ತೈದೆಯರು ಹೂಗಳನ್ನೂ ಬಿಳಿಯ ಅಕ್ಕಿ ಅರಳುಗಳನ್ನೂ ಆ ದಂಪತಿಗಳಮೇಲೆ ಚೆಲ್ಲಿದರು. ಪಾರ್ವತಿಪರಮೇಶ್ವರರು, ಗಣೇಶಷಣ್ಮುಖರು, ಸೂರ್ಯಚಂದ್ರರು, ಅಂಗಾರಕಾದಿಗ್ರಹಗಳು, ಋಷಿಗಳು, ಭೂಮಿಯು, ಹತ್ತು ದಿಕ್ಕುಗಳು, ಸರ್ಪಗಳು, ಮೃಗೇಂದ್ರರು, ಪಕ್ಷಿಗಳು, ನದಿಗಳು, ಪುಣ್ಯ

ನದ್ಯಃ ಪುಣ್ಯಸರೋವರಾಣಿ ದಿತಿಜಾಸ್ತೀರ್ಥಾನಿ ಕಂಜಾಸನ ।
ಶ್ಚೇಂದ್ರೋ ವಹ್ನ್ಯಮರಾ ನದಾ ಜಲಧಯಃ ಕುರ್ವಂತು ವೋ ಮಂಗಳಂ
॥ ೩೧೬ ॥

ತದೇವ ಲಗ್ನಂ ಸುದಿನಂ ತದೇವ । ತಾರಾಬಲಂ ಚಂದ್ರಬಲಂ ತದೇವ ।
ವಿದ್ಯಾಬಲಂ ದೈವಬಲಂ ತದೇವ । ಕಾಶೀಪತೇರ್ಯತ್ಸ್ಮರಣಂ ವಿಧೇಯಂ
॥ ೩೧೭ ॥

ಏವಂ ಮಂಗಳಶಬ್ದೈಶ್ಚ ಮಹಾವಾದ್ಯಪುರಸ್ಸರಂ ।
ತೇಷಾಮಂತಃಪಟಾ ಮುಕ್ತ್ವಾ ಓಂ ಪುಣ್ಯೋಽಸ್ತ್ವಿತಿ ಗುರವೋ ॥೩೧೮॥

ತಾಸಾಂ ತೇ ಪಾಣಿಗ್ರಹಣವಿಧಾನಂ ವಿಧಿಪೂರ್ವಕಂ ।
ಲಾಜಾಹೋಮಾದಿಕಂ ಸರ್ವಂ ಚಕ್ರುರ್ಮಂಗಳಪೂರ್ವಕಂ ॥ ೩೧೯ ॥

ಸರೋವರಗಳು, ದೈತ್ಯರು, ತೀರ್ಥಗಳು, ಬ್ರಹ್ಮನು, ಇಂದ್ರವಹ್ನಿ ಮುಂತಾದ ದೇವತೆಗಳು ನದಿಗಳು ಸಮುದ್ರಗಳು ಇವೆಲ್ಲವೂ ನಿಮಗೆ ಮಂಗಳವನ್ನುಂಟು ಮಾಡಲಿ.

೩೧೭. ಕಾಶೀಪತಿಯಾದ ವಿಶ್ವೇಶ್ವರನ ಸ್ಮರಣವನ್ನು ಮಾಡಿದಾಗ ಇರುವುದು ಯಾವಲಗ್ನವೋ ಅದೇ ಸುಲಗ್ನವು. ಆ ದಿನವೇ ಸುದಿನವು. ತಾರಾಬಲ ಚಂದ್ರಬಲಗಳು ಅವುಗಳೇ ಆಗಿರುವುವು. ವಿಶ್ವೇಶ್ವರನ ಸ್ಮರಣೆಯನ್ನು ಮಾಡಿದರೆ ಕೆಟ್ಟುದೂ ಒಳ್ಳೆಯದಾಗುತ್ತದೆ. ಬಹು ಮಂಗಳ ಕರವು.

೩೧೮. ಆ ಗುರುಗಳು ಈ ರೀತಿಯಾಗಿ ಮಂಗಳ ಧ್ವನಿಗಳನ್ನೂ ಮಂಗಳಾಷ್ಟಕಗಳನ್ನೂ ಆಚರಿಸಿ ಮಹಾವಾದ್ಯಗಳನ್ನು ಮಾಡಿಸುತ್ತ ಅವರುಗಳ ತೆರೆಗಳನ್ನು ತೆರೆದು ''ಓಂ ಪುಣ್ಯೋಽಸ್ತು'' ಎಂದು ಹೇಳಿದರು.

೩೧೯. ಅನಂತರ ವಿಧಿವತ್ತಾಗಿ ಆ ರಾಮಾದಿಗಳು ಸೀತಾದಿಗಳ ಪಾಣಿಗ್ರಹಣವನ್ನು ಮಾಡಿದರು. ಅನಂತರ ಮಂಗಳಪೂರ್ವಕವಾಗಿ ಲಾಜಾ ಹೋಮವೇ ಮುಂತಾದ ಹೋಮಗಳನ್ನು ಮಾಡಿದರು.

ತದಾ ಮಹಾವಾದ್ಯಘೋಷಾ ನಿನೇದುರ್ಮಂಟಪಾಂಗಣೇ ।
ನನೃತುರ್ವಾರನಾರ್ಯಶ್ಚ ಜಗುರ್ಮಾಗಧವಂದಿನಃ ॥ ೩೨೦ ॥

ನಟಾ ಮಂಗಳಗೀತೈಶ್ಚ ತುಷ್ಟುವುಸ್ತೇ ಮಹಾಸ್ವನೈಃ ।
ತದಾ ದಾನಾನ್ಯನೇಕಾನಿ ಚಕ್ರತುಸ್ತೌ ನೃಪೋತ್ತಮೌ ॥ ೩೨೧ ॥

ಅಥ ತೇ ಬಾಲಕಾಸ್ಸರ್ವೇ ವಧೂಃ ಸ್ಥಾಪ್ಯ ಕಟೀಷು ವೈ ।
ಕೌಸಲ್ಯಾದಿವನಿತಾಭಿರ್ಜಗ್ಮುಸ್ತೇ ಭೋಜನಂ ಗೃಹಂ ॥ ೩೨೨ ॥

ತತ್ರಾಪ್ರುಸಿಂಚನಂ ಚಕ್ರುಸ್ಸಂಪೂಜ್ಯ ತ್ವಂ ಚ ಮಾಮಪಿ ।
ತತೋ ರಾಮಾದಿಕಾಸ್ಸರ್ವೇ ಸ್ವಸ್ವಪತ್ನ್ಯಾ ಪೃಥಙ್ಮುದಾ ॥ ೩೨೩ ॥

ಚಕ್ರುಸ್ತೇ ಭೋಜನಂ ಹೃಷ್ಟಾಃ ಸ್ತ್ರೀಭಿಸ್ಸರ್ವತ್ರ ವೇಷ್ಟಿತಾಃ ।
ರಾಜಾ ದಶರಥಶ್ಚಾಪಿ ಸುಹೃದ್ಭಿಶ್ಚ ನೃಪೋತ್ತಮೈಃ ॥ ೩೨೪ ॥

---

೩೨೦. ಆಗ ಆ ಮಂಟಪಾಂಗಣದಲ್ಲಿ ಮಹಾವಾದ್ಯಗಳು ಮೊಳಗಿದುವು. ಸೂಳೆಯರು ನರ್ತನವಾಡಿದರು. ಹೊಗಳುಭಟರು ಹೊಗಳಿದರು.

೩೨೧. ನಟರು ಮಂಗಳಗೀತಗಳನ್ನು ಹಾಡಿದರು. ಮತ್ತು ಗಟ್ಟಿಯಾಗಿ ಕೂಗುತ್ತ ಸ್ತುತಿಸಿದರು. ಆಗ ಆ ದಶರಥಜನಕರು ಅನೇಕವಾದ ದಾನಗಳನ್ನು ಮಾಡಿದರು.

೩೨೨. ಆಮೇಲೆ ಆ ವಧುಗಳನ್ನು ವರರು ಸೊಂಟದಮೇಲೆ ಎತ್ತಿಕೊಂಡು ಕೌಸಲ್ಯೆಯೇ ಮುಂತಾದವರೊಡನೆ ಊಟಮಾಡಲು ಊಟದಮನೆಗೆ ಹೋದರು.

೩೨೩. ಆ ಭೋಜನ ಗೃಹದಲ್ಲಿ ಸರ್ವಮಂಗಳೆಯಾದ ನಿನ್ನನ್ನೂ ಶಿವನಾದ ನನ್ನನ್ನೂ ಪೂಜಿಸಿದರು. ಅನಂತರ ಆಪ್ರುಸಿಂಚನವೆಂಬ ಶುಭಕರ್ಮವನ್ನು ಮಾಡಿದರು. ಅನಂತರ ರಾಮಾದಿಗಳು ಹೆಂಡತಿಯರೊಡನೆ ಬೇರೆ ಬೇರೆಯಾಗಿ ಊಟಮಾಡಿದರು.

೩೨೪–೩೨೫. ಆಗ ಅಲ್ಲಿ ಹೆಂಗಸರೆಲ್ಲರೂ ತುಂಬಿಕೊಂಡಿದ್ದರು. ರಾಜನಾದ ದಶರಥನು ತನ್ನ ಸ್ನೇಹಿತರೊಡನೆಯೂ ಬಂಧುಗಳೊಡನೆಯೂ ಪಟ್ಟಣಿಗರು

ಪೌರೈರ್ಜಾನಪದೈರಿಷ್ಟೈರ್ಮುನಿಭಿಃ ಪರಿವಾರಿತಃ |
ಜನಕಸ್ಯ ಗೃಹೇ ಗತ್ವಾ ಚಕಾರ ಭೋಜನಂ ಮುದಾ ॥ ೩೨೫ ॥

ಕೌಸಲ್ಯಾದ್ಯಾಃ ಸ್ತ್ರಿಯಃ ಸ್ತ್ರೀಭಿಃ ಚಕ್ರುರ್ಭೋಜನಮುತ್ತಮಂ |
ಸುಮೇಧಯಾ ಪ್ರಾರ್ಥಿತಾಸ್ತಾ ವಂದಿತಾಶ್ಚ ಮುಹುರ್ಮುಹುಃ ॥ ೩೨೬ ॥

ಏವಂ ನಾನಾಸಮುತ್ಸಾಹಾಂಶ್ಚಕಾರ ಜನಕೋ ಮುದಾ |
ಅಥ ತೇ ಬಾಲಕಾಸ್ಸರ್ವೇ ಸ್ತ್ರೀವಾಕ್ಯಾನ್ಮಾತೃಸನ್ನಿಧೌ | ॥ ೩೨೭ ॥

ಸ್ವಸ್ವಪತ್ನ್ಯಾ ಪಾದಯೋಸ್ಸ್ವಶಿರೋಭಿರ್ನಮನಂ ಮುಹುಃ |
ಚಕ್ರುಸ್ತುಷ್ಟಮನಾಸ್ಸರ್ವೇ ತಾಸ್ತಾನ್ನೇಮುಃ ಪೃಥಕ್ ಪೃಥಕ್ ॥ ೩೨೮ ॥

ಕುಂಕುಮಾಂಕಿತಪಾದಾಶ್ಚ ತೇಷಾಮಂಕೇಷು ತಾ ದದುಃ ॥ ೩೨೯ ॥

ಮುನಿಗಳು ಮುಂತಾದವರೊಡನೆಯೂ ಕೂಡಿಕೊಂಡು ಜನಕನಮನೆಗೆ ಹೋಗಿ ಸಂತೋಷದಿಂದ ಭೋಜನವನ್ನು ಮಾಡಿದನು.

೩೨೬. ಕೌಸಲ್ಯೆಯೇ ಮುಂತಾದ ಹೆಂಗಸರು ಹೆಂಗಸರೊಡನೆ ಸಂತೋಷದಿಂದ ಭೋಜನಮಾಡಿದರು. ಆಗ ಆ ಹೆಂಗಸರನ್ನು ಜನಕಪತ್ನಿಯಾದ ಸುಮೇಧೆಯು ಪ್ರಾರ್ಥಿಸುತ್ತಾ ವಂದಿಸುತ್ತ ಉಪಚಾರವನ್ನು ಹೇಳುತ್ತಿದ್ದಳು.

೩೨೭–೩೨೮. ಜನಕನು ಇವೇ ಮುಂತಾದ ಮದುವೆಯ ಉತ್ಸವದ ಉತ್ಸಾಹ ಕೆಲಸಗಳನ್ನು ಮಾಡಿದನು. ಅನಂತರ ಆ ಮದವಣಿಗರು ಅವರ ತಾಯಿಯರ ಬಳಿಯಲ್ಲಿದ್ದುಕೊಂಡಿರಲು ಮದವಣಿಗಿತ್ತಿಯರ ಪಾದಗಳಿಗೆ ಮದವಣಿಗರು ನಮಸ್ಕರಿಸಬೇಕೆಂದು ಹೆಂಗಸರು ಹೇಳಲು ಅವರು ಅಂತೆಯೇ ತಲೆಯನ್ನು ಬಗ್ಗಿಸಿ ನಮಸ್ಕರಿಸಿದರು. ಅಂತೆಯೇ ಮದವಣಿಗಿತ್ತಿಯರೂ ಕೂಡ ಮದವಣಿಗರಿಗೆ ಬೇರೆ ಬೇರೆಯಾಗಿ ನಮಸ್ಕರಿಸಿದರು.

೩೨೯. ಈ ಮದವಣಿಗಿತ್ತಿಯರು ಮದವಣಿಗರಿಗೆ ಆ ಹೆಂಗಸರ ಉಲ್ಲಾಸದ ಮಾತಿನಂತೆ ನಮಸ್ಕರಿಸಲು ಅವರ ಹಣೆಯ ಕುಂಕುಮವು ಮದವಣಿಗರ ಪಾದಗಳಿಗೆ ಅಂಟಿಕೊಂಡಿತು. ಅನಂತರ ಆ ಹೆಂಗಸರು ಮದವಣಿಗರ ತೊಡೆಯಮೇಲೆ ಮದವಣಿಗಿತ್ತಿಯರನ್ನೇ ಕೂರಿಸಬೇಕೆನ್ನಲು ಅವರು ಅಂತೆಯೇ ಮಾಡಿದರು.

ಶ್ರೀರಾಮಸ್ಸಮವಾಪ್ಯ ಭೂಮಿತನಯಾಮಾದ್ಯಾಂ ಜನತ್ಸ್ವಾಮಿನೀಂ
ಸರ್ವಾತ್ಮಾವರಹೇತುಸುಂದರತನುಃ ಕಾರುಣ್ಯಪೂರ್ಣೇಕ್ಷಣಃ ।
ವಿದ್ಯುದ್ವರ್ಣವಿರಾಜಮಾನವಸನಸ್ತ್ರೈಲೋಕ್ಯಚೂಡಾಮಣಿಃ
ಶೋಭಾಮಾಪ ಜಗತ್ರಯೇಽಪ್ಯನುಪಮಾಂ ಮುಕ್ತಾವಿರಾಜದ್ಗಳಃ॥ ೩೩೦ ॥

ಚತುರ್ಥೇ ದಿವಸೇ ರಾತ್ರೌ ವಂಶಪಾತ್ರವಿರಾಜಿತೈಃ ।
ದೀಪೈರ್ನೀರಾಜಿತಾಸ್ಸರ್ವೇ ವಿರೇಜೂ ರಾಘವಾದಯಃ ॥ ೩೩೧ ॥

ಹೇಮಾದೀನಾಂ ಪಾರಿಬರ್ಹಾನ್ ದದೌ ಸ ಜನಕಸ್ತದಾ ।
ನಿಯುತಾನ್ ವಾರಣೇಂದ್ರಾಂಶ್ಚ ಶಿಬಿಕಾಶ್ಚಾಪಿ ತನ್ಮಿತಾಃ ॥ ೩೩೨ ॥

ತುರಗಾನ್ ದಶಲಕ್ಷಾಂಶ್ಚ ನಿಯುತಾನ್ ಸ್ಯಂದನಾನ್ ದದೌ ।
ನಾನಾಲಂಕಾರವಾಸಾಂಸಿ ಗೋದಾಸೀಸೇವಕಾದಿಕಾನ್ ॥ ೩೩೩ ॥

---

೩೩೦. ಭೂದೇವಿಯ ಮಗಳೂ ಆದಿಭೂತಳೂ ಜಗತ್ತಿಗೆ ಸ್ವಾಮಿನಿಯೂ ಆದ ಸೀತೆಯನ್ನು ಹೊಂದಿ ಎಲ್ಲಾ ಪ್ರಾಣಿಗಳಿಗಿಂತಲೂ ಬಹು ಸುಂದರವಾಗಿರುವ ಕರುಣಾಕಟಾಕ್ಷವುಳ್ಳ ಹೊಂಬಣ್ಣದ ಬಟ್ಟೆಯನ್ನುಟ್ಟಿರುವ ಮೂರು ಲೋಕಕ್ಕೂ ಚೂಡಾಮಣಿಯಾದ ಕತ್ತಿನಲ್ಲಿ ಹಾರವನ್ನು ಹಾಕಿಕೊಂಡಿರುವ ಆ ಸ್ವಾಮಿಯಾದ ಶ್ರೀರಾಮನು ಮೂರು ಲೋಕದಲ್ಲಿಯೂ ಹೋಲಿಕೆಯಿಲ್ಲದ ಕಾಂತಿಯನ್ನೇ ಹೊಂದಿದನು.

೩೩೧. ನಾಲ್ಕನೆಯದಿವಸ ರಾತ್ರಿಯಲ್ಲಿ ಬಿದಿರಿನ ಒಂದರಿಗಳಲ್ಲಿ ದೀಪಗಳನ್ನು ಇಟ್ಟುಕೊಂಡು ಅವರೆಲ್ಲರಿಗೂ ಆರತಿಯನ್ನು ಬೆಳಗಲು ಆ ದಂಪತಿಗಳೆಲ್ಲರೂ ಬಹು ರಮ್ಯರಾಗಿದ್ದರು.

೩೩೨-೩೩೪. ಅನಂತರ ಆ ಜನಕನು ರಾಮನೇ ಮುಂತಾದ ಅಳಿಯಂದಿರಿಗೆ ಬಳುವಳಿಯನ್ನು ಕೊಟ್ಟನು. ಅವುಗಳಲ್ಲಿ ಲಕ್ಷಮದ್ದಾನೆಗಳಿದ್ದುವು. ಅಷ್ಟೇ ಪಲ್ಲಕ್ಕಿಗಳಿದ್ದುವು. ಹತ್ತುಲಕ್ಷ ಕುದುರೆಗಳಿದ್ದುವು. ಒಂದುಲಕ್ಷ ರಥಗಳಿದ್ದುವು. ಅನೇಕವಾದ ಒಡವೆಗಳು ಬಹುವಾದ ಬಟ್ಟೆಗಳು ಗೋವುಗಳು ದಾಸ ದಾಸಿಯರು

ದದೌ ಸ ರಾಘವಾದಿಭ್ಯೋ ಯೇಷಾಂ ಸಂಖ್ಯಾ ನ ವಿದ್ಯತೇ ।
ಏವಂ ಸಮ್ಮಾನಿತಾಸ್ತೇನ ತೇ ಬಾಲಾ ಜನಕೇನ ಹಿ ॥ ೩೩೪ ॥

ಪೂರ್ವವದುತ್ಸವಾದ್ಯೈಶ್ಚ ಸ್ವಸ್ವಪತ್ನ್ಯಾ ಸಮನ್ವಿತಾಃ ।
ಗಜಾರೂಢಾ ನೃತ್ತಗೀತೈಃ ತಾಭಿಸ್ಸ್ವಂ ಮಂಟಪಂ ಯಯುಃ ॥ ೩೩೫ ॥

ತತೋ ರಾಜಾ ಮಾಸಮೇಕಂ ನಿನಾಯ ನೃಪವಾಕ್ಯತಃ ।
ತತಸ್ಸೈನ್ಯೇನ ಸ್ವಪುರೀಂ ಗಂತುಂ ಪುರಾದ್ಬಹಿರ್ಯಯೌ ॥ ೩೩೬ ॥

ಸೀತಾದ್ಯಾ ನಿರ್ಯಯುರ್ಮುಗ್ಧಾಃ ಸಾಶ್ರುನೇತ್ರಾಸ್ಸುವಿಹ್ವಲಾಃ ।
ಸುಮೇಧಾ ತಾಸ್ಸಮಾಲಿಂಗ್ಯ ಸಾಂತ್ವಯಿತ್ವಾ ವಿಸರ್ಜಯತ್ ॥ ೩೩೭ ॥

ಇವರೆಲ್ಲರೂ ಇದ್ದರು. ಈ ದಾಸದಾಸಿಯರು ಬಟ್ಟೆಗಳು ಅಲಂಕಾರಗಳು ಇವುಗಳನ್ನು ಎಣಿಸುವುದಕ್ಕೇ ಆಗುತ್ತಿರಲಿಲ್ಲ. ಈರೀತಿಯಾಗಿ ಜನಕನು ಆ ಬಾಲಕರಿಗೆ ಬಳುವಳಿಯನ್ನು ಕೊಟ್ಟು ಗೌರವಿಸಿದನು.

೩೩೫. ಮತ್ತೆಯೂ ಆ ಮದವಣಿಗರು ಅವರವರ ಹೆಂಡತಿಯರೊಡನೆ ಕೂಡಿಕೊಂಡು ಮೊದಲಿನಂತೆ ಉತ್ಸವದಿಂದ ಆನೆಯಮೇಲೆ ಕುಳಿತುಕೊಂಡು ನೃತ್ಯ, ವಾದ್ಯಗಳನ್ನು ಮಾಡಿಸಿಕೊಳ್ಳುತ್ತ ತಾವು ಇಳಿದಿದ್ದ ಬಿಡಾರಕ್ಕೆ ಹೋದರು.

೩೩೬. ಅನಂತರ ಜನಕನ ಪ್ರಾರ್ಥನೆಯಂತೆ ದಶರಥನು ಆ ಮಿಥಿಲಾ ಪಟ್ಟಣದಲ್ಲಿ ಒಂದು ತಿಂಗಳವರೆಗೆ ಇದ್ದನು. ಅನಂತರ ತನ್ನ ಪಟ್ಟಣಕ್ಕೆ ಹೋಗಲು ಪರಸ್ಥಾನ ಮಾಡಿ ಪಟ್ಟಣದಿಂದ ಹೊರಗೆ ಹೋದನು.

೩೩೭. ಆಗ ಸೀತೆಯೇ ಮುಂತಾದ ನಾಲ್ವರು ಸೊಸೆಯರನ್ನು ಕರೆದು ಕೊಂಡು ಆ ಸೊಸೆಯರೊಡನೆ ಹೊರಟನು. ಅವರು ತಾಯಿತಂದೆಗಳನ್ನು ಅಗಲ ಬೇಕಾಗಿದ್ದುದರಿಂದ ಕಣ್ಣೀರನ್ನು ಬಿಡುತ್ತಿದ್ದರು. ಬಹುವಾಗಿ ದುಃಖಿತರಾದರು. ಸುಮೇಧೆಯು ಅವರನ್ನು ಆಲಂಗಿಸಿಕೊಂಡು ಸಮಾಧಾನವನ್ನು ಹೇಳಿ ಕಳುಹಿಸು ತ್ತಿದ್ದಳು.

ಅಥ ರಾಜಾ ದಶರಥೋ ಜನಕಂ ವಿನಿವರ್ತಯತ್ ।
ತದಾ ದಶರಥಂ ಪ್ರಾಹ ಜನಕಸ್ಸಾಶ್ರುಲೋಚನಃ ॥ ೩೩೮ ॥

ಶ್ವಸನ್ಕವೋಷ್ಣಮ್ಲಾನಾಸ್ಯೋ ವಿರಹಾದ್ಗದ್ಗದಾಕ್ಷರಃ ।
ಏತಾವತ್ಕಾಲಪರ್ಯಂತಂ ಸೀತಾದ್ಯಾ ಲಾಲಿತಾ ಮಯಾ ॥ ೩೩೯ ॥

ಅಧುನಾ ತ್ವಮಿಮಾಸ್ತ್ವಗ್ರೇ ಲಾಲಯಸ್ವ ಕೃಪೇಕ್ಷಣೈಃ ।
ಇತ್ಯುಕ್ತ್ವಾ ನೃಪತಿಂ ನತ್ವಾ ಮಿಥಿಲಾಂ ಜನಕೋ ಯಯೌ ॥ ೩೪೦ ॥

ತತೋ ದಶರಥಶ್ಚಾಪಿ ಸ್ನುಷಾಸ್ತ್ರೀತನಯಾದಿಭಿಃ ।
ನೃಪೈಸ್ಸೈನ್ಯೈಃ ಸ ಸ್ವಪುರೀಂ ಯಯೌ ಮಾರ್ಗೇ ಶನೈಶ್ಶನೈಃ ॥ ೩೪೧ ॥

---

೩೩೮. ಎಲ್ಲರೂ ಪ್ರಯಾಣಮಾಡಿ ಹೊರಡಲು ದಾರಿ ಕಳುಹಿಸುವುದಕ್ಕೆ ಜನಕನು ಹೋಗಿರಲು ದಶರಥನು ಅವನನ್ನು ಹಿಂದಕ್ಕೆ ಹೋಗುವಂತೆ ಹೇಳಿದನು. ಆಗ ಜನಕನು ಕಣ್ಣೀರನ್ನು ಬಿಡುತ್ತ ದಶರಥನನ್ನು ಕುರಿತು ಇಂತೆಂದನು.

೩೩೯. ಇಷ್ಟುದಿವಸಗಳವರೆಗೂ ಸೀತೆಯೇ ಮುಂತಾದವರನ್ನು ನಾನು ಕಾಪಾಡಿದೆನು. ಇನ್ನು ಮೇಲೆ ಇವರೆಲ್ಲರನ್ನೂ ಕೃಪಾಕಟಾಕ್ಷದಿಂದ ನೋಡುತ್ತ ಲಾಲಿಸುತ್ತ ಕಾಪಾಡು. ಎಂಬುದಾಗಿ ನಿಟ್ಟುಸಿರುಬಿಡುತ್ತ ದುಃಖದಿಂದ ಬಿಕ್ಕಿ ಬಿಕ್ಕಿ ಅಳುತ್ತ ಹೇಳಿದನು.

೩೪೦. ಜನಕನು ಹೀಗೆಂದು ಆ ದಶರಥನಿಗೆ ಹೇಳಿ ಎಲ್ಲರಿಗೂ ಹೇಳುತ್ತ ಮಕ್ಕಳಿಗೂ ಹೇಳಿ ತನ್ನ ಪಟ್ಟಣಕ್ಕೆ ತನ್ನ ಜನಗಳೊಡನೆ ಹಿಂದಿರುಗಿದನು.

೩೪೧. ಅನಂತರ ದಶರಥನು ಸೊಸೆಯರೊಡನೆಯೂ ಹೆಂಡತಿಯರೊಡನೆಯೂ ಮಕ್ಕಳೊಡನೆಯೂ ತನ್ನ ಕಡೆಯ ರಾಜರೊಡನೆಯೂ ನಿಧಾನವಾಗಿ ಮಾರ್ಗದಲ್ಲಿ ಪ್ರಯಾಣಮಾಡುತ್ತ ತನ್ನ ರಾಜಧಾನಿಗೆ ಹೊರಟನು.

ಅಥ ಗಚ್ಛತಿ ಶ್ರೀರಾಮೋ ಮೈಥಿಲಾದ್ಯೋಜನತ್ರಯಂ ।
ನಿಮಿತ್ತಾನ್ಯತಿಘೋರಾಣಿ ದದರ್ಶ ನೃಪಸತ್ತಮಃ ॥ ೬೪೨ ॥

ನತ್ವಾ ವಸಿಷ್ಠಂ ಪಪ್ರಚ್ಛ ಕಿಮಿದಂ ಮುನಿಪುಂಗವ ।
ನಿಮಿತ್ತಾನೀಹ ದೃಶ್ಯಂತೇ ವಿಷಮಾನಿ ಸಮಂತತಃ ॥ ೬೪೩ ॥

ವಸಿಷ್ಠಸ್ತಮುಘೋ ಪ್ರಾಹ ಭಯಮಾಗಾಮಿ ಸೂಚ್ಯತೇ ।
ಪುನರಪ್ಯಭಯಂ ತೇದ್ಯ ಶ್ರೀಘ್ರಮೇವ ಭವಿಷ್ಯತಿ ॥ ೬೪೪ ॥

ಮೃಗಾಃ ಪ್ರದಕ್ಷಿಣಂ ಯಾಂತಿ ತ್ವಾಂ ಪಶ್ಯ ಶುಭಸೂಚಕಾಃ ।
ಏವಂ ವೈ ವದತಸ್ತಸ್ಯ ವವೌ ಘೋರತರೋನಿಲಃ ॥ ೬೪೫ ॥

---

೬೪೨. ಅನಂತರ ಶ್ರೀರಾಮನು ಮಿಥಿಲೆಯಿಂದ ಮೂರು ಯೋಜನಗಳಷ್ಟು ದೂರವನ್ನು ಹೋದನು. ಅಲ್ಲಿ ಘೋರವಾದ ದುಶ್ಶಕುನಗಳು ಉಂಟಾದುವು. ಅವನ್ನು ದಶರಥನು ನೋಡಿದನು.

೬೪೩. ಆಗ ದಶರಥನು ವಸಿಷ್ಠನಿಗೆ ನಮಸ್ಕರಿಸಿ ಎಲೈ ಮುನಿಪುಂಗವನೆ! ಇದೇನು? ಎಲ್ಲಾ ಕಡೆಯಲ್ಲಿಯೂ ದುರ್ನಿಮಿತ್ತಗಳು ಕಂಡು ಬರುತ್ತಿವೆ. ಎಂದು ಕೇಳಿದನು.

೬೪೪. ಆಗ ವಸಿಷ್ಠನು ಇವು ಮುಂದೆ ಬರುವ ಭಯವನ್ನು ಸೂಚಿಸುತ್ತವೆ. ಮತ್ತೆ ನಿನಗೆ ಆ ಭಯವು ಬೇಗದಲ್ಲಿಯೇ ಹೋಗಿ ಸುಖವು ಉಂಟಾಗುತ್ತದೆ.

೬೪೫. ಈ ಮೃಗಗಳು ಪ್ರದಕ್ಷಿಣಾಕಾರವಾಗಿ ಬರುತ್ತ ನಿನ್ನನ್ನು ನೋಡುತ್ತವೆ. ಇದು ಶುಭಸೂಚಕವು. ಎಂದು ಹೇಳುತ್ತಿರಲು ಆಗ ಒಂದು ಘೋರವಾದ ಸುಂಟರಗಾಳಿಯು ಬೀಸಿತು.

ಮುಷ್ಣನ್ ಚಕ್ಷೂಂಷಿ ಸರ್ವೇಷಾಂ ಪಾಂಸುವೃಷ್ಟಿಭಿರರ್ದಯತ್ ।
ತತೋ ದದರ್ಶ ಪರಮಂ ಜಾಮದಗ್ನ್ಯಂ ಮಹಾಪ್ರಭಂ　　|| ೩೪೬ ||

ನೀಲಮೇಘನಿಭಂ ಪ್ರಾಂಶುಂ ಜಟಾಮಂಡಲಮಂಡಿತಂ ।
ಧನುಃಪರಶುಹಸ್ತಂ ಚ ಸಾಕ್ಷಾತ್ಕಾಲಮಿವ ಸ್ಥಿತಂ　　|| ೩೪೭ ||

ಕಾರ್ತವೀರ್ಯಾಂತಕಂ ರಾಮಂ ದೃಪ್ತಕ್ಷತ್ರಿಯಮರ್ದನಂ ।
ಪ್ರಾಪ್ತಂ ದಶರಥಸ್ಯಾಗ್ರೇ ರಕ್ತಾಸ್ಯಂ ರಕ್ತಲೋಚನಂ　　|| ೩೪೮ ||

ತಂ ದೃಷ್ಟ್ವಾ ಭಯಸಂತ್ರಸ್ತೋ ರಾಜಾ ದಶರಥಸ್ತದಾ ।
ಅರ್ಘ್ಯಾದಿಪೂಜಾಂ ವಿಸ್ಮೃತ್ಯ ತ್ರಾಹಿ ತ್ರಾಹೀತಿ ಚಾಬ್ರವೀತ್　|| ೩೪೯ ||

---

೩೪೬. ಆ ಗಾಳಿಯು ಎಲ್ಲರ ಕಣ್ಣುಗಳನ್ನೂ ಮುಚ್ಚಿಸುತ್ತ ಮಣ್ಣಿನಿಂದ ಕೂಡಿದ ಧೂಳಿನ ಮಳೆಯನ್ನೇ ಸುರಿಸಿತು. ಅನಂತರ ಬಹುವಾದ ಶಕ್ತಿಯುಳ್ಳ ಜಾಮದಗ್ನ್ಯರಾಮನು ಬಂದುದನ್ನು ಎಲ್ಲರೂ ನೋಡಿದರು.

೩೪೭. ಅವನು ನೀಲಮೇಘದಂತಿದ್ದನು. ಎತ್ತರವಾಗಿದ್ದನು. ತಲೆಯಲ್ಲಿ ಜಟೆಯನ್ನು ಬೆಳೆಸಿಕೊಂಡಿದ್ದನು. ಕೈಯ್ಯಲ್ಲಿ ಬಿಲ್ಲೂ ಕೊಡಲಿಯೂ ಇದ್ದುವು. ನೋಡುವುದಕ್ಕೆ ಪ್ರತ್ಯಕ್ಷನಾದ ಯಮನಂತಿದ್ದನು.

೩೪೮. ಈ ಜಮದಗ್ನಿರಾಮನು ಶೂರನಾದ ಕಾರ್ತವೀರ್ಯನನ್ನು ಕೊಂದಿದ್ದನು. ಕೊಬ್ಬಿದ್ದ ಕ್ಷತ್ರಿಯರೆಲ್ಲರನ್ನೂ ನಾಶಮಾಡಿದ್ದನು. ಕಣ್ಣೂ ಮುಖವೂ ಕೋಪದಿಂದ ಕೆಂಪಗಾಗಿದ್ದುವು. ನೇರವಾಗಿ ಬಂದು ದಶರಥನ ಎದುರಿನಲ್ಲಿ ನಿಂತುಕೊಂಡನು.

೩೪೯. ಅವನನ್ನು ನೋಡಿದೊಡನೆಯೇ ದಶರಥನಿಗೆ ಹೆದರಿಕೆಯುಂಟಾಗಿ ನಡುಗಿದನು. ಅತಿಥಿಪೂಜೆಗೆ ಯೋಗ್ಯವಾದ ಅರ್ಘ್ಯಾದಿಗಳನ್ನು ಮರೆತುಬಿಟ್ಟು ತ್ರಾಹಿ ತ್ರಾಹಿ (ಕಾಪಾಡು ಕಾಪಾಡು) ಎಂದು ಬೇಡಿಕೊಂಡನು.

ದಂಡವತ್ಪ್ರಣಿಪತ್ಯಾಹ ಪುತ್ರಪ್ರಾಣಾನ್ಪ್ರಯಚ್ಛ ಮೇ ।
ಇತಿ ಬ್ರುವಂತಂ ರಾಜಾನಮನಾದೃತ್ಯ ರಘೂತ್ತಮಂ ॥ ೩೫೦ ॥

ಉವಾಚ ನಿಷ್ಠುರಂ ವಾಕ್ಯಂ ಕ್ರೋಧಾತ್ಪ್ರಚಲಿತೇಂದ್ರಿಯಃ ।
ತ್ವಂ ರಾಮ ಇತಿ ಮನ್ನಾಮ್ನಾ ಚರಸಿ ಕ್ಷತ್ರಿಯಾಧಮ ॥ ೩೫೧ ॥

ದ್ವಂದ್ವಯುದ್ಧಂ ಪ್ರಯಚ್ಛಾಶು ಯದಿ ತ್ವಂ ಕ್ಷತ್ರಿಯೋಽಸಿ ಮೇ ।
ಪುರಾಣಜರ್ಜರಂ ಚಾಪಂ ಭಙ್ಕ್ತ್ವಾ ತ್ವಂ ಕತ್ಥಸೇ ಮುಧಾ ॥ ೩೫೨ ॥

ಇದಂ ತು ವೈಷ್ಣವಂ ಚಾಪಮಾರೋಪಯಸಿ ಚೇದ್ಗುಣಂ ।
ತರ್ಹಿ ಯುದ್ಧಂ ತ್ವಯಾ ಸಾರ್ಧಂ ಕರೋಮಿ ರಘುವಂಶಜ ॥ ೩೫೩ ॥

---

೩೫೦. ಅಲ್ಲದೆ ದೀರ್ಘದಂಡ ನಮಸ್ಕಾರ ಮಾಡುತ್ತ ನನ್ನ ಮಕ್ಕಳ ಪ್ರಾಣಗಳನ್ನು ಉಳಿಸಿಕೊಡೆಂದು ಕೇಳಿಕೊಂಡನು. ದಶರಥನು ಹೀಗೆ ಕೇಳಿಕೊಳ್ಳುತ್ತಿದ್ದರೂ ಜಮದಗ್ನಿ ರಾಮನು ಅವನನ್ನು ತಿರಸ್ಕರಿಸಿ ಅವನ ಕಡೆಗೆ ಗಮನವನ್ನೇ ಕೊಡದೆ ಶ್ರೀರಾಮನ ಬಳಿಗೆ ಹೋದನು.

೩೫೧. ಆ ಶ್ರೀರಾಮನಮೇಲಿನ ಕೋಪದಿಂದ ಇಂದ್ರಿಯಗಳು ಸ್ವಾಧೀನವಿಲ್ಲದಂತಾಗಿರಲು ಅವನನ್ನು ಕುರಿತು ಇಂತೆಂದನು. ಎಲೈ ಕ್ಷತ್ರಿಯಾಧಮನೆ! ನೀನು ರಾಮನೆಂಬುದಾಗಿ ನನ್ನ ಹೆಸರನ್ನು ಹೇಳಿಕೊಂಡು ಪ್ರಪಂಚದಲ್ಲಿ ಸಂಚರಿಸುತ್ತಿದ್ದೀಯೆ.

೩೫೨. ನೀನು ಕ್ಷತ್ರಿಯನಾಗಿದ್ದರೆ ನನಗೆ ದ್ವಂದ್ವಯುದ್ಧವನ್ನು ಕೊಡು. ಆ ಹಳೆಯದಾದ ಲೊಡ್ಡಾಗಿದ್ದ ಶಿವಚಾಪವನ್ನು ಮುರಿದೆನೆಂದು ವ್ಯರ್ಥವಾಗಿ ಜಂಬ ಬಡಿದುಕೊಳ್ಳಬೇಡ.

೩೫೩. ಇಗೋ! ಈ ನನ್ನ ಕೈಯ್ಯಲ್ಲಿರುವುದು ವೈಷ್ಣವ ಚಾಪವು. ಈ ಚಾಪವನ್ನು ನೀನು ಎತ್ತಿ ಬಗ್ಗಿಸಿ ಕಟ್ಟಿದರೆ ಅನಂತರ ನಿನ್ನೊಡನೆ ನಾನು ದ್ವಂದ್ವಯುದ್ಧವನ್ನು ಮಾಡುತ್ತೇನೆ.

ನ ಚೇತ್ ಸರ್ವಾನ್ ಹನಿಷ್ಯಾಮಿ ಕ್ಷತ್ರಿಯಾಂತಕರೋಽಸ್ಮ್ಯಹಂ ।
ಇತಿ ತದ್ವಚನಂ ಶ್ರುತ್ವಾ ರಾಘವೋ ವಾಕ್ಯಮಬ್ರವೀತ್ ॥ ೩೫೪ ॥

ವಯಮೇಕಗುಣಾಃ ಸ್ವಾಮಿನ್ ಯೂಯಂ ಚೈವ ಗುಣಾಧಿಕಾಃ ।
ಗೋವಿಪ್ರದೇವನಾರೀಷು ರಾಘವಾ ನಾಸ್ತ್ರಧಾರಿಣಃ ॥ ೩೫೫ ॥

ಮಯ್ಯೈತೈಶ್ಚ ಜೀವಿತಾನಿ ತವ ಪಾದಾರ್ಪಿತಾನಿ ಹಿ ।
ಯಥೇಚ್ಛಂ ಘಾತಯಾಸ್ಮಾಕಂ ವಿಪ್ರೈರ್ಯುದ್ಧಂ ಕರೋಮಿ ನ ॥ ೩೫೬ ॥

ಇತಿ ಬ್ರುವತಿ ರಾಮೇ ವೈ ಚಚಾಲ ವಸುಧಾ ಭೃಶಂ ।
ಕ್ರುದ್ಧಂ ದೃಷ್ಟ್ವಾ ಜಾಮದಗ್ನ್ಯಂ ಕ್ಷತ್ರಿಯಾಂತಮುಪಸ್ಥಿತಂ ॥ ೩೫೭ ॥

---

೩೫೪. ಹಾಗೆ ನಿನ್ನ ಕೈಯ್ಯಲ್ಲಿ ಧನುಸ್ಸನ್ನು ಬಗ್ಗಿಸಲು ಆಗದಿದ್ದರೆ ನಿಮ್ಮೆಲ್ಲರನ್ನೂ ಕೊಂದುಹಾಕುತ್ತೇನೆ. ನಾನು ಕ್ಷತ್ರಿಯರಿಗೆಲ್ಲರಿಗೂ ನಾಶಕನು. ಎಂದನು. ಪರಶುರಾಮನು ಹೀಗೆ ಹೇಳಿದುದನ್ನು ಕೇಳಿ ಶ್ರೀರಾಮನು ಇಂತೆಂದನು.

೩೫೫. ಸ್ವಾಮಿ! ನಾವು ಒಂದು ಗುಣವುಳ್ಳವರು. ನೀವು ಹೆಚ್ಚು ಗುಣವುಳ್ಳವರು. ಗೋವು, ವಿಪ್ರರು, ಹೆಂಗಸರು ಇವರ ವಿಷಯದಲ್ಲಿ ರಘುಕುಲದವರು ಹಿಂಸೆ ಮಾಡುವುದಕ್ಕೆ ಅಸ್ತ್ರವನ್ನು ಹಿಡಿಯುವುದಿಲ್ಲ. (ಎಲೈ ಪರಶುರಾಮನೆ! ನಾವು ಗುಣವೊಂದನ್ನೇ ಉಳ್ಳವರು. ನೀವು ಗುಣದಿಂದ ಅಧಿಕರು. ಎಂದರೆ ಗುಣ ಅವಗುಣವೆಂದು ಎರಡು ಪದಾರ್ಥಗಳು ಗುಣಗಳಲ್ಲಿ ಇದೆ. ಅಧಿಕವಾದ ಅವಗುಣವೂ ಇದೆ. ಎಂದೂ ಅರ್ಥವಾಗುತ್ತದೆ.)

೩೫೬. ನಾನು ಮತ್ತು ಇವರುಗಳೂ ಕೂಡ ನಮ್ಮ ಜೀವಿತಗಳನ್ನು ನಿನ್ನ ಪಾದಕ್ಕೆ ಅರ್ಪಿಸಿದ್ದೇವೆ. ನಿನಗೆ ಇಷ್ಟಬಂದಂತೆ ನಮ್ಮೆಲ್ಲರನ್ನೂ ಕೊಲ್ಲಬಹುದು. ಇಲ್ಲ ಕಾಪಾಡಲೂಬಹುದು. ನೀನು ವಿಪ್ರನಾದುದರಿಂದ ನಿನ್ನೊಡನೆ ನಾನು ಯುದ್ಧಮಾಡುವುದಿಲ್ಲ.

೩೫೭. ಶ್ರೀರಾಮನು ಹೀಗೆನ್ನುತ್ತಿರಲು ಇತ್ತ ಪರಶುರಾಮನು ಕೋಪಗೊಂಡುದನ್ನೂ ಅವನು ಕ್ಷತ್ರಿಯರಿಗೆ ಅಂತಕನಾಗಿರುವುದನ್ನೂ ತಿಳಿದು ಭೂಮಿಯು ಅನೇಕಬಾರಿ ಹೆಚ್ಚಾಗಿ ನಡುಗಿತು.

ಅಂಧಕಾರೋ ಬಭೂವಾಥ ಚುಕ್ಷುಭುಸ್ಸಪ್ತಸಾಗರಾಃ |
ರಾಮೋ ದಾಶರಥಿರ್ವೀರೋ ವೀಕ್ಷ್ಯತಂ ಭಾರ್ಗವಂ ರುಷಾ ॥ ೩೫೮ ॥

ಧನುರಾಚ್ಛಿದ್ಯ ತದ್ಧಸ್ತಾದಾರೋಪ್ಯ ಗುಣಮುಂಜಸಾ |
ತೂಣೀರಾತ್ ಬಾಣಮಾದಾಯ ಸಂಧಾಯಾಕೃಷ್ಯ ವೀರ್ಯವಾನ್ ॥ ೩೫೯ ॥

ಉವಾಚ ಭಾರ್ಗವಂ ರಾಮಶ್ಶೃಣು ಬ್ರಹ್ಮನ್ ವಚೋ ಮಮ |
ಲಕ್ಷ್ಯಂ ದರ್ಶಯ ಬಾಣಸ್ಯ ಹ್ಯಮೋಘೋ ರಾಮಸಾಯಕಃ ॥ ೩೬೦ ॥

ಲೋಕಾನ್ ಪಾದಯುಗಂ ವಾಪಿ ವದ ಶೀಘ್ರಂ ಮಮಾಜ್ಞಯಾ ।
ಏವಂ ವದತಿ ಶ್ರೀರಾಮೇ ಭಾರ್ಗವೋ ವಿಕೃತಾನನಃ ॥ ೩೬೧ ॥

---

೩೫೮. ಎಲ್ಲಾ ಕಡೆಯಲ್ಲಿಯೂ ಕತ್ತಲೆಯು ಕವಿದುಕೊಂಡಿತು. ಏಳು ಸಮುದ್ರಗಳೂ ಅಲ್ಲೋಲ ಕಲ್ಲೋಲವಾದುವು. ಆಗ ರಾಮನಿಗೂ ಕೋಪ ಬಂದಿತು ಆ ಕೋಪದ ಕಣ್ಣಿನಿಂದ ಅವನು ಭಾರ್ಗವರಾಮನನ್ನು ನೋಡಿದನು.

೩೫೯. ಒಡನೆಯೇ ಆ ಶ್ರೀರಾಮನು ಭಾರ್ಗವರಾಮನ ಕೈಯ್ಯಲ್ಲಿದ್ದ ಧನುಸ್ಸನ್ನು ಕಿತ್ತುಕೊಂಡನು. ಆ ಧನುಸ್ಸನ್ನು ಬಗ್ಗಿಸಿ ನಾರಿಯನ್ನು ಎತ್ತಿ ಬಿಗಿದನು. ತನ್ನ ಬತ್ತಳಿಕೆಯಿಂದ ಬಾಣವನ್ನು ತೆಗೆದುಕೊಂಡು ಆ ಧನುಸ್ಸಿನಲ್ಲಿ ಸೇರಿಸಿದನು.

೩೬೦. ಆಗ ಶ್ರೀರಾಮನು ಭಾರ್ಗವನ್ನು ಕುರಿತು ಇಂತೆಂದನು. ಎಲೈ ಭಾರ್ಗವರಾಮನೆ ! ನನ್ನ ಮಾತನ್ನು ಕೇಳು. ಶ್ರೀರಾಮ ಸಾಯಕವು ವ್ಯರ್ಥವಾಗತಕ್ಕದಲ್ಲ. ಇದಕ್ಕೆ ಲಕ್ಷ್ಯವನ್ನು ತೋರಿಸು.

೩೬೧. ನಿನ್ನ ಉತ್ತಮಲೋಕಗಳನ್ನು ಕೊಡುತ್ತೀಯಾ ! ಇಲ್ಲವೆ ನಿನ್ನ ಎರಡು ಕಾಲುಗಳನ್ನು ಕೊಡುವೆಯಾ ! ಯಾವುದನ್ನು ಕೊಡುತ್ತೀಯೆ ? ಬೇಗಹೇಳು ? ನಾನು ಆಜ್ಞೆಮಾಡುತ್ತಿದ್ದೇನೆ. ಶ್ರೀರಾಮನು ಇಂತೆನ್ನಲು ಭಾರ್ಗವರಾಮನ ಮುಖವು ವಿಕಾರವಾಯಿತು.

ಸಂಸ್ಮರ್ರ್ ಪೂರ್ವವೃತ್ತಾಂತಂ ಇದಂ ವಚನಮಬ್ರವೀತ್ ।
ರಾಮ ರಾಮ ಮಹಾಬಾಹೋ ಜಾನೇ ತ್ವಾಂ ಪರಮೇಶ್ವರಂ ॥ ೩೬೨ ॥

ಪುರಾಣಪುರುಷಂ ವಿಷ್ಣುಂ ಜಗತ್ಸರ್ಗಲಯೋದ್ಭವಂ ।
ಬಾಲ್ಯೇಽಹಂ ತಪಸಾ ವಿಷ್ಣುಮಾರಾಧಯಿತುಮಂಜಸಾ ॥ ೩೬೩ ॥

ಗತ್ವಾ ಹಿ ತೀರ್ಥೇ ಗೋಮತ್ಯಾಂ ತಪಸಾ ತೋಷ್ಯ ಶಾರ್ಙ್ಗಿಣಂ ।
ಅಹರ್ನಿಶಂ ಮಹಾತ್ಮಾನಂ ನಾರಾಯಣಮನನ್ಯಧೀಃ ॥ ೩೬೪ ॥

ಯಸ್ಯಾಂಶೇನ ಮಯಾ ಭೂಮ್ಯಾಮವತಾರೋ ಧೃತೋಽಸ್ತಿ ಹಿ ।
ಭೂಭಾರಹರಣಾರ್ಥಾಯ ಕಾರ್ತ್ತವೀರ್ಯವಧೇಪ್ಸಯಾ ॥ ೩೬೫ ॥

---

೩೬೨. ಒಡನೆಯೇ ಬಾಲ್ಯದ ವಿಷಯಗಳು ಜ್ಞಾಪಕಕ್ಕೆ ಬಂದುವು. ಆಗ ಹಿಂದಿನ ವಿಷಯಗಳನ್ನು ಸ್ಮರಿಸಿಕೊಳ್ಳುತ್ತ ಇಂತೆಂದನು. ರಾಮ! ರಾಮ! ಮಹಾಬಾಹು! ನೀನು ಪರಮೇಶ್ವರನೆಂಬುದಾಗಿ ನಾನು ಬಲ್ಲೆನು

೩೬೩. ನೀನು ಪುರಾಣ ಪುರುಷನು. ವಿಷ್ಣುವು. ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನು. ಬಾಲ್ಯದಲ್ಲಿ ನನಗೆ ವಿಷ್ಣುವನ್ನು ತಪಸ್ಸಿನಿಂದ ಆರಾಧಿಸಬೇಕೆಂಬ ಇಚ್ಛೆಯು ಬಂದಿತು.

೩೬೪. ಒಡನೆಯೇ ಗೋಮತೀತೀರ್ಥಕ್ಕೆ ಹೋದೆನು. ಅಲ್ಲಿ ತಪಸ್ಸುಮಾಡಿ ಆ ಶಾರ್ಙ್ಗಿಯಾದ ವಿಷ್ಣುವನ್ನು ತಪಸ್ಸಿನಿಂದ ಸಂತೋಷಪಡಿಸಿದೆನು. ಆಗ ಇತರ ಯೋಚನೆಗಳನ್ನು ಮಾಡದೆ ಒಂದೇ ಮನಸ್ಸಿನಿಂದ ತಪಸ್ಸನ್ನು ಮಾಡುತ್ತಿದ್ದೆನು.

೩೬೫. ಭೂಭಾರವನ್ನು ನಾಶಮಾಡುವುದಕ್ಕೂ ಕಾರ್ತವೀರ್ಯನನ್ನು ಕೊಲ್ಲುವುದಕ್ಕೂ ಯಾವ ಸ್ವಾಮಿಯ ಅಂಶದಿಂದ ನಾನು ಅವತರಿಸಿರುವೆನೋ ಅವನು ನನಗೆ ಪ್ರಸನ್ನನಾದನು.

ತತಃ ಪ್ರಸನ್ನೋ ದೇವೇಶಶ್ಶಂಖಚಕ್ರಗದಾಧರಃ ।
ಉವಾಚ ಮಾಂ ರಘುಶ್ರೇಷ್ಠಃ ಪ್ರಸನ್ನಮುಖಪಂಕಜಃ ॥ ೩೬೬ ॥

॥ ಶ್ರೀ ಭಗವಾನುವಾಚ ॥

ಉತ್ತಿಷ್ಠ ತಪಸೋ ಬ್ರಹ್ಮನ್ ಫಲಿತಂ ತೇ ತಪೋ ಮಹತ್ ।
ಮಚ್ಚಿದಂಶೇನ ಯುಕ್ತಸ್ತ್ವಂ ಜಹಿ ಹೈಹಯಪುಂಗವಂ ॥ ೩೬೭ ॥

ಕಾರ್ತವೀರ್ಯಂ ಪಿತೃಹಣಂ ಯದರ್ಥಂ ತಪಸಃ ಶ್ರಮಃ ।
ತತಸ್ತ್ರಿಸ್ಸಪ್ತಕೃತ್ವಸ್ತ್ವಂ ಹತ್ವಾ ಕ್ಷತ್ರಿಯಮಂಡಲಂ ॥ ೩೬೮ ॥

ಕೃತ್ಸ್ನಾಂ ಭೂಮಿಂ ಕಶ್ಯಪಾಯ ದತ್ವಾ ಶಾಂತಿಮುಪಾವಹ ।
ತ್ರೇತಾಯುಗೇ ದಾಶರಥಿರ್ಭೂತ್ವಾ ರಾಮೋಹಮವ್ಯಯಃ ॥ ೩೬೯ ॥

---

೩೬೬. ಎಲೈ ರಘುಶ್ರೇಷ್ಠನೆ ! ಶಂಖ, ಚಕ್ರ, ಗದೆಗಳನ್ನು ಧರಿಸಿರುವ ಆ ಸ್ವಾಮಿಯು ನನಗೆ ಪ್ರಸನ್ನನಾಗಿ ಸಂತೋಷದಿಂದ ನಗುತ್ತ ಇಂತೆಂದನು.

೩೬೭. ಶ್ರೀ ಭಗವಂತನು ಹೇಳಿದನು–ಎಲೈ ಬ್ರಾಹ್ಮಣನೆ ! ಈ ಮಹಾತಪಸ್ಸಿನಿಂದ ಸಂತೋಷಗೊಂಡು ಬಂದಿದ್ದೇನೆ. ಮೇಲಕ್ಕೆ ಏಳು. ನಿನ್ನ ತಪಸ್ಸು ಫಲಿಸಿತು. ನನ್ನ ಚಿಂದಂಶದಿಂದ ನೀನು ಕೂಡಿಕೊಂಡಿದ್ದು ಆ ಹೈಹಯನ ಮಗನಾದ ಕಾರ್ತವೀರ್ಯನನ್ನು ಸಂಹರಿಸು.

೩೬೮. ಆ ಕಾರ್ತವಿರ್ಯನು ನಿನ್ನ ತಂದೆಯನ್ನು ಕೊಂದಿರುವನು. ಅವನನ್ನು ಕೊಲ್ಲಬೇಕೆಂದೇ ನೀನು ಈ ತಪಸ್ಸನ್ನು ಶ್ರಮಪಟ್ಟು ಮಾಡಿದ್ದೀಯೆ. ಆ ಕಾರ್ತವಿರ್ಯನನ್ನು ಕೊಂದು ಅನಂತರ ಇಪ್ಪತ್ತೊಂದುಸಾರಿ ಲೋಕವನ್ನು ಸಂಚರಿಸುತ್ತ ಕ್ಷತ್ರಿಯರನ್ನು ಸಂಹರಿಸು.

೩೬೯. ಆಗ ಭೂಮಿಯೆಲ್ಲವೂ ನಿನ್ನದಾಗುವುದು. ಅನಂತರ ಆ ಭೂಮಿಯನ್ನೆಲ್ಲಾ ಕಶ್ಯಪಋಷಿಗಳಿಗೆ ಕೊಟ್ಟು ಶಾಂತಿಯನ್ನು ಹೊಂದು. ತ್ರೇತಾಯುಗದಲ್ಲಿ ನಾನು ದಶರಥನ ಹೊಟ್ಟೆಯಲ್ಲಿ ಹುಟ್ಟಿ ರಾಮನೆಂಬ ಹೆಸರಿನಿಂದ ಪ್ರಸಿದ್ಧನಾಗುತ್ತೇನೆ.

ಉತ್ಪತ್ಸ್ಯೇ ಪರಯಾ ಭಕ್ತ್ಯಾ ತದಾ ದ್ರಕ್ಷ್ಯಸಿ ಮಾಂ ಪುನಃ ।
ಮತ್ತೇಜಃ ಪುನರಾದಾಸ್ಯೇ ತ್ವಯಿ ದತ್ತಂ ಮಯಾ ಪುರಾ ॥ ೩೭೦ ॥

ತದಾ ತಪಶ್ಚರ ಲೋಕೇ ತಿಷ್ಠ ತ್ವಂ ಬ್ರಹ್ಮಣೋ ದಿನಂ ।
ಇತ್ಯುಕ್ತ್ವಾಂತರ್ದಧೇ ದೇವಸ್ತಥಾ ಸರ್ವಂ ಮಯಾ ಕೃತಂ ॥ ೩೭೧ ॥

ಸ ಏವ ವಿಷ್ಣುಸ್ತ್ವಂ ರಾಮ ಜಾತೋಽಸಿ ಬ್ರಹ್ಮಣಾರ್ಥಿತಃ ।
ಮಯಿ ಸ್ಥಿತಂ ತು ತ್ವತ್ತೇಜಸ್ತ್ವಯೈವ ಪುನರಾಹೃತಂ ॥ ೩೭೨ ॥

ಅದ್ಯ ಮೇ ಸಫಲಂ ಜನ್ಮ ಪ್ರತೀತೋಽಸಿ ಮಮ ಪ್ರಭೋ ।
ನಮೋಽಸ್ತು ಜಗತಾಂ ನಾಥ ನಮಸ್ತೇ ಭಕ್ತಭಾವನ ॥ ೩೭೩ ॥

---

೩೭೦. ಆಗ ನೀನು ನನ್ನನ್ನು ಭಕ್ತಿಯಿಂದ ನೋಡುತ್ತೀಯೆ. ಆಗ ನಾನು ನಿನಗೆ ಮತ್ತೆ ದರ್ಶನವನ್ನು ಕೊಡುತ್ತೇನೆ. ನಾನು ಈಗ ಕೊಟ್ಟಿರುವ ತೇಜಸ್ಸನ್ನು ಮತ್ತೆ ಆಗ ತೆಗೆದುಕೊಳ್ಳುತ್ತೇನೆ.

೩೭೧. ಅನಂತರ ನೀನು ತಪಸ್ಸನ್ನು ಮಾಡುತ್ತ ಬ್ರಹ್ಮನಕಲ್ಪದವರೆಗೂ ಇದ್ದುಕೊಂಡಿರು. ಎಂದು ಆ ಸ್ವಾಮಿಯು ಹೇಳಿ ಅಂತರ್ಧಾನನಾದನು. ಅದರಂತೆಯೇ ನಾನು ಎಲ್ಲವನ್ನೂ ಮಾಡಿದೆನು.

೩೭೨. ಎಲೈ ರಾಮನೆ! ನೀನು ವಿಷ್ಣುವೇ ಆಗಿದ್ದೀಯೆ! ಬ್ರಹ್ಮನ ಪ್ರಾರ್ಥನೆಯಂತೆ ಅವತರಿಸಿದ್ದೀಯೆ! ನನ್ನಲ್ಲಿಟ್ಟಿದ್ದ ತೇಜಸ್ಸನ್ನು ಮತ್ತೆ ನೀನು ತೆಗೆದುಕೊಂಡೆ.

೩೭೩. ಈಗ ನನ್ನ ಜನ್ಮವು ಸಾರ್ಥಕವಾಯಿತು. ನನಗೆ ನೀನು ಪ್ರತ್ಯಕ್ಷನಾಗಿದ್ದೀಯೆ. ಎಲೈ ಜಗನ್ನಾಥನೆ! ನಿನಗೆ ನಮಸ್ಕಾರವು. ಭಕ್ತಿಯಿಂದ ಸಿಕ್ಕುವವನೆ! ನಿನಗೆ ನಮಸ್ಕಾರವು.

ನಮಃ ಕಾರುಣಿಕಾನಂತ ರಾಮಚಂದ್ರ ನಮೋಸ್ತು ತೇ ।
ದೇವ ಯದ್ಯತ್ಕೃತಂ ಪುಣ್ಯಂ ಮಯಾ ಲೋಕಜಿಗೀಷಯಾ ॥ ३८४ ॥

ತತ್ಸರ್ವಂ ತವ ಬಾಣಾಯ ಭೂಯಾದ್ರಾಮ ನಮೋಸ್ತು ತೇ ।
ತತೋ ಮುಕ್ತ್ವಾ ಶರಂ ರಾಮಸ್ತತ್ಕರ್ಮ ಭಸ್ಮಸಾತ್ಕರೋತ್ ॥ ३८५ ॥

ತತಃ ಪ್ರಸನ್ನೋ ಭಗವಾನ್ ಶ್ರೀರಾಮಃ ಕರುಣಾಮಯಃ ।
ಜಾಮದಗ್ನ್ಯಂ ತದಾ ಪ್ರಾಹ ವರಂ ವರಯ ಚೇತಿ ಸಃ ॥ ३८६ ॥

ತತಃ ಪ್ರೀತೇನ ಮನಸಾ ಭಾರ್ಗವೋ ರಾಮಮಬ್ರವೀತ್ ।
ಯದಿ ಮೇಽನುಗ್ರಹೋ ರಾಮ ತವಾಸ್ತಿ ಮಧುಸೂದನ ॥ ३८८ ॥

---

३८४. ಕಾರುಣಿಕನೆ ! ನಿನಗೆ ನಮಸ್ಕಾರವು. ಅನಂತನೆ ! ನಿನಗೆ ನಮಸ್ಕಾರವು. ರಾಮಚಂದ್ರನೆ ! ನಿನಗೆ ನಮಸ್ಕಾರವು. ಎಲೈ ದೇವನೆ ! ನಾನು ಪರಲೋಕದಲ್ಲಿ ಸುಖವಾಗಿರಲು ಇದುವರಿಗೂ ಅನೇಕವಾದ ಪುಣ್ಯಗಳನ್ನು ಮಾಡಿದ್ದೇನೆ.

३८५. ಆ ಪುಣ್ಯವೆಲ್ಲವೂ ಕೂಡ ನಿನ್ನ ಬಾಣದ ಈ ಹೊಡೆತಕ್ಕೆ ಗುರಿಯಾಗಲಿ. ಎಲೈ ರಾಮನೆ ! ನಿನಗೆ ನಮಸ್ಕಾರವು. ಆ ಪರಶುರಾಮನು ಹೀಗೆನ್ನಲು ಒಡನೆಯೇ ಶ್ರೀರಾಮನು ಆ ಬಾಣವನ್ನು ಬಿಟ್ಟು ಆ ಪುಣ್ಯ ವೆಲ್ಲವನ್ನೂ ಭಸ್ಮವನ್ನಾಗಿ ಮಾಡಿಬಿಟ್ಟನು.

३८६. ಅನಂತರ ಭಗವಂತನೂ ಕರುಣಾಮಯನೂ ಆದ ಶ್ರೀರಾಮನು ಪ್ರಸನ್ನನಾದನು. ಎಲೈ ಜಾಮದಗ್ನ್ಯನೆ ! ನಿನಗೆ ಬೇಕಾದವರವನ್ನು ಕೇಳಿಕೊ ? ಕೊಡುತ್ತೇನೆ. ಎಂದನು.

३८८. ಆಗ ಭಾರ್ಗವರಾಮನು ಸಂತೋಷದಿಂದ ರಾಮನನ್ನು ಕುರಿತು ಇಂತೆಂದನು. ಎಲೈ ಮಧುಸೂದನನಾದ ರಾಮನೆ ! ನನ್ನಮೇಲೆ ನಿನಗೆ ಅನುಗ್ರಹವಿರುವುದಾದರೆ ಈರೀತಿಯಾದ ವರವನ್ನು ಕೊಡು.

ತ್ವದ್ಭಕ್ತಸಂಗಃ ತ್ವತ್ಪಾದೇ ಮಮ ಭಕ್ತಿಸ್ಸದಾಸ್ತು ವೈ ।
ತಥೇತಿ ರಾಘವೇಣೋಕ್ತಃ ಪರಿಕ್ರಮ್ಯ ಪ್ರಣಮ್ಯ ತಂ ॥ ೩೭೮ ॥

ಪೂಜಿತಸ್ತದನುಜ್ಞಾತೋ ಮಹೇಂದ್ರಾಚಲಮನ್ವಗಾತ್ ।
ರಾವಣೇನ ಜಿತಾ ದೇವಾಸ್ಸಗರ್ವೋ ರಾವಣೋ ಮಹಾನ್ ॥ ೩೭೯ ॥

ಸಹಸ್ರಬಾಹುನಾ ಬದ್ಧಃ ಸೋರ್ಜುನೋ ಭಾರ್ಗವೇಣ ಹಿ ।
ಹತಃ ಕ್ಷಣೇನ ಸಮರೇ ಸೋಽದ್ಯ ಶ್ರೀಭಾರ್ಗವೋಪಿ ಚ ॥ ೩೮೦ ॥

ಜಿತಸ್ತದ್ಧನುಷಾ ಬಾಣಮೋಚನಾದ್ರಾಘವೇಣ ಹಿ ।
ಏವಂ ಶ್ರೀರಾಮಚಂದ್ರಸ್ಯ ಪೌರುಷಂ ಕಿಂ ವದಾಮ್ಯಹಂ ॥ ೩೮೧ ॥

---

೩೭೮. ಯಾವಾಗಲೂ ನಿನ್ನ ಭಕ್ತರ ಸಹವಾಸವೇ ನನಗಿರಲಿ! ಯಾವಾಗಲೂ ನಿನ್ನ ಪಾದದಲ್ಲಿಯೇ ನನಗೆ ಭಕ್ತಿಯಿರಲಿ. ಇಂತೆನ್ನಲು ಅದನ್ನು ಕೇಳಿ ಶ್ರೀರಾಮನು ಹಾಗೆಯೇ ಆಗಲೆಂದು ಹೇಳಿದನು. ಅನಂತರ ಭಾರ್ಗವರಾಮನು ಶ್ರೀರಾಮನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿದನು.

೩೭೯. ಅನಂತರ ಶ್ರೀರಾಮನು ಭಾರ್ಗವನನ್ನು ಪೂಜಿಸಲು ಆ ಸತ್ಕಾರವನ್ನು ಹೊಂದಿ ಅವನಿಂದ ಅನುಜ್ಞೆಯನ್ನು ತೆಗೆದುಕೊಂಡು ಮಹೇಂದ್ರಾಚಲಕ್ಕೆ ಹೊರಟು ಹೋದನು. ಬಲಿಷ್ಠನಾದ ರಾವಣನು ದೇವತೆಗಳನ್ನು ಜಯಿಸಿದನು. ಆಗ ರಾವಣನು ತಾನು ಬಹು ಬಲಿಷ್ಠನೆಂದೂ ದೊಡ್ಡವನೆಂದೂ ಗರ್ವವನ್ನು ಹೊಂದಿದ್ದನು.

೩೮೦. ಅಂತಹ ರಾವಣನನ್ನು ಸಹಸ್ರಬಾಹುಳ್ಳ ಕಾರ್ತವೀರ್ಯಾರ್ಜುನನು ಸೆರೆಹಿಡಿದು ಕಟ್ಟಿದನು. ಅಂತಹ ಶಕ್ತನಾದ ಅರ್ಜುನನನ್ನು ಭಾರ್ಗವರಾಮನು ಕೊಂದನು. ಅಂತಹ ಭಾರ್ಗವರಾಮನನ್ನೇ ಕ್ಷಣಕಾಲದಲ್ಲಿ ಈ ಶ್ರೀರಾಮನು ಜಯಿಸಿದನು.

೩೮೧. ಆ ಶ್ರೀರಾಮನು ಆ ಭಾರ್ಗವನ ಧನುಸ್ಸನ್ನು ಅವನು ಹೇಳಿದಂತೆ ಬಗ್ಗಿಸಿ ತನ್ನ ಶಕ್ತಿಯನ್ನು ತೋರಿಸಲು ತನ್ನ ಇಚ್ಛೆಯಿಂದ ಬಾಣವನ್ನು ಕ್ಷಣಕಾಲದಲ್ಲಿ ಬಿಟ್ಟು ಆ ಭಾರ್ಗವನನ್ನು ಸೋಲಿಸಿದನು. ಆ ಶ್ರೀರಾಮ ಚಂದ್ರನ ಪೌರುಷವು ಈ ರೀತಿಯಾಗಿದೆ. ಅದನ್ನು ಎಷ್ಟೆಂದು ಹೊಗಳಲಿ!

ಅಥ ರಾಜಾ ದಶರಥೋ ರಾಮಂ ಮೃತಮಿವಾಗತಂ ।
ಧೃಢಮಾಲಿಂಗ್ಯ ಹರ್ಷೇಣ ನೇತ್ರಾಭ್ಯಾಂ ಜಲಮುತ್ಸೃಜತ್ ॥ ೩೮೨ ॥

ತತಃ ಪ್ರೀತೇನ ಮನಸಾ ಸ್ವಸ್ಥಚಿತ್ತಃ ಪುರೀಂ ಯಯೌ ।
ಅಯೋಧ್ಯಾಯಾಂ ಸುಮಂತ್ರೋಽಪಿ ನೃಪಂ ಶ್ರುತ್ವಾ ಸಮಾಗತಂ ॥೩೮೩॥

ನಗರೀಂ ಶೋಭಯಾಮಾಸ ಪತಾಕಧ್ವಜತೋರಣೈಃ ।
ವಾರಣೇಂದ್ರಂ ಪುರಸ್ಕೃತ್ಯ ರಾಮಂ ಪ್ರತ್ಯುದ್ಯಯೌ ಜವಾತ್ ॥ ೩೮೪ ॥

ಅಥೋ ನದತ್ಸು ವಾದ್ಯೇಷು ರಾಜಪುತ್ರೈಸ್ಸುಹೃಜ್ಜನೈಃ ।
ವಿವೇಶ ನಗರಂ ಪೌರೈಃ ಪಶ್ಯನ್ನೃತ್ಯಾದಿಕಂ ಪಥಿ ॥ ೩೮೫ ॥

---

೩೮೨. ಅನಂತರ ದಶರಥನು ಶ್ರೀರಾಮನನ್ನು ಸತ್ತು ಮತ್ತೆ ಹುಟ್ಟಿದಂತೆ ತಿಳಿದು ಧೃಡವಾಗಿ ಆಲಂಗಿಸಿಕೊಂಡು ಸಂತೋಷದಿಂದ ಕಣ್ಣೀರನ್ನು ಸುರಿಸುತ್ತಿದ್ದನು.

೩೮೩. ಅನಂತರ ಸ್ಥಿರವಾದ ಮನಸ್ಸಿನಿಂದ ತನ್ನ ಪಟ್ಟಣವಾದ ಅಯೋಧ್ಯೆಗೆ ಹೋದನು. ಇತ್ತ ಇವರೆಲ್ಲರೂ ಅಯೋಧ್ಯೆಗೆ ಬರುವರೆಂಬುದನ್ನೂ ಅದರ ಹತ್ತಿರಕ್ಕೆ ಬಂದುದನ್ನೂ ಮಂತ್ರಿಯಾದ ಸುಮಂತ್ರನು ತಿಳಿದನು.

೩೮೪. ಒಡನೆಯೇ ಪತಾಕೆ ಧ್ವಜ ತೋರಣಗಳಿಂದ ಪಟ್ಟಣವನ್ನು ಅಲಂಕರಿಸಿದನು. ಮದ್ದಾನೆಗಳನ್ನು ತೆಗೆದುಕೊಂಡು ಆ ರಾಮನನ್ನು ಎದುರುಗೊಳ್ಳಲು ಬೇಗನೆ ಹೊರಟನು.

೩೮೫. ವಾದ್ಯಗಳು ಮೊಳಗುತ್ತಿರಲು ಆ ಶ್ರೀರಾಮನು ರಾಜಪುತ್ರರೊಡನೆಯೂ ಸ್ನೇಹಿತರೊಡನೆಯೂ ಪಟ್ಟಣಿಗರೊಡನೆಯೂ ರಾಜಬೀದಿಯಲ್ಲಿ ಹೊರಟನು. ಉದ್ದಕ್ಕೂ ನೃತ್ಯವಾದ್ಯಗಳು ನಡೆಯುತ್ತಿದ್ದುವು. ಅವೆಲ್ಲವನ್ನೂ ಶ್ರೀರಾಮನು ನೋಡುತ್ತ ಹೊರಟನು.

ರಾಮಾದ್ಯಾಃ ಸ್ವಸ್ವಪತ್ನ್ಯಾ ತೇ ಗಜಸಂಸ್ಥಾ ಯಯುಃ ಪುರೀಂ ।
ನನೃತುರ್ವಾರನಾರ್ಯಶ್ಚ ತುಷ್ಟುವುರ್ಮಾಗಧಾದಯಃ ॥ ೩೮೬ ॥

ಏವಂ ರಾಜಾ ಗೃಹಂ ಗತ್ವಾ ಬಾಲಕೈಃ ಸ್ವೀಯಸದ್ಮನಿ ।
ರಮಾಪೂಜಾಃ ಕಾರಯಿತ್ವಾ ದದೌ ದಾನಾನ್ಯನೇಕಶಃ ॥ ೩೮೭ ॥

ತದಾಲಂಕಾರವಸ್ತ್ರಾದ್ಯೈಃ ಸುಹೃದಃ ಪಾರ್ಥಿವಾದಯಃ ।
ರಾಮಾದೀನ್ಪೂಜಯಾಮಾಸುಸ್ತದಾ ದಶರಥಂ ನೃಪಂ ॥ ೩೮೮ ॥

ದಶರಥೋಽಪಿ ತಾನ್ ಸರ್ವಾನ್ ಪೂಜಯಾಮಾಸ ವೈಭವೈಃ ।
ತತಸ್ತೇ ಸುಹೃದಸ್ಸರ್ವೇ ನೃಪಾಶ್ಚ ಸ್ವಸ್ಥಲಂ ಯಯುಃ ॥ ೩೮೯ ॥

---

೩೮೬. ರಾಮ, ಲಕ್ಷ್ಮಣ, ಭರತ ಶತ್ರುಘ್ನರು ಅವರವರ ಹೆಂಡತಿಯರೊಡನೆ ಬೇರೆ ಬೇರೆಯಾದ ಆನೆಗಳಮೇಲೆ ಕುಳಿತುಕೊಂಡಿದ್ದರು. ದಾರಿಯುದ್ದಕ್ಕೂ ಸೂಳೆಯರು ಕುಣಿಯುತ್ತಿದ್ದರು. ವಂದಿಮಾಗಧರು ಹೊಗಳುತ್ತಿದ್ದರು.

೩೮೭. ಈ ದಶರಥನು ಮಕ್ಕಳು ಸೊಸೆಯರೊಡನೆ ಅಟ್ಟಹಾಸದಿಂದ ಅರಮನೆಗೆ ಹೋಗಿ ಅಲ್ಲಿ ಅವರಿಂದ ಮಹಾಲಕ್ಷ್ಮಿಪೂಜೆಯನ್ನು ಮಾಡಿಸಿ ಬ್ರಾಹ್ಮಣರಿಗೂ ದೀನರಿಗೂ ಅನಾಥರಿಗೂ ಅನೇಕ ಬಗೆಯಾದ ದಾನಗಳನ್ನು ಕೊಟ್ಟನು.

೩೮೮. ಅನಂತರ ರಾಜರುಗಳೂ ಸ್ನೇಹಿತರೂ ವಸ್ತ್ರ ಭೂಷಣ ಹಣ, ಉಪಾಯನ ಮುಂತಾದುವುಗಳಿಂದ ರಾಮಾದಿಗಳನ್ನೂ ದಶರಥನನ್ನೂ ಗೌರವಿಸಿದರು.

೩೮೯. ಆ ದಶರಥನೂ ಕೂಡ ಅವರೆಲ್ಲರನ್ನೂ ವೈಭವದಿಂದ ಪೂಜಿಸಿದನು. ಆನಂತರ ಆ ಸ್ನೇಹಿತರೂ ರಾಜರುಗಳೂ ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು.

ಪ್ರೀತ್ಯಾ ಯುಧಾಜಿತಂ ರಾಜಾ ಸ್ಥಾಪಯಾಮಾಸ ಸ್ವಾಂತಿಕಂ ।
ರಾಮಾದ್ಯಾ ರಮಯಾಮಾಸುಃ ಸ್ವಸ್ವದಾರಾಃ ಸ್ವಸದ್ಮಸು ॥ ೩೯೦ ॥

॥ ಪಾರ್ವತ್ಯುವಾಚ ॥

ಶ್ರೀವಿಷ್ಣೋಸ್ತು ಚಿದಂಶೇನ ಜಾಮದಗ್ನ್ಯಸ್ತ್ವಯಾ ಸ್ಮೃತಃ ।
ತದ್ವಚ್ಚಾಯಂ ರಾಘವಃ ಕಿಂ ನುದ ಮೇ ಸಂಶಯಂ ಪ್ರಭೋ ॥ ೩೯೧ ॥

॥ ಶ್ರೀ ಶಿವ ಉವಾಚ ॥

ಅಷ್ಟಾವಿಂಶಸ್ತು ವಿಧೃತಾ ಅವತಾರಾಶ್ಚ ವಿಷ್ಣುನಾ ॥ ೩೯೨ ॥

ರಾಮಕೃಷ್ಣಾವತಾರೌ ಚ ಪೂರ್ಣರೂಪೇಣ ತೌ ಧೃತೌ ।
ವರಿಷ್ಠೌ ಸಕಲೇಷ್ವೇವಾವತಾರೇಷು ಹಿತಾವುಭೌ ॥ ೩೯೩ ॥

---

೩೯೦. ಕೈಕೆಯಾಧಿಪತಿಯಾದ ಯುಧಾಜಿತ್ತುವನ್ನು ಮಾತ್ರ ದಶರಥನು ಪ್ರೀತಿಯಿಂದ ತನ್ನ ಬಳಿಯಲ್ಲಿಯೇ ಇಟ್ಟುಕೊಂಡನು. ರಾಮ ಲಕ್ಷ್ಮಣ ಭರತ ಶತ್ರುಘ್ನರು ತಮ್ಮ ತಮ್ಮ ಹೆಂಡತಿಯರೊಡನೆ ಸುಖದಿಂದಿದ್ದರು.

೩೯೧. ಪಾರ್ವತಿಯು ಹೇಳಿದಳು—ಎಲೈ ! ನಾಥನೆ ! ಜಾಮದಗ್ನ್ಯನು ವಿಷ್ಣುವಿನ ಚಿದಂಶವಾದುದರಿಂದ ಅವನನ್ನು ಸ್ಮರಿಸಿಕೊಂಡೆಯಷ್ಟೆ ! ರಾಮನೂ ಕೂಡ ಅವನಂತೆಯೇ ಚಿದಂಶನೆ ? ಹೇಗೆ ? ನನ್ನ ಈ ಸಂಶಯವನ್ನು ನಿವಾರಿಸು.

೩೯೨–೩೯೩. ಶ್ರೀ ಶಿವನು ಹೇಳಿದನು—ಎಲೈ ಪಾರ್ವತಿಯೆ ! ವಿಷ್ಣುವು ಇಪ್ಪತ್ತೆಂಟು ಅವತಾರಗಳನ್ನು ಮಾಡಿದನು. ಇವುಗಳಲ್ಲಿ ರಾಮಕೃಷ್ಣಾವತಾರಗಳೆರಡೂ ಪೂರ್ಣಾವತಾರಗಳು. ಎಲ್ಲಾ ಅವತಾರಗಳಿಗೂ ಇವು ಶ್ರೇಷ್ಠವಾದುವು. ಮತ್ತು ಇವೆರಡೂ ಹಿತವಾದುವು.

ತಯೋರಪಿ ವರಃ ಪೂರ್ವಸ್ಸತ್ಯಸಂಧೋ ಜಿತೇಂದ್ರಿಯಃ ।
ಜ್ಞೇಯೋ ರಾಮಾವತಾರೋ ಹಿ ನಾನೇನ ಸದೃಶಃ ಪರಃ ॥ ೩೯೪ ॥

ಕೃಷ್ಣಃ ಕೃಷ್ಣರುಚಿರ್ಜ್ಞೇಯಃ ಶ್ರೀರಾಮೋ ರುಕ್ಮಸಂರುಚಿಃ ।
ಏವಂ ಗಿರೀಂದ್ರಜೇ ಪ್ರೋಕ್ತಂ ಸೀತಾಯಾಶ್ಚ ಸ್ವಯಂವರಂ ॥ ೩೯೫ ॥

ಶ್ರೀಸೀತಾರಾಮಕಲ್ಯಾಣಮಹೋತ್ಸವಮಹೋಜಸಃ ।
ಅಸ್ಯಾಧ್ಯಾಯಸ್ಯ ಶ್ರವಣಾ ನ್ಮಂಗಳಂ ಲಭ್ಯತೇ ನರೈಃ ॥ ೩೯೬ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಸಾರಕಾಂಡೇ ಸೀತಾಸ್ವಯಂವರೋ ನಾಮ
ತೃತೀಯಸ್ಸರ್ಗಸ್ಸಮಾಪ್ತಃ

---

೩೯೪. ಇವೆರಡರಲ್ಲಿ ಮೊದಲನೆಯದಾದ ರಾಮಾವತಾರವು ಬಹು ಪ್ರಶಸ್ತವಾದುದು. ಅದರಲ್ಲಿ ಸತ್ಯಸಂಧತನವೂ ಜಿತೇಂದ್ರಿಯತ್ವವೂ ಇವೆ. ಈ ರಾಮಾವತಾರಕ್ಕೆ ಸಮವಾದ ಅವತಾರವೇ ಇಲ್ಲವೆಂದು ತಿಳಿ.

೩೯೫. ಶ್ರೀ ಕೃಷ್ಣನು ಕಪ್ಪುಬಣ್ಣವುಳ್ಳವನು. ಶ್ರೀರಾಮನು ಚಿನ್ನದಂತೆ ಹೊಂಬಣ್ಣವುಳ್ಳವನು. (ಕೃಷ್ಣಾವತಾರದಲ್ಲಿ ಕೋಪವು ಹೆಚ್ಚು. ರಾಮಾವತಾರದಲ್ಲಿ ಕೋಪವಿಲ್ಲ. ಮತ್ತೆ ಕೃಷ್ಣಾವತಾರದಲ್ಲಿ ಕಲ್ಮಷವು ಬಹುವಾಗಿರುವುದು. ರಾಮಾವತಾರದಲ್ಲಿ ಕಲ್ಮಷವಿಲ್ಲ.) ಎಲೈ ಪಾರ್ವತಿಯೆ! ಸೀತಾ ಸ್ವಯಂವರದ ವಿಷಯವನ್ನು ಈರೀತಿಯಾಗಿ ವಿವರಿಸಿದ್ದೇನೆ.

೩೯೬. ಈ ಅಧ್ಯಾಯದಲ್ಲಿ ಶ್ರೀ ಸೀತಾರಾಮರ ಕಲ್ಯಾಣವನ್ನು ಹೇಳಿರುವುದು. ಆದುದರಿಂದ ಬಹು ಮಹಿಮೆಯುಳ್ಳದ್ದಾಗಿದೆ. ಇಂತಹ ಈ ಅಧ್ಯಾಯವನ್ನು ಕೇಳುವುದರಿಂದ ಜನಗಳಿಗೆ ಮಂಗಳವು ಉಂಟಾಗುತ್ತದೆ.

ಇಂತು ಶ್ರೀ ಶತಕೋಟಿ ರಾಮಾಯಣಾಂತರ್ಗತವಾದ ವಾಲ್ಮೀಕಿ
ವಿರಚಿತವಾದ ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ
ಸೀತಾಸ್ವಯಂವರವೆಂಬ ಮೂರನೆಯ ಸರ್ಗವು ಮುಗಿದುದು.

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

॥ ತೃತೀಯಸರ್ಗದ ಸಾರಾಂಶವು ॥

ವಿಶ್ವಾಮಿತ್ರಋಷಿಯು ಅಯೋಧ್ಯೆಗೆ ಬಂದು ರಾಮಲಕ್ಷ್ಮಣರನ್ನು ತನ್ನ ಯಾಗದ ರಕ್ಷಣೆಗೋಸ್ಕರ ಕರದುಕೊಂಡು ಹೋಗುವನು. ದಾರಿಯಲ್ಲಿ ಸಿಕ್ಕಿದ ಕಾಮಾಶ್ರಮದಲ್ಲಿ ಅವರಿಗೆ ಅಸ್ತ್ರಶಸ್ತ್ರಗಳನ್ನು ಉಪದೇಶಿಸುವನು. ದಾರಿಯಲ್ಲಿ ಸಿಕ್ಕಿದ ರಾಕ್ಷಸರನ್ನು ಕೊಲ್ಲುತ್ತಾ ತಾಟಕೆಯೆಂಬವಳನ್ನು ಒಂದೇ ಬಾಣದಿಂದ ರಾಮನು ಕೊಂದನು. ಆಕೆಗೆ ಮಾರೀಚ ಸುಬಾಹುರೆಂಬುವರು ಮಕ್ಕಳಿದ್ದರು. ಈ ಸುಬಾಹುವನ್ನು ಕೊಂದು ಮಾರೀಚನನ್ನು ನೂರು ಯೋಜನದಷ್ಟು ದೂರಕ್ಕೆ ಸಮುದ್ರದಮೇಲೆ ಎಸೆದನು. ವಿಶ್ವಾಮಿತ್ರನ ಯಜ್ಞವು ಮುಗಿಯಲು ಅಲ್ಲಿಂದ ಮಿಥಿಲೆಗೆ ಹೊರಟರು. ದಾರಿಯಲ್ಲಿ ಕಲ್ಲಾಗಿದ್ದ ಅಹಲ್ಯೆಯನ್ನು ಶಾಪದಿಂದ ವಿಮೋಚನ ಮಾಡಿದನು. ಮುಂದೆ ಹೋಗುತ್ತಾ ಗಂಗೆಯನ್ನು ದಾಟುವಾಗ ನಿಷಾದಾಧಿಪತಿಯಾದ ಗುಹನ ಪರಿಚಯವಾಯಿತು. ಅಲ್ಲಿಂದ ಹೊರಟು ಮಿಥಿಲೆಗೆ ಹೋದರು. ಅಲ್ಲಿ ಮೈಥಿಲಿಯ ಸ್ವಯಂವರವು ನಡೆಯುವುದು ನಿಶ್ಚಿತ ವಾಗಿದ್ದುದರಿಂದ ರಾಜರೆಲ್ಲರೂ ಬಂದಿದ್ದರು. ರಾವಣನೂ ಕೂಡ ಬಂದಿದ್ದನು. ಮಕ್ಕಳು ಊರು ಬಿಟ್ಟು ಹೋಗಿದ್ದುದರ ದುಃಖದಿಂದ ದಶರಥನು ಮಾತ್ರ ಬಂದಿರಲಿಲ್ಲ. ರಾಮಲಕ್ಷ್ಮಣರನ್ನು ಬಹು ಅಟ್ಟಹಾಸದಿಂದ ಕರೆದುಕೊಂಡು ಹೋಗಬೇಕೆಂಬ ವಿಶ್ವಾಮಿತ್ರನ ಸೂಚನೆಯಂತೆ ಜನಕನು ಅಂತೆಯೇ ಮಾಡಿದನು. ಹಿಂದೆ ಜಮದಗ್ನಿಗೆ ಶಿವನು ತನ್ನ ಧನುಸ್ಸನ್ನೇ ಕೊಟ್ಟನು. ಜಮ ದಗ್ನಿಯು ಅದರಿಂದ ಕ್ಷತ್ರಿಯರನ್ನು ಇಪ್ಪತ್ತೊಂದುಬಾರಿ ಸಂಹರಿಸಿದ್ದನು. ಈ ಧನುಸ್ಸು ಮಹಾ ಶೂರರಿಗೂ ಎತ್ತಲು ಅಸಾಧ್ಯವಾಗಿದ್ದಿತು. ಈ ಪರಶುರಾಮನು ಒಂದು ಸಾರಿ ಜನಕನನ್ನು ನೋಡಲು ಮಿಥಿಲೆಗೆ ಹೋದಾಗ ಅರಮನೆಯ ಅಂಗಳ ದಲ್ಲಿ ಅದನ್ನು ಇಟ್ಟು ರಾಜನನ್ನು ನೋಡಲು ಹೋದನು. ಸತ್ಕಾರವು ಮುಗಿದ ಮೇಲೆ ಬಂದು ನೋಡಲು ಸೀತೆಯು ಆ ಧನುಸ್ಸನ್ನು ತೆಗೆದುಕೊಂಡು ಹುಡುಗಾ ಟದ ಸ್ವಭಾವದಿಂದ ಅದನ್ನು ಕುದುರೆಯಂತೆ ಮಾಡಿಕೊಂಡು ಆಡುತ್ತಿದ್ದಳು. ಇದರಿಂದ ಅವನಿಗೆ ಸೀತೆಯು ಲಕ್ಷ್ಮಿಯೆಂದು ತಿಳಿಯಿತು. ಆಗ ಆ ಧನುಸ್ಸನ್ನು ಆಕೆಯ ಮದುವೆಗೆ ಪಣವನ್ನಾಗಿ ಕೊಟ್ಟನು.

ಜನಕನು ಅದರಂತೆ ಈ ಸಮಯದಲ್ಲಿ ತುಂಬಿದ ಸಭೆಯಲ್ಲಿ ಆ ಧನುಸ್ಸನ್ನು ತಂದಿಟ್ಟು "ಈ ಧನುಸ್ಸನ್ನು ಎತ್ತಿ ಬಗ್ಗಿಸಿ ನಾರಿಯನ್ನು ಕಟ್ಟಿದವನನ್ನು ಈ ಸೀತೆಯು ಮದುವೆಯಾಗುತ್ತಾಳೆ" ಎಂದನು.

ಆಗ ಇದನ್ನು ಕೇಳಿದ ರಾಜರೆಲ್ಲರೂ ಬಿಲ್ಲನ್ನು ನೋಡಿ ಅದು ಅಸಾಧ್ಯವೆಂದು ತೋರಿದುದರಿಂದ ತಲೆಯನ್ನು ತಗ್ಗಿಸಿಕೊಂಡು ಕುಳಿತರು. ಕೆಲವರು ಮುಟ್ಟಿದರೂ ಅದನ್ನು ನೆಲದಿಂದಲೇ ಎತ್ತಲಾರದೆ ಹೋದರು. ಆಗ ಬಲಿಷ್ಠನೂ ಗರ್ವಿಷ್ಠನೂ ಆದ ರಾವಣನು ಬಂದು ಬಹು ಕಷ್ಟದಿಂದ ಮೇಲಕ್ಕೆತ್ತಿದನು. ಆಗ ಅದರ ನಾರಿಯು ಕೆಳಕ್ಕೆ ಬಿದ್ದಿತು. ಅದನ್ನು ತೆಗೆದುಕೊಳ್ಳಲು ನೆಲಕ್ಕೆ ಬಗ್ಗಿದಾಗ ಆ ಧನುಸ್ಸು ಈತನಮೇಲೆ ಬಿದ್ದಿತು. ಇವನು ಅಂಗತಲಕನಾಗಿ ನೆಲದಮೇಲೆ ಬಿದ್ದನು. ಈತನಮೇಲೆ ಧನುಸ್ಸು ಹೇರಿಕೊಂಡಿತು. ತಲೆಗೆ ಹಾಕಿಕೊಂಡಿದ್ದ ಕಿರೀಟವು ಕಳಚಿಹೋಗಿ ದೂರದಲ್ಲಿ ಬಿದ್ದಿತು. ಬಿಗಿಯಾಗಿ ಕಟ್ಟಿಕೊಂಡಿದ್ದ ಕಚ್ಚೆಯು ಬಿಚ್ಚಿಹೋಯಿತು. ಕಣ್ಣುಗಳು ಮರಳಲು ಮೊದಲಾದುವು. ಬಾಯಿಯಲ್ಲಿ ಜೊಲ್ಲು ಸುರಿಯುವುದಕ್ಕೆ ಆರಂಭವಾಯಿತು. ನೂರಾರುಬಾರಿ ಜಲಮಲಬಾಧೆಗಳಾದುವು. ಅವನ ಕಡೆಯವರು ಬಂದು ಪ್ರಯತ್ನಪಟ್ಟರೂ ಅದನ್ನು ಈಚೆಗೆ ತೆಗೆಯಲಾರದವರಾದರು.

ಆಗಜನಕನು ಅಲ್ಲಿನ ರಾಜರನ್ನು ಕುರಿತು ಯಾವನಿಗಾದರೂ ಶಕ್ತಿಯಿದ್ದರೆ ಈ ರಾವಣನಿಗೆ ಜೀವದಾನ ಮಾಡಲು ಮುಂದೆ ಬರುವಂತೆ ಕೂಗಿದನು. ರಾಜರೆಲ್ಲರೂ ಸುಮ್ಮನಿದ್ದರು. ರಾಮ ಲಕ್ಷ್ಮಣರು ಇದನ್ನು ಕೇಳಿ ಕೋಪಗೊಂಡು ವಿಶ್ವಾಮಿತ್ರನ ಮುಖವನ್ನು ನೋಡಿದರು. ವಿಶ್ವಾಮಿತ್ರನು ಎಲೈ ರಾಮನೆ! ಧನುಸ್ಸನ್ನು ಎತ್ತಿ ಆ ರಾಕ್ಷಸನಿಗೆ ಜೀವದಾನವನ್ನು ಮಾಡಿ ಅಂತೆಯೇ ಅದನ್ನು ಆರೋಪಿಸು. ಎಂದು ಕಳುಹಿಸಿದನು. ಆಗ ಎಲ್ಲರೂ ಆಶ್ಚರ್ಯದಿಂದ ನೋಡುತ್ತಿದ್ದರು. ಇದನ್ನು ನೋಡಿದ ಜನಕನೂ ಕೂಡ ವಿಶ್ವಾಮಿತ್ರನನ್ನು ಕುರಿತು "ಎಲೈ ಮುನಿಯೇ! ಈತನನ್ನು ಏತಕ್ಕೆ ಕಳುಹಿಸುತ್ತಿದ್ದೀಯೆ? ರಾವಣಾದಿಗಳ ಬಲವೇ ನಡೆಯದಿರುವ ಈ ಧನುಸ್ಸಿನಲ್ಲಿ ಈ ಬಾಲಕನು ಏನು ಮಾಡಬಲ್ಲನು? ಚಾತಕವು ಬಾಯಾರಿದರೆ ಒಂದು ಹನಿ ನೀರನ್ನು ಹೆಚ್ಚಾಗಿ ಕುಡಿಯಬಲ್ಲುದು. ಸಮುದ್ರವನ್ನೇ ಕುಡಿಯಲು ಅದರ ಕೈಯಲ್ಲಾಗುವುದೆ?" ಎಂದನು. ಇವನ ರೂಪಲಾವಣ್ಯಗಳನ್ನು ನೋಡುತ್ತಿದ್ದ ಹೆಂಗಸರು ಈತನಿಗೆ ಹೇಗಾದರೂ ಜಯವಾಗಲಿ ಎಂದೆನ್ನುತ್ತಿದ್ದರು. ಆಗ ಸೀತೆಯು ಈತನ ರೂಪಿಗೆ ಮೋಹಿತಳಾಗಿ ದೇವತೆಗಳನ್ನು ಕುರಿತು "ಎಲೈ ದೇವತೆಗಳಿರ! ನೀವೆಲ್ಲರೂ ಈತನ ತೋಳಿನಲ್ಲಿ

ಸೇರಿಕೊಂಡು ಈ ಧನುಸ್ಸನ್ನು ಕಟ್ಟುವಂತೆ ಮಾಡಿರಿ. ಹಾಗೆ ಮಾಡಿದರೆ ನಾನು ಮುನಿಗಳ ವೇಷದಿಂದ ಹದಿನಾಲ್ಕು ವರ್ಷಗಳಕಾಲ ಕಾಡಿನಲ್ಲಿರುತ್ತೇನೆ.'' ಎಂದು ಹರಕೆ ಮಾಡಿಕೊಂಡಳು.

ಶ್ರೀರಾಮನು ನಿಧಾನವಾಗಿ ಧನುಸ್ಸಿನ ಬಳಿಗೆ ಹೋಗಿ ಅದನ್ನು ಎಡಗೈಯ್ಯಿಂದಲೇ ಮೇಲಕ್ಕೆತ್ತಿದನು. ಬೀವನ್ನು ಕಟ್ಟಲು ಎಡಗೈಯ್ಯಿಂದಲೇ ಬಗ್ಗುವಂತೆ ಅಮುಕಲು ಆತನ ಬಲವನ್ನು ತಡೆಯಲಾರದೆ ಅದು ಮೂರು ತುಂಡಾಗಿ ಮುರಿದುಹೋಯಿತು. ಆಗ ಅಂತರಿಕ್ಷದಿಂದ ದೇವತೆಗಳೂ ಕಿಟಕಿಗಳಿಂದ ಮುತ್ತೈದೆಯರೂ ಆತನ ಮೇಲೆ ಹೂಮಳೆಯನ್ನು ಸುರಿಸಿದರು. ಒಡನೆಯೇ ರಾವಣನು ಧನುಸ್ಸಿನಿಂದ ತಪ್ಪಿಸಿಕೊಂಡು ಎದ್ದವನಾಗಿ ಬಿದ್ದುಹೋಗಿದ್ದ ಕಿರೀಟವನ್ನು ತೆಗೆದುಕೊಂಡು ತಲೆಗೆ ಹಾಕಿಕೊಳ್ಳದೆ.ಬಿಚ್ಚಿದ್ದ ಕಚ್ಚೆಯನ್ನು ಕಟ್ಟಿಕೊಳ್ಳದೆ ಸಭೆಯಲ್ಲಿ ಒಂದು ಕ್ಷಣಕಾಲವಾದರೂ ಕುಳಿತುಕೊಳ್ಳದೆ ಲಜ್ಜೆಯಿಂದ ಲಂಕೆಗೆ ಹೊರಟುಹೋದನು.

ಇತ್ತ ಸೀತೆಯನ್ನು ಆನೆಯಮೇಲೆ ಕೂರಿಸಿಕೊಂಡು ಕರೆತಂದರು. ಆಕೆಯು ರತ್ನದ ಮಾಲೆಯನ್ನು ಆ ರಾಮನ ಕತ್ತಿಗೆ ಹಾಕಿ ನಮಸ್ಕರಿಸಿ ನಿಂತಳು. ವಿಶ್ವಾಮಿತ್ರನು ಆ ರಾಮ ಸೀತೆಯರನ್ನು ತನ್ನ ತೊಡೆಯಮೇಲೆ ಕೂರಿಸಿಕೊಂಡು ಸಂತೋಷಪಟ್ಟನು. ರಾಜರೆಲ್ಲರಿಗೂ ಅಸೂಯೆಯುಂಟಾದರೂ ಕಾಲಾಂತರದಲ್ಲಿ ಯುದ್ಧಕ್ಕೆ ಬರೋಣವೆಂದು ಯೋಚಿಸಿಕೊಂಡು ಈಗ ಸುಮ್ಮನಾಗಿಬಿಟ್ಟರು.

ಜನಕನು ದಶರಥನನ್ನು ಕರೆತರುವಂತೆ ಆಳುಗಳನ್ನು ಕಳುಹಿಸಲು ಆತನು ಬರಬೇಕಾದವರೆಲ್ಲರನ್ನೂ ಕರೆದುಕೊಂಡು ಬಂದನು. ಜೊತೆಯಲ್ಲಿ ಭರತ ಶತ್ರುಘ್ನರಿದ್ದುದನ್ನು ನೋಡಿ ಜನಕನು ಊರ್ಮಿಳೆ ಶ್ರುತಕೀರ್ತಿ ಮಾಂಡವಿಯರನ್ನು ಲಕ್ಷ್ಮಣ ಭರತ ಶತ್ರುಘ್ನರಿಗೆ ಕೊಡುವಂತೆಯೂ ನಿಶ್ಚಯಿಸಿಕೊಂಡನು.

ಸೀತೆಯು ಜನಕನ ಔರಸಪುತ್ರಿಯಲ್ಲವೆಂಬುದು ದಶರಥನಿಗೆ ತಿಳಿಯಬರಲು ಈಕೆಯ ವಿಷಯವನ್ನು ಕುರಿತು ಶತಾನಂದನನ್ನು ಪ್ರಶ್ನಿಸಿದನು. ಆತನು ಅದಕ್ಕೆ ಇಂತೆಂದನು.

“ಪದ್ಮಾಕ್ಷನೆಂಬುವನೊಬ್ಬ ರಾಜನಿದ್ದನು. ಜನರೆಲ್ಲರೂ ಲಕ್ಷ್ಮಿಯಲ್ಲಿಯೇ ಆಸಕ್ತರಾಗಿರುವುದನ್ನು ನೋಡಿ ತಾನು ಆಕೆಯನ್ನು ಮಗಳನ್ನಾಗಿಯೇ ಪಡೆಯಬೇಕೆಂದು ಇಷ್ಟಪಟ್ಟು ತಪಸ್ಸನ್ನೇ ಮಾಡಿದನು. ಲಕ್ಷ್ಮಿಯು ಪ್ರಸನ್ನಳಾಗಿ

ವರವನ್ನು ಬೇಡೆನ್ನಲು "ನೀನು ನನಗೆ ಮಗಳಾಗಿ ಹುಟ್ಟಬೇಕು." ಎಂದನು ಅದಕ್ಕೆ "ಆಕೆಯು ನಾನು ವಿಷ್ಣುವಿನ ಅಧೀನಳು. ಅವನನ್ನು ಕೇಳಿಕೊ" ಎಂದಳು. ತಪಸ್ಸಿನಿಂದ ವಿಷ್ಣುವನ್ನು ಮೆಚ್ಚಿಸಲು ಅವನು ರಾಜನಿಗೆ ಒಂದು ಮಾದಲದ ಹಣ್ಣನ್ನು ಕೊಟ್ಟನು.

ಪದ್ಮಾಕ್ಷನು ಆದನ್ನು ಸುಲಿದು ನೋಡಲು ಒಳಗೆ ಒಬ್ಬ ಕನ್ಯೆ ಇದ್ದಳು. ಆಕೆಯೇ ಲಕ್ಷ್ಮಿಯು. ರಾಜನು ಆ ಹಣ್ಣನ್ನು ಮತ್ತೆ ಸೇರಿಸಲು ಅದು ಸೇರಿಕೊಂಡಿತು. ಅದನ್ನು ಆ ಲಕ್ಷ್ಮಿಯು ಕೈಯ್ಯಲ್ಲಿ ಹಿಡಿದುಕೊಂಡಳು.

ಆ ಕನ್ಯೆಯು ಮದುವೆಗೆ ಬರಲು ಆಕೆಗೆ ಸ್ವಯಂವರವನ್ನೇರ್ಪಡಿಸಿ ತಾನು ಒಂದು ಯಜ್ಞವನ್ನು ಮಾಡುವುದಕ್ಕೂ ಅಣಿ ಮಾಡಿಕೊಂಡನು. ಈ ಸ್ವಯಂ ವರಕ್ಕೆ ದೇವಾದಿದೇವತೆಗಳೂ ಬಂದರು. ಪದ್ಮಾಕ್ಷನು ನೀಲಮೇಘಶ್ಯಾಮನಾಗಿ ರುವವನಿಗೆ ನನ್ನ ಮಗಳನ್ನು ಕೊಡುತ್ತೇನೆಂದು ಹೇಳಲು ರಾಜರೆಲ್ಲರೂ ಕೋಪ ಗೊಂಡು ಯುದ್ಧಕ್ಕೆ ಬಂದರು. ಆಗ ರಾಜನು ಯುದ್ಧಮಾಡುತ್ತ ರಣದಲ್ಲಿ ಕೊಲ್ಲಲ್ಪಟ್ಟನು. ಅವರೆಲ್ಲರೂ ಆ ಕನ್ಯೆಯನ್ನು ಹಿಡಿದುಕೊಳ್ಳಲು ಹೋದಾಗ ಆಕೆಯು ಆ ಯಜ್ಞಕುಂಡದ ಅಗ್ನಿಯಲ್ಲಿ ಬಿದ್ದುಬಿಟ್ಟಳು. ಆಗ ಆಕೆಯು ಸತ್ತ ಳೆಂದು ತಿಳಿದು ಎಲ್ಲರೂ ಹೊರಟುಹೋದರು. ಸ್ವಯಂವರಕ್ಕೆ ಬಂದಿದ್ದ ರಾವಣನೂ ಅಂತೆಯೇ ಹೊರಟುಹೋದನು. ಒಂದುಸಾರಿ ಈ ಕುಂಡದಲ್ಲಿ ದೇಹವನ್ನು ಮರೆಸಿಕೊಂಡಿದ್ದ ಆ ಲಕ್ಷ್ಮಿಯು ಕುಂಡದಿಂದ ಹೊರಗೆ ಬಂದು ಅದರ ಹತ್ತಿರ ವೇದಿಕೆಯಲ್ಲಿ ಕುಳಿತಿದ್ದಳು. ಇದೇ ಸಮಯದಲ್ಲಿ ಪ್ರಪಂಚವನ್ನು ಜಯಿಸಲು ರಾವಣನು ಆಕಾಶಮಾರ್ಗದಲ್ಲಿ ವಿಮಾನಾರೂಢನಾಗಿ ಸಂಚಾರ ಹೊರಟಿದ್ದನು. ಆಗ ಅಕಸ್ಮಾತ್ತಾಗಿ ಕಣ್ಣಿಗೆ ಗೋಚರಳಾದ ಈಕೆಯನ್ನು ಸಾರಣನು ರಾವಣನಿಗೆ ತೋರಿಸಿದನು. ರಾವಣನು ಕಾಮಮೋಹಿತನಾಗಿ ಬಂದು ಆಕೆಯನ್ನು ಹಿಡಿದುಕೊಳ್ಳಲು ಹೋದಾಗ ಮತ್ತೆ ಆ ಕನ್ಯೆಯು ಆ ಕುಂಡದಲ್ಲಿಯೇ ಅವಿತುಕೊಂಡಳು. ರಾವಣನು ಆ ಕುಂಡದಲ್ಲಿರುವ ಬೆಂಕಿಗೆ ನೀರನ್ನು ಸುರಿಸಿ ಆ ಕನ್ಯೆಯನ್ನು ನೋಡಲು ಅಲ್ಲಿ ಆಕೆಯು ಸಿಕ್ಕಲಿಲ್ಲ. ಅದರಲ್ಲಿ ಐದು ಮಹಾರತ್ನಗಳು ಮಾತ್ರ ಸಿಕ್ಕಿದುವು. ಅವನ್ನು ಅವನು ಒಂದು ಪೆಟ್ಟಿಗೆಯ ಲ್ಲಿಟ್ಟುಕೊಂಡು ಲಂಕೆಗೆ ತಂದು ದೇವರ ಮನೆಯಲ್ಲಿಟ್ಟನು.

ಅನಂತರ ಆ ರತ್ನಗಳನ್ನು ತೆಗೆದುಕೊಳ್ಳುವಂತೆ ಮಂಡೋದರಿಗೆ ಹೇಳಲು ಆಕೆಯು ಹೋಗಿ ಆ ಪೆಟ್ಟಿಗೆಯನ್ನು ಎತ್ತಲು ಅದು ಭಾರವಾಗಿದ್ದಿತು. ಆ ವಿಷಯವನ್ನು ರಾವಣನಿಗೆ ತಿಳಿಸಲು ಅವನು ಹೋಗಿ ಎತ್ತಲು ಅಲ್ಲಾಡಲಿಲ್ಲ.

ಆಗ ಅಲ್ಲಿಯೇ ಅದರ ಬಾಗಿಲನ್ನು ತೆಗೆದುನೋಡಲು ಅದರೊಳಗೆ ರತ್ನಗಳಿಗೆ ಬದಲಾಗಿ ಒಬ್ಬ ಕನ್ನಿಕೆಯಿದ್ದಳು. ಇದನ್ನು ನೋಡಿ ದಶಾನನನು ಆಕೆಯ ವಿಷಯವನ್ನು ಮಂಡೋದರಿಗೆ ಹೇಳಿದನು.

ಇದರಿಂದ ಆ ಮಂಡೋದರಿಯು ಹೆದರಿ ಈಕೆಯು ಮಾಟದ ಮುಸಣಿಯು. ಲಂಕೆಗೇಕೆ ತಂದೆ? ಬೇಗನೆ ಕಾಡಿಗೆ ತೆಗೆದುಕೊಂಡು ಹೋಗಿ ಬಿಟ್ಟುಬಿಡು. ಎಂದಳು. ಅಂತೆಯೇ ಅವನು ಆಳುಗಳ ಕೈಯ್ಯಲ್ಲಿ ಆ ಹುಡುಗಿಯಿದ್ದ ಪೆಟ್ಟಿಗೆಯನ್ನು ಭದ್ರಪಡಿಸಿ ಕೊಟ್ಟುಕಳುಹಿಸಿದನು. ಆಗ ಈಕೆಯನ್ನು ದೂರದಲ್ಲಿ ಜೋಕೆಯಿಂದ ಬಿಟ್ಟುಬರಬೇಕೆಂದು ಮಂಡೋದರಿಯು ಆ ಆಳುಗಳಿಗೆ ಬುದ್ಧಿಯನ್ನು ಹೇಳುತ್ತಿರಲು ಆ ಕನ್ಯೆಯು "ಎಲೈ ಮಂಡೋದರಿಯೇ! ನಾನು ರಾಕ್ಷಸರ ವಧೆಗೋಸ್ಕರ ಮತ್ತೆ ಲಂಕೆಗೆ ಬರುತ್ತೇನೆ. ಮೂರನೆಯಬಾರಿಯೂ ಕೂಡ ಈ ಲಂಕೆಗೆ ಬಂದು ಪೌಂಡ್ರಕ. ಶತಶೀರ್ಷರಾವಣರನ್ನು ಕೊಲ್ಲುತ್ತೇನೆ. ಮತ್ತೆ ಹೊರಟುಹೋಗಿ ನಾಲ್ಕನೆಯಬಾರಿ ಬಂದು ಕುಂಭಕರ್ಣನ ಮಗನಾದ ಮೂಲಕಾಸುರನನ್ನು ಕೊಲ್ಲುತ್ತೇನೆ." ಎಂದಳು. ಇದರಿಂದ ರಾವಣನಿಗೆ ಬಹಳ ಭಯವಾಯಿತು ಇದರಿಂದ ಕೋಪವೂ ಉತ್ಪನ್ನವಾಗಿ ಕತ್ತಿಯನ್ನು ತೆಗೆದುಕೊಂಡು ಆ ಕನ್ಯೆಯನ್ನು ಕೊಲ್ಲಲು ಹೋದನು. ಆಗ ಮಂಡೋದರಿಯು "ಎಲೈ ಕಾಂತನೆ! ಮುಂದೆ ಸಾಯುವುದಿರಲಿ. ಈಗಲೇ ಸತ್ತೀಯೆ? ಸಾಹಸ ಕೆಲಸಕ್ಕೆ ಕೈ ಹಾಕಬೇಡ" ಎಂದು ತಡೆದಳು.

ಅನಂತರ ರಾವಣನು ಆ ಪೆಟ್ಟಿಗೆಯನ್ನು ದೂತರ ಕೈಯ್ಯಲ್ಲಿ ಕೊಟ್ಟು ದೂರದಲ್ಲಿ ಹೂತುಬನ್ನಿರೆಂದು ಕಳುಹಿಸಿದನು. ಅವರು ಎಲ್ಲ ಜಾಗಗಳನ್ನೂ ಸುತ್ತಿಕೊಂಡು ನೋಡುತ್ತ ಜನಕರಾಜನು ಉಳಿಸುತ್ತಿದ್ದ ಭೂಮಿಯಲ್ಲಿ ಅದನ್ನು ಹೂತುಬಿಟ್ಟರು. ಅನಂತರ ತಾವು ಮಾಡಿದ ಕೆಲಸವನ್ನು ರಾವಣನಿಗೆ ವಿಜ್ಞಾಪಿಸಿದರು.

ಹೀಗಿರುತ್ತಿರಲು ಸೂರ್ಯಗ್ರಹಣಕಾಲದಲ್ಲಿ ಈ ಪೆಟ್ಟಿಗೆಯನ್ನು ಹೂತಿದ್ದ ಭೂಮಿಯನ್ನು ಜನಕನು ಬ್ರಾಹ್ಮಣನಿಗೆ ದಾನಮಾಡಿದನು. ಆ ಬ್ರಾಹ್ಮಣನು ಅದನ್ನು ಉಳಿಸಲು ಮುಹೂರ್ತವನ್ನು ಹುಡುಕುತ್ತಿದ್ದು ಬಹುಕಾಲದಮೇಲೆ ಒಳ್ಳೆಯ ಮುಹೂರ್ತವು ಸಿಕ್ಕಲು ಅದನ್ನು ಆಗ ರೈತನಿಂದ ಉಳಿಸಿದನು. ಉಳುತ್ತಿರುವಾಗ ಈ ಪೆಟ್ಟಿಗೆಯು ನೇಗಿಲಿನ ಕೊನೆಗೆ ಸಿಕ್ಕಿತು. ಆ ರೈತನು ಪೆಟ್ಟಿಗೆಯನ್ನು ತಂದು ಭೂಮಿಗೆ ಯಜಮಾನನಾದ ಬ್ರಾಹ್ಮಣನ ಕೈಗೆ ಕೊಟ್ಟನು. ಬ್ರಾಹ್ಮಣನು ಅದನ್ನು ಹಣದ ಪೆಟ್ಟಿಗೆಯೆಂದು ತಿಳಿದು ರಾಜನಾದ ಜನಕನಿಗೆ

ಕೊಟ್ಟನು. ರಾಜನು ಅದನ್ನು ತೆಗೆದು ನೋಡಲು ಅದರಲ್ಲಿ ಈ ಬಾಲಿಕೆಯು ಕಂಡುಬಂದಳು. ಆಗ ಎಲ್ಲಾ ಕಡೆಯಲ್ಲಿಯೂ ಶುಭಶಕುನಗಳು ಉಂಟಾದುವು. ಅಂದಿನಿಂದ ಈಕೆಯನ್ನು ಜನಕನು ತನ್ನ ಪುತ್ರಿಯಂತೆ ಸಲಹುತ್ತಾ ಬಂದು ಈಗ ತನ್ನ ಪ್ರತಿಜ್ಞೆಯಂತೆ ಆಕಾಶದ ವರ್ಣಕ್ಕೆ ನೀಲಿಯಾಗಿರುವ ಮನುಷ್ಯನಿಗೆ ಕೊಟ್ಟಿರುವನು." ಎಂದನು.

ಅನಂತರ ದಶರಥನನ್ನೂ ಅವನ ಮಕ್ಕಳನ್ನೂ ವೈಭವದಿಂದ ಜನಕನು ಪಟ್ಟಣಕ್ಕೆ ಕರೆದುಕೊಂಡು ಹೋದನು. ಎಲ್ಲರೂ ಗಣಪತಿಪೂಜೆಯೇ ಮೊದಲುಗೊಂಡ ಎಲ್ಲ ಪೂಜೆಗಳನ್ನು ಮಾಡಿ ವಿವಾಹವನ್ನು ನೆರವೇರಿಸಿದರು.

ಇತ್ತ ದಶರಥನು ಒಂದು ತಿಂಗಳಕಾಲದವರೆಗೂ ಅಲ್ಲಿಯೇ ಇದ್ದು ಅನಂತರ ತನ್ನ ಪಟ್ಟಣಕ್ಕೆ ಹೊರಟನು ಹೊರಟಾಗ ಬಹುವಾದ ದುಶ್ಶಕುನಗಳು ಉಂಟಾದುವು. ಒಡನೆಯೇ ಕ್ಷತ್ರಿಯಕುಲಾಂತಕನಾದ ಪರಶುರಾಮನು ಬರುತ್ತಿದ್ದುದನ್ನು ನೋಡಿದರು. ಆ ಪರಶುರಾಮನು ಅಲ್ಲಿಗೆ ಬಂದು ಯಾರು ಏನನ್ನು ಹೇಳಿದರೂ ಕೇಳದೆ ಶ್ರೀರಾಮನ ಬಳಿಗೆ ಬಂದು "ಎಲೈ ರಾಮನೆ! ಹಳೆಯದಾದ ಶಿವಧನುಸ್ಸನ್ನು ಮುರಿದುದು ಹಾಗಿರಲಿ ನಾನು ಹಿಡಿದಿರುವ ಈ ಧನುಸ್ಸನ್ನು ಬಗ್ಗಿಸು" ಎಂದು ಕೈಗೆ ಕೊಟ್ಟನು. ರಾಮನು ಅವನ ಕೈಯ್ಯಿಂದ ಆ ಧನುಸ್ಸನ್ನು ತೆಗೆದುಕೊಂಡು ಬಗ್ಗಿಸಿ ಅದಕ್ಕೆ ಬಾಣವನ್ನು ಹೂಡಿದನು. ಮತ್ತು "ಎಲೈ ಜಾಮದಗ್ನ್ಯನೆ! ನಾನು ಈಧನುಸ್ಸನ್ನು ಬಗ್ಗಿಸಿದುದಿರಲಿ. ಇದರಲ್ಲಿ ಹೂಡಿರುವ ಬಾಣಕ್ಕೆ ಲಕ್ಷ್ಯವನ್ನು ತೋರಿಸು." ಎಂದನು.

ಒಡನೆಯೇ ಈ ಶ್ರೀರಾಮನು ಮಹಾವಿಷ್ಣುವೆಂಬ ಬೋಧೆಯು ಪರಶುರಾಮನಿಗೆ ಉಂಟಾಗಿ "ಎಲೈ ರಾಮನೆ! ನಾನು ನನಗೆ ತೊಂದರೆಯನ್ನುಂಟುಮಾಡಿದ ಕಾರ್ತವೀರ್ಯನನ್ನು ಕೊಲ್ಲಬೇಕೆಂಬ ಇಚ್ಛೆಯಿಂದ ತಪಸ್ಸನ್ನು ಮಾಡಿದೆನು. ಆಗ ವಿಷ್ಣುವು ಪ್ರಸನ್ನನಾಗಿ 'ನಾನು ನನ್ನ ಅಂಶವನ್ನು ನಿನ್ನಲ್ಲಿಡುತ್ತೇನೆ. ಅದರಿಂದ ನೀನು ಆ ಕಾರ್ತವೀರ್ಯನನ್ನು ಸಂಹರಿಸು. ಮತ್ತು ಭೂಮಿಯೆಲ್ಲವನ್ನೂ ನಿನ್ನ ಅಧೀನವನ್ನಾಗಿ ಮಾಡಿಕೊಂಡು ಅದನ್ನು ಕಶ್ಯಪನಿಗೆ ದಾನ ಮಾಡು. ಅನಂತರ ನಿನಗೆ ಶಾಂತಿಯು ಉಂಟಾಗುತ್ತದೆ. ಮುಂದೆ ನಾನು ಭೂಮಿಯಲ್ಲಿ ಹುಟ್ಟಿ ನಿನ್ನಲ್ಲಿರುವ ಅಂಶವನ್ನು ಮತ್ತೆ ತೆಗೆದುಕೊಳ್ಳುತ್ತೇನೆ. ಅನಂತರವೂ ನೀನು ತಪಸ್ಸನ್ನಾಚರಿಸುತ್ತ ಸುಖವಾಗಿರು.' ಎಂದು ಹೇಳಿದ್ದನು.

ಅದರಂತೆ ಆ ವಿಷ್ಣುವಾದ ನೀನೇ ಈಗ ಈ ರಾಮನಾಗಿ ಹುಟ್ಟಿದ್ದೀಯೆ. ನನ್ನಲ್ಲಿದ್ದ ಆ ಶಕ್ತಿಯನ್ನು ತೆಗೆದುಕೊಂಡಿದ್ದೀಯೆ. ಈಗ ನನಗೆ ತಿಳಿಯಿತು. ನಿನಗೆ ನಮಸ್ಕಾರವು." ಎಂದು ಹೇಳಿ ತಪಸ್ಸಿಗೆ ಹೊರಟುಹೋದನು.

ರಾವಣನು ದೇವತೆಗಳನ್ನೆಲ್ಲಾ ಜಯಿಸಿದನು. ಅಂತಹ ರಾವಣನನ್ನು ಸಾವಿರ ಕೈಯುಳ್ಳ ಕಾರ್ತವೀರ್ಯನು ಕಟ್ಟಿ ಕಾರಾಗೃಹದಲ್ಲಿಟ್ಟನು. ಆ ಕಾರ್ತವೀರ್ಯನನ್ನು ಪರಶುರಾಮನು ಕೊಂದನು. ಅಂತಹ ಪರಶುರಾಮನನ್ನು ಈಗ ಶ್ರೀರಾಮನು ಜಯಿಸಿದನು. ಎಂದಮೇಲೆ ಯಾವ ಕಾಲಕ್ಕೆ ಏನು ಉಂಟಾಗುವುದು ! ಎಂಬುದು ತಿಳಿಯಲಸಾಧ್ಯವು.

ಅನಂತರ ದಶರಥನು ಶ್ರೀರಾಮನನ್ನು ಸತ್ತು ಬದುಕಿ ಬಂದಂತೆ ತಿಳಿದು ಸಂತೋಷದಿಂದ ಅಯೋಧ್ಯೆಗೆ ಉತ್ಸವದಿಂದ ಹೋದನು. ಪಟ್ಟಣದಲ್ಲಿ ತನ್ನ ಜೊತೆಯಲ್ಲಿ ಬಂದಿದ್ದವರಿಗೆಲ್ಲಾ ಉಡುಗೊರೆಯನ್ನು ಕೊಟ್ಟು ಗೌರವಿಸಿ ಅವರವರ ಸ್ಥಳಗಳಿಗೆ ಕಳುಹಿಸಿದನು. ರಾಮನೇ ಮುಂತಾದ ನಾಲ್ವರು ಅಣ್ಣತಮ್ಮಂದಿರೂ ಅವರವರ ಹೆಂಡಿರೊಡನೆ ಸುಖದಿಂದಿದ್ದರು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಸಾರಕಾಂಡೇ

॥ ಚತುರ್ಥಸ್ಸರ್ಗಃ ॥

॥ ಶ್ರೀ ಶಿವ ಉವಾಚ ॥

ಅಥ ಸೀತಾಯುತಶ್ಶ್ರೀಮಾ್ ರಾಮಸ್ಸಾಕೇತಸಂಸ್ಥಿತಃ ।
ಬುಭುಜೇ ವಿವಿಧಾ್ ಭೋಗಾ್ ರಾಜಸೇವಾಪರೋಽಭವತ್ ॥ ೧ ॥

ಶರತ್ಕಾಲಾಶ್ವಿನೇ ಮಾಸಿ ಜನಕೇನ ಸ್ವಮಂತ್ರಿಣಃ ।
ಆಹ್ವಾನಾಯ ಚ ರಾಜಾನಂ ಪ್ರೇಷಿತಾಸ್ತ್ವರಿತಂ ಯಯುಃ ॥ ೨ ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

ನಾಲ್ಕನೆಯ ಸರ್ಗವು

೧. ಶ್ರೀ ಶಿವನು ಹೇಳಿದನು–ಶ್ರೀರಾಮನು ಸೀತೆಯೊಡನೆ ಅಯೋಧ್ಯಾ ನಗರದಲ್ಲಿರುತ್ತಾ ಅನೇಕ ಬಗೆಯಾದ ಸೌಖ್ಯಗಳನ್ನು ಅನುಭವಿಸುತ್ತಿದ್ದನು. ಅಲ್ಲದೆ ರಾಜನಾದ ದಶರಥನಿಗೂ ಸೇವೆಮಾಡುವುದರಲ್ಲಿ ಆಸಕ್ತನಾಗಿದ್ದನು.

೨. ಶರದೃತುವಿನ ಆಶ್ವಯುಜಮಾಸದಲ್ಲಿ ದಶರಥನನ್ನು ಕರತರಬೇಕೆಂದು ಜನಕನು ಮಂತ್ರಿಗಳನ್ನು ಕಳುಹಿಸಲು ಅವರು ಅಯೋಧ್ಯೆಗೆ ಬೇಗನೆ ಬಂದರು.

ತಾನಾಗತಾನ್ ದಶರಥಃ ಶೀಘ್ರಂ ಸತ್ಕೃತ್ಯ ಸಾದರಂ ।
ಪಪ್ರಚ್ಛಾಗಮನೇ ಹೇತುಂ ತೇಪಿ ನತ್ವಾ ತಮೂಚಿರೇ ॥ ೩ ॥

ದೀಪಾವಲ್ಯುತ್ಸವಾರ್ಥಂ ತ್ವಾಂ ಸಕುಟುಂಬಂ ಸಮಂತ್ರಿಣಂ ।
ಪೌರಜಾನಪದೈಸ್ಸಾಕಮಾಹ್ವಯಾಮಾಸ ತೇ ಸುಹೃತ್ ॥ ೪ ॥

ತತ್ತೇಷಾಂ ವಚನಂ ಶ್ರುತ್ವಾ ದೂತಾನಾಜ್ಞಾಪಯನ್ನೃಪಃ ।
ಕಥ್ಯತಾಂ ನಗರೇ ರಾಷ್ಟ್ರೇ ಗಮನಂ ಮಿಥಿಲಾಂ ಪ್ರತಿ ॥ ೫ ॥

ಸುಮುಹೂರ್ತೇ ತತೋ ರಾಜಾ ಹಸ್ತ್ಯಶ್ವರಥಪತ್ತಿಭಿಃ ।
ಪೌರೈರ್ಜಾನಪದೈಸ್ಸಾಕಂ ಯಯೌ ಕರಿವಿರಾಜಿತಃ ॥ ೬ ॥

---

೩. ಅಯೋಧ್ಯೆಗೆ ಬಂದ ಆ ಮಂತ್ರಿಗಳನ್ನು ದಶರಥನು ಬಹು ಪ್ರೀತಿಪೂರ್ವಕವಾಗಿ ಬೇಗನೆ ಸತ್ಕರಿಸಿ ಅವರು ಬಂದುದಕ್ಕೆ ಕಾರಣವನ್ನು ಕೇಳಿದನು. ಆ ಮಂತ್ರಿಗಳು ದಶರಥನಿಗೆ ನಮಸ್ಕರಿಸಿ ಇಂತೆಂದರು.

೪. ಎಲೈ ದಶರಥನೃಪನೆ! ದೀಪಾವಳಿಯ ಉತ್ಸವಕ್ಕೋಸ್ಕರ ನಿನ್ನನ್ನು ಕುಟುಂಬದೊಡನೆಯೂ ಮಂತ್ರಿಗಳೊಡನೆಯೂ ಪುರಜನ ದೇಶದ ಜನಗಳೊಡನೆಯೂ ಬರಬೇಕೆಂದು ನಿನ್ನ ಸ್ನೇಹಿತನಾದ ಜನಕನು ಹೇಳಿ ಕಳುಹಿಸಿರುವನು.

೫. ಹೀಗೆಂದು ಆ ಮಂತ್ರಿಗಳು ಹೇಳಲು ಇದನ್ನು ಕೇಳಿ ದೂತರನ್ನು ಕರೆಸಿ ಅವರಿಂದ ಊರಿನಲ್ಲಿರುವವರಿಗೂ ದೇಶದ ಮುಖ್ಯಸ್ಥರಿಗೂ ಮಿಥಿಲೆಗೆ ಹೋಗುವುದಕ್ಕೆ ಹೇಳಿ ಕಳುಹಿಸಿದನು.

೬. ಅನಂತರ ಒಳ್ಳೆಯ ಮುಹೂರ್ತದಲ್ಲಿ ದಶರಥನು ಮಕ್ಕಳುಗಳೆಲ್ಲರನ್ನೂ ಕರೆದುಕೊಂಡು ಪಟ್ಟಣಿಗರು ದೇಶದವರು ಇವರೆಲ್ಲರನ್ನೂ ಕರೆದುಕೊಂಡು ಪ್ರಯಾಣ ಮಾಡಿದನು.

ರಾಜ್ಞಃ ಪೃಷ್ಠೇ ಸಮಾಜಗ್ಮುರ್ಗಜೋಪರಿವಿರಾಜಿತಾಃ |
ರಾಮಲಕ್ಷ್ಮಣ ಭರತಶತ್ರುಘ್ನಾಸ್ತೇಽಸ್ವಲಂಕೃತಾಃ || ೭ ||

ಕೌಸಲ್ಯಾದ್ಯಾ ರಾಜದಾರಾಃ ಸ್ನುಷಾಭಿಸ್ತಾಃ ಪೃಥಕ್ ಪೃಥಕ್ |
ರತ್ನಮಾಣಿಕ್ಯಮುಕ್ತಾದಿಶೋಭಿತಾಸು ವರಾಸು ಚ || ೮ ||

ಕರಿಣೀಷು ಸಮಾಸೀನಾ ವೇಷ್ಟಿತಾ ವೇತ್ರಪಾಣಿಭಿಃ |
ಧಾತ್ರಿಕಾಭಿಸ್ಸ್ವದಾಸೀಭಿರ್ಯಯುರ್ವಸ್ತ್ರಾದಿಭೂಷಿತಾಃ || ೯ ||

ಆಗತಂ ನೃಪತಿಂ ಶ್ರುತ್ವಾ ಜನಕಃ ಪೌರವಾಸಿಭಿಃ |
ಪ್ರತ್ಯುಜ್ಜಗಾಮ ಹರ್ಷೇಣ ನಿನಾಯ ನಗರೀಂ ಪ್ರತಿ || ೧೦ ||

---

೭. ರಾಜನ ಹಿಂದುಗಡೆಯಲ್ಲಿ ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ಅಲಂಕರಿಸಿಕೊಂಡು ಆನೆಯಮೇಲೆ ಕುಳಿತುಕೊಂಡು ಪ್ರಯಾಣಮಾಡಿದರು.

೮. ಕೌಸಲ್ಯೆಯೇ ಮೊದಲಾದ ರಾಣಿಯರೂ ಅವರವರ ಸೊಸೆಯರೊಡನೆ ಬೇರೆ ಬೇರೆಯಾಗಿ ರತ್ನಮಾಣಿಕ್ಯ ಮುತ್ತುಗಳಿಂದ ಅಲಂಕರಿಸಿದ ಹೆಣ್ಣಾನೆಗಳ ಮೇಲೆ ಕೂತು ಹೊರಟರು.

೯. ಅವರ ಸುತ್ತಲೂ ಬೆತ್ತವನ್ನು ಹಿಡಿದಿದ್ದ ದಾದಿಯರು ರಕ್ಷಣೆಗೆ ಸಿದ್ಧರಾಗಿದ್ದರು. ಅವರೆಲ್ಲರೂ ಅವರಿಗೆ ಯೋಗ್ಯವಾದ ಕಾಲಕ್ಕೆ ತಕ್ಕ ವಸ್ತ್ರ ಒಡವೆಗಳನ್ನು ಧರಿಸಿದ್ದರು.

೧೦. ಈ ದಶರಥನು ಅವರೊಡನೆ ಜನಕನ ಪಟ್ಟಣವಾದ ಮಿಥಿಲೆಯ ಬಳಿಗೆ ಹೋಗಲು ಇದನ್ನು ಕೇಳಿ ಜನಕನು ಪಟ್ಟಣಿಗರೊಡನೆ ಎದುರುಗೊಂಡು ತನ್ನ ಪಟ್ಟಣವೊಳಕ್ಕೆ ಕರೆದುಕೊಂಡು ಹೋದನು.

ವಾದ್ಯಘೋಷನಿನಾದೈಶ್ಚ ದುಂದುಭೀನಾಂ ಮಹಾಸ್ವನೈಃ ।
ವಾರಾಂಗನಾನಾಂ ನೃತ್ಯಾದ್ಯೈಃ ಗಾಯಕಾನಾಂ ಚ ಗಾಯನೈಃ ॥ ೧೧ ॥

ಮಾರ್ಗೇ ಮಾರ್ಗೇ ಮಹಾಸೌಧಾರೂಢಸ್ತ್ರೀಣಾಂ ಕದಂಬಕೈಃ ।
ಪುಷ್ಪವೃಷ್ಟಿವಿವರ್ಷಾಭಿರ್ಯಯೌ ನೃಪಗೃಹಂ ನೃಪಃ ॥ ೧೨ ॥

ತತೋ ಗೃಹಾಣಿ ರಮ್ಯಾಣಿ ಪೂರಿತಾನ್ಯನ್ನವಾರಿಭಿಃ ।
ಪ್ರವಿವೇಶ ನೃಪಶ್ರೇಷ್ಠೋ ಜನಕೇನಾತಿಮಾನಿತಃ ॥ ೧೩ ॥

ತತೋ ನಾನಾಸಮುತ್ಸಾಹೈರ್ಮೃಷ್ಟಾನ್ನೈರ್ನೃತ್ತಗಾಯನೈಃ ।
ವಸ್ತ್ರೈರಾಭರಣೈಸ್ಸರ್ವಾನ್ ಜಾಮಾತೄಂಶ್ಚ ವಿಶೇಷತಃ ॥ ೧೪ ॥

---

೧೧. ಇವರು ರಾಜಬೀದಿಯಲ್ಲಿ ಹೋಗುತ್ತಿರಲು ದಾರಿಯುದ್ದಕ್ಕೂ ವಾದ್ಯಗಳು ಮೊಳಗುತ್ತಿದ್ದುವು. ದುಂದುಭಿಗಳು ದೊಡ್ಡದಾಗಿ ಶಬ್ದಮಾಡುತ್ತಿದ್ದುವು. ಸೂಳೆಯರು ಕುಣಿಯುತ್ತಿದ್ದರು. ಗಾಯಕರು ಹಾಡುತ್ತಿದ್ದರು.

೧೨. ಪಟ್ಟಣದ ಹೆಂಗಸರು ರಾಜಬೀದಿಗಳಲ್ಲಿರುವ ಮನೆಗಳ ಮಹಡಿಗಳ ಮೇಲೆ ನೋಡುತ್ತ ಹೂವನ್ನು ಹಿಡಿದಿದ್ದು ಅವರಮೇಲೆ ಎರಚುತ್ತಿದ್ದರು. ಈರೀತಿಯಾದ ಉತ್ಸವಗಳೊಡನೆ ದಶರಥನು ಪರಿವಾರದೊಡನೆ ಜನಕನ ಅರಮನೆಗೆ ಹೋದನು.

೧೩. ಅಲ್ಲಿ ದಶರಥನಿಗೆ ಜನಕನು ಒಳ್ಳೆಯ ಬಿಡಾರವನ್ನು ಏರ್ಪಡಿಸಿ ಅದರಲ್ಲಿ ಅನ್ನ ನೀರುಗಳಿಗೆ ಬಹುವಾಗಿ ಅನುಕೂಲಪಡಿಸಿದ್ದನು. ಮನೆಯು ಬಹು ರಮ್ಯವಾಗಿದ್ದಿತು. ಅಂತಹ ಮನೆಗೆ ಜನಕನು ದಶರಥನನ್ನು ಬಹುವಾದ ಉತ್ಸವದೊಡನೆ ಕರೆದುಕೊಂಡು ಹೋದನು.

೧೪. ದೀಪಾವಳಿಯ ಹಬ್ಬದ ದಿವಸದಲ್ಲಿ ಜನಕನು ಅಳಿಯಂದಿರನ್ನು ಕರೆಸಿ ಅವರನ್ನು ಮೃಷ್ಟಾನ್ನಗಳಿಂದ ತೃಪ್ತಿಪಡಿಸಿದನು. ನೃತ್ಯ, ಗೀತ, ವಾದ್ಯಗಳನ್ನು ಬಹುವಾಗಿ ಮಾಡಿಸಿದನು. ವಸ್ತ್ರಗಳನ್ನೂ ಆಭರಣಗಳನ್ನೂ ಕೊಟ್ಟು ಗೌರವಿಸಿದನು.

ಮಣಿರತ್ನಾದಿದೀಪೈಶ್ಚ ಮುಹುರ್ನೀರಾಜನೈರಪಿ ।
ಜನಕಃ ಪೂಜಯಾಮಾಸ ದೀಪಾವಳ್ಯಾಂ ಮಹಾದಿನೇ ॥ ೧೫ ॥

ದೀಪೋತ್ಸವೈರ್ಮಹಾಪುಣ್ಯೇ ಬಲಿರಾಜ್ಯಂ ಪ್ರವರ್ತತೇ ।
ಆನಂದಸ್ಸರ್ವಲೋಕಾನಾಂ ಮಂಗಳಾನಿ ಗೃಹೇ ಗೃಹೇ ॥ ೧೬ ॥

ಅಭ್ಯಂಗೋದ್ವರ್ತನಾದ್ಯೈಶ್ಚ ಪರಿಪಕ್ವಾನ್ನಭೋಜನೈಃ ।
ಗೋದಾಸದಾಸೀದಾನೈಶ್ಚ ಹಸ್ತ್ಯಶ್ವರಥಪತ್ತಿಭಿಃ ॥ ೧೭ ॥

ಚಕಾರ ತುಷ್ಟಾರ್ಥ ಜಾಮಾತ್ರರ್ಥ ಜನಕೋ ನೃಪತಿಂ ತಥಾ ।
ನೃಪಪತ್ನೀಸ್ಸದುಹಿತಾಸ್ತ್ವಯೋಧ್ಯಾಸ್ಥಾದಿಕಾರ್ಥ ಕ್ರಮಾತ್ ॥ ೧೮ ॥

---

೧೫. ಅವರ ಬಳಿಯಲ್ಲಿ ಮಣಿಯ ಮತ್ತು ರತ್ನದ ದೀಪಗಳನ್ನೇ ಹತ್ತಿಸಿಟ್ಟಿದ್ದರು. ಅವರಿಗೆ ದೀಪವನ್ನು ಹತ್ತಿಸಿ ಆರತಿಯನ್ನು ಎತ್ತಿದರು. ಈ ರೀತಿಯಾಗಿ ದೀಪಾವಳಿಯ ದಿವಸ ಜನಕನು ಅಳಿಯಂದಿರನ್ನು ಗೌರವಿಸಿದನು.

೧೬. ದೀಪಾವಳಿಯ ಹಬ್ಬದಲ್ಲಿ ಮಹಾಪುಣ್ಯಕರವಾದ ಬಲಿರಾಜ್ಯವು ಈ ಲೋಕದಲ್ಲೆಲ್ಲವೂ ಬಂದಿರುವಂತೆ ನಡೆಸಲ್ಪಡುತ್ತದೆ. ಆಗ ಎಲ್ಲಾ ಜನಗಳಿಗೂ ಆನಂದವು ಉಂಟಾಗುತ್ತದೆ.

೧೭. ಆಗ ಎಲ್ಲರೂ ಅಭ್ಯಂಜನಮಾಡುತ್ತಾರೆ. ಒಳ್ಳೆಯ ಪಕ್ವಾನ್ನಗಳನ್ನು ಮಾಡಿ ಊಟಮಾಡುತ್ತಾರೆ. ಗೋವುಗಳನ್ನೂ ದಾಸಿಯರನ್ನೂ ಧನವನ್ನೂ ಆನೆ ಕುದುರೆ ರಥಗಳನ್ನೂ ಕಾಲಾಳುಗಳನ್ನೂ ಬೇಕಾದಂತೆ ತಮ್ಮ ಇಷ್ಟರಾದವರಿಗೆ ದಾನಮಾಡುತ್ತಾರೆ.

೧೮. ಆಗ ಜನರು ತಮ್ಮ ತಮ್ಮ ಅಳಿಯಂದಿರನ್ನು ಕರೆಸಿ ಸಂತೋಷಪಡಿಸುತ್ತಾರೆ. ಅಂತೆಯೇ ಜನಕನು ತನ್ನ ಅಳಿಯಂದಿರೂ ದಶರಥನೂ ಸಂತೋಷಪಡುವಂತೆ ಎಲ್ಲವನ್ನೂ ಮಾಡಿದನು. ಮತ್ತು ಆ ದಶರಥನ ಹೆಂಡತಿಯರಿಗೂ ತನ್ನ ಹೆಣ್ಣುಮಕ್ಕಳಿಗೂ ಇಷ್ಟವಾದುವುಗಳೆಲ್ಲವನ್ನೂ ಕೊಟ್ಟನು. ಅಯೋಧ್ಯೆಯಿಂದ ಬಂದಿದ್ದ ಇತರರಿಗೂ ಎಲ್ಲವನ್ನೂ ಕೊಟ್ಟನು.

ತತಃ ಪ್ರಸ್ಥಾನಮಕರೋತ್ಪುರೀಂ ದಶರಥೋ ನೃಪಃ ।
ತತೋ ರಾಜಾ ದಶರಥಸ್ಸೈನ್ಯೇನ ಪರಿವೇಷ್ಟಿತಃ ॥ ೧೯ ॥

ಯಯೌ ಶನೈಶ್ಶನೈರ್ಮಾರ್ಗೇ ಸುಹೃನ್ಮಂತ್ರಿಪುರಸ್ಸರಃ ।
ಏತಸ್ಮಿನ್ನಂತರೇ ಮಾರ್ಗೇ ಸೀತಾರ್ಥಂ ಧನುಷಾ ಪುರಾ ॥ ೨೦ ॥

ಭಗ್ನಮಾನಾ ನೃಪತಯಃ ಪೂರ್ವವೈರಮನುಸ್ಮರನ್ ।
ಅಸಂಖ್ಯಾತಾಸ್ಸಸೈನ್ಯಾಸ್ತೇ ರುರುಧುರ್ನೃಪತಿಂ ಪಥಿ ॥ ೨೧ ॥

ತಾನ್ ದೃಷ್ಟ್ವಾ ನೃಪತೀಂಶ್ಚಾಪಿ ಕಿಮೇತದಿತಿ ವಿಹ್ವಲಃ ।
ಮಂತ್ರಿಭಿರ್ಮಂತ್ರಯಾಮಾಸ ಜನಕಃ ಸ್ವಜನೈರಪಿ ॥ ೨೨ ॥

---

೧೯. ಹಬ್ಬವೆಲ್ಲವೂ ಮುಗಿದನಂತರ ದಶರಥನು ತನ್ನ ಪಟ್ಟಣಕ್ಕೆ ಪ್ರಯಾಣಮಾಡಲುದ್ಯುಕ್ತನಾಗಿ ಅದಕ್ಕೋಸ್ಕರ ತನ್ನ ಸೈನ್ಯವೆಲ್ಲವನ್ನೂ ಕರೆದು ಕೊಂಡು ಹೊರಟನು.

೨೦-೨೧. ಮಂತ್ರಿಗಳನ್ನೂ ಪುರೋಹಿತರನ್ನೂ ಕರೆದುಕೊಂಡು ಪ್ರಯಾಣ ಮಾಡಿ ದಾರಿಯಲ್ಲಿ ಸಾವಕಾಶವಾಗಿ ಹೋಗುತ್ತಿದ್ದನು. ಇದೇ ಸಮಯವೆಂದು ಸೀತೆಗೆ ಸ್ವಯಂವರವಾದ ಸಮಯದಲ್ಲಿ ಧನುಸ್ಸನ್ನು ಎತ್ತಲಾರದೆ ಅವಮಾನ ಹೊಂದಿದ್ದ ರಾಜರೆಲ್ಲರೂ ದ್ವೇಷದಿಂದ ಈಗ ಬಹುವಾದ ಸೈನ್ಯದೊಡನೆ ಬಂದು ಆ ದಶರಥನನ್ನೂ ರಾಮನನ್ನೂ ಸುತ್ತುಗಟ್ಟಿ ಮುತ್ತಿಗೆ ಹಾಕಿದರು.

೨೨. ಹೀಗೆ ಇವರೆಲ್ಲರೂ ಬಂದು ಮುತ್ತಿಗೆ ಹಾಕಿದುದನ್ನು ದಶರಥನು ನೋಡಿ ಇದೇನೆಂದು ಯೋಚಿಸುತ್ತ ಮಂತ್ರಿಗಳನ್ನು ಕರೆಸಿ ಅವರೊಡನೆ ಯೋಚಿಸಿದನು.

ಏತಸ್ಮಿನ್ನಂತರೇ ರಾಮಃ ಶ್ರುತ್ವಾ ಚಿಂತಾರ್ಣವೇ ನಿಜಂ ।
ನಿಮಗ್ನಂ ಪಿತರಂ ಶೀಘ್ರಂ ಯಯೌ ಲಕ್ಷ್ಮಣಸಂಯುತಃ ॥ ೨೩ ॥

ನತ್ವಾ ದಶರಥಂ ರಾಮಃ ಕಿಂಚಿನ್ನಮ್ರೋಽಬ್ರವೀದಿದಂ ।
ತಾತ ರಾಜನ್ನ ಕರ್ತವ್ಯಾ ಚಿಂತಾ ಸತಿ ಮಯಿ ತ್ವಯಾ ॥ ೨೪ ॥

ಕ್ಷಣಾದೇವ ವಧಿಷ್ಯಾಮಿ ಪಶ್ಯ ತ್ವಂ ಕೌತುಕಂ ಮಮ ।
ತತೋ ರಾಮವಚಶ್ಶ್ರುತ್ವಾ ರಾಜಾಲಿಂಗ್ಯ ರಘೂತ್ತಮಂ ॥ ೨೫ ॥

ಪ್ರಾಹ ಷಡ್ವಾರ್ಷಿಕೋ ಬಾಲಸ್ತ್ವಂ ಕಥಂ ಯೋದ್ಧುಮಿಚ್ಛಸಿ ।
ಅರಣ್ಯೇ ಸಕಂಟೋಽಬೋಽಹಂ ವೇಷ್ಟಿತೋಽಸ್ಮಿ ನೃಪಾಧಮೈಃ ॥ ೨೬ ॥

---

೨೩. ಹೀಗೆ ಚಿಂತೆಯಲ್ಲಿ ದಶರಥನು ಮುಳುಗಿರುವುದನ್ನು ತಿಳಿದು ರಾಮನು ಲಕ್ಷ್ಮಣನನ್ನೂ ಕರೆದುಕೊಂಡು ಆ ದಶರಥನ ಬಳಿಗೆ ಬೇಗನೆ ಹೋದನು.

೨೪. ಅಲ್ಲಿ ದಶರಥನಿಗೆ ನಮಸ್ಕರಿಸಿ ಸ್ವಲ್ಪತಲೆತಗ್ಗಿಸಿಕೊಂಡು ಅವನೊಡನೆ ಇಂತೆಂದನು—ಎಲೈ ತಂದೆಯೇ ! ನಾನು ಇರುತ್ತಿರುವಾಗ ನೀನು ಸ್ವಲ್ಪವೂ ಯೋಚಿಸಬೇಡ.

೨೫. ಒಂದು ಕ್ಷಣದಲ್ಲಿಯೇ ನಾನು ಇವರೆಲ್ಲರನ್ನೂ ಕೊಂದು ಹಾಕುತ್ತೇನೆ. ನಾನು ಮಾಡುವ ಕೆಲಸದ ಆಶ್ಚರ್ಯವನ್ನು ನೋಡುತ್ತಿರು. ಎನ್ನಲು ಇದನ್ನು ಕೇಳಿ ದಶರಥನು ಆ ರಾಮನನ್ನು ಆಲಂಗಿಸಿಕೊಂಡನು.

೨೬. ಎಲೈ ರಾಮನೆ ! ನೀನು ಇನ್ನೂ ಆರು ವರ್ಷದ ಬಾಲನು. ನೀನು ಹೇಗೆ ತಾನೆ ಯುದ್ಧವನ್ನು ಮಾಡಬಲ್ಲೆ ? ದುಷ್ಟರಾದ ರಾಜರೆಲ್ಲರೂ ನನ್ನನ್ನು ಅರಣ್ಯ ಮಧ್ಯದಲ್ಲಿ ಮುತ್ತಿಗೆ ಹಾಕಿಕೊಂಡಿರುವರು.

ಅಹಮೇವ ಗಮಿಷ್ಯಾಮಿ ಯೋದ್ಧುಂ ತ್ವಂ ರಕ್ಷ ವಾಹಿನೀಂ ।
ತತ್ತಾತ ವಚನಂ ಶ್ರುತ್ವಾ ರಾಮಸ್ತಂ ಪುನರಬ್ರವೀತ್ ॥ ೨೭ ॥

ಯದಾ ಮೇ ಕುಂಠಿತಾಂ ಶಕ್ತಿಂ ಪಶ್ಯಸಿ ತ್ವಂ ರಣಾಂಗಣೇ ।
ತದಾ ಮೇ ಕುರು ಸಾಹಾಯ್ಯಂ ತಾವದತ್ರ ಸ್ಥಿರೋ ಭವ ॥ ೨೮ ॥

ಸ್ವಾಂ ವಾಹಿನೀಂ ಸಕುಟುಂಬಾಂ ತಾತ ತ್ವಂ ರಕ್ಷ ಮದ್ಗಿರಾ ।
ಇತ್ಯುಕ್ತ್ವಾ ಪಿತರಂ ನತ್ವಾ ಸಜ್ಜೀಕೃತ್ಯ ಶರಾಸನಂ ॥ ೨೯ ॥

ಜಗಾಮ ರಥಮಾರೂಢೋ ಲಕ್ಷ್ಮಣೋಽಪಿ ತಮನ್ವಗಾತ್ ।
ತೌ ದೃಷ್ಟ್ವಾ ಭರತಶ್ಚಾಥ ಶತ್ರುಘ್ನೋಽಪಿ ಜಗಾಮ ಸಃ ॥ ೩೦ ॥

---

೨೭. ನಾನೇ ಅವರೊಡನೆ ಯುದ್ಧಮಾಡಲು ಹೋಗುತ್ತೇನೆ. ನೀನು ಇಲ್ಲಿದ್ದುಕೊಂಡು ಸೈನ್ಯವನ್ನು ನಮ್ಮವರನ್ನೂ ರಕ್ಷಿಸುತ್ತಿರು. ಎನ್ನಲು ತಂದೆಯ ಮಾತನ್ನು ಕೇಳಿ ರಾಮನು ಮತ್ತೆ ತಂದೆಗೆ ಇಂತೆಂದನು.

೨೮. ಎಲೈ ತಂದೆಯೆ! ನಾನು ಅವರೊಡನೆ ಯುದ್ಧಮಾಡುತ್ತೇನೆ. ನಾನು ಸೋಲುವಂತೆ ನಿನಗೆ ಕಂಡುಬಂದಾಗ ನೀನು ನನಗೆ ಸಹಾಯವನ್ನು ಮಾಡು. ಅದುವರೆಗೂ ನೀನು ಇಲ್ಲಿಯೇ ಇರು.

೨೯. ಇಲ್ಲಿಯೇ ಇದ್ದುಕೊಂಡು ನಮ್ಮ ಸೈನ್ಯವನ್ನೂ ಅಂತಃಪುರದವರನ್ನೂ ಕಾಪಾಡಿಕೊಂಡಿರು. ಇದೇ ನನ್ನ ಪ್ರಾರ್ಥನೆಯು ಹೀಗೆಂದು ಹೇಳಿ ತಂದೆಗೆ ನಮಸ್ಕರಿಸಿ ಧನುಸ್ಸನ್ನು ಸಿದ್ಧಮಾಡಿಕೊಂಡು ಹೊರಟನು.

೩೦. ರಥದಮೇಲೆ ಕುಳಿತುಕೊಂಡು ರಾಮನು ಯುದ್ಧಕ್ಕೆ ಹೊರಡಲು ಲಕ್ಷ್ಮಣನು ಅವನನ್ನು ಅನುಸರಿಸಿ ಹೊರಟನು. ಅವರಿಬ್ಬರೂ ಹೋದುದನ್ನು ನೋಡಿ ಭರತನೂ ಶತ್ರುಘ್ನನೂ ತಾವೂ ಹೊರಟರು.

ತಾನ್ ದೃಷ್ಟ್ವಾ ದಶಸಾಹಸ್ರೀಂ ರಾಜಾ ಸೇನಾಮಚೋದಯತ್ ।
ತತಸ್ತೇ ಪಾರ್ಥಿವಾಸ್ಸರ್ವೇ ರಥಸ್ಥಂ ತಂ ರಘೂತ್ತಮಂ ॥ ೩೧ ॥

ನಿರೀಕ್ಷ್ಯ ದರ್ಶಯಾಮಾಸುಸ್ಸ್ವಸೇನಾಯಾಂ ಪರಸ್ಪರಂ ।
ಸಮಾಗತೋಽಯಂ ಶ್ರೀರಾಮಸ್ಸ್ವಪಿತೃಸ್ಯಂದನಸ್ಥಿತಃ ॥ ೩೨ ॥

ಏಷ ವೈ ಸುಮಹಚ್ಛ್ರೀಮಾನ್ ವಿಟಪೀ ಸಂಪ್ರಕಾಶತೇ ।
ವಿರಾಜತ್ಯುಜ್ಜ್ವಲಸ್ಕಂಧಃ ಕೋವಿದಾರಧ್ವಜೋ ರಥೇ ॥ ೩೩ ॥

ದಶರಥಾಜ್ಞಯಾ ತಸ್ಯ ರಥೇ ಶಾಸ್ತ್ರೌಘಪೂರಿತೇ ।
ಧ್ವಜಬದ್ಧಪತಾಕೋಚ್ಚಕೋವಿದಾರೇ ಸ್ಥಿತಃ ಸ್ವಯಂ ॥ ೩೪ ॥

---

೩೧. ಎಲ್ಲರೂ ಜೊತೆಯಲ್ಲಿ ಹೋಗಲು ತಮ್ಮ ಜೊತೆಯಲ್ಲಿ ಬಂದಿದ್ದ ಹತ್ತುಸಾವಿರ ಸೈನ್ಯವನ್ನೂ ಶತ್ರುಗಳಮೇಲೆ ಬೀಳುವಂತೆ ದಶರಥನು ಪ್ರೇರೇಪಿಸಿದನು. ಆಗ ಶತ್ರುರಾಜರೆಲ್ಲರೂ ಶ್ರೀರಾಮನನ್ನು ರಥದಲ್ಲಿ ಕುಳಿತು ಬರುತ್ತಿರುವಾಗಲೇ ನೋಡಿದರು.

೩೨. ತಾವುಗಳೂ ನೋಡಿ ತಮ್ಮ ಸೈನ್ಯದಲ್ಲಿರುವ ರಾಜರಿಗೂ ಮಿಕ್ಕವರಿಗೂ ಒಬ್ಬರಿಗೊಬ್ಬರು ತೋರಿಸುತ್ತ ಈ ರಾಮನು ತನ್ನ ತಂದೆಯ ರಥದಲ್ಲಿ ಕುಳಿತುಕೊಂಡು ಬರುತ್ತಿರುವನು.

೩೩. ಇಗೋ ! ಅವನ ರಥದಲ್ಲಿ ದೊಡ್ಡದಾಗಿಯೂ ಚೆನ್ನಾಗಿಯೂ ಇರುವ ಮರವು ಕಾಣಿಸುತ್ತಿದೆ. ಅದರ ಮಧ್ಯಭಾಗವು ದಪ್ಪವಾಗಿರುವುದು. ಅದು ಕಂಚುವಾಳದ ಮರವು. ಅದೇ ಈ ರಾಮನ ಧ್ವಜವು.

೩೪. ದಶರಥನು ಅಪ್ಪಣೆಮಾಡಿ ಅವನ ರಥದಲ್ಲಿ ಮಹಾಶಸ್ತ್ರಗಳೆಲ್ಲವನ್ನೂ ತುಂಬಿಸಿರುವನು. ಧ್ವಜವನ್ನೂ ಪತಾಕೆಯನ್ನೂ ಕಟ್ಟಿಸಿರುವನು. ಆ ಕಂಚುವಾಳದ ಮರವನ್ನು ಮೇಲಕ್ಕೆ ಎತ್ತಿ ಕಟ್ಟಿರುವರು.

ಏವಂ ವದಂತಸ್ತೇ ಸರ್ವೇ ರಥೈರ್ಯೋದ್ಧುಂ ಸಮಾಯಯುಃ ।
ತತೋಽಭವನ್ಮಹದ್ಯುದ್ಧಂ ಘೋರಂ ತಚ್ಚ ಪರಸ್ಪರಂ ॥ ೩೫ ॥

ಅಸ್ತ್ರೈಶ್ಶಸ್ತ್ರೈರ್ಭಿಂದಿವಾಲೈಶ್ಶತಘ್ನೀಭಿಃ ಪರಶ್ವಧೈಃ ।
ರಾಮಸ್ಯ ಸೈನಿಕಾನ್ಮುಕ್ತ್ವಾ ರಾಜಾನೋ ರಾಮಮನ್ವಯುಃ ॥ ೩೬ ॥

ತೇ ವವರ್ಷುರ್ಮಹಾಶಸ್ತ್ರೈರ್ಬಾಣೈರ್ವ್ಯಾಪ್ಯ ದಿಗಂಬರಂ ।
ತಾನ್ದೃಷ್ಟ್ವಾ ನೃಪತೀನ್ಸರ್ವಾ‌ನ್ ರಾಮಮೇವಾಭಿಸಂಮುಖಾ‌ನ್ ॥ ೩೭ ॥

ಲಕ್ಷ್ಮಣಃ ಪ್ರಾದ್ರವಚ್ಛೀಘ್ರಂ ಭರತೋಽಪಿ ಸಶತ್ರುಹಾ ।
ಸ್ವಾಮಿತಾರಕವದ್ಘೋರಮಾಸೀದ್ಯುದ್ಧಂ ಸುದಾರುಣಂ ॥ ೩೮ ॥

---

೩೫. ಅವರೆಲ್ಲರೂ ಹೀಗೆ ಮಾತನಾಡಿಕೊಳ್ಳುತ್ತ ರಥದಲ್ಲಿ ಕುಳಿತು ತಾವೂ ಯುದ್ಧಕ್ಕೆ ಬಂದರು ಆಗ ಅವರಿಬ್ಬರಿಗೂ ಮಹತ್ತರವಾದ ಘೋರ ಯುದ್ಧವು ನಡೆಯಿತು.

೩೬. ಆ ರಾಜರೆಲ್ಲರೂ ರಾಮನ ಸೈನ್ಯದೊಡನೆ ಯುದ್ಧಮಾಡುವುದನ್ನು ಬಿಟ್ಟು ರಾಮನಮೇಲೆಯೇ ಬಿದ್ದರು. ಶಸ್ತ್ರಗಳಿಂದಲೂ ಭಿಂಡಿವಾಲಗಳಿಂದಲೂ ಬಂದೂಕಗಳಿಂದಲೂ ಕೊಡಲಿಗಳಿಂದಲೂ ಹೊಡೆಯಲು ಮೊದಲಿಟ್ಟರು.

೩೭. ಅವರೆಲ್ಲರೂ ದಿಕ್ಕುಗಳೆಲ್ಲವೂ ಬಾಣಗಳಿಂದ ತುಂಬುವಂತೆ ಮಾಡುತ್ತ ಇವರಮೇಲೆ ಬಾಣದ ಮಳೆಯನ್ನೇ ಕರೆದರು. ರಾಮನು ಆ ರಾಜರೆಲ್ಲರೂ ಮಿಕ್ಕವರೆಲ್ಲರನ್ನೂ ಬಿಟ್ಟು ತನ್ನಮೇಲೆಯೇ ಬೀಳುತ್ತಿರುವುದನ್ನು ನೋಡಿದನು.

೩೮. ರಾಮನು ಅವರೊಡನೆ ಯುದ್ಧಮಾಡುತ್ತಿರಲು ಲಕ್ಷ್ಮಣ ಭರತ ಶತ್ರುಘ್ನರು ಇದನ್ನು ನೋಡಿ ಅವರೂ ರಾಮನ ಸಹಾಯಕ್ಕೆ ಬಂದರು. ಆಗ ಆ ಯುದ್ಧವು ತಾರಕಾಸುರನಿಗೂ ಕುಮಾರಸ್ವಾಮಿಗೂ ನಡೆದಂತೆ ಘೋರವಾಗಿ ನಡೆಯಿತು.

ತತೋ ನೃಪತಯಸ್ಸರ್ವೇ ಶಸ್ತ್ರಾಸ್ತ್ರೈರ್ಭರತಂ ತದಾ ।
ತೇ ವಿಧ್ವಾ ಮೂರ್ಛಿತಂ ಚಕ್ರುಸ್ಸ್ಯಂದನಾತ್ಪತಿತೋ ಭುವಿ ॥ ೩೯ ॥

ಭರತಂ ಪತಿತಂ ದೃಷ್ಟ್ವಾ ಶತ್ರುಘ್ನಂ ವಿವ್ಯಧುಶ್ಶರೈಃ ।
ತಂ ಚಾಪಿ ವಿರಥಂ ಕೃತ್ವಾ ದುದ್ರುವುರ್ಲಕ್ಷ್ಮಣಂ ನೃಪಾಃ ॥ ೪೦ ॥

ವವರ್ಷುರ್ನಿಶಿತೈರ್ಬಾಣೈಶ್ಚಕ್ರುಸ್ತಂ ವ್ಯಾಕುಲಂ ರಣೇ ।
ತಥೈವ ರಾಘವಂ ಚಾಪಿ ಶರೈರಾಚ್ಛಾದಯನ್ನೃಪಾಃ ॥ ೪೧ ॥

ತತಶ್ಶ್ರೀರಾಮಚಂದ್ರೋಽಪಿ ಲೀಲಯಾ ಸಮರಾಂಗಣೇ ।
ಪಶ್ಯತ್ಸು ಜಾಲರಂಧ್ರೈಶ್ಚ ಕೌಸಲ್ಯಾದ್ಯಾಸು ಮಾತೃಷು ॥ ೪೨ ॥

---

೩೯. ಆ ರಾಜರೆಲ್ಲರೂ ಸೇರಿಕೊಂಡು ಭರತನನ್ನು ಬಾಣದಿಂದ ಹೊಡೆದು ಮೂರ್ಛೆ ಬರುವಂತೆ ಮಾಡಿದರು. ಇದರಿಂದ ಆ ಭರತನು ಮೂರ್ಛಿತನಾಗಿ ನೆಲದಮೇಲೆ ಬಿದ್ದನು.

೪೦. ಭರತನು ಕೆಳಗೆ ಬಿದ್ದುದನ್ನು ನೋಡಿ ಶತ್ರುಘ್ನನನ್ನು ಬಾಣಗಳಿಂದ ಹೊಡೆದರು. ಅದರಿಂದ ಶತ್ರುಘ್ನನ ರಥವೆಲ್ಲವೂ ಪುಡಿಪುಡಿಯಾಯಿತು. ಅನಂತರ ಅವರೆಲ್ಲರೂ ಲಕ್ಷ್ಮಣನ ಮೇಲೆ ಬಿದ್ದರು.

೪೧. ಬಲವಾದ ಬಾಣಗಳನ್ನು ಅವನಮೇಲೆ ಬಿಡುತ್ತ ಅವನನ್ನೂ ದುಃಖಿತನನ್ನಾಗಿ ಮಾಡಿದರು. ಅದೇ ರೀತಿಯಲ್ಲಿ ಶ್ರೀರಾಮನಿಗೂ ಬಾಣಗಳಿಂದ ಹೊಡೆಯುತ್ತ ಅವನನ್ನೂ ಬಾಣಗಳಿಂದ ಮುಚ್ಚಿದರು.

೪೨. ಅನಂತರ ಶ್ರೀರಾಮಚಂದ್ರನು ಬಹುಲೀಲೆಯಿಂದಲೇ ಅವರೊಡನೆ ಯುದ್ಧಮಾಡಲು ಮೊದಲು ಮಾಡಿದನು. ಆಗ ಎಲ್ಲರೂ ಅದನ್ನೇ ನೋಡುತ್ತಿದ್ದರು. ಕೌಸಲ್ಯೆಯೇ ಮುಂತಾದ ಅಂತಃಪುರ ಸ್ತ್ರೀಯರು ಕಿಟಕಿಗಳಿಂದ ಆ ಯುದ್ಧವನ್ನು ನೋಡುತ್ತಿದ್ದರು.

ಸೀತಯಾ ಭ್ರಾತೃಪತ್ನೀಷು ಪಿತ್ರಾ ಮಂತ್ರಿಕುಲೇಷ್ವಪಿ ।
ಟಣತ್ಕೃತ್ಯ ಮಹಚ್ಚಾಪಂ ವಾಯವ್ಯಾಸ್ತ್ರೇಣ ತಾನ್ ನೃಪಾನ್ ॥ ೪೩ ॥

ಶುಷ್ಕಪರ್ಣವದುದ್ಧೂಯ ಪ್ರಾಕ್ಷಿಪದಬ್ಧಿರೋಧಸಿ ।
ಮೋಹನಾಸ್ತ್ರೇಣ ಶೇಷಾನ್ ಹಿ ಮೋಹಯಾಮಾಸ ರಾಘವಃ ॥ ೪೪ ॥

ಲುಲುಂಠ ಸಕಲಂ ಸೈನ್ಯಂ ಹಸ್ತ್ಯಶ್ವರಥಸಂಕುಲಂ ।
ತತೋ ಮೂರ್ಛಿತಮಾಲೋಕ್ಯ ಭರತಂ ಕೈಕಯೀರಣೇ ॥ ೪೫ ॥

ಕರಿಣ್ಯಾಶ್ಶೀಘ್ರಮುತ್ಪ್ಲುತ್ಯ ಶುಶೋಚಾಂಕೇ ನಿಧಾಯ ತಂ ।
ತತೋ ದಶರಥಶ್ಚಾಪಿ ಕೌಸಲ್ಯಾದ್ಯಾ ನೃಪಸ್ತ್ರಿಯಃ ॥ ೪೬ ॥

---

೪೩. ಅಲ್ಲದೆ ಸೀತೆಯೂ ಲಕ್ಷ್ಮಣ ಭರತ ಶತ್ರುಘ್ನರ ಹೆಂಡತಿಯರೂ ದಶರಥನೂ ಮಂತ್ರಿಗಳೂ ಆ ರಾಮನನ್ನೇ ನೋಡುತ್ತಿದ್ದರು. ಒಡನೆಯೇ ರಾಮನು ಬಿಲ್ಲನ್ನು ಒಂದುಸಾರಿ ಬಡಿದು ಟಂಕಾರಮಾಡಿಸಿ ಅದಕ್ಕೆ ವಾಯವ್ಯಾಸ್ತ್ರವನ್ನು ಹೂಡಿದನು.

೪೪. ಆ ವಾಯವ್ಯಾಸ್ತ್ರದಿಂದ ಅವರನ್ನೆಲ್ಲಾ ಗಾಳಿಗೆ ಒಣಗಿದ ಎಲೆಗಳು ಹಾರಿಹೋಗುವಂತೆ ಹಾರಿಸಿ ಸಮುದ್ರದ ದಡದಲ್ಲಿ ಕೆಡಗಿದನು. ಉಳಿದಸೈನ್ಯದವರನ್ನು ಮೋಹನಾಸ್ತ್ರವನ್ನು ಬಿಟ್ಟು ಜ್ಞಾನತಪ್ಪುವಂತೆ ಮಾಡಿದನು.

೪೫. ಈ ಮೋಹನಾಸ್ತ್ರದಿಂದ ಜ್ಞಾನ ತಪ್ಪಿಬಿದ್ದ ಆನೆ ಕುದುರೆ ರಥಗಳಿಂದ ಕೂಡಿದ ಸೈನ್ಯವು ನೆಲದಮೇಲೆ ಬಿದ್ದು ಒದ್ದಾಡಲು ಮೊದಲುಮಾಡಿತು. ಆಗ ಯುದ್ಧರಂಗದಲ್ಲಿ ಮೂರ್ಛಿತನಾಗಿ ಬಿದ್ದಿರುವ ಭರತನನ್ನು ಕೈಕೇಯಿಯು ನೋಡಿದಳು.

೪೬. ಒಡನೆಯೇ ಆನೆಯಿಂದ ಕೆಳಗಿಳಿದು ಭರತನ ಬಳಿಗೆ ಬಂದು ಅವನನ್ನು ತೊಡೆಯಮೇಲಿಟ್ಟುಕೊಂಡು ದುಃಖಿಸಲು ಮೊದಲು ಮಾಡಿದಳು. ಅಂತೆಯೇ ದಶರಥನೂ ಕೌಸಲ್ಯೆಯೇ ಮುಂತಾದ ರಾಣಿಯರೂ ಅಳತೊಡಗಿದರು.

ಸಾಂತ್ವಯಿತ್ವಾಥ ತಾನ್ರಾಮಸ್ಸೌಮಿತ್ರಿಂ ಪ್ರಾಹ ವೇಗತಃ ।
ಇತೋ ವಿದೂರೇ ಸೌಮಿತ್ರೇ ಮುದ್ಗಲಸ್ಯ ತಪೋನಿಧೇಃ ॥ ೪೭ ॥

ಆಶ್ರಮೋಸ್ತಿ ಹಿ ತತ್ರ ತ್ವಂ ಗತ್ವಾ ವಲ್ಲೀಶ್ಚೌಷಧೀಃ ।
ಸಂಜೀವಿನ್ಯಾದಿಕಾಸ್ಸರ್ವಾಶ್ಶೀಘ್ರಮಾನಯ ಲಕ್ಷ್ಮಣ ॥ ೪೮ ॥

ಮುನೇಸ್ತಪಪ್ರಭಾವೇನ ಬಹವಸ್ಸಂತಿ ತತ್ರ ವೈ ।
ತಥೇತಿ ಲಕ್ಷ್ಮಣೋ ಗತ್ವಾ ಸ್ಯಂದನಸ್ಥಸ್ತ್ವರಾನ್ವಿತಃ ॥ ೪೯ ॥

ಅವರುಹ್ಯ ರಥಾದ್ವೀರಸ್ಸಂವಿವೇಶಾಶ್ರಮಂ ಮುನೇಃ ।
ನಿವಾರಿತಸ್ಸವಟುಭಿಸ್ಸಮಾಧಿವಿರಮೋ ಮುನೇಃ ॥ ೫೦ ॥

---

೪೭. ಆಗ ರಾಮನು ಇದನ್ನು ನೋಡಿ ಅವರೆಲ್ಲರನ್ನೂ ಸಮಾಧಾನ ಪಡಿಸಿ ಬೇಗನೆ ಲಕ್ಷ್ಮಣನನ್ನು ಕರೆದು ಅವನಿಗಿಂತೆಂದನು. ಎಲೈ ಸೌಮಿತ್ರಿಯೆ ! ಇಲ್ಲಿಗೆ ಹತ್ತಿರದಲ್ಲಿಯೇ ಮುದ್ಗಲಋಷಿಯ ಆಶ್ರಮವಿರುವುದು.

೪೮. ಅಲ್ಲಿಗೆ ನೀನು ಹೋಗು ಅಲ್ಲಿ ಅನೇಕವಾದ ಗಿಡಬಳ್ಳಿಗಳಿವೆ. ಅವೆಲ್ಲವೂ ಉತ್ತಮವಾದುವು. ಅಲ್ಲಿರುವ ಆ ಸಂಜೀವಿನಿಯೇ ಮುಂತಾದುವು ಗಳನ್ನು ತೆಗೆದುಕೊಂಡು ಬಾ.

೪೯. ಆ ಮುನಿಯ ತಪಸ್ಸಿನ ಪ್ರಭಾವದಿಂದ ಅನೇಕ ಗಿಡಮೂಲಿಕೆಗಳು ಅಲ್ಲಿವೆ. ಎಂದು ರಾಮನು ಹೇಳಿದುದನ್ನು ಕೇಳಿ ಲಕ್ಷ್ಮಣನು ಹಾಗೆಯೇ ಆಗಲೆಂದು ಒಡನೆಯೇ ರಥದಲ್ಲಿ ಕುಳಿತುಕೊಂಡನು.

೫೦. ಆ ಮುದ್ಗಲನ ಆಶ್ರಮಕ್ಕೆ ಹೋಗಿ ಅಲ್ಲಿ ರಥದಿಂದ ಇಳಿದು ಋಷಿಯ ಬಳಿಗೆ ಹೋದನು. ಆಗ ಅಲ್ಲಿ ಆ ಋಷಿಯು ಸಮಾಧಿಯಲ್ಲಿರಲು ಶಿಷ್ಯರು ಋಷಿಯನ್ನು ಮಾತನಾಡಿಸಬೇಡವೆಂದರು.

ಯಾಚ್ನಾಂ ಕೃತ್ವಾ ಶುಭಾ ವಲ್ಲೀಃ ಪ್ರಾಪ್ಸ್ಯಸೇ ತ್ವಂ ನ ಚಾನ್ಯಥಾ ।
ಕಾಲಾತಿಕ್ರಮಭೀತ್ಯಾ ಸ ಲಕ್ಷ್ಮಣೋಥ ರಘೂತ್ತಮಂ ॥ ೫೧ ॥

ವೃತ್ತಂ ನಿವೇದಯಾಮಾಸ ಪುನಸ್ತಂ ರಾಘವೋಬ್ರವೀತ್ ।
ನಿವಾರಯಿತ್ವಾ ವಟುಕಾ೯ ವಿನಾ ಶಸ್ತ್ರೈಸ್ತ್ವರಾನ್ವಿತಃ ॥ ೫೨ ॥

ಆನಯ ತ್ವಂ ಶುಭಾ ವಲ್ಲೀರ್ಮಾ ಶಂಕಾಂ ಚ ಮುನೇಃ ಕುರು ।
ಸೋಽಪಿ ರಾಮಾಜ್ಞಯಾ ಗತ್ವಾ ನಿವಾರ್ಯ ವಟುಕಾ೯ ಕ್ಷಣಾತ್ ॥ ೫೩ ॥

ಬಲಾತ್ಕಾರೇಣ ತಾಂ ವಲ್ಲೀಂ ಗೃಹೀತ್ವಾ ರಾಮಮಾಗತಃ ।
ಭರತಂ ಜೀವಯಾಮಾಸ ವಿಶಲ್ಯಂ ಕೃತ್ಯ ಸಾನುಜಂ ॥ ೫೪ ॥

---

೫೧. ಅನಂತರ ಆತನು ಸಮಾಧಿಯಿಂದ ವಿರತನಾಗುವವರೆಗೂ ಇದ್ದು ಅವನನ್ನು ಕೇಳಿದರೆ ಅವು ನಿನಗೆ ಸಿಕ್ಕುತ್ತವೆ. ಇಲ್ಲದಿದ್ದರೆ ನಿನಗೆ ಅವು ದೊರೆಯಲಾರವು ಎಂದೂ ಹೇಳಿದರು. ಆಗ ಲಕ್ಷ್ಮಣನಿಗೂ ಹೊತ್ತಾಗುವುದೆಂಬ ಹೆದರಿಕೆಯು ಹೆಚ್ಚಿತು.

೫೨. ಲಕ್ಷ್ಮಣನು ಮತ್ತೆ ರಾಮನ ಬಳಿಗೆ ಬಂದು ನಡೆದ ವಿಷಯ ವೆಲ್ಲವನ್ನೂ ತಿಳಿಸಿದನು. ಅದಕ್ಕೆ ರಾಮನು ಎಲೈ ಲಕ್ಷ್ಮಣನೆ! ನೀನು ಅಲ್ಲಿಗೆ ಹೋಗಿ ಆ ವಟುಗಳು ಸುಮ್ಮನಿರುವಂತೆ ಮಾಡು. ಶಸ್ತ್ರವನ್ನು ಉಪಯೋಗಿಸ ಬೇಡ.

೫೩. ಆ ಮುನಿಯಿಂದ ನೀನು ಹೆದರಬೇಕಾಗಿಲ್ಲ. ಆ ಮೂಲಿಕೆಗಳನ್ನು ತೆಗೆದುಕೊಂಡು ಬೇಗಬಾ! ಎಂದು ಹೇಳಲು ರಾಮನ ಮಾತಿನಮೇಲೆ ಲಕ್ಷ್ಮಣನು ಮತ್ತೆ ಹೋಗಿ ಆ ವಟುಗಳನ್ನು ಕ್ಷಣಕಾಲದಲ್ಲಿಯೇ ಓಡಿಸಿದನು.

೫೪. ಹೀಗೆ ಬಲಾತ್ಕಾರದಿಂದಲೇ ಲಕ್ಷ್ಮಣನು ಆ ಮೂಲಿಕೆಯನ್ನು ತೆಗೆದುಕೊಂಡು ರಾಮನಬಳಿಗೆ ಬಂದನು. ಆಗ ಶ್ರೀರಾಮನು ಮೂಲಿಕೆಗಳನ್ನು ಉಪಯೋಗಿಸಿ ಬಾಣಗಳನ್ನು ಕಿತ್ತು ವಿಶಲ್ಯೆಯೆಂಬ ಮೂಲಿಕೆಯಿಂದ ನೋವಿಲ್ಲ ದಂತೆ ಮಾಡಿದನು. ಮತ್ತು ಸಂಜೀವಿನಿ ಮೂಲಿಕೆಯಿಂದ ಜೀವಂತ ನನ್ನಾಗಿಯೂ ಮಾಡಿದನು. ಅಂತೆಯೇ ಶತ್ರುಘ್ನನನ್ನೂ ಬದುಕಿಸಿದನು.

ತತಸ್ಸಮುತ್ಥಿತಂ ದೃಷ್ಟ್ವಾ ಕೈಕೇಯೀ ಭರತಂ ಮುದಾ ।
ಸಂತೋಷಂ ಪರಮಂ ಚಕ್ರೇ ಕೈಕೇಯೀಂ ಪಿತರಂ ತದಾ ॥ ೫೫ ॥

ರಾಘವಂ ಸಾ ಸಮಾಲಿಂಗ್ಯ ಭರತಂ ಪರಿಷಸ್ವಜೇ ।
ತತೋ ರಾಜಾತಿಸಂತುಷ್ಟಸ್ಸಮಾಲಿಂಗ್ಯ ರಘೂತ್ತಮಂ ॥ ೫೬ ॥

ಹರ್ಷಾನ್ನಾನೋತ್ಸವಾಂಸ್ತತ್ರ ಚಕಾರ ಗುರುಣಾ ದ್ವಿಜೈಃ ।
ತತಸ್ತೇ ವಟವಸ್ಸರ್ವೇ ಹಾಹಾಕೃತ್ಯ ಮುನೀಶ್ವರಂ ॥ ೫೭ ॥

ವೃತ್ತಂ ನಿವೇದಯಾಮಾಸುಸ್ಸಮಾಧಿವಿರಮೇ ಮುನೇಃ ।
ಸ ಮುದ್ಗಲೋಪಿ ತಚ್ಛ್ರುತ್ವಾ ವಿಸ್ಮಯೇನಾಬ್ರವೀದ್ವಟೂನ್ ॥ ೫೮ ॥

೫೫-೫೬. ಭರತನು ಮೇಲಕ್ಕೇಳಲು ಕೈಕೇಯಿಯೂ ದಶರಥನೂ ಬಹುವಾಗಿ ಸಂತೋಷಪಟ್ಟರು ಕೈಕೇಯಿಯು ಸಂತೋಷದಿಂದ ಮೊದಲು ರಾಮನನ್ನು ಆಲಂಗಿಸಿಕೊಂಡು ಅನಂತರ ಮಗನಾದ ಭರತನನ್ನು ಆಲಿಂಗಿಸಿ ಕೊಂಡಳು. ಅನಂತರ ದಶರಥನೂ ಬಹುವಾಗಿ ಸಂತೋಷಗೊಂಡು ರಾಮನನ್ನು ಆಲಿಂಗಿಸಿಕೊಂಡನು.

೫೭. ಮತ್ತು ದಶರಥನು ಹರ್ಷದಿಂದ ಗುರುವಿನೊಡನೆ ಆವನು ಹೇಳಿದಂತೆ ಬಗೆ ಬಗೆಯಾದ ಉತ್ಸವಗಳನ್ನು ಸಂತೋಷದಿಂದ ಮಾಡಿದನು. ಇತ್ತ ವಟುಗಳೆಲ್ಲರೂ ಹಾ ! ಹಾ ! ಎಂದು ಕೂಗಿಕೊಳ್ಳುತ್ತ ಆ ಮುದ್ಗಲ ಮುನಿಗೆ ವಿಷಯವನ್ನು ತಿಳಿಸಿದರು.

೫೮. ಸಮಾಧಿಯು ಮುಗಿದಮೇಲೆ ಈ ವಿಷಯಗಳೆಲ್ಲವನ್ನೂ ಆ ಮುದ್ಗಲನು ಕೇಳಿದನು. ಇದೆಲ್ಲವನ್ನೂ ಕೇಳಿ ಬಹು ಆಶ್ಚರ್ಯಪಟ್ಟನು. ವಟುಗಳನ್ನು ಕುರಿತು ಇಂತೆಂದನು.

ಕೋ ಲಕ್ಷ್ಮಣಃ ಕಿಮರ್ಥಂ ಕಸ್ಯಾಜ್ಞಯಾ ಸೋಽಹರದ್ದ್ರುತಂ ।
ವಿದಿತ್ವಾ ಸಕಲಂ ವೃತ್ತಂ ಆಗಚ್ಛಧ್ವಂ ತ್ವರಾನ್ವಿತಾಃ ॥ ೫೯ ॥

ತಥೇತಿ ತೇ ದಶರಥಂ ಗತ್ವಾ ಪ್ರೋಚುಸ್ತ್ವರಾನ್ವಿತಾಃ ।
ಕಸ್ತ್ವಂ ಕಿಮರ್ಥಮಾನೀತಾ ವಲ್ಲ್ಯೋ ಲಕ್ಷ್ಮಣಹಸ್ತತಃ ॥ ೬೦ ॥

ತಾನ್ ದೃಷ್ಟ್ವಾ ಕ್ರೋಧಸಂಯುಕ್ತಾನ್ ರಾಜಾಚಿಂತಾತುರೋಽಬ್ರವೀತ್ ।
ಅಹಂ ದಶರಥೋ ವಲ್ಲ್ಯೋ ಭರತಾರ್ಥಂ ಮಮಾಜ್ಞಯಾ ॥ ೬೧ ॥

ಆನೀತಾ ಮುನಯೋ ಸರ್ವಂ ಬ್ರುವಧ್ವಂ ನತಿಪೂರ್ವಕಾಃ ।
ಅಹಮಪ್ಯಾಗಮಿಷ್ಯಾಮಿ ಮುನಿಂ ಸಾಂತ್ವಯಿತುಂ ಜವಾತ್ ॥ ೬೨ ॥

---

೫೯. ಲಕ್ಷ್ಮಣನೆಂಬುವ ಆತನು ಯಾರು? ಏತಕ್ಕೆ ತೆಗೆದುಕೊಂಡು ಹೋದನು? ಯಾರ ಅಪ್ಪಣೆಯಂತೆ ಬಂದಿದ್ದನು? ತೆಗೆದುಕೊಂಡು ಹೋಗಲು ಕಾರಣವೇನು? ಎಂಬುದೆಲ್ಲವನ್ನೂ ತಿಳಿದುಕೊಂಡು ಬೇಗನೆ ಬನ್ನಿರಿ. ಎಂದು ಹೇಳಿ ಕಳುಹಿಸಿದನು.

೬೦. ಹಾಗೆಯೇ ಆಗಲೆಂದು ಆ ವಟುಗಳು ದಶರಥನ ಬಳಿಗೆ ಹೋಗಿ ಇಂತೆಂದರು. ಅಯ್ಯಾ! ನೀನು ಯಾರು? ಈ ಮೂಲಿಕೆಗಳನ್ನೇಕೆ ಲಕ್ಷ್ಮಣನ ಕೈಯ್ಯಲ್ಲಿ ತರಿಸಿದೆ?

೬೧. ಎಂದು ಕೋಪದಿಂದ ಆ ವಟುಗಳು ಕೇಳುತ್ತಿರಲು ದಶರಥನು ಚಿಂತೆಗೊಳಗಾಗಿ ಇಂತೆಂದನು. ನಾನು ದಶರಥನೆಂಬ ರಾಜನು. ಭರತನನ್ನು ಬದುಕಿಸಲು ಲಕ್ಷ್ಮಣನ ಕೈಯ್ಯಿಂದ ಆ ಮೂಲಿಕೆಗಳನ್ನು ತರಿಸಿದೆನು.

೬೨. ಈ ವಿಷಯುಗಳೆಲ್ಲವನ್ನೂ ಆ ಋಷಿಗಳಿಗೆ ನಮಸ್ಕರಿಸಿ ವಿನಯದಿಂದ ಹೇಳಿರಿ! ನಾನೂ ಕೂಡ ಆ ಋಷಿಯನ್ನು ಸಮಾಧಾನಪಡಿಸಲು ಬೇಗನೆ ಬರುತ್ತೇನೆ.

ತತಸ್ತೇ ಮುನಯಸ್ಸರ್ವೇ ನೃಪನಾಮಾನ್ಯವರ್ಣಯನ್ ।
ಶ್ರುತ್ವಾ ರಾಮಸ್ಯ ಪಿತರಂ ಕ್ರೋಧಂ ಸಂಹೃತ್ಯ ವೇಗತಃ ॥ ೬೩ ॥

ದರ್ಶನಾರ್ಥಂ ಮತಿಂ ಚಕ್ರೇ ತಾವದ್ದೃಷ್ಟೋ ನೃಪಃ ಪುರಃ ।
ಬದ್ಧಕರಸಂಪುಟಂ ತಂ ಪ್ರಣಮಂತಂ ನೃಪೋತ್ತಮಂ ॥ ೬೪ ॥

ಪ್ರಾರ್ಥಯಂತಂ ಸಮುತ್ಥಾಪ್ಯ ಪೂಜಯಾಮಾಸ ಸಾದರಂ ।
ರಾಮಾದ್ಯಾ ನೃಪಪುತ್ರಾಶ್ಚ ಕೌಸಲ್ಯಾದ್ಯಾ ನೃಪಸ್ತ್ರಿಯಃ ॥ ೬೫ ॥

ಪ್ರಣಮ್ಯಾಥ ಮುನಿಂ ಸ್ತುತ್ವಾ ತಸ್ಥುರ್ಮುದ್ಗಲಭಾರ್ಯಯಾ ।
ಸುಮತ್ಯಾ ಪೂಜಿತಾಸ್ಸರ್ವಾ ರಾಜದಾರಾ ವಿಶೇಷತಃ ॥ ೬೬ ॥

---

೬೩. ಇಂತೆನ್ನಲು ಅನಂತರ ಆ ವಟುಗಳು ಮುನಿಯ ಬಳಿಗೆ ಬಂದು ಆ ರಾಜನ ಹೆಸರನ್ನೂ ಏತಕ್ಕೆ ಎಂಬುದೇ ಮುಂತಾದ ಎಲ್ಲವನ್ನೂ ಹೇಳಿದರು. ಈ ಋಷಿಯು ದಶರಥನು ರಾಮನ ತಂದೆಯೆಂದು ತಿಳಿದ ಒಡನೆಯೇ ತನ್ನ ಕೋಪವನ್ನು ಸಮಾಧಾನಮಾಡಿಕೊಂಡನು.

೬೪ ಋಷಿಯು ತಾನೇ ಹೋಗಿ ನೋಡಿಕೊಂಡು ಬರಬೇಕೆಂದು ಯೋಚಿಸುತ್ತಿರಲು ಅಷ್ಟರಲ್ಲಿಯೇ ಆ ದಶರಥನು ಎದುರಿಗೆ ಬಂದನು. ಮತ್ತು ಕೈಮುಗಿದುಕೊಂಡು ನಮಸ್ಕರಿಸಿದನು.

೬೫. ತಾನು ಮಾಡಿದ ತಪ್ಪನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತಿದ್ದನು. ಆ ರಾಜನನ್ನು ಮುದ್ಗಲನು ಎಬ್ಬಿಸಿ ಆದರದಿಂದ ಸತ್ಕಾರಮಾಡಿದನು. ಅಲ್ಲದೆ ರಾಮ ಲಕ್ಷ್ಮಣ ಭರತ ಶತ್ರುಘ್ನರನ್ನೂ ಕೌಸಲ್ಯೆಯೇ ಮುಂತಾದ ರಾಣಿಯರನ್ನೂ ಸತ್ಕರಿಸಿದನು.

೬೬. ಅನಂತರ ಅವರೆಲ್ಲರೂ ಮುನಿಗೆ ನಮಸ್ಕರಿಸಿ ಸ್ತುತಿಸಿದರು. ಮುದ್ಗಲನ ಹೆಂಡತಿಯಾದ ಸುಮತಿಯು ಆ ರಾಣಿಯರನ್ನೆಲ್ಲಾ ವಿಶೇಷ ರೀತಿಯಿಂದ ಗೌರವಿಸಿದಳು.

ತತೋ ದಶರಥಃ ಪ್ರಾಹ ಮುನಿಂ ಸ್ತುತ್ವಾ ಪುನಃ ಪುನಃ ।
ಮಯಾಪರಾಧಿತಂ ರಾಜ್ಞಾ ಕ್ಷಮ್ಯತಾಂ ತತ್ತ್ವಯಾ ಮುನೇ ॥ ೬೭ ॥

ಮುನಿರ್ದಶರಥಂ ಪ್ರಾಹ ಹ್ಯುಪಕಾರೋ ಮಹಾನ್ ಕೃತಃ ।
ನೋಚೇತ್ಕಥಂ ದರ್ಶನಂ ಮೇ ಧ್ಯಾನಸ್ಥಸ್ಯ ಸುತಸ್ಯ ತೇ ॥ ೬೮ ॥

ಶ್ರೀರಾಮಸ್ಯ ಸಸೀತಸ್ಯ ನೃವೇಷಸ್ಯ ಹಿ ಮಾಯಯಾ ।
ಇತಿ ತಸ್ಯ ವಚಶ್ಶ್ರುತ್ವಾ ದೃಷ್ಟ್ವಾ ತುಷ್ಟಂ ಮುನೀಶ್ವರಂ ॥ ೬೯ ॥

ಉವಾಚ ನೃಪತಿರ್ನತ್ವಾ ಕಿಂಚಿತ್ಪ್ರಷ್ಟುಮನಾ ಮುನಿಂ ।
ಜ್ಞಾತ್ವಾ ನೃಪಸ್ಯ ಸ ಮುನಿರ್ಹೃದ್ಗತಂ ಪ್ರಷ್ಟುಕಾಮುಕಂ ॥ ೭೦ ॥

---

೬೭. ದಶರಥನು ಮುನಿಯನ್ನು ಸ್ತುತಿಸುತ್ತ ಎಲೈ ಋಷಿಶ್ರೇಷ್ಠನೆ! ನಾನು ರಾಜನಾದರೂ ತಪ್ಪುಮಾಡಿದೆನು. ಅದನ್ನು ದಯವಿಟ್ಟು ಕ್ಷಮಿಸು. ಎಂದನು.

೬೮. ಅದಕ್ಕೆ ಆ ಮುನಿಯು ದಶರಥನನ್ನು ಕುರಿತು ಎಲೈ ದಶರಥನೆ! ನೀನು ನನಗೆ ಬಹುವಾದ ಉಪಕಾರವನ್ನು ಮಾಡಿದೆ. ನೀನು ಹಾಗೆ ಮಾಡದಿದ್ದರೆ ಧ್ಯಾನದಲ್ಲಿರುವ ನನಗೆ ನಿನ್ನ ಮಗನಾದ ರಾಮನ ದರ್ಶನವು ಹೇಗೆ ತಾನೆ ಆಗುತ್ತಿದ್ದಿತು?

೬೯. ನೀನು ಹಾಗೆ ಮಾಡದಿದ್ದರೆ ಮಾಯೆಯಿಂದ ಮನುಷ್ಯದೇಹವನ್ನು ಹೊಂದಿರುವ ಸೀತೆಯು ಮತ್ತು ರಾಮರ ದರ್ಶನವು ಖಂಡಿತವಾಗಿಯೂ ಆಗುತ್ತಿರಲಿಲ್ಲ. ಎಂದು ಈ ಋಷಿಯು ಹೇಳಲು ದಶರಥನು ಈ ಋಷಿಯು ಕೋಪಗೊಳ್ಳದೆ ಸಂತೋಷಗೊಂಡನೆಂದು ತಿಳಿದನು.

೭೦. ಅನಂತರ ದಶರಥನು ಮತ್ತೆ ಋಷಿಗೆ ನಮಸ್ಕರಿಸಲು ದಶರಥನು ಏನನ್ನೋ ಕೇಳಬೇಕೆಂದಿರುವನು ಎಂಬುದನ್ನು ಮುನಿಯು ತಿಳಿದುಕೊಂಡನು. ಮತ್ತು ದಶರಥನು ತನ್ನ ಭಾವವನ್ನು ಅರಿಕೆಮಾಡಿಕೊಂಡನು.

ಏಕಾಂತೇ ತುಲಸೀಖಂಡೇ ನೀತ್ವಾ ತಂ ನೃಪಮೇವ ಸಃ ।
ಪಪ್ರಚ್ಛ ಕಿಂ ತೇ ವಾಂಛಾಸ್ತಿ ವದಸ್ವ ಕಥ್ಯತೇ ಮಯಾ ॥ ೭೧ ॥

ತಮಬ್ರವೀದ್ದಶರಥಃ ಶ್ರೀರಾಮಸ್ಯ ಹಿ ಭಾವಿ ಯತ್ ।
ಹಿತಾಹಿತಂ ಸವಿಸ್ತಾರಂ ಜ್ಞಾತುಮಿಚ್ಛೇ ಮುನೀಶ್ವರ ॥ ೭೨ ॥

ನೃಪಸ್ಯ ವಚನಂ ಶ್ರುತ್ವಾ ರಾಜಾನಂ ಮುನಿರಬ್ರವೀತ್ ॥ ೭೩ ॥

॥ ಮುದ್ಗಲ ಉವಾಚ ॥

ಸಾಕ್ಷಾನ್ನಾರಾಯಣೋ ವಿಷ್ಣುಸ್ಸರ್ವವ್ಯಾಪೀ ಜನಾರ್ದನಃ ।
ಭೂಭಾರಹರಣಾರ್ಥಾಯ ತವಾಪಿ ವರದಾನತಃ ॥ ೭೪ ॥

ಅವತೀರ್ಣೋಽಸ್ತಿ ತ್ವತ್ತೋ ಹಿ ತವ ಪುಣ್ಯಮಹೋದಯಾತ್ ।
ಅಧರ್ಮಸ್ಯ ವಿನಾಶಂ ಚ ವೃದ್ಧಿಂ ಧರ್ಮಸ್ಯ ಸಾದರಂ ॥ ೭೫ ॥

---

೭೧ ಆಗ ಋಷಿಯು ದಶರಥನನ್ನು ಯಾರೂ ಇಲ್ಲದಿರುವ ತುಳಸಿಯ ವನಕ್ಕೆ ಕರೆದುಕೊಂಡು ಹೋದನು. ಅಲ್ಲಿ ಅವನು ಎಲೈ ದೊರೆಯೆ! ಏನನ್ನು ಕೇಳಬೇಕೆಂದಿದ್ದೀಯೆ? ಕೇಳು. ಅವೆಲ್ಲವನ್ನೂ ಹೇಳುತ್ತೇನೆ. ಎಂದನು.

೭೨-೭೩. ಅದಕ್ಕೆ ದಶರಥನು ಎಲೈ ಮುನಿಯೆ! ಈ ಶ್ರೀರಾಮನ ಮುಂದಿನ ಶುಭಾಶುಭಗಳನ್ನು ತಿಳಿಯಲು ನನಗೆ ಬಹುವಾದ ಆಸೆಯಿರುವುದು. ಎಂಬುದಾಗಿ ಹೇಳಿದನು. ಈ ದಶರಥನು ಹೀಗೆ ಹೇಳಿದುದನ್ನು ಮುನಿಯು ಕೇಳಿ ಇಂತೆಂದನು.

೭೪. ಮುದ್ಗಲನು ಹೇಳಿದನು—ಸರ್ವವ್ಯಾಪಿಯೂ ಜನಾರ್ದನನೂ ಆದ ನಾರಾಯಣನೇ ಭೂಭಾರವನ್ನು ನಾಶಮಾಡುವುದಕ್ಕೂ ನಿನಗೆ ವರದಾನ ಮಾಡಿದ್ದಂತೆಯೂ ಈ ಭೂಮಿಯಲ್ಲಿ ಅವತರಿಸಿರುವನು.

೭೫. ನಿನ್ನ ಮಹಾಪುಣ್ಯದಿಂದಲೇ ನಿನ್ನಲ್ಲಿ ಇವನು ಹುಟ್ಟಿರುವನು. ಅವನು ಅಧರ್ಮದ ವಿನಾಶವನ್ನೂ ಧರ್ಮದ ಉದ್ಧಾರವನ್ನೂ ಮಾಡುವನು.

ನಿರ್ದ್ಧಾಳನಂ ಹಿ ದುಷ್ಟಾನಾಂ ಸಜ್ಜನಾನಾಂ ಚ ಪಾಲನಂ ।
ಕರಿಷ್ಯತಿ ಮಹಾನೇಷ ತವ ಪುತ್ರೋ ರಘೂತ್ತಮಃ ॥ ೭೬ ॥

ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
ಕರಿಷ್ಯತಿ ಮಹದ್ರಾಜ್ಯಂ ಗತೇ ತ್ವಯಿ ದಿವಂ ನೃಪ ॥ ೭೭ ॥

ಸಪ್ತದ್ವೀಪಪತಿಶ್ಚಾಯಂ ಭವಿಷ್ಯತಿ ನೃಪೋ ಮಹಾನ್ ।
ದ್ವೌ ತೌ ಭವಿಷ್ಯತಃ ಪುತ್ರೌ ಚತಸ್ರಶ್ಚ ಸ್ನುಷಾಸ್ತಥಾ ॥ ೭೮ ॥

ಚತುರ್ವಿಂಶತಿಪೌತ್ರಾಶ್ಚ ಪೌತ್ರ್ಯಸ್ತು ದ್ವಾದಶೈವ ಹಿ ।
ಅಸಂಖ್ಯಾತಾಃ ಪ್ರಪೌತ್ರಾದ್ಯಾ ಭವಿಷ್ಯಂತಿ ಸುತಸ್ಯ ತೇ ।
ಕಿಯದ್ದಿನೈರಯಂ ವೃಂದಾಶಾಪಂ ಭೋಕ್ತುಂ ಹಿ ದಂಡಕೇ ॥ ೭೯ ॥

೭೬–೭೭. ದುಷ್ಟರನ್ನು ನಾಶಮಾಡುತ್ತಾನೆ. ಸಜ್ಜನರನ್ನು ಕಾಪಾಡುತ್ತಾನೆ. ನಿನ್ನ ಮಗನಾದ ರಾಮನು ಇಂತಹ ಉತ್ತಮನಾದ ಈ ಅವತಾರ ಪುರುಷನು. ನೀನು ಸತ್ತಮೇಲೆ ಹನ್ನೊಂದುಸಾವಿರ ವರ್ಷಗಳವರೆಗೂ ರಾಜ್ಯಭಾರ ಮಾಡುವನು.

೭೮. ಸಪ್ತದ್ವೀಪಗಳಿಗೂ ಈತನು ಚಕ್ರವರ್ತಿಯಾಗುವನು. ಇವನಿಗೆ ಇಬ್ಬರು ಮಕ್ಕಳಾಗುತ್ತಾರೆ. ನಾಲ್ಕುಜನ ಸೊಸೆಯರು ಬರುತ್ತಾರೆ.

೭೯. ಇಪ್ಪತ್ತುನಾಲ್ಕುಜನ ಗಂಡು ಮೊಮ್ಮಕ್ಕಳೂ ಹನ್ನೆರಡುಜನ ಹೆಣ್ಣು ಮೊಮ್ಮಕ್ಕಳೂ ಆಗುವರು. ಮರಿಮಕ್ಕಳಂತೂ ಬಹುವಾಗಿ ಲೆಕ್ಕವಿಲ್ಲದಷ್ಟು ಜನರಾಗುವರು. ಈ ರೀತಿಯಾಗಿ ನಿನ್ನ ಮಗನ ಭವಿಷ್ಯವು ಕಾಣಬರುತ್ತಿದೆ.

ಗಮಿಷ್ಯತಿ ತತಃ ಪಶ್ಚಾನ್ಮಹದ್ರಾಜ್ಯಂ ಕರಿಷ್ಯತಿ |
ತತ್ತಸ್ಯ ವಚನಂ ಶ್ರುತ್ವಾ ನೃಪಃ ಪ್ರಾಹ ಮುನಿಂ ಪುನಃ || ೮೦ ||

॥ ದಶರಥ ಉವಾಚ ॥

ಕಾ ವೃಂದಾ ಕಸ್ಯ ಭಾರ್ಯಾ ಸಾ ಕಥಂ ಶಪ್ತೋ ಹರಿಸ್ತಯಾ |
ತತ್ಸರ್ವಂ ವಿಸ್ತರೇಣೈವ ಕಥಯಸ್ವ ಮುನೀಶ್ವರ || ೮೧ ||

॥ ಮುದ್ಗಲ ಉವಾಚ ॥

ಪುರಾ ಜಲಂಧರೇಣಾಸೀತ್ ಯುದ್ಧಂ ಶ್ರೀಶಂಕರಸ್ಯ ಚ |
ವೃಂದಾಪಾತಿವ್ರತ್ಯಬಲಾ ದ್ರಕ್ಷಿತಂ ವಿಷ್ಣುನಾ ತದಾ || ೮೨ ||

ಜ್ಞಾತ್ವಾ ತದ್ದರ್ಶಿತಪಥಾ ಪಾರ್ವತ್ಯಾ ಧರ್ಷಣಾದಿನಾ |
ಜಾಲಂಧರಂ ಪುರಂ ಗತ್ವಾ ತದ್ದೈತ್ಯಪುಟಭೇದನಂ || ೮೩ ||

---

೮೦. ಇನ್ನು ಕೊಂಚದಿನಗಳಲ್ಲಿಯೇ ಅವತಾರಪುರುಷನಾದ ಈ ರಾಮನು ವೃಂದೆಯ ಶಾಪವನ್ನು ಅನುಭವಿಸಲು ದಂಡಕಾರಣ್ಯಕ್ಕೆ ಹೋಗುವನು. ಅನಂತರ ರಾಜ್ಯವನ್ನು ಅನುಭವಿಸುವನು. ಎನ್ನಲು ಈ ಮಾತನ್ನು ಕೇಳಿ ದಶರಥನು ಇಂತೆಂದನು.

೮೧. ದಶರಥನು ಹೇಳಿದನು—ಎಲೈ ಮುನಿಯೇ ! ಆ ವೃಂದೆಯೆಂಬು ವಳಾರು ? ಅವಳು ಯಾರ ಹೆಂಡತಿಯು ? ಅವಳು ಹರಿಗೆ ಶಾಪವನ್ನು ಕೊಡಲು ಕಾರಣವೇನು ? ಅದೆಲ್ಲವನ್ನೂ ವಿಸ್ತಾರವಾಗಿ ಹೇಳು.

೮೨. ಮುದ್ಗಲನು ಹೇಳಿದನು—ಹಿಂದೆ ಜಾಲಂಧರನಿಗೂ ಶಂಕರನಿಗೂ ಯುದ್ಧವು ನಡೆಯಿತು. ಆಗ ಆ ಜಲಂಧರನು ತನ್ನ ಹೆಂಡತಿಯಾದ ವೃಂದೆಯ ಪಾತಿವ್ರತ್ಯದ ಬಲದಿಂದ ಯುದ್ಧದಲ್ಲಿ ಸೋಲದಿದ್ದನು. ಇದು ವಿಷ್ಣುವಿಗೆ ತಿಳಿಯಿತು.

೮೩. ಆ ಜಾಲಂಧರನು ಮೋಸದಿಂದ ಪಾರ್ವತಿಯನ್ನು ರಮಿಸಲು ಹೋಗಿದ್ದನು. ಇದೇ ದಾರಿಯನ್ನು ಅನುಸರಿಸಿ ವಿಷ್ಣುವು ಜಾಲಂಧರನ ಪಟ್ಟಣಕ್ಕೆ ಹೋದನು.

ಪಾತಿವ್ರತ್ಯಸ್ಯ ಭಂಗಾಯ ವೃಂದಾಯಾಶ್ಚಾಕರೋನ್ಮತಿಂ ।
ಅಥ ವೃಂದಾರಕಾ ದೇವೀ ಸ್ವಪ್ನಮಧ್ಯೇ ದದರ್ಶ ಹ ॥ ೮೪ ॥

ಭರ್ತಾರಂ ಮಹಿಷಾರೂಢಂ ತೈಲಾಭ್ಯಕ್ತಂ ದಿಗಂಬರಂ ।
ದಕ್ಷಿಣಾಶಾಗತಂ ಮುಂಡಂ ತಮಸಾ ವ್ಯಾವೃತಂ ತದಾ ॥ ೮೫ ॥

ತತಃ ಪ್ರಬುದ್ಧಾ ಸಾ ಬಾಲಾ ತಂ ಸ್ವಪ್ನಂ ಸ್ವಂ ವಿಚಿನ್ವತೀ ।
ಕುತ್ರಾಪಿ ನಾಲಭಚ್ಛರ್ಮ ಗೋಪುರಾಟ್ಟಾಲಭೂಮಿಷು ॥ ೮೬ ॥

ತತಸ್ಸಖೀದ್ವಯಯುತಾ ನಗರೋದ್ಯಾನಮಾಗತಾ ।
ವನಾದ್ವನಾಂತರಂ ಯಾತಾ ದದರ್ಶಾತೀವ ಭೀಷಣೌ ॥ ೮೭ ॥

---

೮೪. ಅಲ್ಲಿ ಆ ವೃಂದೆಯ ಪಾತಿವ್ರತ್ಯವನ್ನು ನಾಶಮಾಡಲು ಮನಸ್ಸು ಮಾಡಿದನು. ಆಗ ಆ ವೃಂದೆಗೆ ಒಂದು ರೀತಿಯಾದ ಸ್ವಪ್ನವು ಕಂಡು ಬಂದಿತು.

೮೫. ಆ ಸ್ವಪ್ನದಲ್ಲಿ ವೃಂದೆಯು ತನ್ನ ಗಂಡನು ಕೋಣನಮೇಲೆ ಕುಳಿತಿರುವುದನ್ನೂ ಎಣ್ಣೆಯನ್ನು ಬಳಿದುಕೊಂಡಿರುವುದನ್ನೂ ದಿಗಂಬರನಾಗಿರುವುದನ್ನೂ ತಲೆಯನ್ನು ಬೋಳಿಸಿಕೊಂಡು ದಕ್ಷಿಣ ದಿಕ್ಕಿಗೆ ಹೋಗುತ್ತಿರುವುದನ್ನೂ ಎಲ್ಲೆಡೆಯಲ್ಲಿಯೂ ಕತ್ತಲೆಯು ಕವಿದಿರುವುದನ್ನೂ ನೋಡಿದಳು.

೮೬. ಆನಂತರ ಆ ವೃಂದೆಗೆ ಎಚ್ಚರವಾಯಿತು. ತನಗೆ ಸ್ವಪ್ನವಾದ ವಿಚಾರವನ್ನು ಯೋಚಿಸತೊಡಗಿದಳು. ಇದರಿಂದ ದುಃಖಗೊಂಡು ಅಂತಃಪುರದಲ್ಲಿಯೇ ಆಗಲಿ ಉಪವನಗಳಲ್ಲಿಯೇ ಆಗಲಿ ಎಲ್ಲಿಯೂ ಕೂಡ ಅವಳಿಗೆ ಶಾಂತಿಯೇ ಲಭಿಸಲಿಲ್ಲ.

೮೭. ಅನಂತರ ಇಬ್ಬರು ಸಖಿಯರನ್ನು ಕರೆದುಕೊಂಡು ನಗರದ ಉದ್ಯಾನಕ್ಕೆ ಹೊರಟಳು. ಅಲ್ಲಿಯೂ ನೆಮ್ಮದಿಯು ಸಿಕ್ಕದೆ ಕಾಡಿನಿಂದ ಕಾಡಿಗೆ ಸುತ್ತಲು ಮೊದಲುಮಾಡಿದಳು.

ರಾಕ್ಷಸೌ ಸಿಂಹವನ್ನಾದೌ ದಂಷ್ಟ್ರಾನಯನಭೀಷಣೌ ।
ತೌ ದೃಷ್ಟ್ವಾ ವಿಹ್ವಲಾತೀವ ಪಲಾಯನಪರಾ ತದಾ ॥ ೮೮ ॥

ದದರ್ಶ ತಾಪಸಂ ಶಾಂತಂ ಸಶಿಷ್ಯಂ ಮೌನಮಾಸ್ಥಿತಂ ।
ತತಸ್ತತ್ಕಂಠಮಾಸಜ್ಯ ನಿಜಬಾಹುಲತಾಂ ಭಯಾತ್ ॥ ೮೯ ॥

ಮುನೇ ಮಾಂ ರಕ್ಷ ಶರಣಮಾಗತಾಮಿತ್ಯಭಾಷತ ।
ತತ್ತಸ್ಯಾ ವಚನಂ ಶ್ರುತ್ವಾ ಧ್ಯಾನಂ ಮುಕ್ತ್ವಾ ಸ ವೈ ಮುನಿಃ ॥ ೯೦ ॥

ಉನ್ಮೀಲ್ಯನಯನೇ ವೃಂದಾಂ ಹೃದಿ ದೃಷ್ಟ್ವಾಬ್ರವೀದ್ವಚಃ ।
ತಿಷ್ಠ ತ್ವಂ ಬಾಲಿಕೇ ಹ್ಯತ್ರ ಮಾ ಭಯಂ ಕುರು ಸರ್ವಥಾ ॥ ೯೧ ॥

---

೮೮. ಆಕೆಯು ಹೀಗೆ ಸುತ್ತುತ್ತಿರುವಾಗ ಬಹು ಭಯಂಕರವಾದ ಇಬ್ಬರು ರಾಕ್ಷಸರನ್ನು ಕಂಡಳು. ಅವರು ಸಿಂಹದಂತೆ ಗರ್ಜಿಸುತ್ತಿದ್ದರು. ಕೋರೆ ದಾಡೆಗಳೂ ಕಣ್ಣುಗಳೂ ಬಹು ಭಯಂಕರವಾಗಿದ್ದುವು. ಅವರಿಬ್ಬರನ್ನೂ ನೋಡಿದ ಕೂಡಲೇ ಬಹು ಭಯಪಟ್ಟು ಓಡಲು ಮೊದಲು ಮಾಡಿದಳು.

೮೯. ಹೀಗೆ ಓಡುತ್ತಿರುವಾಗ ದಾರಿಯಲ್ಲಿ ಒಬ್ಬ ತಪಸ್ವಿಯನ್ನು ನೋಡಿದಳು. ಅವನು ಬಹು ಶಾಂತನಾಗಿದ್ದನು. ಅವನ ಜೊತೆಯಲ್ಲಿ ಒಬ್ಬ ಶಿಷ್ಯನೂ ಇದ್ದನು. ಈಕೆಯು ಹೆದರಿಕೆಯಿಂದ ಓಡಿಹೋಗಿ ಆತನ ಕತ್ತನ್ನು ತಬ್ಬಿಕೊಂಡಳು.

೯೦. ಆಕೆಯು ಎಲೈ ಮುನಿಯೆ! ನಾನು ಶರಣು ಬಂದಿದ್ದೇನೆ ನನ್ನನ್ನು ಕಾಪಾಡು. ಎಂದಳು. ಅವಳ ಮಾತನ್ನು ಕೇಳಿ ಆತನು ತನ್ನ ಧ್ಯಾನವನ್ನು ಬಿಟ್ಟು ಕಣ್ಣುಗಳನ್ನು ಬಿಟ್ಟನು.

೯೧. ಆ ತಾಪಸನು ಈಕೆಯು ವೃಂದೆಯೆಂದು ಮನಸ್ಸಿನಲ್ಲಿ ತಿಳಿದುಕೊಂಡು ಎಲೈ ಬಾಲಕಿಯೆ! ನೀನು ನಿರ್ಭಯವಾಗಿ ಇಲ್ಲಿರು. ಯಾವ ರೀತಿಯಾಗಿಯೂ ನೀನು ಭಯಪಡಬೇಕಾದುದಿಲ್ಲ. ಎಂದು ಹೇಳಿದನು.

ಇತ್ಯುಕ್ತ್ವಾ ಪುರತೋ ದೃಷ್ಟ್ವಾ ರಾಕ್ಷಸೌ ಮುನಿಸತ್ತಮಃ ।
ನಿರ್ಭರ್ತ್ಸ್ಯ ತೌ ಹುಂಕಾರೈಃ ಕ್ರೋಧೇನ ಮಹತಾ ವೃತಃ ॥ ೯೨ ॥

ತೌ ತದ್ಧುಂಕಾರತಸ್ತ್ರಸ್ತೌ ಪಲಾಯನಪರೌ ತದಾ ।
ತತ್ಸಾಮರ್ಥ್ಯಂ ಮುನೇರ್ದೃಷ್ಟ್ವಾ ವೃಂದಾ ಸಾ ವಿಸ್ಮಯಾವೃತಾ ।
ಪ್ರಣಮ್ಯ ದಂಡವದ್ಭೂಮೌ ಮುನಿಂ ವಚನಮಬ್ರವೀತ್ ॥ ೯೩ ॥

॥ ವೃಂದೋವಾಚ ॥

ರಕ್ಷಿತಾದ್ಯ ತ್ವಯಾ ಘೋರಾದ್ಭಯಾದಸ್ಮಾತ್ಕೃಪಾನಿಧೇ ॥ ೯೪ ॥

ಕಿಂಚಿದ್ವಿಜ್ಞಪ್ತುಮಿಚ್ಛಾಮಿ ಕೃಪಯಾ ತದ್ವದಸ್ವ ಮಾಂ ।
ಜಲಂಧರೋ ಹಿ ಮೇ ಭರ್ತಾ ರುದ್ರಂ ಯೋದ್ಧುಂ ಗತಃ ಪ್ರಭೋ ॥ ೯೫ ॥

---

೯೨. ಹೀಗೆಂದು ಹೇಳಿ ಮುಂದೆ ನೋಡಲು ಇಬ್ಬರು ರಾಕ್ಷಸರು ಕಣ್ಣಿಗೆ ಕಂಡರು. ಅವರನ್ನು ನೋಡಿ "ಹುಂ" ಎಂದೆನ್ನುತ್ತಾ ಅವರನ್ನು ಹೆದರಿಸುತ್ತಾ ಬಹುವಾಗಿ ಕೋಪಗೊಂಡನು.

೯೩. ಆ ಮುನಿಯ ಹುಂಕಾರದಿಂದ ಆ ರಾಕ್ಷಸರಿಬ್ಬರೂ ಹೆದರಿ ಓಡುವುದಕ್ಕೆ ಮೊದಲು ಮಾಡಿದರು. ಋಷಿಯ ಈ ಸಾಮರ್ಥ್ಯವನ್ನು ವೃಂದೆಯು ನೋಡಿದಳು. ಇದರಿಂದ ಬಹುವಾದ ಆಶ್ಚರ್ಯವಾಯಿತು. ಒಡನೆಯೇ ಆ ಮುನಿಗೆ ದೀರ್ಘದಂಡ ನಮಸ್ಕಾರವನ್ನು ಮಾಡಿದಳು. ಅವನನ್ನು ಕುರಿತು ಇಂತೆಂದಳು.

೯೪. ವೃಂದೆಯು ಹೇಳಿದಳು–ಎಲೈ ಕೃಪಾನಿಧಿಯೆ! ಈ ಘೋರವಾದ ಭಯದಿಂದ ನೀನು ನನ್ನನ್ನು ಕಾಪಾಡಿದೆ.

೯೫. ಆದುದರಿಂದ ನಿನಗೆ ಒಂದು ವಿಷಯವನ್ನು ವಿಜ್ಞಾಪಿಸಿಕೊಳ್ಳಬೇಕೆಂದಿದ್ದೇನೆ. ನಾನು ಕೇಳುವ ವಿಷಯವನ್ನು ದಯವಿಟ್ಟು ಹೇಳು. ಎಲೈ ಪ್ರಭುವೆ! ನನ್ನ ಗಂಡನಾದ ಜಲಂಧರನು ರುದ್ರನೊಡನೆ ಯುದ್ಧವನ್ನು ಮಾಡಲು ಹೋಗಿರುವನು.

ಸ ತತ್ರಾಸ್ತೇ ಕಥಂ ಯುದ್ಧೇ ತನ್ಮೇ ಕಥಯ ಸುವ್ರತ ।
ಮುನಿಸ್ತದ್ವಾಕ್ಯಮಾಕರ್ಣ್ಯ ಕೃಪಯೋರ್ಧ್ವಮುವೈಕ್ಷತ ॥ ೯೬ ॥

ತಾವತ್ಕಪೀ ಸಮಾಯಾತೌ ತಂ ಪ್ರಣಮ್ಯಾಗ್ರತಃ ಸ್ಥಿತೌ ।
ತತಸ್ತದ್ಭ್ರೂಲತಾಸಂಜ್ಞಾಪ್ರತ್ಯುಕ್ತಾ ಗಗನಾಂತರಾತ್ ॥ ೯೭ ॥

ಗತ್ವಾ ಕ್ಷಣಾರ್ಧಾದಾಗತ್ಯ ವಾನರಾವಗ್ರತಃ ಸ್ಥಿತೌ ।
ಶಿರಃಕಬಂಧಹಸ್ತೌ ಚ ದೃಷ್ಟ್ವಾಬ್ಧಿತನಯಸ್ಯ ಸಾ ॥ ೯೮ ॥

ಪಪಾತ ಮೂರ್ಛಿತಾ ಭೂಮೌ ಭರ್ತೃವ್ಯಸನದುಃಖಿತಾ ।
ಕಮಂಡಲುಜಲೈಸ್ಸಿಕ್ತಾ ಮುನಿನಾಶ್ವಾಸಿತಾ ತದಾ ।
ರುದಿತ್ವಾ ಸುಚಿರಂ ವೃಂದಾ ತಂ ಮುನಿಂ ವಾಕ್ಯಮಬ್ರವೀತ್ ॥ ೯೯ ॥

---

೯೬. ಅವನು ಆ ಯುದ್ಧದಲ್ಲಿ ಏನುಮಾಡುತ್ತಿರುವನು ? ಎಂಬುದನ್ನು ದಯವಿಟ್ಟು ಹೇಳು. ಎನ್ನಲು ಮುನಿಯು ಈ ಮಾತನ್ನು ಕೇಳಿ ಕೃಪೆಯಿಂದ ಮೇಲುಗಡೆ ನೋಡುತ್ತಾ ಯೋಚಿಸಿದನು.

೯೭. ಒಡನೆಯೇ ಎರಡು ಕಪಿಗಳು ಬಂದು ಅವನಿಗೆ ನಮಸ್ಕರಿಸಿ ಮುಂದುಗಡೆಯಲ್ಲಿ ನಿಂತುಕೊಂಡುವು. ಒಡನೆಯೇ ಆ ಋಷಿಯು ಹುಬ್ಬಿನಿಂದ ಸಂಜ್ಞೆಯನ್ನು ಮಾಡಲು ಅವು ಆಕಾಶಕ್ಕೆ ಹಾರಿದುವು.

೯೮ ಹಾರಿಹೋಗಿ ಒಂದು ಕ್ಷಣಕಾಲದಲ್ಲಿಯೇ ಮತ್ತೆ ಬಂದು ಅವನಿಗೆ ನಮಸ್ಕರಿಸಿ ಎದುರಿಗೆ ನಿಂತುಕೊಂಡುವು. ಅವುಗಳ ಕೈಯ್ಯಲ್ಲಿ ಜಲಂಧರನ ರುಂಡವೂ ಮುಂಡವೂ ಬೇರೆ ಬೇರೆಯಾಗಿದ್ದುವು. ಇದನ್ನು ಆ ವೃಂದೆಯು ನೋಡಿದಳು.

೯೯. ಒಡನೆಯೇ ಗಂಡನು ಸತ್ತವ್ಯಸನದಿಂದ ಮೂರ್ಛೆಬಂದು ನೆಲದಮೇಲೆ ಬಿದ್ದಳು. ಆಗ ಆ ಮುನಿಯು ಕಮಂಡಲುವಿನಲ್ಲಿದ್ದ ನೀರನ್ನು ಆಕೆಯ ಮೇಲೆ ಚುಮುಕಿಸಿ ಜ್ಞಾನಬಂದನಂತರ ಸಮಾಧಾನಪಡಿಸಿದನು. ಆದರೂ ಆ ವೃಂದೆಯು ಬಹುಹೊತ್ತು ದುಃಖಿಸಿ ಅನಂತರ ಆ ಮುನಿಯನ್ನು ಕುರಿತು ಇಂತೆಂದಳು

॥ ವೃಂದೋವಾಚ ॥

ಕೃಪಾನಿಧೇ ಮುನಿಶ್ರೇಷ್ಠ ಜೀವಯೈನಂ ಮುನಿಪ್ರಿಯಂ ।
ತ್ವಮೇವಾಸ್ಯ ಪುನಶ್ಶಕ್ತೋ ಜೀವನಾಯ ಮತೋ ಮಮ ॥ ೧೦೦ ॥

॥ ಮುನಿರುವಾಚ ॥

ನಾಯಂ ಜೀವಯಿತುಂ ಶಕ್ಯೋ ರುದ್ರೇಣ ನಿಹತೋ ಯುಧಿ ॥ ೧೦೧ ॥

ತಥಾಪಿ ತ್ವತ್ಕೃಪಾವಿಷ್ಟಃ ಪುನಸ್ಸಂಜೀವಯಾಮ್ಯಹಂ ।
ಇತ್ಯುಕ್ತ್ವಾಂತರ್ಧಧೇ ಯಾವತ್ತಾವತ್ಸಾಗರನಂದನಃ ॥ ೧೦೨ ॥

ವೃಂದಾಂಮಾಲಿಂಗ್ಯ ತದ್ವಕ್ತ್ರಂ ಚುಚುಂಬ ಪ್ರೀತಮಾನಸಃ ।
ಅಥ ವೃಂದಾಪಿ ಭರ್ತಾರಂ ದೃಷ್ಟ್ವಾ ಹರ್ಷಿತಮಾನಸಾ ॥ ೧೦೩ ॥

---

೧೦೦. ವೃಂದೆಯು ಹೇಳಿದಳು—ಎಲೈ ಕೃಪಾನಿಧಿಯಾದ ಮುನಿಯೆ! ಈ ನಿನ್ನ ಪ್ರಿಯನನ್ನು ಬದುಕಿಸು. ನೀನು ಈತನನ್ನು ಬದುಕಿಸಲು ಶಕ್ತನೆಂಬ ಹಾಗೆ ಕಾಣುತ್ತದೆ. ಎಂದಳು.

೧೦೧. ಮುನಿಯು ಹೇಳಿದನು-ಇವನನ್ನು ರುದ್ರನು ಯುದ್ಧದಲ್ಲಿ ಕೊಂದಿರುವನು. ಆದುದರಿಂದ ಬದುಕಿಸಲು ಆಗುವುದಿಲ್ಲ.

೧೦೨. ಆದರೂ ನಿನ್ನ ಮೇಲಿನ ದಯೆಯಿಂದ ಬದುಕಿಸುತ್ತೇನೆ. ಹೀಗೆಂದು ಹೇಳಿ ಆ ಮುನಿಯು ಅಂತರ್ಧಾನನಾದನು.

೧೦೩. ಒಡನೆಯೇ ಆ ಜಲಂಧರನು ವೃಂದೆಯನ್ನು ಆಲಂಗಿಸಿಕೊಂಡು ಪ್ರೀತಿಯಿಂದ ಅವಳಿಗೆ ಮುತ್ತಿಟ್ಟನು. ಕೂಡಲೇ ಆ ವೃಂದೆಯು ಬಹುವಾಗಿ ಸಂತೋಷಪಟ್ಟಳು.

ರೇಮೇ ತದ್ವನಮಧ್ಯಸ್ಥಾ ತದ್ಯುಕ್ತಾ ಬಹುವಾಸರಂ ।
ಕದಾಚಿತ್ಸುರತಸ್ಯಾಂತೇ ದೃಷ್ಟ್ವಾ ವಿಷ್ಣುಂ ತಮೇವ ಹಿ ।
ನಿರ್ಭರ್ತ್ಸ್ಯ ಕ್ರೋಧಸಂಯುಕ್ತಾ ವೃಂದಾ ವಚನಮಬ್ರವೀತ್ ‖ ೧೦೪ ‖

‖ ವೃಂದೋವಾಚ ‖

ಧಿಕ್ತ್ವೇದಂ ಹರೇ ಶೀಲಂ ಪರದಾರಾಭಿಮಾನಿನಃ ‖ ೧೦೫ ‖

ತ್ವಂ ಜ್ಞಾತೋಸಿ ಮಯಾ ಸಮ್ಯಕ್ ಮಾಯಾಪ್ರತ್ಯಕ್ಷ ತಾಪಸಃ ।
ಯೌ ತ್ವಯಾ ಮಾಯಯಾ ದ್ವೌ ತೌ ಸ್ವಕೀಯೌ ದರ್ಶಿತೌ ಮಮ ‖ ೧೦೬ ‖

ತೌ ದೇವರಾಕ್ಷಸೌ ಭೂತ್ವಾ ತವ ಭಾರ್ಯಾಂ ಹರಿಷ್ಯತಃ ।
ಜಯ ವಿಜಯ ನಾಮಾನೌ ಜ್ಞಾತೌ ಕೃತ್ರಿಮರೂಪಿಣೌ ‖ ೧೦೭ ‖

---

೧೦೪. ಅನಂತರ ಆ ವೃಂದೆಯು ಆ ಕಾಡಿನಮಧ್ಯದಲ್ಲಿಯೇ ಬಹು ದಿವಸಗಳವರೆಗೂ ಅವನೊಡನೆ ರಮಿಸಿದಳು. ಹೀಗೆ ಕೆಲವುದಿನಗಳು ರಮಿಸಿದ ನಂತರ ಒಂದುದಿನ ಆಕೆಯು ತಾನು ರಮಿಸುತ್ತಿರುವವನು ಜಲಂಧರನಲ್ಲವೆಂದೂ ಅವನು ವಿಷ್ಣುವೆಂದೂ ತಿಳಿದುಕೊಂಡಳು. ಒಡನೆಯೇ ಕೋಪಬಂದಿತು. ಹೆದರಿಸಿದಳು. ಮತ್ತು ಆ ವಿಷ್ಣುವನ್ನು ಕುರಿತು ಇಂತೆಂದಳು.

೧೦೫. ವೃಂದೆಯು ಹೇಳಿದಳು :—ಎಲೈ ಹರಿಯೆ ! ಪರರ ಹೆಂಡಿರಲ್ಲಿ ರಮಿಸಬೇಕೆಂಬ ಆಸೆಯುಳ್ಳ ನಿನ್ನ ಶೀಲಕ್ಕೆ ನಿಂದೆಯಿರಲಿ.

೧೦೬–೧೦೭. ಎಲೈ ಹರಿಯೆ ! ನಿನ್ನನ್ನು ನಾನು ಚೆನ್ನಾಗಿ ಗುರ್ತಿಸಿದೆ ನಿನ್ನ ಚೇಷ್ಟೆಯೆಲ್ಲವೂ ತಿಳಿಯಿತು. ನೀನು ಮಾಯಾಕಾರದಿಂದ ಪ್ರತ್ಯಕ್ಷನಾಗಿ ಆ ತಾಪಸನಾಗಿದ್ದೆ. ನೀನು ನಿನ್ನ ಜೊತೆಯವರನ್ನು ಮಾಯೆಯನ್ನು ಮಾಡಿಸಿ ನನಗೆ ತೋರಿಸಿದುದರಿಂದ ಅವರಿಬ್ಬರೂ ರಾಕ್ಷಸರಾಗಿ ನಿನ್ನ ಹೆಂಡತಿಯನ್ನು ಕದ್ದುಕೊಂಡು ಹೋಗಲಿ. ನಿನ್ನ ಜೊತೆಯಲ್ಲಿ ಮಾಯೆಯನ್ನು ಮಾಡಿದವ ರಿಬ್ಬರೂ ನಿನ್ನ ಆಳುಗಳಾದ ಜಯ ವಿಜಯರೆಂದು ನನಗೆ ತಿಳಿಯಿತು.

ತ್ವಂ ಚಾಪಿ ಭಾರ್ಯಾ ದುಃಖಾರ್ತೋ ವನೇ ಕಪಿ ಸಹಾಯವಾನ್ ।
ಭವ ಸರ್ವೇಶ್ವರೋಽಪಿ ತ್ವಂ ಯತ್ತೇ ಶಿಷ್ಯತ್ವಮಾಗತೌ ॥ ೧೦೮ ॥

ಪುಣ್ಯಶೀಲ ಸುಶೀಲೌ ತೌ ಕಪಿರೂಪಧರಾವುಭೌ ।
ಅತಸ್ತೇ ವಾನರೈರಸ್ತು ಸಂಗತಿರ್ದಂಡಕೇ ವನೇ ॥ ೧೦೯ ॥

ವಟುರೂಪಧರಶ್ಚೈಶ್ಯೋ ಯಸ್ತಾರ್ಕ್ಷ್ಯಶ್ಚೇತಿ ವೇದ್ಮ್ಯಹಂ ।
ಇತ್ಯುಕ್ತ್ವಾ ಸಾ ತದಾ ವೃಂದಾ ಪ್ರಾವಿಶದ್ಧವ್ಯವಾಹನಂ ॥ ೧೧೦ ॥

ತತೋ ಜಲಂಧರೋ ದೈತ್ಯೋ ನಿಹತೋ ಯುಧಿ ಶಂಭುನಾ ।
ತಸ್ಮಾದ್ರಾಜನ್ನಿದಾನೀಂ ತೌ ಕುಂಭಕರ್ಣ ದಶಾನನೌ ॥ ೧೧೧ ॥

---

೧೦೮. ನೀನೂ ಕೂಡ ಹೆಂಡತಿಯ ನಾಶದಿಂದ ದುಃಖಗೊಂಡು ಆ ಕಪಿಗಳ ಜೊತೆಯಲ್ಲಿಯೇ ಓಡಾಡುತ್ತಿರು. ನೀನು ಸರ್ವೇಶ್ವರನಾದರೂ ಈಗ ಆ ಕಪಿಗಳನ್ನೇ ಸಹಾಯವಾಗಿಯೂ ಶಿಷ್ಯರಾಗಿಯೂ ಹೊಂದಿದ್ದುದರಿಂದ ಆಗಲೂ ಅವೇ ನಿನಗೆ ಸಹಾಯವಾಗಿರಲಿ.

೧೦೯. ಆ ನಿನ್ನ ಸೇವಕರಾದ ಪುಣ್ಯಶೀಲ ಸುಶೀಲರು ಇಬ್ಬರೂ ಕಪಿಯ ರೂಪವನ್ನು ಧರಿಸಿದ್ದರಾದುದರಿಂದ ನೀನು ಆ ಕಪಿಗಳ ಜೊತೆಯಲ್ಲಿಯೇ ದಂಡಕೆಯಲ್ಲಿ ಸಂಚರಿಸು.

೧೧೦. ನೀನು ಮುನಿಯಾಗಿದ್ದಾಗ ನಿನಗೆ ಶಿಷ್ಯನಾಗಿದ್ದವನು ಈ ಗರುಡನು ಎಂದು ನನಗೆ ಗೊತ್ತಾಗಿದೆ. ಎಂಬುದಾಗಿ ಹೇಳುತ್ತ ಆ ವೃಂದೆಯು ಚಿತೆಯನ್ನು ಒಡ್ಡಿ ಬೆಂಕಿಯನ್ನು ಹತ್ತಿಸಿಕೊಂಡು ಅದರಲ್ಲಿ ಬಿದ್ದುಬಿಟ್ಟಳು.

೧೧೧. ಅನಂತರದಲ್ಲಿ ವೃಂದೆಯ ಪಾತಿವ್ರತ್ಯವು ನಾಶವಾಗಲು ಜಲಂಧರನನ್ನು ಶಂಭುವು ಯುದ್ಧದಲ್ಲಿ ಕೊಂದನು. ಎಲೈ ದೊರೆಯೆ! ಆ ಜಯ ವಿಜಯರು ಈಗ ಕುಂಭಕರ್ಣ ದಶಾನನರಾಗಿ ಹುಟ್ಟಿರುವರು.

ಜಾತೌ ಸಾಗರಮಧ್ಯೇ ತೌ ಲಂಕಾಯಾಮಧುನಾ ಸ್ಥಿತೌ ।
ನೀತ್ವಾ ಜನಕಜಾಂ ಬಾಲಾಂ ಪಂಚವಟ್ಯಾಸ್ತು ಮಾತೃವತ್ ॥ ೧೧೨ ॥

ಪಾಲಯಿತ್ವಾಥ ಷಣ್ಮಾಸಾನ್ ರಾಮಬಾಣಾನ್ಮರಿಷ್ಯತಃ ।
ರಾಮೋಽಪಿ ವಾಲಿನಂ ಹತ್ವಾ ಸುಗ್ರೀವೇಣ ಸಮನ್ವಿತಃ ॥ ೧೧೩ ॥

ಶಿಲಾಭಿಸ್ಸಾಗರಂ ಬದ್ಧ್ವಾ ಸೀತಾಮಾದಾಯ ಯಾಸ್ಯತಿ ।
ಯಾತ್ರಾಯಜ್ಞವಿಲಾಸಾಂಶ್ಚ ಸಪ್ತದ್ವೀಪಪ್ರರಕ್ಷಣಂ ॥ ೧೧೪ ॥

ಕರಿಷ್ಯತಿ ದಯಿತಯಾ ಬಂಧುಭಿಶ್ಚ ಯಥಾಸುಖಂ ।
ಇದಂ ಗೋಪ್ಯಂ ತ್ವಯಾ ರಾಜನ್ ಕಥನೀಯಂ ನ ಕುತ್ರಚಿತ್ ॥ ೧೧೫ ॥

---

೧೧೨. ಅವರು ಸಮುದ್ರದ ಮಧ್ಯದಲ್ಲಿರುವ ಲಂಕೆಯಲ್ಲಿ ಈಗ ವಾಸವಾಗಿರುವರು. ಅವರಿಬ್ಬರೂ ಈ ಜನಕಜೆಯಾದ ಸೀತೆಯನ್ನು ಪಂಚವಟಿಯಿಂದ ಕದ್ದುಕೊಂಡು ಹೋಗುವರು.

೧೧೩. ಅವಳನ್ನು ಕದ್ದುಕೊಂಡು ಆರುತಿಂಗಳಕಾಲದವರೆಗೆ ತಾಯಿಯಂತೆ ಕಾಪಾಡುತ್ತಿದ್ದು ಅನಂತರ ರಾಮನ ಬಾಣದಿಂದಲೇ ಮರಣವನ್ನು ಹೊಂದುವರು. ರಾಮನು ವಾಲಿಯನ್ನು ಕೊಂದು ಸುಗ್ರೀವನೊಡನೆ ಸೇರಿಕೊಳ್ಳುವನು.

೧೧೪. ರಾಮನು ಇವರೆಲ್ಲರನ್ನೂ ಕರೆದುಕೊಂಡುಹೋಗಿ ಸಮುದ್ರಕ್ಕೆ ಕಲ್ಲಿನಿಂದ ಸೇತುವೆಯನ್ನು ಕಟ್ಟಿ ರಾವಣನನ್ನು ಕೊಂದು ಸೀತೆಯನ್ನು ಕರೆದುಕೊಂಡು ಅಯೋಧ್ಯೆಗೆ ಹೋಗುವನು. ಅನೇಕವಾದ ತೀರ್ಥಯಾತ್ರೆಗಳನ್ನು ಮಾಡುವನು ಅನೇಕವಾದ ಯಾಗಗಳನ್ನು ಮಾಡುವನು. ಏಳು ದ್ವೀಪಗಳನ್ನೂ ಚೆನ್ನಾಗಿ ಕಾಪಾಡುವನು.

೧೧೫. ಹೆಂಡತಿ ಮಕ್ಕಳು ಬಂಧುಗಳೊಡನೆ ಸುಖವಾಗಿದ್ದುಕೊಂಡಿರುವನು. ಎಲೈ ರಾಜನೆ! ಇದು ಗುಟ್ಟಾದ ವಿಷಯವು. ನೀನು ಯಾರಿಗೂ ಹೇಳದೆ ಕಾಪಾಡಿಕೊಂಡಿರು.

॥ ಶ್ರೀ ಶಿವ ಉವಾಚ ॥

ಇತ್ಯುಕ್ತ್ವಾ ಮುದ್ಗಲಸ್ಸರ್ವಂ ಭಾವಿ ರಾಮಸ್ಯ ಕೌತುಕಾತ್ ।
ಚರಿತ್ರಂ ವರ್ಣಯಾಮಾಸ ಯದಾ ಯದ್ಯತ್ಕರಿಷ್ಯತಿ ॥ ೧೧೬ ॥

ತತ್ಸರ್ವಂ ನೃಪತಿಶ್ಶ್ರುತ್ವಾ ತುಷ್ಟಃ ಪಪ್ರಚ್ಛ ತಂ ಪುನಃ ।
ಪೂರ್ವಜನ್ಮನಿ ಕಶ್ಚಾಹಂ ಕಿಂ ಮಯಾ ಸುಕೃತಂ ಕೃತಂ ॥ ೧೧೭ ॥

ತತ್ಸರ್ವಂ ವದ ಮಾಂ ಬ್ರಹ್ಮನ್ ಯಸ್ಮಾಜ್ಜಾತೋ ಹರಿಸ್ಸುತಃ ।
ಮಮ ಸಾಕ್ಷಾದ್ರಾಮಚಂದ್ರೋ ಲಕ್ಷ್ಮೀಸ್ಸಿತಾ ತ್ವಭೂತ್ ಸ್ನುಷಾ ।
ಇತಿ ತಸ್ಯ ವಚಶ್ಶ್ರುತ್ವಾ ನೃಪಮಾಹ ಪುನರ್ಮುನಿಃ ॥ ೧೧೮ ॥

॥ ಮುದ್ಗಲ ಉವಾಚ ॥

ಆಸೀತ್ಸಹ್ಯಾದ್ರಿವಿಷಯೇ ಕರವೀರಪುರೇ ಪುರಾ ॥ ೧೧೯ ॥

---

೧೧೬. ಶ್ರೀ ಶಿವನು ಹೇಳಿದನು—ಮುದ್ಗಲನು ರಾಮನ ಮುಂದಿನ ವಿಷಯಗಳನ್ನು ಕೌತುಕದಿಂದ ಆ ರಾಜನಿಗೆ ಇಂತೆಂದು ಹೇಳಿದನು. ಅಲ್ಲದೆ ಅವನು ಯಾವ ಯಾವ ಕಾಲದಲ್ಲಿ ಏನೇನನ್ನು ಮಾಡುತ್ತಾನೆ. ಎಂಬುದನ್ನೂ ವರ್ಣಿಸಿದನು.

೧೧೭. ದಶರಥನು ಇದೆಲ್ಲವನ್ನೂ ಕೇಳಿ ಸಂತೋಷಪಟ್ಟು ಮತ್ತೆ ಅವನನ್ನೇ ಕುರಿತು ಇಂತೆಂದನು. ಎಲೈ ಮುದ್ಗಲನೆ! ಪೂರ್ವಜನ್ಮದಲ್ಲಿ ನಾನು ಏನಾಗಿದ್ದೆನು? ನಾನು ಯಾವ ರೀತಿಯಾದ ಪುಣ್ಯವನ್ನು ಮಾಡಿದ್ದೆನು?

೧೧೮. ನನಗೆ ಆ ಹರಿಯು ಮಗನಾಗಿ ಹುಟ್ಟಲು ಕಾರಣವೇನು? ಇದೆಲ್ಲವನ್ನೂ ಕ್ರಮವಾಗಿ ಹೇಳು. ಆ ಹರಿಯೇ ನನ್ನ ಮಗನಾಗಿಯೂ, ಲಕ್ಷ್ಮಿಯೇ ಸೊಸೆಯಾಗಿಯೂ, ಆಗುವಂತಹ ಪುಣ್ಯವನ್ನು ನಾನಾವುದನ್ನು ಮಾಡಿದ್ದೆನು? ದಶರಥನು ಹೀಗೆ ಹೇಳಿದುದನ್ನು ಕೇಳಿ ಆ ಮೌದ್ಗಲನು ಮತ್ತೆ ಇಂತೆಂದನು.

೧೧೯. ಮೌದ್ಗಲನು ಹೇಳಿದನು—ಎಲೈ ದಶರಥನೇ! ಸಹ್ಯಾದ್ರಿಯ ಸುತ್ತಲಿರುವ ದೇಶದಲ್ಲಿ ಕರವೀರಪುರವೆಂಬ ಒಂದು ಪಟ್ಟಣವಿರುವುದು.

ಬ್ರಾಹ್ಮಣೋ ಧರ್ಮವಿತ್ಕಶ್ಚಿದ್ಧರ್ಮದತ್ತ ಇತಿ ಶ್ರುತಃ ।
ವಿಷ್ಣುವ್ರತಕರಸ್ಸನ್ಯುಗ್ವಿಷ್ಣುಪೂಜಾರತಸ್ಸದಾ ॥ ೧೨೦ ॥

ದ್ವಾದಶಾಕ್ಷರವಿದ್ಯಾಯಾಂ ಜಪನಿಷ್ಠೋಽತಿಥಿಪ್ರಿಯಃ ।
ಕದಾಚಿತ್ಕಾರ್ತಿಕೇ ಮಾಸಿ ಹರಿಜಾಗರಣಾಯ ಸಃ ॥ ೧೨೧ ॥

ರಾತ್ರ್ಯಾಂತುರ್ಯಾವಶೇಷಾಯಾಂ ಜಗಾಮ ಹರಿಮಂದಿರಂ ।
ಹರಿಪೂಜೋಪಕರಣಾ ಪ್ರಗೃಹ್ಯ ವ್ರಜತಾ ತದಾ ॥ ೧೨೨ ॥

ತೇನ ದೃಷ್ಟಾ ಸಮಾಯಾತಾ ರಾಕ್ಷಸೀ ಭೀಮನಿಸ್ಸ್ವನಾ ।
ವಕ್ರದಂಷ್ಟ್ರಾ ಲಲಜ್ಜಿಹ್ವಾ ನಿಮಗ್ನಾರಕ್ತಲೋಚನಾ ॥ ೧೨೩ ॥

---

೧೨೦. ಅಲ್ಲಿ ಧರ್ಮದಲ್ಲಿ ಆಸಕ್ತನಾದ ಒಬ್ಬ ಬ್ರಾಹ್ಮಣನಿದ್ದನು. ಅವನ ಹೆಸರು ಧರ್ಮದತ್ತನೆಂಬುದಾಗಿ ಪ್ರಸಿದ್ಧವಾಗಿದ್ದಿತು. ಅವನು ವಿಷ್ಣುವಿನ ವ್ರತಗಳನ್ನು ಮಾಡುತ್ತ ಯಾವಾಗಲೂ ವಿಷ್ಣುವನ್ನೇ ಪೂಜಿಸುತ್ತಿದ್ದನು.

೧೨೧. ದ್ವಾದಶಾಕ್ಷರಿಯಾದ ನಾರಾಯಣ ಮಂತ್ರವನ್ನೇ ಯಾವಾಗಲೂ ಜಪಿಸುತ್ತಿದ್ದನು. ಅತಿಥಿಗಳನ್ನು ಸತ್ಕರಿಸುತ್ತಿದ್ದನು. ಒಂದುಸಾರಿ ಕಾರ್ತಿಕ ಮಾಸದಲ್ಲಿ ಹರಿ ಜಾಗರಣೆಯನ್ನು ಮಾಡಬೇಕಾಗಿ ಬಂದಿತು.

೧೨೨. ಹೀಗೆ ಹರಿ ಜಾಗರಣೆ ಮಾಡಬೇಕಾಗಿ ಬಂದಾಗ ರಾತ್ರಿಯಲ್ಲಿ ನಾಲ್ಕನೆಯ ಜಾವದಲ್ಲಿ ಹರಿಯ ದೇವಸ್ಥಾನಕ್ಕೆ ಹೋಗಲು ಪೂಜೆಗೆ ಬೇಕಾದ ಉಪಕರಣಗಳೆಲ್ಲವನ್ನೂ ತೆಗೆದುಕೊಂಡು ದಾರಿಯಲ್ಲಿ ಹೋಗುತ್ತಿದ್ದನು.

೧೨೩. ಆಗ ಅವನ ಎದುರಿಗೆ ಭಯಂಕರಳಾದ ಒಬ್ಬ ರಾಕ್ಷಸಿಯು ಬಂದಳು. ಅವಳ ಕೋರೆಯ ದಾಡೆಗಳು ಭಯಂಕರವಾಗಿದ್ದುವು. ತಿಂಡಿಗೋಸ್ಕರವಾಗಿ ನಾಲಿಗೆಗಳು ಅಲ್ಲಾಡುತ್ತಿದ್ದುವು. ಕಣ್ಣುಗಳು ಕೆಂಪಗಿದ್ದುವು. ದಿಗಂಬರಳಾಗಿದ್ದಳು. ಅವಳಲ್ಲಿ ಮಾಂಸವೇ ಇಲ್ಲದೆ ಬಡಕಲಾಗಿದ್ದಳು.

ದಿಗಂಬರಾ ಶುಷ್ಕಮಾಂಸಾ ಬಿಂಬೋಷ್ಠೀ ಘರ್ಘರಸ್ವನಾ ।
ತಾಂ ದೃಷ್ಟ್ವಾ ಭಯಸಂತ್ರಸ್ತಃ ಕಂಪಿತಾವಯವಸ್ತದಾ ॥ ೧೨೪ ॥
ಪೂಜೋಪಕರಣೈಸ್ಸರ್ವೈಃ ಪಯೋಭಿಶ್ಚಾಹನದ್ಬಲಾತ್ ।
ಸಂಸ್ಮೃತ್ಯ ಯದ್ಧರೇರ್ನಾಮ ತುಲಸೀಯುಕ್ತವಾರಿಣಾ ॥ ೧೨೫ ॥
ಸೋಽಹನದ್ವಾರಿಣಾ ತಸ್ಮಾತ್ತತ್ಪಾಪಂ ಲಯಮಾಗತಂ ।
ಅಥ ಸಂಸ್ಮೃತ್ಯ ಸಾ ಪೂರ್ವಜನ್ಮಕರ್ಮವಿಪಾಕಜಾಂ ।
ಸ್ವಾಂ ದಶಾಮಬ್ರವೀದ್ವಿಪ್ರಂ ದಂಡವಚ್ಚ ಪ್ರಣಮ್ಯ ಸಾ ॥ ೧೨೬ ॥

॥ ಕಲಹೋವಾಚ ॥

ಪೂರ್ವಕರ್ಮವಿಪಾಕೇನ ದಶಾಮೇತಾಂ ಗತಾಸ್ಮ್ಯಹಂ ।
ತತ್ಕಥಂ ತು ಪುನರ್ವಿಪ್ರ ಯಾಮ್ಯಹಂ ಗತಿಮುತ್ತಮಾಂ ॥ ೧೨೭ ॥

---

೧೨೪. ತುಟಿಗಳು ತೊಂಡೆಹಣ್ಣಿನಂತಿದ್ದುವು. ಧ್ವನಿಯು ಕಠಿಣವಾಗಿದ್ದಿತು. ಅವಳನ್ನು ನೋಡಿದೊಡನೆಯೇ ಅವನಿಗೆ ಭಯದಿಂದ ದೇಹವೆಲ್ಲವೂ ನಡುಗುವುದಕ್ಕೆ ಮೊದಲಾಯಿತು.

೧೨೫. ಆಗ ಅವನು ಕೈಯ್ಯಲ್ಲಿಯೇ ಇಟ್ಟುಕೊಂಡಿದ್ದ ಪೂಜೆಯ ಸಾಮಗ್ರಿಗಳಿಂದಲೇ ಹೊಡೆದನು. ತೆಗೆದುಕೊಂಡು ಹೋಗುತ್ತಿದ್ದ ಹಾಲಿನಿಂದಲೂ ಹೊಡೆದನು. ಹರಿಹರಿ ಎಂಬುದಾಗಿ ಹರಿಯ ನಾಮವನ್ನು ಸ್ಮರಿಸುತ್ತ ತುಲಸಿಯನ್ನು ಹಾಕಿದ ನೀರಿನಿಂದಲೂ ಕೂಡ ಆಕೆಯನ್ನು ಹೊಡೆದನು.

೧೨೬. ಹರಿಯನ್ನು ಸ್ಮರಿಸುತ್ತ ತುಳಸಿಯನ್ನು ಹಾಕಿರುವ ನೀರನ್ನು ಎರಚಿದುದರಿಂದ ಆಕೆಯ ಪಾಪಗಳೆಲ್ಲವೂ ಹೊರಟುಹೋದವು. ಆಗ ಅವಳಿಗೆ ತನ್ನ ಪೂರ್ವಜನ್ಮದ ಸ್ಥಿತಿಯ ಜ್ಞಾಪಕವೂ ಪಾಪಪುಣ್ಯಗಳ ಸ್ಮರಣೆಯೂ ಬಂದುವು. ಒಡನೆಯೇ ಆಕೆಯು ಆ ಬ್ರಾಹ್ಮಣನಿಗೆ ದೀರ್ಘದಂಡ ನಮಸ್ಕಾರವನ್ನು ಮಾಡಿ ತನ್ನ ಸ್ಥಿತಿಯನ್ನು ಹೇಳಿಕೊಂಡಳು.

೧೨೭. ಕಲಹೆಯು ಹೇಳಿದಳು—ಎಲೈ ಬ್ರಾಹ್ಮಣನೇ, ಪೂರ್ವಕರ್ಮದ ವಿಪಾಕದಿಂದ ನನಗೆ ಈ ದೆಸೆಯು ಬಂದಿತು. ನನಗೆ ಉತ್ತಮಗತಿಯು ಹೇಗೆ ತಾನೆ ಸಿಕ್ಕುವುದು? ಅದನ್ನು ದಯವಿಟ್ಟು ತಿಳಿಸು ಎಂದಳು.

॥ ಮುದ್ಗಲ ಉವಾಚ ॥

ತಾಂ ದೃಷ್ಟ್ವಾ ಪ್ರಣತಾಮಾರ್ತಾಂ ವದಮಾನಾಂ ಸ್ವಕರ್ಮ ಚ ।
ಅತೀವ ವಿಸ್ಮಿತೋ ವಿಪ್ರಸ್ತದಾ ವಚನಮಬ್ರವೀತ್ ॥ ೧೨೮ ॥

॥ ಧರ್ಮದತ್ತ ಉವಾಚ ॥

ಕೇನ ಕರ್ಮವಿಪಾಕೇನ ತ್ವಂ ದಶಾಮೀದೃಶೀಂ ಗತಾ ।
ಕುತಃ ಪ್ರಾಪ್ತಾ ಚ ಕಿಂ ಶೀಲಾ ತತ್ಸರ್ವಂ ವಿಸ್ತರಾದ್ವದ ॥ ೧೨೯ ॥

॥ ಕಲಹೋವಾಚ ॥

ಸೌರಾಷ್ಟ್ರನಗರೇ ಬ್ರಹ್ಮನ್ ಭಿಕ್ಷುರ್ನಾಮಾಭವದ್ದ್ವಿಜಃ ।
ತಸ್ಯಾಹಂ ಗೃಹಿಣೀ ಬ್ರಹ್ಮನ್ ಕಲಹಾಖ್ಯಾತಿನಿಷ್ಠುರಾ ।
ನ ಕದಾಚಿನ್ಮಯಾ ಭರ್ತುರ್ವಚಸಾಪಿ ಶುಭಂ ಕೃತಂ ॥ ೧೩೦ ॥

---

೧೨೮. ಮುದ್ಗಲನು ಹೇಳಿದನು—ಅವಳು ನಮಸ್ಕರಿಸಿ ದುಃಖಗೊಂಡು ತನ್ನ ಪಾಪ ಕರ್ಮಗಳನ್ನು ಇಂತೆಂದು ಹೇಳಿಕೊಳ್ಳುತ್ತಿದ್ದಳು. ಇದರಿಂದ ಆ ಬ್ರಾಹ್ಮಣನಿಗೆ ಬಹು ಆಶ್ಚರ್ಯವಾಯಿತು. ಆಗ ಆತನು ಇಂತೆಂದು ಹೇಳಿದನು.

೧೨೯ ಧರ್ಮದತ್ತನು ಹೇಳಿದನು—ಎಲೈ ಹೆಂಗಸೆ! ನೀನು ಯಾವ ಕ್ರೂರಕರ್ಮದ ವಿಪಾಕದಿಂದ ಈ ಸ್ಥಿತಿಯನ್ನು ಹೊಂದಿದೆ? ನೀನೆಲ್ಲಿಂದ ಬಂದೆ? ನೀನು ಏನು ಮಾಡುತ್ತಿದ್ದೆ? ಅವೆಲ್ಲವನ್ನೂ ವಿಸ್ತಾರವಾಗಿ ಹೇಳು. ಎಂದನು.

೧೩೦. ಕಲಹೆಯು ಹೇಳಿದಳು—ಎಲೈ ಬ್ರಾಹ್ಮಣನೆ! ಸೌರಾಷ್ಟ್ರ ನಗರದಲ್ಲಿ ಭಿಕ್ಷುವೆಂಬ ಹೆಸರುಳ್ಳ ಒಬ್ಬ ಬ್ರಾಹ್ಮಣನಿದ್ದನು. ನಾನು ಆತನ ಹೆಂಡತಿಯು. ನನ್ನ ಹೆಸರು ಕಲಹೆಯು. ನಾನು ಬಹು ಕಠಿಣವಾದ ಮನಸ್ಸುಳ್ಳವಳಾಗಿದ್ದೆನು. ನಾನು ನನ್ನ ಗಂಡನಿಗೆ ಬಾಯಿಮಾತಿನಿಂದಲೂ ಒಂದುವೇಳೆಯೂ ಅನುಕೂಲವನ್ನಾಗಲೀ ಪ್ರಿಯವನ್ನಾಗಲೀ ಆಡಿದವಳೇ ಅಲ್ಲ.

ನಾರ್ಪಿತಂ ತಸ್ಯ ಮೃಷ್ಟಾನ್ನಂ ಭರ್ತುರ್ವಚನಭಂಗಯಾ ।
ಪಾಕಕಾಲೇ ಮಯಾ ನಿತ್ಯಂ ಯದ್ಯಚ್ಚಾನ್ನಂ ಮನೋರಮಂ ॥ ೧೩೧ ॥

ತತ್ತತ್ಪೂರ್ವಂ ಸ್ವಯಂ ಭುಕ್ತ್ವಾ ಪಶ್ಚಾದ್ಭರ್ತ್ರೇ ನಿವೇದಿತಂ ।
ಏಕದಾ ಸ ಪತಿರ್ಮಿತ್ರಂ ಮಮ ವೃತ್ತಂ ನ್ಯವೇದಯತ್ ॥ ೧೩೨ ॥

ನೈವ ಶೃಣೋತಿ ಮೇ ಪತ್ನೀ ಮದ್ವಾಕ್ಯಂ ಕಿಂ ಕರೋಮ್ಯಹಂ ।
ತೇನ ಶ್ರುತ್ವಾ ತು ಸಕಲಂ ಕ್ಷಣಂ ಸಂಚಿತ್ಯ ವೈ ಹೃದಿ ॥ ೧೩೩ ॥

ಉವಾಚ ಮತ್ಪತಿಂ ಕಿಂಚಿದ್ಯುಕ್ತಂ ತಾಂ ತೇ ವದಾಮ್ಯಹಂ ।
ನಿಷೇಧೋಕ್ತ್ಯಾ ವದಸ್ವ ತ್ವಂ ಗೃಹಿಣೀ ಸಾ ಕರಿಷ್ಯತಿ ॥ ೧೩೪ ॥

೧೩೧–೧೩೨. ಅವನಿಗೆ ಒಳ್ಳೆಯ ಅನ್ನವನ್ನು ಬಡಿಸಲೇ ಇಲ್ಲ. ಅವನ ಮಾತಿನಂತೆ ನಡೆದಂತಾಗುವುದಲ್ಲ! ಎಂದು ಬಿಗಿಮಾನದಿಂದ ಇರುತ್ತಿದ್ದೆನು. ಅಡಿಗೆ ಮಾಡುವಾಗ ನಾನು ಮಾಡುತ್ತಿದ್ದ ಒಳ್ಳೆಯ ಅನ್ನವನ್ನೆಲ್ಲಾ ಮೊದ ಮೊದಲು ರುಚಿನೋಡಿ ಊಟಮಾಡಿ ಅನಂತರ ಅವನಿಗೆ ಬಡಿಸುತ್ತಿದ್ದೆನು. ಹೀಗಿರುತ್ತಿರಲು ಒಂದುಸಾರಿ ನನ್ನ ಗಂಡನು ನನ್ನ ವಿಷಯವನ್ನು ಅವನ ಸ್ನೇಹಿತನಿಗೆ ಹೇಳಿದನು.

೧೩೩. ಎಲೈ ಮಿತ್ರನೆ! ಈಕೆಯು ನನ್ನ ಮಾತನ್ನು ಕೇಳುವುದಿಲ್ಲ. ನಾನೇನು ಮಾಡಲಿ? ಎಂಬುದಾಗಿ ನನ್ನ ವಿಷಯವೆಲ್ಲವನ್ನೂ ಹೇಳಲು ಇದೆಲ್ಲವನ್ನೂ ಅವನು ಕೇಳಿ ಕ್ಷಣಕಾಲ ಮನಸ್ಸಿನಲ್ಲಿ ಯೋಚಿಸಿದನು.

೧೩೪. ಆಗ ಅವನು ನನ್ನ ಗಂಡನೊಡನೆ "ನಾನು ನಿನಗೆ ಕೆಲವು ಬುದ್ಧಿವಾದಗಳನ್ನು ಹೇಳುತ್ತೇನೆ." ಎಂದು ಹೇಳಿದನು. ಅವಳಿಗೆ ನೀನು ಹೇಳಬೇಕಾದುದನ್ನು ನಿಷೇಧರೂಪದಿಂದ ಹೇಳು. ಆಗ ಅವಳು ನಿನಗೆ ಬೇಕಾದುದನ್ನು ಮಾಡುವಳು.

ತವ ವಾಕ್ಯೇನ ಕಾರ್ಯಾದಿ ಯತ್ಕಿಂಚಿತ್ತವ ವಾಂಛಿತಂ |
ತಥೇತಿ ಮಿತ್ರವಾಕ್ಯೇನ ಗೃಹಮೇತ್ಯ ಪತಿರ್ಮಮ　　॥ ೧೩೫ ॥

ಮಾಮಾಹ ದಯಿತೇ ಮಾ ತ್ವಂ ಭೋಜನಾರ್ಥಂ ಸಮಾಹ್ವಯ |
ಮಮ ಮಿತ್ರಂ ಮಹಾದುಷ್ಟಂ ತಚ್ಛ್ರುತ್ವಾ ಸ್ವಪತೇರ್ವಚಃ　　॥ ೧೩೬ ॥

ತದಾ ಭರ್ತಾ ಮಯೋಕ್ತಸ್ಸಸ್ಸಾಧುಸ್ತವ ಸಖಾಸ್ತಿ ತಂ |
ಸಮಾಹ್ಯಯಾಮ್ಯಶನಾರ್ಥಮದ್ಯೈವ ಬ್ರಾಹ್ಮಣೋತ್ತಮಂ　　॥ ೧೩೭ ॥

ತತೋ ಮಯಾ ಸಮಾಹೂತಃ ಸ್ವಯಂ ಗತ್ವಾ ಪತೇಸ್ಸಖಾ |
ತದಾರಭ್ಯ ನಿಷೇಧೋಕ್ತ್ಯಾ ಕಾರ್ಯಮಾಜ್ಞಾಪಯತ್ಪತಿಃ　　॥ ೧೩೮ ॥

---

೧೩೫. ನಿನಗೆ ಬೇಕಾದುವನ್ನು ಆ ನಿಷೇಧಮುಖದಿಂದ ಹೇಳಿದರೆ ನಿನಗೆ ಅವೆಲ್ಲವನ್ನೂ ಮಾಡಿಕೊಡುವಳು. ಎಂದು ಹೇಳಲು ಅವನ ಮಾತೆಲ್ಲವನ್ನೂ ಕೇಳಿಕೊಂಡು ಅಂತೆಯೇ ಆಗಲೆಂದು ನನ್ನ ಪತಿಯು ಮನೆಗೆ ಬಂದನು

೧೩೬. ಮನೆಗೆ ಬಂದು ಆ ನನ್ನ ಗಂಡನು ನನ್ನನ್ನು ಕುರಿತು–ಎಲೈ ದಯಿತೆಯೇ ! ನನ್ನ ಮಿತ್ರನನ್ನು ಊಟಕ್ಕೆ ಕರೆಯಬೇಡ. ಅವನು ಬಹು ದುಷ್ಟನು. ಎಂದನು. ಗಂಡನು ಇಂತೆಂದುದನ್ನು ಕೇಳಿದೆನು.

೧೩೭. ಆಗ ನಾನು ನನ್ನ ಗಂಡನನ್ನು ಕುರಿತು–ಎಲೈ ಪತಿಯೆ ! ನಿನ್ನ ಆ ಸ್ನೇಹಿತನು ಸಾಧುವು. ಈ ದಿನವೇ ಆ ಬ್ರಾಹ್ಮಣೋತ್ತಮನನ್ನು ಊಟಕ್ಕೆ ಕರೆಯುತ್ತೇನೆ. ಎಂದೆನು.

೧೩೮. ಅನಂತರ ಅವನನ್ನು ನಾನೇ ಹೋಗಿ ಊಟಕ್ಕೆ ಕರೆದೆನು. ಇದನ್ನು ತಿಳಿದುಕೊಂಡ ಆ ನನ್ನ ಗಂಡನು ನನಗೆ ಏನನ್ನು ಹೇಳಬೇಕಾದರೂ ನಿಷೇಧರೀತಿಯಿಂದ ಹೇಳುತ್ತ ಬಂದನು.

ಏಕದಾ ಸ ಪಿತುರ್ದೃಷ್ಟ್ವಾ ಕ್ಷಯಾಹಸ್ಸಪತಿರ್ಮಮ ।
ಮಮಾಹ ದಯಿತೇ ಶ್ರಾದ್ಧಂ ನ ಕರಿಷ್ಯಾಮ್ಯಹಂ ಪಿತುಃ ॥ ೧೩೯ ॥

ತದ್ವಾಕ್ಯಂ ಸ್ವಪತೇಶ್ಶ್ರುತ್ವಾ ಮಯಾ ವಿಪ್ರಾ ನಿಮಂತ್ರಿತಾಃ ।
ಮಯಾ ಧಿಕ್ ಧಿಕ್ ಕೃತೋ ಭರ್ತಾ ಕಥಂ ಶ್ರಾದ್ಧಂ ಕರೋಷಿ ನ ॥೧೪೦॥

ಪುತ್ರಧರ್ಮಂ ನ ಜಾನಾಸಿ ಕಾ ಗತಿಸ್ತೇ ಭವಿಷ್ಯತಿ ।
ತತಃ ಪುನಸ್ಸ ಮಾಮಾಹ ಪಕ್ವಾನ್ನಾನ್ಯದ್ಯ ಮಾ ಕುರು ॥ ೧೪೧॥

ದ್ವಿಜಂ ನಿಮಂತ್ರಯ ಸ್ವೈರಂ ಮಾ ವಿಸ್ತಾರಂ ಕುರು ಪ್ರಿಯೇ ।
ತತ್ತಸ್ಯ ವಚನಂ ಶ್ರುತ್ವಾ ಮಯಾಷ್ಟಾದಶ ಭೂಸುರಾಃ ॥ ೧೪೨ ॥

---

೧೩೯. ಒಂದುಸಾರಿ ತನ್ನ ತಂದೆಯ ಶ್ರಾದ್ಧಕಾಲವು ಬರಲು ಆಗ ನನ್ನ ಗಂಡನು ನನ್ನನ್ನು ನೋಡಿ "ನನ್ನ ತಂದೆಯ ಶ್ರಾದ್ಧವು ಬಂದಿದೆ. ನಾನು ಅದನ್ನು ಮಾಡುವುದಿಲ್ಲ" ಎಂದನು

೧೪೦. ಗಂಡನು ಹೇಳಿದ ಆ ಮಾತನ್ನು ಕೇಳಿ ನಾನು ಬ್ರಾಹ್ಮಣರನ್ನು ಕರೆಸಿದೆನು. ಮತ್ತು ನಾನು ಗಂಡನನ್ನು ಧಿಕ್ ಧಿಕ್ ಎಂದು ಧಿಕ್ಕಾರಮಾಡುತ್ತ ನೀನು ಹೇಗೆ ತಾನೆ ಶ್ರಾದ್ಧವನ್ನು ಮಾಡುವುದಿಲ್ಲ ?

೧೪೧. ಮಗನು ಮಾಡತಕ್ಕ ಧರ್ಮವೇ ನಿನಗೆ ಗೊತ್ತಿಲ್ಲ. ನಿನಗೆ ಯಾವ ಗತಿಯು ಬರುತ್ತದೆ? ಎಂದೆನು. ಅನಂತರ ನನ್ನ ಗಂಡನು ನನ್ನನ್ನು ಕುರಿತು ಎಲೈ ಪ್ರಿಯಳೆ! ಬ್ರಾಹ್ಮಣರನ್ನು ಕರೆದರೂ ಕರೆ. ಪಕ್ವಾನ್ನಗಳನ್ನು ಮಾತ್ರ ಮಾಡಲೇಬೇಡ. ಎಂದನು.

೧೪೨. ಶ್ರಾದ್ಧವನ್ನು ವಿಸ್ತರಿಸಲೂ ಬೇಡ. ಎಂದು ಹೇಳಿದ ನನ್ನ ಗಂಡನ ಮಾತನ್ನು ಕೇಳಿ ನಾನು ಹದಿನೆಂಟುಜನ ಬ್ರಾಹ್ಮಣರನ್ನೇ ಕರೆಸಿದೆನು.

ನಿಮಂತ್ರಿತಾಸ್ಸ್ಯಶ್ರಾದ್ಧಾರ್ಥಂ ಪಕ್ವಾನ್ನಾನಿ ಕೃತಾನಿ ಹಿ ।
ತತಃ ಪುನಸ್ಸ ಮಾಮಾಹ ಪ್ರಿಯೇ ಶೃಣು ವಚೋ ಮಮ ॥ ೧೪೩ ॥

ಮಯಾ ಸಹಾದೌ ತ್ವಂ ಮಿಷ್ಟಂ ಪಾಕಂ ಭುಕ್ತ್ವಾ ತತಃ ಪರಂ ।
ಸ್ವೀಯೋಚ್ಛಿಷ್ಟಂ ತ್ವದ್ಯ ವಿಪ್ರಾ್ ಪರಿವೇಷಣಮಾಚರ ॥ ೧೪೪ ॥

ತನ್ಮಯಾ ವಚನಂ ಶ್ರುತ್ವಾ ಪತಿರ್ಧಿಕ್ ಧಿಕ್ ಕೃತಃ ಪುನಃ ।
ಕಥಮಾದೌ ಸ್ವಯಂ ಭುಕ್ತ್ವಾ ಪಶ್ಚಾದ್ವಿಪ್ರಾ್ ಸಮರ್ಪಯೇತ್ ॥ ೧೪೫ ॥

ಏವಂ ಸರ್ವ ನಿಷೇಧೋಕ್ತ್ಯಾ ಶ್ರಾದ್ಧಂ ಸಾಂಗಂ ಚಕಾರ ಸಃ ।
ಪಿಂಡದಾನಾದಿಕಂ ಕೃತ್ವಾ ಮಾಮಾಹ ಸ ಪತಿಃ ಪುನಃ ॥ ೧೪೬ ॥

---

೧೪೩. ಒಳ್ಳೆಯ ಪಕ್ವಾನ್ನಗಳನ್ನೂ ಮಾಡಿದೆನು. ಅನಂತರ ಮತ್ತೆ ಕೂಡ ಅವನು ನನ್ನನ್ನು ಕುರಿತು ಇಂತೆಂದನು.

೧೪೪. ಎಲೈ ಪ್ರಿಯಳೆ ! ನೀನು ಮಾಡಿದ ಅಡಿಗೆಯಲ್ಲಿ ಮೊದಲು ನೀನು ರುಚಿ ನೋಡಿ ಅನಂತರ ನಾನೂ ತಿಂದು ಮಿಕ್ಕ ಉಚ್ಛಿಷ್ಟವನ್ನು ಬ್ರಾಹ್ಮಣರಿಗೆ ಬಡಿಸು. ಎಂದನು.

೧೪೫. ಅದನ್ನು ಕೇಳಿ ಮತ್ತೆ ಗಂಡನನ್ನೇ ಧಿಕ್ ಧಿಕ್ ಎಂದು ಬೈದೆನು. ಮೊದಲು ನಾವು ತಿಂದು ಉಳಿದುದನ್ನು ಬ್ರಾಹ್ಮಣರಿಗೆ ಹೇಗೆತಾನೆ ಬಡಿಸ ಬಹುದು ! ಎಂದೆನು.

೧೪೬. ಹೀಗೆಯೇ ಅವನು ನಿಷೇಧಮುಖದಿಂದ ಹೇಳುತ್ತ ಶ್ರಾದ್ಧ ವೆಲ್ಲವನ್ನೂ ಸಾಂಗವಾಗಿ ಮಾಡಿದನು. ಪಿಂಡದಾನವೇ ಮುಂತಾದುವನ್ನೆಲ್ಲಾ ಮಾಡಿ ಮತ್ತೆ ನನ್ನನ್ನು ಕುರಿತು ಇಂತೆಂದನು.

ಅಹಮುಪೋಷಣಂ ತ್ವದ್ಯ ಕರಿಷ್ಯಾಮಿ ನ ಸಂಶಯಃ |
ತತ್ತಸ್ಯ ವಚನಂ ಶ್ರುತ್ವಾ ಮಿಷ್ಟಾನ್ನೇನ ಸ ಭೋಜಿತಃ || ೧೪೭ ||

ತತೋ ದೈವವಶಾತ್ ಭರ್ತಾ ವಿಸ್ಮೃತ್ವಾ ಪ್ರಾಹ ಮಾಂ ಪುನಃ |
ನೀತ್ವಾ ಪಿಂಡಾನ್ ಕ್ಷಿಪಸ್ವಾದ್ಯ ಸತ್ತೀರ್ಥೇ ಪರಮಾದರಾತ್ || ೧೪೮ ||

ತತೋ ಮಯಾ ಶೌಚಕೂಪೇ ನೀತ್ವಾ ಪಿಂಡಾ ವಿಸರ್ಜಿತಾಃ |
ತತಃ ಖಿನ್ನಮನಾ ವಿಪ್ರೋ ಹಾಹೇತ್ಯುಕ್ತ್ವಾ ಸ್ಥಿರೋಭವತ್ || ೧೪೯ ||

ಕ್ಷಣಂ ವಿಚಿಂತ್ಯ ಮಾಮಾಹ ಪಿಂಡಾನ್ಮಾ ತ್ವಂ ಬಹಿಃ ಕುರು |
ತದೋತ್ತೀರ್ಯ ಶೌಚಕೂಪೇ ಮಯಾ ಪಿಂಡಾ ಬಹಿಃ ಕೃತಾಃ || ೧೫೦ ||

---

೧೪೭. “ನಾನು ಈದಿನ ಉಪವಾಸಮಾಡುತ್ತೇನೆ. ಅದರಲ್ಲಿ ಸಂಶಯವಿಲ್ಲ” ಎನ್ನಲು ನಾನು ಮೃಷ್ಟಾನ್ನದಿಂದ ಅವನಿಗೆ ಭೋಜನವನ್ನು ಮಾಡಿಸಿದೆನು.

೧೪೮. ಆಗ ನನ್ನ ಗಂಡನಿಗೆ ಈ ರೂಢಿಯು ಕಡಿಮೆಯಾದುದುದರಿಂದ ದೈವವಶದಿಂದ ಮರೆತು ನನ್ನನ್ನು ಕುರಿತು–ಈ ಪಿಂಡಗಳನ್ನು ಎಚ್ಚರಿಕೆಯಿಂದ ತೆಗೆದುಕೊಂಡು ಹೋಗಿ ಒಳ್ಳೆಯ ತೀರ್ಥದಲ್ಲಿ ಹಾಕು. ಎಂದನು.

೧೪೯. ಆಗ ನಾನು ಆ ಪಿಂಡಗಳನ್ನು ಅಶುಚಿಯಾಗಿರುವ ಒಂದು ಭಾವಿಯಲ್ಲಿ ಎಸೆದೆನು. ಆಗ ಆ ಬ್ರಾಹ್ಮಣನಿಗೆ ಬಹು ದುಃಖವು ಬಂದಿತು. ಹಾ! ಹಾ! ಎಂದು ಹೇಳುತ್ತ ಅಸ್ಥಿರನಾದನು.

೧೫೦. ಆಗ ಕ್ಷಣಕಾಲ ಯೋಚನೆಮಾಡುತ್ತ ಈ ಪಿಂಡಗಳನ್ನು ನೀನು ಹೊರಕ್ಕೆ ತೆಗೆಯಬೇಡ ಎಂದನು. ಒಡನೆಯೇ ನಾನು ಅವನ್ನು ಅಶುಚಿಯ ಆ ಭಾವಿಯಿಂದ ಹೊರಕ್ಕೆ ತೆಗೆದೆನು.

ತತಃ ಪುನಸ್ಸ ಮಾಮಾಹ ಪಿಂಡಾನ್ ತೀರ್ಥೇ ಕ್ಷಿಪಸ್ವ ಮಾ ।
ತದಾ ತೀರ್ಥೇ ಮಯಾ ಕ್ಷಿಪ್ತಾಸ್ತೇ ಪಿಂಡಾ ಪರಮಾದರಾತ್ ॥ ೧೫೧ ॥

ಏವಂ ಮಯಾ ಕದಾ ಭರ್ತುರ್ವಚನಂ ನ ಕೃತಂ ತದಾ ।
ಕಲಹಪ್ರಿಯಾ ಚ ನೈ ನಿತ್ಯಂ ಮಯ್ಯುದ್ವಿಗ್ನಮನಾ ಯದಾ ॥ ೧೫೨ ॥

ಪರಿಣೇತುಂ ತತೋಽನ್ಯಾಂ ವೈ ಮನಶ್ಚಕ್ರೇ ಪತಿರ್ಮಮ ।
ತತೋ ಗರಂ ಸಮಾನೀಯ ಪ್ರಾಣಾಸ್ತ್ಯಕ್ತಾ ಮಯಾ ದ್ವಿಜ ॥ ೧೫೩ ॥

ಅಥ ಬಧ್ವಾ ವಧ್ಯಮಾನಾಂ ಮಾಂ ನಿನ್ಯುರ್ಯಮಕಿಂಕರಾಃ ।
ಯಮಶ್ಚ ಮಾಂ ತದಾ ದೃಷ್ಟ್ವಾ ಚಿತ್ರಗುಪ್ತಮಪೃಚ್ಛತ ॥ ೧೫೪ ॥

---

೧೫೧. ಮತ್ತೆ ನನ್ನ ಪತಿಯು ಈ ಪಿಂಡಗಳನ್ನು ತೀರ್ಥಗಳಲ್ಲಿ ಹಾಕಬೇಡ. ಎಂದನು. ಅದನ್ನು ಕೇಳಿ ಆ ಪಿಂಡಗಳನ್ನು ತೆಗೆದುಕೊಂಡು ಹೋಗಿ ಆದರದಿಂದ ತೀರ್ಥದಲ್ಲಿ ಹಾಕಿದೆನು.

೧೫೨. ಹೀಗೆ ನಾನು ನನ್ನ ಗಂಡನ ಮಾತನ್ನು ನಡೆಸುತ್ತಿರಲಿಲ್ಲ. ನಿತ್ಯವೂ ಜಗಳವಾಡುತ್ತಿದ್ದೆನು. ಇದರಿಂದ ಅವನು ನನ್ನ ವಿಷಯದಲ್ಲಿ ಕೋಪವನ್ನೂ ದುಃಖವನ್ನೂ ಹೊಂದಿದನು.

೧೫೩. ಅನಂತರ ಬೇರೆ ಮತ್ತೊಬ್ಬಳನ್ನೇ ಮದುವೆಯಾಗಬೇಕೆಂಬ ಮನಸ್ಸು ಅವನಿಗೆ ಹುಟ್ಟಿತು. ಆಗ ನಾನು ವಿಷವನ್ನು ತೆಗೆದುಕೊಂಡು ಪ್ರಾಣವನ್ನು ಕಳೆದುಕೊಂಡೆನು.

೧೫೪. ಆಗ ಯಮನ ಆಳುಗಳು ನನ್ನನ್ನು ಹೊಡೆಯುತ್ತ ಎಳೆಯುತ್ತ ಕರೆದುಕೊಂಡು ಹೋದರು. ಆಗ ಯಮನು ನನ್ನನ್ನು ನೋಡಿ ಚಿತ್ರಗುಪ್ತನನ್ನು ಕುರಿತು ಕೇಳಿದನು

॥ ಯಮ ಉವಾಚ ॥

ಅನಯಾ ಕಿಂ ಕೃತಂ ಕರ್ಮ ಫಲಂ ಶುಭಮಥಾಶುಭಂ ।
ಪ್ರಾಪ್ನೋತ್ಯೇಷಾ ಚ ತತ್ಕರ್ಮ ಚಿತ್ರಗುಪ್ತಾವಲೋಕಯ ॥ ೧೫೫ ॥

॥ ಕಲಹೋವಾಚ ॥

ಚಿತ್ರಗುಪ್ತಸ್ತದಾ ವಾಕ್ಯಂ ಭರ್ತ್ಸಯನ್ಮಾಮುವಾಚ ಹ ॥ ೧೫೬ ॥

॥ ಚಿತ್ರಗುಪ್ತ ಉವಾಚ ॥

ಅನಯಾ ತು ಶುಭಂ ಕರ್ಮ ಕೃತಂ ಕಿಂಚಿನ್ನ ವಿದ್ಯತೇ ॥ ೧೫೭ ॥

ಮಿಷ್ಟಾನ್ನಂ ಭುಂಜಮಾನೇಯಂ ನ ಭರ್ತರಿ ತದಪಿರ್ಪಿತಂ ।
ಅತಶ್ಚ ವಲ್ಗುನೀಯೋನ್ಯಾಂ ಸ್ವವಿಷ್ಠಾದಾವತಿಷ್ಠತು ॥ ೧೫೮ ॥

---

೧೫೫. ಯಮನು ಹೇಳಿದನು—ಈಕೆಯು ಶುಭವಾದುದಾಗಲಿ ಅಶುಭವಾದುದಾಗಲಿ ಯಾವ ಕರ್ಮವನ್ನು ಮಾಡಿರುವಳು ? ಅದಕ್ಕೆ ಸರಿಯಾದ ಫಲವನ್ನು ಆಕೆಯು ಹೊಂದಲಿ ! ಎಲೈ ಚಿತ್ರಗುಪ್ತನೆ ! ನೋಡಿ ಹೇಳು ?

೧೫೬. ಕಲಹೆಯು ಹೇಳಿದಳು—ಆಗ ಚಿತ್ರಗುಪ್ತನು ನನ್ನನ್ನು ಹೆದರಿಸುತ್ತ ಇಂತೆಂದನು.

೧೫೭. ಚಿತ್ರಗುಪ್ತನು ಹೇಳಿದನು—ಇವಳು ಯಾವುದೊಂದು ಶುಭ ಕರ್ಮವನ್ನೂ ಮಾಡಿಯೇ ಇಲ್ಲ.

೧೫೮. ಈಕೆಯು ಮೃಷ್ಟಾನ್ನವನ್ನು ಊಟಮಾಡುತ್ತಿದ್ದರೂ ಗಂಡನಿಗೆ ಸ್ವಲ್ಪವನ್ನೂ ಕೊಡುತ್ತಲೇ ಇರಲಿಲ್ಲ. ಆದುದರಿಂದ ಈಕೆಯು ವಲ್ಗು ಜನ್ಮದಲ್ಲಿ ಹುಟ್ಟಿ ತನ್ನ ಅಮೇಧ್ಯವನ್ನು ತಾನೇ ತಿನ್ನುತ್ತಿರಲಿ !

ಭರ್ತ್ತುರ್ದ್ವೇಷ್ಟಿ ಸದಾ ತ್ವೇಷಾ ನಿತ್ಯಂ ಕಲಹಕಾರಿಣೀ ।
ವಿಷ್ಠಾದಾ ಸೂಕರೀಯೋನ್ಯಾಂ ತಸ್ಮಾತ್ತಿಷ್ಠ ತ್ವಯಂ ಹರೇ ॥ ೧೫೯ ॥

ಪಾಕಭಾಂಡೇ ಸದಾ ಭುಂಕ್ತೇ ಗುಪ್ತಂ ಚೈಕಾ ಯತಸ್ತತಃ ।
ತಸ್ಮಾದ್ದೋಷಾದ್ಬಿಡಾಲಾ ತು ಸ್ವಜಾತಾಪತ್ಯಭಕ್ಷಿಣೀ ॥ ೧೬೦ ॥

ಭರ್ತಾರಮಪಿ ಚೋದ್ದಿಶ್ಯ ಹ್ಯಾತ್ಮಘಾತಃ ಕೃತೋನಯಾ ।
ತಸ್ಮಾತ್ಪ್ರೇತಶರೀರೇಪಿ ತಿಷ್ಠತ್ವೇತಾತಿನಿಂದಿತಾ ॥ ೧೬೧ ॥

ಅತಶ್ಚೈಷಾ ಮರುದೇಶೇ ಪ್ರಾಪಿತವ್ಯಾ ಹರೇ ಭಟೈಃ ।
ತತ್ರ ಪ್ರೇತಶರೀರಸ್ಥಾ ಚಿರಂ ತಿಷ್ಠತ್ವಿಯಂ ತತಃ ।
ಊರ್ಧ್ವಂ ಯೋನಿತ್ರಯಂ ಚೈಷಾ ಭುನಕ್ತ್ವಶುಭಕಾರಿಣೀ ॥ ೧೬೨ ॥

---

೧೫೯. ಈಕೆಯು ಗಂಡನನ್ನು ಯಾವಾಗಲೂ ದ್ವೇಷಿಸುತ್ತಿದ್ದುದರಿಂದಲೂ ಅವನೊಡನೆ ಜಗಳವಾಡುತ್ತಿದ್ದುದರಿಂದಲೂ ಅಮೇಧ್ಯವನ್ನು ತಿನ್ನುವ ಹಂದಿಯ ಜನ್ಮದಲ್ಲಿ ಹುಟ್ಟಲಿ.

೧೬೦. ಈಕೆಯು ಅಡಿಗೆಮಾಡಿದ ಪಾತ್ರೆಯಲ್ಲಿಯೇ ತಿನ್ನುತ್ತಿದ್ದುದರಿಂದಲೂ ಮತ್ತೊಬ್ಬರಿಗೂ ಕೊಡದೆ ಗುಟ್ಟಾಗಿ ತಿನ್ನುತ್ತಿದ್ದುದರಿಂದಲೂ ತಾನು ಹೆತ್ತ ಮರಿಗಳನ್ನೇ ತಿನ್ನುತ್ತಾ ಬೆಕ್ಕಿನ ಜಾತಿಯಲ್ಲಿ ಹುಟ್ಟಲಿ.

೧೬೧. ಇವಳು ಗಂಡನಮೇಲಿನ ದ್ವೇಷದಿಂದ ತನ್ನ ಪ್ರಾಣಗಳನ್ನು ಕಳೆದುಕೊಂಡುದರಿಂದ ಈಕೆಯು ಪ್ರೇತಶರೀರದಲ್ಲಿ ಒಬ್ಬಂಟಿಗಳಾಗಿ ಇರಬೇಕು.

೧೬೨. ಆದುದರಿಂದ ಇವಳನ್ನು ಮರುಭೂಮಿಗೆ ಭಟರಜೊತೆಯಲ್ಲಿ ಕಳುಹಿಸಬೇಕು. ಅಲ್ಲಿ ಪ್ರೇತಶರೀರದಲ್ಲಿ ಬಹುಕಾಲ ದುಃಖಪಡುತ್ತಿರಲಿ. ಈ ಪ್ರೇತಶರೀರದಲ್ಲಿ ದುಃಖಗಳನ್ನು ಅನುಭವಿಸಿದಮೇಲೆ ಈಕೆಯು ಆ ಮೂರು ಜನ್ಮಗಳಲ್ಲಿ ಹುಟ್ಟಿ ಕಷ್ಟಗಳನ್ನು ಅನುಭವಿಸಲಿ.

॥ ಕಲಹೋವಾಚ ॥

ತತೋ ದೂತ್ಯೈಃ ಪ್ರಾಪಿತಾಹಂ ಮರುದೇಶಂ ಕ್ಷಣಾದ್ದ್ವಿಜ ॥ ೧೬೩ ॥

ದತ್ವಾ ಪ್ರೇತಶರೀರಂ ಮಾಂ ಗತಾಸ್ತೇ ಸ್ವಸ್ಥಲಂ ಪ್ರತಿ ।
ಸಾಹಂ ಪಂಚ ದಶಾಬ್ದಾನಿ ಪ್ರೇತದೇಹಸ್ಥಿತಾ ಕಿಲ ॥ ೧೬೪ ॥

ಕ್ಷುತ್ತೃಡ್ಭ್ಯಾಂ ಪೀಡಿತಾತ್ಯರ್ಥಂ ದುಃಖಿತಾ ಸ್ವೇನ ಕರ್ಮಣಾ ।
ತತಃ ಕ್ಷುತ್ಪೀಡಿತಾ ನಿತ್ಯಂ ಶರೀರಂ ವಣಿಜಸ್ಯ ಹ ॥ ೧೬೫ ॥

ಪ್ರವಿಶ್ಯ ದಕ್ಷಿಣೇ ಪ್ರಾಪ್ತಾ ಕೃಷ್ಣಾವೇಣ್ಯಾಸ್ತು ಸಂಗಮೇ ।
ತತ್ತೀರಂ ಸಂಶ್ರಿತಾ ಯಾವತ್ತಾವತ್ತಸ್ಯ ಶರೀರತಃ ॥ ೧೬೬ ॥

---

೧೬೩. ಕಲಹೆಯು ಹೇಳಿದಳು—ಒಡನೆಯೇ ಆ ಯಮನ ಮಾತಿನಂತೆ ಭಟರು ಬಂದು ನನ್ನನ್ನು ಮರುದೇಶಕ್ಕೆ ಕರೆದುಕೊಂಡು ಹೋದರು.

೧೬೪. ಅವರು ನನಗೆ ಪ್ರೇತಶರೀರವನ್ನು ಕೊಟ್ಟು ಅವರವರ ಸ್ಥಳಕ್ಕೆ ಹೊರಟು ಹೋದರು. ಅಲ್ಲಿ ನಾನು ಹದಿನೈದು ವರ್ಷಗಳವರೆಗೆ ಪ್ರೇತದೇಹದಲ್ಲಿದ್ದುಕೊಂಡು ದುಃಖವನ್ನು ಅನುಭವಿಸುತ್ತಿದ್ದೆನು.

೧೬೫. ಅಲ್ಲಿ ನನಗೆ ಹಸಿವು ಬಾಯಾರಿಕೆಗಳು ಬಹು ಬಾಧಿಸುತ್ತಿದ್ದುವು. ನನ್ನ ಈ ಕೆಟ್ಟಕೆಲಸದಿಂದ ನಾನು ದುಃಖವನ್ನು ಅನುಭವಿಸುತ್ತಿದ್ದೆನು. ಒಂದುಸಾರಿ ನನಗೆ ಹಸಿವು ಬಹು ಹೆಚ್ಚಾಗಿ ಉಂಟಾಗಲು ಒಬ್ಬ ವರ್ತಕನ ದೇಹವನ್ನು ಹೊಕ್ಕೆನು.

೧೬೬. ಅವನ ಶರೀರವನ್ನು ಹೊಕ್ಕು ದಕ್ಷಿಣದಿಕ್ಕಿನಲ್ಲಿರುವ ಕೃಷ್ಣವೇಣೀ ಸಂಗಮಕ್ಕೆ ಬಂದೆನು. ಅದರ ತೀರಕ್ಕೆ ಬಂದೊಡನೆಯೇ ನನ್ನನ್ನು ಶಿವಗಣಗಳೂ ವಿಷ್ಣುಗಣಗಳೂ ಅವನ ಶರೀರವನ್ನು ಬಿಡುವಂತೆ ತೊಂದರೆಪಡಿಸಿದರು.

ಶಿವ ವಿಷ್ಣು ಗಣೈರ್ದೂರಮುಸಾಕೃಷ್ಟಾ ಬಲಾದಹಂ ।
ತತಃ ಕ್ಷುತ್ ಕ್ಷಾಮಯಾ ದೃಷ್ಟ್ವಾ ಭ್ರಮಂತ್ಯಾ ತ್ವಂ ಮಯಾ ದ್ವಿಜ॥೧೬೭॥

ತ್ವದ್ಧಸ್ತ ತುಲಸೀವಾರಿ ಸಂಸ್ಪರ್ಶಗತಪಾತಕಾ ।
ತತ್ಕೃಪಾಂ ಕುರು ವಿಪ್ರೇಂದ್ರ ಕಥಂ ಮುಕ್ತಾ ಭವಾಮ್ಯಹಂ ॥ ೧೬೮ ॥

ಯೋನಿತ್ರಯಾದಗ್ರಭಾವ್ಯಾದಸ್ಮಾಚ್ಚ ಪ್ರೇತಭಾವತಃ ।
ಮಾಮುದ್ಧರ ಮುನಿಶ್ರೇಷ್ಠ ತ್ವಾಮಹಂ ಶರಣಂ ಗತಾ ॥ ೧೬೯ ॥

---

೧೬೭. ಈ ರೀತಿಯಾಗಿ ತೊಂದರೆಕೊಡುತ್ತಾ ಅವನ ದೇಹದಿಂದ ನನ್ನನ್ನು ಬಲಾತ್ಕಾರದಿಂದ ಹೊರಗೆ ನೂಕಿದರು. ಅನಂತರ ಹಸಿವನ್ನು ತಡೆಯಲಾರದೆ ಓಡಿಯಾಡುತ್ತಿರಲು ಇಲ್ಲಿ ನಿನ್ನನ್ನು ಕಂಡೆನು.

೧೬೮. ನೀನು ನನ್ನ ಮೇಲೆ ಈ ತುಳಸಿಯ ನೀರನ್ನು ಎರೆಚಿದೆ. ಅದರ ಸ್ಪರ್ಶದಿಂದ ನನ್ನ ಪಾಪಗಳೆಲ್ಲವೂ ಹೋದುವು. ಎಲೈ ಬ್ರಾಹ್ಮಣನೆ! ಆದುದರಿಂದ ನನ್ನಮೇಲೆ ಕೃಪೆಮಾಡಿ ನಾನು ಮುಕ್ತಿಯನ್ನು ಹೊಂದುವ ಬಗೆಯನ್ನು ತಿಳಿಸು.

೧೬೯. ನನಗೆ ಇನ್ನುಮುಂದೆ ಮೂರು ಕೆಟ್ಟ ಜನ್ಮಗಳು ಕಾದಿವೆ. ಈಗ ಈ ಪ್ರೇತಶರೀರವು ದುಃಖಕರವಾಗಿದೆ. ಇವುಗಳಿಂದ ನನ್ನನ್ನು ಪಾರುಗಾಣಿಸು. ನಿನ್ನನ್ನು ಮೊರೆಹೊಕ್ಕಿದ್ದೇನೆ.

ಇತ್ಥಂ ನಿಶಮ್ಯ ಕಲಹಾವಚನಂ ದ್ವಿಜಶ್ಚ |
ತತ್ಪ್ರಾಪಕರ್ಮ ಭಯವಿಸ್ಮಯ ದುಃಖ ಯುಕ್ತಃ ||
ತದ್ಬಾಲನಿದರ್ಶನ ಕೃಪಾಚಲ ಚಿತ್ತವೃತ್ತಿಃ ।
ಧ್ಯಾತ್ವಾ ಚಿರಂ ಸುವಚನಂ ನಿಜಗಾದ ದುಃಖಾತ್ ॥ ೧೭೦ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಸಾರಕಾಂಡೇ ವೃಂದಾಶಾಪ ಕಲಹಾಖ್ಯಾನೋ ನಾಮ ಚತುರ್ಥಸ್ಸರ್ಗಸ್ಸಮಾಪ್ತಃ

---

೧೭೦. ಆ ಬ್ರಾಹ್ಮಣನು ಕಲಹೆಯ ಈ ಮಾತನ್ನು ಕೇಳಿದನು. ಮತ್ತು ಅವಳ ಆ ರೀತಿಯ ಜನ್ಮಕ್ಕೆ ಕಾರಣವಾದ ಪಾಪಗಳಿಂದಲೂ ಭಯಗೊಂಡನು. ಅವಳು ದೀನತೆಯಿಂದ ಕೇಳಿಕೊಳ್ಳುತ್ತಿರುವುದರಿಂದ ಅವಳಲ್ಲಿ ದಯೆಯೂ ಬಂದಿತು. ಇದರಿಂದ ಸ್ವಲ್ಪಹೊತ್ತು ಯೋಚಿಸಿ ದುಃಖದಿಂದ ಇಂತೆಂದು ಒಳ್ಳೆಯ ಮಾತನ್ನು ಹೇಳಿದನು.

ಇಂತು ಶ್ರೀ ಶತಕೋಟಿ ರಾಮಾಯಣಾಂತರ್ಗತವಾದ ವಾಲ್ಮೀಕಿ ವಿರಚಿತವಾದ ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ ವೃಂದಾಶಾಪ, ಕಲಹಾಖ್ಯಾನಗಳೆಂಬ ನಾಲ್ಕನೆಯ ಸರ್ಗವು ಮುಗಿದುದು.

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

॥ ಚತುರ್ಥಸರ್ಗದ ಸಾರಾಂಶವು ॥

ಶ್ರೀರಾಮನು ಇಂತು ಮದುವೆಮಾಡಿಕೊಂಡು ಅಯೋಧ್ಯೆಗೆ ಹೋಗಿ ನಾನಾ ವಿಧವಾದ ಭೋಗಗಳನ್ನು ಅನುಭವಿಸುತ್ತಿದ್ದನು. ಆಗ ದೀಪಾವಳಿಯ ಹಬ್ಬವು ಬರಲು ಜನಕನು ಅಳಿಯಂದಿರನ್ನೂ ಬೀಗರನ್ನೂ ಕರೆಸಿ ಬಹುವಾಗಿ ಉತ್ಸವವನ್ನೂ ಮಾಡಿ ಅವರಿಗೆ ಅನೇಕವಾದ ಬಳುವಳಿಗಳನ್ನೂ ಕೊಟ್ಟನು.

ಹಬ್ಬವೆಲ್ಲವೂ ಕಳೆಯಲು ದಶರಥನು ಮಕ್ಕಳೊಡನೆಯೂ ಸೊಸೆಯ ರೊಡನೆಯೂ ತನ್ನ ರಾಜಧಾನಿಗೆ ಹೊರಟನು. ಹಿಂದೆ ಸೀತಾಸ್ವಯಂವರ ಕಾಲದಲ್ಲಿ ಅವಮಾನಿತರಾಗಿದ್ದ ರಾಜರೆಲ್ಲರೂ ಸಮಯವನ್ನೇ ಕಾಯುತ್ತಿದ್ದು ಹಿಂದಿನ ವೈರವನ್ನು ಸ್ಮರಿಸಿಕೊಂಡು ಬಹು ಸಂಖ್ಯೆಯುಳ್ಳ ಸೇನೆಯೊಡನೆ ಕೂಡಿಕೊಂಡು ಬಂದು ಆ ದಾರಿಯಲ್ಲಿ ದಶರಥನನ್ನು ತಡೆದರು.

ಇದನ್ನು ನೋಡಿದ ದಶರಥನು ಚಿಂತಿಸುತ್ತಿರಲು ಶ್ರೀರಾಮನು ಲಕ್ಷ್ಮಣ ನೊಡನೆ ತಂದೆಯ ಬಳಿಗೆ ಹೋಗಿ ನಮಸ್ಕರಿಸಿ ಅವರನ್ನು ತಾನು ಓಡಿಸು ವಂತೆಯೂ ಚಿಂತೆಮಾಡಬೇಕಾದುದಿಲ್ಲವೆಂದೂ ಹೇಳಿದನು.

ದಶರಥನು ಎಲೈ ಬಾಲನೇ? ನೀನಿನ್ನೂ ಚಿಕ್ಕವನು. ಅವರನ್ನೆಲ್ಲಾ ಎದುರಿಸುವ ಶಕ್ತಿಯು ನಿನಗಿರುವುದಿಲ್ಲವೆನಲು ರಾಮನು ತಾನು ಹೋಗಿ ಯುದ್ಧಮಾಡುವುದಾಗಿಯೂ ತಾನು ಸೋಲುವಂತಾದಾಗ ದಶರಥನು ಬರಬಹುದೆಂದೂ ಹೇಳಿದನು. ಈ ರಾಮನ ಜೊತೆಯಲ್ಲಿ ಲಕ್ಷ್ಮಣ ಭರತ ಶತ್ರುಘ್ನರೂ ಹೊರಟರು.

ಈ ನಾಲ್ವರೂ ತಮ್ಮ ಜೊತೆಯಲ್ಲಿ ಸೈನ್ಯವನ್ನು ಕರೆದುಕೊಂಡು ಹೊರಟರು. ಶತ್ರುಗಳೊಡನೆ ಮಹತ್ತಾದ ಯುದ್ಧವು ಪ್ರಾರಂಭವಾಯಿತು. ರಾಜರೆಲ್ಲರೂ ಸೇರಿ ಭರತನನ್ನು ಹೊಡೆಯಲು ಅವನು ಮೂರ್ಛಿತನಾಗಿ ರಥದಿಂದ ನೆಲದ ಮೇಲೆ ಬಿದ್ದನು. ಅನಂತರ ಶತ್ರುಘ್ನನ ರಥವನ್ನು ಪುಡಿ ಪುಡಿ ಮಾಡಿದರು. ಲಕ್ಷ್ಮಣನನ್ನು ಸೋಲಿಸಿದರು. ಅನಂತರ ರಾಮನೊಡನೆ ಯುದ್ಧಕ್ಕೆ ಬರಲು ರಾಮನು ಬಹುಕಾಲ ಯುದ್ಧವನ್ನು ಮಾಡುತ್ತಾ ಕೊನೆಗೆ ಮೋಹನಾಸ್ತ್ರದಿಂದ ಎಲ್ಲರನ್ನೂ ಜ್ಞಾನತಪ್ಪುವಂತೆ ಮಾಡಿದನು.

ಆಮೇಲೆ ದಶರಥ ಕೈಕೇಯಿ ಮುಂತಾದವರು ಆ ರಣಾಂಗಣಕ್ಕೆ ಬಂದು ಬಹು ಹೊತ್ತಾದರೂ ಎಚ್ಚರಗೊಳ್ಳದಿರುವ ಭರತನನ್ನು ನೋಡಿ ಪ್ರಲಾಪಿಸುತ್ತಿದ್ದರು ರಾಮನು ತಾಯಿತಂದೆಗಳಿಗೆ ದುಃಖಪಡದಿರುವಂತೆ ಹೇಳಿ ಲಕ್ಷ್ಮಣನನ್ನು ಕರೆದು ಮುದ್ಗಲಋಷಿಯ ಆಶ್ರಮಕ್ಕೆ ಹೋಗಿ ಅಲ್ಲಿರುವ ಸಂಜೀವಿನಿಯೇ ಮುಂತಾದ ಮೂಲಿಕೆಗಳನ್ನು ತರುವಂತೆ ಹೇಳಿದನು.

ಲಕ್ಷ್ಮಣನು ಅಂತೆಯೇ ಹೋಗಿನೋಡಲು ಆ ಋಷಿಯು ಧ್ಯಾನದಲ್ಲಿದ್ದನು. ಅವನ ಶಿಷ್ಯರಿಗೆ ವಿಷಯಗಳೆಲ್ಲವನ್ನೂ ತಿಳಿಸಿದರೂ ಅವರು ಮೂಲಿಕೆಯನ್ನು ತರಲು ಅವಕಾಶವನ್ನು ಕೊಡದೆ ತಡೆದರು.

ಆಗ ಲಕ್ಷ್ಮಣನು ಮತ್ತೆ ರಾಮನ ಬಳಿಗೆ ಬಂದು ನಡೆದ ವಿಷಯವನ್ನು ತಿಳಿಸಲು ರಾಮನು ಆ ಶಿಷ್ಯರನ್ನು ನೋಯಿಸದೆ ಓಡಿಸಿ ಮೂಲಿಕೆಗಳನ್ನು ತೆಗೆದುಕೊಂಡು ಬರುವಂತೆ ಹೇಳಿದನು.

ಲಕ್ಷ್ಮಣನು ಮತ್ತೆ ಹೋಗಿ ಆ ಶಿಷ್ಯರೆಲ್ಲರನ್ನೂ ಹೆದರಿಸಿ ಓಡಿಸಿ ಮೂಲಿಕೆಗಳನ್ನು ತಂದು ಭರತನನ್ನು ಬದುಕಿಸಿದನು.

ಇತ್ತ ಆ ಶಿಷ್ಯರೆಲ್ಲರೂ ಹಾಹಾಕಾರಮಾಡುತ್ತಿದ್ದು ಆ ಮುದ್ಗಲನು ಸಮಾಧಿಯಿಂದ ಎಚ್ಚತ್ತಮೇಲೆ ವಿಷಯವೆಲ್ಲವನ್ನೂ ತಿಳಿಸಿದರು. ಮುದ್ಗಲನು ಲಕ್ಷ್ಮಣನೆಂಬವನಾರು? ಅವನೇಕೆ ಬಂದಿದ್ದನು? ಎಂಬುದನ್ನು ತಿಳಿದು ಬನ್ನಿರೆಂದೆನಲು ಅವರೆಲ್ಲರೂ ದಶರಥನ ಬಳಿಗೆ ಬಂದು ಆ ವಿಷಯವನ್ನು ಹೇಳಿದರು.

ದಶರಥನು ಅದೆಲ್ಲವನ್ನೂ ಕೇಳಿ ನನ್ನ ಹೆಸರು ದಶರಥನು. ಭರತನು ಜೀವಿಸುವಂತೆ ಮಾಡಲು ಆ ಮೂಲಿಕೆಗಳನ್ನು ತರಿಸಿದೆನು. ನನ್ನ ನಮಸ್ಕಾರವನ್ನು ಆ ಮುನಿಗೆ ತಿಳಿಸಿ ಇದೆಲ್ಲವನ್ನೂ ಹೇಳಿರಿ. ನಾನೂ ಕೂಡ ಈಗಲೇ ಮುನಿಯ ದರ್ಶನಕ್ಕೆ ಬರುತ್ತೇನೆ. ಎಂದು ಹೇಳಿ ಕಳುಹಿಸಿದನು.

ಮುನಿಯು ದಶರಥನು ರಾಮನ ತಂದೆಯೆಂಬುದನ್ನು ತಿಳಿದು ಕೋಪವನ್ನು ಬಿಟ್ಟು ಬಿಟ್ಟನು. ಮತ್ತೆ ಆ ಶ್ರೀರಾಮನ ದರ್ಶನಕ್ಕೋಸ್ಕರ ಹೊರಡಲು ಅಷ್ಟರಲ್ಲಿಯೇ ದಶರಥನು ಎಲ್ಲರೊಡನೆಯೂ ಆಶ್ರಮಕ್ಕೆ ಬಂದನು.

ಮುದ್ಗಲನು ಅವರೆಲ್ಲರನ್ನೂ ಗೌರವಿಸಿದನು. ಅವನ ಹೆಂಡತಿಯಾದ ಸುಮತಿಯು ಹೆಂಗಸರನ್ನು ಬಹುಮಾನಿಸಿದಳು. ದಶರಥನು ತನ್ನ ಅಪರಾಧವನ್ನು ಕ್ಷಮಿಸುವಂತೆ ಕೇಳಿಕೊಂಡನು.

ಆದಕ್ಕೆ ಮುದ್ಗಲನು ನೀನು ಮಾಡಿದುದು ಅಪರಾಧವಲ್ಲ. ಅದು ಬಹುವಾದ ಉಪಕಾರವೇ ಆಯಿತು. ನೀನು ಹಾಗೆ ಮಾಡದಿದ್ದರೆ ಧ್ಯಾನದಲ್ಲಿದ್ದ ನನಗೆ ರಾಜನ ವೇಷದಲ್ಲಿರುವ ಈ ಶ್ರೀರಾಮನ ದರ್ಶನವು ಹೇಗಾಗುತ್ತಿದ್ದಿತು? ಎಂದನು.

ದಶರಥನು ಮುನಿಯ ಈ ಮಾತನ್ನು ಕೇಳಿ ಆಶ್ಚರ್ಯಗೊಳ್ಳಲು ಇದನ್ನು ತಿಳಿದು ಮುನಿಯು ಯಾರೂ ಸಂಚರಿಸದಿರುವ ತುಲಸಿಯವನದ ಒಂದು ಭಾಗಕ್ಕೆ ಆತನನ್ನು ಕರೆದುಕೊಂಡು ಹೋಗಿ ನೀನು ಏನನ್ನು ಕೇಳಬೇಕೆಂದಿದ್ದೀಯೆ? ಹೇಳು. ಎಂದನು.

ಆಗ ದಶರಥನು ಎಲೈ ಮುನಿಯೇ! ಶ್ರೀರಾಮನಿಗೆ ಮುಂದೆ ಆಗತಕ್ಕ ಒಳ್ಳೆಯದು ಕೆಟ್ಟುವುಗಳನ್ನು ತಿಳಿಸು ಎನ್ನಲು ಮುನಿಯು ಇಂತೆಂದನು.

ಎಲೈ ದಶರಥನೆ! ಶ್ರೀ ಮಹಾವಿಷ್ಣುವೇ ಭೂಭಾರವನ್ನು ನಾಶಮಾಡುವುದಕ್ಕೂ ನಿನಗೆ ಕೊಟ್ಟಿರುವ ವರವನ್ನು ಸಾರ್ಥಕಗೊಳಿಸುವುದಕ್ಕೂ ನಿನ್ನ ಪುಣ್ಯವಶದಿಂದ ನಿನ್ನ ಹೊಟ್ಟೆಯಲ್ಲಿ ನಿನ್ನ ಮಗನಾಗಿ ಹುಟ್ಟಿರುವನು. ಈಗ ಅವನು ಅಧರ್ಮವನ್ನು ನಾಶಮಾಡಿ ಧರ್ಮವನ್ನು ಉದ್ಧಾರಮಾಡುವನು. ಮತ್ತು ದುಷ್ಟರನ್ನು ನಿಗ್ರಹಿಸಿ ಸಜ್ಜನರನ್ನು ಪಾಲಿಸುವನು. ಹನ್ನೊಂದುಸಾವಿರ ವರ್ಷಗಳವರೆಗೆ ಈ ಲೋಕದಲ್ಲಿದ್ದುಕೊಂಡು ರಾಜ್ಯಭಾರಮಾಡುವನು. ಅವನಿಗೆ ಇಬ್ಬರು ಮಕ್ಕಳಾಗುವರು. ನಾಲ್ಕು ಜನ ಸೊಸೆಯರಾಗುವರು. ಇಪ್ಪತ್ತನಾಲ್ಕು ಜನ ಗಂಡು ಮೊಮ್ಮಕ್ಕಳೂ, ಹನ್ನೆರಡು ಜನ ಹೆಣ್ಣು ಮೊಮ್ಮಕ್ಕಳೂ ಆಗುವರು. ಮರಿಮಕ್ಕಳಂತೂ ಬಹು ಜನರಾಗುವರು.

ಇವನು ವೃಂದೆಯ ಶಾಪವನ್ನು ಅನುಭವಿಸಲು ದಂಡಕಾರಣ್ಯದಲ್ಲಿ ವನವಾಸಕ್ಕೆ ಹೋಗುವನು. ಅನಂತರ ರಾಜ್ಯಭಾರಮಾಡುವನು.

ಇಂತೆನ್ನಲು ಆಗ ದಶರಥನು ಎಲೈ ಮುನಿಯೇ! ಆ ವೃಂದೆಯೆಂಬುವಳಾರು? ಅವಳು ಯಾರ ಹೆಂಡತಿಯು? ಅವಳಿಂದ ಹರಿಗೆ ಶಾಪಬರಲು ಕಾರಣವೇನು? ಎಂದು ಕೇಳಿದನು.

ಎಲೈ ದೊರೆಯೇ ! ಅದೆಲ್ಲವನ್ನೂ ಹೇಳುವೆನು ಕೇಳು. ಹಿಂದೆ ಜಲಂಧರನೆಂಬುವನೊಬ್ಬನಿದ್ದನು. ಅವನಿಗೂ ಶಂಕರನಿಗೂ ಯುದ್ಧವು ನಡೆಯಿತು. ವೃಂದೆಯು ಆ ಜಲಂಧರನ ಹೆಂಡತಿಯು. ಆಕೆಯ ಪಾತಿವ್ರತ್ಯದ ಬಲದಿಂದ ಶಂಕರನಿಗೂ ಅವನು ಸೋಲದಿದ್ದನು. ಅವನು ಪಾರ್ವತಿಯನ್ನು ಕಾಮಿಸಿ ಅವಳನ್ನು ಹೊಂದಲು ಮೋಸದ ರೀತಿಯನ್ನು ಅನುಸರಿಸಿ ಪಾರ್ವತಿಯ ಬಳಿಗೆ ಹೋದನು. ಇದು ವಿಷ್ಣುವಿಗೆ ತಿಳಿಯಲು ವಿಷ್ಣುವು ವೃಂದೆಯ ಪಾತಿವ್ರತ್ಯವನ್ನು ಭಂಗಪಡಿಸಿದರೆ ಆ ಜಲಂಧರನು ಸೋತು ಹತನಾಗುವನೆಂದು ತಿಳಿದು ಆ ಜಲಂಧರನು ಅನುಸರಿಸಿದಂತೆಯೇ ತಾನೂ ಅನುಸರಿಸಿದನು. ಅದಕ್ಕೋಸ್ಕರ ಜಲಂಧರನ ರಾಜಧಾನಿಗೆ ಹೋದನು. ಆಗ ವೃಂದೆಗೆ ಅನೇಕ ದುಸ್ಸ್ವಪ್ನಗಳುಂಟಾದುವು. ಅವಳು ಎಚ್ಚೆತ್ತು ಕಳವಳಿಸುತ್ತಿದ್ದಳು. ಅನಂತರ ಇಬ್ಬರು ಸಖಿಯರನ್ನು ಕರೆದು ಕೊಂಡು ಉದ್ಯಾನಕ್ಕೆ ಹೋದಳು. ಅಲ್ಲಿ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಹೋಗುತ್ತಾ ಭಯಂಕರವಾದ ರಾಕ್ಷಸರನ್ನು ನೋಡಿ ಹೆದರಿ ಓಡುತ್ತಿರುವಾಗ ಒಬ್ಬ ತಪಸ್ವಿಯು ಸಿಕ್ಕಲು ಆತನನ್ನು ಶರಣಹೊಕ್ಕಳು. ಮುನಿಯು ಆಕೆಗೆ ಅಭಯುವನ್ನು ಕೊಟ್ಟು ಹುಂಕಾರದಿಂದಲೇ ಅವರನ್ನು ಓಡಿಸಿದನು.

ಮುನಿಯ ಈ ಮಹಿಮೆಯನ್ನು ವೃಂದೆಯು ನೋಡಿ ಎಲೈ ಮುನಿಯೆ ! ನಿನ್ನಿಂದ ನಾವು ರಕ್ಷಿಸಲ್ಪಟ್ಟೆವು. ನನ್ನ ಗಂಡನಾದ ಜಲಂಧನು ರುದ್ರನೊಡನೆ ಯುದ್ಧಕ್ಕೆ ಹೋಗುವನು. ಯುದ್ಧದಲ್ಲಿ ಅವನು ಏನುಮಾಡುತ್ತಿರುವನು ? ಹೇಗಿರುವನು ? ಎಂಬುದನ್ನು ತಿಳಿಸು ಎಂದಳು.

ಈಕೆಯ ಮಾತನ್ನು ಕೇಳಿ ಮುನಿಯು ಆಕಾಶವನ್ನು ನೋಡಲು ಒಡನೆಯೇ ಎರಡು ಕಪಿಗಳು ಅಲ್ಲಿಗೆ ಬಂದುವು. ಅವುಗಳಿಗೆ ಈತನು ಹುಬ್ಬಿನಿಂದಲೇ ಸಂಜ್ಞೆಯನ್ನು ಮಾಡಲು ಅವು ಆಕಾಶಮಾರ್ಗದಲ್ಲಿಯೇ ಹೋಗಿ ಆ ಜಲಂಧರನ ರುಂಡಮುಂಡಗಳನ್ನು ಕೈಯ್ಯಲ್ಲಿ ತೆಗೆದುಕೊಂಡು ಬಂದುವು. ಇದನ್ನು ನೋಡಿ ಆಕೆಯು ಮೂರ್ಛಿತಳಾದಳು.

ಅನಂತರ ಮುನಿಯು ಕಮಂಡಲುವಿನ ನೀರನ್ನು ಚುಮುಕಿಸಿ ಆಕೆಯು ಎಚ್ಚರಗೊಳ್ಳುವಂತೆ ಮಾಡಿದನು. ಎಚ್ಚೆತ್ತ ಆಕೆಯು ಎಲೈ ಮುನಿಯೇ ! ನೀನು ಈ ಜಲಂಧರನನ್ನು ಬದುಕಿಸು. ಎಂದು ಕೇಳಿಕೊಂಡಳು. ಆ ಮುನಿಯು ಹಾಗೆಯೇ ಆಗಲೆಂದು ಹೇಳಿ ಆತನನ್ನು ಬದುಕಿಸಿ ತಾನು ಅಂತರ್ಧಾನನಾದನು. ವೃಂದೆಯು ಸಂತೋಷಗೊಂಡು ಆ ಜಲಂಧರನೊಡನೆ ಆ ಕಾಡಿನಲ್ಲಿ ಬಹು ದಿನಗಳವರೆಗೂ ಕ್ರೀಡಿಸಿದಳು.

ಹೀಗೆ ಕ್ರೀಡಿಸುತ್ತಿರಲು ಒಂದುದಿನ "ನಾನು ಕ್ರೀಡಿಸುತ್ತಿರುವುದು ನನ್ನ ಪತಿಯಾದ ಜಲಂಧರನೊಡನೆ ಅಲ್ಲ. ಇವನು ಜಲಂಧರವೇಷಧಾರಿಯಾದ ವಿಷ್ಣುವು" ಎಂದು ತಿಳಿಯಿತು. ಆಗ ವೃಂದೆಯು ಕೋಪಗೊಂಡು ಅವನನ್ನು ಗದರಿಸುತ್ತಾ "ಎಲೈ ವಿಷ್ಣುವೇ! ನಿನ್ನ ಈ ಶೀಲಕ್ಕೆ ಧಿಕ್ಕಾರವಿರಲಿ. ನೀನು ಪರರ ಹೆಂಡಿರಲ್ಲಿ ಆಸಕ್ತನಾಗುತ್ತಿರುವಿಯಲ್ಲ! ಈಗ ನಿನ್ನ ವಿಷಯವೆಲ್ಲವೂ ತಿಳಿಯಿತು. ನೀನೇ ಮಾಯೆಯಿಂದ ಆ ತಾಪಸನಾಗಿದ್ದೆ. ಆ ಜಯವಿಜಯರೇ ಮಾಯೆಯಿಂದ ಆ ರಾಕ್ಷಸರಾಗಿ ಬಂದು ನನ್ನನ್ನು ಹೆದರಿಸಿದರು. ಆ ಜಯವಿಜಯ ಇಬ್ಬರೂ ರಾಕ್ಷಸರಾಗಿ ನಿನ್ನ ಹೆಂಡತಿಯನ್ನು ಅಪಹರಿಸಲಿ. ನೀನೂ ಕೂಡ ಆ ಹೆಂಡತಿಯನ್ನು ಕಳೆದುಕೊಂಡುದರಿಂದ ದುಃಖಿತನಾಗಿ ಕಾಡಿನಲ್ಲಿ ಅಲೆದಾಡು. ಆಗ ಕಪಿಗಳೇ ನಿನಗೆ ಸಹಾಯವಾಗಲಿ." ಎಂದು ಶಪಿಸಿ ಬೆಂಕಿಯನ್ನು ಹತ್ತಿಸಿ ಅದರಲ್ಲಿ ಬಿದ್ದು ಸುಟ್ಟುಹೋದಳು.

ಇತ್ತ ಜಲಂಧರನನ್ನು ಶಿವನು ಕೊಂದನು. ಈಗ ಆ ಜಯವಿಜಯರೇ ರಾವಣ ಕುಂಭಕರ್ಣರಾಗಿ ಹುಟ್ಟಿ ಸಮುದ್ರಮಧ್ಯದಲ್ಲಿರುವ ಲಂಕೆಯಲ್ಲಿ ರಾಜ್ಯವಾಳುತ್ತಿರುವರು. ಅವರು ಈ ಸೀತೆಯನ್ನೇ ಕದ್ದುಕೊಂಡು ಹೋಗಿ ತಾಯಿಯಂತೆ ಕಾಪಾಡುವರು. ಅನಂತರ ರಾಮಬಾಣದಿಂದ ಹತರಾಗುವರು.

ರಾಮನು ವಾಲಿಯನ್ನು ಕೊಂದು ಸುಗ್ರೀವನೇ ಮುಂತಾದ ಕಪಿಗಳೊಡನೆ ಸೇರಿಕೊಂಡು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ರಾವಣನನ್ನು ಕೊಂದು ಸೀತೆಯನ್ನು ಕರೆತರುವನು.

ಇವನು ಸಪ್ತದ್ವೀಪಾಧಿಪತಿಯಾಗಿ ಅನೇಕ ಯಾಗಗಳನ್ನು ಮಾಡುವನು. ಇದನ್ನು ಗುಟ್ಟಾಗಿಟ್ಟುಕೊ. ಯಾರೊಡನೆಯೂ ಹೇಳಕೂಡದು. ಎಂದನು.

ಮುದ್ಗಲನು ರಾಮನ ವಿಷಯವನ್ನು ಇಂತೆಂದು ಹೇಳಲು ದಶರಥನು ಇದರಿಂದ ಸಂತೋಷಗೊಂಡನು. ಮತ್ತೆ ತಾನು ಪೂರ್ವಜನ್ಮದಲ್ಲಿ ಯಾರಾಗಿದ್ದೆನು? ವಿಷ್ಣುವು ನನ್ನ ಹೊಟ್ಟೆಯಲ್ಲಿ ಹುಟ್ಟುವಂತಹ ಪುಣ್ಯವನ್ನು ನಾನೇನು ಮಾಡಿದ್ದೆನು? ಎಂದೂ ಕೇಳಿದನು.

ಅದಕ್ಕೆ ಋಷಿಯು ಇಂತೆಂದನು—ಸಹ್ಯಪರ್ವತದ ಹತ್ತಿರದಲ್ಲಿರುವ ಕರವೀರಪುರದಲ್ಲಿ ಧರ್ಮಿಷ್ಠನಾದ ಧರ್ಮದತ್ತನೆಂಬ ಬ್ರಾಹ್ಮಣನಿದ್ದನು. ಅವನು ಯಾವಾಗಲೂ ವಿಷ್ಣುವನ್ನೇ ಆರಾಧಿಸುತ್ತಿದ್ದನು. ಒಂದುಸಾರಿ ಕಾರ್ತಿಕಮಾಸದಲ್ಲಿ

ಜಾಗರಣೆಗೋಸ್ಕರ ಬೆಳಗಿನಜಾವದಲ್ಲಿ ಹರಿಯ ಪೂಜಾಸಾಮಗ್ರಿಗಳನ್ನು ತೆಗೆದು ಕೊಂಡು ಹೋಗುತ್ತಿರಲು ಒಬ್ಬ ರಾಕ್ಷಸಿಯು ಈತನ ಎದುರಿಗೆ ಬಂದಳು. ಆಕೆಯನ್ನು ನೋಡಿ ಇವನು ಹೆದರಿ ತಾನು ತೆಗೆದುಕೊಂಡು ಹೋಗುತ್ತಿದ್ದ ಪೂಜೆಯ ಪದಾರ್ಥಗಳಿಂದಲೇ ಹೊಡೆದನು. ಅದರಲ್ಲಿ ತುಳಸಿಯನ್ನು ನೀರಿ ನೊಳಕ್ಕೆ ಹಾಕಿಕೊಂಡು ಅಗ್ರೋದಕನನ್ನು ತೆಗೆದುಕೊಂಡು ಹೋಗುತ್ತಿದ್ದನಷ್ಟೆ! ಹರಿಯ ನಾಮವನ್ನು ಸ್ಮರಿಸುತ್ತ ಅದರಿಂದಲೂ ಹೊಡೆದನು. ಇದರಿಂದ ಆಕೆಯ ಪಾಪವೆಲ್ಲವೂ ಹೋಗಿ ಪೂರ್ವಜನ್ಮದ ಸ್ಮರಣೆಯು ಬಂದಿತು. ಆಗ ಆಕೆಯು ಆತನಿಗೆ ನಮಸ್ಕರಿಸಿ ತನ್ನ ವೃತ್ತಾಂತವನ್ನು ಹೇಳಿಕೊಂಡಳು.

ಎಲೈ ಬ್ರಾಹ್ಮಣನೇ! ಸೌರಾಷ್ಟ್ರದೇಶದಲ್ಲಿ ಭಿಕ್ಷು ಎಂಬ ಬ್ರಾಹ್ಮಣ ನೊಬ್ಬನಿದ್ದನು. ನಾನು ಆತನ ಹೆಂಡತಿಯು. ನನ್ನ ಹೆಸರು ಕಲಹೆ. ನಾನಾ ದರೋ ಗಂಡನಿಗೆ ಒಂದು ಒಳ್ಳೆಯ ಮಾತನ್ನೂ ಕೂಡ ಹೇಳುತ್ತಿರಲಿಲ್ಲ. ಅವನಿಗೆ ಮೃಷ್ಟಾನ್ನವನ್ನು ಒಂದು ದಿನವೂ ಹಾಕಲೇ ಇಲ್ಲ. ನಾನು ಮಾಡುತ್ತಿದ್ದ ಪದಾರ್ಥಗಳನ್ನು ನಾನು ತಿಂದು ಅನಂತರ ಆತನಿಗೆ ಹಾಕುತ್ತಿದ್ದೆನು. ಅಲ್ಲದೆ ಆತನಿಗೆ ಯಾವಾಗಲೂ ವಿರೋಧವಾಗಿಯೇ ನಡೆಯುತ್ತಿದ್ದೆನು.

ಇದರಿಂದ ಬಹು ದುಃಖಗೊಂಡು ಅವನು ತನ್ನ ಬಳಿಗೆ ಒಬ್ಬ ಸ್ನೇಹಿತನು ಬರಲು ಅವನಿಗೆ ಅದೆಲ್ಲವನ್ನೂ ತಿಳಿಸಲು ಆ ಸ್ನೇಹಿತನು ನೀನು ನಿನಗೆ ಆಗ ಬೇಕಾದ ಕೆಲಸಕ್ಕೆ ಆಕೆಗೆ ನಿಷೇಧಮುಖದಿಂದ ತಿಳಿಸೆಂದು ಸಲಹೆ ಕೊಟ್ಟನು. ಅವನು ಅಂತೆಯೇ ಮಾಡಲು ಅದು ಸರಿಹೋಗುತ್ತ ಬಂದಿತು. ಇದರಿಂದ ಅವನಿಗೆ ಕೊಂಚ ಶಾಂತಿಯು ಬಂದಿತು.

ಒಂದುಸಾರಿ ತಂದೆಯ ಶ್ರಾದ್ಧವು ಬರಲು ಅದೆಲ್ಲವನ್ನೂ ನಿಷೇಧಮುಖ ದಿಂದಲೇ ಹೇಳಿ ಮಾಡಿಸಿದನು. ಆದರೆ ಅದರಲ್ಲಿ ಬಳಕೆಯು ಕಡಿಮೆಯಾದು ದರಿಂದ ಪಿಂಡಗಳನ್ನು ನದಿಗೆ ತೆಗೆದುಕೊಂಡು ಹೋಗಿ ಹಾಕೆಂದು ಸರಿಯಾಗಿಯೇ ಹೇಳಲು ನಾನು ಅವನ್ನು ಅಶೌಚ ಭಾವಿಯಲ್ಲಿ ಹಾಕಿದೆನು. ಅನಂತರ ಅವನು ದುಃಖದಿಂದ ಅವನ್ನು ಹೊರಗೆ ತೆಗೆದು ತೀರ್ಥದಲ್ಲಿ ಹಾಕಿದನು.

ನಾನು ಈ ರೀತಿಯಾಗಿ ವ್ಯತಿರಿಕ್ತವಾಗಿರುತ್ತ ಜಗಳವಾಡುತ್ತಿದ್ದುದರಿಂದ ಆತನಿಗೆ ಬೇಸರಹುಟ್ಟಿ ಮತ್ತೊಬ್ಬಳನ್ನು ಮದುವೆಯಾದನು. ನಾನು ಆ ಸವತಿಯ ದುಃಖದಿಂದ ವಿಷವನ್ನು ಕುಡಿದು ಸತ್ತೆನು. ಯಮಲೋಕಕ್ಕೆ ಹೋಗಲು ಅಲ್ಲಿ

ನನ್ನ ವಿಚಾರಣೆಯೂ ನಡೆದು ಈಕೆಯು ಪತಿಗೆ ಕೊಡದೆ ತಾನೇ ಮೃಷ್ಟಾನ್ನವನ್ನು ತಿನ್ನುತ್ತಿದ್ದುದರಿಂದ ವಲ್ಗು ಜನ್ಮದಲ್ಲಿ ಹುಟ್ಟಬೇಕೆಂದೂ ಪತಿಯನ್ನು ದ್ವೇಷಿಸುತ್ತಿದ್ದುದರಿಂದ ಹಂದಿಯಾಗಿ ಹುಟ್ಟಬೇಕೆಂದೂ ಅಡಿಗೆಯ ಪಾತ್ರೆಯಲ್ಲಿಯೇ ತಿನ್ನುತ್ತಿದ್ದುದರಿಂದ ಬೆಕ್ಕಾಗಿ ಹುಟ್ಟಬೇಕೆಂದೂ ಗಂಡನಮೇಲಿನ ದ್ವೇಷದಿಂದ ಪ್ರಾಣಬಿಟ್ಟಿರುವಳಾದ್ದರಿಂದ ಪ್ರೇತಳಾಗಿರಬೇಕೆಂದೂ ಅಪ್ಪಣೆ ಮಾಡಿದನು.

ಅನಂತರ ನಾನು ಮರುಭೂಮಿಯಲ್ಲಿ ಪ್ರೇತವಾಗಿದ್ದು ಅನ್ನ ನೀರಿಲ್ಲದೆ ಒಬ್ಬ ವರ್ತಕನ ದೇಹವನ್ನು ಹೊಂದಿ ಕೃಷ್ಣಾನದಿಯ ತೀರಕ್ಕೆ ಬಂದೆನು. ಅಲ್ಲಿ ಅವನನ್ನು ಬಿಡಬೇಕಾಗಿ ಬಂದಿತು. ಅದರಿಂದ ನಾನು ದಿಕ್ಕು ತೋಚದೆ ಅತ್ತಿತ್ತ ಅಲೆದಾಡುತ್ತ ಇಲ್ಲಿಗೆ ಬರಲು ನೀನು ತುಲಸಿಯ ನೀರನ್ನು ವಿಷ್ಣುನಾಮ ಸ್ಮರಣೆಯನ್ನು ಮಾಡುತ್ತ ಎಸೆದುದರಿಂದ ನನ್ನ ಪಾಪವು ಹೋಗಿ ಪೂರ್ವಜನ್ಮದ ಸ್ಮರಣೆಯು ಬಂದಿತು.

ಮುಂದೆ ಬರತಕ್ಕ ಆ ಮೂರು ಜನ್ಮಗಳಿಂದಲೂ ನನ್ನನ್ನು ದಯವಿಟ್ಟು ಪಾರುಮಾಡು. ನಿನ್ನನ್ನು ಶರಣಹೊಂದಿದ್ದೇನೆ. ಎಂದೆನಲು ಇದರಿಂದ ಆಶ್ಚರ್ಯಗೊಂಡ ಆತನು ಕ್ಷಣಕಾಲ ಚಿಂತಿಸಿ ಇಂತೆಂದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಸಾರಕಾಂಡೇ

॥ ಪಂಚಮಸ್ಸರ್ಗಃ ॥

॥ ಧರ್ಮದತ್ತ ಉವಾಚ ॥

ವಿಲಯಂ ಯಾಂತಿ ಪಾಪಾನಿ ತೀರ್ಥದಾನವ್ರತಾದಿಭಿಃ ।
ಪ್ರೇತದೇಹೇ ಸ್ಥಿತಾಯಾಸ್ತೇ ತೇಷು ನೈವಾಧಿಕಾರಿತಾ ॥ ೧ ॥

ತ್ವದ್ಗ್ಲಾನಿದರ್ಶನಾದಸ್ಮಾತ್ಖಿನ್ನಂ ಚ ಮಮ ಮಾನಸಂ ।
ನೈವ ನಿರ್ವೃತಿಮಾಯಾತಿ ತ್ವಾಮನುದ್ಧೃತ್ಯ ದುಃಖಿತಾಂ ॥ ೨ ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ ಐದನೆಯ ಸರ್ಗವು

೧. ಧರ್ಮದತ್ತನು ಹೇಳಿದನು–ಎಲೈ ಕಲಹೆಯೆ ! ತೀರ್ಥದಲ್ಲಿ ಸ್ನಾನ ಮಾಡುವುದು ವ್ರತಗಳನ್ನು ಆಚರಿಸುವುದು ಇವುಗಳಿಂದ ಪಾಪಗಳು ಹೋಗುತ್ತವೆ. ನೀನು ಪ್ರೇತದೇಹದಲ್ಲಿರುವುದರಿಂದ ಇವುಗಳನ್ನು ಮಾಡುವುದಕ್ಕೆ ನಿನಗೆ ಅಧಿಕಾರವಿರುವುದಿಲ್ಲ.

೨. ನೀನು ದುಃಖಪಡುತ್ತಿರುವುದನ್ನು ನೋಡಿ ನನ್ನ ಮನಸ್ಸು ಬಹುವಾಗಿ ಖೇದಗೊಂಡಿದೆ. ದುಃಖಿತಳಾದ ನಿನ್ನನ್ನು ಉದ್ಧಾರಮಾಡಿದಲ್ಲದೆ ನನ್ನ ಮನಸ್ಸು ಸುಖವನ್ನು ಹೊಂದುವುದಿಲ್ಲ.

ಪಾತಕಂ ಚ ತವಾತ್ಯುಗ್ರಂ ಯೋನಿತ್ರಯವಿಪಾಕದಂ ।
ನೈವಾಲ್ಪೈಃ ಕ್ಷೀಯತೇ ಪುಣ್ಯೈಃ ಪ್ರೇತತ್ವಂ ಚಾತಿಗರ್ಹಿತಂ ॥ ೩ ॥

ತಸ್ಮಾದಾಜನ್ಮಜನಿತಂ ಯನ್ಮಯಾ ಕಾರ್ತಿಕಂ ವ್ರತಂ ।
ತತ್ಪುಣ್ಯಸ್ಯಾರ್ಧಭಾಗೇನ ಸದ್ಗತಿತ್ವಂ ಅವಾಪ್ನುಯಾತ್ ॥ ೪ ॥

ಕಾರ್ತಿಕವ್ರತಪುಣ್ಯೇನ ನ ಸಾಮ್ಯಂ ಯಾಂತಿ ಸರ್ವಥಾ ।
ಯಜ್ಞದಾನಾನಿ ತೀರ್ಥಾನಿ ವ್ರತಾನ್ಯಪಿ ತತೋ ಧ್ರುವಂ ॥ ೫ ॥

ಃ ಮುದ್ಗಲ ಉವಾಚ ॥

ಇತ್ಯುಕ್ತ್ವಾ ಧರ್ಮದತ್ತೋಽಸೌ ಯಾವತ್ತಾಮಭ್ಯಷೇಚಯತ್ ।
ತುಲಸೀಮಿಶ್ರತೋಯೇನ ಶ್ರಾವಯನ್ ದ್ವಾದಶಾಕ್ಷರಂ ॥ ೬ ॥

---

೩. ನಿನ್ನ ಪಾಪವಾದರೋ ಬಹು ಉಗ್ರವಾದುದು. ಅದನ್ನು ಮೂರು ಜನ್ಮಗಳನ್ನೆತ್ತಿ ಅನುಭವಿಸಬೇಕು. ಈ ಪ್ರೇತಭಾವವೂ ಕೂಡ ಬಹು ಉಗ್ರವಾದುದು. ಅದು ಅಲ್ಪಸ್ವಲ್ಪ ಪುಣ್ಯಗಳಿಂದ ನಾಶವಾಗತಕ್ಕದಲ್ಲ.

೪. ನಾನಾದರೋ ಕಾರ್ತಿಕ ವ್ರತವನ್ನು ಜನ್ಮವೆತ್ತಿದಾಗಿನಿಂದಲೂ ಮಾಡುತ್ತ ಬಂದಿರುತ್ತೇನೆ. ಅದರಲ್ಲಿ ಅರ್ಧಭಾಗವನ್ನು ಕೊಟ್ಟರೆ ನೀನು ಸದ್ಗತಿಯನ್ನು ಹೊಂದಬಹುದು.

೫. ಯಜ್ಞಗಳಾಗಲಿ, ದಾನಗಳಾಗಲಿ, ತೀರ್ಥಗಳಾಗಲಿ, ವ್ರತಗಳಾಗಲಿ, ಒಂದೂ ಕೂಡ ಈ ಕಾರ್ತಿಕ ವ್ರತದ ಪುಣ್ಯದೊಡನೆ ಸರಿದೂಗಲಾರವು. ಇದು ಖಂಡಿತವು.

೬. ಮುದ್ಗಲನು ಹೇಳಿದನು—ಇಂತೆಂದು ಹೇಳಿ ಆ ಧರ್ಮದತ್ತನು ದ್ವಾದಶಾಕ್ಷರ ಮಂತ್ರವನ್ನು ಹೇಳುತ್ತ ತುಲಸಿಯನ್ನು ಹಾಕಿದ ನೀರಿನಿಂದ ಅವಳಿಗೆ ಪ್ರೋಕ್ಷಣೆ ಮಾಡಿದನು.

ತಾವತ್ಪ್ರೇತತ್ವನಿರ್ಮುಕ್ತಾ ಜ್ವಲದಗ್ನಿಶಿಖೋಪಮಾ ।
ದಿವ್ಯರೂಪಧರಾ ಜಾತಾ ಲಾವಣ್ಯೇನ ಯಥೋರ್ವಶೀ ॥ ೭ ॥

ತತಸ್ಸಾ ದಂಡವದ್ಭೂಮೌ ಪ್ರಣನಾಮ ಯಥಾ ದ್ವಿಜಂ ।
ಉವಾಚ ಸಾ ತದಾ ವಾಕ್ಯಂ ಹರ್ಷಗದ್ಗದಭಾಷಿಣೀ ॥ ೮ ॥

॥ ಕಲಹೋವಾಚ ॥

ತ್ವತ್ಪ್ರಸಾದಾತ್ ದ್ವಿಜಶ್ರೇಷ್ಠ ವಿಮುಕ್ತಾ ನಿರಯಾದಹಂ ।
ಪಾಪಾಬ್ಧೌ ಮಜ್ಜಮಾನಾಯಾಸ್ತ್ವಂ ನೌ ಭೂತೋಸಿ ಮೇ ಧ್ರುವಂ॥ ೯ ॥

॥ ಮುದ್ಗಲ ಉವಾಚ ॥

ಇತ್ಥಂ ಸಾ ವದತೀ ವಿಪ್ರಂ ದದರ್ಶಾಯಾಂತಮಂಬರಾತ್ ।
ವಿಮಾನಂ ಸುಂದರಂ ಯುಕ್ತಂ ವಿಷ್ಣುರೂಪಧರೈರ್ಗಣೈಃ ॥ ೧೦ ॥

---

೭. ಒಡನೆಯೇ ಅವಳಿಗೆ ಪ್ರೇತಭಾವವು ಹೊರಟು ಹೋಯಿತು. ಪ್ರಕಾಶಿಸುತ್ತಿರುವ ಬೆಂಕಿಯ ಜ್ವಾಲೆಯಂತಾದಳು. ದಿವ್ಯರೂಪವನ್ನು ಹೊಂದಿ ಊರ್ವಶಿಯಂತೆ ಸುಂದರಿಯಾದಳು.

೮. ಅನಂತರ ಆಕೆಯು ಅವನಿಗೆ ನೆಲದಮೇಲೆ ಮಲಗಿ ದೀರ್ಘದಂಡ ನಮಸ್ಕಾರವನ್ನು ಮಾಡಿದಳು. ಹರ್ಷದಿಂದ ಗದ್ಗದ ಸ್ವರವುಳ್ಳವಳಾಗಿ ಮಾತನಾಡುತ್ತ ಇಂತೆಂದಳು.

೯. ಕಲಹೆಯು ಹೇಳಿದಳು—ಎಲೈ ಬ್ರಾಹ್ಮಣಶ್ರೇಷ್ಠನೆ! ನಿನ್ನ ಅನುಗ್ರಹದಿಂದ ಬರುವ ನರಕವೂ ನನ್ನ ಈ ಪ್ರೇತರೂಪವೂ ಹೋದುವು. ಪಾಪವೆಂಬ ಸಮುದ್ರದಲ್ಲಿ ಮುಳುಗುತ್ತಿದ್ದ ನನಗೆ ನೀನು ದೋಣಿಯಾದೆ. ಇದು ಖಂಡಿತವು.

೧೦. ಮುದ್ಗಲನು ಹೇಳಿದನು—ಈ ರೀತಿಯಾಗಿ ಆಕೆಯು ಆ ಬ್ರಾಹ್ಮಣನಿಗೆ ಹೇಳುತ್ತಿರಲು ಆಕಾಶದಿಂದ ವಿಮಾನವು ಬರುತ್ತಿರುವುದನ್ನು ನೋಡಿದಳು. ಆ ವಿಮಾನವು ಬಹು ರಮ್ಯವಾಗಿದ್ದಿತು. ಅದರಲ್ಲಿ ವಿಷ್ಣುವಿನ ದೂತರು ಕುಳಿತಿದ್ದರು.

ಅಥ ಸಾ ತದ್ವಿಮಾಸ್ಥೈರ್ವಿಮಾನೇ ಚಾಧಿರೋಪಿತಾ ।
ಪುಣ್ಯಶೀಲಸುಶೀಲಾದ್ಯೈರಪ್ಸರೋಗಣಸೇವಿತಾ ॥ ೧೧ ॥

ತದ್ವಿಮಾನಂ ತದಾಪಶ್ಯದ್ಧರ್ಮದತ್ತಸ್ಸವಿಸ್ಮಯಃ ।
ಪಪಾತ ದಂಡವದ್ಭೂಮೌ ದೃಷ್ಟ್ವಾ ತೌ ಪುಣ್ಯರೂಪಿಣೌ ॥ ೧೨ ॥

ಪುಣ್ಯಶೀಲಸುಶೀಲಾಭ್ಯಾಂ ಸಮುತ್ಥಾಪ್ಯಾಗತಂ ದ್ವಿಜಂ ।
ಸಮಭ್ಯನಂದಯನ್ವಾಣೀಂ ಪ್ರೋಚತುರ್ಧರ್ಮಸಂಯುತಾಂ ॥ ೧೩ ॥

॥ ಗಣಾ ಊಚುಃ ॥

ಸಾಧು ಸಾಧು ದ್ವಿಜಶ್ರೇಷ್ಠ ಯಸ್ತ್ವಂ ವಿಷ್ಣುರತಸ್ಸದಾ ।
ದೀನಾನುಕಂಪೀ ಧರ್ಮಜ್ಞೋ ವಿಷ್ಣುವ್ರತಪರಾಯಣಃ ॥ ೧೪ ॥

---

೧೧. ಆ ವಿಮಾನವು ಹತ್ತಿರಕ್ಕೆ ಬರಲು ಅದರಲ್ಲಿದ್ದವರು ಇವಳನ್ನು ವಿಮಾನಕ್ಕೆ ಹತ್ತಿಸಿದರು. ಅದರಲ್ಲಿ ಪುಣ್ಯಶೀಲ ಸುಶೀಲರೇ ಮುಂತಾದ ವಿಷ್ಣು ಭಕ್ತರಿದ್ದರು. ಅನೇಕ ಜನ ಅಪ್ಸರ ಸ್ತ್ರೀಯರೂ ಇದ್ದರು.

೧೨. ಧರ್ಮದತ್ತನು ಆ ವಿಮಾನವನ್ನು ನೋಡಿ ಆಶ್ಚರ್ಯಗೊಂಡನು. ಪುಣ್ಯರೂಪರಾದ ಪುಣ್ಯಶೀಲ ಸುಶೀಲರನ್ನು ನೋಡಿ ಅವರಿಗೆ ಭೂಮಿಯಲ್ಲಿ ಮಲಗಿ ದೀರ್ಘದಂಡನಮಸ್ಕಾರವನ್ನು ಮಾಡಿದನು.

೧೩. ಆಗ ಆ ಪುಣ್ಯಶೀಲ ಸುಶೀಲರು ಆ ಬ್ರಾಹ್ಮಣನನ್ನು ಎಬ್ಬಿಸಿ ಉಪಚಾರ ಮಾತುಗಳನ್ನು ಹೇಳುತ್ತ ಧರ್ಮದಿಂದ ಕೂಡಿದ ಈ ಮಾತುಗಳನ್ನು ಹೇಳಿದರು.

೧೪. ಗಣಗಳು ಹೇಳಿದರು—ಎಲೈ ದ್ವಿಜಶ್ರೇಷ್ಠನೆ! ಸಾಧು. ಸಾಧು. ನೀನು ಯಾವಾಗಲೂ ವಿಷ್ಣುವಿನಲ್ಲಿಯೇ ಆಸಕ್ತಿಯನ್ನಿಟ್ಟಿರುವುದು ಬಹು ಒಳ್ಳೆಯದಾಗಿದೆ. ದೀನರಮೇಲೆ ದಯೆಯನ್ನು ತೋರಿಸುತ್ತಿರುವೆ. ಧರ್ಮವನ್ನು ತಿಳಿದಿದ್ದೀಯೆ. ವಿಷ್ಣುವಿನ ವ್ರತಗಳಲ್ಲಿಯೇ ಆಸಕ್ತನಾದ್ದೀಯೆ.

ಆಬಾಲತ್ವಾತ್ತ್ವಯಾ ಹ್ಯೇತದ್ಯತ್ಕೃತಂ ಕಾರ್ತಿಕಂ ವ್ರತಂ ।
ತವ ತಸ್ಯಾರ್ಧದಾನೇನ ಪುಣ್ಯಂ ದ್ವೈಗುಣ್ಯಮಾಗತಂ ॥ ೧೫ ॥

ತ್ವತ್ಪುಣ್ಯಸ್ಯಾರ್ಧಭಾಗೇನ ಯದಸ್ಯಾಃ ಪೂರ್ವಕರ್ಮಜಂ ।
ಜನ್ಮಾಂತರಶತೋದ್ಭೂತಂ ಪಾಪಂ ತದ್ವಿಲಯಂ ಗತಂ ॥ ೧೬ ॥

ಸ್ನಾನೈರೇವ ಗತಂ ಪಾಪಂ ಯದಸ್ಯಾಃ ಪೂರ್ವಕರ್ಮಜಂ ।
ಹರಿಜಾಗರಣಾದ್ಯೈಶ್ಚ ವಿಮಾನಮಿದಮಾಗತಂ ॥ ೧೭ ॥

ವೈಕುಂಠಂ ನೀಯತೇ ಸದ್ಯೋ ನಾನಾಭೋಗಯುತಾತ್ವಿಯಂ ।
ದೀಪದಾನಭವೈಃ ಪುಣ್ಯೈಸ್ತೈಜಸಂ ರೂಪಮಾಶ್ರಿತಾ ॥ ೧೮ ॥

---

೧೫. ನೀನು ಬಾಲ್ಯದಿಂದಲೂ ಈ ಕಾರ್ತಿಕವ್ರತವನ್ನು ಮಾಡುತ್ತ ಬಂದಿದ್ದೀಯೆ. ಅದರಲ್ಲಿ ಅರ್ಧವನ್ನು ಈಕೆಗೆ ದಾನಮಾಡಿದುದರಿಂದ ಅದು ಇನ್ನೂ ಅರ್ಧಫಲವನ್ನು ನಿನಗೆ ಹೆಚ್ಚಾಗಿ ಕೊಟ್ಟಿತು.

೧೬. ನೀನು ಮಾಡಿದ ಹರಿಜಾಗರಣೆಯೇ ಮುಂತಾದ ಪುಣ್ಯಗಳ ಅರ್ಧಭಾಗದಿಂದ ಈಕೆಯ ನೂರಾರು ಪೂರ್ವಜನ್ಮಗಳ ಪಾಪಗಳ ಕರ್ಮವೆಲ್ಲವೂ ಹೋಗಿ ಪುಣ್ಯವು ಪ್ರಾಪ್ತವಾಗಿ ಈ ವಿಮಾನವು ಬಂದಿರುವುದು.

೧೭–೧೮. ಸ್ನಾನ ಮಾತ್ರದಿಂದಲೇ ಈಕೆಯ ಪೂರ್ವಜನ್ಮದ ಪಾಪವು ಹೋಯಿತು. ಇವಳನ್ನು ವೈಕುಂಠಕ್ಕೆ ಕರೆದುಕೊಂಡು ಹೋಗುತ್ತೇವೆ. ಅಲ್ಲಿ ಅನೇಕ ಭೋಗಗಳನ್ನು ಅನುಭವಿಸುತ್ತಾಳೆ. ದೀಪದಾನಮಾಡಿದ ಪುಣ್ಯದಿಂದ ಇವಳಿಗೆ ಉತ್ತಮವಾದ ಮತ್ತು ರಮ್ಯವಾದ ತೇಜಸ್ಸುಳ್ಳ ರೂಪವು ಬಂದಿತು. ತುಲಸೀ ಪೂಜೆಯೇ ಮುಂತಾದ ಕಾರ್ತಿಕ ವ್ರತಗಳಿಂದ ವಿಷ್ಣುವಿನ ಸನ್ನಿಧಿಗೆ ಹೋಗುತ್ತಾಳೆ. ಇದೆಲ್ಲವೂ ನೀನು ಕೊಟ್ಟ ಪುಣ್ಯದ ಪ್ರಭಾವವು.

ತುಲಸೀಪೂಜನಾದ್ಯೈಶ್ಚ ಕಾರ್ತಿಕವ್ರತಕೈಶ್ಶುಭೈಃ ।
ವಿಷ್ಣುಸಾನ್ನಿಧ್ಯಗಾ ಜಾತಾ ತ್ವಯಾ ದತ್ತೈಃ ಕೃಪಾನಿಧೇ ॥ ೧೯ ॥

ತ್ವಮಪ್ಯಸ್ಯ ಭವಸ್ಯಾಂತೇ ಭಾರ್ಯಯಾ ಸಹ ಯಾಸ್ಯಸಿ ।
ವೈಕುಂಠಭವನಂ ವಿಷ್ಣೋಸ್ಸಾನ್ನಿಧ್ಯಂ ಚ ಸರೂಪತಾಂ ॥ ೨೦ ॥

ತೇ ಧನ್ಯಾಃ ಕೃತಪುಣ್ಯಾಸ್ತೇ ತೇಷಾಂ ಚ ಸಫಲೋ ಭವಃ ।
ಯೈರ್ಭಕ್ತ್ಯಾರಾಧಿತೋ ವಿಷ್ಣುರ್ಧರ್ಮದತ್ತ ತ್ವಯಾ ಯಥಾ ॥ ೨೧ ॥

ಸಮ್ಯಗಾರಾಧಿತೋ ವಿಷ್ಣುಃ ಕಿಂ ನ ಯಚ್ಛತಿ ದೇಹಿನಾಂ ।
ಔತ್ತಾನಪಾದಿರ್ಯೇನೈವ ಧ್ರುವತ್ವೇ ಸ್ಥಾಪಿತಃ ಪುರಾ ॥ ೨೨ ॥

ಯನ್ನಾಮಸ್ಮರಣಾದೇವ ದೇಹಿನೋ ಯಾಂತಿ ಸದ್ಗತಿಂ ।
ಗ್ರಾಹಗೃಹೀತೋ ನಾಗೇಂದ್ರೋ ಯನ್ನಾಮಸ್ಮರಣಾತ್ಪುರಾ ॥ ೨೩ ॥

೧೯–೨೦. ನೀನೂ ಕೂಡ ಈ ಜನ್ಮದ ಕೊನೆಯಲ್ಲಿ ಹೆಂಡತಿಯೊಡನೆ ವಿಷ್ಣುವಿನ ಭವನವಾದ ವೈಕುಂಠವನ್ನು ಹೊಂದುತ್ತೀಯೆ. ಅವನ ಸಾನ್ನಿಧ್ಯವನ್ನು ಹೊಂದಿ ಅವನಿಗೆ ಸಮಾನವಾದ ರೂಪವನ್ನೂ ಹೊಂದುತ್ತೀಯೆ!

೨೧. ಎಲೈ ಧರ್ಮದತ್ತನೆ! ಯಾರು ನಿನ್ನಂತೆ ವಿಷ್ಣುವನ್ನು ಭಕ್ತಿಯಿಂದ ಆರಾಧಿಸುವರೋ ಅವರೇ ಧನ್ಯರು. ಅವರೇ ಪುಣ್ಯವಂತರು. ಅವರೇ ಹುಟ್ಟಿದುದಕ್ಕೆ ಸಾರ್ಥಕ್ಯವನ್ನು ಹೊಂದತಕ್ಕವರು.

೨೨. ವಿಷ್ಣುವನ್ನು ಚೆನ್ನಾಗಿ ಪೂಜಿಸಿದರೆ ಅವನು ಪ್ರಾಣಿಗಳಿಗೆ ಏನನ್ನು ತಾನೇ ಕೊಡುವುದಿಲ್ಲ! ಉತ್ತಾನಪಾದರಾಯನ ಮಗನು ಆ ಪೂಜೆಯಿಂದಲೇ ಧ್ರುವಸ್ಥಾನದಲ್ಲಿಡಲ್ಪಟ್ಟನು.

೨೩. ಆ ಸ್ವಾಮಿಯ ನಾಮ ಸ್ಮರಣೆಯನ್ನು ಮಾಡಿದರೇನೇ ದೇಹಿಗಳಿಗೆ ಸದ್ಗತಿಯು ಬರುತ್ತದೆ. ಪೂರ್ವದಲ್ಲಿ ಮೊಸಳೆಯು ಆನೆಯ ಕಾಲನ್ನು ಹಿಡಿದಾಗ ಆ ಆನೆಯು ಆ ಸ್ವಾಮಿಯನ್ನು ಮರೆಹೊಗಲು ಅವನು ಅದನ್ನು ಬಿಡಿಸಿದನು.

ವಿಮುಕ್ತಸ್ಸನ್ನಿಧಿಂ ಪ್ರಾಪ್ತೋ ಜಾತೋಽಯಂ ಜಯಸಂಜ್ಞಕಃ ।
ಗ್ರಾಹೋಽಯಂ ವಿಜಯೋ ನಾಮ್ನಾ ಶ್ರೀವಿಷ್ಣೋಶ್ಚಿಂತನಾದಭೂತ್ ॥ ೨೪ ॥

ಯತಸ್ತ್ವಯಾರ್ಚಿತೋ ವಿಷ್ಣುಸ್ತತ್ಸಾನ್ನಿಧ್ಯಂ ಪ್ರಯಾಸ್ಯಸಿ ।
ಬಹೂನ್ಯಷ್ಟಸಹಸ್ರಾಣಿ ಭಾರ್ಯಾದ್ವಯಯುತಸ್ಯ ತೇ ॥ ೨೫ ॥

ತತಃ ಪುಣ್ಯಕ್ಷಯೇ ಜಾತೇ ಯದಾ ಯಾಸ್ಯಸಿ ಭೂತಲಂ ।
ಸೂರ್ಯವಂಶೋದ್ಭವೋ ರಾಜಾ ವಿಖ್ಯಾತಸ್ತ್ವಂ ಭವಿಷ್ಯಸಿ ॥ ೨೬ ॥

ನಾಮ್ನಾ ದಶರಥಸ್ತತ್ರ ಭಾರ್ಯಾದ್ವಯಯುತಃ ಪುನಃ ।
ತೃತೀಯೇಽಯಂ ತದಾ ಭಾರ್ಯಾ ಪುಣ್ಯಸ್ಯೈವಾರ್ಧಭಾಗಿನೀ ॥ ೨೭ ॥

ಕಲಹಾ ಕೈಕಯೀ ನಾಮ್ನಾ ಭವಿಷ್ಯತಿ ನ ಸಂಶಯಃ ।
ತತ್ರಾಪಿ ತವ ಸಾನ್ನಿಧ್ಯಂ ವಿಷ್ಣುರ್ದಾಸ್ಯತಿ ಭೂತಲೇ ॥ ೨೮ ॥

---

೨೪. ಅದರಿಂದ ಬಿಡಿಸಿಕೊಂಡು ಆ ಸ್ವಾಮಿಯ ಸನ್ನಿಧಿಗೆ ಹೋಗಿ ಜಯನೆಂಬ ಹೆಸರಿನಿಂದ ಆ ಸ್ವಾಮಿಯ ಬಳಿಯಲ್ಲಿದ್ದುಕೊಂಡಿದ್ದಾನೆ. ಆ ಮೊಸಳೆಯೂ ಕೂಡ ಆ ವಿಷ್ಣುವನ್ನು ಭಜಿಸಿದುದರಿಂದ ವಿಜಯನೆಂಬ ಹೆಸರಿನಿಂದ ಆ ಸ್ವಾಮಿಯ ಬಳಿಯಲ್ಲಿದ್ದುಕೊಂಡಿರುವುದು.

೨೫. ನೀನು ವಿಷ್ಣುವನ್ನು ಪೂಜಿಸಿದುದರಿಂದ ಆ ಸ್ವಾಮಿಯ ಸನ್ನಿಧಿಗೆ ಹೋಗುತ್ತೀಯೆ. ನೀನು ನಿನ್ನ ಇಬ್ಬರು ಹೆಂಡತಿಯರ ಜೊತೆಯಲ್ಲಿಯೂ ಎಂಟುಸಾವಿರ ವರ್ಷಗಳವರೆಗೂ ಆ ವೈಕುಂಠದಲ್ಲಿರುತ್ತೀಯೆ.

೨೬. ಅನಂತರ ಪುಣ್ಯವು ಅನುಭವಿಸುವುದರಿಂದ ಮುಗಿಯುತ್ತ ಬರಲು ಭೂಮಿಯಲ್ಲಿ ಹುಟ್ಟುತ್ತೀಯೆ. ಆಗ ಸೂರ್ಯವಂಶದಲ್ಲಿ ಹುಟ್ಟಿ ಪ್ರಸಿದ್ಧನಾದ ರಾಜನಾಗುತ್ತಿಯೆ.

೨೭. ಆಗ ನಿನ್ನ ಹೆಸರು ದಶರಥನೆಂಬುದಾಗಿರುತ್ತದೆ. ಅದೇ ಇಬ್ಬರು ಹೆಂಡತಿಯರೂ ನಿನಗೆ ಹೆಂಡತಿಯರಾಗುತ್ತಾರೆ. ಅಲ್ಲದೆ ಈ ಕಲಹೆಯೂ ಕೂಡ ನಿನ್ನ ಆ ಪುಣ್ಯಕ್ಕೆ ಅರ್ಧಭಾಗಿನಿಯಾಗಿ ಹೆಂಡತಿಯಾಗುತ್ತಾಳೆ.

೨೮. ಇವಳಿಗೆ ಕೈಕಯೀ ಎಂದು ಹೆಸರಿರುತ್ತದೆ. ಇದಕ್ಕೆ ಸಂಶಯವಿಲ್ಲ. ಅದರಲ್ಲಿಯೂ ಕೂಡ ವಿಷ್ಣುವು ನಿನಗೆ ಸಾನ್ನಿಧ್ಯವನ್ನು ಕೊಡುವನು.

ಆತ್ಮಾನಂ ತವ ಪುತ್ರತ್ವಂ ಪ್ರಕಲ್ಪ್ಯಾಮರಕಾರ್ಯಕೃತ್ ।
ರಾಮನಾಮ್ನಾ ರಾವಣಾದೀನ್ ಹತ್ವಾ ರಾಜ್ಯಂ ಕರಿಷ್ಯತಿ । ॥ ೨೯ ॥

ತವಾಜನ್ಮವ್ರತಾದಸ್ಮಾದ್ವಿಷ್ಣುಸಂತುಷ್ಟಿಕಾರಣಾತ್ ।
ನ ಯಜ್ಞಾ ನ ಚ ದಾನಾನಿ ನ ತೀರ್ಥಾನ್ಯಧಿಕಾನಿ ವೈ ॥ ೩೦ ॥

ಅತಸ್ತ್ವಗ್ರೇಽಪಿ ಧರ್ಮಜ್ಞ ನಿತ್ಯಂ ವಿಷ್ಣುವ್ರತೇ ಸ್ಥಿತಃ ।
ತ್ಯಕ್ತಮಾತ್ಸರ್ಯದಂಭೋಽಪಿ ಭವಸ್ವ ಸಮದರ್ಶನಃ ॥ ೩೧ ॥

ಕಾರ್ತಿಕೇ ಮಾಧವೇ ಮಾಘೇ ಚೈತ್ರೇ ಮಾಸಚತುಷ್ಟಯೇ ।
ಪ್ರತ್ಯಬ್ದಂ ತ್ವಂ ಧರ್ಮದತ್ತ ಪ್ರಾತಃಸ್ನಾಯೀ ಸದಾ ಭವ ॥ ೩೨ ॥

ಏಕಾದಶೀವ್ರತೇ ತಿಷ್ಠ ತುಲಸೀವನಪಾಲಕಃ ।
ಬ್ರಾಹ್ಮಣಾನಪಿ ಗಾಶ್ಚಾಪಿ ವೈಷ್ಣವಾಂಶ್ಚ ಸದಾ ಭಜ ॥ ೩೩ ॥

---

೨೯. ವಿಷ್ಣುವು ತಾನೇ ನಿನಗೆ ಮಗನಾಗಿ ಹುಟ್ಟಿ ದೇವತೆಗಳ ಕೆಲಸವನ್ನು ಮಾಡುತ್ತಾನೆ. ರಾಮನೆಂಬ ಹೆಸರನ್ನು ಹೊಂದಿ ರಾವಣಾದಿಗಳನ್ನು ಕೊಂದು ರಾಜ್ಯಭಾರವನ್ನು ಮಾಡುತ್ತಾನೆ.

೩೦. ನೀನು ಹುಟ್ಟಿದಾಗಿನಿಂದ ವಿಷ್ಣುವಿಗೆ ಸಂತೋಷಕರವಾದ ಈ ವ್ರತವನ್ನು ಮಾಡಿದ್ದೀಯೆ. ವಿಷ್ಣುವಿಗೆ ತುಷ್ಟಿಯನ್ನುಂಟುಮಾಡುವ ಈ ವ್ರತಗಳಿಗಿಂತಲೂ ಯಜ್ಞಗಳಾಗಲೀ ದಾನಗಳಾಗಲೀ ಹೆಚ್ಚಿನವಲ್ಲ.

೩೧. ಎಲೈ ಧರ್ಮಜ್ಞನೆ! ಇನ್ನು ಮುಂದೆಯೂ ಕೂಡ ಯಾವಾಗಲೂ ವಿಷ್ಣುವ್ರತವನ್ನೇ ಮಾಡುತ್ತಿರು. ಮತ್ಸರ ದಂಭಗಳನ್ನು ಬಿಟ್ಟುಬಿಡು. ಎಲ್ಲರಲ್ಲಿಯೂ ಸಮದರ್ಶಿಯಾಗಿರು.

೩೨. ಕಾರ್ತಿಕ, ವೈಶಾಖ, ಮಾಘ, ಚೈತ್ರ ಈ ನಾಲ್ಕು ತಿಂಗಳಲ್ಲಿ ಪ್ರತಿವರ್ಷದಲ್ಲಿಯೂ ಪ್ರಾತಸ್ಸ್ನಾನವನ್ನು ಮಾಡುವವನಾಗು.

೩೩. ಯಾವಾಗಲೂ ಏಕಾದಶೀ ವ್ರತವನ್ನು ಮಾಡು. ತುಳಸಿಯನ್ನು ಬೆಳೆಸಿ ಕಾಪಾಡುತ್ತಿರು. ಬ್ರಾಹ್ಮಣರುಗಳನ್ನೂ ಗೋವುಗಳನ್ನೂ ವೈಷ್ಣವರನ್ನೂ ಯಾವಾಗಲೂ ಸೇವಿಸು.

ಮಸೂರಿಕಾಶ್ಚಾರನಾಲಂ ವೃಂತಾಕಾದೀನಿ ಖಾದ ಮಾ ।
ಏವಂ ತ್ವಮಪಿ ದೇಹಾಂತೇ ತದ್ವಿಷ್ಣೋಃ ಪರಮಂ ಪದಂ ॥ ३४ ॥

ಪ್ರಾಪ್ಸ್ಯೋಽಷಿ ಧರ್ಮದತ್ತ ತ್ವಂ ತದ್ಭಕ್ತ್ಯೈವ ಯಥಾ ವಯಂ ।
ಪುಣ್ಯಶೀಲಸುಶೀಲಾಖ್ಯೌ ಜಯಶ್ಚ ವಿಜಯಸ್ತಥಾ ॥ ३५ ॥

ಧನ್ಯೋಽಸಿ ವಿಪ್ರಾಗ್ರ್ಯಯತಸ್ತ್ವಯೈತದ್ವ್ರತಂ ಕೃತಂ ತುಷ್ಟಿಕರಂ ಜಗದ್ಗುರೋಃ ।
ಯದರ್ಧಭಾಗಾತ್ಸಫಲಾನ್ಮುರಾರೇಃ ಪ್ರಣೀಯತೇಽಸ್ಮಾಭಿರಿಯಂ ಸಲೋಕತಾಂ ॥ ३६ ॥

॥ ಮುದ್ಗಲ ಉವಾಚ ॥

ಇತ್ಥಂ ತೌ ಧರ್ಮದತ್ತಂ ತಮುಪದಿಶ್ಯ ವಿಮಾನಗೌ ।
ತಯಾ ಕಲಹಯಾ ಸಾರ್ಧಂ ವೈಕುಂಠಭುವನಂ ಗತೌ ॥ ३७ ॥

---

३४. ಹಾರಕ, ಜೋಳ, ಬದನೆಕಾಯಿ ಇವುಗಳನ್ನು ತಿನ್ನಬೇಡ. ಹೀಗಿರುತ್ತಿದ್ದರೆ ನೀನು ಸತ್ತಮೇಲೆ ಆ ವಿಷ್ಣುವಿನ ಪರಮಪದವನ್ನು ಹೊಂದುತ್ತೀಯೆ.

३५. ಎಲೈ ಧರ್ಮದತ್ತನೆ! ನೀನೂ ಅದೇ ರೀತಿಯಲ್ಲಿ ಮಾಡುತ್ತಿರು. ಪುಣ್ಯಶೀಲ ಸುಶೀಲರಾದ ನಾವೂ ಜಯವಿಜಯರೂ ಕೂಡ ವಿಷ್ಣುಭಕ್ತಿಯನ್ನು ಮಾಡಿ ಅವನ ಸ್ಥಾನವನ್ನು ಹೊಂದಿದೆವು. ನೀನೂ ವಿಷ್ಣುಭಕ್ತಿಯನ್ನೇ ಮಾಡಿದರೆ ಅವನ ಸಾಮೀಪ್ಯವನ್ನು ಹೊಂದುತ್ತೀಯೆ.

३६. ಎಲೈ ಬ್ರಾಹ್ಮಣಶ್ರೇಷ್ಠನೆ! ವಿಷ್ಣುವಿಗೆ ತುಷ್ಟಿಕರವಾದ ಈ ವ್ರತವನ್ನು ನೀನು ಕೇಳಿದುದರಿಂದಲೇ ಧನ್ಯನಾಗಿದ್ದೀಯೆ. ನೀನು ಮಾಡಿದ ವ್ರತದ ಅರ್ಧಭಾಗವನ್ನು ಕೊಟ್ಟುದರಿಂದಲೇ ಈಕೆಯನ್ನು ನಾವು ಮುರಾರಿಯಾದ ವಿಷ್ಣುವಿನ ಬಳಿಗೆ ಕರೆದುಕೊಂಡು ಹೋಗುತ್ತಿರುವುದಿಲ್ಲವೆ ?

३७. ಮುದ್ಗಲನು ಹೇಳಿದನು—ಈ ಪುಣ್ಯಶೀಲ ಸುಶೀಲರು ವಿಮಾನದಲ್ಲಿದ್ದುಕೊಂಡು ಈರೀತಿಯಾದ ಧರ್ಮವನ್ನುಪದೇಶಿಸಿ ಅನಂತರ ಕಲಹೆಯನ್ನು ಕರೆದುಕೊಂಡು ವೈಕುಂಠಕ್ಕೆ ಹೊರಟುಹೋದರು.

ಧರ್ಮದತ್ತೋಽಪ್ಯಸೌ ರಾಜನ್ ತತ್ಪರಸ್ತದ್ವ್ರತೇ ಸ್ಥಿತಃ ।
ದೇಹಾಂತೇ ಪರಮಂ ಸ್ಥಾನಂ ಭಾರ್ಯಾಭ್ಯಾಮನ್ವಿತೋಽಭ್ಯಗಾತ್ ॥ ೩೮ ॥

ಬಹೂನ್ಯಬ್ದಸಹಸ್ರಾಣಿ ಸ್ಥಿತ್ವಾ ವೈಕುಂಠಸದ್ಮನಿ ।
ತತಃ ಪುಣ್ಯಕ್ಷಯೇ ಜಾತೇ ಜಾತೋಽಸಿ ತ್ವಂ ನೃಪೋ ಮಹಾನ್ ॥ ೩೯ ॥

ದಾರೈಸ್ತ್ರಿಭಿರ್ದಶರಥಸ್ತೇಽವಿಷ್ಣುಃ ಪುತ್ರತಾಂ ಗತಃ ।
ರಾಮೋಽಯಂ ಲಕ್ಷ್ಮಣಶ್ಶೇಷೋ ಭರತೋಽಬ್ಜೋಽರಿಶತ್ರುಹಾ ॥ ೪೦ ॥

ಏವಂ ಸರ್ವಂ ಮಯಾಖ್ಯಾತಂ ಯಥಾ ಪೃಷ್ಟಂ ತ್ವಯಾ ಮಮ ।
ಧನ್ಯಸ್ತ್ವಂ ಯಸ್ಯ ತನಯಸ್ಸಾಕ್ಷಾನ್ನಾರಾಯಣೋಽಭವತ್ ॥ ೪೧ ॥

---

೩೮. ಇತ್ತ ಧರ್ಮದತ್ತನು ಆ ವ್ರತದಲ್ಲಿಯೇ ಆಸಕ್ತನಾಗಿ ಅದನ್ನೇ ಮಾಡುತ್ತಿದ್ದನು. ದೇಹವನ್ನು ಬಿಟ್ಟಮೇಲೆ ಇಬ್ಬರು ಹೆಂಡತಿಯರ ಜೊತೆಯಲ್ಲಿಯೂ ಆ ಪರಮಸ್ಥಾನವಾದ ವೈಕುಂಠಕ್ಕೆ ಹೋದನು.

೩೯. ಆತನು ಆ ವೈಕುಂಠದಲ್ಲಿ ಬಹು ಸಹಸ್ರವರ್ಷಗಳವರೆಗೂ ಇದ್ದನು. ಆಮೇಲೆ ಪುಣ್ಯವು ತೀರುತ್ತ ಬರಲು ಅವನೇ ನೀನಾಗಿ ದೊಡ್ಡ ರಾಜನಾಗಿ ಹುಟ್ಟಿದ್ದೀಯೆ.

೪೦. ಆ ಮೂವರೂ ನಿನಗೆ ಹೆಂಡತಿಯರಾಗಿದ್ದಾರೆ. ದಶರಥನಾದ ಆ ನೀನೇ ಧರ್ಮದತ್ತನು. ಆ ವಿಷ್ಣುವೇ ನಿನಗೆ ಮಗನಾಗಿ ಹುಟ್ಟಿರುವನು. ಅವನೇ ರಾಮನು ಲಕ್ಷ್ಮಣನೇ ಶೇಷನು. ಭರತನು ಶಂಖವು. ಶುತ್ರುಘ್ನನು ಚಕ್ರವು.

೪೧. ಇಗೋ ! ನೀನು ಕೇಳಿದುದೆಲ್ಲವನ್ನೂ ಬಿಡದೆ ಹೇಳಿದ್ದೇನೆ. ಸಾಕ್ಷಾನ್ನಾರಾಯಣನೇ ನಿನ್ನ ಮಗನಾಗಿ ಹುಟ್ಟಿರುವುದರಿಂದ ನೀನೇ ಧನ್ಯನು.

॥ ಶ್ರೀಶಿವ ಉವಾಚ ॥

ಇತ್ಯುಕ್ತ್ವಾ ನೃಪತಿಂ ಪೂಜ್ಯ ವಿಸಸರ್ಜ ಮುನಿಸ್ತದಾ ।
ಆಲಿಂಗ್ಯ ರಾಮಂ ಸೌಮಿತ್ರಿಂ ಮೇನೇಸೌ ಕೃತಕೃತ್ಯತಾಂ ॥ ೪೨ ॥

ತದಾ ರಾಜಾ ಸ್ವಸೈನ್ಯೇನ ಮಹಾಹರ್ಷಸಮನ್ವಿತಃ ।
ಅಯೋಧ್ಯಾಮಗಮದ್ರಮ್ಯಾಂ ಗೋಪುರಾಟ್ಟಾಲಮಂಡಿತಾಂ ॥ ೪೩ ॥

ನೃಪಮಾಗತಮಾಜ್ಞಾಯ ಮಂತ್ರಿಣಃ ಪುರವಾಸಿನಃ ।
ಪತಾಕಾತೋರಣಾದ್ಯೈಶ್ಚ ದಿವ್ಯಚಂದನಸೇಚನೈಃ ॥ ೪೪ ॥

ನಗರೀಂ ಭೂಷಯಿತ್ವಾ ತೇ ನೃತ್ಯವಾದ್ಯಾದಿಮಂಗಳೈಃ ।
ನಿನ್ಯುಃ ಕುಟುಂಬಸಹಿತಂ ರಾಜಾನಂ ನಗರೀಂ ಪ್ರತಿ ॥ ೪೫ ॥

---

೪೨. ಶ್ರೀ ಶಿವನು ಹೇಳಿದನು—ಹೀಗೆಂದು ಹೇಳಿ ಆ ಮುದ್ಗಲನು ದಶರಥನನ್ನು ಗೌರವಿಸಿ ಕಳುಹಿಸಿದನು ಮತ್ತು ಆ ರಾಮನನ್ನೂ ಲಕ್ಷ್ಮಣನನ್ನೂ ಆಲಿಂಗಿಸಿಕೊಂಡು ತಾನು ಹುಟ್ಟಿದುದಕ್ಕೆ ಕೃತಕೃತ್ಯನಾದೆನೆಂದು ತಿಳಿದುಕೊಂಡನು.

೪೩. ಆಮೇಲೆ ದಶರಥನು ಬಹುವಾದ ಸಂತೋಷದಿಂದ ಸೈನ್ಯದೊಡನೆ ಕೂಡಿಕೊಂಡು ಆ ಉತ್ತಮೋತ್ತಮವೂ ರಮ್ಯವೂ ಗೋಪುರ ಮಹಡಿಮನೆಗಳುಳ್ಳದೂ ಆದ ಅಯೋಧ್ಯೆಗೆ ಹೋದನು.

೪೪. ರಾಜನು ಊರಿಗೆ ಬರುತ್ತಿರುವುದನ್ನು ತಿಳಿದು ಊರಿನಲ್ಲಿದ್ದ ಮಂತ್ರಿಗಳೂ ಪಟ್ಟಣಿಗರೂ ತೋರಣ ಧ್ವಜಗಳನ್ನು ಕಟ್ಟುವುದರಿಂದಲೂ ಬೀದಿಗಳಿಗೆ ಚಂದನದ ನೀರನ್ನು ಚುಮುಕಿಸುವುದರಿಂದಲೂ ಊರನ್ನು ಅಲಂಕರಿಸಿದರು.

೪೫. ನೃತ್ಯಗಳು ಮಂಗಳವಾದ್ಯಗಳು ಇನ್ನೂ ಅನೇಕ ಬಗೆಯಾದ ಉತ್ಸವಗಳು ಇವುಗಳಿಂದ ಕೂಡಿಕೊಂಡು ಆ ರಾಜನನ್ನು ಕುಟುಂಬದೊಡನೆ ರಾಜಧಾನಿಗೆ ಕರೆದುಕೊಂಡು ಹೋದರು.

ರಾಮಮಾಗತಮಾಜ್ಞಾಯ ಗೋಪುರಾಟ್ಟಾಲಪಙ್ಕ್ತಿಷು ।
ಕಟ್ಯಾಂ ನಿಧಾಯ ಬಾಲಾನ್ ಸ್ವಾನ್ ಸ್ತ್ರಿಯಃ ಸ್ಥಿತ್ವಾ ನಿಜೈಃ ಕರೈಃ ॥ ೪೬ ॥

ಸುವರ್ಣಕುಸುಮಾದ್ಯೈಶ್ಚ ವವರ್ಷುಃ ಪುಷ್ಪವೃಷ್ಟಿಭಿಃ ।
ಕಾಶ್ಚಿನ್ಮಾರ್ಗೋಪರಿ ಸ್ಥಿತ್ವಾ ಕುಂಭದೀಪಾದಿಮಂಗಳೈಃ ॥ ೪೭ ॥

ಆರ್ತಿಕ್ಯಾದಿಭಿರಾಜಾನಂ ಸರಾಮಂ ಶಾಂತಿಕಾರಕೈಃ ।
ಪೂಜಯಂತಿ ಸ್ಮರೌಸ್ಸರ್ವಾ ರಾಜಮಾರ್ಗೇ ಪೃಥಕ್ ಪೃಥಕ್ ॥ ೪೮ ॥

ಏವಂ ನಾನಾಸಮುತ್ಸಾಹೈರ್ನರ್ತನೈರ್ವಾರಯೋಷಿತಾಂ ।
ದುಂದುಭೀನಾಂ ನಿನಾದೈಶ್ಚ ಗಾಯಕಾನಾಂ ಚ ಗಾಯನೈಃ ॥ ೪೯ ॥

---

೪೬. ರಾಮನು ಪಟ್ಟಣಕ್ಕೆ ಬಂದುದನ್ನು ತಿಳಿದು ಪಟ್ಟಣದ ಹೆಂಗಸರು ಮಕ್ಕಳನ್ನು ಸೊಂಟದಮೇಲೆ ಎತ್ತಿಕೊಂಡು ಕೈಯ್ಯಲ್ಲಿ ಹೂವನ್ನು ಹಿಡಿದುಕೊಂಡು ಮಹಡಿಗಳಲ್ಲಿ ನಿಂತರು.

೪೭. ಜೊತೆಗೆ ಚಿನ್ನದ ಹೂವುಗಳನ್ನೂ ಹಿಡಿದಿದ್ದರು. ಇವೆಲ್ಲವನ್ನೂ ರಾಮನ ತಲೆಯಮೇಲೆ ಎರಚಿದರು. ಮತ್ತೆ ಕೆಲವರು ದಾರಿಯಲ್ಲಿ ಕೆಳಗಡೆಯಲ್ಲಿಯೇ ನಿಂತಿದ್ದು ಕುಂಭದೀಪವೇ ಮುಂತಾದುವುಗಳಿಂದ ಆರತಿಯನ್ನು ಎತ್ತಿದರು.

೪೮. ಅಲ್ಲದೆ ಮತ್ತೆ ಕೆಲವರು ರಾಜನಿಗೂ ಅವನ ಮಕ್ಕಳಿಗೂ ಶಾಂತಿಕರ್ಮವಾದ ಅಕ್ಕಿಯಿಕ್ಕುವುದು ಅನ್ನವನ್ನು ನಿವಾಳಿಸುವುದು ಮುಂತಾದುವುಗಳನ್ನು ಮಾಡಿದರು. ಈ ರೀತಿಯಾಗಿ ದಾರಿಯುದ್ದಕ್ಕೂ ನಡೆಯುತ್ತಿದ್ದಿತು.

೪೯. ಈ ರೀತಿಯಾಗಿ ಎಲ್ಲರೂ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು. ಸೂಳೆಯರು ಕುಣಿಯುತ್ತಿದ್ದರು. ದುಂದುಭಿಗಳು ಮೊಳಗುತ್ತಿದ್ದುವು. ಗಾಯಕರು ಗಾನಮಾಡುತ್ತಿದ್ದರು.

ಸೌಧೋದ್ಭವಗವಾಕ್ಷೈಶ್ಚ ಸ್ತ್ರೀಮುಕ್ತಾಪುಷ್ಪವೃಷ್ಟಿಭಿಃ ।
ಯಯೌ ಸ್ವಶಿಬಿರಂ ರಾಜಾ ವೀಜ್ಯಮಾನಸ್ಸುಚಾಮರೈಃ ॥ ೫೦ ॥

ತತಃ ತಾನ್ ಜನಕಾಮಾತ್ಯಾನ್ ವಸ್ತ್ರಾಲಂಕಾರವಾಹನೈಃ ।
ಸತ್ಕೃತ್ಯ ಭೋಜನಾದ್ಯೈಶ್ಚ ಪ್ರೇಷಯಾಮಾಸ ಮೈಥಿಲಂ ॥ ೫೧ ॥

ಏವಂ ಸರ್ವೇಷೂತ್ಸವೇಷು ಜನಕೋ ವಾರ್ಷಿಕೇಷು ಸಃ ।
ನಿನಾಯ ಮಿಥಿಲಾಂ ರಾಮಂ ಮಾತೃಭಿಃ ಪಾರ್ಥಿವೇನ ಚ ॥ ೫೨ ॥

ಉತ್ತರೋತ್ತರತಃ ಪೂಜ್ಯ ತೋಷಯಾಮಾಸ ರಾಘವಂ ।
ರಾಮೋಽಪಿ ರಮಯಾಮಾಸ ಲೀಲಾಭಿಃ ನೃಪತಿಂ ತದಾ ॥ ೫೩ ॥

---

೫೦. ಇದೂ ಅಲ್ಲದೆ ಪಟ್ಟಣದ ಹೆಂಗಸರು ಮಹಡಿಯ ಮೇಲಿರುವ ಕಿಟಕಿಗಳಿಂದ ಹೂವನ್ನು ಎರಚುತ್ತಿದ್ದರು. ಅನೇಕರು ಚಾಮರಗಳನ್ನು ಬೀಸುತ್ತಿದ್ದರು. ದಶರಥನು ಎಲ್ಲರೊಡನೆಯೂ ಈ ರೀತಿಯಾದ ವೈಭವದೊಡನೆ ಅರಮನೆಗೆ ಹೋದನು.

೫೧. ಊರಿಗೆ ಹೋದಮೇಲೆ ದಶರಥನು ತನ್ನ ಜೊತೆಯಲ್ಲಿ ಬಂದಿದ್ದ ಜನಕನ ಕಡೆಯ ಜನರನ್ನು ವಸ್ತ್ರ ಭೂಷಣ ಮುಂತಾದುವುಗಳಿಂದ ಗೌರವಿಸಿ ಒಳ್ಳೆಯ ಭೋಜನಗಳಿಂದ ತೃಪ್ತಿಪಡಿಸಿ ಕಳುಹಿಸಿದನು.

೫೨. ಜನಕನು ಪ್ರತಿವರ್ಷವೂ ಬರುತ್ತಿರುವ ದೀಪಾವಳಿಯೇ ಮುಂತಾದ ಹಬ್ಬಗಳಿಗೆ ರಾಮನನ್ನೂ ಅವನ ಕಡೆಯವರೆಲ್ಲರನ್ನೂ ಕರೆಸುತ್ತ ವೈಭವದಿಂದ ಗೌರವಿಸುತ್ತ ಇದ್ದನು.

೫೩. ಜನಕನು ತಾನು ಕರೆಸುತ್ತಿದ್ದಾಗ ಒಂದು ವರ್ಷಕ್ಕಿಂತ ಮತ್ತೊಂದು ವರ್ಷದಲ್ಲಿ ಹಿಂದಿನ ಉತ್ಸವಕ್ಕಿಂತಲೂ ಮುಂದಿನ ಉತ್ಸವವನ್ನು ಮಿಗಿಲಾಗಿ ನಡೆಸುತ್ತ ಬಂದನು. ರಾಮನೂ ಕೂಡ ಜನಕನನ್ನೂ ಸಂತೋಷಪಡಿಸುತ್ತಿದ್ದನು.

ಮಾಸೈಷ್ಷಡ್ಭಿರ್ಜನಕಜಾ ಲಕ್ಷ್ಮೀ ಶ್ರೀರಾಘವಾಚ್ಛುಭಾ ।
ಲಗ್ನೇ ಹ್ಯೇಕಾದಶೇ ವರ್ಷೇ ರಜೋಯುಕ್ತಾ ಬಭೂವ ಹ ॥ ೫೪ ॥

ತದ್ವಾರ್ತಾಂ ಜನಕಶ್ಶ್ರುತ್ವಾ ಪತ್ನಿಭಿರ್ಮಂತ್ರಿಭಿಸ್ಸಹ ।
ಅಯೋಧ್ಯಾಮಗಮಚ್ಛೀಘ್ರಂ ರಾಜಾ ಪ್ರತ್ಯುಜ್ಜಗಾಮ ತಂ ॥ ೫೫ ॥

ಪರಸ್ಪರಂ ಸಮಾಲಿಂಗ್ಯ ಸಾಕೇತಮಿಥಿಲಾಧಿಪೌ ।
ನೃತ್ಯವಾದ್ಯಸಮುತ್ಸಾಹೈರಯೋಧ್ಯಾಂ ವಿಶತುಸ್ಸುಖಂ ॥ ೫೬ ॥

ತತೋ ಮಹಾಸಮುತ್ಸಾಹೈಃ ನಾನಾಮಂಟಪತೋರಣೈಃ ।
ಕದಲೀಸ್ತಂಭಮಾಲಾಭಿಃ ಇಕ್ಷುದಂಡೈಸ್ಸಚಾಮರೈಃ ॥ ೫೭ ॥

ಚತುರ್ದ್ವಾರಿ ಮಂಟಪೈಶ್ಚ ಘಂಟಾಘೋಷೈಸ್ಸದರ್ಪಣೈಃ ।
ಕಿಂಕಿಣೀಜಾಲಘೋಷೈಶ್ಚ ವಿತಾನೈರ್ದೀಪರಾಜಿಭಿಃ ॥ ೫೮ ॥

೫೪–೫೫. ಹೀಗೆ ರಾಮನಿಗೆ ಮದುವೆಯಾದ ಆರುತಿಂಗಳು ಕಳೆದಮೇಲೆ ಮತ್ತು ಆ ಸೀತೆಗೆ ಹನ್ನೊಂದು ವರ್ಷತುಂಬಲು ಶುಭಲಗ್ನದಲ್ಲಿ ಋತುಮತಿಯಾದಳು. ಈ ವಿಷಯವು ಜನಕನಿಗೆ ತಿಳಿಯಿತು. ಹೆಂಡತಿಯೊಡನೆಯೂ ಮಂತ್ರಿಗಳೊಡನೆಯೂ ಅಯೋಧ್ಯೆಗೆ ಬರಲು ದಶರಥನು ಅವನನ್ನು ಗೌರವಿಸಿ ಎದುರುಗೊಂಡನು.

೫೬–೫೭. ಜನಕ ದಶರಥರಿಬ್ಬರೂ ಒಬ್ಬರಿಗೊಬ್ಬರು ಆಲಿಂಗಿಸಿಕೊಂಡರು. ಅನಂತರ ನೃತ್ಯವಾದ್ಯಗಳಿಂದ ದಶರಥನು ಮನೆಗೆ ಜನಕನನ್ನು ಕರೆದುಕೊಂಡು ಹೋದನು. ಅನಂತರ ಬಹುವಾದ ಸಂತೋಷದಿಂದ ಅರಮನೆಯಲ್ಲಿ ಮಂಟಪವನ್ನೂ ತೋರಣವನ್ನೂ ಕಟ್ಟಿಸಿದರು. ಎಲ್ಲಾ ಕಡೆಗೂ ಬಾಳೆಯ ಕಂಬದ ಮಾಲೆಗಳನ್ನೇ ಕಟ್ಟಿಸಿದರು. ಕಬ್ಬುಗಳನ್ನು ಕಟ್ಟಿಸಿದರು.

೫೮. ನಾಲ್ಕು ಬಾಗಿಲುಗಳಲ್ಲಿಯೂ ಮಂಟಪವನ್ನು ಕಟ್ಟಿಸಿದರು. ಅದಕ್ಕೆ ಮೇಲ್ಕಟ್ಟನ್ನು ಕಟ್ಟಿಸಿ ಅದರಲ್ಲಿ ಘಂಟೆಗಳನ್ನೂ ಕನ್ನಡಿಗಳನ್ನೂ ಕಿರುಗೆಜ್ಜೆಗಳನ್ನೂ ಸದ್ದುಮಾಡುವಂತೆ ಕಟ್ಟಿದರು. ಅವುಗಳಲ್ಲಿ ದೀಪಗಳು ಬೆಳಗುವಂತೆ ಮಾಡಿದರು.

ವಸಿಷ್ಠೋ ಮುನಿಭಿಸ್ಸಾರ್ಧಂ ಗರ್ಭಾಧಾನವಿಧಿಂ ಶುಭಂ ।
ಕಾರಯಾಮಾಸ ರಾಮೇಣ ಸೀತಾಯಾಶ್ಚಾತಿಹರ್ಷಿತಃ ॥ ೫೯ ॥

ತದಾ ವಸ್ತ್ರೈರಲಂಕಾರೈಃ ಜನಕೋ ನೃಪತಿಂ ಮುದಾ ।
ಪೂಜಯಾಮಾಸ ಸಸ್ತ್ರೀಕಂ ಸ್ನುಷಾ ಪುತ್ರಸಮನ್ವಿತಂ ॥ ೬೦ ॥

ಮಾಸಮೇಕ ಮತಿಕ್ರಮ್ಯ ಯಯೌ ಸ್ವನಗರೀಂ ಶುಭಾಂ
ರಾಮೋಽಪಿ ಸೀತಯಾ ಸಾರ್ಧಂ ನಾನಾಭೋಗಾ್ ಸುಪುಷ್ಕಲಾ್ ॥ ೬೧ ॥

ಬಭುಜೇ ಹೇಮರತ್ನಾದಿ ನಿರ್ಮಿತೇಷು ಗೃಹೇಷು ಸಃ ।
ರುಕ್ಮಮಂಡನಯುಕ್ತಾಭಿರ್ದಾಸೀಭಿರ್ವೀಜಿತಸ್ಸುಖಂ ॥ ೬೨ ॥

ಏವಂ ತಾಸಾಂ ನೃಪಸುತಪತ್ನೀನಾಂ ಚ ಪೃಥಕ್ ಪೃಥಕ್ ।
ಯಥಾಕಾಲೇ ವಿಧಾನೇಷು ಗರ್ಭಾಧಾನಾದಿಕೇಷು ಚ ॥ ೬೩ ॥

---

೫೯. ಇಂತಹ ಉತ್ತಮವಾದ ಮನೆಯಲ್ಲಿ ವಸಿಷ್ಠನು ಆ ಸೀತಾರಾಮರಿಗೆ ಉತ್ತಮವಾದ ಗರ್ಭಾಧಾನ ವಿಧಿಯನ್ನು ನೆರವೇರಿಸಿದನು.

೬೦. ಆಗ ಜನಕನು ವಸ್ತ್ರಗಳಿಂದಲೂ ಅಲಂಕಾರಗಳಿಂದಲೂ ದಶರಥನನ್ನೂ ಅವನ ಹೆಂಡತಿಯರನ್ನೂ ಮಕ್ಕಳು ಸೊಸೆಯರನ್ನೂ ಪೂಜಿಸಿ ಗೌರವಿಸಿದನು.

೬೧. ಈ ಉತ್ಸವದಲ್ಲಿ ಭಾಗಿಯಾದ ಜನಕನು ಅಲ್ಲಿಯೇ ಒಂದು ತಿಂಗಳವರೆಗೂ ಇದ್ದು ಆಮೇಲೆ ತನ್ನ ಪಟ್ಟಣಕ್ಕೆ ಹೋದನು. ರಾಮನು ಸೀತೆಯೊಡನೆ ಅನೇಕ ರೀತಿಯಲ್ಲಿ ಸುಖಪಟ್ಟುಕೊಂಡಿದ್ದನು.

೬೨. ಇವನು ಚಿನ್ನ, ರತ್ನ, ಮುಂತಾದುವುಗಳಿಂದ ಸುಂದರವಾಗಿ ಕಟ್ಟಿರುವ ಮನೆಯಲ್ಲಿ ದಾಸಿ ದಾಸರಿಂದ ಸೇವಿಸಲ್ಪಡುತ್ತ ಸುಖದಿಂದಿದ್ದನು.

೬೩. ಇದೇ ರೀತಿಯಲ್ಲಿಯೇ ಉಳಿದ ಲಕ್ಷ್ಮಣ ಭರತ ಶತ್ರುಘ್ನರ ಹೆಂಡತಿಯರೂ ಋತುಮತಿಯರಾಗಲು ಆಯಾ ಕಾಲದಲ್ಲಿ ಅವರವರಿಗೆ ಗರ್ಭಧಾನಮಹೋತ್ಸವವನ್ನು ನಡೆಸಿದರು.

ಆಗತ್ಯ ಜನಕಶ್ಚಕ್ರೇ ನಾನೋತ್ಸಾಹಾನ್ಮುದಾನ್ವಿತಃ ।
ಅಯೋಧ್ಯಾನಗರೀಮಧ್ಯೇ ವಾದ್ಯಘೋಷೋ ಗೃಹೇ ಗೃಹೇ ॥ ೬೪ ॥

ಮಂಗಳಾನಿ ಚ ಸರ್ವತ್ರ ನ ಕುತ್ರಾಪ್ಯಸ್ತ್ಯಮಂಗಳಂ ।
ನ ದರಿದ್ರೋ ಋಣೀ ನಾಸೀನ್ನಾಧಿವ್ಯಾಧಿಪ್ರಪೀಡಿತಃ ॥ ೬೫ ॥

ರಾಮಾದಿಭಿಶ್ಚತುರ್ಭಿಸ್ತೈರ್ಬಂಧುಭಿಸ್ತದನಂತರಂ ।
ಪೃಥಗ್ಗೇಹೇಷು ಭಾರ್ಯಾಭಿರ್ಗಾರ್ಹಸ್ಥ್ಯಮಧ್ಯನುಷ್ಠಿತಂ ॥ ೬೬ ॥

ರಾಮಃ ಪ್ರಾತಸ್ಸಮುತ್ಥಾಯ ಕೃತಶೌಚಾದಿಸತ್ಕ್ರಿಯಃ ।
ಆರುಹ್ಯ ಶಿಬಿಕಾಂ ದಿವ್ಯಾಂ ಸ್ನಾನಾರ್ಥಂ ಸರಯೂನದೀಂ ॥ ೬೭ ॥

---

೬೪. ಆ ಸಂದರ್ಭಗಳಲ್ಲಿ ಜನಕನು ಅಯೋಧ್ಯೆಗೆ ಬರುತ್ತಿದ್ದನು. ಆಗಲೂ ಕೂಡ ಅಯೋಧ್ಯೆಯ ಮನೆ ಮನೆಯಲ್ಲಿ ವಾದ್ಯಘೋಷಗಳನ್ನು ನಡೆಸುತ್ತ ಉತ್ಸವಗಳನ್ನು ಆಚರಿಸುತ್ತಿದ್ದರು.

೬೫. ಎಲ್ಲಾ ಕಡೆಯಲ್ಲಿಯೂ ಮಂಗಳವೇ ನಡೆಯುತ್ತಿದ್ದಿತು. ಒಂದೆಡೆಯಲ್ಲಿಯೂ ಅಮಂಗಳವೇ ಇರಲಿಲ್ಲ. ದರಿದ್ರನಾಗಲೀ ಸಾಲಗಾರನಾಗಲೀ ಒಬ್ಬನೂ ಇರಲಿಲ್ಲ. ಜನಗಳಿಗೆ ಮನೋವ್ಯಥೆಯಾಗಲಿ ರೋಗದ ಬಾಧೆಯಾಗಲಿ ಇರಲಿಲ್ಲ.

೬೬. ಅನಂತರ ರಾಮ ಲಕ್ಷ್ಮಣ ಭರತ ಶತ್ರುಘ್ನರು ತಮ್ಮ ತಮ್ಮ ತಾಯಿಯರೊಡನೆಯೂ ಬಂಧುಗಳೊಡನೆಯೂ ಬೇರೆ ಬೇರೆ ಮನೆಯಲ್ಲಿದ್ದುಕೊಂಡು ಗೃಹಸ್ಥಾಶ್ರಮಸುಖವನ್ನು ಅನುಭವಿಸುತ್ತಿದ್ದರು.

೬೭. ರಾಮನು ಬೆಳಗ್ಗೆ ಎದ್ದು ಶೌಚವೇ ಮುಂತಾದುವುಗಳನ್ನು ಮಾಡಿಕೊಂಡು ಪಲ್ಲಕ್ಕಿಯಲ್ಲಿ ಕುಳಿತು ಸ್ನಾನಕ್ಕೋಸ್ಕರ ಸರಯೂ ನದಿಗೆ ಹೋಗುತ್ತಿದ್ದನು.

ಗತ್ವಾ ಕೂಲೇ ವಾಹನಾದಿ ವಿಸೃಜ್ಯ ರಘುನಂದನಃ ।
ಗಚ್ಛಂಸ್ತಸ್ಯಾಃ ಪಾವನಾರ್ಥಂ ಸರಯ್ವಾಃ ಪುಳಿನೇ ಮುದಾ ॥ ೬೮ ॥

ಮಂತ್ರಿಭಿರ್ವೇಷ್ಟಿತೋ ಗತ್ವಾ ನತ್ವಾ ತಾಂ ಶರಯೂನದೀಂ ।
ಸ್ನಾತ್ವಾ ನಿತ್ಯವಿಧಿಂ ಕೃತ್ವಾ ಬ್ರಾಹ್ಮಣೈಃ ಪರಿವಾರಿತಃ ॥ ೬೯ ॥

ದತ್ವಾ ದಾನಾನ್ಯನೇಕಾನಿ ಗೋಭೂಧಾನ್ಯರಸಾದಿಭಿಃ ।
ಸಂಪೂಜ್ಯ ಸರಯೂಂ ಪುಣ್ಯಾಂ ಬ್ರಾಹ್ಮಣಾನ್ ಪೂಜ್ಯ ಸಾದರಂ ॥ ೭೦ ॥

ಯಯೌ ರಥಂ ಸಮಾರುಹ್ಯ ರುಕ್ಮಬಂಧನಬಂಧಿತಂ ।
ರುಕ್ಮತಂತುರಜ್ಜುಭಿಶ್ಚ ಸರ್ವತಃ ಪರಿವೇಷ್ಟಿತಂ ॥ ೭೧ ॥

ಪಟ್ಟಕೂಲಾದಿವಸನೈರ್ವರೈರಾಚ್ಛಾದಿತಂ ಶುಭಂ ।
ವಾಜಿವಾಹಂ ಸಾರಥಿನಾ ಸುಸ್ನಾತೇನ ಪ್ರಚೋದಿತಂ ॥ ೭೨ ॥

೬೮–೬೯. ಅಲ್ಲಿಗೆ ಹೋಗಿ ಆ ನದಿಯ ದಡದಲ್ಲಿ ವಾಹನ ಮುಂತಾದುವುಗಳನ್ನು ಬಿಟ್ಟು ಆ ಸರಯೂ ನದಿಯ ಮಧ್ಯಕ್ಕೆ ಹೋಗಿ ಅದರ ಮರಳಿನಮೇಲೆ ಮಂತ್ರಿಗಳೊಡನೆಯೂ ಬಂಧುಗಳೊಡನೆಯೂ ಕೂಡಿ ಆ ಸರಯೂ ನದಿಯನ್ನು ಸ್ತುತಿಸಿ ನಮಸ್ಕರಿಸಿ ಸ್ನಾನಮಾಡಿ ನಿತ್ಯ ವಿಧಿಯನ್ನು ಮಾಡುತ್ತಿದ್ದನು.

೭೦. ಅಲ್ಲಿಗೆ ಅನೇಕಜನ ಬ್ರಾಹ್ಮಣರು ಬಂದಿರುತ್ತಿದ್ದರು. ಅವರಿಗೆಲ್ಲಾ ದಾನಗಳನ್ನು ಕೊಡುತ್ತಿದ್ದನು. ಗೋವು, ಭೂಮಿ, ರಸ, ಇವುಗಳನ್ನು ಆ ಸರಯೂ ನದಿಯ ಪ್ರೀತ್ಯರ್ಥವಾಗಿ ಕೊಡುತ್ತಿದ್ದನು.

೭೧. ಅನಂತರ ಚಿನ್ನದ ಅಲಂಕಾರದಿಂದ ಮನೋಹರವಾದ ರಥವನ್ನು ಹತ್ತುತ್ತಿದ್ದನು. ಅದಕ್ಕೆ ಎಲ್ಲಾ ಕಡೆಗೂ ಚಿನ್ನದ ತಂತಿಗಳನ್ನೇ ಬಿಗಿದಿರುತ್ತಿದ್ದರು.

೭೨. ಅದರ ಮೇಲಕ್ಕೆ ರೇಷ್ಮೆಯ ಬಟ್ಟೆಯನ್ನೇ ಹೊದಿಸಿರುತ್ತಿದ್ದರು. ಒಳ್ಳೆಯ ಕುದುರೆಗಳನ್ನೇ ಕಟ್ಟಿರುತ್ತಿದ್ದರು. ಯೋಗ್ಯನಾದ ಸಾರಥಿಯು ಕುಳಿತು ಜಾಗರೂಕತೆಯಿಂದ ನಡೆಸುತ್ತಿದ್ದನು.

ಕಿಂಕಿಣೀವರಮಾಲಾಭಿರ್ಘಂಟಾಭಿರತಿಗರ್ಜಿತಂ ।
ರುಕ್ಮದಂಡಧರೈರ್ದೂತೈರಗ್ರೇ ದರ್ಶಿತಸತ್ಪಥಃ ॥ ೭೩ ॥

ಪಥಿ ನೀರಾಜಿತಸ್ತ್ರೀಭಿರ್ವರ್ಷಿತಃ ಪುಷ್ಪವೃಷ್ಟಿಭಿಃ ।
ಪ್ರಾಪ ಸ್ವೀಯಂ ಗೃಹಂ ರಾಮಃ ಸೂರ್ಯಕೋಟಿಸಮಪ್ರಭಂ ॥ ೭೪ ॥

ಅವರುಹ್ಯ ರಥಾದ್ರಾಮಃ ಪಾದಯೋರ್ಧೃತ್ಯ ಪಾದುಕೇ ।
ವಿವೇಶ ಸೀತಾಸಂದತ್ತಪಾದಾರ್ಘ್ಯಾಚಮನೋ ಗೃಹಂ ॥ ೭೫ ॥

ಗತ್ವಾಗ್ನಿಹೋತ್ರಶಾಲಾಯಾಂ ಸೀತಯಾಸನಸಂಸ್ಥಿತಃ ।
ಅಗ್ನಿಹೋತ್ರಾದಿವಿಧಿನಾ ವಹ್ನಿಂ ಹುತ್ವಾ ತತಃ ಪರಂ ॥ ೭೬ ॥

ಸ್ಫಟಿಕಸ್ಯ ಚ ಲಿಂಗಸ್ಯ ಕರ್ಮಮಾರ್ಗೈರ್ಯಥಾವಿಧಿ ।
ಲೋಕಾನಾಂ ಶಿಕ್ಷಣಾರ್ಥಾಯ ಕೃತ್ವಾ ಪೂಜನಮುತ್ತಮಂ ॥ ೭೭ ॥

---

೭೩. ಗೆಜ್ಜೆಗಳು ಗಂಟೆಗಳು ಇವುಗಳನ್ನು ಮಾಲೆ ಮಾಲೆಯಾಗಿ ಕಟ್ಟಿರುತ್ತಿದ್ದರು. ಇವು ಬಹುವಾಗಿ ಗರ್ಜಿಸುತ್ತಿದ್ದುವು. ಚಿನ್ನದ ಬೆತ್ತಗಳನ್ನು ದೂತರು ಹಿಡಿದು ಮುಂದೆ ದಾರಿಯನ್ನು ತೋರಿಸುತ್ತ ಹೋಗುತ್ತಿದ್ದರು.

೭೪. ಆಗ ದಾರಿಯಲ್ಲಿ ಹೆಂಗಸರು ಆರತಿಯನ್ನು ಎತ್ತುತ್ತಿದ್ದರು. ಪುಷ್ಪಗಳನ್ನು ಎರಚುತ್ತಿದ್ದರು. ಈ ರೀತಿಯಾಗಿ ಹೊರಟು ಕೋಟಿಸೂರ್ಯರಂತೆ ಪ್ರಕಾಶಿಸುವ ತನ್ನ ಮನೆಗೆ ಬರುತ್ತಿದ್ದನು.

೭೫. ಮನೆಯ ಬಳಿ ರಥದಿಂದ ಕೆಳಗೆ ಇಳಿದು ಕಾಲಿಗೆ ಕೆರಗಳನ್ನು ಹಾಕಿಕೊಂಡು ಒಳಗೆ ಹೋಗಲು ಸೀತೆಯು ಅರ್ಘ್ಯ ಆಚಮನಗಳನ್ನು ಕೊಡುತ್ತಿದ್ದಳು. ಅದನ್ನು ತೆಗೆದುಕೊಂಡು ಮನೆಯೊಳಕ್ಕೆ ಹೋಗುತ್ತಿದ್ದನು.

೭೬. ಅಲ್ಲಿಂದ ಅಗ್ನಿಹೋತ್ರದ ಮನೆಗೆ ಹೋಗಿ ಸೀತೆಯೊಡನೆ ಕುಳಿತು ಅಗ್ನಿಹೋತ್ರದ ವಿಧಿಯಂತೆ ಹೋಮಾದಿಗಳನ್ನು ಮಾಡುತ್ತಿದ್ದನು.

೭೭ ಅನಂತರ ಸ್ಫಟಿಕ ಲಿಂಗದ ಈಶ್ವರನನ್ನು ಕರ್ಮಮಾರ್ಗದ ರೀತಿಯಲ್ಲಿ ಪೂಜಿಸುತ್ತಿದ್ದನು. ಲೋಕದ ಜನರಿಗೆ ತಿಳುವಳಿಕೆಯನ್ನು ಉಂಟುಮಾಡಲು ಈ ರೀತಿಯಾಗಿ ಮಾಡುತ್ತಿದ್ದನು.

ಜಾನಕ್ಯಾ ದತ್ತಪಕ್ವಾನ್ನನೈವೇದ್ಯಾದಿ ಸಮರ್ಪ್ಯ ಚ ।
ಬ್ರಾಹ್ಮಣಾನ್ ಪೂಜ್ಯ ದಾನಾದ್ಯೈಸ್ತೋಷ್ಯ ಲಬ್ಧ್ವಾ ತದಾಶಿಷಃ ॥ ೭೮ ॥

ತುಲಸೀಂ ಚ ಮಹಾಧೇನುಮಶ್ವತ್ಥಂ ಮುನಿಪಾದಪಂ ।
ಪೂಜಯಿತ್ವಾ ರವಿಂ ದೇವಂ ಬ್ರಹ್ಮಯಜ್ಞಂ ವಿಧಾಯ ಚ ॥ ೭೯ ॥

ಗುರೋರ್ಮುಖಾಚ್ಚ ಪೌರಾಣೀಂ ಕಥಾಂ ಶ್ರುತ್ವಾ ತು ಸೀತಯಾ ।
ಗುರುಂ ಪುನಃ ಪ್ರಸಂಪೂಜ್ಯ ಬಂಧುಭಿಃ ಪರಿವೇಷ್ಟಿತಃ ॥ ೮೦ ॥

ಪ್ರಾರ್ಥಿತಶ್ಚ ಮುಹುಃ ಪತ್ನ್ಯಾ ಬ್ರಾಹ್ಮಣೈಃ ಪರಿವಾರಿತಃ ।
ನಾರಿಕೇಳಕಪಿತ್ಥಾಮ್ರಕದಳೀಜಂಬುದಾಡಿಮೈಃ ॥ ೮೧ ॥

ಖರ್ಜೂರಿಕಾಪನಸಾದ್ಯೈಃ ಪಕ್ವಾನ್ನೈರ್ಘೃತಪಾಚಿತೈಃ ।
ಉಪಹಾರಂ ಸುಖಂ ಕೃತ್ವಾ ತಾಂಬೂಲಂ ಪರಿಗೃಹ್ಯ ಚ ॥ ೮೨ ॥

---

೭೮. ಜಾನಕಿಯು ಪಕ್ವಾನ್ನಗಳನ್ನು ನೈವೇದ್ಯಕ್ಕೆ ತಂದಿಡಲು ಅದನ್ನು ಆ ದೇವರಿಗೆ ಸಮರ್ಪಿಸುತ್ತಿದ್ದನು. ಅನಂತರ ಬ್ರಾಹ್ಮಣರಿಗೆ ದಾನಾದಿಗಳನ್ನು ಕೊಟ್ಟು ಅವರನ್ನು ಸಂತೋಷಪಡಿಸಿ ಅವರಿಂದ ಆಶೀರ್ವಾದವನ್ನು ಪಡೆಯುತ್ತಿದ್ದನು.

೭೯. ಅನಂತರ ತುಳಸಿ, ಕರೆಯುವ ಹಸು, ಅರಳಿಮರ ಅಗಸೆಯ ಮರಗಳನ್ನು ಪೂಜಿಸಿ ಆಮೇಲೆ ಸೂರ್ಯದೇವನನ್ನು ಆರಾಧಿಸಿ ಬ್ರಹ್ಮಯಜ್ಞವನ್ನು ಮಾಡುತ್ತಿದ್ದನು.

೮೦. ಅನಂತರ ಗುರುವಿನ ಮುಖದಿಂದ ಸೀತೆಯೊಡನೆ ಪುರಾಣದ ಕಥೆಗಳನ್ನು ಕೇಳುತ್ತಿದ್ದನು. ಕಥೆಯನ್ನು ಕೇಳಿದನಂತರ ಗುರುವನ್ನು ಪೂಜಿಸುತ್ತಿದ್ದನು.

೮೧–೮೨. ಅನಂತರ ಹೆಂಡತಿಯು ಬಂದು ಭೋಜನಕ್ಕೆ ಬರಬೇಕೆಂದು ಅನೇಕಬಾರಿ ಪ್ರಾರ್ಥಿಸಿದಮೇಲೆ ಬಂಧುಗಳೊಡನೆಯೂ, ಬ್ರಾಹ್ಮಣರೊಡನೆಯೂ ಕೂಡಿಕೊಂಡು ತೆಂಗು, ಬೇಲ, ಮಾವು, ಬಾಳೆ, ನೇರಿಳೆ, ದಾಳಿಂಬೆ, ಖರ್ಜೂರ, ಹಲಸು ಇವುಗಳ ಹಣ್ಣುಗಳನ್ನು ಸೇರಿಸಿ ಮಾಡಿದ ಪದಾರ್ಥಗಳಿಂದ ಫಲಹಾರ ವನ್ನು ಮಾಡಿಕೊಂಡು ತಾಂಬೂಲವನ್ನು ಹಾಕಿಕೊಳ್ಳುತ್ತಿದ್ದನು.

ದಿವ್ಯವಸ್ತ್ರಾಣಿ ಸಂಗೃಹ್ಯ ದೃಷ್ಟ್ವಾದರ್ಶೇ ನಿಜಂ ಮುಖಂ ।
ನಿರೀಕ್ಷಿತಶ್ಚ ವೈದೇಹ್ಯಾರುಹ್ಯ ಸ್ಯಂದನಮುತ್ತಮಂ ॥ ೮೩ ॥

ವೇಷ್ಟಿತೋ ಮಂತ್ರಿದೂತಾದ್ಯೈಸ್ತೂರ್ಯಧ್ವನಿಪುರಸ್ಸರಃ ।
ಮಾತೃಗೇಹಂ ತತೋ ಗತ್ವಾ ತಾಃ ಪ್ರಣಮ್ಯಾವನೀಂ ಗತಃ ॥ ೮೪ ॥

ಸವ್ಯಾಂ ಪ್ರದಕ್ಷಿಣಾಂ ಕೃತ್ವಾ ಗತ್ವಾ ರಾಜಗೃಹಂ ಪ್ರತಿ ।
ಸಿಂಹಾಸನಸ್ಥಂ ರಾಜಾನಂ ನತ್ವಾ ಸ್ಥಿತ್ವಾ ತದಾಜ್ಞಯಾ ॥ ೮೫ ॥

ಪೌರಕಾರ್ಯಾಣ್ಯನೇಕಾನಿ ಕೃತ್ವಾ ರಾಜ್ಞಾ ವಿಸರ್ಜಿತಃ ।
ಯಯೌ ಸ್ಯಂದನಮಾಸ್ಥಾಯ ನೃಪಂ ನತ್ವಾ ಪುನಃ ಪುನಃ ॥ ೮೬ ॥

---

೮೩. ದಿವ್ಯವಾದ ವಸ್ತ್ರಗಳನ್ನು ಉಟ್ಟುಕೊಂಡು ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡು ವೈದೇಹಿಯು ನೋಡುತ್ತಿರಲು ರಥದಲ್ಲಿ ಕುಳಿತು ಕೊಳ್ಳುತ್ತಿದ್ದನು.

೮೪. ಮಂತ್ರಿಗಳೂ ದೂತರೂ ಜೊತೆಯಲ್ಲಿರಲು ಮಂಗಳ ಧ್ವನಿಯನ್ನು ಮಾಡಿಸಿಕೊಳ್ಳುತ್ತ ತಾಯಿಯ ಮನೆಗೆ ಹೋಗಿ ಅಲ್ಲಿ ಅವರಿಗೆಲ್ಲಾ ನಮಸ್ಕರಿಸುತ್ತಿದ್ದನು.

೮೫. ಅವರನ್ನು ಬಲಗಡೆಯಿಂದ ಪ್ರದಕ್ಷಿಣೆಮಾಡಿ ಅನಂತರ ರಾಜನ ಮನೆಗೆ ಹೋಗುತ್ತಿದ್ದನು. ಸಿಂಹಾಸನದಲ್ಲಿ ಕುಳಿತಿರುವ ರಾಜನನ್ನು ನಮಸ್ಕರಿಸಿ ಅವನ ಅಪ್ಪಣೆಯನ್ನೇ ನಿರೀಕ್ಷಿಸುತ್ತಿದ್ದನು.

೮೬. ಅನಂತರ ಅವನ ಅಪ್ಪಣೆಯಂತೆ ರಾಜ್ಯದ ಕೆಲಸಗಳನ್ನು ನೆರವೇರಿಸಿ ಅವನು ಹೋಗೆಂದು ಹೇಳಿದಮೇಲೆ ಮತ್ತೆ ಮತ್ತೆ ಆ ರಾಜನಿಗೆ ನಮಸ್ಕರಿಸಿ ರಥದಲ್ಲಿ ಕುಳಿತು ಹೊರಡುತ್ತಿದ್ದನು.

ತೂರ್ಯಗೀತನಿನಾದೈಶ್ಚ ನರ್ತನೈರ್ವಾಯೋಷಿತಾಂ |
ಯಯೌ ಸ್ವೀಯಂ ಗೃಹಂ ರಾಮಸ್ಸಂದನಾದವರುಹ್ಯ ಚ ॥ ೮೭ ॥

ಭೂಮಿಜಾದತ್ತಪಾದ್ಯಾರ್ಘ್ಯಾಚಮನೀಯಾಸನಾದಿಕಂ |
ಗೃಹೀತ್ವಾ ಯದ್ಬಹಿರ್ಗತ್ವಾ ಕೃತಂ ತತ್ತಾಂ ನ್ಯವೇದಯೇತ್ ॥ ೮೮ ॥

ಸರ್ವಂ ವೃತ್ತಂ ಕೌತುಕೇನ ಹಾಸ್ಯಗೀತಾದಿ ಮಂಗಳೈಃ |
ರಮಯಿತ್ವಾ ಭೂಮಿಕನ್ಯಾಂ ದಿವ್ಯವಸ್ತ್ರಾದಿಭೂಷಿತಾಂ ॥ ೮೯ ॥

ತತೋ ಮಧ್ಯಾಹ್ನಸಮಯೇ ಸರಯ್ವಾಂ ವಾಥ ಸದ್ಮನಿ |
ಸ್ನಾತ್ವಾ ಮಧ್ಯಾಹ್ನಿಕಂ ಕರ್ಮ ಚಕಾರ ರಘುನಂದನಃ ॥ ೯೦ ॥

ನಿತ್ಯಂ ಯತ್ರಾಕರೋತ್ ಸ್ನಾನಂ ಸರಯ್ವಾಂ ನಿರ್ಮಲೇ ಜಲೇ |
ತದಾಖ್ಯಯಾಭವತ್ತೀರ್ಥಂ ರಾಮತೀರ್ಥಮಿತಿ ಸ್ಫುಟಂ ॥ ೯೧ ॥

---

೮೭. ರಥದಮೇಲೆ ಕುಳಿತು ಹೊರಡುತ್ತಿರಲು ದಾರಿಯಲ್ಲಿ ಮಂಗಳ ವಾದ್ಯಗಳೂ ಸೂಳೆಯರ ನರ್ತನಗಳೂ ಆಗುತ್ತಿದ್ದುವು. ಅದರೊಡನೆ ಕೂಡಿ ಕೊಂಡು ತನ್ನ ಮನೆಗೆ ಹೋಗುತ್ತಿದ್ದನು.

೮೮. ಅಲ್ಲಿ ವೈದೇಹಿಯು ಅರ್ಘ್ಯ ಪಾದ್ಯಗಳನ್ನು ಕೊಡಲು ಅದನ್ನು ಸ್ವೀಕರಿಸಿ ಆಚಮನ ಮಾಡಿ ಹೊರಗೆ ಹೋಗಿ ತಾನು ಮಾಡಿದ ಕೆಲಸವನ್ನೆಲ್ಲಾ ಅವಳಿಗೆ ಹೇಳುತ್ತಿದ್ದನು.

೮೯. ಎಲ್ಲಾ ವಿಷಯಗಳನ್ನೂ ಹೇಳಿ ಆಶ್ಚರ್ಯಪಡಿಸುತ್ತ ಆಕೆಯನ್ನು ಹಾಸ್ಯಮಾಡುತ್ತ ಸಂಗೀತಾದಿಗಳನ್ನು ಕೇಳುತ್ತ ಸೂಳೆಯರನ್ನು ಕುಣಿಸುತ್ತ ಸಂತೋಷಪಡುತ್ತಿದ್ದನು.

೯೦. ಅನಂತರ ಮಧ್ಯಾಹ್ನದಲ್ಲಿ ಸರಯೂ ನದಿಯಲ್ಲಾಗಲೀ ಇಲ್ಲವೆ ಮನೆಯಲ್ಲಾಗಲೀ ಸ್ನಾನಮಾಡಿ ಮಾಧ್ಯಾಹ್ನಿಕವನ್ನು ಮಾಡುತ್ತಿದ್ದನು.

೯೧. ರಾಮನು ನಿತ್ಯವೂ ಸರಯೂನದಿಯಲ್ಲಿ ಎಲ್ಲಿ ಸ್ನಾನಮಾಡುತ್ತಿದ್ದನೋ ಆ ಸ್ಥಳವು ರಾಮತೀರ್ಥವೆಂಬುದಾಗಿ ಈಗಲೂ ಪ್ರಸಿದ್ಧವಾಗಿದೆ.

ತದ್ವಿಖ್ಯಾತಂ ತ್ರಿಭುವನೇ ಚೈತ್ರಮಾಸಿ ವಿಶೇಷತಃ |
ಮಾಧ್ಯಾಹ್ನಿಕಂ ಚ ಸಂಪಾದ್ಯ ಬ್ರಾಹ್ಮಣೈರ್ಮಂತ್ರಿಭಿರ್ಜನೈಃ ॥ ೯೨ ॥

ಇಷ್ಟೈಸ್ಸುವರ್ಣಪಾತ್ರೇಷು ತ್ರಿಪದಾಸು ಘೃತೇಷು ಚ ।
ಪರಿಷ್ಕೃತೇಷು ಜಾನಕ್ಯಾಸೀತಯಾ ಗತಿಲಾಘವಾತ್ ॥ ೯೩ ॥

ಕ್ವಣತ್ಕಂಕಣಮಂಜೀರಕಿಂಕಿಣೀನೂಪುರಾದಿಷು ।
ನದತ್ಸು ಭೋಜನಂ ಚಕ್ರೇ ರಾಘವೋ ಹರ್ಷಪೂರಿತಃ ॥ ೯೪ ॥

ಕರಶುದ್ಧಿಂ ವಿಧಾಯಾಥ ಭುಕ್ತ್ವಾ ತಾಂಬೂಲಮುತ್ತಮಂ ।
ತತಶ್ಶತಪದಂ ಗತ್ವಾ ನಿದ್ರಾಂ ಕೃತ್ವಾ ತು ಸೀತಯಾ ॥ ೯೫ ॥

---

೯೨. ಅದು ಮೂರು ಲೋಕದಲ್ಲಿಯೂ ಪ್ರಸಿದ್ಧವಾಗಿದೆ. ಅಲ್ಲಿ ಚೈತ್ರ ಮಾಸದಲ್ಲಿ ಸ್ನಾನವು ವಿಶೇಷಪುಣ್ಯಪ್ರದವು. ಇಂತು ಆ ರಾಮನು ಮಾಧ್ಯಾಹ್ನಿಕವನ್ನು ಮಾಡಿಕೊಂಡು ಬ್ರಾಹ್ಮಣರನ್ನೂ ಮಂತ್ರಿಗಳನ್ನೂ ಜೊತೆಗೆ ಸೇರಿಸಿಕೊಳ್ಳುತ್ತಿದ್ದನು.

೯೩. ಅವರೆಲ್ಲರನ್ನೂ ಸೇರಿಸಿಕೊಂಡು ಅವರೊಡನೆ ಊಟಕ್ಕೆ ಕುಳಿತು ಕೊಳ್ಳುತ್ತಿದ್ದನು. ಅಲ್ಲಿ ಮುಕ್ಕಾಲು ಮಣೆಯಮೇಲೆ ಚಿನ್ನದ ಪಾತ್ರೆಗಳನ್ನಿಟ್ಟು ಕೊಂಡು ತುಪ್ಪದಿಂದ ಬೇಯಿಸಿರುವ ಪದಾರ್ಥಗಳನ್ನು ಊಟಮಾಡುತ್ತಿದ್ದನು.

೯೪. ಸೀತೆಯು ಅವೆಲ್ಲವನ್ನೂ ತನ್ನ ಗತಿಲಾಘವದಿಂದ ಕಾಲುಬಳೆಗಳು ಮಿಂಚುಗಳು ಸದ್ದುಮಾಡುತ್ತಿರಲು ಬಡಿಸುತ್ತಿದ್ದಳು. ಆಗ ರಾಮನು ಬಹು ಸಂತೋಷದಿಂದ ಊಟಮಾಡುತ್ತಿದ್ದನು.

೯೫. ಅನಂತರ ಕೈತೊಳೆದುಕೊಂಡು ತಾಂಬೂಲವನ್ನು ಹಾಕಿಕೊಂಡು ಶತಪಥವನ್ನು ತಿರುತಿದನಂತರ ಸ್ವಲ್ಪಹೊತ್ತು ಸೀತೆಯೊಡನೆ ನಿದ್ದೆ ಮಾಡುತ್ತಿದ್ದನು.

ಪುನರ್ವಸ್ತ್ರಾಣಿ ಸಂಗೃಹ್ಯ ಲಬ್ಧ್ವಾ ಶಸ್ತ್ರಾಣಿ ಸಾದರಂ |
ಧನುರ್ಬಾಣೌ ಕರೇ ಧೃತ್ವಾ ರಥೇ ಸ್ಥಿತ್ವಾಥ ಬಂಧುಭಿಃ || ೯೬ ||

ಪುಷ್ಪಾರಾಮೋದ್ಯಾನಕಾದೀನ್ ದೃಷ್ಟ್ವಾ ತು ಕೌತುಕೇನ ಚ |
ವಾದ್ಯಘೋಷೈರ್ನರ್ತಕಾದ್ಯೈರ್ಗತ್ವಾ ಸ್ವೀಯಂ ಗೃಹಂ ಪುನಃ || ೯೭ ||

ಸಾಯಂಸಂಧ್ಯಾದಿ ಸಂಪಾದ್ಯ ಪುನರ್ಹುತ್ವಾ ಸವಿಸ್ತರಂ |
ಶಂಭುಂ ಭಕ್ತ್ಯಾ ಪುನಃ ಪೂಜ್ಯ ಕೃತ್ವಾ ಚೈವೋಪಹಾರಕಂ || ೯೮ ||

ರತ್ನಕಾಂಚನಮಾಣಿಕ್ಯನಿರ್ಮಿತೇ ಮಂಚಕೇ ವರೇ |
ದಿವ್ಯಪ್ರಾಸಾದಮಧ್ಯೇ ಸ ಸೀತಯಾ ರಘುನಾಯಕಃ || ೯೯ ||

ಹಾಸ್ಯಗೀತವಿನೋದಾದ್ಯೈರ್ನಿದ್ರಾಂ ಚಕ್ರೇ ತತಃ ಪರಂ |
ಏವಂ ನಾನಾಸಮುತ್ಸಾಹೈರ್ನಿನಾಯಾರ್ಕಸಮಾಸ್ಸುಖಂ || ೧೦೦ ||

೯೬-೯೭. ಅನಂತರ ಬೇರೆಯ ಬಟ್ಟೆಗಳನ್ನು ಹಾಕಿಕೊಂಡು ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಧನುರ್ಬಾಣಗಳನ್ನು ಕೈಯ್ಯಲ್ಲಿ ಹಿಡಿದುಕೊಂಡು ರಥದಲ್ಲಿ ಕುಳಿತು ಬಂಧುಗಳನ್ನೂ ಕೂರಿಸಿಕೊಂಡು ಹೂದೋಟಗಳು ಉದ್ಯಾನಗಳು ಇವೆಲ್ಲವನ್ನೂ ನೋಡಿಕೊಂಡು ವಾದ್ಯಗಳು ಮೊಳಗುತ್ತಿರಲು ಮತ್ತೆ ಮನೆಗೆ ಹೋಗುತ್ತಿದ್ದನು.

೯೮. ಅನಂತರ ಸಾಯಂಕಾಲದ ಸಂಧ್ಯಾವಂದನೆಯನ್ನು ಮಾಡಿ ಮತ್ತೆ ಔಪಾಸನವನ್ನು ಮಾಡಿ ಮತ್ತೆ ಶಂಭುವನ್ನು ಭಕ್ತಿಯಿಂದ ಪೂಜಿಸಿ ಉಪಹಾರವನ್ನು ಮಾಡುತ್ತಿದ್ದನು.

೯೯-೧೦೦ ಉತ್ತಮವಾದ ಮಹಡಿಯಮೇಲೆ ರತ್ನ ಚಿನ್ನ ಮೊದಲಾದುವುಗಳಿಂದ ಮಾಡಿರುವ ಮಂಚದಮೇಲೆ ಸೀತೆಯೊಡನೆ ಮಲಗುತ್ತಿದ್ದನು. ಆಗ ಹಾಸ್ಯಗಾರರು ಹಾಸ್ಯವನ್ನು ಮಾಡುವರು. ಮಂಗಳಗೀತಗಾರರು ಮಂಗಳ ಗೀತವನ್ನು ಹಾಡುವರು. ಆಗ ಸುಖವಾಗಿ ನಿದ್ರಿಸುವನು. ಈ ರೀತಿಯಾಗಿ ಆ ಶ್ರೀರಾಮನು ಹನ್ನೆರಡುವರ್ಷಗಳವರೆಗೂ ಸುಖಿಸುತ್ತಿದ್ದನು.

ಏಕದಾ ರಾಘವಂ ರಾಜಾ ಜ್ಞಾತ್ವಾ ಮುದ್ಗಲವಾಕ್ಯತಃ ।
ವಸಿಷ್ಠವಾಕ್ಯತಶ್ಚಾಪಿ ಚರಿತ್ರೈಶ್ಚಾಪ್ಯಮಾನುಷೈಃ ॥ ೧೦೧ ॥

ಸಾಕ್ಷಾನ್ನಾರಾಯಣಂ ವಿಷ್ಣುಂ ಮತ್ವಾಹೂಯ ರಹಃಸ್ಥಿತಃ ।
ಪಪ್ರಚ್ಛ ವಿನಯೇನೈವ ಹೃದಿ ಭಾವಂ ವಿಧಾಯ ಚ ॥ ೧೦೨ ॥

ರಾಮ ನಾರಾಯಣಸ್ತ್ವಂ ಹಿ ಭೂಭಾರಹರಣಾಯ ಚ ।
ಮತ್ತೋ ಜಾತೋಽಸೀತಿ ಲೋಕಾ ವದಂತ್ಯಜ್ಞಾನಬುದ್ಧಯಃ ॥ ೧೦೩ ॥

ಅತಃ ಪೃಚ್ಛಾಮಿ ತೇ ರಾಮ ಮಾಯಯಾ ಮೋಹಿತಸ್ತವ ।
ಕಿಂಚಿತ್ ಜ್ಞಾನೋಪದೇಶೇನ ನಾಶಯಾಜ್ಞಾನಜಾಂ ಮತಿಂ ॥ ೧೦೪ ॥

---

೧೦೧. ಹೀಗಿರುತ್ತಿರಲು ರಾಮನು ಮಾಡುತ್ತಿದ್ದ ಅಮಾನುಷವಾದ ಕೆಲಸಗಳಿಂದಲೂ ಮುದ್ಗಲನ ಮಾತಿನಿಂದಲೂ ವಸಿಷ್ಠನ ಮಾತಿನಿಂದಲೂ ದಶರಥನು ರಾಮನನ್ನು ಸಾಕ್ಷಾನ್ನಾರಾಯಣನೆಂದೇ ತಿಳಿದನು.

೧೦೨. ಹಾಗೆ ನಾರಾಯಣನೆಂದು ತಿಳಿದುಕೊಂಡು ಒಂದುಸಾರಿ ಆ ರಾಮನನ್ನು ಗುಟ್ಟಾಗಿ ಯಾರೂ ಇಲ್ಲದಿರುವ ಸ್ಥಳಕ್ಕೆ ಕರೆದು ಮನಸ್ಸಿನಲ್ಲಿ ಸ್ವಾಮಿಯೆಂಬ ಭಾವನೆಯನ್ನೇ ಇಟ್ಟುಕೊಂಡು ಇಂತೆಂದು ಕೇಳಿದನು.

೧೦೩. ಎಲೈ ರಾಮನೆ ! ನೀನು ಸಾಕ್ಷಾನ್ನಾರಾಯಣನು. ಭೂಭಾರವನ್ನು ಇಳಿಸಲು ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿದ್ದೀಯೆ. ಎಂಬುದಾಗಿ ತಿಳುವಳಿಕೆಯಿಲ್ಲದ ಜನರು ಹೇಳಿಕೊಳ್ಳುತ್ತಿದ್ದಾರೆ.

೧೦೪. ಆದುದರಿಂದ ನಿನ್ನನ್ನು ಒಂದು ಮಾತನ್ನು ಕೇಳುತ್ತೇನೆ. ನಿನ್ನ ಮಾಯೆಯಿಂದ ನಾನು ಮೋಹಿತನಾಗಿದ್ದೇನೆ. ಆದುದರಿಂದ ನೀನು ನನ್ನ ಅಜ್ಞಾನದ ಬುದ್ಧಿಯನ್ನು ಸ್ವಲ್ಪ ಜ್ಞಾನೋಪದೇಶಮಾಡಿ ಹೋಗಲಾಡಿಸು.

ದಾರಾಪತ್ಯಗೃಹಾದ್ಯೇಷು ಸ್ಥಿತಾ ನೈವೋಪಶಾಮ್ಯತಿ |
ತತ್ಪಿತುರ್ವಚನಂ ಶ್ರುತ್ವಾ ರಾಜಾನಂ ರಾಘವೋಽಬ್ರವೀತ್ || ೧೦೫ ||

॥ ಶ್ರೀರಾಮ ಉವಾಚ ॥

ಶೃಣು ರಾಜನ್ ಪ್ರವಕ್ಷ್ಯಾಮಿ ತವ ಜ್ಞಾನಾರ್ಥಮುತ್ತಮಂ |
ಶೃಣೋತು ಮಮ ಮಾತೇಯಂ ಕೌಸಲ್ಯಾಪಿ ತವ ಪ್ರಿಯಾ || ೧೦೬ ||

ನಶ್ವರಂ ಭಾಸತೇ ಚೈತದ್ವಿಶ್ವಂ ಮಾಯೋದ್ಭವಂ ನೃಪ |
ಯಥಾ ಶುಕ್ತೌ ರೌಪ್ಯಭಾಸಃ ಕಾಚಭೂಮ್ಯಾಂ ಜಲಸ್ಯ ಚ || ೧೦೭ ||

ಯಥಾ ರಜ್ಜೌ ಸರ್ಪಭಾಸೋ ಮೃಗತೋಯೇ ಜಲಸ್ಪೃಹಾ |
ತದ್ವದಾತ್ಮನಿ ಭಾಸೋಽಯಂ ಕಲ್ಪ್ಯತೇ ನಶ್ವರೋ ಬುಧೈಃ || ೧೦೮ ||

---

೧೦೫. ಈ ಹೆಂಡತಿ ಮಕ್ಕಳು, ಮನೆ, ಹಣ, ಇವುಗಳಲ್ಲಿ ಆಸಕ್ತರಾಗಿದ್ದು ಕೊಂಡು ಇರುತ್ತೇವೆ. ಈ ಅಜ್ಞಾನವೆಂಬುದು ನಾಶವಾಗುವಂತಿಲ್ಲ. ಅಲ್ಲದೆ ಈ ಸಂಸಾರವೂ ನಾಶವಾಗುವಂತಿಲ್ಲ. ಎನ್ನಲು ತಂದೆಯ ಮಾತನ್ನು ರಾಮನು ಕೇಳಿ ಅವನಿಗೆ ಇಂತೆಂದು ಹೇಳಿದನು.

೧೦೬. ಶ್ರೀರಾಮನು ಹೇಳಿದನು—ಎಲೈ ರಾಜನೇ ! ನಿನಗೆ ಒಳ್ಳೆಯ ಜ್ಞಾನವುಂಟಾಗಲು ತತ್ವವನ್ನು ಹೇಳುತ್ತೇನೆ. ಕೇಳು. ನಿನ್ನ ಹೆಂಡತಿಯೂ ನನ್ನ ತಾಯಿಯೂ ಆದ ಈ ಕೌಸಲ್ಯೆಯೂ ಇದನ್ನು ಕೇಳಲಿ.

೧೦೭. ಎಲೈ ನೃಪನೆ ! ಈ ಪ್ರಪಂಚದಲ್ಲಿ ಕಾಣುವುದೆಲ್ಲವೂ ನಶ್ವರವು. ಇವೆಲ್ಲವೂ ಮಾಯೆಯಿಂದ ಹುಟ್ಟಿದುದು. ಕಪ್ಪೆಯ ಚಿಪ್ಪಿನಲ್ಲಿ ಬೆಳ್ಳಿಯ ಭ್ರಾಂತಿಯೂ ಗಾಜಿರುವ ಭೂಮಿಯಲ್ಲಿ ನೀರಿನ ಭ್ರಾಂತಿಯೂ ಬರುವಂತೆ ಇವೆಲ್ಲವೂ ಮಾಯೆಯಿಂದ ಹುಟ್ಟಿದುದು.

೧೦೮. ಹಗ್ಗದಲ್ಲಿ ಹಾವಿನ ಭ್ರಾಂತಿಬರುವಂತೆಯೂ ಬಿಸಿಲ್ಗುದುರೆಯಲ್ಲಿ ನೀರಿನ ಭ್ರಮೆಯುಂತೆಯೂ ಆತ್ಮನಲ್ಲಿ ನಶ್ವರವೆಂಬ ಭ್ರಮೆಯೂ ಬರುತ್ತದೆ.

ಅಜ್ಞಾನದೃಷ್ಟಿಭಿರ್ನಿತ್ಯಂ ಮನ್ಯತೇ ನ ತು ಪಂಡಿತೈಃ ।
ಆತ್ಮಾ ಶುದ್ಧೋ ನಿರ್ವ್ಯಳೀಕಸ್ಸಚ್ಚಿದಾನಂದ ಲಕ್ಷಣಃ ॥ ೧೦೯ ॥

ಯಸ್ಯಾಂಶಾಂಶೇನ ವಿಶ್ವೇಶ ಬ್ರಹ್ಮಾದ್ಯಾಸ್ಸಕಲಾ ವಯಂ ।
ಸ್ಥಿತ್ಯುತ್ಪತ್ತಿವಿನಾಶಾರ್ಥಂ ನಾನಾರೂಪಾಣಿ ಮಾಯಯಾ ॥ ೧೧೦ ॥

ಧಾರ್ಯತೇ ನಟವದ್ರಾಜನ್ ನ ತೇಷ್ವಾಸಕ್ತ ಏವ ಸಃ ।
ಯಥಾ ಪದ್ಮಂ ನ ಸ್ಪೃಶತಿ ಜಲಂ ಮಾಯಾಂ ತಥಾಮಲಃ ॥ ೧೧೧ ॥

ಆತ್ಮಾ ನಿತ್ಯೋ ನ ಸ್ಪೃಶತಿ ಪರಮಾನಂದವಿಗ್ರಹಃ ।
ದೇಹಾಗಾರಸುತಸ್ತ್ರೀಷು ಮಾಮಕೇತಿ ಚ ಯಾ ಮತಿಃ ॥ ೧೧೨ ॥

---

೧೦೯. ಅಜ್ಞಾನ ದೃಷ್ಟಿಯುಳ್ಳವರು ಹಾಗೆ ತಿಳಿಯುತ್ತಾರೆಯೇ ಹೊರತು ಪಂಡಿತರು ತಿಳಿಯುವುದಿಲ್ಲ. ಆತ್ಮನು ಶುದ್ಧನು. ನಿಷೇಧಕ್ಕೆ ಸಿಕ್ಕದಿರುವವನು. ಸಚ್ಚಿದಾನಂದ ಸ್ವರೂಪನು.

೧೧೦. ಅಂತಹ ಆತ್ಮನ ಅಂಶಾಂಶದಿಂದ ಬ್ರಹ್ಮ ವಿಷ್ಣು ಮಹೇಶ್ವರರಾದ ನಾವು ಸ್ಥಿತಿ ಉತ್ಪತ್ತಿ ನಾಶಗಳಿಗೋಸ್ಕರ ಮಾಯೆಯಿಂದ ನಾನಾರೂಪಗಳನ್ನು ಹೊಂದುತ್ತೇವೆ.

೧೧೧. ಆತ್ಮನು ಅಂಶಾಂಶದಿಂದ ಆ ರೂಪಗಳನ್ನು ನಾಟಕದಲ್ಲಿ ನಟನು ಧರಿಸಿ ಬರುವಂತೆ ಧರಿಸಿ ಬರುವನು. ಆ ನಟನು ಅದರಲ್ಲಿ ಆಸಕ್ತನಾಗಿಲ್ಲದಿರುವಂತೆಯೇ ಆತ್ಮನು ಆ ರೂಪಗಳಲ್ಲಿ ಆಸಕ್ತನಲ್ಲ. ಪದ್ಮದ ಎಲೆಯಮೇಲೆ ನೀರು ಬಿದ್ದರೆ ಆ ಎಲೆಯು ನೀರಿನ ಲೇಪವನ್ನು ಹೊಂದದಿರುವಂತೆ ಮಾಯೆಯ ಲೇಪವು ಆ ಆತ್ಮನಿಗಿರುವುದಿಲ್ಲ. ಅವನು ಪರಿಶುದ್ಧನು.

೧೧೨. ಆತ್ಮನು ನಿತ್ಯನು. ಅವನಿಗೆ ಒಂದರ ಸಂಬಂಧವೂ ಇರುವುದಿಲ್ಲ. ಪರಮಾನಂದ ಸ್ವರೂಪನು. ದೇಹ, ಮನೆ, ಮಠ, ಹೆಂಡತಿ, ಮಕ್ಕಳು ಇವರಲ್ಲಿ ನನ್ನದು ಎಂಬ ಬುದ್ಧಿಯನ್ನು ಬಿಟ್ಟು ಉತ್ತಮಬುದ್ಧಿಯಿಂದ ಯೋಚಿಸು.

ಉಪಸಂಹೃತ್ಯ ಬುದ್ಧ್ಯಾ ಸಂನ್ಯಸ್ಯ ಬ್ರಹ್ಮಣಿ ಚಿದ್ಘನೇ ।
ಯದ್ಯತ್ಕಿಂಚಿದ್ವಿಭಾಸತೇತ್ರ ತತ್ತನ್ನಾರಾಯಣಾತ್ಮಕಂ ॥ ೧೧೩ ॥

ಪಶ್ಯ ತ್ವಂ ಸರ್ವಭಾವೇನ ಮುಚ್ಯಸೇ ಭವಸಂಕಟಾತ್ ।
ಸತ್ಯಂ ಶೌಚಂ ದಯಾ ಶಾಂತಿಃ ಕ್ಷಮಾ ಚೇಂದ್ರಿಯನಿಗ್ರಹಃ ॥ ೧೧೪ ॥

ಅಹಿಂಸಾ ಭಗವದ್ಭಕ್ತಿರ್ವೇದಮಾರ್ಗಾನುವರ್ತನಂ ।
ಇತ್ಯಾದ್ಯಾ ಯೇ ಗುಣಾ ರಾಜನ್ ತಾನ್ ಭಜಸ್ವ ನಿರಂತರಂ ॥ ೧೧೫ ॥

ಚೌರ್ಯಂ ದ್ಯೂತಂ ವಿವಾದಂ ಚ ಮಾತ್ಸರ್ಯಂ ದಂಭಮೇವ ಚ ।
ಕ್ರೌರ್ಯಂ ಲೋಭಂ ಭಯಂ ಕ್ರೋಧಂ ನಿಂದ್ಯಕರ್ಮಪ್ರವರ್ತನಂ ॥ ೧೧೬ ॥

ವೇದವಿಪ್ರಯತೀನಾಂ ಚ ಸಾಧೂನಾಂ ಮಾನಭಂಗನಂ ।
ನಿಂದಾಪೈಶುನ್ಯಮನಿಶಂ ತ್ಯಜ ದೂರಂ ಸ್ವತೋ ನೃಪ ॥ ೧೧೭ ॥

---

೧೧೩. ಅವೆಲ್ಲವೂ ಚಿದ್ರೂಪವೂ ಘನರೂಪವೂ ಆದ ಬ್ರಹ್ಮನೆಂದು ತಿಳಿದು ಅವುಗಳಲ್ಲಿ ಅಭಿಮಾನವನ್ನು ಬಿಟ್ಟು ಬಿಡು. ಆ ಚಿದ್ರೂಪವಾದ ಆತ್ಮನಲ್ಲಿ ಯಾವುದು ಕಾಣುತ್ತದೆಯೋ ಅದೇ ನಾರಾಯಣ ಸ್ವರೂಪವು.

೧೧೪–೧೧೫. ಅವೆಲ್ಲವೂ ನಾರಾಯಣ ಸ್ವರೂಪವೆಂದೂ ಸರ್ವವ್ಯಾಪಿಯೆಂದೂ ತಿಳಿದರೆ ಆಗ ನೀನು ಸಂಸಾರ ಸಂಕಟದಿಂದ ಬಿಡುಗಡೆಯನ್ನು ಹೊಂದುತ್ತೀಯೆ. ಸತ್ಯ, ಶೌಚ, ದಯೆ, ಶಾಂತಿ, ಕ್ಷಮೆ, ಇಂದ್ರಿಯನಿಗ್ರಹ, ಅಹಿಂಸೆ, ಭಗವದ್ಭಕ್ತಿ, ವೇದಮಾರ್ಗವನ್ನು ಅನುಸರಿಸುವಿಕೆ ಇವೇ ಮುಂತಾದ ಯಾವ ಗುಣಗಳಿವೆಯೋ ಅವೆಲ್ಲವನ್ನೂ ನೀನು ಯಾವಾಗಲೂ ಅನುಸರಿಸು.

೧೧೬–೧೧೭. ಕಳ್ಳತನ, ಜೂಜು, ಜಗಳ, ಮತ್ಸರ, ದಂಭ, ಕ್ರೌರ್ಯ, ಲೋಭ, ಭಯ, ಕ್ರೋಧ, ಕೆಟ್ಟಕೆಲಸದಲ್ಲಿ ಕೈಹಾಕುವುದು, ವೇದದ ದೂಷಣೆ, ವಿಪ್ರರ ಮಾನಭಂಗ, ಸಾಧುಗಳ ಮಾನಭಂಗ, ನಿಂದೆ, ಪೈಶುನ್ಯ ಇವೆಲ್ಲವನ್ನೂ ದೂರದಲ್ಲಿ ಬಿಟ್ಟುಬಿಡು.

ಪೂರ್ವಂ ತ್ವಯಾ ತಪಸ್ತಪ್ತಂ ಪುತ್ರತ್ವಂ ಯಾಚಿತಂ ಮಮ ।
ತಸ್ಮಾಜ್ಜಾತೋಽಸ್ಮಿ ತ್ವತ್ತೋಽಹಂ ಕೌಸಲ್ಯಾಯಾಂ ನೃಪೋತ್ತಮ ॥ ೧೧೮ ॥

ಯನ್ಮಯಾ ಕಥಿತಂ ಚೈತದಜ್ಞಾನಮಲನಾಶನಂ ।
ಗೋಪನೀಯಂ ಪ್ರಯತ್ನೇನ ಕಥನೀಯಂ ನ ಕುತ್ರಚಿತ್ ॥ ೧೧೯ ॥

ತದ್ರಾಮವಚನಂ ಶ್ರುತ್ವಾ ಗತಮಾಯಾಮಲೋ ನೃಪಃ ।
ಸದ್ಭಾವಪರಿಪೂರ್ಣಸ್ತು ರೋಮಾಂಚಿತವಪುರ್ಧರಃ ॥ ೧೨೦ ॥

ಪ್ರಣನಾಮ ರಾಘವಸ್ಯ ಚರಣೌ ಗಾಢಭಾವತಃ ।
ತತೋ ರಾಮಃ ಪುನಃ ಪ್ರಾಹ ಪಿತರಂ ನಿರ್ಮಲಾಶಯಂ ॥ ೧೨೧ ॥

ನೇದಂ ಯೋಗ್ಯಂ ತ್ವಯಾ ರಾಜನ್ ವಂದನಾದಿ ಶಿಶುಂ ಪ್ರತಿ ।
ಮಾಯಯಾ ನರವೇಷಸ್ಯ ಮಮೋಪಹಾಸಕಾರಣಂ ॥ ೧೨೨ ॥

---

೧೧೮. ನೀನು ಪೂರ್ವದಲ್ಲಿ ತಪಸ್ಸನ್ನು ಮಾಡಿ ನನ್ನನ್ನು ಮಗನಾಗಿ ಹುಟ್ಟಬೇಕೆಂದು ಕೇಳಿದೆ. ಆದುದರಿಂದ ನಿನ್ನಿಂದ ಕೌಸಲ್ಯೆಯಲ್ಲಿ ನಾನು ಹುಟ್ಟಿರುವೆನು.

೧೧೯. ಅಜ್ಞಾನವೆಂಬ ಮಲವನ್ನು ನಾಶಮಾಡುವ ನಾನು ಹೇಳಿರುವ ಜ್ಞಾನವನ್ನು ಪ್ರಯತ್ನಪಟ್ಟು ಗುಟ್ಟಾಗಿಟ್ಟುಕೊಂಡು ಇರು. ಯಾರಿಗೂ ಹೇಳಬೇಡ.

೧೨೦. ರಾಜನು ರಾಮನ ಈ ಮಾತನ್ನು ಕೇಳಿ ಅಜ್ಞಾನವನ್ನು ಬಿಟ್ಟುಬಿಟ್ಟನು. ಸದ್ಭಾವವೇ ತುಂಬಿಕೊಂಡಿತು. ಅದರಿಂದ ರೋಮಾಂಚವುಂಟಾಯಿತು.

೧೨೧. ಆಗ ರಾಮನಿಗೆ ಬಹು ಭಕ್ತಿಯಿಂದ ನಮಸ್ಕರಿಸಿದನು. ರಾಮನು ತಂದೆಯನ್ನು ಕುರಿತು ಮತ್ತೆ ಇಂತೆಂದನು.

೧೨೨. ಎಲೈ ದೊರೆಯೆ! ನೀನು ಮಕ್ಕಳಿಗೆ ನಮಸ್ಕರಿಸುವುದು ಯೋಗ್ಯವಲ್ಲ. ನಾನು ದೇವದೇವನಾದರೂ ಮಾಯೆಯಿಂದ ನಿಮಗೆ ಮಗನಾಗಿ ಹುಟ್ಟಿದ್ದೇನೆ ನನಗೆ ನೀನು ನಮಸ್ಕರಿಸಿದರೆ ಅದು ಹಾಸ್ಯಕ್ಕೆ ಕಾರಣವಾಗುತ್ತದೆ.

ಮನಸ್ಯೈವ ಚ ಮಾಂ ನಿತ್ಯಂ ಭಜ ಭಾವೇನ ಸಾದರಂ ।
ಮಚ್ಚಿತ್ತೋ ಮದ್ಗತಪ್ರಾಣೋ ಮಯಿ ಭಕ್ತಿಂ ದೃಢಾಂ ಕುರು ॥ ೧೨೩ ॥

ಇತ್ಯುಕ್ತ್ವಾ ಪಿತರೌ ನತ್ವಾ ಗೃಹೀತ್ವಾಜ್ಞಾಂ ತಯೋಃ ಪ್ರಭುಃ ।
ಯಯೌ ರಥಸಮಾರೂಢಃ ಶ್ರೀರಾಮಸ್ಸ್ವಂ ನಿಕೇತನಂ ॥ ೧೨೪ ॥

ಕದಾ ಮಾತುಃ ಗೃಹಂ ಗತ್ವಾ ಸೀತಯಾ ಭೋಜನಂ ವ್ಯಧಾತ್ ।
ಕದಾ ಭ್ರಾತೃಗೃಹೇಷ್ವೇವ ಕದಾ ಪಙ್ಕ್ತೌ ಪಿತುಸ್ಸ್ವಯಂ ॥ ೧೨೫ ॥

ಕದಾ ದಶರಥಂ ತಾತಂ ಭೋಜನಾರ್ಥಂ ನಿಜಂ ಗೃಹಂ ।
ಭಾರ್ಯಾಪುತ್ರಾಭಿದಿಭಿರ್ಯುಕ್ತಂ ಪೌರೈರ್ವಿಪ್ರೈಸ್ಸಮನ್ವಿತಂ ॥ ೧೨೬ ॥

---

೧೨೩. ನೀನು ನನ್ನನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಲೇ ಭಜಿಸು. ಮನಸ್ಸಿನಲ್ಲಿಯೇ ಭಕ್ತಿಯನ್ನಿಟ್ಟುಕೊಂಡಿರು. ನನ್ನಲ್ಲಿಯೇ ಮನಸ್ಸನ್ನಿಟ್ಟುಕೊಂಡು ನನ್ನಲ್ಲಿಯೇ ಪ್ರಾಣಗಳನ್ನು ಇಟ್ಟುಕೊಂಡು ನನ್ನಲ್ಲಿಯೇ ದೃಢವಾದ ಭಕ್ತಿಯನ್ನು ಮಾಡುತ್ತಿರು.

೧೨೪. ರಾಮನು ಈ ರೀತಿಯಾಗಿ ಹೇಳಿ ತಾಯಿ ತಂದೆಗಳಿಗ ನಮಸ್ಕರಿಸಿ ಜೊತೆಯುವರನ್ನು ಕರೆದುಕೊಂಡು ರಥದಲ್ಲಿ ಕುಳಿತುಕೊಂಡು ತನ್ನ ಮನೆಗೆ ಹೊರಟುಹೋದನು.

೧೨೫-೧೨೬. ಶ್ರೀರಾಮ ಒಂದುಸಾರಿ ತಾಯಿಯ ಮನೆಗೆ ಹೋಗಿ ಸೀತೆಯೊಡನೆ ಊಟಮಾಡುತ್ತಿದ್ದನು. ಒಂದುಸಾರಿ ತಮ್ಮಂದಿರ ಮನೆಗೆ ಹೋಗಿ ಊಟಮಾಡುತ್ತಿದ್ದನು. ಒಂದೊಂದುಸಾರಿ ತಂದೆಯ ಮನೆಗೆ ಹೋಗಿ ಅವನ ಪಙ್ಕ್ತಿಯಲ್ಲಿ ಊಟಮಾಡುತ್ತಿದ್ದನು. ತನ್ನ ಮನೆಯಲ್ಲಿ ಊಟಮಾಡುವಾಗ ಹೆಂಡತಿ ಮಕ್ಕಳೊಡನೆಯೂ ಪಟ್ಟಣಿಗರೊಡನೆಯೂ ಬ್ರಾಹ್ಮಣರೊಡನೆಯೂ ದಶರಥನನ್ನೂ ಕರೆದುಕೊಂಡು ಹೋಗುತ್ತಿದ್ದನು.

ಮುದಾ ರಾಮಸ್ಸಮಾಹೂಯ ಭೋಜಯಾಮಾಸ ಸಾದರಂ ।
ಶ್ರೀರಾಮದರ್ಶನಾರ್ಥಂ ತೇ ತಪೋವನನಿವಾಸಿನಃ ॥ ೧೨೭ ॥

ಅಯೋಧ್ಯಾನಗರೀ ಮೇತ್ಯ ದ್ವಾರಸ್ಥೈರನಿಷೇಧಿತಾಃ ।
ಶತಶಃ ಪ್ರತ್ಯಹಂ ರಾಮಂ ದೃಷ್ಟ್ವಾ ಸ್ತುತ್ವಾ ಪುನಃ ಪುನಃ ॥ ೧೨೮ ॥

ಆತಿಥ್ಯಂ ರಘುನಾಥಸ್ಯ ಗೃಹೀತ್ವಾ ತುಷ್ಟಮಾನಸಾಃ ।
ಸಪ್ತ ಪಂಚ ದಿನಾನ್ಯೇವ ಸ್ಥಿತ್ವಾ ಪುಣ್ಯಕಥಾದಿಭಿಃ ॥ ೧೨೯ ॥

ರಮಯಿತ್ವಾ ರಮಾನಾಥಂ ಜಗ್ಮುಃ ಸ್ವಂ ಸ್ವಂ ವರಾಶ್ರಮಂ ।
ಯತ್ರ ಯತ್ರ ಹಿ ರಾಮಸ್ಯ ಪ್ರೀತಿಂ ಜ್ಞಾತ್ವಾ ವಿದೇಹಜಾ ॥ ೧೩೦ ॥

೧೨೭-೧೨೮. ಅಂತೆ ಅವರೆಲ್ಲರನ್ನೂ ಕರೆದುಕೊಂಡು ಹೋಗಿ ಅವರೊಡನೆ ಸಂತೋಷದಿಂದ ಊಟಮಾಡುತ್ತಿದ್ದನು. ಶ್ರೀರಾಮನ ದರ್ಶನಕ್ಕೋಸ್ಕರ ತಪೋವನದಲ್ಲಿರತಕ್ಕ ಋಷಿಗಳು ಅಯೋಧ್ಯೆಗೆ ಬಂದು ದ್ವಾರಪಾಲಕರೂ ಪೌರರೂ ಬೇಡವೆಂದು ತಡೆದರೂ ಕೇಳದೆ ಒಳಗೆ ನುಗ್ಗಿ ಆ ರಾಮನನ್ನು ದರ್ಶನಮಾಡಿ ಅವನನ್ನು ಹೊಗಳಿ ಹೋಗುತ್ತಿದ್ದರು. ಈ ರೀತಿಯಾಗಿ ಪ್ರತಿದಿನವೂ ಸಾವಿರಾರುಮಂದಿ ಮಾಡುತ್ತಿದ್ದರು.

೧೨೯-೧೩೦. ಅಲ್ಲದೆ ಶ್ರೀರಾಮನ ಆತಿಥ್ಯವನ್ನು ಹೊಂದಿ ಸಂತೋಷಗೊಂಡು ಐದಾರುದಿನಗಳು ಅಲ್ಲಿದ್ದು ಪುಣ್ಯಕರವಾದ ಮಾತುಗಳನ್ನಾಡಿಕೊಂಡು ಆ ರಾಮನನ್ನೂ ಸಂತೋಷಪಡಿಸಿ ತಾವೂ ಸಂತೋಷಪಟ್ಟುಕೊಂಡು ಅನಂತರ ತಮ್ಮ ತಮ್ಮ ಆಶ್ರಮಗಳಿಗೆ ಹೊರಟುಹೋಗುತ್ತಿದ್ದರು.

ತತ್ರಚ್ಚಕಾರ ಸಾ ಸಾಧ್ವೀ ಹಾಸ್ಯಕ್ರೀಡಾಸನಾದಿಕಂ।
ವಿವಾಹಾನಂತರಂ ರಾಮಸ್ಸಮಾ ದ್ವಾದಶ ಸೀತಯಾ ॥ ೧೩೧ ॥

ರಮಯಾಮಾಸ ಸಾಕೇತೇ ಮಹಾಕ್ರೀಡಾಪುರಸ್ಸರಂ ।
ಸಹಸ್ರವರ್ಷೈರ್ವಿಜ್ಞೇಯಂ ಶ್ರೇಷ್ಠಂ ವರ್ಷಂ ಕೃತೇ ಯುಗೇ ॥ ೧೩೨ ॥

ಶತವರ್ಷೈಶ್ಚ ತ್ರೇತಾಯಾಂ ದ್ವಾಪರೇ ದಶವರ್ಷಜಂ ।
ಕಲೇರ್ಮಾನೇನ ಬೋದ್ಧವ್ಯಂ ಶೂನ್ಯಹ್ರಾಸಾತ್ತ್ರಿವಿಕ್ರಮಾತ್ ॥ ೧೩೩ ॥

ಏವಂ ಶ್ರೀರಾಮಚಂದ್ರೇಣ ಭೋಗಾ ಭುಕ್ತಾ ಸುರೋಪಮಾಃ ।
ಯಸ್ಮಿನ್ ಋತೌ ಚ ಯದ್ದ್ರವ್ಯಂ ಫಲಪುಷ್ಪಾದಿಕಂ ಶುಭಂ ॥ ೧೩೪ ॥

---

೧೩೧. ಸೀತೆಯು ರಾಮನಿಗೆ ಯಾವ ಯಾವ ಪದಾರ್ಥಗಳಲ್ಲಿ ಪ್ರೀತಿ ಇದೆ ಎಂಬುದನ್ನು ತಿಳಿದು ಅದೇ ರೀತಿಯಾದ ಪದಾರ್ಥಗಳನ್ನು ತಂದೊದಗಿಸುತ್ತ ಹಾಸ್ಯ ಕ್ರೀಡೆ ಮುಂತಾದುವುಗಳಿಂದ ಸಂತೋಷಪಡಿಸುತ್ತಿದ್ದಳು. ಮದುವೆಯಾದಮೇಲೆ ಶ್ರೀರಾಮನು ಸೀತೆಯೊಡನೆ ಹನ್ನೆರಡು ವರ್ಷಗಳವರೆಗೂ ಉತ್ತಮೋತ್ತಮವಾದ ಕ್ರೀಡೆಗಳನ್ನೂ ಸುಖಗಳನ್ನೂ ಅನುಭವಿಸುತ್ತ ಅಯೋಧ್ಯೆಯಲ್ಲಿ ಸುಖಿಸಿದನು.

೧೩೨-೧೩೩. ಕೃತಯುಗದಲ್ಲಿ ಸಾವಿರ ವರ್ಷಗಳು ಶ್ರೇಷ್ಠವಾದುವು. ತ್ರೇತಾಯುಗದಲ್ಲಿ ನೂರು ವರ್ಷಗಳು ಶ್ರೇಷ್ಠವಾದುವು. ದ್ವಾಪರ ಯುಗದಲ್ಲಿ ಹತ್ತು ವರ್ಷಗಳು ಶ್ರೇಷ್ಠವಾದುವು. ಕಲಿಯುಗದಲ್ಲಿಯಾದರೊ ಮೂರು ಪಾದಗಳಿಂದ ಶೂನ್ಯಹ್ರಾಸಗಳನ್ನು ಮಾಡಿ ಆ ಉತ್ತಮ ವರ್ಷಗಳನ್ನು ತಿಳಿದು ಕೊಳ್ಳಬೇಕು.

೧೩೪-೧೩೫. ರಾಮಚಂದ್ರನು ಈರೀತಿಯಾಗಿ ದೇವತೆಗಳು ಅನುಭವಿಸುವ ಭೋಗಗಳನ್ನು ಅನುಭವಿಸಿದನು. ಯಾವ ಯಾವ ಕಾಲದಲ್ಲಿ ಯಾವ ಯಾವ ಋತುವಿನಲ್ಲಿ ಯಾವ ಯಾವ ಹಣ್ಣು ಹೂವು ಮತ್ತು ಪದಾರ್ಥಗಳು

ತತ್ಸರ್ವಂ ಸರ್ವದೈವಾಸಿದ್ರಾಮೇ ಸಾಕೇತಸಂಸ್ಥಿತೇ ।
ಅನಾವೃಷ್ಟಿರ್ನ ವೈ ಕುತ್ರ ತಸ್ಕರಾಣಾಂ ಭಯಂ ನ ಹಿ ॥ ೧೩೫ ॥

ಭಯಂ ಹಿಂಸ್ರಾದಿಕಂ ನಾಸೀದಯೋಧ್ಯಾವಿಷಯೇ ಪ್ರಿಯೇ ।
ಯುಧಾಜಿನ್ನಾಮ ಕೈಕೇಯಾಭ್ರಾತಾ ಭರತಮಾತುಲಃ ॥ ೧೩೬ ॥

ನಿನಾಯ ಭರತಂ ಸ್ವೀಯರಾಜ್ಯಂ ಶತ್ರುಘ್ನಸಯುತಂ ।
ಕೌತುಕೇನ ನೃಪಂ ಪೃಷ್ಟ್ವಾ ಕೈಕೇಯೀಂ ಪ್ರಣಿಪತ್ಯ ಚ ॥ ೧೩೭ ॥

ಏವಂ ರಾಮಸ್ಯ ಮಾಂಗಲ್ಯಂ ಬಾಲತ್ವೇಽಪಿ ಸುಖಾವಹಂ ।
ಯೇ ಶೃಣ್ವಂತಿ ನರಾ ಭಕ್ತ್ಯಾ ನ ತೇಷಾಮಸ್ತ್ಯಮಂಗಳಂ ॥ ೧೩೮ ॥

ಏವಂ ಯಥಾ ತ್ವಯಾ ಪೃಷ್ಟಂ ತಥಾ ಸರ್ವಂ ಮಯೋದಿತಂ ।
ರಾಮೇಣಾಚರಿತಂ ಯಚ್ಚ ನೃಣಾಂ ಮಾಂಗಲ್ಯದಾಯಕಂ ॥ ೧೩೯ ॥

ಸಿಕ್ಕುತ್ತವೆಯೋ ಅವೆಲ್ಲವೂ ಕೂಡ ಆ ರಾಮನಿರುವಾಗ ಅಯೋಧ್ಯೆಯಲ್ಲಿ ಯಾವಾಗಲೂ ಇರುತ್ತಿದ್ದುವು. ಅನಾವೃಷ್ಟಿಯ ಭಯವಾಗಲಿ ಕಳ್ಳರ ಭಯವಾಗಲಿ ಆಗ ಎಲ್ಲಿಯೂ ಇರಲಿಲ್ಲ.

೧೩೬-೧೩೭. ಮತ್ತಾವ ಹಿಂಸೆಗಳಾಗಲಿ ಭಯಗಳಾಗಲಿ ಅಲ್ಲಿರಲೇ ಇಲ್ಲ. ಈ ರೀತಿಯಾಗಿ ಅಯೋಧ್ಯೆಯು ಇದ್ದುಕೊಂಡಿದ್ದಿತು. ಹೀಗಿರುವಲ್ಲಿ ಕೈಕೆಯಿಯ ಸಹೋದರನಾದ ಯುಧಾಜಿತ್ತೆಂಬುವನು ರಾಜನನ್ನೂ ಕೈಕೇಯಿಯನ್ನೂ ಕೇಳಿ ನಮಸ್ಕರಿಸಿ ತನ್ನ ಸೋದರಳಿಯನಾದ ಭರತನನ್ನು ಶತ್ರುಘ್ನನೊಡನೆ ತನ್ನ ದೇಶಕ್ಕೆ ಕರೆದುಕೊಂಡು ಹೋದನು.

೧೩೮. ಬಾಲ್ಯದಲ್ಲಿಯೂ ಕೂಡ ಸುಖಕರವೂ ಮಂಗಳಕರವೂ ಆದ ಈ ರಾಮನ ಚರಿತ್ರೆಯನ್ನು ಯಾರು ಭಕ್ತಿಯಿಂದ ಕೇಳುತ್ತಾರೆಯೋ ಅವರಿಗೆ ಅಮಂಗಳವೆಂಬುದು ಇರುವುದೇ ಇಲ್ಲ.

೧೩೯. ಎಲೈ ಪಾರ್ವತಿಯೆ! ನೀನು ಕೇಳಿದಂತೆ ಎಲ್ಲವನ್ನೂ ಹೇಳಿದ್ದೇನೆ. ರಾಮನು ಮಾಡಿದ ಕೆಲಸಗಳು ಮನುಷ್ಯರ ಮಂಗಳಕ್ಕೋಸ್ಕರ ವಾಗಿ ಆಚರಿತವಾದುವು.

ಏವಂ ಗಿರೀಂದ್ರಜೇ ಪ್ರೋಕ್ತಂ ಬಾಲಲೀಲಾದಿಕೌತುಕಂ ।
ರಾಮಚಂದ್ರಸ್ಯ ಸಂಕ್ಷೇಪಾತ್ತವ ಪ್ರೀತ್ಯೈ ಸುಖಾವಹಂ ॥ ೧೪೦ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಬಾಲಚರಿತ್ರೇ ಸಾರಕಾಂಡೇ ಶ್ರೀರಾಮ ದಿನಚರ್ಯಾವರ್ಣನಂ ನಾಮ ಪಂಚಮಸ್ಸರ್ಗಃ

---

೧೪೦. ಬಾಲಲೀಲೆಯೇ ಮುಂತಾದುವುಗಳನ್ನು ಆ ರಾಮನು ಆಚರಿಸಿರುವಂತೆಯೇ ನಿನಗೆ ಸಂತೋಷವಾಗಲೆಂದು ಹೇಳಿದ್ದೇನೆ. ಇವೆಲ್ಲವೂ ಸಂಕ್ಷೇಪವಾಗಿ ಹೇಳಿರುವುವೇ ಹೊರತು ವಿಸ್ತಾರವಾಗಿ ಹೇಳಿಲ್ಲ.

ಇಂತು ಶ್ರೀವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಆನಂದರಾಮಾಯಣದ ಸಾರಕಾಂಡದಲ್ಲಿ ಶ್ರೀರಾಮದಿನಚರ್ಯಾ ವರ್ಣನವೆಂಬ ಐದನೆಯ ಸರ್ಗವು ಸಮಾಪ್ತವು

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ
॥ ಐದನೆಯ ಸರ್ಗದ ಸಾರಾಂಶವು ॥

"ಧರ್ಮದತ್ತನು ಹಾಗೆಯೇ ಯೋಚಿಸಿದವನಾಗಿ, ಆ ಕಲಹೆಗೆ ತಾನು ಆಚರಿಸಿದ ಕಾರ್ತಿಕದ ವ್ರತದಲ್ಲಿ ಅರ್ಧಭಾಗದ ಪುಣ್ಯವನ್ನು ಕೊಡುವನು. ಅದರಿಂದ ಅವಳು ತನ್ನ ಪಾಪಗಳನ್ನು ಕಳೆದುಕೊಂಡು ದಿವ್ಯರೂಪವನ್ನು ಹೊಂದಿ ವಿಮಾನದಲ್ಲಿ ಹೋಗುವಳು. ಆ ವಿಮಾನದಲ್ಲಿರುವ ಪುಣ್ಯಶೀಲ ಸುಶೀಲರನ್ನು ದರ್ಮದತ್ತನು ಧರ್ಮದ ವಿಷಯವನ್ನು ಕೇಳಲು, ಅವರು ಕಾರ್ತಿಕ ವ್ರತದ ಪ್ರಭಾವವನ್ನು ಹೇಳಿ, 'ನೀನು ಧರ್ಮವನ್ನು ದಾನಮಾಡಿದುದರಿಂದ ಅದು ನಾಶ ವಾಗಲಿಲ್ಲ ಮತ್ತೂ ಹೆಚ್ಚಿತು' ಎಂದು ಹೇಳಿದರು.

'ವಿಷ್ಣುವನ್ನು ಆರಾಧಿಸಿದುದರಿಂದ ಔತ್ತಾನಪಾದಿಗೆ ಧ್ರುವಪದವಿ ಬಂದಿತೆಂದೂ, ಆನೆಯು ಜಯನಾಗಿಯೂ, ಮೊಸಳೆಯು ವಿಜಯನಾಗಿಯೂ, ಸ್ವಾಮಿಯ ಸೇವಕರಾಗಿ ನಿಂತರೆಂದೂ ಹೇಳಿ, ನೀನೂ ಕೂಡ ಧಶರಥನಾಗಿ ಹುಟ್ಟುತ್ತೀಯೆಂದೂ, ನಿನ್ನ ಈ ಇಬ್ಬರು ಹೆಂಡತಿಯರು ಆಗಲೂ ನಿನ್ನ ಹೆಂಡಿರಾಗುತ್ತಾರೆಂದೂ, ಈ ಕಲಹೆಯು ಕೈಕಯೀ ಎಂಬ ಹೆಸರಿನಿಂದ ಮೂರನೆಯ ಹೆಂಡತಿಯಾಗಿ ಆಗುತ್ತಾಳೆಂದೂ' ಹೇಳಿದರು.

'ನೀನು ವಿಷ್ಣುವಿನ ಭಕ್ತನಾದುದರಿಂದ, ವಿಷ್ಣುವೇ ಆ ದಶರಥ ಜನ್ಮದಲ್ಲಿ ನಿನಗೆ ಮಗನಾಗಿ ಹುಟ್ಟುವನು. ಅವನು ಆಗ ರಾವಣನೇ ಮುಂತಾದ ದುಷ್ಟರನ್ನು ಕೊಲ್ಲುವನು.' ಎಂದೆನ್ನುವರು.

ಅದರಂತೆಯೇ ಆ ಧರ್ಮದತ್ತನಾದ ನೀನು ಈಗ ದಶರಥನಾಗಿದ್ದೀಯೆ. ಆ ಮೂವರೂ ಮೂವರು ಹೆಂಡತಿಯರಾಗಿರುವರು. ರಾಮನೇ ಆ ವಿಷ್ಣುವು. ಲಕ್ಷ್ಮಣನೇ ಶೇಷನು. ಶಂಖ ಚಕ್ರಗಳೇ ಭರತ ಶತ್ರುಘ್ನರು. ನಿನಗೆ ನಾರಾಯಣನೇ ಮಗನಾದುದರಿಂದ ನೀನೇ ಧನ್ಯನು." ಎಂದು ಹೇಳಿ, ಮುದ್ಗಲನು ದಶರಥನನ್ನು ಬೀಳ್ಕೊಟ್ಟನು.

ನಂತರ ರಾಜನು ಎಲ್ಲರೊಡನೆಯೂ ಪಟ್ಟಣಕ್ಕೆ ಬಂದನು. ಸುಮಂತ್ರನು ಅವರೆಲ್ಲರನ್ನೂ ಬಹುವಾದ ಉತ್ಸವಗಳಿಂದ ಮನೆಗೆ ಕರೆದುಕೊಂಡುಹೋದನು.

ಕೆಲವುದಿನಗಳಮೇಲೆ ಸೀತೆಯು ಪುಷ್ಪವತಿಯಾಗಲು ಇದನ್ನರಿತ ಜನಕನು ಅಯೋಧ್ಯೆಗೆ ಬಂದನು ಸೀತೆಗೆ ಗರ್ಭಾಧಾನ ಮಹೋತ್ಸವವೂ ನಡೆಯಿತು. ಅಂತೆಯೇ ಮಾಂಡವಿಯೇ ಮುಂತಾದವರಿಗೂ ಕಾಲಕ್ರಮದಲ್ಲಿ ಗರ್ಭಾಧಾನ ಮಹೋತ್ಸವಗಳು ನಡೆದುವು.

ರಾಮನು ಬೆಳಗ್ಗೆ ಎದ್ದು ಶೌಚಾದಿಗಳನ್ನು ಮಾಡಿಕೊಂಡು ಸರಯೂ ನದಿಯಲ್ಲಿ ಸ್ನಾನಮಾಡಿ ಅನೇಕ ದಾನಗಳನ್ನು ಮಾಡಿ ಮನೆಗೆ ಬಂದು ಅಗ್ನಿಹೋತ್ರವನ್ನು ಮಾಡುತ್ತಿದ್ದನು. ಅನಂತರ ಸ್ಫಟಿಕಶಿಲೆಯ ಶಿವಲಿಂಗ ವನ್ನಿಟ್ಟುಕೊಂಡು ಪೂಜೆಮಾಡಿ ತುಲಸಿ ಕಾಮಧೇನು ಅಶ್ವತ್ಥಗಳನ್ನು ಪೂಜಿಸಿ ಸೂರ್ಯನಮಸ್ಕಾರವನ್ನು ಮಾಡಿ ಅನಂತರ ಬ್ರಹ್ಮಯಜ್ಞವನ್ನು ಮಾಡುತ್ತಿದ್ದನು. ಅನಂತರ ಗುರುವಿನ ಮುಖದಿಂದ ಪುರಾಣದ ಕಥೆಗಳನ್ನು ಕೇಳುತ್ತಿದ್ದನು. ಅನಂತರ ಬ್ರಾಹ್ಮಣರೊಡನೆಯೂ ಇಷ್ಟರೊಡನೆಯೂ ಉಪಹಾರವನ್ನು ತೆಗೆದುಕೊಳ್ಳುತ್ತಿದ್ದನು. ಅನಂತರ ತಾಯಿಯರ ಮನೆಗೆ ಹೋಗಿ ಅವರಿಗೆ ನಮಸ್ಕರಿಸುತ್ತಿದ್ದನು. ಅನಂತರ ತಂದೆಯ ಮನೆಗೆ ಹೋಗಿ ಆತನಿಗೆ ನಮಸ್ಕರಿಸುತ್ತಿದ್ದನು.

ಅನಂತರ ಆ ತಂದೆಯ ಅಪ್ಪಣೆಯಂತೆ ರಾಜಕಾರ್ಯಗಳನ್ನು ಚೆನ್ನಾಗಿ ಮಾಡುತ್ತಿದ್ದನು. ಅವೆಲ್ಲವೂ ಮುಗಿದಮೇಲೆ ತನ್ನ ಮನೆಗೆ ಹೋಗುತ್ತಿದ್ದನು. ಅಲ್ಲಿ ಜಾನಕಿಗೆ ತಾನು ಮಾಡಿದುದನ್ನೆಲ್ಲಾ ಹೇಳುತ್ತಿದ್ದನು. ಮತ್ತೆ ಮಧ್ಯಾಹ್ನ ದಲ್ಲಿ ಸರಯೂನದಿಗೆ ಹೋಗಿ ಸ್ನಾನಮಾಡುತ್ತಿದ್ದನು ಇಲ್ಲದಿದ್ದರೆ ಮನೆಯ ಲ್ಲಿಯೇ ಸ್ನಾನಮಾಡಿ ಮಧ್ಯಾಹ್ನಿಕವನ್ನು ಮಾಡುತ್ತಿದ್ದನು. ಆ ರಾಮನು ಸರಯೂನದಿಯಲ್ಲಿ ಸ್ನಾನಮಾಡುತ್ತಿದ್ದ ಸ್ಥಳವನ್ನು ರಾಮತೀರ್ಥವೆಂದು ಈಗಲೂ ಕರೆಯುತ್ತಾರೆ.

ಅನಂತರ ಬ್ರಾಹ್ಮಣರೊಡನೆಯೂ ಮಂತ್ರಿಗಳೊಡನೆಯೂ ಕೂಡಿಕೊಂಡು ಭೋಜನವನ್ನು ಮಾಡುತ್ತಿದ್ದನು. ಕೈತೊಳೆದುಕೊಂಡು ಶತಪಥವನ್ನು ಸುತ್ತುತ್ತಿದ್ದನು. ಅನಂತರ ಯೋಧರಿಗೆ ತಕ್ಕ ಉಡುಪನ್ನು ಧರಿಸಿಕೊಂಡು ಧನುರ್ಬಾಣಗಳನ್ನು ಧರಿಸಿ ಹೊರಟು ಉದ್ಯಾನಾದಿಗಳಿಗೆ ಹೋಗುತ್ತಿದ್ದನು. ಈ ರೀತಿಯಾಗಿ ಅಪರಾಹ್ಣವನ್ನು ಕಳೆಯುತ್ತಿದ್ದನು. ಅನಂತರ ಸಾಯಂಸಂಧ್ಯಾ ವಂದನೆಯನ್ನು ಮಾಡಿಕೊಂಡು ಶಿವನ ಪೂಜೆಯನ್ನು ಮಾಡಿಕೊಂಡು ಉಪಹಾರವನ್ನು ಮಾಡಿ ಗೀತಾದಿಗಳನ್ನು ಕೇಳಿ ಅಂತೆಯೇ ಮಲಗುತ್ತಿದ್ದನು.

ಈ ರೀತಿಯಾಗಿ ಅನೇಕ ಉತ್ಸವಗಳಿಂದ ಶ್ರೀರಾಮನು ದಿನಗಳನ್ನು ಅತ್ಯಾನಂದ ಭರಿತನಾಗಿ ಕಳೆಯುತ್ತಿದ್ದನು.

ಹೀಗಿರಲು ಒಂದುಸಾರಿ ದಶರಥನು ರಾಮನನ್ನು ಅವನ ನಡತೆಯಿಂದಲೂ, ಮುದ್ಗಲನ ಮಾತಿನಿಂದಲೂ, ವಸಿಷ್ಠನ ಮಾತಿನಿಂದಲೂ, ನಾರಾಯಣನೆಂದು ತಿಳಿದು ಏಕಾಂತದಲ್ಲಿ ಅವನನ್ನು ಕುರಿತು ಇಂತೆಂದನು. "ಎಲೈ ರಾಮನೆ! 'ನೀನು ಸಾಕ್ಷಾನ್ನಾರಾಯಣನು. ಭೂಭಾರದ ಹರಣಕ್ಕೋಸ್ಕರ ಅವತರಿಸಿದ್ದೀಯೆ.' ಎಂಬುದಾಗಿ ಎಲ್ಲರೂ ಹೇಳುತ್ತಾರೆ. ಆ ನಾರಾಯಣನಾದ ನೀನು ನನಗೆ ಜ್ಞಾನೋಪದೇಶವನ್ನು ಮಾಡು. ಈ ನನ್ನ ಅಜ್ಞಾನವು ಹೋಗಲಿ."

ತಂದೆಯು ಹೀಗೆಂದುದನ್ನು ಕೇಳಿ ರಾಮನು "ಎಲೈ ತಂದೆಯೆ! ಪ್ರಪಂಚದಲ್ಲಿ ಕಾಣುವುದೆಲ್ಲವೂ ನಶ್ವರವು. ಇವೆಲ್ಲವೂ ಮಾಯೆಯಿಂದ ಹುಟ್ಟಿದುದು. ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯ ಭ್ರಾಂತಿಯುಂಟಾಗುವಂತೆ ಸುಳ್ಳಾದುದು. ನಮಗೆ ನಿಶ್ಚಯವಾಗಿ ಕಾಣುತ್ತದೆ.

ಆತ್ಮನು ಶುದ್ಧನು. ನಿತ್ಯನು. ಅವನು ಉತ್ಪತ್ತಿ, ಸ್ಥಿತಿ, ನಾಶಗಳಿಗೋಸ್ಕರ ಬ್ರಹ್ಮ, ವಿಷ್ಣು, ಶಿವರೂಪಗಳನ್ನು ಹೊಂದುತ್ತಾನೆ. ಹೊಂದಿದರೂ ವೇಷವನ್ನು ಧರಿಸುವ ನಟನಂತಿರುತ್ತಾ ಅವುಗಳ ಸುಖದುಃಖಗಳಲ್ಲಿ ತಾನು ಭಾಗಿಯಾಗುವುದಿಲ್ಲ. ಪ್ರಪಂಚದಲ್ಲಿ ಕಾಣುವುದೆಲ್ಲವೂ ನಾರಾಯಣಾತ್ಮಕವಾದುವು. ನೀನು ಈ ಹೆಂಡತಿ ಮಕ್ಕಳಲ್ಲಿ ಇಟ್ಟಿರುವ ಬುದ್ಧಿಯನ್ನು ಉಪಸಂಹಾರಮಾಡಿ ಚಿತ್ ಸ್ವರೂಪನಾದ ನಾರಾಯಣನಲ್ಲಿಡು. ಅರಿಷಡ್ವರ್ಗಗಳನ್ನು ಜಯಿಸಿ ಸತ್ಪುರುಷರನ್ನು ಸೇವಿಸು. ನೀನು ಹಿಂದೆ ನನ್ನನ್ನು ನಿನ್ನ ಮಗನಾಗಿ ಹುಟ್ಟಬೇಕೆಂದು ಕೇಳಿಕೊಂಡಿದ್ದುದರಿಂದ ನಾನು ನಿನಗೆ ಮಗನಾಗಿ ಹುಟ್ಟಿದ್ದೇನೆ. ಇದನ್ನು ಯಲ್ಲಿಯೂ ಹೇಳಬೇಡ." ಎಂದನು.

ರಾಮನ ಈ ಮಾತನ್ನು ಕೇಳಿ ದಶರಥನು ಮಾಯಾಬುದ್ಧಿಯನ್ನು ಬಿಟ್ಟು ಉತ್ತಮವಾದ ಬುದ್ಧಿಯನ್ನು ಹೊಂದಿ ರಾಮನಿಗೆ ನಮಸ್ಕರಿಸಿದನು. ಆಗ ರಾಮನು ತಂದೆಯನ್ನು ಕುರಿತು "ಎಲೈ ತಂದೆಯೇ! ನನಗೆ ನಮಸ್ಕರಿಸುವುದು ಯೋಗ್ಯವಲ್ಲ. ನಾನು ನಿನ್ನ ಮಗನಾಗಿರುವುರಿಂದ ಇದು ಹಾಸ್ಯಾಸ್ಪದವು. ಆದ್ದರಿಂದ ನಾನು ವಿಷ್ಣುವೆಂದು ತಿಳಿದು, ನೀನು ನನಗೆ ಮಾಡಬೇಕಾದ ಉಪಚಾರಗಳನ್ನು ಮನಸ್ಸಿನಿಂದಲೇ ಮಾಡು." ಎಂದನು.

ರಾಮನು ಇಂತು ಹೇಳಿ ಎಲ್ಲರೊಡನೆಯೂ ಸುಖದಿಂದಿದ್ದನು. ಈ ರಾಮನನ್ನು ನೋಡಲು ಕಾಡಿನಿಂದ ಋಷಿಗಳೆಲ್ಲರೂ ಬರುತ್ತಿದ್ದರು. ರಾಮನು ಅವರೊಡನೆ ಐದಾರುದಿನಗಳವರೆಗೆ ಮಾತು ಕಥೆಗಳನ್ನಾಡುತ್ತಲಿದ್ದು ಅವರನ್ನು ಉಪಚರಿಸಿ ಕಳುಹಿಸುತ್ತಿದ್ದನು. ಸೀತೆಯು ರಾಮನ ಮನಸ್ಸನ್ನು ತಿಳಿದು ಅಂತೆಯೇ ನಡೆಯುತ್ತಿದ್ದಳು.

ರಾಮನು ಅಯೋಧ್ಯೆಯಲ್ಲಿರುವಾಗ ಕ್ಷಾಮಡಾಮರಗಳಿಲ್ಲದೆ ಸುಖಮಯವಾಗಿದ್ದತು. ಅನಾವೃಷ್ಟಿ ಎಂಬುದೇ ಇರಲಿಲ್ಲ. ಹೀಗಿರುತ್ತಿರಲು ಭರತನ ಸೋದರಮಾವನಾದ ಯುಧಾಜಿತ್ತುವು ಭರತನನ್ನೂ ಶತ್ರುಘ್ನನನ್ನೂ ತನ್ನ ದೇಶಕ್ಕೆ ಕರೆದುಕೊಂಡು ಹೋದನು. ರಾಮನ ನಡತೆಯನ್ನು ಕೇಳಿದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಸಾರಕಾಂಡೇ

॥ ಷಷ್ಠಸ್ಸರ್ಗಃ ॥

॥ ಶ್ರೀ ಶಿವ ಉವಾಚ ॥

ಏವಂ ತ್ರೇತಾಯುಗೇ ರಾಮಂ ನಗರ್ಯಾಂ ಸೀತಯಾ ಸುಖಂ ।
ಕ್ರೀಡಂತಂ ನಾರದೋಽರ್ಕ್ಕೇಬ್ದೇ ಯಯಾವಾಕಾಶವರ್ತ್ಮನಾ ॥ ೧ ॥

ಅಥ ರಾಮೋ ಮುನಿಂ ಪೂಜ್ಯ ಸೀತಯಾ ಲಕ್ಷ್ಮಣೇನ ಚ ।
ಶುಶ್ರಾವ ವಚನಂ ತಸ್ಯ ಸುರೈರ್ವಿಜ್ಞಾಪಿತಂ ಚ ಯತ್ ॥ ೨ ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ
ಆರನೆಯ ಸರ್ಗವು

೧. ಶ್ರೀ ಶಿವನು ಹೇಳಿದನು—ತ್ರೇತಾಯುಗದಲ್ಲಿ ಸೀತೆಯೊಡನೆ ಅಯೋಧ್ಯೆಯಲ್ಲಿ ರಾಮನು ಹೀಗೆ ಸುಖವಾಗಿ ಕ್ರೀಡಿಸುತ್ತಿರಲು ಹನ್ನೆರಡು ವರ್ಷಗಳು ಕಳೆದಮೇಲೆ ಆಕಾಶಮಾರ್ಗದಲ್ಲಿ ನಾರದನು ಬಂದನು.

೨. ಆಗ ರಾಮನು ನಾರದನನ್ನು ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಕೂಡಿಕೊಂಡು ಪೂಜಿಸಿದನು. ಅನಂತರ ಆ ನಾರದನು ದೇವತೆಗಳು ವಿಜ್ಞಾಪನೆ ಮಾಡಿಕೊಂಡಿರುವ ವಿಷಯವನ್ನು ಹೇಳಿದನು.

ನಿಹತ್ಯ ರಾವಣಂ ಯುದ್ಧೇ ತತೋ ರಾಜ್ಯಂ ಕುರುಷ್ವಹಿ ।
ಅಂಗೀಕೃತ್ಯ ರಘುಶ್ರೇಷ್ಠಸ್ತಂ ಮುನಿಂ ವಿಸಸರ್ಜ ಯತ್ ॥ ೩ ॥

ಅಥ ರಾಮೋಽಬ್ರವೀತ್ಸೀತಾಂ ಮಮ ರಾಜ್ಯಾಭಿಷೇಚನಂ ।
ಕರ್ತುಕಾಮೋಽಸ್ತಿ ತತ್ರಾಹಂ ವಿಘ್ನಮುತ್ಪಾದ್ಯ ದಂಡಕಂ ॥ ೪ ॥

ಗಚ್ಛಾಮಿ ರಾವಣಾದೀನಾಂ ವಧಾರ್ಥಂ ಲಕ್ಷ್ಮಣೇನ ಚ ।
ಅಯೋಧ್ಯಾಯಾಂ ವಸಾತ್ರ ತ್ವಂ ಕೌಸಲ್ಯಾಂ ಪಾರ್ಥಿವಂ ಭಜ ॥ ೫ ॥

ತದಪ್ರಿಯವಚನಂ ಶ್ರುತ್ವಾ ಪ್ರಣಿಪತ್ಯ ರಘೂತ್ತಮಂ ।
ಉವಾಚ ಮಧುರಂ ವಾಕ್ಯಂ ವನಂ ಮಾಂ ತ್ವಂ ನಯ ಪ್ರಭೋ ॥ ೬ ॥

---

೩. ಆ ನಾರದನು ದೇವತೆಗಳು ಹೇಳಿದುದನ್ನೆಲ್ಲಾ ಹೇಳಿ ಎಲೈ ರಾಮನೆ! ಆ ರಾವಣನನ್ನು ಯುದ್ಧದಲ್ಲಿ ಕೊಂದು ಅನಂತರ ರಾಜ್ಯಭಾರವನ್ನು ಮಾಡೆಂದು ಹೇಳಲು ಅದನ್ನು ರಾಮನು ಅಂಗೀಕಾರಮಾಡಿಕೊಂಡು ನಾರದನನ್ನು ಕಳುಹಿಸಿಬಿಟ್ಟನು.

೪–೫. ಅನಂತರ ರಾಮನು ಸೀತೆಯನ್ನು ಕುರಿತು ಎಲೈ ಸೀತೆಯೆ! ರಾಜನು ನನಗೆ ರಾಜ್ಯಭಿಷೇಕವನ್ನು ಮಾಡಬೇಕೆಂದಿರುವನು. ಆದರ ವಿಷಯದಲ್ಲಿ ನಾನು ವಿಘ್ನವನ್ನು ಹೊಂದಿ ರಾವಣಾದಿಗಳನ್ನು ಕೊಲ್ಲಲು ಲಕ್ಷ್ಮಣ ನೊಡನೆ ಕಾಡಿಗೆ ಹೋಗುತ್ತೇನೆ. ನೀನು ಈ ಅಯೋಧ್ಯೆಯಲ್ಲಿಯೇ ಇದ್ದು ಕೊಂಡು ಕೌಸಲ್ಯೆಯನ್ನೂ ದಶರಥನನ್ನೂ ಸೇವಿಸುತ್ತಿರು ಎಂದನು.

೬. ಸೀತೆಯು ರಾಮನ ಈ ಮಾತನ್ನು ಕೇಳಿ ಅವನಿಗೆ ನಮಸ್ಕರಿಸಿ ಎಲೈ ರಾಮನೆ! ನನ್ನನ್ನೂ ಕಾಡಿಗೆ ಕರೆದುಕೊಂಡು ಹೋಗು ಎಂಬುದಾಗಿ ವಿನಯದಿಂದ ಮಧುರವಾಗಿ ಹೇಳಿದಳು.

ಕಾರಣಾನ್ಯತ್ರ ನೈ ತ್ರೀಣಿ ಸಂತಿ ತಾನಿ ವದಾಮ್ಯಹಂ ।
ಬಾಲತ್ವೇ ಕರರೇಖಾಂ ಮೇ ದೃಷ್ಟ್ವಾ ಕಶ್ಚಿದ್ದ್ವಿಜಾಗ್ರಣೀಃ ॥ ೭ ॥

ವನಪ್ರಯಾಣಂ ಮಾಮಾಹ ಭರ್ತ್ರಾ ಸ ಸತ್ಯವಾಗ್ದ್ವಿಜಃ ।
ಭವತ್ವದ್ಯ ಪ್ರಯಾಣಾನ್ಮೇ ದಂಡಕಂ ಹಿ ತ್ವಯಾ ಸಹ ॥ ೮ ॥

ಅನ್ಯತ್ಸ್ವಯಂವರೇ ಪೂರ್ವಂ ಸುರಾನಪಿ ಮಯೋದಿತಂ ।
ಯದಾ ಚಾಪಾಂತಿಕಂ ಪ್ರಾಪ್ತಸ್ಸಜ್ಜಿತುಂ ತ್ವಂ ಸಭಾಂಗಣೇ ॥ ೯ ॥

ಚತುರ್ದಶವತ್ಸರಾಣಿ ಮುನಿವೃತ್ಯಸುವರ್ತಿನೀ ।
ವಿಚರಿಷ್ಯಾಮ್ಯರಣ್ಯೇಽಹಂ ಧನುಸ್ಸಜ್ಜಂ ಕರೋತ್ವಯಂ ॥ ೧೦ ॥

---

೭. ಅಲ್ಲದೆ ಅದನ್ನು ಇಂತೆಂದು ವಿವರಿಸಿದಳು. ಈ ವಿಷಯದಲ್ಲಿ ಮೂರು ಕಾರಣಗಳಿವೆ. ಅವನ್ನು ನಾನು ಹೇಳುತ್ತೇನೆ. ಕೇಳು. ನಾನು ಚಿಕ್ಕವಳಾಗಿರುವಾಗ ಒಬ್ಬ ಬ್ರಾಹ್ಮಣನು ನನ್ನ ಕೈಯ್ಯಲ್ಲಿರುವ ರೇಖೆಗಳನ್ನು ನೋಡಿ ಇಂತೆಂದು ಹೇಳಿದನು.

೮-೯. ನೀನು ಗಂಡನೊಡನೆ ಕಾಡಿಗೆ ಹೋಗುತ್ತೀಯೆ ಎಂದು. ನಾನು ದಂಡಕಾರಣ್ಯಕ್ಕೆ ಪ್ರಯಾಣಮಾಡುವುದರಿಂದ ಆ ಬ್ರಾಹ್ಮಣನ ಮಾತು ಸತ್ಯವಾಗಲಿ. ಇದು ಒಂದನೆಯದು. ನೀನು ನನ್ನ ಸ್ವಯಂವರ ಕಾಲದಲ್ಲಿ ಬಿಲ್ಲನ್ನು ಎತ್ತಲು ಬಿಲ್ಲಿನ ಬಳಿಗೆ ಹೋದಾಗ ನಾನು ದೇವತೆಗಳನ್ನು ಈ ರೀತಿಯಾಗಿ ಪ್ರಾರ್ಥಿಸಿ ಹರಕೆಮಾಡಿಕೊಂಡೆನು.

೧೦. ಎಲೈ ದೇವತೆಗಳಿರಾ ! ಈ ಶ್ರೀರಾಮನು ಧನುಸ್ಸನ್ನು ಎತ್ತಿ ಹೆದೆಯೇರಿಸಲಿ. ಆಗ ಹದಿನಾಲ್ಕು ವರ್ಷಗಳವರೆಗೆ ಮುನಿವೃತ್ತಿಯಿಂದ ಕಾಡಿನಲ್ಲಿ ಸಂಚರಿಸುತ್ತೇನೆ. ಎಂದು.

ತತ್ಸತ್ಯಂ ಕುರು ಮದ್ವಾಕ್ಯಂ ಪ್ರಯಾಣಾದ್ದಂಡಕಂ ತ್ವಯಾ ।
ಅನ್ಯಚ್ಛ್ರುತಂ ಮಯಾ ಪೂರ್ವಂ ರಾಮಾಯಣಮನುತ್ತಮಂ ॥ ೧೧ ॥

ತತ್ರ ಸೀತಾಂ ವಿನಾ ರಾಮೋ ನ ಗತೋಽಸ್ತಿ ಹಿ ದಂಡಕಂ ।
ತಸ್ಮಾತ್ತ್ವಂ ಮಾಂ ರಘುಶ್ರೇಷ್ಠ ದಂಡಕಂ ನೇತುಮರ್ಹಸಿ ॥ ೧೨ ॥

ತತ್ಸೀತಾವಚನಂ ಶ್ರುತ್ವಾ ತಥಾಸ್ತ್ವಿತಿ ವಚೋಽಬ್ರವೀತ್ ।
ವಿಹಸ್ಯ ರಾಘವಶ್ಶ್ರೀಮಾನ್ ಸಮಾಲಿಂಗ್ಯ ವಿದೇಹಜಾಂ ॥ ೧೩ ॥

ಅಥ ರಾಜಾ ದಶರಥಶ್ಶ್ರೀರಾಮಾಯಾಭಿಷೇಚನಂ ।
ಯೌವರಾಜ್ಯಪದೇ ಕರ್ತುಮುದ್ಯುಕ್ತಃ ಪ್ರಾಹ ವೈ ಗುರುಂ ॥ ೧೪ ॥

---

೧೧. ಈ ನನ್ನ ಮಾತನ್ನು ಸತ್ಯವಾದುದನ್ನಾಗಿ ಮಾಡು. ಅದರಿಂದಲೇ ನಾನು ನಿನ್ನೊಡನೆ ದಂಡಕೆಗೆ ಬರಬೇಕೆನ್ನುವುದು. ಇದು ಎರಡನೆಯದು. ಇದಲ್ಲದೆ ಮತ್ತೊಂದಾದ ಮೂರನೆಯ ಕಾರಣವೇನೆಂದರೆ ನಾನು ಪೂರ್ವದಲ್ಲಿ ಉತ್ತಮವಾದ ರಾಮಾಯಣಗಳನ್ನು ಕೇಳಿರುವೆನು.

೧೨. ಆ ರಾಮಾಯಣಗಳಲ್ಲಿ ಶ್ರೀರಾಮನು ಸೀತೆಯನ್ನು ಬಿಟ್ಟು ದಂಡಕಾರಣ್ಯಕ್ಕೆ ಹೋಗಿಯೇ ಇಲ್ಲ. ಇದು ಮೂರನೆಯ ಕಾರಣವು. ಎಲೈ ರಘುಶ್ರೇಷ್ಠನೆ ! ಆದುದರಿಂದ ನೀನು ನನ್ನನ್ನು ದಂಡಕಾರಣ್ಯಕ್ಕೆ ಕರೆದುಕೊಂಡು ಹೋಗಲೇಬೇಕು.

೧೩. ಸೀತೆಯು ಈ ಮಾತನ್ನು ಕೇಳಿ ರಾಮನು ಹಾಗೆಯೇ ಆಗಲಿ ಎಂದನು. ಅಲ್ಲದೆ ನಗುತ್ತ ಆ ರಾಮನು ಸಂತೋಷದಿಂದ ಸೀತೆಯನ್ನು ಆಲಿಂಗಿಸಿಕೊಂಡನು.

೧೪. ಅನಂತರ ದಶರಥನು ಶ್ರೀರಾಮನಿಗೆ ಯೌವರಾಜ್ಯಾಭಿಷೇಕವನ್ನು ಮಾಡಲು ಎಲ್ಲವನ್ನೂ ಸಿದ್ಧಮಾಡಿಕೊಂಡು ಗುರುವಾದ ವಸಿಷ್ಠನನ್ನು ಕುರಿತು ಇಂತೆಂದನು.

ಯೌವರಾಜ್ಯ ಪದೇ ರಾಮಮಭಿಷೇಕ್ತುಂ ತ್ವಮರ್ಹಸಿ ।
ತದ್ರಾಜವಚನಂ ಶ್ರುತ್ವಾ ಗುರುರ್ದಶರಥಂ ನೃಪಂ ॥ ೧೫ ॥

ಕೌಸಲ್ಯಾಗೃಹಮಾನೀಯ ಬೋಧಯಾಮಾಸ ವೈ ರಹಃ ।
ರಾಜನ್ ಶೃಣು ತ್ವಂ ಕೌಸಲ್ಯಾಸುಮಿತ್ರೇ ಶೃಣುತಾಂ ತ್ವಿಮೇ ॥ ೧೬ ॥

ರಾವಣಸ್ಯ ವಧಾರ್ಥಂ ಹಿ ರಾಮಶ್ಶ್ವೋದಂಡಕಂ ವನಂ ।
ಗಮಿಷ್ಯತಿ ಲಕ್ಷ್ಮಣೇನ ಸೀತಯಾ ಕೈಕಯೀವರಾತ್ ॥ ೧೭ ॥

ತಸ್ಮಾದಜ್ಞಾತವತ್ತೂಷ್ಣೀಂ ಸಂಭಾರಾನಭಿಷೇಚಿತುಂ ।
ಕಾರಯಸ್ವ ಸುಮಂತ್ರೇಣ ಸಮಾಹೂಯ ನೃಪಾದಿಕಾನ್ ॥ ೧೮ ॥

೧೫–೧೬. ಎಲೈ ಗುರುವೆ! ಶ್ರೀರಾಮನಿಗೆ ಯುವರಾಜಾಭಿಷೇಕವನ್ನು ಮಾಡಬೇಕು. ಅದನ್ನು ನೀನು ಮಾಡಲು ಯೋಗ್ಯನಾಗಿದ್ದೀಯೆ. ಎನ್ನಲು ಈ ಮಾತನ್ನು ವಸಿಷ್ಠನು ಕೇಳಿ ದಶರಥನನ್ನು ಕೌಸಲ್ಯೆಯ ಮನೆಗೆ ಕರೆದುಕೊಂಡು ಹೋಗಿ ಕೌಸಲ್ಯೆ ಸುಮಿತ್ರೆಯರನ್ನೂ ಕರೆದು ನೀವೆಲ್ಲರೂ ನಾನು ಹೇಳುವ ಮಾತನ್ನು ಕೇಳಿರಿ. ಎಂದು ಹೇಳುತ್ತ ಇಂತೆಂದನು.

೧೭. ಶ್ರೀರಾಮನು ರಾವಣನ ವಧೆಗೋಸ್ಕರವಾಗಿ ಲಕ್ಷ್ಮಣನನ್ನೂ ಸೀತೆಯನ್ನೂ ಕರೆದುಕೊಂಡು ನಾಳೆಯದಿನ ಕೈಕೇಯಿಯ ವರದ ದೆಸೆಯಿಂದ ಕಾಡಿಗೆ ಹೋಗುವನು.

೧೮. ಆದುದರಿಂದ ನೀವೆಲ್ಲರೂ ಇದೊಂದೂ ತಿಳಿಯದವರಂತೆ ಇದ್ದುಕೊಂಡು ಈ ಅಭಿಷೇಕಕ್ಕೆ ಸಾಮಾನುಗಳನ್ನು ಸಿದ್ಧಪಡಿಸಿರಿ. ಅಲ್ಲದೆ ಸುಮಂತ್ರನಿಗೆ ಹೇಳಿ ರಾಜರುಗಳನ್ನೂ ಕರೆಸಿರಿ.

ಶ್ರೀರಾಮವಿರಹಾದ್ರಾಜನ್ ಬ್ರಾಹ್ಮಣಸ್ಯಾಪಿ ಶಾಪತಃ ।
ಅಚಿರಾದೇವ ಸ್ವರ್ಲೋಕಂ ತ್ವಂ ಗಮಿಷ್ಯಸಿ ಪಾರ್ಥಿವ ॥ ೧೯ ॥

ಕೌಸಲ್ಯೇಯಂ ರಾಮರಾಜ್ಯೋತ್ಸವಂ ಪಶ್ಯತು ವೈ ಪುನಃ ।
ಅಂತರಿಕ್ಷಾದ್ವಿಮಾನಸ್ಥಸ್ತ್ವಂ ಪಶ್ಯಸಿ ಮಹೋತ್ಸವಂ ॥ ೨೦ ॥

ದುರ್ಲಂಘ್ಯಾ ಭಾವಿನೀ ರೇಖಾ ಬ್ರಹ್ಮಾದೀನಾಂ ನೃಪೋತ್ತಮ ।
ಇತಿ ಶ್ರುತ್ವಾ ಗುರೋರ್ವಾಕ್ಯಂ ತೇನ ರಾಜಾ ಸಭಾಂಯಯೌ ॥ ೨೧ ॥

ರಾಮರಾಜ್ಯಾಭಿಷೇಕಾಯ ಸಂಭಾರಾನಕರೋನ್ಮುದಾ ।
ದೂತೈರಾಕಾರಯಾಮಾಸ ನೃಪಾನ್ ದಶರಥಸ್ತದಾ ॥ ೨೨ ॥

---

೧೯. ಈ ರಾಜನು ಶ್ರೀರಾಮನ ವಿರಹದಿಂದಲೂ ಬ್ರಾಹ್ಮಣನ ಶಾಪದಿಂದಲೂ ಸ್ವಲ್ಪ ದಿನಗಳಲ್ಲಿಯೇ ಮೃತಿ ಹೊಂದುವನು. ಇದು ನಿಮಗೆಲ್ಲರಿಗೂ ಚೆನ್ನಾಗಿ ನೆನಪಿರಲಿ.

೨೦. ಈ ಕೌಸಲ್ಯೆಯು ರಾಮನು ವನವಾಸವನ್ನು ಮುಗಿಸಿಕೊಂಡು ಬಂದಮೇಲೆ ಮತ್ತೆ ರಾಮನ ರಾಜ್ಯಾಭಿಷೇಕವನ್ನು ನೋಡುವಳು. ಎಲೈ ರಾಜನೆ! ನೀನೂ ಕೂಡ ಅಂತರಿಕ್ಷದಲ್ಲಿ ವಿಮಾನದಲ್ಲಿ ಇದ್ದುಕೊಂಡು ಆ ರಾಜ್ಯಾಭಿಷೇಕ ಮಹೋತ್ಸವವನ್ನು ನೋಡುತ್ತೀಯೆ.

೨೧. ಎಲೈ ರಾಜನೆ! ದೇವರು ಹಣೆಯಲ್ಲಿ ಬರೆದಿರತಕ್ಕ ಭವಿಷ್ಯವನ್ನು ಬ್ರಹ್ಮಾದಿಗಳೂ ಕೂಡ ಮೀರಲಾರರು. ಅದಕ್ಕೆ ನೀನು ಯೋಚಿಸಬೇಡ. ಆ ಮಾತನ್ನು ದಶರಥನು ಕೇಳಿ ತಾನು ಸಭೆಗೆ ಹೊರಟುಹೋದನು.

೨೨. ರಾಮನಿಗೆ ರಾಜ್ಯಭಿಷೇಕವನ್ನು ಮಾಡಲು ಸಂತೋಷದಿಂದ ಸಾಮಾನುಗಳನ್ನು ಸಿದ್ಧಪಡಿಸಿದನು. ದೂತರನ್ನು ಕಳುಹಿಸಿ ಬೇಕಾದ ರಾಜರುಗಳೆಲ್ಲರನ್ನೂ ಕರೆಸಿದನು.

ಋಷೀಶ್ವರಾಸ್ಸಮಾಜಗ್ಮುಃ ನಾನಾಶ್ರಮನಿವಾಸಿನಃ ।
ನಗರೀಂ ಶೋಭಯಾಮಾಸುಃ ದೂತಾಶ್ಚಿತ್ರಧ್ವಜೋತ್ತಮೈಃ ॥ ೨೩ ॥

ಪತಾಕಾಭಿಸ್ತೋರಣೈಶ್ಚ ಹೇಮಕುಂಭೈರ್ಮನೋರಮೈಃ ।
ಗುರುರಾಜ್ಞಾಪಯಾಮಾಸ ಸುಮಂತ್ರಂ ನೃಪಮಂತ್ರಿಣಂ ॥ ೨೪ ॥

ಶ್ವಃ ಪ್ರಭಾತೇ ಮಧ್ಯಕಕ್ಷೇ ಕನ್ಯಕಾಸ್ಸ್ವರ್ಣಭೂಷಿತಾಃ ।
ತಿಷ್ಠಂತು ಷೋಡಶಗಜಾಃ ಸ್ವರ್ಣರತ್ನಾದಿಭೂಷಿತಾಃ ॥ ೨೫ ॥

ಚತುರ್ದಂತಸ್ಸಮಾಯಾತು ಐರಾವತಕುಲೋದ್ಭವಃ ।
ನಾನಾತೀರ್ಥೋದಕೈಃ ಪೂರ್ಣಾಃ ಸ್ವರ್ಣಕುಂಭಾಸ್ಸಹಸ್ರಶಃ ॥ ೨೬ ॥

೨೩–೨೪. ಅನೇಕ ಬಗೆಯ ಆಶ್ರಮಗಳಲ್ಲಿ ವಾಸಿಸುತ್ತಿದ್ದ ಋಷಿಗಳೆಲ್ಲರೂ ಬಂದರು. ದೂತರು ಚಿತ್ರ ವಿಚಿತ್ರವಾದ ಧ್ವಜಗಳಿಂದ ಪಟ್ಟಣವೆಲ್ಲವನ್ನೂ ಅಲಂಕರಿಸಿದರು. ಪತಾಕೆಗಳನ್ನೂ ತೋರಣಗಳನ್ನೂ ಕಟ್ಟಿದರು. ಅಲ್ಲಲ್ಲಿಯೇ ಚಿನ್ನದ ಕಲಶಗಳನ್ನಿಟ್ಟರು. ಆಗ ಗುರುವಾದ ವಸಿಷ್ಠನು ರಾಜನ ಮಂತ್ರಿಯಾದ ಸುಮಂತ್ರವನ್ನು ಕರೆದು ಇಂತೆಂದು ಆಜ್ಞಾಪಿಸಿದನು.

೨೫. ಎಲೈ ಸುಮಂತ್ರನೆ! ನಾಳೆಯದಿನ ಬೆಳಗ್ಗೆ ಈ ಮಧ್ಯದ ತೊಟ್ಟಿಯಲ್ಲಿ ಅನೇಕವಾದ ಒಡವೆಗಳಿಂದ ಅಲಂಕೃತರಾದ ಕನ್ನಿಕೆಯರು ಇವಬೇಕು. ಮತ್ತು ಹದಿನಾರು ಆನೆಗಳನ್ನು ಅಲಂಕರಿಸಿ ಆ ಮಧ್ಯ ತೊಟ್ಟಿಯಲ್ಲಿಯೇ ನಿಲ್ಲಿಸಿರಲಿ.

೨೬. ಐರಾವತದ ವಂಶದಲ್ಲಿ ಹುಟ್ಟಿದ ನಾಲ್ಕು ದಂತಗಳುಳ್ಳ ಆನೆಯು ಅಲ್ಲಿಗೆ ಬಂದಿರಲಿ. ಅನೇಕವಾದ ಚಿನ್ನದ ಕಲಶಗಳಲ್ಲಿ ಅನೇಕ ಬಗೆಯಾದ ತೀರ್ಥಗಳನ್ನು ಇಟ್ಟು ಅವುಗಳಿಗೆ ಅಲಂಕರಿಸಿರಲಿ.

ಸ್ಥಾಪ್ಯತಾಂ ತತ್ರ ವೈಯಾಘ್ರಚರ್ಮಾಣಿ ತ್ರೀಣಿ ಚಾರುಣಿ ।
ಶ್ವೇತಚ್ಛತ್ರಂ ರತ್ನದಂಡಮುಕ್ತಾಮಣಿವಿರಾಜಿತಂ ॥ ೨೭ ॥

ದಿವ್ಯಮಾಲ್ಯಾನಿ ವಸ್ತ್ರಾಣಿ ದಿವ್ಯಾನ್ಯಾಭರಣಾನಿ ಚ ।
ಮುನಯಸ್ಸಂಸ್ಕೃತಾಸ್ತತ್ರ ತಿಷ್ಠಂತು ಕುಶಪಾಣಯಃ ॥ ೨೮ ॥

ನರ್ತಕ್ಯೋ ವಾರಮುಖ್ಯಾಶ್ಚ ಗಾಯಕಾ ವೈದಿಕಾಸ್ತಥಾ ।
ನಾನಾವಾದಿತ್ರಕುಶಲಾ ವಾದಯಂತು ನೃಪಾಂಗಣೇ ॥ ೨೯ ॥

ಹಸ್ತ್ಯಶ್ವರಥಪಾದಾತಾ ಬಹಿಸ್ತಿಷ್ಠಂತು ಸಾಯುಧಾಃ ।
ನಗರೇ ಯಾನಿ ತಿಷ್ಠಂತಿ ದೇವತಾಯತನಾನಿ ಚ ॥ ೩೦ ॥

ತೇಷು ಪ್ರವರ್ತತಾಂ ಪೂಜಾ ನಾನಾಬಲಿಭಿರಾದೃತಾಃ ।
ರಾಜಾನಶ್ಶೀಘ್ರಮಾಯಾಂತು ನಾನೋಪಾಯನಪಾಣಯಃ ॥ ೩೧ ॥

---

೨೭. ಮತ್ತು ಮೂರು ವ್ಯಾಘ್ರಚರ್ಮವನ್ನು ತರಿಸಿ ಅಲ್ಲಿಡಿಸಿರು. ಒಂದು ಶ್ವೇತಚ್ಛತ್ರವನ್ನೂ ತರಿಸು. ಅದಕ್ಕೆ ರತ್ನದಿಂದ ಕೂಡಿದ ದಂಡವಿರಲಿ. ಛತ್ರಿಯ ಸುತ್ತಲೂ ಮುತ್ತಿನ ಮಣಿಯನ್ನು ನೇತುಹಾಕಿರಲಿ

೨೮. ದಿವ್ಯವಾದ ಮಾಲೆಗಳನ್ನೂ ದಿವ್ಯವಾದ ವಸ್ತ್ರಗಳನ್ನೂ ದಿವ್ಯವಾದ ಆಭರಣಗಳನ್ನೂ ತರಿಸಿಟ್ಟಿರು. ಯೋಗ್ಯರಾದ ಮುನಿಗಳು ಅಲ್ಲಿ ದರ್ಭೆಯನ್ನು ಹಿಡಿದು ಪವಿತ್ರವನ್ನು ಹಾಕಿಕೊಂಡು ಸಿದ್ಧವಾಗಿರಲಿ.

೨೯. ನರ್ತಕಿಯರು ಗಾಯಕಿಯರು ವೈದಿಕರು ಎಲ್ಲರೂ ಅಲ್ಲಿರಲಿ. ಆ ತೊಟ್ಟಿಯಲ್ಲಿ ಅನೇಕ ಬಗೆಯ ಮಂಗಳವಾದ್ಯಗಳು ಮೊಳಗುತ್ತಿರಲಿ.

೩೦-೩೧. ಆನೆ, ಕುದುರೆ, ರಥ, ಕಾಲಾಳು ಇವೆಲ್ಲವೂ ಆಯುಧಗಳನ್ನು ಧರಿಸಿ ಹೊರಗಡೆ ಇರಲಿ. ನಗರದಲ್ಲಿರುವ ದೇವಸ್ಥಾನಗಳಲ್ಲೆಲ್ಲಾ ಅನೇಕ ವಿಧವಾದ ಪೂಜೆಗಳು ನಡೆಯಲಿ. ರಾಜರುಗಳು ನಜರುಗಳನ್ನು ತೆಗೆದುಕೊಂಡು ಬೇಗನೆ ಬರಲಿ.

ಇತ್ಯಾದಿಶ್ಯ ವಸಿಷ್ಠಸ್ತು ರಥೇನ ರಘುನಂದನಂ ।
ಗತ್ವಾ ಸಮ್ಮಾನಿತಸ್ತೇನ ಸರ್ವಂ ವೃತ್ತಂ ನ್ಯವೇದಯತ್ ॥ ೩೨ ॥

ನಿಮಿತ್ತಮಾತ್ರಸ್ತ್ವಂ ರಾಮ ಶ್ವೋ ಗಮಿಷ್ಯಸಿ ದಂಡಕಾಃ ।
ಚತುರ್ದಶ ಸಮಾಸ್ತತ್ರ ಸ್ಥಿತ್ವಾ ಸಂಹೃತ್ಯ ರಾವಣಂ ॥ ೩೩ ॥

ಬಂಧುನಾ ಸೀತಯಾ ಸಾರ್ಧಂ ತತೋ ರಾಜ್ಯಂ ಕರಿಷ್ಯಸಿ ।
ಲೌಕಿಕೀಂ ವೃತ್ತಿಮಾಲಂಬ್ಯ ಸ್ವೀಕುರುಷ್ವ ಪಿತುರ್ವಚಃ ॥ ೩೪ ॥

ಅದ್ಯ ತ್ವಂ ಸೀತಯಾ ಸಾರ್ಧಮುಪವಾಸಂ ಯಥಾವಿಧಿ ।
ಕೃತ್ವಾ ಶುಚಿರ್ಭೂಮಿಶಾಯೀ ಭವ ರಾಮ ಜಿತೇಂದ್ರಿಯಃ ॥ ೩೫ ॥

---

೩೨. ವಸಿಷ್ಠನು ಹೀಗೆ ಎಲ್ಲವನ್ನೂ ಮಾಡಬೇಕೆಂದು ಆಜ್ಞಾಪಿಸಿ ರಥದಲ್ಲಿ ಕುಳಿತು ರಾಮನ ಬಳಿಗೆ ಹೋದನು. ಶ್ರೀರಾಮನು ಗುರುವನ್ನು ಗೌರವಿಸಿ ಕರೆದುಕೊಂಡನು. ಆಗ ಆತನು ಎಲ್ಲ ವಿಷಯವನ್ನೂ ಶ್ರೀರಾಮನಿಗೆ ತಿಳಿಸಿದನು.

೩೩. ಎಲೈ ರಾಮನೆ! ನೀನು ನಿಮಿತ್ತಮಾತ್ರಕ್ಕೋಸ್ಕರ ನಾಳೆ ದಂಡಕಾವನಕ್ಕೆ ಹೋಗುತ್ತೀಯೆ. ಅಲ್ಲಿ ಹದಿನಾಲ್ಕು ವರ್ಷಗಳಿದ್ದು ದುಷ್ಟನಾದ ರಾವಣನನ್ನು ಕೊಂದುಹಾಕುತ್ತೀಯೆ.

೩೪. ಅನಂತರ ಸೀತೆಯೊಡನೆಯೂ ಬಂಧುಗಳೊಡನೆಯೂ ಕೂಡಿಕೊಂಡು ರಾಜ್ಯಭಾರಮಾಡುತ್ತೀಯೆ. ಈಗ ಲೌಕಿಕವಾದ ರೀತಿಯನ್ನು ಅನುಸರಿಸಿಕೊಂಡು ತಂದೆಯ ಮಾತನ್ನು ಕೇಳಿ ಅದರಂತೆ ಒಪ್ಪಿಕೊ.

೩೫ ಈದಿನ ನೀನು ಸೀತೆಯೊಡನೆ ಕ್ರಮವಾಗಿ ಶಾಸ್ತ್ರದಲ್ಲಿ ಹೇಳಿರುವಂತೆ ಉಪವಾಸವಿರಬೇಕು. ನೆಲದಮೇಲೆ ಮಲಗಬೇಕು. ಜಿತೇಂದ್ರಿಯನಾಗಿರಬೇಕು.

ಇತ್ಯುಕ್ತ್ವಾ ರಥಮಾರುಹ್ಯ ದೃಷ್ಟ್ವಾ ರಾಮಂ ಸಲಕ್ಷ್ಮಣಂ ।
ಜಾನಕೀಂ ಚಾಪಿ ಸ ಗುರುರ್ಯಯೌ ರಾಜಗೃಹಂ ಪುನಃ ॥ ೩೬ ॥

ಕೌಸಲ್ಯಾ ಚ ಸುಮಿತ್ರಾ ತೇ ರಾಮರಾಜ್ಯಾಭಿಷೇಚನಂ ।
ಮೃಷಾಪಿ ಶ್ರುತ್ವಾ ಶ್ರೀಗುರೋರಾಸ್ಯಾತ್ ಸ್ನೇಹಸಮನ್ವಿತೇ ॥ ೩೭ ॥

ಚಕ್ರತುಃ ಪೂಜನಂ ದೇವ್ಯಾಸ್ತದ್ವಿಘ್ನೋಪಶಮಸ್ಪೃಹೇ ।
ಬಲಿದಾನೈಶ್ಶಾಂತಿಪಾಠೈರ್ಮುನಿವೃಂದಸಮನ್ವಿತೇ ॥ ೩೮ ॥

ಅಥಾಪರಾಹ್ಣೇ ಸೌಧಸ್ಥಾ ದಾಸ್ಯಾಃಪುತ್ರೀ ತು ಮಂಥರಾ ।
ಶೋಭಿತಾಂ ನಗರೀಂ ದೃಷ್ಟ್ವಾ ಪೃಷ್ಟ್ವಾ ವೃದ್ಧಾಂ ಪಥಿ ಸ್ಥಿತಾ ॥ ೩೯ ॥

---

೩೬. ಗುರುವು ರಾಮನಿಗೆ ಹೀಗೆಂದು ಹೇಳಿ ರಥವನ್ನು ಹತ್ತಿ ಅಲ್ಲಿಂದ ಹೋಗಿ ಸೀತೆಯನ್ನೂ ಲಕ್ಷ್ಮಣನನ್ನೂ ನೋಡಿದನು. ಅನಂತರ ಮತ್ತೆ ರಾಜನ ಮನೆಗೆ ಬಂದನು.

೩೭–೩೮. ಕೌಸಲ್ಯೆಯೂ ಸುಮಿತ್ರೆಯೂ ಗುರುವಿನ ಬಾಯಿಂದಲೇ ಈ ರಾಮ ರಾಜ್ಯಾಭಿಷೇಕವು ಸುಳ್ಳೆಂದು ಕೇಳಿ ತಿಳಿದೂ ಕೂಡ ಸ್ನೇಹದಿಂದಲೇ ಆದಕ್ಕೆ ವಿಘ್ನಬರಬಾರದೆಂದು ದೇವಿಗೆ ಪೂಜೆಯನ್ನು ಮಾಡಿದರು. ಮುನಿಗಳನ್ನು ಕರೆಸಿ ಪೂಜೆಗಳಿಂದಲೂ ಶಾಂತಿಪಾಠಗಳಿಂದಲೂ ಆ ದೇವಿಯನ್ನು ಪೂಜಿಸಿದರು.

೩೯. ಆದಿನ ಮಧ್ಯಾಹ್ನವಾದಮೇಲೆ ದಾಸಿಯ ಮಗಳಾದ ಮಂಥರೆಯು ಮಹಡಿಯಮೇಲಿದ್ದುಕೊಂಡು ಊರೆಲ್ಲವೂ ಅಲಂಕೃತವಾಗಿರುವುದನ್ನು ನೋಡಿ ದಾರಿಯಲ್ಲಿ ಹೋಗುತ್ತಿರುವ ಒಬ್ಬ ಮುದುಕಿಯನ್ನು ಕುರಿತು ಇದೇನೆಂದು ಕೇಳಿದಳು.

ಶ್ರುತ್ವಾ ಶ್ರೀರಾಮರಾಜ್ಯಾರ್ಥಂ ಯಯೌ ವೇಗೇನ ಕೈಕೆಯೀಂ ।
ಸರ್ವಂ ವೃತ್ತಂ ನಿವೇದ್ಯಾಥ ತೂಷ್ಣೀಮಾಸೀತ್ತದಾ ಕ್ಷಣಂ ॥ ೪೦ ॥

ತಚ್ಛ್ರುತ್ವಾ ಕೈಕೇಯೀ ಚಾಪಿ ತಸ್ಮೈ ಭೂಷಣಮರ್ಪಯತ್ ।
ಏತಸ್ಮಿನ್ನಂತರೇ ವಾಣ್ಯಾ ದೇವವಾಕ್ಯಾತ್ಸುಮೋಹಿತಾ ॥ ೪೧ ॥

ತುಷ್ಟಾಂ ದೃಷ್ಟ್ವಾ ತು ಕೈಕೇಯೀಂ ಭರ್ತ್ಸಯಂತ್ಯಾಹ ತಾಂ ಪುನಃ ।
ಮೂಢೇ ಕಥಂ ತ್ವಂ ತುಷ್ಟಾಸಿ ಹತಭಾಗ್ಯಾಸಿ ವೇದ್ಮ್ಯಹಂ ॥ ೪೨ ॥

ರಾಮೇ ರಾಜ್ಯಪದಂ ಪ್ರಾಪ್ತೇ ಕೌಸಲ್ಯಾಯಾಶ್ಚ ಕೈಕಯಿ ।
ದಾಸೀಭವಿಷ್ಯಸಿ ತ್ವಂ ಹಿ ಅತೋ ಮದ್ವಚನಂ ಕುರು ॥ ೪೩ ॥

---

೪೦. ಅವಳಿಂದ ರಾಮನಿಗೆ ಪಟ್ಟಾಭಿಷೇಕವು ನಡೆಯುವುದೆಂಬುದನ್ನು ತಿಳಿದು ಜಾಗ್ರತೆಯಾಗಿ ಕೈಕೇಯಿಯ ಬಳಿಗೆ ಹೋದಳು. ಮತ್ತು ಅವಳಿಗೆ ಎಲ್ಲಾ ವಿಷಯಗಳನ್ನೂ ತಿಳಿಸಿದಳು. ಅನಂತರ ಕ್ಷಣಕಾಲ ಸುಮ್ಮನಿದ್ದಳು.

೪೧. ಶ್ರೀರಾಮಪಟ್ಟಾಭಿಷೇಕದ ಮಾತನ್ನು ಕೇಳಿ ಕೈಕೇಯಿಯು ಆ ಮಂಥರೆಗೆ ಅನೇಕವಾದ ಒಡವೆಗಳನ್ನು ಬಹುಮಾನವಾಗಿ ಕೊಟ್ಟಳು. ಇಷ್ಟರೊಳಗೆ ದೇವತೆಗಳು ಸರಸ್ವತಿಯನ್ನು ಪ್ರೇರಿಸಲು ಆಕೆಯು ಮಂಥರೆಯಲ್ಲಿ ಬಂದು ಅವಳಿಗೆ ಜ್ಞಾನ ಬದಲಾಯಿಸುವಂತೆ ಮಾಡಿದಳು.

೪೨. ಹೀಗೆ ಮೋಹಿತಳಾದ ಮಂಥರೆಯು ಈ ಪಟ್ಟಾಭಿಷೇಕದಿಂದ ಕೈಕೇಯಿಯು ಸಂತೋಷಗೊಂಡಿರುವುದನ್ನು ತಿಳಿದು ಅವಳನ್ನು ಬಾರಿ ಬಾರಿಗೂ ಬೈದು ತಿರಸ್ಕರಿಸುತ್ತಾ ಎಲೈ ಮೂಢೆಯೆ! ನೀನೇಕೆ ಸಂತೋಷಗೊಂಡಿದ್ದೀಯೆ? ನಿನ್ನ ಭಾಗ್ಯವೆಲ್ಲವೂ ಹೋಯಿತೆಂಬುದಾಗಿ ನನಗೆ ಕಾಣುತ್ತಿದೆ. ಅದು ನನಗ ಚೆನ್ನಾಗಿ ಗೊತ್ತು.

೪೩. ಎಲೈ ಕೈಕೇಯಿಯೆ! ರಾಮನಿಗೆ ರಾಜ್ಯಭಾರವು ಬಂದರೆ ನೀನು ಕೌಸಲ್ಯೆಗೆ ದಾಸಿಯಾಗಿ ಆಗುತ್ತೀಯೆ. ಆದುದರಿಂದ ನೀನು ನಾನು ಹೇಳುವ ಹಾಗೆ ಮಾಡು.

ವರೇಣ ನ್ಯಾಸಭೂತೇನ ರಾಜ್ಯಂ ಶ್ರೀಭರತಾಯ ಹಿ ।
ನೃಪಂ ಪ್ರಾರ್ಥಯ ರಾಮಸ್ಯ ದ್ವಿತೀಯೇನ ವರೇಣ ಚ ॥ ೪೪ ॥

ದಂಡಕಾರಣ್ಯಗಮನಂ ಚತುರ್ದಶ ಸಮಾಃ ಪದಾ ।
ಕ್ರೋಧಾಗಾರಂ ಪ್ರವಿಶ್ಯಾದ್ಯ ಕುರುಷ್ವ ಯನ್ಮಯೇರಿತಂ ॥ ೪೫ ॥

ತನ್ಮಂಥರೋಕ್ತಂ ಸ್ವಹಿತಂ ಮತ್ವಾ ಸಾಪಿ ತಥಾಕರೋತ್ ।
ಮೋಹಿತಾ ಸಾಽವಿವೇಕೇನ ಶ್ರೀರಾಘವ ಸುರೇಚ್ಛಯಾ ॥ ೪೬ ॥

ತತೋ ನಿಶಾಯಾಂ ರಾಜ್ಞಾ ಸಾ ಜ್ಞಾತಾ ಕ್ರೋಧಗೃಹಸ್ಥಿತಾ ।
ಗತ್ವಾ ತತ್ರ ನೃಪಶ್ಶೀಘ್ರಂ ದದರ್ಶ ಕೈಕಯೀಂ ತದಾ ॥ ೪೭ ॥

೪೪–೪೫. ಆ ದಶರಥನು ನೀನು ಕೇಳಿದಾಗ ಕೊಡುತ್ತೇನೆಂದು ಹೇಳಿರುವ ಎರಡು ವರಗಳನ್ನು ಈಗ ಕೇಳು. ಒಂದು ವರಕ್ಕೆ ಭರತನಿಗೆ ರಾಜ್ಯವನ್ನು ಕೊಡುವಂತೆಯೂ ಎರಡನೆಯದಕ್ಕೆ ರಾಮನು ಹದಿನಾಲ್ಕು ವರ್ಷಗಳ ಕಾಲ ದಂಡಕಾರಣ್ಯಕ್ಕೆ ಹೋಗುವಂತೆಯೂ ಕೇಳಿಕೊ. ನೀನು ಈಗ ಕೋಪದ ಮನೆಗೆ ಹೋಗಿ ಅಲ್ಲಿದ್ದುಕೊಂಡು ನಾನು ಹೇಳಿದಂತೆ ಕೇಳಿಕೊಂಡು ನಿನ್ನ ಕೆಲಸವನ್ನು ಮಾಡಿಕೊ ಎಂದಳು.

೪೬. ಮಂಥರೆಯು ಹೇಳಿದ ಈ ಮಾತು ತನಗೆ ಒಳ್ಳೆಯದೆಂಬುದಾಗಿ ತಿಳಿದು ಕೈಕೇಯಿಯು ದೇವತೆಗಳ ಇಚ್ಛೆಯಂತೆ ತಾನೂ ಮೋಹಗೊಂಡು ಅವಿವೇಕವನ್ನು ಹೊಂದಿದಳು.

೪೭. ಅನಂತರ ದಶರಥನು ಆ ಕೈಕೇಯಿಯು ಕೋಪದ ಮನೆಯಲ್ಲಿರುವುದನ್ನು ಅಂದಿನ ರಾತ್ರಿಯೇ ತಿಳಿದನು. ಒಡನೆಯೇ ಆತನು ಬೇಗನೆ ಅಲ್ಲಿಗೆ ಹೋಗಿ ಆ ಕೈಕೇಯಿಯನ್ನು ನೋಡಿದನು.

ವಿಕೀರ್ಯಮಾಣಕೇಶಾಂ ತಾಂ ತ್ಯಕ್ತಾಲಂಕಾರಮಂಡನಾಂ ।
ಭೂಮೌ ಶಯಾನಾಂ ತಾಂ ದೃಷ್ಟ್ವಾ ಜ್ಞಾತ್ವಾ ತಸ್ಯಾ ಮನೋಗತಂ ॥೪೮॥

ರಾಮಾಯ ದಂಡಕಾರಣ್ಯಂ ಯೌವರಾಜ್ಯಂ ಸುತಾಯ ಚ ।
ವರಾಭ್ಯಾಂ ಯಾಚಿತಂ ಜ್ಞಾತ್ವಾ ಹೇತ್ಯುಕ್ತ್ವಾ ಮೂರ್ಛಿತೋಽಭವತ್ ॥೪೯॥

ಪ್ರಭಾತೇ ತತ್ಸುಮಂತ್ರೇಣ ವೃತ್ತಂ ಶ್ರುತ್ವಾ ನೃಪಂ ಯಯೌ ।
ಕೈಕೇಯಿಾ ಮಂತ್ರಿಣಾ ಪೃಷ್ಟಾ ಸುಮಂತ್ರಂ ಪ್ರಾಹ ಸಾ ತದಾ ॥ ೫೦ ॥

ಅತ್ರಾನಯಸ್ವ ಶ್ರೀರಾಮಂ ದ್ರಷ್ಟುಂ ತಂ ವಾಂಛತೇ ನೃಪಃ ।
ಸೋಽಪ್ಯಾಹ ರಾಮಂ ನೃಪತಿಮಪೃಷ್ಟ್ವಾ ನಾನಯಾಮ್ಯಹಂ ॥ ೫೧ ॥

---

೪೮. ಆ ಮನೆಯಲ್ಲಿ ಕೈಕೇಯಿಯು ತಲೆಯನ್ನು ಕೆದರಿಕೊಂಡು ಇದ್ದಳು. ಅಲಂಕಾರಗಳನ್ನು ಮಾಡಿಕೊಳ್ಳದೆ ಒಡವೆಗಳನ್ನು ತೆಗೆದು ಹಾಕಿದ್ದಳು. ನೆಲದಮೇಲೆ ಮಲಗಿದ್ದಳು. ಒಡನೆಯೇ ರಾಜನು ಆಕೆಯನ್ನು ಸಮಾಧಾನ ಪಡಿಸುತ್ತ ಅವಳ ಮನಸ್ಸಿನಲ್ಲಿರುವುದನ್ನು ತಿಳಿದುಕೊಂಡನು.

೪೯. ಆ ಕೈಕೇಯಿಯು ರಾಮನು ದಂಡಕಾರಣ್ಯಕ್ಕೆ ಹೋಗಬೇಕೆಂದೂ ತನ್ನ ಮಗನಿಗೆ ಯುವರಾಜ ಪಟ್ಟವನ್ನು ಕಟ್ಟಬೇಕೆಂದೂ ಅದೇ ತನಗೆ ಕೊಡ ಬೇಕಾದ ಎರಡು ವರಗಳೆಂದೂ ಹೇಳಿದಳು. ಅವನ್ನು ಕೊಡಬೇಕೆಂದು ಕೇಳಿದುದನ್ನು ಕೇಳಿ ಹಾ ! ಎಂದೆನ್ನುತ್ತಾ ದಶರಥನು ಮೂರ್ಛೆಹೋದನು.

೫೦. ಬೆಳಗಾಗಲು ದಶರಥನು ಕೈಕೇಯಿಯ ಬಳಿಯಲ್ಲಿರುವುದನ್ನು ಸುಮಂತ್ರನು ತಿಳಿದು ಅಲ್ಲಿರುವ ರಾಜನನ್ನು ನೋಡಲು ಹೋದನು. ಆಗ ದಶರಥನು ಇದೇಕೆ ಹೀಗೆ ದುಃಖಿಸುತ್ತಿರುವನೆಂದು ಸುಮಂತ್ರನು ಕೈಕೇಯಿಯನ್ನು ಕೇಳಲು ಆಕೆಯು ಇಂತೆಂದಳು.

೫೧. ಎಲೈ ಸುಮಂತ್ರನೆ ! ರಾಮನನ್ನು ಇಲ್ಲಿಗೆ ಕರೆದುಕೊಂಡು ಬಾ. ಅವನನ್ನು ರಾಜನು ನೋಡಬೇಕೆಂದಿರುವನು. ಎಂದಳು. ಅದಕ್ಕೆ ಸುಮಂತ್ರನು ನಾನು ರಾಜನನ್ನು ಕೇಳದೆ ರಾಮನನ್ನು ಕರೆತರುವುದಿಲ್ಲ. ಎಂದನು.

ತದಾ ಶನೈಃ ನೃಪಃ ಪ್ರಾಹ ಶೀಘ್ರಮಾನಯ ರಾಘವಂ ।
ಸುಮಂತ್ರೋಽಪ್ಯಾನಯಾಮಾಸ ರಾಘವಂ ಪಾರ್ಥಿವಾಜ್ಞಯಾ ॥ ೫೨ ॥

ತತೋ ರಾಮೋ ನೃಪಂ ಗತ್ವಾ ಶ್ರುತ್ವಾ ಕೈಕೇಯಜಾಗಿರಂ ।
ಆತ್ಮಾನಂ ದಂಡಕೇ ವಾಸಂ ವರದಾನಂ ಪಿತುಃ ಪುರಾ ॥ ೫೩ ॥

ತಥೇತ್ಯಂಗೀಚಕಾರಾಥ ನೃಪಂ ವಚನಮಬ್ರವಿತ್ ।
ಮಾ ತೇ ಶೋಕೋಽಸ್ತು ಹೇ ತಾತ ಹ್ಯಹಂ ಗಚ್ಛಾಮಿ ದಂಡಕಾಂ ॥ ೫೪ ॥

ತದ್ರಾಮವಚನಂ ಶ್ರುತ್ವಾ ಹೇತ್ಯುಕ್ತ್ವಾ ತಂ ನೃಪೋಽಬ್ರವೀತ್ ।
ಮಾಂ ವಿಸೃಜ್ಯ ಕಥಂ ಘೋರಂ ವಿಪಿನಂ ಗಂತುಮಿಚ್ಛಸಿ ॥ ೫೫ ॥

---

೫೨. ಆಗ ದಶರಥನೇ ನಿಧಾನವಾಗಿ ಎಲೈ ಸುಮಂತ್ರನೆ ! ರಾಘವನನ್ನು ಬೇಗನೆ ಕರೆದುಕೊಂಡು ಬಾ. ಎಂದನು. ಅದನ್ನು ಕೇಳಿ ಸುಮಂತ್ರನು ಅವನ ಅಪ್ಪಣೆಯಂತೆ ರಾಮನನ್ನು ಕರೆತಂದನು.

೫೩. ರಾಮನು ದಶರಥನ ಬಳಿಗೆ ಹೋದನು. ಅಲ್ಲಿ ಕೈಕೇಯಿಯು ರಾಜನು ಹಿಂದೆ ಅವಳಿಗೆ ವರಗಳನ್ನು ಕೊಟ್ಟಿದ್ದ ವಿಷಯಗಳನ್ನೂ ಅದರಲ್ಲಿ ಒಂದು ವರಕ್ಕೆ ತಾನು ದಂಡಕಾರಣ್ಯಕ್ಕೆ ಹೋಗಬೇಕಾಗಿ ಕೇಳಿರುವುದನ್ನೂ ತಿಳಿದನು.

೫೪. ಆಗ ರಾಮನು ಹಾಗೆಯೇ ಆಗಲೆಂದು ಒಪ್ಪಿಕೊಂಡು ತಂದೆಯನ್ನು ಕುರಿತು ಎಲೈ ತಂದೆಯೆ ! ನೀನು ದುಃಖಪಡಬೇಡ. ನಾನು ದಂಡಕಾರಣ್ಯಕ್ಕೆ ಹೋಗುತ್ತೇನೆ. ಎಂದನು.

೫೫. ರಾಮನು ಹಾಗೆ ಹೇಳಿದುದನ್ನು ಕೇಳಿ ರಾಜನು ಹಾ ! ಎಂದೆನ್ನುತ್ತಾ ರಾಮನನ್ನು ಕುರಿತು ಎಲೈ ರಾಮನೆ ! ವೃದ್ಧನಾದ ನನ್ನನ್ನು ಬಿಟ್ಟು ಘೋರವಾದ ಕಾಡಿಗೆ ಹೋಗಬೇಕೆಂದು ಹೇಗೆ ತಾನೆ ಅಪೇಕ್ಷಿಸುತ್ತೀಯೆ? ಎಂದನು.

ತಸ್ಯ ತದ್ವಚನಂ ಶ್ರುತ್ವಾ ಸಾಂತ್ವಯಾಮಾಸ ರಾಘವಃ ।
ಅಹಂ ಪ್ರತಿಜ್ಞಾಂ ನಿಸ್ತೀರ್ಯ ಶೀಘ್ರಂ ಯಾಸ್ಯಾಮಿ ತಂ ಪುರಂ ॥ ೫೬ ॥

ಇದಾನೀಂ ಗಂತುಮಿಚ್ಛಾಮಿ ವ್ಯೇತು ಮಾತುಶ್ಚ ಹೃಚ್ಛಯಃ ।
ಮಾತರಂ ಚ ಸಮಾಶ್ವಾಸ್ಯ ಹ್ಯನುನೀಯ ಚ ಜಾನಕೀಂ ॥ ೫೭ ॥

ಆಗತ್ಯ ಪಾದೌ ವಂದಿತ್ವಾ ತವ ಯಾಸ್ಯೇ ಸುಖಂ ವನಂ ।
ಇತ್ಯುಕ್ತ್ವಾ ತೌ ಪರಿಕ್ರಮ್ಯ ಮಾತರಂ ದ್ರಷ್ಟುಮಾಯಯೌ ॥ ೫೮ ॥

ನತ್ವಾ ಸ್ವಮಾತರಂ ರಾಮಸ್ಸಮಾಶ್ವಾಸ್ಯ ಪುನಃ ಪುನಃ ।
ನತ್ವಾ ಪ್ರದಕ್ಷಿಣಾಃ ಕೃತ್ವಾ ತಾಮಾಮಂತ್ರ್ಯ ಯಯೌ ಗೃಹಂ ॥ ೫೯ ॥

---

೫೬. ರಾಜನ ಆ ಮಾತನ್ನು ಕೇಳಿ ರಾಮನು ಆ ದೊರೆಯನ್ನು ಸಮಾಧಾನ ಪಡಿಸುತ್ತ ನಾನು ಪ್ರತಿಜ್ಞೆಯನ್ನು ಪೂರೈಸಿಕೊಂಡು ಬೇಗನೆ ಮತ್ತೆ ಹಿಂದಿರುಗಿ ಊರಿಗೆ ಬರುತ್ತೇನೆ.

೫೭—೫೮. ಈಗ ಕಾಡಿಗೆ ಹೋಗಲು ಅಪೇಕ್ಷಿಸುತ್ತೇನೆ. ತಾಯಿಯಾದ ಕೈಕೇಯಿಯ ಮನಸ್ಸಿನ ದುಃಖವು ಹೋಗಲಿ. ನನ್ನ ತಾಯಿಯಾದ ಕೌಸಲ್ಯೆಯನ್ನೂ ಹೆಂಡತಿಯಾದ ಜಾನಕಿಯನ್ನೂ ಸಮಾಧಾನಪಡಿಸಿ ಅಲ್ಲಿಂದ ಮತ್ತೆ ಇಲ್ಲಿಗೆ ಬಂದು ನಿನ್ನ ಪಾದಗಳಿಗೆ ನಮಸ್ಕರಿಸಿ ವನಕ್ಕೆ ಸುಖವಾಗಿ ಹೋಗುತ್ತೇನೆ. ಹೀಗೆಂದು ಹೇಳಿ ಆ ತಂದೆಗೂ ತಾಯಿಗೂ ನಮಸ್ಕರಿಸಿ ಕೌಸಲ್ಯೆಯನ್ನು ನೋಡಲು ಬಂದನು.

೫೯. ರಾಮನು ತಾಯಿಯ ಬಳಿಗೆ ಬಂದು ಆಕೆಗೆ ನಮಸ್ಕರಿಸಿ ವಿಷಯವೆಲ್ಲವನ್ನೂ ತಿಳಿಸಿ ಅನೇಕ ರೀತಿಯಾಗಿ ಸಮಾಧಾನಪಡಿಸಿದನು. ಅನಂತರ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ತನ್ನ ಮನೆಗೆ ಹೋದನು.

ಸರ್ವವೃತ್ತಂ ತು ಸೀತಾಂ ಸ ಕಥಯಾಮಾಸ ರಾಘವಃ |
ಸೀತಯಾ ಲಕ್ಷ್ಮಣೇನಾಪಿ ವನಂ ಗಂತುಂ ಪುನಃ ಪುನಃ ॥ ೬೦ ॥

ಪ್ರಾರ್ಥಿತಶ್ಚ ತಥೇತ್ಯುಕ್ತ್ವಾ ತ್ವರಯಾಮಾಸ ತೌ ಪುನಃ |
ಸರ್ವಸ್ವಂ ಬ್ರಾಹ್ಮಣೇಭ್ಯೋ ದತ್ವಾ ಸೀತಯಾಗ್ನಿಸಮುಸ್ಥಿತಃ ॥ ೬೧ ॥

ಪದ್ಭ್ಯಾಮೇವ ಶನೈರ್ಭ್ರಾತ್ರಾ ಯಯೌ ರಾಮೋ ನೃಪಾಂತಿಕಂ |
ಗಚ್ಛಂತಂ ಪಥಿ ಶ್ರೀರಾಮಂ ಪದ್ಭ್ಯಾಂ ದೃಷ್ಟ್ವಾ ಪುರೌಕಸಃ ॥ ೬೨ ॥

ಪರಸ್ಪರೇಣ ತೇ ವೃತ್ತಂ ಶ್ರುತ್ವಾ ವ್ಯಾಕುಲಮಾನಸಃ |
ಬಭೂವುಸ್ತತ್ರ ವಾಮದೇವಃ ಕಥಯಾಮಾಸ ಸಾದರಾತ್ ॥ ೬೩ ॥

೬೦-೬೧. ಅಲ್ಲಿ ಸೀತೆಯನ್ನು ಕಂಡು ಅವಳಿಗೆ ವಿಷಯಗಳೆಲ್ಲವನ್ನೂ ತಿಳಿಸಿದನು. ಅದರಂತೆಯೇ ಲಕ್ಷ್ಮಣನಿಗೂ ತಿಳಿಸಿದನು. ಆಗ ಆ ಲಕ್ಷ್ಮಣನೂ ಸೀತೆಯೂ ತಾವೂ ವನಕ್ಕೆ ಬರುತ್ತೇವೆಂದು ಮತ್ತೆ ಮತ್ತೆ ಕೇಳಿಕೊಳ್ಳಲು ಕೊನೆಗೆ ಹಾಗೆಯೇ ಆಗಲೆಂದು ಒಪ್ಪಿಕೊಂಡು ಅವರನ್ನು ಬೇಗ ಹೊರಡುವಂತೆ ಅವಸರಪಡಿಸಿದನು. ಮತ್ತು ತನ್ನ ಪದಾರ್ಥಗಳೆಲ್ಲವನ್ನೂ ಬ್ರಾಹ್ಮಣರಿಗೆ ದಾನಮಾಡಿದನು.

೬೨. ಅನಂತರ ಅಗ್ನಿಯನ್ನು ತೆಗೆದುಕೊಂಡು ಸೀತೆ ಲಕ್ಷ್ಮಣರನ್ನು ಕರೆದುಕೊಂಡು ಕಾಲುನಡಗೆಯಿಂದಲೇ ದಶರಥನ ಬಳಿಗೆ ಹೋದನು. ರಾಮನು ಕಾಲುನಡಗೆಯಿಂದಲೇ ಹೋಗುತ್ತಿರುವುದನ್ನು ಪಟ್ಟಣಿಗರೆಲ್ಲರೂ ದಾರಿಯಲ್ಲಿ ನೋಡಿದರು.

೬೩-೬೪. ಇದರ ಕಾರಣವನ್ನು ಒಬ್ಬರಿಂದೊಬ್ಬರು ತಿಳಿದುಕೊಂಡು ದುಃಖಪಟ್ಟರು. ಆಗ ವಾಮದೇವನೆಂಬ ಋಷಿಯು ಅವರನ್ನು ಕುರಿತು

ನಾರದಾಗಮನಂ ರಾಮಪ್ರತಿಜ್ಞಾಂ ರಾವಣಸ್ಯ ಚ ।
ವಧಾದಿಕಂ ಸವಿಸ್ತಾರಂ ವಿಷ್ಣುಂ ಮನುಜರೂಪಿಣಂ ॥ ೬೪ ॥

ಪೌರಾಶ್ಶ್ರುತ್ವಾ ಗತಕ್ಲೇಶಾ ಹ್ಯಭೂವನ್ ಪಥಿ ಸಂಸ್ಥಿತಾಃ ।
ತತೋ ನತ್ವಾ ನೃಪಂ ರಾಮಃ ಕೈಕೇಯೀಂ ವಾಕ್ಯಮಬ್ರವೀತ್ ॥ ೬೫ ॥

ಅಂಬಾಗತೋಽಹಂ ವಿಪಿನಂ ಗಂತುಮಾಜ್ಞಾಂ ದದಸ್ವ ಮಾಂ ।
ತತಸ್ಸಾ ವಲ್ಕಲಾದೀನಿ ದದೌ ರಾಮಾದಿಕಾಂಸ್ತದಾ ॥ ೬೬ ॥

ರಾಮಸ್ತಾನ್ಪರಿಧಾಯಾಥ ಸ್ವಯಂ ಸೀತಾಂ ಸಮೀಕ್ಷಯತ್ ।
ತಂ ದೃಷ್ಟ್ವಾ ಕೈಕಯೀಂ ಪ್ರಾಹ ಗುರುಃ ಕ್ರೋಧೇನ ಭರ್ತ್ಸಯನ್॥೬೭ ॥

ನಾರದನು ಇಲ್ಲಿಗೆ ಬಂದಿದ್ದುದನ್ನೂ ರಾಮನ ಪ್ರತಿಜ್ಞೆಯನ್ನೂ ರಾವಣನ ವಧೆಯಾಗಬೇಕಾಗಿರುವುದನ್ನೂ ವಿಷ್ಣುವೇ ಈ ರಾಮರೂಪನಾಗಿ ಮನುಷ್ಯನಾಗಿ ಹುಟ್ಟಿರುವುದನ್ನೂ ವಿಸ್ತಾರವಾಗಿ ಎಲ್ಲರಿಗೂ ಹೇಳಿದನು.

೬೫. ಇದನ್ನು ಆ ಪಟ್ಟಣಿಗರು ಕೇಳಿ ಮನಸ್ಸಿಗೆ ಸಮಾಧಾನವನ್ನು ತಂದುಕೊಂಡು ದುಃಖವನ್ನು ಬಿಟ್ಟುಬಿಟ್ಟರು. ಅನಂತರ ರಾಮನು ದಶರಥನ ಬಳಿಗೆ ಹೋಗಿ ಅವರೆಲ್ಲರನ್ನೂ ನಮಸ್ಕರಿಸಿ ಕೈಕೇಯಿಯನ್ನು ಕುರಿತು ಇಂತೆಂದನು.

೬೬. ಅಮ್ಮಾ ಇಗೊ ! ಬಂದಿರುವೆನು. ಕಾಡಿಗೆ ಹೋಗಲು ಸಿದ್ಧನಾಗಿರುವೆನು. ನನಗೆ ಅಪ್ಪಣೆಯನ್ನು ಕೊಡು. ಇದನ್ನು ಕೇಳಿ ಕೈಕೇಯಿಯು ಅವರಿಗೆಲ್ಲರಿಗೂ ನಾರುಡೆಯನ್ನು ಕೊಟ್ಟಳು.

೬೭. ರಾಮನು ಅವೆಲ್ಲವನ್ನೂ ಧರಿಸಿಕೊಂಡು ಸೀತೆಯು ಸುಮ್ಮನಿರುವುದನ್ನು ತಿಳಿದು ಆಕೆಯನ್ನು ನೋಡಿದನು. ಹೀಗೆ ರಾಮನು ಸೀತೆಯನ್ನು ನೋಡುತ್ತಿರುವುದನ್ನು ನೋಡಿ ಗುರುವಾದ ವಸಿಷ್ಠನು ಕೋಪದಿಂದ ಕೈಕೇಯಿಯನ್ನು ಗದರಿಸುತ್ತ ಇಂತೆಂದನು.

ಜಡೇ ಪಾಪಿನಿ ದುರ್ವೃತ್ತೇ ರಾಮ ಏವ ತ್ವಯಾ ವೃತಃ |
ವನವಾಸಾಯ ದುಷ್ಟೇ ತ್ವಂ ಸೀತಾಯೈ ಕಿಂ ಪ್ರದಾಸ್ಯಸಿ || ೬೮ ||

ಇತ್ಯುಕ್ತ್ವಾ ದಿವ್ಯವಸ್ತ್ರಾಣಿ ಸೀತಾಯೈ ಸ ಗುರುರ್ದದೌ |
ರಾಜಾ ದಶರಥೋಽಪ್ಯಾಹ ಸುಮಂತ್ರಂ ರಥಮಾನಯ || ೬೯ ||

ರಥಮಾರುಹ್ಯ ಗಚ್ಛಂತು ವನಂ ವನಚರಪ್ರಿಯಾಃ |
ರಾಮಃ ಪ್ರದಕ್ಷಿಣಂ ಕೃತ್ವಾ ಪಿತರೌ ರಥಮಾರುಹತ್ || ೭೦ ||

ಸೀತಯಾ ಲಕ್ಷ್ಮಣೇನಾಥ ನೋದಯಾಮಾಸ ಸಾರಥಿಂ |
ಕೌಸಲ್ಯಾಂ ಚ ಸುಮಿತ್ರಾಂ ಚ ತಾತಮಾಶ್ವಾಸ್ಯ ವೈ ಪುನಃ || ೭೧ ||

---

೬೮. ಎಲೈ ಜಡಳೆ! ಪಾಪಿನಿಯೆ! ದುರ್ವೃತ್ತಳೆ! ನೀನು ರಾಮನೊಬ್ಬನು ಮಾತ್ರ ಕಾಡಿಗೆ ಹೋಗಬೇಕೆಂದು ಕೇಳಿದ್ದೀಯೆ! ಸೀತೆಗೆ ಏತಕ್ಕೆ ಈ ನಾರುಡೆಗಳನ್ನು ಕೊಟ್ಟಿದ್ದೀಯೆ ?

೬೯. ಎಂಬುದಾಗಿ ಹೇಳುತ್ತ ಆ ಗುರುವು ಸೀತೆಗೆ ಉತ್ತಮವಾದ ವಸ್ತ್ರಗಳನ್ನು ಕೊಟ್ಟನು. ಅನಂತರ ರಾಜನಾದ ದಶರಥನು ಸುಮಂತ್ರನನ್ನು ಕುರಿತು ರಥವನ್ನು ತೆಗೆದುಕೊಂಡು ಬಾ. ಎಂದು ಹೇಳಿದನು.

೭೦. ವನಚರರಿಗೆ ಪ್ರಿಯರಾದ ಇವರು ರಥದಲ್ಲಿ ಕುಳಿತುಕೊಂಡು ಕಾಡಿಗೆ ಹೋಗಲಿ. ಎನ್ನಲು ರಾಮನು ತಂದೆಗೆ ಮೂರುಬಾರಿ ಪ್ರದಕ್ಷಿಣೆಯನ್ನು ಮಾಡಿ ರಥವನ್ನು ಹತ್ತಿದನು.

೭೧. ಅವನ ಅನಂತರದಲ್ಲಿ ಸೀತೆಯೂ ಲಕ್ಷ್ಮಣನೂ ರಥವನ್ನು ಹತ್ತಿದರು. ರಾಮನು ರಥವನ್ನು ಮುಂದಕ್ಕೆ ಬಿಡುವಂತೆ ಹೇಳಿದನು. ಮತ್ತೆ ದಶರಥನನ್ನೂ ಕೌಸಲ್ಯೆ ಸುಮಿತ್ರೆಯರನ್ನೂ ಸಮಾಧಾನಪಡಿಸಿದನು.

ಸಮಾಶ್ವಾಸ್ಯ ಜನಾನ್ ರಾಮಸ್ತಮಸಾತೀರಮಾಯಯೌ ।
ಮಾಘಮಾಸೇ ಸಿತೇ ಪಕ್ಷೇ ಪಂಚಮ್ಯಾಂ ಪರಮೇಽಹನಿ ॥ ೭೨ ॥

ಪ್ರಾಪ್ತೇಽಹ್ಯಷ್ಟಾದಶೇ ವರ್ಷೇ ರಾಘವಾಯ ಮಹಾತ್ಮನೇ ।
ಆಸೀದ್ವನಪ್ರಯಾಣಂ ಹಿ ಸ್ವಪುರ್ಯಾಸ್ತಮಸಾತಟಂ ॥ ೭೩ ॥

ಇಂದ್ರಾದ್ಯಾ ನಿರ್ಜರಾಶ್ಚಕ್ರುಸ್ತದಾ ತನ್ಮಾರ್ಗಸತ್ಕ್ರಿಯಾಂ ।
ಆಸನ್ ಶುಭಾಶ್ಚ ಶಕುನಾ ರಾಮಸ್ಯ ವ್ರಜತೋ ವನಂ ॥ ೭೪ ॥

ಉಷಿತ್ವೈಕಾಂ ನಿಶಾಂ ತತ್ರ ಶೃಂಗಬೇರಪುರಂ ಯಯೌ ।
ಗುಹೇನ ಮಾನಿತಶ್ಚಾಪಿ ತತ್ರ ರಾತ್ರಿಂ ನಿನಾಯ ಸಃ ॥ ೭೫ ॥

---

೭೨. ಜನಗಳನ್ನೂ ಸಮಾಧಾನಪಡಿಸುತ್ತ ರಾಮನು ಆ ರಥದಲ್ಲಿಯೇ ತಮಸಾನದಿಯ ದಡಕ್ಕೆ ಬಂದನು. ಆದಿನ ಮಾಘಶುಕ್ಲ ಪಂಚಮಿಯಾಗಿದ್ದಿತು.

೭೩. ತಾನು ಹುಟ್ಟಿದ ಹದಿನೆಂಟನೆಯ ವರ್ಷದ ಮಾಘಶುದ್ಧ ಪಂಚಮಿಯ ಹಗಲಿನಲ್ಲಿ ತಮಸಾನದಿಯ ದಡಕ್ಕೆ ಬಂದ ಈ ವನವಾಸ ಪ್ರಯಾಣವು ರಾಮನಿಗೆ ಪ್ರಾಪ್ತಿವಾಯಿತು.

೭೪. ಇಂದ್ರನೇ ಮುಂತಾದ ದೇವತೆಗಳು ಆ ರಾಮನಿಗೆ ಮಾರ್ಗದಲ್ಲಿ ಉಪಚಾರವನ್ನು ಮಾಡಿದರು. ರಾಮನು ಕಾಡಿಗೆ ಹೋಗುತ್ತಿರುವಾಗ ಅವನಿಗೆ ಶುಭಶಕುನಗಳು ಉಂಟಾಗುತ್ತಿದ್ದುವು.

೭೫. ರಾಮನು ಆ ತಮಸಾನದಿಯ ದಡದಲ್ಲಿ ಒಂದು ರಾತ್ರಿಯ ಕಾಲವಿದ್ದು ಮುಂದೆ ಶೃಂಗಬೇರಪುರಕ್ಕೆ ಹೋದನು. ಅಲ್ಲಿ ಗುಹನು ಸತ್ಕರಿಸಲು ಅವನ ಸತ್ಕಾರವನ್ನು ಹೊಂದಿ ಅಲ್ಲಿಯೂ ಒಂದು ರಾತ್ರಿಯ ಕಾಲವಿದ್ದನು.

ಗುಹಾನೀತೈರ್ವಟಕ್ಷೀರೈಃ ಬಬಂಧ ರಾಘವೋ ಜಟಾಂ ।
ಪ್ರಭಾತೇ ಸೀತಯಾರುಹ್ಯ ನೌಕಾಯಾಂ ಲಕ್ಷ್ಮಣೇನ ಸಃ ॥ ೭೬ ॥

ಪ್ರೇಷಯಾಮಾಸ ಸರಥಂ ಸುಮಂತ್ರಂ ನಗರೀಂ ಪ್ರತಿ ।
ಗುಹಸ್ತಾಂ ವಾಹಯಾಮಾಸ ನೌಕಾಂ ಸ್ವಜ್ಞಾತಿಭಿಸ್ತದಾ ॥ ೭೭ ॥

ಗಂಗಾಮಧ್ಯಗತಾ ಗಂಗಾಂ ಪ್ರಾರ್ಥಯಾಮಾಸ ಜಾನಕೀ ।
ದೇವಿ ಗಂಗೇ ನಮಸ್ತೇಽಸ್ತು ನಿವೃತ್ತಾ ವನವಾಸತಃ ॥ ೭೮ ॥

ರಾಮೇಣ ಸಹಿತಾಹಂ ತ್ವಾಂ ಲಕ್ಷ್ಮಣೇನ ಚ ಪೂಜಯೇ ।
ಸುರಾಮಾಂಸೋಪಹಾರೈಶ್ಚ ನಾನಾಬಲಿಭಿರಾದೃತಾ ॥ ೭೯ ॥

---

೭೬. ಅಲ್ಲಿ ರಾಮನು ಗುಹನು ಆಲದ ಹಾಲನ್ನು ತಂದುಕೊಡಲು ಅದನ್ನು ತಲೆಗೆ ಹಾಕಿಕೊಂಡು ಜಟೆಯನ್ನು ಮಾಡಿಕೊಂಡನು. ಬೆಳಗಾಗುತ್ತಲೂ ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ನದಿಯನ್ನು ದಾಟಲು ದೋಣಿಯನ್ನು ಹತ್ತಿದನು.

೭೭. ರಥವನ್ನು ತೆಗೆದುಕೊಂಡು ಅಯೋಧ್ಯೆಗೆ ಹೋಗುವಂತೆ ಸುಮಂತ್ರನಿಗೆ ಹೇಳಿಕಳುಹಿಸಿದನು. ಅನಂತರ ಗುಹನು ತನ್ನ ಬಂಧುಗಳೊಡನೆ ಕೂಡಿಕೊಂಡು ಆ ದೋಣಿಯನ್ನು ಆಚೆಯ ದಡಕ್ಕೆ ನಡೆಯಿಸಿದನು.

೭೮–೭೯. ಗಂಗಾನದಿಯ ಮಧ್ಯದಲ್ಲಿ ದೋಣಿಯಲ್ಲಿ ದಾಟುತ್ತಿರುವಾಗ ಮಧ್ಯಕ್ಕೆ ದೋಣಿಯು ಬರಲು ಆಗ ಸೀತೆಯು ಗಂಗಾದೇವಿಯೆ! ನಿನಗೆ ನಮಸ್ಕಾರವು. ನಾನು ಈ ವನವಾಸವನ್ನು ಮುಗಿಸಿಕೊಂಡು ಹಿಂದಿರುಗಿ ಬಂದಾಗ ರಾಮನೊಡನೆಯೂ ಲಕ್ಷ್ಮಣನೊಡನೆಯೂ ಸುರೆ, ಮಾಂಸ, ಮೊದಲಾದ ಪದಾರ್ಥಗಳಿಂದಲೂ ವಿಧವಿಧವಾದ ಹೂಗಳಿಂದಲೂ ನಿನ್ನನ್ನು ಪೂಜಿಸುತ್ತೇನೆ. ಎಂದು ಪ್ರಾರ್ಥಿಸಿಕೊಂಡಳು.

ಇತ್ಯುಕ್ತ್ವಾ ಪರಕೂಲಂ ತು ಗತ್ವಾ ರಾಮೋ ಗುಹಂ ತದಾ ।
ವಿಸರ್ಜಯಿತ್ವಾ ತತ್ರೈಕಾಂ ನಿಶಾಂ ನೀತ್ವಾ ಶ್ನೈಶ್ಶನೈಃ ॥ ೮೦ ॥

ಭರದ್ವಾಜಾಶ್ರಮಂ ಗತ್ವಾ ತಸ್ಥೌ ತೇನಾತಿಪೂಜಿತಃ ।
ತತಃ ಪ್ರಯಾಗೇ ಯಮುನಾಂ ತೀರ್ತ್ವಾ ಗತ್ವಾ ಮಹಾವನಂ ॥ ೮೧ ॥

ವಾಲ್ಮೀಕೇರಾಶ್ರಮಂ ಗತ್ವಾ ತಸ್ಥೌ ತೇನಾತಿಮಾನಿತಃ ।
ಚಿತ್ರಕೂಟೇ ಲಕ್ಷ್ಮಣೇನ ಪರ್ಣಶಾಲಾಂ ಮನೋರಮಾಂ ॥ ೮೨ ॥

ಕೃತ್ವಾ ಮಾಂಸೈರ್ಮೃಗೋದ್ಭೂತೈರ್ಬಲಿಂ ದತ್ವಾ ರಘೂತ್ತಮಃ ।
ತಸ್ಥೌ ತಸ್ಯಾಂ ಸುಖಂ ಭ್ರಾತ್ರಾ ಸೀತಯಾ ಸ್ವಗೃಹೇ ಯಥಾ ॥ ೮೩ ॥

---

೮೦. ಸೀತೆಯು ಹೀಗೆ ಪ್ರಾರ್ಥಿಸುತ್ತಿರಲು ದೋಣಿಯು ಆಚೆಯ ದಡಕ್ಕೆ ಹೋಯಿತು. ಅನಂತರ ರಾಮನು ಗುಹನನ್ನು ಹಿಂದಕ್ಕೆ ಕಳುಹಿಸಿ ಅದೇ ಜಾಗದಲ್ಲಿ ಒಂದು ರಾತ್ರೆ ಇದ್ದನು.

೮೧. ಅನಂತರ ನಿಧಾನವಾಗಿ ಮುಂದಕ್ಕೆ ಹೊರಟು ಹೋಗುತ್ತಾ ಭರದ್ವಾಜನ ಆಶ್ರಮಕ್ಕೆ ಹೋದನು. ಅಲ್ಲಿ ಭರದ್ವಾಜನು ಅವರನ್ನು ಬಹುವಾದ ಪ್ರೀತಿಯಿಂದ ಕಂಡು ಪೂಜಿಸಿದನು. ಅಲ್ಲಿ ಕೆಲವು ದಿನಗಳಿದ್ದರು. ಅನಂತರ ಪ್ರಯಾಗದಲ್ಲಿ ಯಮುನಾನದಿಯನ್ನು ದಾಟಿ ದೊಡ್ಡದಾದ ವನಕ್ಕೆ ಹೋದರು.

೮೨. ಮುಂದೆ ಹೋಗಲು ಅಲ್ಲಿ ವಾಲ್ಮೀಕಿಯ ಆಶ್ರಮವು ಸಿಕ್ಕಿತು. ಅಲ್ಲಿಗೆ ಹೋಗಲು ಆ ಮುನಿಯು ಬಹುವಾದ ಗೌರವದಿಂದ ಸತ್ಕರಿಸಿದನು. ಅನಂತರ ಅಲ್ಲಿಂದ ಮುಂದೆ ಹೊರಟು ಚಿತ್ರಕೂಟ ಪರ್ವತಕ್ಕೆ ಹೋದರು.

೮೩. ಆ ಚಿತ್ರಕೂಟದಲ್ಲಿ ಮನೋಹರವಾದ ಒಂದು ಪರ್ಣಶಾಲೆಯನ್ನು ಕಟ್ಟಿಕೊಂಡರು. ಅನಂತರ ಮೃಗಗಳನ್ನು ಕೊಂದು ಮಾಂಸವನ್ನು ತಂದು ಬಲಿಯನ್ನು ಹಾಕಿ ಆ ಪರ್ಣಶಾಲೆಗೆ ಪ್ರವೇಶಮಾಡಿ ಅದರಲ್ಲಿ ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ತನ್ನ ಮನೆಯಲ್ಲಿರುವಂತೆಯೇ ರಾಮನು ಇದ್ದನು.

ಶಯನಾಸನಪಾಕಾಗ್ನಿದೇವಾದೀನಾಂ ಪೃಥಕ್ ಪೃಥಕ್ ।
ತತ್ರಾಸನ್ನಿವಿಧಾಶ್ಯಾಲಾಸ್ತರುವಲ್ಲೀ ವಿರಾಜಿತಾಃ ॥ ೮೪ ॥

ಕಂದೈರ್ಮೂಲೈರ್ವನೋದ್ಭೂತೈರ್ಮೃಗಮಾಂಸಫಲಾದಿಭಿಃ ।
ಮುನೀಶ್ವರಾಣಾಮಾತಿಥ್ಯಂ ಚಕ್ರುಸ್ತೇ ಸ್ವಗೃಹೇ ಯಥಾ ॥ ೮೫ ॥

ಏಕದಾ ನಿದ್ರಿತಂ ರಾಮಂ ಸೀತಾಂಕೇ ಸನ್ನಿರೀಕ್ಷ್ಯ ಚ ।
ಐಂದ್ರಃ ಕಾಕಸ್ತದಾಗತ್ಯ ನಖೈಸ್ತುಂಡೇನ ಚಾಸಕೃತ್ ॥ ೮೬ ॥

ಸೀತಾಂಗುಷ್ಠಂ ಮೃದುಂ ರಕ್ತಂ ವಿದದಾರಾಮಿಷಾಶಯಾ ।
ನಿದ್ರಾಭಂಗಭಯಾದ್ಭರ್ತುಸ್ಸೀತಯಾ ನ ನಿವಾರಿತಃ ॥ ೮೭ ॥

---

೮೪. ಮಲಗುವುದಕ್ಕೂ ಅಡಿಗೆಗೂ ದೇವರ ಪೂಜೆಗೂ ಬೇಕಾಗುವುದೆಲ್ಲಕ್ಕೂ ಬೇರೆ ಬೇರೆಯಾಗಿ ಜಾಗಗಳನ್ನು ಮಾಡಿಕೊಂಡು ಇರುತ್ತಿದ್ದನು. ಅಲ್ಲಿ ಅನೇಕ ಬಗೆಯ ಮರಗಳೂ ಬಳ್ಳಿಗಳೂ ಅನೇಕವಾಗಿದ್ದುವು. ಅವುಗಳಿಂದ ಆ ಪರ್ಣಶಾಲೆಯು ಮನೋಹರವಾಗಿದ್ದಿತು.

೮೫. ಕಾಡಿನಲ್ಲಿ ಸಿಕ್ಕುವ ಗೆಡ್ಡೆ ಗೆಣಸುಗಳಿಂದಲೂ ಮೃಗಗಳ ಮಾಂಸದಿಂದಲೂ ಫಲಗಳಿಂದಲೂ ಅಲ್ಲಿಗೆ ಬಂದ ಋಷಿಗಳಿಗೆ ತಮ್ಮ ಅರಮನೆಯಲ್ಲಿ ಮಾಡುತ್ತಿದ್ದಂತೆಯೇ ಆತಿಥ್ಯವನ್ನು ಮಾಡುತ್ತಿದ್ದರು.

೮೬-೮೭. ಹೀಗಿರುತ್ತಿರಲು ಒಂದುಸಾರಿ ರಾಮನು ಸೀತೆಯ ತೊಡೆಯಮೇಲೆ ತಲೆಯನ್ನಿಟ್ಟುಕೊಂಡು ನಿದ್ದೆಮಾಡುತ್ತಿರಲು ಇಂದ್ರನ ಮಗನಾದ ಕಾಗೆಯು ಬಂದು ನೋಡಿ ಉಗುರುಗಳಿಂದಲೂ ಕೊಕ್ಕಿನಿಂದಲೂ ಅನೇಕಬಾರಿ ಸೀತೆಯ ಉಂಗುಷ್ಠವನ್ನು ಮೃದುವಾಗಿಯೂ ಕೆಂಪಗೂ ಇದ್ದುದ್ದರಿಂದ ಮಾಂಸದ ಆಸೆಯಿಂದ ಕಚ್ಚಿ ಪರಚಿತು. ಅದು ತನ್ನನ್ನು ಹಾಗೆ ಕಚ್ಚುತ್ತಿದ್ದರೂ ಸೀತೆಯು ತನ್ನ ಗಂಡನಿಗೆ ನಿದ್ದೆಯ ಭಂಗವಾಗುವುದೆಂದು ಆತನನ್ನು ಎಬ್ಬಿಸದೆಯೂ ಮತ್ತು ಕಾಗೆಯನ್ನು ಓಡಿಸದೆಯೂ ಇದ್ದಳು.

ಸೀತಾಂಗುಷ್ಠಂ ತು ಕಾಕೇನ ಭಿನ್ನಂ ದೃಷ್ಟ್ವಾ ರಘೂತ್ತಮಃ ।
ಅಭಿದ್ರವಂತಂ ರಕ್ತಾಸ್ಯಮಿಷಿಕಾಸ್ತ್ರಂ ಮುಮೋಚ ಸಃ　　　॥ ೮೮ ॥

ಕೇನಾಪ್ಯರಕ್ಷಿತಸ್ಯಾಸ್ತ್ರಭಯಾದ್ಬ್ರಹ್ಮಾಂಡಗೋಲಕೇ ।
ಸ್ವಂ ಶರಣಮಾಗತಸ್ತಸ್ಯ ಪುನರ್ನಾರದವಾಕ್ಯತಃ　　　॥ ೮೯ ॥

ಇಷಿಕಾಸ್ತ್ರೇಣ ಕಾಕಸ್ಯ ಬಿಭೇದ ನಯನಂ ಕ್ಷಣಾತ್ ।
ಏವಂ ನಾನಾಕೌತುಕಾನಿ ಕುರ್ವಂಸ್ತತ್ರೌ ಸುಖಂ ಪ್ರಭುಃ　　　॥ ೯೦ ॥

ಸುಮಂತ್ರೋಽಪಿ ಪುರೀಂ ಗತ್ವಾ ನೃಪಂ ವೃತ್ತಂ ನ್ಯವೇದಯತ್ ।
ಸೋಽಪಿ ರಾಜಾ ರಾಘವೇತಿ ಜಲ್ಪನ್ ಸ್ವಂ ಜೀವಿತಂ ಜಹೌ　　　॥ ೯೧ ॥

---

೮೮. ಅನಂತರ ರಾಮನಿಗೆ ಎಚ್ಚರವಾಗಲು ಸೀತೆಯ ಆ ಹೆಬ್ಬೆರಳನ್ನು ಕಾಗೆಯು ಕಚ್ಚುತ್ತಿರುವುದನ್ನೂ ಹೆದರದೆ ಮತ್ತೆ ಮತ್ತೆಯೂ ಮೇಲೆ ಬಿದ್ದುಬಂದು ಕಚ್ಚುತ್ತಿರುವುದನ್ನೂ ನೋಡಿ ರಾಮನು "ಇಷಿಕಾ" ಎಂಬ ಅಸ್ತ್ರವನ್ನು ಆ ಕಾಗೆಯ ಮೇಲೆ ಬಿಟ್ಟನು.

೮೯. ಆ ಅಸ್ತ್ರವು ಕಾಗೆಯನ್ನು ಅಟ್ಟಿಸಿಕೊಂಡು ಹೋಗಲು ಅದು ಬ್ರಹ್ಮಾಂಡದಲ್ಲಿರುವ ಎಲ್ಲರ ಮರೆಯನ್ನೂ ಹೊಕ್ಕಿತು. ಯಾರೂ ಆ ಅಸ್ತ್ರದಿಂದ ಅದನ್ನು ಕಾಪಾಡದಿರಲು ನಾರದನ ಮಾತಿನಂತೆ ಮತ್ತೆ ರಾಮನ ಬಳಿಗೆ ಬಂದು ಅವನನ್ನೇ ಶರಣುಹೊಂದಿತು.

೯೦. ಆಗ ರಾಮನು ಅದನ್ನು ರಕ್ಷಿಸಲು ಆ ಅಸ್ತ್ರಕ್ಕೆ ಅದರ ಒಂದು ಕಣ್ಣನ್ನೇ ಬಲಿಯಾಗಿ ಕೊಟ್ಟನು. ಇದೇ ರೀತಿಯಾದ ಅನೇಕವಾದ ಆಶ್ಚರ್ಯಗಳನ್ನು ಅಲ್ಲಿ ತೋರಿಸುತ್ತ ಆ ಸ್ವಾಮಿಯು ಅಲ್ಲಿ ಸುಖವಾಗಿದ್ದನು.

೯೧. ಇತ್ತ ಸುಮಂತ್ರನು ಅಯೋಧ್ಯೆಗೆ ಹೋಗಿ ಇಲ್ಲಿ ನಡೆದ ವಿಷಯಗಳೆಲ್ಲವನ್ನೂ ತಿಳಿಸಿದನು. ಇದನ್ನೆಲ್ಲಾ ಕೇಳಿದ ಆ ದಶರಥನು "ರಾಘವ" ಎಂದೆನ್ನುತ್ತಾ ತನ್ನ ಪ್ರಾಣವನ್ನು ಬಿಟ್ಟುಬಿಟ್ಟನು.

ನೃಪಂ ಮೃತಂ ಗುರುರ್ಜ್ಞಾತ್ವಾ ತೈಲದ್ರೋಣ್ಯಾಂ ನಿಧಾಯ ತಂ।
ಯುಧಾಜಿನ್ನಗರಾದ್ದೂತೈಃ ಕೈಕೇಯ್ಯಾಸ್ತನಯಾವುಭೌ ॥ ೯೨ ॥

ಆನಯಾಮಾಸ ಭರತಶತ್ರುಘ್ನೌ ವೇಗತಸ್ತದಾ।
ತಾವುಭಾವಪಿ ವೇಗೇನ ಸ್ವಾಂ ಪುರೀಂ ಸಂವಿವೇಶತುಃ ॥ ೯೩ ॥

ಮಾತ್ರಾ ಸಂಪಾದಿತಂ ಕೃತ್ಯಂ ಜ್ಞಾತ್ವಾ ಧಿಕ್ಕೃತ್ಯ ಮಾತರಂ।
ಭರತಃ ಪಿತರಂ ವಹ್ನಿಂ ದದೌ ಸರಯುಸೈಕತೇ ॥ ೯೪ ॥

ವೀರಾಣಾಂ ಮಾತರಸ್ತಾಶ್ಚ ಜಗ್ಮುರ್ನ ಸ್ವಾಮಿನಾ ದಿವಂ।
ಪಿತುರುತ್ತರಕಾರ್ಯಾದಿ ಕರ್ಮ ಕೃತ್ವಾ ಸವಿಸ್ತರಂ ॥ ೯೫ ॥

---

೯೨. ರಾಜನು ಸತ್ತುದು ಗುರುವಾದ ವಸಿಷ್ಠನಿಗೆ ತಿಳಿಯಲು ಅವನ ಆ ಶರೀರವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿ ಇಡಿಸಿದನು. ಯುಧಾಜಿತ್ತಿನ ಪಟ್ಟಣಕ್ಕೆ ದೂತರನ್ನು ಕಳುಹಿಸಿ ಅವನ ಮಕ್ಕಳಾದ ಭರತ ಶತ್ರುಘ್ನರಿಬ್ಬರನ್ನೂ ಕರೆಸಿದನು.

೯೩–೯೪. ಭರತ ಶತ್ರುಘ್ನರು ದೂತರ ಮಾತಿನಂತೆ ಬೇಗನೆ ಬಂದರು. ಪಟ್ಟಣವನ್ನು ಪ್ರವೇಶಿಸಿದರು. ತಾಯಿಯು ಮಾಡಿದ ಕೆಲಸವನ್ನು ಕೇಳಿ ಅವಳನ್ನು ತಿರಸ್ಕರಿಸುತ್ತ ಭರತನು ಸರಯೂನದಿಯ ಮರಳಿನಮೇಲೆ ತಂದೆಗೆ ಬೆಂಕಿಯನ್ನು ಹಾಕಿದನು.

೯೫. ವೀರಮಾತೃಗಳಾದುದರಿಂದ ಆ ದಶರಥನ ಹೆಂಡತಿಯರು ಆ ದಶರಥನೊಡನೆ ಸಹಗಮನವನ್ನು ಮಾಡಲಿಲ್ಲ. ಅನಂತರ ಭರತನು ತಂದೆಗೆ ಉತ್ತರಕ್ರಿಯೆಗಳನ್ನು ವಿಸ್ತಾರವಾಗಿ ಮಾಡಿದನು.

ಮಂಥರಾಂ ಕಾಡಯಾಮಾಸ ಮಾತುಗ್ರೇ ಪುನಃ ಪುನಃ ।
ಪ್ರಾರ್ಥಿತೋಽಪ್ಯಭಿಷೇಕಾರ್ಥಂ ರಾಜ್ಯಮಂಗೀಚಕಾರ ನ ॥ ೯೬ ॥

ತತೋ ಮಂತ್ರಿಜನೈಸ್ಸಾಕಂ ಮಾತೃಭಿಃ ಪುರವಾಸಿಭಿಃ ।
ಪರಿವರ್ತ್ತಯಿತುಂ ರಾಮಂ ಯಯೌ ಸ ಭರತಸ್ತದಾ ॥ ೯೭ ॥

ಗುಹೇನ ಮಾನಿತಶ್ಚಾಪಿ ಭರದ್ವಾಜಾಶ್ರಮಂ ಯಯೌ ।
ತಪೋಬಲೇನ ಭೂಸ್ವರ್ಗಂ ನಿರ್ಮಾಯ ಭರತಂ ಮುನಿಃ ॥ ೯೮ ॥

ಸಸೈನ್ಯಂ ಪೂಜಯಾಮಾಸ ತಂ ನತ್ವಾ ಭರತೋಽಪಿ ಸಃ ।
ಮುನಿಸಂದರ್ಶಿತಪಥಾ ಚಿತ್ರಕೂಟೇಗ್ರಜಂ ಯಯೌ ॥ ೯೯ ॥

---

೯೬. ಈ ಅನರ್ಥಕ್ಕೆಲ್ಲಾ ಮಂಥರೆಯು ಮೂಲಕಾರಣಳೆಂದು ತಿಳಿದು ಅವಳನ್ನು ಆವಳ ಒಡತಿಯಾದ ಕೈಕೇಯಿಯ ಎದುರಿಗೇ ಅನೇಕ ಬಾರಿ ಹೊಡೆದನು. ಎಲ್ಲರೂ ಕೂಡ ರಾಜ್ಯಭಾರಕ್ಕೆ ಅವನನ್ನು ಕೇಳಿಕೊಂಡರು. ಅವನು ಅದನ್ನು ಅಂಗೀಕರಿಸಲಿಲ್ಲ

೯೭. ಅನಂತರ ಮಂತ್ರಿಜನಗಳನ್ನೂ ಪಟ್ಟಣಿಗರನ್ನೂ ತಾಯಿಯರನ್ನೂ ಕರೆದುಕೊಂಡು ರಾಮನನ್ನು ಹಿಂದಿರುಗಿ ಕರೆದುಕೊಂಡು ಬರಲು ಭರತನು ಅರಣ್ಯಕ್ಕೆ ಹೋದನು.

೯೮–೯೯. ದಾರಿಯಲ್ಲಿ ಗುಹನನ್ನು ಕಂಡು ಅವನಿಂದ ಸತ್ಕಾರವನ್ನು ಹೊಂದಿ ಭರದ್ವಾಜಾಶ್ರಮಕ್ಕೆ ಹೋದನು. ಅಲ್ಲಿ ಭರದ್ವಾಜನು ತನ್ನ ತಪೋಬಲದಿಂದಲೇ ಭೂಮಿಯನ್ನೇ ಸ್ವರ್ಗದಂತೆ ಮಾಡಿ ಅಲ್ಲಿ ಭರತನನ್ನೂ ಅವನ ಸೈನ್ಯವನ್ನೂ ಆತಿಥ್ಯದಿಂದ ಸತ್ಕರಿಸಿದನು. ಅನಂತರ ಆ ಭರದ್ವಾಜನ ಅಪ್ಪಣೆಯನ್ನು ಪಡೆದು ಅವನು ತೋರಿಸಿದ ದಾರಿಯಲ್ಲಿ ಹೊರಟು ಚಿತ್ರಕೂಟಕ್ಕೆ ಬಂದು ನಿಂತನು.

ದೃಷ್ಟ್ವಾ ರಾಮಂ ತು ಶಾಲಾಯಾಂ ಸೀತಯಾ ಬಂಧುನಾ ಸ್ಥಿತಂ |
ನತ್ವಾ ತೇನಾಲಿಂಗಿತಶ್ಚ ಸರ್ವಂ ವೃತ್ತಂ ನ್ಯವೇದಯತ್ || ೧೦೦ ||

ರಾಮಶ್ಶ್ರುತ್ವಾ ಮೃತಂ ತಾತಂ ಗತ್ವಾ ಮಂದಾಕಿನೀಂ ನದೀಂ |
ಸ್ನಾತ್ವಾ ತಿಲಾಂಜಲಿಂ ದತ್ವಾ ಯಯೌ ಶಾಲಾಂ ನಿಜಾಂ ತತಃ || ೧೦೧ ||

ತತಸ್ತಂ ಪ್ರಾರ್ಥಯಾಮಾಸ ಭರತೋ ಗುರುಣಾ ಸಹ |
ರಾಜ್ಯಾರ್ಥಂ ರಾಘವಶ್ಚಾಪಿ ನೇತ್ಯುವಾಚ ಪುನಃ ಪುನಃ || ೧೦೨ ||

ಪ್ರಾಯೋಪವೇಶನಂ ತತ್ರ ದರ್ಭೇಷು ಭರತಸ್ತದಾ |
ಚಕಾರ ನಿಗ್ರಹಂ ತಸ್ಯ ಜ್ಞಾತ್ವಾ ಗುರುಮಚೋದಯತ್ || ೧೦೩ ||

---

೧೦೦. ಅಲ್ಲಿ ಪರ್ಣಶಾಲೆಯೊಳಗೆ ಸೀತೆ ಲಕ್ಷ್ಮಣರೊಂದಿಗೆ ರಾಮನು ಕುಳಿತಿರುವುದನ್ನು ನೋಡಿದನು. ಒಡನೆಯೇ ನಮಸ್ಕರಿಸಲು ರಾಮನು ಅವನನ್ನು ಆಲಿಂಗಿಸಿಕೊಂಡನು. ಅನಂತರ ನಡೆದ ವಿಷಯಗಳೆಲ್ಲವನ್ನೂ ರಾಮನಿಗೆ ತಿಳಿಸಿದನು.

೧೦೧. ರಾಮನು ತಂದೆಯು ಮೃತನಾದುದನ್ನು ಕೇಳಿ ಒಡನೆಯೇ ಮಂದಾಕಿನಿನದಿಗೆ ಹೋಗಿ ಸ್ನಾನಮಾಡಿ ತಂದೆಗೆ ತರ್ಪಣವನ್ನು ಕೊಟ್ಟು ಹಿಂದಕ್ಕೆ ಹೊರಟು ತನ್ನ ಪರ್ಣಶಾಲೆಗೆ ಬಂದನು.

೧೦೨. ಆಗ ಗುರುವಾದ ವಸಿಷ್ಠನೂ ಭರತನೂ ರಾಮನನ್ನು ಹಿಂದಕ್ಕೆ ಬರುವಂತೆಯೂ ರಾಜ್ಯವನ್ನು ವಹಿಸಿಕೊಳ್ಳುವಂತೆಯೂ ಕೇಳಿಕೊಂಡರು. ಎಷ್ಟು ಕೇಳಿಕೊಂಡರೂ ಆ ರಾಮನು ಬರುವುದಿಲ್ಲವೆಂದು ಹೇಳಿಬಿಟ್ಟನು.

೧೦೩. ರಾಮನು ಬರುವುದಿಲ್ಲವೆನ್ನಲು ಭರತನು ದರ್ಭೆಯನ್ನು ಹಾಸಿ ಆದರಮೇಲೆ ಪ್ರಾಯೋಪವೇಶನವನ್ನು ಮಾಡಿದನು. ಆಗ ಈ ಪ್ರಾಯೋಪವೇಶನಕ್ಕೆ ಪ್ರತೀಕಾರವನ್ನು ಮಾಡುವಂತೆ ರಾಮನು ವಸಿಷ್ಠನಿಗೆ ಹೇಳಿದನು.

ರಾಮಾಜ್ಞಯಾ ಗುರುಶ್ಚಾಪಿ ಭರತಂ ಬೋಧಯತ್ತದಾ ।
ಭೂಭಾರಹರಣಾರ್ಥಾಯ ವಿಷ್ಣುಸ್ಸಾಕ್ಷಾಜ್ಜನಾರ್ದನಃ ॥ ೧೦೪ ॥

ಅತ್ರ ಜಾತೋಸ್ತಿ ದೇವಾನಾಂ ವಚನಾದ್ರಾವಣಾದಿಕಾನ್ ।
ಹಂತುಂ ಗಚ್ಛತಿ ರಾಮೋದ್ಯ ಮಾ ತ್ವಂ ನಿಗ್ರಹಮಾಚರ ॥ ೧೦೫ ॥

ತತೋ ಜ್ಞಾತ್ವಾ ಹರಿಂ ರಾಮಂ ಭರತೋ ರಾಮಮಬ್ರವೀತ್ ।
ರಾಜ್ಯಾರ್ಥಂ ಪಾದುಕೇ ದೇಹಿ ತಯೋಸ್ಸೇವಾಂ ಕರೋಮ್ಯಹಂ ॥ ೧೦೬ ॥

ಜಟಾವಲ್ಕಲಧಾರೀ ಚ ವಸಾಮಿ ನಗರಾದ್ಬಹಿಃ ।
ಪ್ರತೀಕ್ಷಾಂ ತವ ರಾಜೇಂದ್ರ ವರ್ಷಾಣಿ ಚ ಚತುರ್ದಶ ॥ ೧೦೭ ॥

೧೦೪-೧೦೫. ವಸಿಷ್ಠನು ರಾಮನ ಅಪ್ಪಣೆಯ ಮೇರೆಗೆ ಭರತನಿಗೆ ಇಂತೆಂದು ಬುದ್ಧಿಯನ್ನು ಹೇಳಿದನು. ಭೂಭಾರವನ್ನು ನಾಶಮಾಡಲು ಸಾಕ್ಷಾನ್ಮಹಾವಿಷ್ಣುವು ಇಲ್ಲಿ ರಾಮನಾಗಿ ಹುಟ್ಟಿರುವನು. ದೇವತೆಗಳ ಪ್ರಾರ್ಥನೆಯಂತೆ ರಾವಣಾದಿ ದುಷ್ಟರನ್ನು ಕೊಲ್ಲುವುದಕ್ಕೆ ಹೋಗುತ್ತಿರುವನು. ಆದುದರಿಂದ ಆ ರಾಮನೊಡನೆ ನೀನು ಹಠವನ್ನು ಮಾಡಿ ವಿಘ್ನವನ್ನು ಮಾಡಬೇಡ. ಎಂದನು.

೧೦೬. ಈ ಮಾತಿನಿಂದ ಭರತನು ರಾಮನ ವಿಷಯವನ್ನು ತಿಳಿದವನಾಗಿ ಅವನಿಗೆ ಇಂತೆಂದನು ಎಲೈ ರಾಮನೆ! ರಾಜ್ಯಭಾರಕ್ಕೋಸ್ಕರವಾಗಿ ನಿನ್ನ ಪಾದುಕೆಗಳನ್ನು ಕೊಡು ನಾನು ಅವುಗಳ ಸೇವೆಯನ್ನು ಮಾಡಿಕೊಂಡು ರಾಜ್ಯಭಾರವನ್ನು ಮಾಡುತ್ತೇನೆ.

೧೦೭. ನಾನೂ ಕೂಡ ನಿನ್ನಂತೆಯೇ ಜಡೆಯನ್ನೂ ನಾರುಡೆಯನ್ನೂ ಧರಿಸಿ ಪಟ್ಟಣದಿಂದ ಹೊರಗಡೆಯಲ್ಲಿಯೇ ಇದ್ದುಕೊಂಡು ಇರುವೆನು. ಮತ್ತು ಹದಿನಾಲ್ಕು ವರ್ಷಗಳ ಕಾಲ ಹೀಗಿದ್ದುಕೊಂಡು ನಿನ್ನನ್ನೇ ನಿರೀಕ್ಷಿಸುತ್ತಿರುವೆನು

ಕೃತ್ವಾ ಚತುರ್ದಶೇ ವರ್ಷೇ ಪೂರ್ಣೇ ಗುಪ್ತೇ ರವೌ ತ್ವಹಂ ।
ಪ್ರವೇಕ್ಷ್ಯಾಮ್ಯನಲಂ ರಾಮ ಸತ್ಯಂ ಏತದ್ವಚೋ ಮಮ ॥ ೧೦೮ ॥

ತತ್ತಸ್ಯ ವಚನಂ ಶ್ರುತ್ವಾ ತಥೇತ್ಯುಕ್ತ್ವಾ ರಘೂತ್ತಮಃ ।
ರಾಜ್ಯಾರ್ಥಂ ಸ್ವೀಯಪದಯೋಃ ಪಾದುಕೇ ರತ್ನಭೂಷಿತೇ ॥ ೧೦೯ ॥

ದದೌ ರಾಮಸ್ತದಾ ತಸ್ಮೈ ತತಸ್ತಂ ಸ ವ್ಯಸರ್ಜಯತ್ ।
ಗೃಹೀತ್ವಾ ಪಾದುಕೇ ದಿವ್ಯೇ ಭರತೋ ರತ್ನಭೂಷಿತೇ ॥ ೧೧೦ ॥

ಮಸ್ತಕೋಪರಿ ತೇ ಬಧ್ವಾ ಕೃತಕೃತ್ಯಮಮನ್ಯತ ।
ತತೋ ನತ್ವಾ ರಘುಶ್ರೇಷ್ಠಂ ಪರಿಕ್ರಮ್ಯ ಪುನಃ ಪುನಃ ॥ ೧೧೧ ॥

---

೧೦೮. ಹದಿನಾಲ್ಕು ವರ್ಷಗಳಾಗಿ ಸೂರ್ಯನು ಕೊನೆಯ ದಿನ ಅಸ್ತವಾಗುವವರಿಗೂ ನಿನ್ನನ್ನು ನೋಡುತ್ತಿದ್ದು ನೀನು ಬರದಿದ್ದರೆ ನಾನು ಅಗ್ನಿಪ್ರವೇಶವನ್ನು ಮಾಡುವೆನು. ಎಲೈ ರಾಮನೆ! ಈ ನನ್ನ ಮಾತು ಸತ್ಯವಾದುದು.

೧೦೯. ಭರತನ ಈ ಮಾತನ್ನು ಕೇಳಿ ರಾಮನು ಹಾಗೆಯೇ ಆಗಲೆಂದು ಹೇಳಿದನು. ಮತ್ತು ಆ ಭರತನು ಕೇಳಿದಂತೆ ರಾಜ್ಯಭಾರ ಮಾಡಲು ತನ್ನ ರತ್ನ ಪಾದುಕೆಗಳನ್ನು ಕೊಟ್ಟನು.

೧೧೦. ಈ ರೀತಿಯಾಗಿ ಆ ಪಾದುಕೆಗಳನ್ನು ರಾಮನು ಭರತನಿಗೆ ಕೊಟ್ಟು ಅವನನ್ನು ಕಳುಹಿಸಿದನು. ಭರತನು ಆ ರಾಮನ ರತ್ನಭೂಷಿತವಾದ ಪಾದುಕೆಗಳನ್ನು ತೆಗೆದುಕೊಂಡನು.

೧೧೧. ಅವನ್ನು ತಲೆಯಮೇಲೆ ಇಟ್ಟುಕೊಂಡು ತಾನು ಕೃತಕೃತ್ಯನಾದೆನೆಂದು ತಿಳಿದುಕೊಂಡನು. ಅನಂತರ ಆ ರಾಮನಿಗೆ ನಮಸ್ಕರಿಸಿ ಪ್ರದಕ್ಷಿಣೆ ಮಾಡಿ ಮತ್ತೆ ಮತ್ತೆ ನಮಸ್ಕರಿಸಿದನು.

ಸೈನ್ಯೇನ ಮಾತೃಭಿಶ್ಶೀಘ್ರಂ ರಾಮಮಾಮಂತ್ರ್ಯ ಸೋ ಯಯೌ ।
ಸಂಪ್ರಾರ್ಥಯತ್ಕೈಕಯೀ ಸಾ ರಾಮಚಂದ್ರಂ ಪುನಃ ಪುನಃ ॥ ೧೧೨ ॥

ಮಯಾಪರಾಧಿತಂ ರಾಮ ತತ್ ಕ್ಷಂತವ್ಯಂ ರಘೂತ್ತಮ ।
ತಾಮಾಹ ರಾಮಚಂದ್ರೋಽಪಿ ನ ತ್ವಯಾ ಮೇಽಪರಾಧಿತಂ ॥ ೧೧೩ ॥

ಮಚ್ಛಂದಾನ್ಮಂಥರಾವಾಕ್ಯಾತ್ ತ್ವಂ ವಾಣ್ಯಾ ಮೋಹಿತಾ ತದಾ ।
ಸುಖಂ ಗಚ್ಛಾಂಬ ಸ್ವಪುರೀಂ ನ ಕ್ರೋಧೋಽಸ್ತಿ ಮಮ ತ್ವಯಿ ॥ ೧೧೪ ॥

ಇತ್ಯುಕ್ತಾ ರಾಮಚಂದ್ರೇಣ ಭರತೇನ ನ್ಯವರ್ತತ ।
ಭರತಃ ಪೂರ್ವಮಾರ್ಗೇಣ ಯಯೌ ಸ್ವನಗರೀಂ ಮುದಾ ॥ ೧೧೫ ॥

---

೧೧೨. ಅನಂತರ ರಾಮನಿಗೆ ಹೋಗುತ್ತೇನೆಂದು ಹೇಳಿ ಸೈನ್ಯವನ್ನೂ ತಾಯಿಯರನ್ನೂ ಕರೆದುಕೊಂಡು ಹೊರಟನು. ಆಗ ಕೈಕೆಯಿಯೂ ಕೂಡ ರಾಮಚಂದ್ರನನ್ನು ಬಹುವಾಗಿ ಪ್ರಾರ್ಥಿಸಿದಳು.

೧೧೩. ಎಲೈ ರಘೂತ್ತಮನಾದ ರಾಮನೆ! ನಾನು ನಿನ್ನ ವಿಷಯದಲ್ಲಿ ಬಹುವಾದ ಅಪರಾಧವನ್ನು ಮಾಡಿರುವೆನು. ಅದನ್ನು ಕ್ಷಮಿಸು. ಎಂದು ಆ ಕೈಕೇಯಿಯು ಹೇಳಲು ರಾಮನು ಅಮ್ಮಾ! ನೀನು ನನಗೆ ಅಪರಾಧವನ್ನೇನೂ ಮಾಡಿಲ್ಲ.

೧೧೪. ನನ್ನ ಇಷ್ಟದಂತೆಯೇ ಆ ಸರಸ್ವತಿಯು ಮಂಥರೆಯ ಬಾಯಿಂದ ಹೊರಟು ನಿನಗೆ ಅವಿವೇಕ ಬರುವಂತೆ ಮಾಡಿದಳು. ಅಮ್ಮಾ! ಸುಖವಾಗಿ ಹೋಗು. ನಿನ್ನಮೇಲೆ ನನಗೆ ಯಾವ ವಿಧವಾದ ಕೋಪವೂ ಇರುವುದಿಲ್ಲ. ಎಂದನು.

೧೧೫. ರಾಮನು ಹೀಗೆಂದು ಹೇಳಲು ಆಕೆಯು ಭರತನೊಡನೆ ಹಿಂದಿರುಗಿದಳು. ಭರತನು ತಾನು ಬಂದ ದಾರಿಯಲ್ಲಿಯೇ ತನ್ನ ಪಟ್ಟಣಕ್ಕೆ ಸಂತೋಷದಿಂದ ಹೊರಟುಹೋದನು.

ಸರ್ವಾ೯ ಸ್ಥಾಪ್ಯ ನಗರ್ಯಾಂ ತು ನಂದಿಗ್ರಾಮಮುಪಕಲ್ಪಯತ್ ।
ತಸ್ಥೌ ಸ ಭರತಸ್ತತ್ರ ಸ್ಥಾಪ್ಯ ಸಿಂಹಾಸನೋಪರಿ ॥ ೧೧೬ ॥

ರಾಮಸ್ಯ ಪಾದುಕೇ ದಿವ್ಯೇ ಫಲಮೂಲಾಶನಃ ಸ್ವಯಂ ।
ರಾಜಕಾರ್ಯಾಣಿ ಯಾವಂತಿ ಸರ್ವಾಣಿ ಪೃಥಿವೀಪತೇಃ ॥ ೧೧೭ ॥

ತಾನಿ ಪಾದುಕಯೋಸ್ಸಮ್ಯಜ್ನಿವೇದಯತಿ ರಾಘವಃ ।
ಗಣಯ೯ ದಿವಸಾನ್ಯೇವ ರಾಮಾಗಮನಕಾಂಕ್ಷಯಾ ॥ ೧೧೮ ॥

ಸ್ಥಿತೋ ರಾಮಾರ್ಪಿತಮನಾಃ ಸಾಕ್ಷಾದ್ಬ್ರಹ್ಮ ಮುನಿರ್ಯಥಾ ।
ರಾಮೋಪಿ ಚಿತ್ರಕೂಟಾದ್ರೌ ವರ್ಷ ಮುನಿಭಿರಾದೃತಃ ॥ ೧೧೯ ॥

೧೧೬-೧೧೭. ಸೈನ್ಯ ಮುಂತಾದ ಪರಿವಾರಗಳನ್ನೆಲ್ಲಾ ಅಯೋಧ್ಯೆಯಲ್ಲಿಯೇ ನಿಲ್ಲಿಸಿ ತಾನು ಮಾತ್ರ ನಂದಿ ಗ್ರಾಮದಲ್ಲಿ ನಿಂತನು. ಅಲ್ಲಿ ಸಿಂಹಾಸನವನ್ನಿಟ್ಟು ಅದರಮೇಲೆ ರಾಮ ಪಾದುಕೆಗಳನ್ನಿಟ್ಟು ಸೇವಿಸುತ್ತ ಗೆಡ್ಡೆಗೆಣಸುಗಳನ್ನೂ ಹಣ್ಣು ಹಂಪಲುಗಳನ್ನೂ ತಿಂದುಕೊಂಡು ರಾಜನು ಮಾಡಬೇಕಾದ ರಾಜಕಾರ್ಯಗಳನ್ನೆಲ್ಲಾ ಮಾಡುತ್ತಿದ್ದನು.

೧೧೮. ತಾನು ಮಾಡುತ್ತಿದ್ದ ಆ ರಾಜಕಾರ್ಯಗಳನ್ನು ಆ ಪಾದುಕೆಗಳಿಗೆ ವಿಜ್ಞಾಪಿಸುತ್ತಿದ್ದನು. ಹೀಗೆ ಮಾಡುತ್ತಾ ರಾಮನನ್ನು ನಿರೀಕ್ಷಿಸುತ್ತ ಹದಿನಾಲ್ಕು ವರ್ಷಗಳನ್ನು ಲೆಕ್ಕಹಾಕುತ್ತಿದ್ದನು.

೧೧೯-೧೨೦. ಮುನಿಯು ಬ್ರಹ್ಮನನ್ನು ಸಾಕ್ಷಾತ್ಕರಿಸಲು ನಿರೀಕ್ಷಿಸುತ್ತಿರುವಂತೆ ಆ ಭರತನು ರಾಮನನ್ನು ನಿರೀಕ್ಷಿಸುತ್ತಿದ್ದನು. ಇತ್ತ ರಾಮನು ಆ ಚಿತ್ರಕೂಟಪರ್ವತದಲ್ಲಿ ವಾಸಮಾಡಿಕೊಂಡಿರುತ್ತ ಋಷಿಗಳಿಗೆ ಆಪ್ತನಾಗಿದ್ದು

ಚಕಾರ ಸೀತಯಾ ಕ್ರೀಡಾಂ ವಿಪಿನೇ ರಮ್ಯಪರ್ವತೇ ।
ಮನಶ್ಶಿಲಾಸು ತಿಲಕಂ ಸೀತಾಯಾಃ ನಿಟಿಲೇಽಕರೋತ್ ॥ ೧೨೦ ॥

ಗಂಡಯೋಶ್ಚಿತ್ರವಲ್ಲೀಸ್ಸಂಚ್ಚಕಾರ ನಿಜಹಸ್ತತಃ ।
ವೃಕ್ಷಾರುಣದಳೈಶ್ಚಿತ್ರೈಃ ಕೋಮಲೈಃ ಕುಸುಮಾದಿಭಿಃ ॥ ೧೨೧ ॥

ಏವಂ ಕ್ರೀಡೇ ಸುಖಂ ರಾಮಸ್ತಸ್ಥೌ ಪತ್ನ್ಯಾನುಜೇನ ಚ ।
ನಾಗರಾಸ್ತಂ ಸದಾ ಜಗ್ಮುಃ ರಾಮದರ್ಶನಲಾಲಸಾಃ ॥ ೧೨೨ ॥

ದೃಷ್ಟ್ವಾ ತಜ್ಜನಸಂಬಾಧಂ ರಾಮಸ್ತತ್ಯಾಜ ತಂ ಗಿರಿಂ ।
ಅನ್ವಗಾತ್ ಸೀತಯಾ ಭ್ರಾತ್ರಾ ಹ್ಯತ್ರೇರಾಶ್ರಮಮುತ್ತಮಂ ॥ ೧೨೩ ॥

ಕೊಂಡು ಆ ರಮ್ಯವಾದ ಕಾನನದಲ್ಲಿ ಸೀತೆಯೊಡನೆ ಅನೇಕ ವಿಧವಾಗಿ ಕ್ರೀಡಿಸಿದನು. ಮಣ್ಣು ಶಿಲೆಯೇ ಮುಂತಾದ ಬಣ್ಣಗಳಿಂದ ಸೀತೆಯ ಹಣೆಯಲ್ಲಿ ತಿಲಕವನ್ನು ಇಡುತ್ತಿದ್ದನು.

೧೨೧. ಕಪೋಲಗಳಲ್ಲಿ ಬಗೆ ಬಗೆಯ ಹಸೆಗಳನ್ನು ಬರೆಯುತ್ತಿದ್ದನು. ಮರಗಳ ಕೋಮಲವಾದ ಚಿಗುರುಗಳಿಂದಲೂ ಹೂವುಗಳಿಂದಲೂ ಆಕೆಯನ್ನು ಅಲಂಕರಿಸುತ್ತ ಕ್ರೀಡಿಸುತ್ತಿದ್ದನು.

೧೨೨. ರಾಮನು ಈ ರೀತಿಯಾಗಿ ಕ್ರೀಡಿಸುತ್ತ ಹೆಂಡತಿಯೊಡನೆಯೂ ತಮ್ಮನೊಡನೆಯೂ ಸುಖವಾಗಿದ್ದನು. ಆಗ ರಾಮನನ್ನು ನೋಡಬೇಕೆಂದು ಅಪೇಕ್ಷಿಸುತ್ತ ಪಟ್ಟಣಿಗರೆಲ್ಲರೂ ಆಗಾಗ್ಗೆ ಅಲ್ಲಿಗೆ ಹೋಗುತ್ತಿದ್ದರು.

೧೨೩. ಹೀಗೆ ನಗರದವರು ಬಹುವಾಗಿ ಬರುತ್ತಿರಲು ಈ ತೊಂದರೆಯನ್ನು ರಾಮನು ನೋಡಿ ಆ ಜಾಗವನ್ನು ಬಿಟ್ಟು ಹೊರಟನು. ಜೊತೆಯಲ್ಲಿ ಸೀತೆಯನ್ನೂ ಲಕ್ಷ್ಮಣನನ್ನೂ ಕರೆದುಕೊಂಡು ಅತ್ರಿಯ ಆಶ್ರಮಕ್ಕೆ ಹೋದನು.

ನೆತ್ವಾತ್ರಿಂ ಮಾನಿತಸ್ತೇನ ತಸ್ಥೌ ತತ್ರ ದಿನತ್ರಯಂ ।
ಗೃಹಸ್ಥಾಮನಸೂಯಾಂ ತಾಂ ಸೀತಾತ್ರೇರ್ವಚನಾತ್ತದಾ ॥ ೧೨೪ ॥

ನತ್ವಾ ತಯಾಲಿಂಗಿತಾ ಸಾ ತದಂಕೇ ಸಮುಪಾವಿಶತ್ ।
ಅನಸೂಯಾ ತದಾ ಸೀತಾಂ ಪೂಜಯಾಮಾಸ ಸಾದರಂ ॥ ೧೨೫ ॥

ದಿವ್ಯೇ ದದೌ ಕುಂಡಲೇ ದ್ವೇ ನಿರ್ಮಿತೇ ವಿಶ್ವಕರ್ಮಣಾ ।
ದುಕೂಲೇ ದ್ವೇ ದದೌ ತಸ್ಯೈ ನಿರ್ಮಲೇ ಭಕ್ತಿಸಂಯುತಾ ॥ ೧೨೬ ॥

ಅಂಗರಾಗಂ ಚ ಸೀತಾಯೈ ದದಾವತ್ರೇಸ್ತು ಸಾ ಪ್ರಿಯಾ ।
ನ ತ್ಯಕ್ಷ್ಯತೇಂಗಶೋಭಾ ತ್ವಾಂ ಕದಾಪಿ ಜನಕಾತ್ಮಜೇ ॥ ೧೨೭ ॥

ಪಾತಿವ್ರತ್ಯಂ ಪುರಸ್ಕೃತ್ಯ ರಾಮಮನ್ವೇಹಿ ಜಾನಕಿ ।
ಕುಶಲೀ ರಾಘವೋ ಯಾತು ತ್ವಯಾ ಭ್ರಾತ್ರಾ ಪುನರ್ಗೃಹಂ ॥ ೧೨೮ ॥

೧೨೪–೧೨೫. ಅಲ್ಲಿ ಅತ್ರಿಯಿಂದ ಗೌರವಿತನಾಗಿ ಮೂರು ದಿನಗಳು ಅಲ್ಲಿಯೇ ಇದ್ದನು. ಅತ್ರಿಯ ಮಾತಿನಂತೆ ಸೀತೆಯು ಗುಹೆಯಲ್ಲಿರುವ ಅನಸೂಯೆಯನ್ನು ಹೋಗಿ ನಮಸ್ಕರಿಸಿದಳು. ಆಗ ಆ ಅನಸೂಯೆಯು ಆ ಸೀತೆಯನ್ನು ಆಲಿಂಗಿಸಿಕೊಂಡು ತನ್ನ ತೊಡೆಯಮೇಲೆ ಕೂರಿಸಿಕೊಂಡಳು. ಮತ್ತು ಆಕೆಯು ಆದರದಿಂದ ಆ ಸೀತೆಯನ್ನು ಉಪಚರಿಸಿದಳು.

೧೨೬-೧೨೭. ಅನಂತರ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ಎರಡು ಓಲೆಗಳನ್ನೂ ಎರಡು ದುಕೂಲಗಳನ್ನೂ ಭಕ್ತಿಯಿಂದ ಆಕೆಗೆ ಕೊಟ್ಟಳು. ದೇಹಕ್ಕೆ ಹಚ್ಚಿಕೊಳ್ಳಲು ಅಂಗರಾಗವನ್ನು ಕೊಟ್ಟಳು. ಎಲೈ ಜನಕಾತ್ಮಜಯೆ ! ನೀನು ಇದನ್ನು ಮೈಗೆ ಹಚ್ಚಿಕೊಂಡರೆ ನಿನ್ನ ದೇಹದ ಕಾಂತಿಯು ಯಾವಾಗಲೂ ಹೋಗುವುದೇ ಇಲ್ಲ.

೧೨೮. ಯಾವಾಗಲೂ ಪತಿವ್ರತೆಯಾಗಿದ್ದುಕೊಂಡೇ ರಾಮನನ್ನು ಅನುಸರಿಸಿಕೊಂಡಿರು. ರಾಘವನು ನಿನ್ನ ಈ ಚರ್ಯೆಯಿಂದ ಕುಶಲಿಯಾಗಿ ನಿನ್ನೊಡನೆಯೂ ಲಕ್ಷ್ಮಣನೊಡನೆಯೂ ಮತ್ತೆ ಮನೆಗೆ ಹಿಂದಿರುಗಿ ಹೋಗಲಿ. ಎಂದಳು.

ಭೋಜಯಿತ್ವಾ ಯಥಾನ್ಯಾಯ್ಯಂ ರಾಮಂ ಸೀತಾಸಮನ್ವಿತಂ ।
ಅತ್ರಿರ್ವಿಸರ್ಜಯಾಮಾಸ ರಾಮೋ ನತ್ವಾ ಯಯೌ ವನಂ ॥ ೧೨೯ ॥

ಏವಂ ವರ್ಷಮತಿಕ್ರಾಂತಂ ರಾಮಸ್ಯ ಗಿರಿವಾಸಿನಃ ।
ಯಥಾಸುಖಂ ಲಕ್ಷ್ಮಣೇನ ಜಾನಕ್ಯಾ ಸಹಿತಸ್ಯ ಚ ॥ ೧೩೦ ॥

ಏವಂ ಗಿರೀಂದ್ರಜೇಯೋಧ್ಯಾಪುರ್ಯಾಂ ರಾಮೇಣ ಯತ್ಕೃತಂ ।
ಚರಿತ್ರಂ ತನ್ಮಯಾ ಕಿಂಚಿತ್ತ್ವದಗ್ರೇ ವಿನಿವೇದಿತಂ ॥ ೧೩೧ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಸಾರಕಾಂಡೇ ಅಯೋಧ್ಯಾ ಚರಿತ್ರೇ ದಂಡಕಕಾನನ ಪ್ರವೇಶನಂ ನಾಮ ಷಷ್ಠಸ್ಸರ್ಗಃ

---

೧೨೯. ಅನಂತರ ಅತ್ರಿಯು ರಾಮನನ್ನೂ ಸೀತೆಯನ್ನೂ ಉಪಚರಿಸುತ್ತ ಭೋಜನಮಾಡಿಸಿದನು. ಆಮೇಲೆ ಕಳುಹಿಸಿಕೊಟ್ಟನು. ರಾಮನು ಅತ್ರಿಗೆ ನಮಸ್ಕರಿಸಿ ಮುಂದಿನ ವನಕ್ಕೆ ಹೊರಟನು.

೧೩೦. ರಾಮನು ಈ ಚಿತ್ರಕೂಟದಲ್ಲಿ ವಾಸಮಾಡಿಕೊಂಡಿರಲು ಒಂದು ವರ್ಷಕಾಲವು ಕಳೆಯಿತು. ಇಷ್ಟುದಿವಸವೂ ರಾಮನು ಲಕ್ಷ್ಮಣನೊಡನೆಯೂ ಸೀತೆಯೊಡನೆಯೂ ಸುಖವಾಗಿದ್ದನು.

೧೩೧. ಎಲೈ ಪಾರ್ವತಿಯೆ! ರಾಮನು ಅಯೋಧ್ಯೆಯಲ್ಲಿ ನಡೆಸಿದ ಕೃತ್ಯಗಳಲ್ಲಿ ಸ್ವಲ್ಪವನ್ನು ಮಾತ್ರ ನಿನ್ನೆದುರಿಗೆ ವಿವರಿಸಿದ್ದೇನೆ.

ಇಂತು ಶ್ರೀವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಸಾರಕಾಂಡದ ಅಯೋಧ್ಯಾಚರಿತ್ರೆಯಲ್ಲಿ ರಾಮನ ದಂಡಕಾವನ ಪ್ರವೇಶವೆಂಬ ಆರನೆಯ ಸರ್ಗವು ಸಮಾಪ್ತವು

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

॥ ಆರನೆಯ ಸರ್ಗದ ಸಾರಾಂಶವು ॥

ಶ್ರೀರಾಮನು ಅಯೋಧ್ಯೆಯಲ್ಲಿ ಸೀತೆಯೊಡನೆ ಇರುತ್ತಿರಲು ಅವನ ಬಳಿಗೆ ನಾರದ ಋಷಿಯು ಬಂದನು. ಆ ಮುನಿಯು ರಾಮನನ್ನು ಕುರಿತು "ನೀನು ರಾವಣನನ್ನು ಕೊಂದು ಆಮೇಲೆ ರಾಜ್ಯಭಾರವನ್ನು ಮಾಡು" ಎಂದೆನ್ನಲು, ಅವನಿಗೆ ಹಾಗೆಯೇ ಆಗಲೆಂದು ಹೇಳಿ ಕಳುಹಿಸಿಬಿಟ್ಟನು.

ಅನಂತರ ಆ ರಾಮನು ಸೀತೆಯನ್ನು ಕುರಿತು "ಎಲೈ ಸೀತೆಯೇ! ರಾಜನು ನನಗೆ ನಾಳೆ ಯೌವರಾಜ್ಯದಲ್ಲಿ ಅಭಿಷೇಕ ಮಾಡುವುದಕ್ಕೆ ಪ್ರಯತ್ನಿಸುವನು. ನಾನು ಅದಕ್ಕೆ ವಿಘ್ನವನ್ನು ಉಂಟುಮಾಡಿ ಲಕ್ಷ್ಮಣನೊಡನೆ ಕಾಡಿಗೆ ಹೋಗುವೆನು. ಅಲ್ಲಿ ರಾವಣನೇ ಮುಂತಾದವರನ್ನು ಕೊಲ್ಲುವೆನು. ನೀನು ರಾಜನನ್ನೂ ರಾಣಿಯನ್ನೂ ಸೇವಿಸಿಕೊಂಡು ಇಲ್ಲಿಯೇ ಇರು" ಎಂದನು.

ಇದನ್ನು ಕೇಳಿದ ಸೀತೆಯು ಆ ರಾಮನಿಗೆ ನಮಸ್ಕರಿಸಿ, "ಎಲೈ ರಾಮನೆ! ನನ್ನನ್ನು ನಿನ್ನ ಜೊತೆಯಲ್ಲಿ ಕರೆದುಕೊಂಡು ಹೋಗು. ಹೀಗೆ ಕರೆದುಕೊಂಡು ಹೋಗಲು ಮೂರು ಕಾರಣಗಳುಂಟು. ನಾನು ಚಿಕ್ಕವಳಾಗಿರುವಾಗ ನನ್ನ ಕೈ ರೇಖೆಗಳನ್ನು ಒಬ್ಬ ಬ್ರಾಹ್ಮಣನು ನೋಡಿ, 'ನೀನು ಗಂಡನೊಡನೆ ಕಾಡಿಗೆ ಹೋಗುತ್ತೀಯೆ' ಎಂದು ಹೇಳಿರುವನು. ಅವನ ಮಾತು ನಿಜವಾಗಲಿ. ಇದು ಮೊದಲನೆಯ ಕಾರಣ.

ನನಗೆ ಸ್ವಯಂವರವಾಗುವಾಗ ನೀನು ಬಿಲ್ಲನ್ನೆತ್ತಲು ಬಿಲ್ಲಿನ ಸಮೀಪಕ್ಕೆ ಬಂದೆಯಷ್ಟೆ. ಆಗ ನಾನು ದೇವತೆಗಳನ್ನು ಕುರಿತು, 'ಈ ರಾಮನು ಧನುಸ್ಸನ್ನು ಹೆದೆಯೇರಿಸುವಂತೆ ಅನುಗ್ರಹಿಸಿರಿ. ಇವನನ್ನು ನಾನು ಮದುವೆಯಾದಮೇಲೆ ಹನ್ನೆರಡುವರ್ಷಗಳಕಾಲ ಕಾಡಿನಲ್ಲಿ ಮುನಿವೃತ್ತಿಯಿಂದಿರುವೆನು' ಎಂದು ಹೇಳಿರುವೆನು. ಅದನ್ನು ನಿಶ್ಚಯವಾದುದನ್ನಾಗಿ ಮಾಡು. ಇದು ಎರಡನೆಯ ಕಾರಣವು.

ನಾನು ಅನೇಕ ರಾಮಾಯಣಗಳನ್ನು ಕೇಳಿರುವೆನು. ಆ ರಾಮಾಯಣಗಳೊಂದರಲ್ಲಿಯೂ ಶ್ರೀರಾಮನು ಸೀತೆಯನ್ನು ಬಿಟ್ಟು ಕಾಡಿಗೆ ಹೋಗಿಲ್ಲ.

ಇದು ಮೂರನೆಯ ಕಾರಣ. ಆದ್ದರಿಂದ ನನ್ನನ್ನು ನೀನು ಕಾಡಿಗೆ ಕರೆದು ಕೊಂಡು ಹೋಗಲೇಬೇಕು'' ಎಂದಳು. ರಾಮನು ಸೀತೆಯ ಈ ಮಾತನ್ನು ಕೇಳಿ ನಕ್ಕು ಹಾಗೆಯೇ ಆಗಲೆಂದನು.

ಇತ್ತ ದಶರಥನು ರಾಮನಿಗೆ ಯುವರಾಜಪದವನ್ನು ಕಟ್ಟಲು ಗುರುವಿ ನೊಡನೆ ಆಲೋಚಿಸಲು ಆ ಗುರುವು ರಾಜನನ್ನು ಕೌಸಲ್ಯೆಯ ಮನೆಗೆ ಕರೆದು ಕೊಂಡು ಹೋಗಿ ಅಲ್ಲಿ ದಶರಥ, ಕೌಸಲ್ಯೆ, ಸುಮಿತ್ರೆ ಈ ಮೂವರನ್ನೂ ಕೂರಿಸಿ ಕೊಂಡು "ರಾಮನು ರಾವಣನನ್ನು ಕೊಲ್ಲಲು ನಾಳೆ ದಂಡಕಾರಣ್ಯಕ್ಕೆ ಹೋಗು ವನು ಆದರೆ ನೀವು ಏನೂ ತಿಳಿಯದವರಂತೆ ಇದ್ದು ಎಲ್ಲವನ್ನೂ ಸಿದ್ಧಪಡಿಸಿರಿ. ರಾಜರನ್ನು ಕರೆಸಿರಿ. ರಾಮನ ವಿರಹದಿಂದಲೂ, ಬ್ರಾಹ್ಮಣನ ಶಾಪದಿಂದಲೂ ಈ ದಶರಥನು ಬೇಗನೆ ಸಾಯುವನು. ಈ ಕೌಸಲ್ಯೆಯು ರಾಮನು ಪಟ್ಟಾಭಿಷಿಕ್ತ ನಾಗುವುದನ್ನು ನೋಡುವಳು. ರಾಜನೂ ಕೂಡ ದೇವತೆಗಳೊಡನೆ ಅಂತರಿಕ್ಷ ದಲ್ಲಿ ವಿಮಾನದಲ್ಲಿದ್ದುಕೊಂಡು ನೋಡುವನು. ಇದು ದೈವನಿಯಮವು. ಮಾರಲಾಗುವುದಿಲ್ಲ" ಎಂದನು.

ಇದನ್ನು ತಿಳಿದು ದಶರಥನು ಹೊರಗೆ ಬಂದು ಅಭಿಷೇಕಕ್ಕೆ ಸಿದ್ಧಪಡಿಸಿದನು. ಈ ಸಿದ್ಧತೆಯೆಲ್ಲವೂ ಗುರುವಾದ ವಸಿಷ್ಠನ ಹೇಳಿಕೆಯಂತೆಯೇ ನಡೆಯಿತು. ಅನಂತರ ಗುರುವು ರಾಮನ ಬಳಿಗೆ ಹೋಗಿ ಅವನಿಗೆ "ಎಲೈ ರಾಮನೆ! ನೀನು ನಾಳೆ ದಂಡಕೆಗೆ ಹೋಗುತ್ತೀಯೆ. ಅಲ್ಲಿ ರಾವಣಾದಿಗಳನ್ನು ಕೊಲ್ಲುತ್ತೀಯೆ. ಆದರೆ ಇಂದು ನೀನು ಲೋಕದ ರೀತಿಯನ್ನನುಸರಿಸಿ ಸೀತೆಯೊಡನೆ ಉಪವಾಸ ಮಾಡು'' ಎಂದು ಹೇಳಿ ಹೊರಟುಹೋದನು. ಕೌಸಲ್ಯಾ ಸುಮಿತ್ರೆಯರೂ ಕೂಡ ರಾಮನ ಅಭಿಷೇಕವು ಮಿಥ್ಯೆಯೆಂದು ತಿಳಿದಿದ್ದರೂ ಆ ವಿಘ್ನದ ಶಾಂತಿ ಗೋಸ್ಕರ ಮನೆಯಲ್ಲಿ ದೇವಿಯ ಪೂಜೆಯನ್ನು ಮಾಡಿ ಅನೇಕವಾದ ದಾನಗಳನ್ನು ಕೊಟ್ಟರು.

ಹೀಗೆ ನಡೆಯುತ್ತಿರಲು ಕೈಕೇಯಿಯ ದಾಸಿಯಾದ ಮಂಥರೆಯು ಮಹಡಿ ಮೇಲೆ ನಿಂತು ಊರೆಲ್ಲವೂ ಶೃಂಗಾರವಾಗುತ್ತಿರುವುದನ್ನು ನೋಡಿ ಇದರಿಂದ ರಾಮನಿಗೆ ಅಭಿಷೇಕವಾಗುವುದೆಂದು ತಿಳಿದು ಅದನ್ನು ಒಡತಿಗೆ ತಿಳಿಸಿದಳು. ಇದರಿಂದ ಸಂತೋಷಗೊಂಡ ಕೈಕೇಯಿಯು ಅವಳಿಗೆ ಬಹುಮಾನವನ್ನು ಕೊಟ್ಟಳು. ಆಗ ದಾಸಿಯು ದೇವವಾಣಿಯಿಂದ ಮೋಹಿತಳಾಗಿ "ಎಲೈ ಕೈಕೇಯಿಯೆ! ನೀನು ಕೆಟ್ಟೆ. ರಾಮನಿಗೆ ರಾಜ್ಯಬಂದರೆ ನೀನು ಕೌಸಲ್ಯೆಗೆ

ದಾಸಿಯಾಗಬೇಕಾಗುತ್ತದೆ. ಆದ್ದರಿಂದ ನಾನು ಹೇಳುವುದನ್ನು ಕೇಳು. ರಾಜನು ನಿನಗೆ ಹಿಂದೆ ಕೊಟ್ಟಿದ್ದ ಎರಡು ವರಗಳನ್ನು ಈಗ ಕೇಳಿಕೊ. ಅದರಲ್ಲಿ ಒಂದಕ್ಕೆ ರಾಮನು ಹದಿನಾಲ್ಕುವರ್ಷಕಾಲ ಕಾಡಿಗೆ ಹೋಗುವಂತೆಯೂ ಮತ್ತೊಂದಕ್ಕೆ ಭರತನಿಗೆ ರಾಜ್ಯವನ್ನು ಕೊಡುವಂತೆಯೂ ಕೇಳಿಕೊ"-ಎಂದಳು.

ಕೈಕೇಯಿಯೂ ದೇವವಾಣಿಯಿಂದ ಮೋಹಿತಳಾದಳು. ತಾನು ಕೋಪ ಸೂಚಕ ಮನೆಗೆ ಹೋಗಿ ಅಲ್ಲಿಗೆ ರಾಜನು ಬರುವಂತೆ ಮಾಡಿಕೊಂಡು ಅವನಿಗೆ ಇದನ್ನು ತಿಳಿಸಲು ಆತನು ಮೂರ್ಛೆಹೋದನು. ರಾಜನನ್ನು ಹುಡುಕಿಕೊಂಡು ಬಂದ ಸುಮಂತ್ರನಿಗೆ ಕೈಕೇಯಿಯು ರಾಮನನ್ನು ಕರೆತರುವಂತೆ ಹೇಳಲು ಅದಕ್ಕೆ ಆತನು ಒಪ್ಪದಿರಲು, ಆಗ ದಶರಥನೇ ರಾಮನನ್ನು ಕರೆತಾರೆಂದು ಹೇಳುವನು. ಆಗ ಸುಮಂತ್ರನು ರಾಮನನ್ನು ಕರೆತರಲು ಆ ರಾಮನಿಗೆ ಕೈಕೇಯಿಯು ಎಲ್ಲವನ್ನೂ ತಿಳಿಸಿದಳು. ರಾಮನು ಹಾಗೆಯೇ ಆಗಲೆಂದು ಒಪ್ಪಿಕೊಂಡನು.

ಅನಂತರ ರಾಮನು ಎಲ್ಲರಿಗೂ ಹೇಳಿ ಹೊರಡಲು ಸಿದ್ಧನಾದನು. ಸೀತೆಯೂ ಲಕ್ಷ್ಮಣನೂ ತಾವೂ ಬರುವುದಾಗಿ ಕೇಳಿಕೊಂಡರು ರಾಮನು ಒಪ್ಪಿ ಎಲ್ಲರನ್ನೂ ಸಮಾಧಾನಪಡಿಸಿ ಅವರೊಡನೆ ಕಾಡಿಗೆ ಹೊರಟನು. ಪಟ್ಟಣದವರೆಲ್ಲರೂ ತಾವೂ ದುಃಖಪಡುತ್ತ ಆ ರಾಮನ ಜೊತೆಯಲ್ಲಿ ಹೊರಡಲು ವಾಮದೇವನೆಂಬ ಋಷಿಯು ನಾರದನು ಬಂದುದನ್ನೂ ಶ್ರೀರಾಮನು ರಾವಣನನ್ನು ಕೊಲ್ಲಬೇಕಾದುದನ್ನೂ ತಿಳಿಸಿ ಆ ರಾಮನು ಮಹಾವಿಷ್ಣುವೆಂದೇ ಹೇಳಿದನು.

ರಾಮನಿಗೆ ಹದಿನೆಂಟು ವರ್ಷವಾದಾಗ ಮಾಘಶುಕ್ಲ ಪಂಚಮಿಯ ದಿವಸ ಈ ವನವಾಸವು ಪ್ರಾಪ್ತವಾಯಿತು. ಹೀಗೆ ಹೊರಟ ರಾಮನು ಶೃಂಗಬೇರ ಪುರದಲ್ಲಿದ್ದು ಗುಹನ ಸಹಾಯದಿಂದ ಅಲ್ಲಿ ಅಡ್ಡಲಾಗಿದ್ದ ಗಂಗಾನದಿಯನ್ನು ದಾಟಿದನು. ಆಗ ಸೀತೆಯು ಮತ್ತೆ ಬಂದಾಗ ಗಂಗೆಯನ್ನು ಪೂಜಿಸುವುದಾಗಿ ಪ್ರಾರ್ಥಿಸಿಕೊಂಡಳು. ಮುಂದಕ್ಕೆ ಭರದ್ವಾಜನ ಆಶ್ರಮಕ್ಕೆ ಹೋದನು. ಅಲ್ಲಿದ್ದ ಯಮುನೆಯನ್ನು ದಾಟಿ ವಾಲ್ಮೀಕಿಯ ಆಶ್ರಮಕ್ಕೆ ಹೋದನು. ಮುಂದೆ ಹೊರಟು ಚಿತ್ರಕೂಟದಲ್ಲಿ ನೆಲೆಯಾಗಿ ಬಹುಕಾಲ ನಿಂತನು.

ಹೀಗಿರುತ್ತಿರಲು ಒಂದುದಿನ ರಾಮನು ಸೀತೆಯ ತೊಡೆಯಮೇಲೆ ಮಲಗಿರಲು ಇಂದ್ರನ ಸಂಬಂಧವಾದ ಕಾಗೆಯು ಬಂದು ಸೀತೆಯನ್ನು

ಕಚ್ಚಿ ಬಹುವಾಗಿ ತೊಂದರೆಪಡಿಸಿತು. ಸೀತೆಯು ಗಂಡನಿಗೆ ನಿದ್ರಾಭಂಗವಾಗುವುದೆಂದು ತಿಳಿದು ಎಬ್ಬಿಸಲಿಲ್ಲ. ಅನಂತರ ರಾಮನು ಎಚ್ಚೆತ್ತು ಎದುರಿಗಿರುವ ಕಾಗೆಯನ್ನು ನೋಡಿ ಅದರಮೇಲೆ ಅಸ್ತ್ರವನ್ನು ಬಿಡಲು ಅದು ಕಾಗೆಯನ್ನು ತೊಂದರೆಪಡಿಸಿತು. ಅದನ್ನು ತಪ್ಪಿಸಿಕೊಳ್ಳಲು ಆ ಕಾಗೆಯು ಎಲ್ಲರನ್ನೂ ಮರೆಹೊಕ್ಕೂ ಸಾಧ್ಯವಾಗದೆ ನಾರದನ ಮಾತಿನಂತೆ ಮತ್ತೆ ರಾಮನನ್ನೇ ಶರಣುಹೊಂದಿತು.

ಸುಮಂತ್ರನು ಪಟ್ಟಣಕ್ಕೆ ಹೋಗಿ ರಾಮನು ಕಾಡಿಗೆ ಹೋದ ವಿಷಯವನ್ನು ರಾಜನಿಗೆ ತಿಳಿಸಲು ಇದೇ ದುಃಖದಿಂದ ಆ ರಾಜನು ಮೃತನಾದನು. ರಾಜನು ಸತ್ತ ವಿಷಯವನ್ನು ವಸಿಷ್ಠನು ತಿಳಿದು ಆ ಶವವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿಡಿಸಿ ಸೋದರಮಾವನ ಮನೆಯಲ್ಲಿದ್ದ ಭರತ ಶತ್ರುಘ್ನರನ್ನು ಕರೆಸಿದನು. ಅವರು ಬಂದರು. ಭರತನು ಇದೆಲ್ಲವೂ ತಾಯಿಯಿಂದ ಆದ ಕೆಲಸವೆಂದು ತಿಳಿದನು. ಮತ್ತು ಆ ರಾಜನಿಗೆ ಅಗ್ನಿಸಂಸ್ಕಾರವನ್ನು ಮಾಡಿದನು. ವೀರಮಾತೃಗಳಾದುದರಿಂದ ಕೌಸಲ್ಯೆಯೇ ಮುಂತಾದ ಹೆಂಡತಿಯರು ಸಹಗಮನವನ್ನು ಮಾಡಲಿಲ್ಲ.

ಭರತನು ರಾಮನನ್ನು ರಾಜ್ಯಕ್ಕೆ ಕರೆತರಬೇಕೆಂದು ಮಂತ್ರಿಗಳೇ ಮುಂತಾದವರೊಡನೆ ಹೊರಟು ಭರದ್ವಾಜಾಶ್ರಮದಲ್ಲಿ ತಂಗಿದ್ದು ಅಲ್ಲಿ ಆತನ ಉತ್ತಮ ಆತಿಥ್ಯವನ್ನು ಹೊಂದಿದನು. ಆ ಋಷಿಯ ಮಾತಿನಂತೆ ಭರತನು ಮುಂದೆ ಹೊರಟು ರಾಮನಬಳಿಗೆ ಹೋದನು. ರಾಮನು ತಂದೆಯ ವಿಷಯವನ್ನು ಕೇಳಿ ಸ್ನಾನಮಾಡಿ ತರ್ಪಣವನ್ನು ಕೊಟ್ಟನು. ಭರತನು ಹಿಂದಿರುಗಿ ಬರಬೇಕೆಂದು ಬಹುವಾಗಿ ಬಲಾತ್ಕರಿಸಿದನು. ಆಗ ರಾಮನಿಂದ ಚೋದಿತನಾದ ವಸಿಷ್ಠನು ರಾಮನ ಕಾರ್ಯವನ್ನೂ ಅವನು ವಿಷ್ಣುವೆಂಬುದನ್ನೂ ತಿಳಿಸಿದನು. ಭರತನು ಅದಕ್ಕೆ ವಿಘ್ನವನ್ನು ತರದೆ ಅವನ ಪಾದುಕೆಗಳನ್ನು ತೆಗೆದುಕೊಂಡು ಹೊರಟು ನಂದಿಗ್ರಾಮದಲ್ಲಿರುತ್ತಾ ರಾಜ್ಯಭಾರಮಾಡಿದನು.

ಆಗ ಕೈಕೇಯಿಯು ರಾಮನನ್ನು ತಾನು ಮಾಡಿದುದು ಅಪರಾಧವೆಂದು ಕೇಳಿಕೊಳ್ಳಲು ರಾಮನು 'ನೀನು ನನ್ನಿಂದಲೇ ಆಗ ಮೋಹಿತಳಾದೆ' ಎಂದು ಹೇಳಿ ಎಲ್ಲವನ್ನೂ ವಿವರಿಸಿದನು. ಆಕೆಯು ಭರತನೊಡನೆ ಊರಿಗೆ ಬಂದಳು.

ಅನಂತರ ಪಟ್ಟಣಿಗರು ಒಬ್ಬೊಬ್ಬರೂ ಆಗಿಂದಾಗ್ಗೆ ರಾಮನ ಬಳಿಗೆ ಹೋಗಲು ಮೊದಲಿಟ್ಟರು. ಇದು ರಾಮನಿಗೆ ತೊಂದರೆಯಾಯಿತು. ಇದರಿಂದ

ರಾಮನು ಆ ಸ್ಥಳವನ್ನು ಬಿಟ್ಟು ಹೊರಟು ಅತ್ರಿಯ ಆಶ್ರಮಕ್ಕೆ ಹೋದನು. ಅಲ್ಲಿ ಅತ್ರಿಯು ಅವನನ್ನು ಗೌರವಿಸಿದನು. ಅತ್ರಿ ಪತ್ನಿಯಾದ ಅನಸೂಯೆಯು ಸೀತೆಗೆ ಶಾಶ್ವತವಾದ ಕಾಂತಿಯನ್ನು ಕೊಡುವ ಅಂಗರಾಗವನ್ನು ಕೊಟ್ಟಳು. ಮತ್ತೂ ವಿಶ್ವಕರ್ಮನು ಕೊಟ್ಟಿದ್ದ ಎರಡು ಓಲೆಗಳನ್ನು ಕೊಟ್ಟಳು.

ರಾಮಲಕ್ಷ್ಮಣ ಸೀತೆಯರು ಅತ್ರಿಯ ಅಪ್ಪಣೆಯನ್ನು ಪಡೆದು ಅಲ್ಲಿಂದ ಹೊರಟು ಅಲ್ಲಲ್ಲಿ ಸಂಚರಿಸುತ್ತ ಒಂದು ವರ್ಷಕಾಲ ಸುಖವಾಗಿದ್ದರು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಸಾರಕಾಂಡೇ

॥ ಸಪ್ತಮಸ್ಸರ್ಗಃ ॥

॥ ಶ್ರೀ ಶಿವ ಉವಾಚ ॥

ಅಥ ರಾಮಸ್ಸೀತಯಾ ತು ಲಕ್ಷ್ಮಣೇನ ಸಮನ್ವಿತಃ ।
ಯಯೌ ಸ ದಂಡಕಾರಣ್ಯಂ ಸಜ್ಜಂ ಕೃತ್ವಾ ಮಹದ್ಧನುಃ ॥ ೧ ॥

ಅಗ್ರೇ ಯಯೌ ಸ್ವಯಂ ರಾಮಸ್ತತ್ಪೃಷ್ಠೇ ಜಾನಕೀ ಯಯೌ ।
ತಸ್ಯಾಃ ಪೃಷ್ಠೇ ಸ ಸೌಮಿತ್ರಿರ್ಯಯೌ ಧೃತಶರಾಸನಃ ॥ ೨ ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ ಏಳನೆಯ ಸರ್ಗವು

೧. ಶ್ರೀ ಶಿವನು ಹೇಳಿದನು–ರಾಮನು ಸೀತೆಯನ್ನೂ ಲಕ್ಷ್ಮಣನನ್ನೂ ಕರೆದುಕೊಂಡು ಧನುಸ್ಸನ್ನು ಹೆದೆಯೇರಿಸಿ ಸಿದ್ಧವಾಗಿ ಹಿಡಿದುಕೊಂಡು ದಂಡಕಾರಣ್ಯಕ್ಕೆ ಹೋದನು.

೨. ದಾರಿಯಲ್ಲಿ ಹೋಗುತ್ತಿರುವಾಗ ರಾಮನು ಮುಂದೆ ಹೊರಟನು. ಆವನ ಹಿಂದೆ ಜಾನಕಿಯು ಹೊರಟಳು. ಆಕೆಯ ಹಿಂದೆ ಲಕ್ಷ್ಮಣನು ಧನುರ್ಬಾಣಗಳನ್ನು ಸಿದ್ಧಮಾಡಿಕೊಂಡು ಹೊರಟನು.

ವನೇ ದೃಷ್ಟ್ವಾಥ ಕಾಸಾರಂ ಸ್ನಾತ್ವಾ ಪೀತ್ವಾ ಜಲಂ ಸುಖಂ ।
ಭುಕ್ತ್ವಾ ಫಲಾನಿ ಪಕ್ವಾನಿ ತಸ್ಥುಸ್ತತ್ರ ಕ್ಷಣಂ ತ್ರಯಃ ॥ ೩ ॥

ಏತಸ್ಮಿನ್ನಂತರೇ ತತ್ರ ವಿರಾಧಂ ನಾಮ ರಾಕ್ಷಸಂ ।
ತೇ ತಂ ದದೃಶುರಾಯಾಂತಂ ಮಹಾಸತ್ವಂ ಭಯಾನಕಂ ॥ ೪ ॥

ಕರಾಳದಂಷ್ಟ್ರವದನಂ ಭೀಷಯಂತಂ ಸ್ವಗರ್ಜಿತೈಃ ।
ವಾಮಾಂಸನ್ಯಸ್ತಶೂಲಾಗ್ರಗ್ರಥಿತಾನೇಕಮಾನುಷಂ ॥ ೫ ॥

ಭಕ್ಷಯಂತಂ ಗಜಂ ವ್ಯಾಘ್ರಂ ಮಹಿಷಂ ವನಗೋಚರಂ ।
ಜ್ಯಾರೋಪಿತಂ ಧನುರ್ಧೃತ್ವಾ ರಾಮೋ ಲಕ್ಷ್ಮಣಮಬ್ರವೀತ್ ॥ ೬ ॥

---

೩. ಹೀಗೆ ಹೋಗುತ್ತಿರಲು ಆ ಕಾಡಿನಲ್ಲಿ ಒಂದು ಸರೋವರವನ್ನು ಕಂಡರು. ಅಲ್ಲಿಗೆ ಹೋಗಿ ಅದರಲ್ಲಿ ಸ್ನಾನಮಾಡಿ ನೀರನ್ನು ಕುಡಿದರು. ಅಲ್ಲಿದ್ದ ಕಳಿತ ಹಣ್ಣುಗಳನ್ನು ತಿಂದರು. ಮತ್ತು ಅಲ್ಲಿ ಮೂರು ಜನರೂ ಕ್ಷಣಕಾಲ ಸುಖವಾಗಿದ್ದರು.

೪. ಇಷ್ಟರೊಳಗೆ ಅಲ್ಲಿಗೆ ವಿರಾಧನೆಂಬ ಒಬ್ಬ ರಾಕ್ಷಸನು ಬರುತ್ತಿದ್ದನು. ಅವನು ಬಹು ಬಲಿಷ್ಠನು. ಸಕಲಪ್ರಾಣಿಗಳಿಗೂ ಭಯವನ್ನು ಉಂಟುಮಾಡುತ್ತಿದ್ದನು. ಇಂತಹ ರಾಕ್ಷಸನನ್ನು ಅವರು ನೋಡಿದರು.

೫. ಅವನ ಕೋರೆದಾಡೆಗಳು ಬಹು ಭಯಂಕರವಾಗಿದ್ದುವು. ಮುಖವು ವಿಲಕ್ಷಣವಾಗಿದ್ದಿತು. ಅವನು ತನ್ನ ಗರ್ಜನೆಯಿಂದಲೇ ಎಲ್ಲಕ್ಕೂ ಹೆದರಿಕೆಯನ್ನು ಉಂಟುಮಾಡುತ್ತಿದ್ದನು. ಅವನು ತನ್ನ ಎಡಗಡೆಯ ಹೆಗಲಿನಮೇಲೆ ಒಂದು ಶೂಲವನ್ನು ಇಟ್ಟುಕೊಂಡು ಅದರಲ್ಲಿ ಅನೇಕ ಮನುಷ್ಯರನ್ನು ಚುಚ್ಚಿ ಸಿಕ್ಕಿಸಿಕೊಂಡಿದ್ದನು.

೬. ಅವನು ಕಾಡಿನಲ್ಲಿ ಬಹು ಬಲಿಷ್ಠವಾದ ಆನೆಗಳನ್ನೂ ಹುಲಿಗಳನ್ನೂ ಕಾಡಾನೆಗಳನ್ನೂ ಕೊಂದು ತಿನ್ನುತ್ತಿದ್ದನು. ಇವನನ್ನು ನೋಡಿ ರಾಮನು ಧನುಸ್ಸಿನ ಹೆದೆಯನ್ನೇರಿಸಿ ಹಿಡಿದುಕೊಂಡು ಲಕ್ಷ್ಮಣನನ್ನು ಕುರಿತು ಇಂತೆಂದನು.

ರಕ್ಷ ತ್ವಂ ಜಾನಕೀಮತ್ರ ಸಂಹನಿಷ್ಯಾಮಿ ರಾಕ್ಷಸಂ |
ಸ ತು ದೃಷ್ಟ್ವಾ ರಮಾನಾಥಂ ಲಕ್ಷ್ಮಣಂ ಜಾನಕೀಂ ತದಾ ॥ ೭ ॥

ಕೌ ಯುವಾಮಿತಿ ತೌ ಪ್ರಾಹ ತತೋ ರಾಮಸ್ತಮಬ್ರವೀತ್ ।
ನಾಮ ಕರ್ಮ ನಿಜಂ ಸರ್ವಂ ಕೈಕೇಯ್ಯಾಪಿ ಚ ಯತ್ಕೃತಂ ॥ ೮ ॥

ತದ್ರಾಮವಚನಂ ಶ್ರುತ್ವಾ ವಿಹಸ್ಯ ರಾಕ್ಷಸೋಽಬ್ರವೀತ್ ।
ಮಾಂ ನ ಜಾನಾಸಿ ರಾಮ ತ್ವಂ ವಿರಾಧಂ ಲೋಕವಿಶ್ರುತಂ ॥ ೯ ॥

ಮದ್ಭಯಾನ್ಮುನಯಸ್ಸರ್ವೇ ತ್ಯಕ್ತ್ವಾ ವನಮಿತೋ ಗತಾಃ ।
ಯದಿ ಜೀವಿತುಮಿಚ್ಛಾಸ್ತಿ ತ್ಯಕ್ತ್ವಾ ಸೀತಾಂ ನಿರಾಯುಧೌ ॥ ೧೦ ॥

---

೭. ಎಲೈ ಲಕ್ಷ್ಮಣನೆ! ನೀನು ಈ ಜಾನಕಿಯನ್ನು ರಕ್ಷಿಸಿಕೊಂಡಿರು. ನಾನು ಈ ರಾಕ್ಷಸನನ್ನು ಕೊಲ್ಲುತ್ತೇನೆ ಎಂದನು. ಆ ವಿರಾಧನು ರಾಮಲಕ್ಷ್ಮಣರನ್ನೂ ಜಾನಕಿಯನ್ನೂ ದೂರದಿಂದಲೇ ನೋಡಿದನು.

೮. ಅನಂತರ ಹತ್ತಿರಕ್ಕೆ ಬಂದು ಅವರನ್ನು ಕುರಿತು ನೀವಾರು? ಎಂದು ಕೇಳಲು ರಾಮನು ತನ್ನ ಹೆಸರು ಕೆಲಸ ತಾನು ಕೈಕೇಯಿಯ ಮಾತಿನಂತೆ ಕಾಡಿಗೆ ಬಂದುದು ಎಲ್ಲವನ್ನೂ ಹೇಳಿದನು.

೯. ರಾಮನ ಈ ಮಾತನ್ನು ಕೇಳಿ ಆ ವಿರಾಧನು ನಕ್ಕು ಎಲೈ ರಾಮನೆ! ನಾನು ಲೋಕದಲ್ಲೆಲ್ಲಾ ಪ್ರಸಿದ್ಧನಾಗಿದ್ದೇನೆ. ನನ್ನನ್ನು ನೀನು ತಿಳಿಯಲಿಲ್ಲವಲ್ಲ! ನಾನು ವಿರಾಧನು.

೧೦. ನನಗೆ ಹೆದರಿಕೊಂಡು ಮುನಿಗಳೆಲ್ಲರೂ ಈ ಕಾಡನ್ನು ಬಿಟ್ಟು ಹೊರಟು ಹೋದರು. ನಿಮಗೂ ಜೀವದಮೇಲೆ ಇಚ್ಛೆಯಿದ್ದರೆ ಈ ಹೆಂಗಸನ್ನು ಇಲ್ಲೇ ಬಿಟ್ಟು ಬಿಟ್ಟು ಆಯುಧಗಳನ್ನು ಕೆಳಗಿಟ್ಟು ಇಲ್ಲಿಂದ ಓಡಿಹೋಗಿರಿ.

ಪಲಾಯೇತಾಂ ನ ಚೇಚ್ಛೀಘ್ರಂ ಭಕ್ಷಯಾಮಿ ಯುವಾಮಹಂ ।
ಇತ್ಯುಕ್ತ್ವಾ ರಾಕ್ಷಸಸ್ಸೀತಾಮಾದಾತುಮಭಿದುದ್ರುವೇ ॥ ೧೧ ॥

ತಾಮುಚ್ಛಿಚ್ಛೇದ ತದ್ಬಾಹುಂ ಶರೇಣ ಪ್ರಹಸನ್ನಿವ ।
ತತಃ ಕ್ರೋಧಪರೀತಾತ್ಮಾ ವ್ಯಾದಾಯ ವಿಕಟಂ ಮುಖಂ ॥ ೧೨ ॥

ರಾಮಮಭ್ಯದ್ರವದ್ರಾಮಶ್ಛಿಚ್ಛೇದ ಪರಿಧಾವತಃ ।
ಪದದ್ವಯಂ ತದಾ ಸರ್ಪ ಇವಾಸ್ಯೇನ ಯಯೌ ಪುನಃ ॥ ೧೩ ॥

ತತೋಽರ್ಧಚಂದ್ರಾಕಾರೇಣ ನಿಹತೋ ರಾಘವೇಣ ಸಃ ।
ತತಸ್ಸೀತಾ ಸಮಾಲಿಂಗ್ಯ ಪ್ರಶಶಂಸ ರಘೂತ್ತಮಂ ॥ ೧೪ ॥

---

೧೧. ಹಾಗೆ ನೀವು ಆಯುಧಗಳನ್ನು ಇಟ್ಟು ಓಡಿ ಹೋಗದಿದ್ದರೆ ನಿಮ್ಮಿಬ್ಬರನ್ನೂ ನಾನು ತಿಂದುಬಿಡುವೆನು. ಹೀಗೆಂದು ಹೇಳುತ್ತಾ ಆ ರಾಕ್ಷಸನು ಸೀತೆಯನ್ನು ಹಿಡಿದುಕೊಳ್ಳಲು ಓಡಿಬಂದನು.

೧೨. ಇದನ್ನು ನೋಡಿ ರಾಮನು ನಗುತ್ತಲೇ ಅವನ ಕೈಯ್ಯನ್ನು ಕತ್ತರಿಸಿದನು. ಇದರಿಂದ ಆ ರಾಕ್ಷಸನು ಕೋಪಗೊಂಡು ತನ್ನ ದೊಡ್ಡದೂ ಭಯಂಕರವೂ ಆದ ಬಾಯನ್ನು ತೆರೆದುಕೊಂಡು ಬಂದನು.

೧೩. ರಾಮನನ್ನು ತಿನ್ನಲು ಅವನ ಬಳಿಗೆ ಹೋದನು. ಒಡನೆಯೇ ಓಡುತ್ತಿರುವ ಆ ರಾಕ್ಷಸನ ಕಾಲುಗಳನ್ನು ರಾಮನು ಕತ್ತರಿಸಿ ಬಿಟ್ಟನು. ಆದರೂ ಹಾವಿನಂತೆಯೇ ಆ ರಾಕ್ಷಸನು ಹೊರಳಾಡುತ್ತ ರಾಮನ ಬಳಿಗೆ ಬಂದನು.

೧೪. ಆಗ ರಾಮನು ಅರ್ಧಚಂದ್ರಾಕಾರವಾಗಿರುವ ಬಾಣದಿಂದ ಆತನ ದೇಹವನ್ನು ಕತ್ತರಿಸಿದನು. ಸೀತೆಯು ಆ ಅದ್ಭುತ ಕೆಲಸವನ್ನು ನೋಡಿ ರಾಮನನ್ನು ಆಲಿಂಗಿಸಿಕೊಂಡು ಹೊಗಳಿದಳು.

ದೇವದುಂದುಭಯೋ ನೇದುರ್ದಿವಿ ದೇವಗಣೇರಿತಾಃ |
ತತೋ ವಿರಾಧಕಾಯಾತ್ತು ಪುರುಷಶ್ಚ ವಿನಿರ್ಗತಃ || ೧೫ ||

ನತ್ವಾ ರಾಮಂ ನಿಜಂ ವೃತ್ತಂ ಕಥಯಾಮಾಸ ಸಾದರಂ |
ದೂರ್ವಾಸಸಾಹಂ ಶಪ್ತಸ್ತು ಪುರಾ ವಿದ್ಯಾಧರಶ್ಶುಭಃ || ೧೬ ||

ಇದಾನೀಂ ಮೋಚಿತಶ್ಶಾಪಾತ್ತ್ವಯಾ ಕಾಲಾಂತರೇ ವನೇ |
ಇತ್ಯುಕ್ತ್ವಾ ರಾಘವಂ ಸ್ತುತ್ವಾ ವಿಮಾನೇನ ಯಯೌ ದಿವಂ || ೧೭ ||

ವಿರಾಧೇ ಸ್ವರ್ಗತೇ ರಾಮೋ ಲಕ್ಷ್ಮಣೇನ ಚ ಸೀತಯಾ |
ಜಗಾಮ ಶರಭಂಗಸ್ಯ ವನಂ ಸರ್ವಸುಖಾವಹಂ || ೧೮ ||

---

೧೫. ದೇವತೆಗಳು ಅಂತರಿಕ್ಷದಲ್ಲಿ ದುಂದುಭಿಗಳನ್ನು ಬಡಿದರು. ಆಗ ಆ ವಿರಾಧನ ದೇಹದಿಂದ ಒಬ್ಬ ಮನುಷ್ಯನು ಈಚೆಗೆ ಬಂದನು.

೧೬. ಅವನು ರಾಮನಿಗೆ ನಮಸ್ಕರಿಸಿ ಆದರದಿಂದ ತನ್ನ ಕಥೆಯನ್ನು ಇಂತೆಂದು ಹೇಳಿದನು. ಎಲೈ ರಾಮನೆ ! ನಾನು ಹಿಂದೆ ಉತ್ತಮನಾದ ವಿದ್ಯಾಧರನು. ದೂರ್ವಾಸನು ನನಗೆ ಶಾಪವನ್ನು ಕೊಟ್ಟನು.

೧೭. ಈಗ ಆ ಶಾಪದಿಂದ ನನಗೆ ಮುಕ್ತಿಯುಂಟಾಯಿತು. ಅದೂ ಅನೇಕ ವರ್ಷಗಳಾದಮೇಲೆ ಈ ವನದಲ್ಲಿ ನಿನ್ನಿಂದ ಈ ಶಾಪವಿಮೋಚನವು ಪ್ರಾಪ್ತವಾಯಿತು. ಹೀಗೆಂದು ಹೇಳಿ ಆ ರಾಮನನ್ನು ಸ್ತುತಿಸಿ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಹೋದನು.

೧೮. ವಿರಾಧನು ಸ್ವರ್ಗಕ್ಕೆ ಹೋಗಲು ರಾಮನು ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಎಲ್ಲಾ ರೀತಿಯಲ್ಲಿಯೂ ಸುಖಕರವಾಗಿರುವ ಶರಭಂಗನ ಆಶ್ರಮಕ್ಕೆ ಹೋದನು.

ಶರಭಂಗಂ ತತೋ ನತ್ವಾ ತೇನ ಸಂಮಾನಿತೋ ಬಹು ।
ತಸ್ಥೌ ತತ್ರ ನಿಶಾಮೇಕಾಂ ಶರಭಂಗೋ ಮುನೀಶ್ವರಃ ॥ ೧೯ ॥

ತಸ್ಮೈ ಸಮರ್ಪ್ಯ ಸ್ವಂ ಪುಣ್ಯಮಾರುರೋಹ ಚಿತಿಂ ತದಾ ।
ಸ್ತುತ್ವಾ ತಂ ಸ ವಿಮಾನೇನ ವೈಕುಂಠಂ ಪರಮಂ ಯಯೌ ॥ ೨೦ ॥

ತತಶ್ಚೈಸ್ಸುತೀಕ್ಷ್ಣಸ್ಯ ಯಯಾವಾಶ್ರಮಮುತ್ತಮಂ ।
ನತ್ವಾ ತಂ ಪೂಜಿತಸ್ತೇನ ಸುಖಂ ತಸ್ಥೌ ರಘೂದ್ವಹಃ ॥ ೨೧ ॥

ಏತಸ್ಮಿನ್ನಂತರೇ ತತ್ರ ನಾನಾಶ್ರಮನಿವಾಸಿನಃ ।
ಮುನಯೋ ರಾಘವಂ ದ್ರಷ್ಟುಂ ಸಮಾಜಗ್ಮುಸ್ಸಹಸ್ರಶಃ ॥ ೨೨ ॥

ಸರ್ವೇ ತೇ ರಾಘವಂ ನತ್ವಾ ಸ್ತುತ್ವಾ ನಿನ್ಯುರ್ನಿಜಂ ನಿಜಂ ।
ಆಶ್ರಮಂ ಸೀತಯಾ ಭ್ರಾತ್ರಾ ಚಕ್ರುಃ ಪೂಜಾಂ ಸವಿಸ್ತರಾಂ ॥ ೨೩ ॥

೧೯–೨೦. ಅಲ್ಲಿಗೆ ಹೋಗಿ ಶರಭಂಗನಿಗೆ ನಮಸ್ಕರಿಸಿ ಅವನಿಂದ ಗೌರವಿತನಾಗಿ ಸತ್ಕಾರವನ್ನು ಹೊಂದಿದನು. ಮತ್ತು ಅಲ್ಲಿ ಒಂದು ರಾತ್ರಿಯ ಕಾಲವಿದ್ದನು. ಆಗ ಶರಭಂಗನು ತನ್ನ ಪುಣ್ಯವನ್ನು ಶ್ರೀರಾಮನಿಗೆ ಕೊಟ್ಟು ತಾನು ಚಿತಿಯನ್ನು ಹತ್ತಿ ಈ ದೇಹವನ್ನು ಬಿಟ್ಟು ಉತ್ತಮ ದೇಹವನ್ನು ಹೊಂದಿ ರಾಮನನ್ನು ಸ್ತುತಿಸಿ ಉತ್ತಮವಾದ ವೈಕುಂಠಕ್ಕೆ ಹೋದನು.

೨೧. ಅನಂತರ ರಾಮನು ಸುತೀಕ್ಷ್ಣನ ಆಶ್ರಮಕ್ಕೆ ಹೋದನು. ಅಲ್ಲಿ ಆ ಋಷಿಗೆ ನಮಸ್ಕರಿಸಿ ಅವನಿಂದ ಪೂಜಿತನಾಗಿ ಸುಖವಾಗಿದ್ದನು.

೨೨–೨೩. ರಾಮನು ಅಲ್ಲಿರುತ್ತಿರುವಾಗ ಅನೇಕ ಜನ ಋಷಿಗಳು ಗುಂಪು ಗುಂಪಾಗಿ ರಾಮನನ್ನು ನೋಡಲು ಬರುತ್ತಿದ್ದರು. ಅಲ್ಲಿ ಅವರೆಲ್ಲರೂ ಆ ರಾಮನನ್ನು ಸ್ತುತಿಸಿ ನಮಸ್ಕರಿಸಿ ತಮ್ಮ ತಮ್ಮ ಆಶ್ರಮಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಜೊತೆಯಲ್ಲಿ ಸೀತೆಯನ್ನೂ ಲಕ್ಷ್ಮಣನನ್ನೂ ಕರೆದುಕೊಂಡು ಹೋಗಿ ಬಹುವಾಗಿ ಗೌರವಿಸಿ ಪೂಜಿಸುತ್ತಿದ್ದರು.

ಏಕರಾತ್ರಂ ತ್ರಿರಾತ್ರಂ ವಾ ಪಂಚಸಪ್ತದಿನಾನಿ ವಾ ।
ಪಕ್ಷಮಾತ್ರಂ ತು ಮಾಸಂ ವಾ ಸಾರ್ಧಮಾಸಮಥಾಪಿವಾ ॥ ೨೪ ॥

ತ್ರಿಮಾಸಾನ್ಪಂಚ ಮಾಸಂ ವಾ ಷಣ್ಮಾಷ್ಟೈಕಾದಶಾಥವಾ ।
ಸಾಗ್ರಂ ಸಂವತ್ಸರಂ ವಾಪಿ ಸ್ವಾಶ್ರಮೇಷು ರಘೂತ್ತಮಂ ॥ ೨೫ ॥

ಸಂಸ್ಥಾಪ್ಯ ಚಕ್ರುರಾತಿಥ್ಯಮಧಿಕಂ ಚೋತ್ತರೋತ್ತರಂ ।
ಪತ್ನ್ಯಾನುಜೇನ ಶ್ರೀರಾಮಮೇವಂ ಪೂಜ್ಯ ವ್ಯಸರ್ಜಯನ್ ॥ ೨೬ ॥

ಭ್ರಮತ್ಯೇನಂ ಹಿ ರಾಮೇಣ ನವ ವರ್ಷಾಣಿ ದಂಡಕೇ ।
ಆಶ್ರಮೇಷು ಮುನೀನಾಂ ಚ ಹ್ಯತಿಕ್ರಾಂತಾನಿ ವೈ ಸುಖಂ ॥ ೨೭ ॥

ಬಹವೋ ನಿಹತಾಸ್ತತ್ರ ರಾಕ್ಷಸಾ ಭ್ರಮತಾ ತದಾ ।
ರಾಘವೇಣ ಸಹ ಭ್ರಾತ್ರಾ ಕ್ರೀಡತಾವನಿಕನ್ಯಯಾ ॥ ೨೮ ॥

೨೪-೨೫. ಆ ಋಷಿಗಳು ತಮ್ಮ ತಮ್ಮ ಆಶ್ರಮಗಳಲ್ಲಿ ಅವರನ್ನು ಒಂದುರಾತ್ರಿ ಎರಡುರಾತ್ರಿ ಮೂರುರಾತ್ರಿ ಐದುರಾತ್ರಿ ಏಳುರಾತ್ರಿ ಒಂದುಪಕ್ಷ ಒಂದುತಿಂಗಳು ಒಂದೂವರೆತಿಂಗಳು ಮೂರುತಿಂಗಳು ಐದುತಿಂಗಳು ಆರುತಿಂಗಳು ಎಂಟುತಿಂಗಳು ಕೊನೆಗೆ ಒಂದುವರ್ಷ ಈ ರೀತಿಯಾಗಿ ಇಟ್ಟುಕೊಂಡು ಉಪಚರಿಸುತ್ತಿದ್ದರು.

೨೬. ಹೀಗೆ ಅವರನ್ನಿಟ್ಟುಕೊಂಡು ಉಪಚರಿಸುವುದರಲ್ಲಿ ಒಬ್ಬರಿಗಿಂತಲೂ ಮತ್ತೊಬ್ಬರು ಹೆಚ್ಚುದಿನವಿಟ್ಟುಕೊಳ್ಳುತ್ತ ಹೆಚ್ಚು ಉಪಚರಿಸುತ್ತ ಬಂದರು. ಈ ರೀತಿಯಾಗಿ ರಾಮ ಲಕ್ಷ್ಮಣ ಸೀತೆಯರನ್ನು ಪೂಜಿಸಿ ಕಳುಹಿಸುತ್ತಿದ್ದರು.

೨೭. ಹೀಗೆ ಉಪಚಾರವನ್ನು ಹೊಂದುತ್ತ ದಂಡಕಾರಣ್ಯದಲ್ಲಿ ಸುತ್ತುತ್ತ ರಾಮನು ಒಂಭತ್ತು ವರ್ಷಗಳನ್ನು ಕಳೆದನು. ಈ ಒಂಭತ್ತು ವರ್ಷಗಳೂ ಕೂಡ ಮುನಿಗಳ ಆಶ್ರಮದಲ್ಲಿ ಸುಖವಾಗಿ ಕಳೆಯಿತು.

೨೮. ಹೀಗೆ ಒಂಭತ್ತು ವರ್ಷಗಳ ಕಾಲ ಸಂಚರಿಸುತ್ತಿರುವಾಗ ಅನೇಕ ಜನ ರಾಕ್ಷಸರನ್ನು ಕೊಂದನು. ಮತ್ತು ತಮ್ಮನೊಡನೆಯೂ ಹೆಂಡತಿಯೊಡನೆಯೂ ಸುಖವಾಗಿದ್ದನು.

ನಾನಾಶ್ರಮಾರಾಮಪುಷ್ಪವನೋಪವನಭೂಮಿಷು ।
ನದೀಜಲಕಟಾಕಾದ್ರಿಶಿಖರಾದಿಸ್ಥಲೇಷ್ವಪಿ ॥ ೨೯ ॥

ಜಂಬ್ವಾಮ್ರರಂಭಾದ್ರಾಕ್ಷಾದಿನಾನಾವೃಕ್ಷತಲೇಷು ಹಿ ।
ಚಕಾರ ಸೀತಯಾ ಕ್ರೀಡಾಂ ರಾಮೋ ದೇವ್ಯಾ ಯಥಾ ಶಿವಃ ॥ ೩೦ ॥

ಅಥ ರಾಮೋ ಯಯೌ ಕುಂಭಸಂಭವಸ್ಯಾನುಜಾಶ್ರಮಂ ।
ಸುಮತಿಃ ಪೂಜಯಾಮಾಸ ರಾಘವಂ ಸೀತಯಾನ್ವಿತಂ ॥ ೩೧ ॥

ತತಸ್ಸೀತಾಯುತೋ ರಾಮಶ್ಶನೈರ್ಭ್ರಾತ್ರಾ ಮುದಾನ್ವಿತಃ ।
ಅಗಸ್ತ್ಯೇರಾಶ್ರಮಂ ಪ್ರಾಪ ನಾನಾವೃಕ್ಷವಿರಾಜಿತಂ ॥ ೩೨ ॥

ಪ್ರತ್ಯುದ್ಗಮ್ಯ ಮುನಿಶ್ಚಾಪಿ ಮುನಿಭಿರ್ಬಹುಭಿರ್ವೃತಃ ।
ರಾಘವಂ ತಂ ಸಮಾಲಿಂಗ್ಯ ಸ್ವಾಶ್ರಮಂ ತೇನ ಸಂಯಯೌ ॥ ೩೩ ॥

೨೯-೩೦. ತಾನು ಹೋಗುತ್ತಿದ್ದ ಆಶ್ರಮಗಳ ಉಪವನಗಳಲ್ಲಿಯೂ ವನಗಳಲ್ಲಿಯೂ ಅಲ್ಲಿರುವ ನದಿ ಬೆಟ್ಟದಶಿಖರ ಮುಂತಾದ ಸ್ಥಳಗಳಲ್ಲಿಯೂ ನೇರಿಳೆ, ಮಾವು, ಬಾಳೆ, ದ್ರಾಕ್ಷೆ ಮುಂತಾದ ಮರಗಳ ಬುಡಗಳಲ್ಲಿಯೂ ಕೂಡ ರಾಮನು ಆ ಸೀತೆಯೊಡನೆ ಶಿವನು ಪಾರ್ವತಿಯೊಡನೆ ಕ್ರೀಡಿಸುವಂತೆ ಕ್ರೀಡಿಸಿದನು.

೩೧. ಅನಂತರ ಶ್ರೀರಾಮನು ಅಗಸ್ತ್ಯನ ತಮ್ಮನ ಆಶ್ರಮಕ್ಕೆ ಹೋದನು. ಅಗಸ್ತ್ಯನ ತಮ್ಮನಾದ ಸುಮತಿಯು ರಾಮ ಲಕ್ಷ್ಮಣ ಸೀತೆಯರನ್ನು ಗೌರವಿಸಿ ಪೂಜಿಸಿದನು.

೩೨. ಆಮೇಲೆ ರಾಮನು ಸೀತಾ ಲಕ್ಷ್ಮಣರೊಂದಿಗೆ ಮುಂದಿರುವ ಅನೇಕ ವಿಧವಾದ ಮರಗಳಿಂದ ಕೂಡಿದ ಅಗಸ್ತ್ಯನ ಆಶ್ರಮಕ್ಕೆ ಹೋದನು.

೩೩. ಅಲ್ಲಿ ಅಗಸ್ತ್ಯನು ಅನೇಕ ಜನ ಮುನಿಗಳನ್ನು ಕರೆದುಕೊಂಡು ರಾಮನನ್ನು ಎದುರುಗೊಂಡು ಆ ರಾಮನನ್ನು ಆಲಿಂಗಿಸಿಕೊಂಡು ತನ್ನ ಆಶ್ರಮಕ್ಕೆ ಕರೆದುಕೊಂಡು ಹೋದನು.

ಅಥ ತಂ ಪೂಜಯಾಮಾಸ ರಾಘವಂ ಕುಂಭಸಂಭವಃ ।
ರಾಮೋಽಪಿ ಮಾನಿತಸ್ತೇನ ತಸ್ಥೌ ತತ್ರ ಕಿಯದ್ದಿನಂ ॥ ೩೪ ॥

ತತಃ ಸ್ತುತ್ವಾ ರಮಾನಾಥಮಗಸ್ತ್ಯೇನ ಮುನಿಸತ್ತಮಃ ।
ದದೌ ಚಾಪಂ ಮಹೇಂದ್ರೇಣ ರಾಮಾರ್ಥಂ ಸ್ಥಾಪಿತಂ ಪುರಾ ॥ ೩೫ ॥

ಅಕ್ಷಯ್ಯೌ ಬಾಣತೂಣೀರೌ ಖಡ್ಗಂ ರತ್ನ ವಿಭೂಷಿತಂ ।
ತತೋ ರಾಮೋ ಮುನೇರ್ವಾಕ್ಯಾದ್ಗೌತಮ್ಯಾ ಉತ್ತರೇ ತಟೇ ॥ ೩೬ ॥

ಯಯೌ ಪಂಚವಟೀಂ ರಮ್ಯಾಂ ಮಾರ್ಗೇ ದೃಷ್ಟ್ವಾಥ ಪಕ್ಷಿಣಂ ।
ಜಟಾಯುಷಂ ನಗಾಕಾರಮರುಣಾತ್ಮಜಮುತ್ತಮಂ ॥ ೩೭ ॥

---

೩೪. ಅಗಸ್ತ್ಯನು ತನ್ನ ಆಶ್ರಮದಲ್ಲಿ ರಾಮನನ್ನು ಪೂಜಿಸಿದನು. ಅವನಿಂದ ಗೌರವಿತನಾದ ರಾಮನು ಅವನ ಆಶ್ರಮದಲ್ಲಿ ಕೆಲವು ದಿವಸಗಳಿದ್ದನು.

೩೫. ಆಗ ಅಗಸ್ತ್ಯನು ಆ ಶ್ರೀಮನ್ನಾರಾಯಣನಾದ ರಾಮನನ್ನು ಸ್ತುತಿಸಿ ಇಂದ್ರನು ರಾಮನಿಗೋಸ್ಕರವೇ ಪೂರ್ವದಲ್ಲಿ ಈ ಅಗಸ್ತ್ಯನ ಬಳಿಯಲ್ಲಿಟ್ಟಿದ್ದ ಧನುಸ್ಸನ್ನು ಕೊಟ್ಟನು.

೩೬. ಅಕ್ಷಯ ಬಾಣಗಳನ್ನೂ ಅಕ್ಷಯ ಬತ್ತಳಿಕೆಯನ್ನೂ ರತ್ನ ಖಚಿತವಾದ ಖಡ್ಗವನ್ನೂ ಕೂಡ ಕೊಟ್ಟನು. ಅನಂತರ ರಾಮನು ಆ ಅಗಸ್ತ್ಯನ ಮಾತಿನಂತೆ ಗೌತಮಿಯ ಉತ್ತರದಿಕ್ಕಿನಲ್ಲಿರುವ ಪಂಚವಟಿಗೆ ಹೋದನು.

೩೭. ಪಂಚವಟಿಗೆ ಹೋಗುತ್ತಿರುವಾಗ ದಾರಿಯಲ್ಲಿ ಜಟಾಯುವೆಂಬ ಪಕ್ಷಿಯನ್ನು ನೋಡಿದನು. ಅದು ಬೆಟ್ಟದಂತಿದ್ದಿತು. ಆ ಪಕ್ಷಿಯು ಅರುಣನ ಮಗನು.

ಸಖಾಯಂ ಸ್ವಪಿತುಶ್ಚಾಪಿ ಸಂಭಾಷ್ಯಾಥ ವಿವೇಶ ತಾಂ ।
ತತ್ರ ಕೃತ್ವಾ ಮಹಾಶಾಲಾಂ ಯಥಾಪೂರ್ವಂ ಕೃತಾಂ ಗಿರೌ ॥ ೩೮ ॥

ಮೃಗಮಾಂಸೈರ್ಬಲಿಂ ದತ್ವಾ ತಸ್ಥೌ ರಾಮೋ ಯಥಾಸುಖಂ ।
ಸೀತಾಂ ಸಂರಕ್ಷಯಾಮಾಸ ಜಟಾಯುಃ ಪಕ್ಷಿರಾಟ್ ಸ್ವಯಂ ॥ ೩೯ ॥

ರಾಘವಸ್ಯ ಪಂಚವಟ್ಯಾಂ ಕ್ರೀಡತಸ್ಸೀತಯಾ ಸುಖಂ ।
ಸಾರ್ಧತ್ರೀಣಿ ವತ್ಸರಾಣಿ ಹ್ಯತಿಕ್ರಾಂತಾನಿ ಪಾರ್ವತಿ ॥ ೪೦ ॥

ವನೇ ಶೂರ್ಪಣಖಾಪುತ್ರಂ ತಪಂತಂ ಸಾಂಬನಾಮಕಂ ।
ಬ್ರಹ್ಮಾ ದದೌ ದಿವ್ಯಖಡ್ಗಂ ತಂ ಸಾಂಬೋ ನ ಪದರ್ಶ ಸಃ ॥ ೪೧ ॥

---

೩೮. ಅದು ರಾಮನ ತಂದೆಗೂ ಸ್ನೇಹಿತನು ಆ ಪಕ್ಷಿಯೊಡನೆ ಮಾತನಾಡಿಕೊಂಡು ಮುಂದಿರುವ ಪಂಚವಟಿಗೆ ಹೋದನು. ಅಲ್ಲಿ ಹಿಂದೆ ತಾನು ಚಿತ್ರಕೂಟದಲ್ಲಿ ಮಾಡಿಕೊಂಡಿದ್ದಂತೆಯೇ ಆಶ್ರಮವನ್ನು ಮಾಡಿಕೊಂಡನು.

೩೯. ಮೃಗಗಳ ಮಾಂಸದಿಂದ ಬಲಿಯನ್ನು ಕೊಟ್ಟು ದೇವತೆಗಳನ್ನು ಪೂಜಿಸಿ ಅಲ್ಲಿ ಸುಖವಾಗಿದ್ದನು. ಆ ಪಕ್ಷಿರಾಜನಾದ ಜಟಾಯುವು ತಾನೇ ಸ್ವಂತವಾಗಿ ಆ ಸೀತೆಯನ್ನು ವಿಚಾರಿಸಿಕೊಂಡು ರಕ್ಷಿಸುತ್ತಿದ್ದನು.

೪೦. ಶ್ರೀರಾಮನು ಆ ಪಂಚವಟಿಯಲ್ಲಿ ಆಶ್ರಮವನ್ನು ಮಾಡಿಕೊಂಡು ಸೀತೆಯೊಡನೆ ಸುಖಿಸುತ್ತಿರಲು ಮೂರುವರೆ ವರ್ಷಗಳು ಕಳೆದುವು.

೪೧. ಆ ವನದಲ್ಲಿ ಶೂರ್ಪಣಖೆಯ ಮಗನಾದ ಸಾಂಬನೆಂಬುವನು ತಪಸ್ಸುಮಾಡುತ್ತಿದ್ದನು. ಅವನಿಗೆ ಬ್ರಹ್ಮನು ಉತ್ತಮವಾದ ಕತ್ತಿಯನ್ನು ಕೊಟ್ಟನು. ಅವನು ತಪಸ್ಸುಮಾಡುತ್ತಿದ್ದುದರಿಂದ ಅದನ್ನು ಲಕ್ಷಿಸದೆ ನೋಡಲೇ ಇಲ್ಲ.

ತದ್ಧೃತ್ವಾ ಲಕ್ಷ್ಮಣಃ ಖಡ್ಗಂ ವೃಕ್ಷಾನ್ವಲ್ಲೀರ್ಬಭಂಜ ಸಃ ।
ವೃಕ್ಷಗುಲ್ಮೇ ಹತಸ್ಸಾಂಬಸ್ತತೋ ರಾಘವಮಬ್ರವೀತ್ ॥ ೪೨ ॥

ಪ್ರಾಯಶ್ಚಿತ್ತಂ ಬ್ರಹ್ಮಹಣಂ ಮಾಂ ವದ ತ್ವಂ ರಘೂತ್ತಮ ।
ರಾಮೋಽಪ್ಯಾಹ ಹತಸ್ಸಾಂಬೋ ರಾಕ್ಷಸೋ ನ ಮುನಿರ್ಹತಃ ॥ ೪೩ ॥

ತಚ್ಛ್ರುತ್ವಾ ಲಕ್ಷ್ಮಣಸ್ತುಷ್ಟಃ ಸಾಂಬಮಾತ್ರಾಪಿ ತಚ್ಛ್ರುತಂ ।
ತತ್ಸ್ಮರಂತೀ ಪುತ್ರದುಃಖಂ ರಾಕ್ಷಸೀ ಕಾಮರೂಪಿಣೀ ॥ ೪೪ ॥

ವಿಚಚಾರ ಶೂರ್ಪಣಖಾ ನಾಮ್ನಾ ಸಾ ಸರ್ವತಃ ಕ್ರುಧಾ ।
ಏಕದಾ ಸಾ ಪಂಚವಟ್ಯಾಂ ರಾಮಂ ದೃಷ್ಟ್ವಾಥ ರಾಕ್ಷಸೀ ॥ ೪೫ ॥

---

೪೨. ಅಲ್ಲಿಗೆ ಹೋದಾಗ ಆ ಕತ್ತಿಯು ಲಕ್ಷ್ಮಣನ ಕಣ್ಣಿಗೆ ಬಿದ್ದಿತು. ಅದನ್ನು ತೆಗೆದುಕೊಂಡು ಲಕ್ಷ್ಮಣನು ಅಲ್ಲಿರುವ ಮರಗಳನ್ನೂ ಪೊದರುಗಳನ್ನೂ ಕತ್ತರಿಸುತ್ತಿದ್ದನು. ಆ ಪೊದರಿನೊಳಗೆ ತಪಸ್ಸು ಮಾಡುತ್ತಿದ್ದ ಸಾಂಬನನ್ನು ಕಾಣದೆ ಆ ಬಳ್ಳಿಗಳೊಡನೆ ಅವನನ್ನೂ ಕತ್ತರಿಸಿ ಬಿಟ್ಟನು.

೪೩. ಅನಂತರ ತಾನು ತಪಸ್ವಿಯನ್ನು ಕೊಂದೆನೆಂಬ ವಿಷಯವು ಲಕ್ಷ್ಮಣನಿಗೆ ತಿಳಿಯಿತು. ಒಡನೆಯೇ ರಾಮನ ಬಳಿಗೆ ಹೋಗಿ ಎಲೈ ರಾಮನೆ! ನಾನು ಬ್ರಹ್ಮಹತ್ಯೆಯನ್ನು ಮಾಡಿರುವೆನು. ನನಗೆ ಪ್ರಾಯಶ್ಚಿತ್ತವನ್ನು ಹೇಳು. ಎಂದನು. ಆಗ ರಾಮನು ಲಕ್ಷ್ಮಣಾ! ನೀನು ಕೊಂದವನು ಬ್ರಾಹ್ಮಣನಲ್ಲ. ಆತನು ರಾಕ್ಷಸನು. ಎಂದನು.

೪೪. ಇದನ್ನು ಕೇಳಿ ಲಕ್ಷ್ಮಣನಿಗೆ ಸಮಾಧಾನವಾಯಿತು. ಸಾಂಬನ ತಾಯಿಯಾದ ಶೂರ್ಪಣಖಿಗೂ ಇದು ತಿಳಿಯಿತು. ಅದನ್ನು ಕೇಳಿ ಆಕೆಯು ದುಃಖಪಟ್ಟುಕೊಂಡು ಅದನ್ನೇ ಸ್ಮರಿಸಿಕೊಳ್ಳುತ್ತ ಅಲ್ಲೆಲ್ಲಾ ಓಡಿಯಾಡುತ್ತಿದ್ದಳು.

೪೫. ಇದರಿಂದ ಆಕೆಗೆ ಕೋಪವೂ ಬಂದಿತು. ಅನೇಕ ಬಗೆಯಾದ ರೂಪಗಳನ್ನು ಧರಿಸಿಕೊಂಡು ಸಂಚರಿಸುತ್ತಿದ್ದಳು. ಹೀಗೆ ಸಂಚರಿಸುತ್ತಿರಲು ಒಂದುಸಾರಿ ಪಂಚವಟಿಯಲ್ಲಿ ರಾಮನ ಕಣ್ಣಿಗೆ ಬಿದ್ದಳು.

ಪುತ್ರದುಃಖಸಮಾಕ್ರಾಂತಾ ಧೃತ್ವಾ ರೂಪಂ ಮನೋರಮಂ |
ಕಾಪಟ್ಯಬುದ್ಧ್ಯಾ ಶ್ರೀರಾಮಂ ಸಾನುಜಂ ಹಂತುಮುದ್ಯತಾ || ೪೬ ||

ಉವಾಚ ಮಧುರಂ ವಾಕ್ಯಂ ವಸ್ತ್ರಾಲಂಕಾರಮಂಡಿತಾ |
ಕೌ ಯುವಾಂ ಕಾ ತ್ವಿಯಂ ರಮ್ಯಾ ಕಿಮರ್ಥಮಾಗತಾ ವನಂ || ೪೭ ||

ಕುತಸ್ಸಮಾಗತಾವತ್ರ ಕ್ವಾಧುನಾ ಗಚ್ಛತಃ ಪುರಃ |
ತತ್ತಸ್ಯಾ ವಚನಂ ಶ್ರುತ್ವಾ ರಾಮಸ್ಸರ್ವಂ ನ್ಯವೇದಯತ್ || ೪೮ ||

ತತಸ್ಸಾ ರಾಘವಂ ಪ್ರಾಹ ಭರ್ತಾ ಭವ ಮಮ ಪ್ರಭೋ |
ಸೋಽಪ್ಯಾಹ ದಯಿತಾ ಮೇಽಸ್ತಿ ಬಹಿಸ್ತಿಷ್ಠತಿ ಲಕ್ಷ್ಮಣಃ || ೪೯ ||

---

೪೬. ಒಡನೆಯೇ ಮಗನ ದುಃಖವು ಉಕ್ಕಿತು. ಆಗ ಮನೋಹರವಾದ ರೂಪವನ್ನು ಹೊಂದಿದಳು. ಕಪಟಬುದ್ಧಿಯಿಂದ ಆ ರಾಮ ಲಕ್ಷ್ಮಣರನ್ನು ಕೊಲ್ಲಲು ಅವರ ಬಳಿಗೆ ಹೋದಳು.

೪೭. ವಸ್ತ್ರ, ಅಲಂಕಾರಗಳಿಂದ ಅಲಂಕೃತಳಾದ ಆಕೆಯು ಅವರನ್ನು ಕುರಿತು ಮಧುರವಾಗಿ ಇಂತೆಂದಳು. ನೀವಾರು ? ಈಕೆ ಯಾರು ? ಈ ಕಾಡಿಗೆ ನೀವೇಕೆ ಬಂದಿರಿ ?

೪೮. ಏತಕ್ಕೆ ಇಲ್ಲಿಗೆ ಬಂದಿರಿ ? ಮುಂದೆಲ್ಲಿಗೆ ಹೋಗುತ್ತೀರಿ ? ಎಂದಳು. ಆಕೆಯ ಈ ಮಾತನ್ನು ಕೇಳಿ ರಾಮನು ತನ್ನ ವಿಷಯವೆಲ್ಲವನ್ನೂ ವಿವರಿಸಿ ಹೇಳಿದನು.

೪೯. ಆಗ ಆಕೆಯು ಎಲೈ ರಾಮನೆ ! ನೀನು ನನಗೆ ಗಂಡನಾಗು. ಎಂದಳು. ಅದಕ್ಕೆ ಅವನು ನನಗೆ ಒಬ್ಬಳು ಹೆಂಡತಿಯಿದ್ದಾಳೆ. ತನ್ನ ತಮ್ಮನಾದ ಲಕ್ಷ್ಮಣನು ಹೊರಗಿರುವನು. ಅವನಿಗೆ ಹೆಂಡತಿಯಿಲ್ಲ. ಅವನನ್ನು ಕೇಳು. ಎಂದನು.

ಪ್ರಾರ್ಥಯಾಮಾಸ ಸೌಮಿತ್ರಿಂ ಸಾ ತಂ ಸೋಽಪ್ಯುತ್ತರಂ ದದೌ ।
ಅಹಂ ದಾಸೋಽಸ್ಮಿ ರಾಮಸ್ಯ ತ್ವಂ ತು ದಾಸೀ ಭವಿಷ್ಯಸಿ ॥ ೫೦ ॥

ತತಃ ಕ್ರೋಧೇನ ಸಾ ಸೀತಾಂ ಧರ್ತುಂ ವೇಗೇನ ದುದ್ರುವೇ ।
ತದಾ ತಾಂ ರಾಘವಃ ಪ್ರಾಹ ಮಮಾಯಂ ಶರ ಉತ್ತಮಃ ॥ ೫೧ ॥

ಚಿಹ್ನಾರ್ಥಂ ಲಕ್ಷ್ಮಣಾಯ ತ್ವಂ ನೀತ್ವಾ ದರ್ಶಯ ವೇಗತಃ ।
ಮದ್ಬಾಣದರ್ಶನಾತ್ಕಾರ್ಯಂ ಸಿದ್ಧಿಂ ನೇಷ್ಯತಿ ಲಕ್ಷ್ಮಣಃ ॥ ೫೨ ॥

ಇತ್ಯುಕ್ತ್ವಾ ರಾಘವೋ ಬಾಣಂ ದದೌ ತಸ್ಮೈ ಕ್ಷುರೋಪಮಂ ।
ಸತ್ಯಂ ಮತ್ವಾ ರಾಮವಾಕ್ಯಂ ಸಾ ಯಯೌ ಲಕ್ಷ್ಮಣಂ ಪುನಃ ॥ ೫೩ ॥

---

೫೦. ಆಕೆಯು ಅಂತೆಯೇ ಅವನ ಬಳಿಗೆ ಹೋಗಿ ನೀನು ನನಗೆ ಗಂಡನಾಗು. ಎಂದು ಕೇಳಿಕೊಂಡಳು. ಅದಕ್ಕೆ ಅವನು ಎಲೈ ಕಾಮಿನಿಯೆ! ನಾನು ರಾಮನಿಗೆ ದಾಸನಾಗಿದ್ದೇನೆ. ನೀನು ನನ್ನನ್ನು ಮದುವೆಯಾದರೆ ನೀನೂ ದಾಸಿಯಾಗಬೇಕಾಗುತ್ತದೆ. ಎಂದನು.

೫೧. ಇದರಿಂದ ಕೋಪಗೊಂಡು ಆಕೆಯು ಸೀತೆಯನ್ನು ಹಿಡಿದು ಕೊಳ್ಳಲು ಅವಳ ಬಳಿಗೆ ಓಡಿದಳು. ಆಗ ರಾಮನು ಎಲೈ ಮಂಗಳಾಂಗಿಯೇ ನೀನು ಆಕೆಯನ್ನು ಮುಟ್ಟಬೇಡ. ನಾನು ಈ ಬಾಣವನ್ನು ನಿನಗೆ ಕೊಡುತ್ತೇನೆ.

೫೨. ಇದು ಗುರುತು. ಈ ಗುರುತನ್ನು ಲಕ್ಷ್ಮಣನಿಗೆ ತೋರಿಸು. ಅವನು ನನ್ನ ಈ ಬಾಣವನ್ನು ನೋಡಿದೊಡನೆಯೇ ನಿನ್ನ ಕೆಲಸವನ್ನು ಮಾಡಿ ಕೊಡುವನು. ನಿನ್ನ ಕೆಲಸವು ಕೈಗೂಡುತ್ತದೆ. ಎಂದನು.

೫೩. ಹೀಗೆಂದು ಹೇಳಿ ರಾಮನು ಹರಿತವಾದ ಒಂದು ಬಾಣವನ್ನು ಆಕೆಯ ಕೈಗೆ ಕೊಟ್ಟನು. ಶೂರ್ಪಣಖಿಯು ನಿಶ್ಚಯವೆಂದು ತಿಳಿದು ಅದನ್ನು ತೆಗೆದುಕೊಂಡು ಲಕ್ಷ್ಮಣನ ಬಳಿಗೆ ಹೋದಳು.

ಲಕ್ಷ್ಮಣಾಯ ರಾಮಬಾಣಂ ದರ್ಶಯಾಮಾಸ ರಾಕ್ಷಸೀ ।
ಸ ಬುದ್ಧ್ವಾ ಹೃದ್ಗತಂ ಬಂಧೋಸ್ತಂ ಸಂಧಾಯ ಶರಾಸನೇ ॥ ೫೪ ॥

ಮುಮೋಚ ಬಾಣಂ ವೇಗೇನ ರಾಮನಾಮಾಂಕಿತಂ ಶುಭಂ ।
ಸ ಶರೋ ರಾಕ್ಷಸೀಂ ಗತ್ವಾ ಘ್ರಾಣಕರ್ಣೋಷ್ಠಹೃದ್ಭವಾನ್ ॥ ೫೫ ॥

ಸಂಛಿತ್ವಾ ರಾಮತೂಣೀರಂ ವಿವೇಶ ಕ್ಷಣಮಾತ್ರತಃ ।
ಘ್ರಾಣಕರ್ಣೋಷ್ಠಹೃಜ್ಜಾತರಹಿತಾ ಸಾಪಿ ರಾಕ್ಷಸೀ ॥ ೫೬ ॥

ಹಾ ಹತಾಸ್ಮೀತಿ ಜಲ್ಪಂತೀ ಯಯೌ ಬಂಧೂನ್ ಖರಾದಿಕಾನ್ ।
ದೃಷ್ಟ್ವಾ ಸ್ವಸಾಂ ತಾದೃಶೀಂ ತೇ ತ್ರಿಶಿರಃಖರದೂಷಣಾಃ ॥ ೫೭ ॥

ತನ್ಮುಖಾತ್ಸಕಲಂ ವೃತ್ತಂ ಶ್ರುತ್ವಾ ತೇಕ್ರೋಧಸಂಯುತಾಃ ।
ಚತುರ್ದಶಮಹಾಘೋರಾನ್ ರಾಕ್ಷಸಾನ್ಪ್ರೇಷಯಂಸ್ತದಾ ॥ ೫೮ ॥

---

೫೪. ಆ ರಾಕ್ಷಸಿಯು ಲಕ್ಷ್ಮಣನಿಗೆ ರಾಮನ ಬಾಣವನ್ನು ತೋರಿಸಿದಳು. ಲಕ್ಷ್ಮಣನು ಅದನ್ನು ನೋಡಿ ರಾಮನ ಮನಸ್ಸಿನಲ್ಲಿರುವುದನ್ನು ತಿಳಿದು ಆ ಬಾಣವನ್ನು ಧನುಸ್ಸಿಗೆ ಸೇರಿಸಿದನು.

೫೫. ರಾಮನಾಮದಿಂದ ಅಂಕಿತವಾದ ಆ ಬಾಣವನ್ನು ವೇಗದಿಂದ ಆ ತಾಟಕಿಯಮೇಲೆ ಬಿಟ್ಟನು. ಆ ಬಾಣವು ರಾಕ್ಷಸಿಯಮೇಲೆ ಬಿದ್ದು ಕಿವಿ ಮೂಗು, ತುಟಿ, ಮೊಲೆಗಳನ್ನು ಕತ್ತರಿಸಿಹಾಕಿ ಕ್ಷಣಕಾಲದಲ್ಲಿ ಮತ್ತೆ ರಾಮನ ಬತ್ತಳಿಕೆಗೆ ಹೋಗಿ ಸೇರಿಕೊಂಡಿತು.

೫೬-೫೭. ಕಿವಿ, ಮೂಗು, ಮೊಲೆ, ತುಟಿಗಳಿಲ್ಲದ ಆ ಶೂರ್ಪಣಖಿಯು ಅಯ್ಯೋ ಕೆಟ್ಟೆನಲ್ಲಾ ! ಎಂದು ಕೂಗುತ್ತ ಬಂಧುಗಳಾದ ಖರದೂಷಣರ ಬಳಿಗೆ ಓಡಿಹೋದಳು. ಆ ರೀತಿ ದುಃಖಪಡುತ್ತ ಓಡಿಬಂದ ಆ ತಂಗಿಯನ್ನು ತ್ರಿಶಿರಖರದೂಷಣರು ನೋಡಿದರು.

೫೮. ಅವಳಿಂದ ಎಲ್ಲ ವಿಷಯವನ್ನೂ ತಿಳಿದುಕೊಂಡರು. ಅದರಿಂದ ಬಹುವಾಗಿ ಕೋಪಬಂದಿತು. ಆಗ ಹದಿನಾಲ್ಕು ಜನ ಮಹಾಘೋರರಾದ ರಾಕ್ಷಸರನ್ನು ಅವರ ಮೇಲೆ ಕಳುಹಿಸಿದರು.

ತತೋ ರಾಮಃ ಕ್ಷಣಮಾತ್ರೇಣ ಚತುರ್ದಶಶರೈರ್ಯಮಂ ।
ಪ್ರದರ್ಶಯನ್ ಸ್ವೀಯಲೋಕಂ ಪ್ರೇಷಯಾಮಾಸ ಲೀಲಯಾ ॥ ೫೯ ॥

ತಾನ್ರಾಕ್ಷಸಾನ್ಮೃತಾನ್ ಶ್ರುತ್ವಾ ಖರಾದ್ಯಾಸ್ತೇ ತ್ರಯಃ ಕ್ರುಧಾ ।
ಯುದ್ಧಾಯ ನಿರ್ಯಯುಸ್ಸೈನ್ಯೈಸ್ಸಹಸ್ರೈಶ್ಚ ಚತುರ್ದಶ ॥ ೬೦ ॥

ರಾಮೋಽಪಿ ಬಂಧುಂ ಸೀತಾಂ ಚ ಗುಹಾಯಾಂ ಸ್ಥಾಪ್ಯ ಯೋಗತಃ ।
ಚಕಾರ ರಾಕ್ಷಸೈರ್ಯುದ್ಧಂ ಶಸ್ತ್ರೈರಸ್ತ್ರೈರ್ಭಯಾವಹಂ ॥ ೬೧ ॥

ಚತುರ್ದಶ ಸಹಸ್ರಾಣಿ ಸ್ವೀಯರೂಪಾಣಿ ರಾಘವಃ ।
ಕೃತ್ವಾ ತೇಷಾಂ ಚ ಪುರತಶ್ಶರೈಸ್ತಾನ್ ಮರ್ದಯತ್ ಕ್ಷಣಾತ್ ॥ ೬೨ ॥

ಹತ್ವಾ ಖರಂ ದೂಷಣಂ ಚ ತಥಾ ತ್ರಿಶಿರಸಂ ಶರೈಃ ।
ಚತುರ್ದಶ ಸಹಸ್ರಾಂಸ್ತಾನ್ಪ್ರೇಷಯಾಮಾಸ ಸ್ವಂ ಪದಂ ॥ ೬೩ ॥

---

೫೯. ರಾಮನು ಅವರನ್ನು ಕ್ಷಣಕಾಲದಲ್ಲಿಯೇ ಹದಿನಾಲ್ಕು ಬಾಣಗಳಿಂದ ಯಮನನ್ನು ತೋರಿಸುತ್ತ ಲೀಲೆಯಿಂದ ಯಮಲೋಕಕ್ಕೆ ಕಳುಹಿಸಿದನು.

೬೦. ಆ ರಾಕ್ಷಸರನ್ನು ರಾಮನು ಕೊಂದನೆಂದು ಕೇಳಿ ತ್ರಿಶಿರಖರ ದೂಷಣರಿಗೆ ಬಹುವಾಗಿ ಕೋಪಬಂದಿತು. ಆಗ ಅವರು ಹದಿನಾಲ್ಕು ಸಾವಿರ ಸೈನ್ಯಗಳನ್ನು ತೆಗೆದುಕೊಂಡು ಯುದ್ಧಕ್ಕೆ ಹೊರಟರು.

೬೧. ರಾಮನು ಲಕ್ಷ್ಮಣನನ್ನೂ ಸೀತೆಯನ್ನೂ ಗುಹೆಯಲ್ಲಿ ಮರೆಯಾಗಿ ಇಟ್ಟು ಆ ರಾಕ್ಷಸರೊಡನೆ ಭಯಂಕರವಾದ ಯುದ್ಧವನ್ನು ಮಾಡಿದನು.

೬೨. ಅಲ್ಲಿ ರಾಮನು ಹದಿನಾಲ್ಕು ಸಾವಿರ ರೀತಿಯಾಗಿ ತನ್ನ ರೂಪಗಳನ್ನು ತೋರ್ಪಡಿಸುತ್ತಾ ಕ್ಷಣಕಾಲದಲ್ಲಿಯೇ ಅವರೆಲ್ಲರನ್ನೂ ಕೊಂದನು.

೬೩. ಈ ರೀತಿಯಾಗಿ ಬಾಣಗಳಿಂದ ಖರತ್ರಿಶಿರದೂಷಣರನ್ನು ಕೊಂದು ಹದಿನಾಲ್ಕು ಸಾವಿರ ರಾಕ್ಷಸರನ್ನೂ ಯಮನ ಮನೆಗೆ ಕಳುಹಿಸಿದನು.

ಮುಹೂರ್ತೇನ ತು ರಾಮೇಣ ಸಹಸ್ರಾಣಿ ಚತುರ್ದಶ ।
ಮಿತಾ ಸೇನಾ ಖರಾದ್ಯೈಶ್ಚ ನಿಹತಾ ಗೌತಮೀತಟೇ ॥ ೬೪ ॥

ಖರಾದ್ಯಾಃ ಕಂಟಕಾ ಯತ್ರ ಸ್ಥಿತಾಸ್ತಚ್ಚ ತ್ರಿಕಂಟಕಂ ।
ಕ್ಷೇತ್ರಂ ಖ್ಯಾತಂ ತ್ರ್ಯಂಬಕಾಖ್ಯಂ ತದೇವ ಪ್ರೋಚ್ಯತೇ ಭುವಿ ॥ ೬೫ ॥

ಜನಸ್ಥಾನಂ ಭೂಸುರಾಣಾಂ ದದೌ ವಸ್ತುಂ ರಘೂದ್ವಹಃ ।
ಅಥ ಸೀತಾ ಸಮಾಲಿಂಗ್ಯ ರಾಘವಂ ಪ್ರಶಶಂಸ ಸಾ ॥ ೬೬ ॥

ಅಥ ತಾಂ ಜಾನಕೀಂ ಪ್ರಾಹ ರಾಮೋ ರಹಸಿ ಸಾದರಂ ।
ಸೀತೇ ತ್ವಂ ತ್ರಿವಿಧಾ ಭೂತ್ವಾ ರಜೋರೂಪಾ ವಸಾನಲೇ ॥ ೬೭ ॥

---

೬೪. ಆ ಗೌತಮೀ ನದಿಯ ದಡದಲ್ಲಿ ರಾಮನು ಹದಿನಾಲ್ಕು ಸಾವಿರ ರಾಕ್ಷಸರನ್ನೂ ಖರಾದಿಗಳನ್ನೂ ಕೊಂದನು.

೬೫. ಖರ, ತ್ರಿಶಿರ ದೂಷಣರು ಮೂರು ಜನರೂ ಎಲ್ಲಿ ಕಂಟಕ ಸ್ವರೂಪರಾಗಿದ್ದರೋ ಆ ಜಾಗವು ತ್ರಿಕಂಟಕವೆನ್ನಿಸಿಕೊಂಡಿದ್ದಿತು. ಈಗ ಅದೈ ತ್ರಿಕಂಟಕವೆಂಬ ಕ್ಷೇತ್ರವಾಯಿತು. ಈಗ ಆ ಜಾಗವು ತ್ರ್ಯಂಬಕ ಕ್ಷೇತ್ರವೆಂದು ಪ್ರಸಿದ್ಧಿಯಾಗಿದೆ.

೬೬. ಆಗ ರಾಮನು ಅವರೆಲ್ಲರನ್ನೂ ಸಂಹರಿಸಿ ಆ ವನದಲ್ಲಿ ಬ್ರಾಹ್ಮಣರು ವಾಸಮಾಡಿಕೊಂಡಿರಲು ಅನುಕೂಲವಾಗುವಂತೆ ಮಾಡಿಕೊಟ್ಟನು. ಅನಂತರ ಸೀತೆಯು ರಾಮನನ್ನು ಆಲಿಂಗಿಸಿಕೊಂಡು ಬಹುವಾಗಿ ಹೊಗಳಿದಳು.

೬೭. ಆಗ ರಾಮನು ಗುಟ್ಟಾಗಿ ಸೀತೆಯನ್ನು ಕುರಿತು ಇಂತೆಂದು ಹೇಳಿದನು. ಎಲೈ ಸೀತೆಯೆ! ನೀನು ಮೂರು ರೂಪಗಳಾಗಿ ಭಾಗವಾಗು. ತೇಜೋರೂಪದಿಂದ ಅಗ್ನಿಯಲ್ಲಿ ಸೇರಿಕೊಂಡಿರು.

ವಾಮಾಂಗೇ ಮೇ ಸತ್ವರೂಪಾ ವಸ ಛಾಯಾ ತಮೋಮಯೀ ।
ಪಂಚವಟ್ಯಾಂ ದಶಾಸ್ಯಸ್ಯ ಮೋಹನಾರ್ಥಂ ವಸಾತ್ರ ವೈ ॥ ೬೮ ॥

ತದ್ರಾಮವಚನಂ ಶ್ರುತ್ವಾ ತಥಾ ಸೀತಾ ಚಕಾರ ಸಾ ।
ತತಃ ಶೂರ್ಪಣಖಾ ಲಂಕಾಂ ಗತ್ವಾ ರಾವಣಮಬ್ರವೀತ್ ॥ ೬೯ ॥

ಧಿಕ್ ತ್ವಾಂ ರಾಕ್ಷಸರಾಜಾನಂ ವೃತ್ತಂ ಚಾರೈರ್ನ ವೇತ್ಸಿ ಯಃ ।
ಚತುರ್ದಶಸಹಸ್ರಾ ಸಾ ಸೇನಾ ತ್ವದ್ಬಂಧುಭಿಃ ಸಹ ॥ ೭೦ ॥

ಮಾನುಷೇಣೈವ ರಾಮೇಣ ಜನಸ್ಥಾನೇ ನಿಪಾತಿತಾ ।
ತತ್ತಸ್ಯಾ ವಚನಂ ಶ್ರುತ್ವಾ ತಾಂ ದೃಷ್ಟ್ವಾ ತಾದೃಶೀಂ ತದಾ ॥ ೭೧ ॥

---

೬೮. ಸತ್ವರೂಪಳಾಗಿ ನನ್ನ ಎಡಗಡೆಯಲ್ಲಿ ವಾಸವಾಗಿರು. ತಮೋಗುಣ ವಾದ ನಿನ್ನ ಛಾಯೆಯನ್ನು ಇಲ್ಲಿಟ್ಟು ಈ ಪಂಚವಟಿಯಲ್ಲಿ ದಶಾಸ್ಯನು ಬಂದಾಗ ಅವನು ಅದನ್ನು ಮೋಹಿಸುವಂತೆ ಮಾಡು.

೬೯. ರಾಮನ ಈ ಮಾತನ್ನು ಕೇಳಿ ಸೀತೆಯು ಅದರಂತೆಯೇ ಮಾಡಿದಳು. ಆಗ ಶೂರ್ಪಣಖೆಯು ಲಂಕೆಗೆ ಹೋಗಿ ರಾವಣನನ್ನು ಕುರಿತು ಇಂತೆಂದಳು.

೭೦-೭೧. ನೀನು ರಾಕ್ಷಸ ರಾಜನಾಗಿ ಕೆಟ್ಟೆ ! ಚಾರರಿಂದ ಸಮಾಚಾರ ಗಳನ್ನೂ ತಿಳಿದುಕೊಳ್ಳದಿರುವೆಯಲ್ಲ ! ಕೇವಲ ಮನುಷ್ಯ ಮಾತ್ರದವನಾದ ರಾಮನು ಜನಸ್ಥಾನದಲ್ಲಿ ನಿನ್ನ ಹದಿನಾಲ್ಕು ಸಾವಿರ ಸೈನ್ಯವನ್ನೂ ಖರ, ತ್ರಿಶಿರ, ದೂಷಣರನ್ನೂ ಕೊಂದು ಹಾಕಿರುವನು. ಇಂತೆನ್ನಲು ಆಕೆಯ ಆ ಮಾತನು ರಾವಣನು ಕೇಳಿದನು. ಮತ್ತು ಆಕೆಯು ವಿಕಾರರೂಪವನ್ನು ಹೊಂದಿರು ವುದನ್ನೂ ನೋಡಿದನು.

ಸಿಂಹಾಸನಾಚ್ಚ ಚಾಲಾಥ ಪುನಃ ಪಪ್ರಚ್ಛ ತಾಂ ಸ್ವಸಾಂ ।
ವದ ಕಿಂ ಕಾರಣಂ ಯುದ್ಧೇ ಪ್ರಾಹ ಸಾ ರಾಕ್ಷಸೇಶ್ವರಂ ॥ ೭೨ ॥

ಸ್ತ್ರೀರತ್ನಂ ಜಾನಕೀಂ ದೃಷ್ಟ್ವಾ ಮಯಾ ಚಿತ್ತೇ ವಿಚಿಂತಿತಂ ।
ರಾವಣಾರ್ಥಂ ವಿನೇಷ್ಯಾಮಿ ಧರ್ತುಂ ತಾಂ ತತ್ಪುರೋ ಗತಾ ॥ ೭೩ ॥

ತಾವದ್ಬಾಣೇನ ನೀತಾಹಂ ದಶಾಮೇತಾಂ ತು ರಾವಣ ।
ಸೌಮಿತ್ರಿಣಾ ಪಂಚವಟ್ಯಾಮಾಜ್ಞಯಾ ರಾಘವಸ್ಯ ಚ ॥ ೭೪ ॥

ಸಾಂಬೋಽಪಿ ಮೇ ಹತಃ ಪುತ್ರಸ್ತಪ್ಯಮಾನೋ ನಿರರ್ಥಕಂ ।
ಮತ್ತೋಷಾರ್ಥಂ ಕೃತಂ ಯುದ್ಧಂ ಬಂಧುಭಿಸ್ತೇ ನಿಪಾತಿತಾಃ ॥ ೭೫ ॥

---

೭೨. ಒಡನೆಯೇ ಸಿಂಹಾಸನದಿಂದ ಮುಂದಕ್ಕೆ ಬಗ್ಗಿ ಮತ್ತೆ ಆ ತಂಗಿಯನ್ನು ಸಮಾಚಾರವೇನೆಂದು ಕೇಳಿದನು. ಎಲೈ ತಂಗಿಯೆ ! ಯುದ್ಧಕ್ಕೆ ಕಾರಣವೇನು ? ಎನ್ನಲು ಆಕೆಯು ಆ ರಾಕ್ಷಸೇಶ್ವರನಿಗೆ ಇಂತೆಂದಳು.

೭೩. ಅಲ್ಲಿದ್ದ ಒಬ್ಬಳು ಸುಂದರಿಯಾದ ಹೆಂಗಸನ್ನು ನೋಡಿ ನಾನು ಮನಸ್ಸಿನಲ್ಲಿ ಇವಳು ರಾವಣನಿಗೆ ಯೋಗ್ಯಳೆಂದು ತಿಳಿದು ಅವಳನ್ನು ಹಿಡಿದು ತರಲು ಅವಳ ಹತ್ತಿರಕ್ಕೆ ಹೋದೆನು.

೭೪. ಆಗ ರಾಮನ ಅಪ್ಪಣೆಯ ಮೇರೆಗೆ ಲಕ್ಷ್ಮಣನು ನನಗೆ ಈ ರೀತಿಯಾದ ಅವಸ್ಥೆಯನ್ನು ಉಂಟುಮಾಡಿದನು. ಪಂಚವಟಿಯಲ್ಲಿಯೇ ಈ ವಿಷಯವೆಲ್ಲವೂ ನಡೆಯಿತು.

೭೫. ತಪಸ್ಸನ್ನು ಮಾಡುತ್ತಿದ್ದ ನನ್ನ ಮಗನಾದ ಸಾಂಬನನ್ನು ನಿರರ್ಥಕವಾಗಿ ಕೊಂದರು. ನನ್ನ ದುಃಖವನ್ನು ಕೇಳಿ ನನಗೆ ಸಮಾಧಾನ ಮಾಡಲು ಅವರು ಯುದ್ಧಕ್ಕೆ ಹೋಗಲು ಆ ಹದಿನಾಲ್ಕು ಸಾವಿರ ಜನರನ್ನೂ ರಾಮನು ಕೊಂದು ಹಾಕಿದನು.

ಯದ್ಯಸ್ತಿ ಪೌರುಷಂ ಕಿಂಚಿತ್ತರ್ಹಿ ಸೀತಾಂ ಸಮಾನಯ ।
ನೋ ಚೇದಧೋಮುಖಸ್ತಿಷ್ಠ ಯಥಾ ಸ್ತ್ರೀ ಗತಭರ್ತೃಕಾ ॥ ೭೬ ॥

ತತ್ತಸ್ಯ ವಚನಂ ಶ್ರುತ್ವಾ ಸಾಂತ್ವಯಾಮಾಸ ತಾಂ ಸ್ವಸಾಂ ।
ತೌ ರಾಮಲಕ್ಷ್ಮಣೌ ಹತ್ವಾ ತವ ಶೋಕಾಶ್ರುಮಾರ್ಜನಂ ॥ ೭೭ ॥

ಕರೋಮ್ಯಹಂ ಲೋಹಿತೇನ ತಯೋಃ ಖೇದಂ ಭಜಸ್ವ ಮಾ ।
ಏವಂ ನಾನಾವಿಧೈರ್ವಾಕ್ಯೈಸ್ಸಾಂತ್ವಯಿತ್ವಾ ಸ್ವಸಾಂ ಮುಹುಃ ॥ ೭೮ ॥

ಸ್ವಹಿತಸ್ಯೋಪದೇಷ್ಟಾರಂ ಮಾತುಲಂ ತಪಸಿ ಸ್ಥಿತಂ ।
ಗತ್ವಾ ರಥೇನ ಮಾರೀಚಂ ತಸ್ಮೈ ವೃತ್ತಂ ನ್ಯವೇದಯತ್ ॥ ೭೯ ॥

---

೭೬. ನಿನಗೇನಾದರೂ ಪೌರುಷವಿರುವ ಪಕ್ಷದಲ್ಲಿ ಸೀತೆಯನ್ನು ತೆಗೆದು ಕೊಂಡು ಬಾ. ಪೌರುಷವಿಲ್ಲದಿದ್ದರೆ ಗಂಡಸತ್ತ ಮುಂಡೆಯಂತೆ ತಲೆಯನ್ನು ಬಗ್ಗಿಸಿಕೊಂಡಿರು. ಎಂದಳು.

೭೭. ರಾವಣನು ಆಕೆಯ ಮಾತನ್ನು ಕೇಳಿ ಸಮಾಧಾನ ಪಡಿಸಿದನು. ಆ ರಾಮಲಕ್ಷ್ಮಣರನ್ನು ಯುದ್ಧದಲ್ಲಿ ಕೊಂದು ನಿನ್ನ ದುಃಖವನ್ನು ನಾಶಮಾಡುತ್ತೇನೆ.

೭೮. ಅವರ ರಕ್ತದಿಂದಲೇ ನಿನ್ನನ್ನು ತೃಪ್ತಿಪಡಿಸುತ್ತೇನೆ. ಅವರ ವಿಷಯದ ದುಃಖವನ್ನು ನೀನು ಬಿಟ್ಟುಬಿಡು. ಇವೇ ಮುಂತಾದ ಬಗೆ ಬಗೆಯ ಮಾತುಗಳಿಂದ ರಾವಣನು ತಂಗಿಯನ್ನು ಸಮಾಧಾನ ಪಡಿಸಿದನು.

೭೯. ಅನಂತರ ರಾವಣನು ತನಗೆ ಒಳ್ಳೆಯದನ್ನು ಉಪದೇಶಮಾಡುವ ಈಗ ತಪಸ್ಸು ಮಾಡುತ್ತಿರುವ ಸೋದರಮಾವನಾದ ಮಾರೀಚನ ಬಳಿಗೆ ರಥದಲ್ಲಿ ಕುಳಿತು ಹೋಗಿ ಅವನಿಗೆ ವಿಷಯಗಳೆಲ್ಲವನ್ನೂ ತಿಳಿಸಿದನು.

ಸೋಽಥ ತಂ ಭೀಷಯಾಮಾಸ ಭಾಗಿನೇಯಂ ಮುಹುರ್ಮುಹುಃ ।
ವಿಶ್ವಾಮಿತ್ರಾಧ್ವರೇ ತ್ಯಕ್ತಮಾತ್ಮಾನಂ ತಂ ನ್ಯವೇದಯತ್ ॥ ೮೦ ॥

ರಾಮಾಖ್ಯಯಾ ರಥಂ ರತ್ನಂ ರಜತಂ ರುಕ್ಮಭೂಷಿತಂ ।
ಶ್ರುತ್ವಾಹಂ ರಾದಿ ಯತ್ಕಿಂಚಿದ್ರಾಮಂ ಮತ್ವಾ ಬಿಭೇಮ್ಯಹಂ ॥ ೮೧ ॥

ಕೇನ ತೇ ಶಿಕ್ಷಿತಾ ಬುದ್ಧಿರಿಯಂ ಲಂಕಾವಿಘಾತಿನೀ ।
ಆಪ್ತರೂಪೋಽಸ್ತಿ ಕಶ್ಶತ್ರುಃ ಕೇನೇಯಂ ಶಿಕ್ಷಿತಾ ಮತಿಃ ॥ ೮೨ ॥

ಕಥಾಂ ನ ಕುರು ರಾಮಸ್ಯ ತಂ ದೃಷ್ಟ್ವಾ ತ್ವಂ ಮರಿಷ್ಯಸಿ ।
ತತಃ ಕ್ರೋಧೇನ ತಂ ಪ್ರಾಹ ಯದಿ ನಾಯಾಸಿ ರಾಘವಂ ॥ ೮೩ ॥

---

೮೦. ಅದನ್ನು ಕೇಳಿ ಮಾರೀಚನು ರಾಮನು ಬಹು ಶೂರನೆಂಬುದಕ್ಕೆ ಅನೇಕ ಉದಾರಣೆಗಳನ್ನು ಕೊಟ್ಟು ಹೆದರಿಸಿದನು. ಅಲ್ಲದೆ ವಿಶ್ವಾಮಿತ್ರನ ಯಾಗದಲ್ಲಿ ರಾಮನು ತನ್ನನ್ನು ಕೊಲ್ಲದೆಯೆ ಬಿಟ್ಟುದನ್ನೂ ತಿಳಿಸಿದನು.

೮೧. ಎಲೈ ರಾವಣನೆ ! ರಾಮನ ಹೆಸರಿನ ಹೆದರಿಕೆಯಿಂದ ರಥ, ರತ್ನ, ರಜತ, ರುಕ್ಮ ಇವೇ ಮುಂತಾದ ರಕಾರಾದಿಯಾದ ಪದಗಳನ್ನು ಕೇಳಿದರೆ ರಾಮನೆಂದು ತಿಳಿದು ಈಗಲೂ ಹೆದರುತ್ತೇನೆ.

೮೨. ಲಂಕೆಯನ್ನು ನಾಶಮಾಡುವ ಈ ರೀತಿಯಾದ ಬುದ್ಧಿಯನ್ನು ನಿನಗೆ ಉಪದೇಶಮಾಡಿದವರಾರು ? ಈ ಬುದ್ಧಿಯನ್ನು ಹೇಳಿದವನು ನಿನಗೆ ಆಪ್ತರೂಪನಾದ ಶತ್ರುವಲ್ಲದೆ ಬೇರೆಯಲ್ಲ. ಅಂತಹವನು ನಿನಗೆ ಯಾವನಿರುವನು?

೮೩. ರಾಮನ ವಿಷಯವನ್ನೇ ನೀನು ಎತ್ತಬೇಡ. ಅವನನ್ನು ನೋಡಿದರೇನೇ ನೀನು ಸತ್ತು ಹೋಗುತ್ತೀಯೆ. ಎನ್ನಲು ಮಾರೀಚನ ಈ ಮಾತನ್ನು ಕೇಳಿ ರಾವಣನು ಕೋಪಗೊಂಡು ಅವನನ್ನು ಕುರಿತು ಇಂತೆಂದನು.

ಮಯಾ ತರ್ಹಿ ವಧಿಷ್ಯಾಮಿ ತ್ವಾಮತಃ ಕುರು ಮದ್ವಚಃ ।
ಭೂತ್ವಾ ತ್ವಂ ಮೃಗರೂಪಶ್ಚ ರಾಮಸ್ತ್ವಾಮನುಯಾಸ್ಯತಿ ॥ ೮೪ ॥

ತ್ವಂ ಶಬ್ದಂ ಕುರು ರಾಮಸ್ಯ ಲಕ್ಷ್ಮಣಸ್ತೇನ ಯಾಸ್ಯತಿ ।
ತತಸ್ತಾಂ ಜಾನಕೀಂ ವೇಗಾಲ್ಲಂಕಾಂ ಸ್ವಾಮಾನಯಾಮ್ಯಹಂ ॥ ೮೫ ॥

ಲಂಕಾಯಾಸ್ತವ ದಾಸ್ಯಾಮಿ ಸ್ವೀಯರಾಜ್ಯಾರ್ಧಮಾದರಾತ್ ।
ಇತಿ ತಸ್ಯಾಗ್ರಹಂ ದೃಷ್ಟ್ವಾ ಮಾರೀಚೋ ಹೃದ್ಯಚಿಂತಯತ್ ॥ ೮೬ ॥

ರಾಮಹಸ್ತಾನ್ಮೃತಿಃ ಶ್ರೇಷ್ಠಾ ಮಾಸ್ತು ರಾವಣಹಸ್ತತಃ ।
ಇತಿ ನಿಶ್ಚಿತ್ಯ ಮಾರೀಚಸ್ತಥೇತ್ಯುಕ್ತ್ವಾ ಯಯೌ ತದಾ ॥ ೮೭ ॥

---

೮೪. ನೀನು ರಾಮನ ಬಳಿಗೆ ಬಾರದಿದ್ದರೆ ನಾನೇ ನಿನ್ನನ್ನು ಕೊಂದು ಹಾಕುತ್ತೇನೆ. ಆದುದರಿಂದ ನಾನು ಹೇಳಿದಂತೆ ಮಾಡು. ನೀನು ಮೃಗದ ರೂಪವನ್ನು ಧರಿಸಿ ಬಾ. ರಾಮನು ನಿನ್ನನ್ನು ಅನುಸರಿಸಿ ಬರುವನು.

೮೫. ಕೆಲವು ದೂರಹೋದಮೇಲೆ ರಾಮನಂತೆ ಶಬ್ದಮಾಡು. ಇದನ್ನು ಕೇಳಿ ಲಕ್ಷ್ಮಣನು ನಿನ್ನಲ್ಲಿಗೆ ಬರುವನು. ಅನಂತರ ನಿರ್ಬಾಧಕವಾಗಿ ಆ ಸೀತೆಯನ್ನು ಲಂಕೆಗೆ ತೆಗೆದುಕೊಂಡು ಬರುತ್ತೇನೆ.

೮೬. ಆಮೇಲೆ ಲಂಕೆಯ ರಾಜ್ಯದಲ್ಲಿ ನಿನಗೆ ಅರ್ಧರಾಜ್ಯವನ್ನು ಕೊಡುತ್ತೇನೆ. ಎನ್ನಲು ಈ ರೀತಿಯಾದ ರಾವಣನ ನಿರ್ಬಂಧವನ್ನು ನೋಡಿ ಮಾರೀಚನು ಮನಸ್ಸಿನಲ್ಲಿ ಇಂತೆಂದು ಯೋಚಿಸಿದನು.

೮೭. ನನಗೆ ರಾಮನ ಕೈಯ್ಯಿಂದ ಮರಣವು ಉತ್ತಮವಾದುದೇ ಹೊರತು ಈ ರಾವಣನ ಕೈಯ್ಯಿಂದ ಮರಣವು ಉತ್ತಮವಲ್ಲ. ಎಂಬುದಾಗಿ ನಿಶ್ಚಯಿಸಿ ಮಾರೀಚನು ರಾವಣನಿಗ ಹಾಗೆಯೇ ಆಗಲೆಂದು ಹೇಳಿ ಹೊರಟನು.

ರಾವಣೇನ ರಥೇ ಸ್ಥಿತ್ವಾ ಗತ್ವಾ ಪಂಚವಟೀಂ ಪ್ರತಿ ।
ಭೂತ್ವಾ ಹೇಮಮಯಶ್ಚಿತ್ರೋ ಮೋಹಯಾಮಾಸ ಜಾನಕೀಂ ॥ ೮೮ ॥

ಸಾ ಛಾಯಾ ತಾಮಸೀ ದೃಷ್ಟ್ವಾ ಮೃಗಂ ರಾಘವಮಬ್ರವೀತ್ ।
ಕ್ರೀಡಾರ್ಥಂ ಮಾಂ ಮೃಗಂ ಚೇಮಂ ಧೃತ್ವಾ ದೇಹಿ ರಘೂತ್ತಮ ॥ ೮೯ ॥

ಮೃಗಶ್ಚೇದ್ಬಾಣಭಿನ್ನಾಂಗಃ ಕರೋಮಿ ಕಂಚುಕೀಂ ತ್ವಚಃ ।
ತತ್ತಸ್ಯಾ ವಚನಂ ಶ್ರುತ್ವಾ ಜ್ಞಾತ್ವಾ ಸರ್ವಂ ರಘೂತ್ತಮಃ ॥ ೯೦ ॥

ಸೀತಾಯಾ ರಕ್ಷಣೇ ಬಂಧುಂ ಸಂಸ್ಥಾಪ್ಯಾಶು ಮೃಗಂ ಯಯೌ ।
ತತೋ ಪಲಾಯನಂ ಚಕ್ರೇ ಮೃಗೋ ರಾಮಂ ವಿಕರ್ಷಯನ್ ॥ ೯೧ ॥

---

೮೮. ರಾವಣನೊಡನೆ ರಥದಲ್ಲಿ ಕುಳಿತು ಪಂಚವಟಿಗೆ ಹೋದನು. ಅಲ್ಲಿ ಚಿನ್ನದ ಜಿಂಕೆಯಾಗಿ ಓಡಿಯಾಡುತ್ತಾ ಜಾನಕಿಗೆ ಆಸೆಯನ್ನು ಉಂಟು ಮಾಡಿದನು.

೮೯-೯೦. ಅಲ್ಲಿದ್ದ ತಮೋರೂಪಳಾದ ಛಾಯಾ ಜಾನಕಿಯು ಈ ಮೃಗವನ್ನು ನೋಡಿ ರಾಮನನ್ನು ಕುರಿತು ಇಂತೆಂದಳು. ಎಲೈ ರಾಮನೆ! ಈ ಮೃಗವನ್ನು ನನಗೆ ಕ್ರೀಡೆಗೋಸ್ಕರ ತಂದುಕೊಡು. ಒಂದುವೇಳೆ ಅದು ಸಿಕ್ಕದಿದ್ದರೆ ಬಾಣದಿಂದ ಅದನ್ನು ಕೊಂದು ಅದರ ಚರ್ಮವನ್ನು ತಂದರೆ ಅದರಿಂದ ರೌಕೆಯನ್ನು ಮಾಡಿಕೊಳ್ಳುತ್ತೇನೆ. ಎಂದಳು. ಆಕೆಯ ಮಾತನ್ನು ಕೇಳಿ ನಡೆಯಬೇಕಾದುದೆಲ್ಲವನ್ನೂ ರಾಮನು ಯೋಚಿಸಿಕೊಂಡನು.

೯೧. ಸೀತೆಯನ್ನು ರಕ್ಷಿಸಲು ಲಕ್ಷ್ಮಣನನ್ನು ನಿಯಮಿಸಿ ತಾನು ಆ ಮೃಗವನ್ನು ತರಲು ಹೊರಟನು. ಆ ಮೃಗವು ರಾಮನನ್ನು ವಂಚಿಸಿ ಎಳೆದುಕೊಂಡು ಹೋಗುತ್ತಾ ಓಡಿತು.

ರಾಮಬಾಣೇನ ಭಿನ್ನಾಂಗಃ ಶಬ್ದಂ ದೀರ್ಘಂ ಚಕಾರ ಸಃ ।
ಹಾ ಸೌಮಿತ್ರೇ ಸಮಾಗಚ್ಛ ಹಾ ಹತೋಸ್ಮ್ಯದ್ಯ ಕಾನನೇ ॥ ೯೨ ॥

ಇತ್ಯುಕ್ತ್ವಾ ರಾಮವದ್ವಾಚಾ ಮಮಾರ ರುಧಿರಂ ವಮನ್ |
ತಂ ಶಬ್ದಂ ಜಾನಕೀಂ ಶ್ರುತ್ವಾ ಚೋದಯಾಮಾಸ ಲಕ್ಷ್ಮಣಂ ॥ ೯೩ ॥

ಸೋಽಹ್ಯಾಹ ರಾಮವಚನಂ ನೇದಂ ಸೀತೇ ಭಯಂ ತ್ಯಜ ।
ತತಸ್ಸಾ ತಂ ಪುನಃ ಪ್ರಾಹ ಜಾನಾಮಿ ತವ ಚೇಷ್ಟಿತಂ ॥ ೯೪ ॥

ಭರತಸ್ಯೋಪದೇಶೇನ ಮೃತಿಂ ರಾಮಸ್ಯ ವಾಂಛಸಿ ।
ಅಥವಾ ಮೇಭಿಲಾಷೋಸ್ತಿ ತರ್ಹಿ ಪ್ರಾಣಾಂಸ್ತ್ಯಜಾಮ್ಯಹಂ ॥ ೯೫ ॥

---

೯೨. ಕೊನೆಗೆ ಅದು ಸಿಕ್ಕದಿರಲು ರಾಮನು ಅದನ್ನು ಬಾಣದಿಂದ ಹೊಡೆದನು. ಆ ಏಟನ್ನು ತಿಂದ ಮೃಗವು ಹಾ ! ಸೌಮಿತ್ರಿಯೆ ! ಬಾ. ಕಾಡಿನಲ್ಲಿ ಕೊಲ್ಲಲ್ಪಟ್ಟೆನು. ಎಂದು ಗಟ್ಟಿಯಾಗಿ ಕೂಗಿತು.

೯೩. ಆ ಮಾರೀಚನು ರಾಮನ ಧ್ವನಿಯಂತೆ ಧ್ವನಿಮಾಡಿಕೊಂಡು ಕೂಗಿ ರಕ್ತವನ್ನು ಕಾರುತ್ತಾ ಸತ್ತನು. ಆ ಶಬ್ದವನ್ನು ಜಾನಕಿಯು ಕೇಳಿ ಲಕ್ಷ್ಮಣನನ್ನು ಹೋಗುವಂತೆ ಪ್ರೇರೇಪಿಸಿದಳು.

೯೪. ಆದಕ್ಕೆ ಆ ಲಕ್ಷ್ಮಣನು ಎಲೈ ಸೀತೆಯೆ ! ಇದು ರಾಮನ ಧ್ವನಿಯಲ್ಲ. ಭಯಪಡಬೇಡ. ಎಂದನು. ಮತ್ತೆ ಆಕೆಯು ಲಕ್ಷ್ಮಣನೆ ! ನಾನು ನಿನ್ನ ನಡೆತೆಯನ್ನು ಬಲ್ಲೆನು. ಅದು ನನಗೆ ಗೊತ್ತಾಯಿತು.

೯೫. ಭರತನ ಉಪದೇಶದಿಂದ ರಾಮನ ಮರಣವನ್ನು ಅಪೇಕ್ಷಿಸುತ್ತಿದ್ದೀಯೆ ! ಅದಿಲ್ಲದಿದ್ದರೆ ನನ್ನಮೇಲೆ ನಿನಗೆ ಆಸೆಯಿದೆ. ಹಾಗಾದರೆ ನಾನು ಈ ಪ್ರಾಣಗಳನ್ನು ಬಿಟ್ಟು ಬಿಡುತ್ತೇನೆ ಎಂದಳು.

ತತ್ಕ್ರೂರವಚನಂ ಶ್ರುತ್ವಾ ತಸ್ಯಾ ಜ್ಞಾತ್ವಾ ಮಹದ್ಭಯಂ ।
ಜಾನಕೀಂ ಪ್ರಾಹ ಸೌಮಿತ್ರಿರ್ಹೇ ಮಾತಶ್ಶೃಣು ಮದ್ವಚಃ ॥ ೯೬ ॥

ರಾಘವಾಜ್ಞಾಂ ಪುರಸ್ಕೃತ್ಯ ರಕ್ಷತ ಸ್ತ್ವಾಂ ಮಮ ತ್ವಯಾ ।
ತಾಡಿತಂ ವಾಕ್ಶರೇಣಾದ್ಯ ಭೋಕ್ಷ್ಯಸ್ಯಸ್ಯಾಚಿರಾತ್ಫಲಂ ॥ ೯೭ ॥

ತಥಾಪಿ ಶೃಣು ಮದ್ವಾಕ್ಯಂ ಯನ್ಮಯಾತೋಚ್ಯತೇ ಹಿತಂ ।
ಮಯೈತಾಂ ಧನುಷಾ ರೇಖಾಂ ಕೃತಾಂ ತ್ವತ್ಪರಿತೋಧುನಾ ॥ ೯೮ ॥

ತ್ವದ್ರಕ್ಷಣಾರ್ಥಂ ದುಷ್ಟಾನಾಂ ದುರ್ವಿಲಂಘ್ಯಾಂ ಮಹತ್ತಮಾಂ ।
ಮಾ ತ್ವಮುಲ್ಲಂಘಯಸ್ವೇಮಾಂ ಪ್ರಾಣೈಃ ಕಂಠಗತೈರಪಿ ॥ ೯೯ ॥

---

೯೬. ಆಕೆಯು ಈ ಕೆಟ್ಟ ಮಾತನ್ನು ಕೇಳಿ ಅವಳಿಗೆ ಬಹುವಾದ ಕಷ್ಟವು ಬರುವುದೆಂದು ಯೋಚಿಸಿ ಎಲೈ ತಾಯಿಯೆ! ನನ್ನ ಮಾತನ್ನು ಕೇಳು. ಎಂಬುದಾಗಿ ಹೇಳಿ ಇಂತೆಂದನು.

೯೭. ಎಲೈ ಸೀತೆಯೇ! ರಾಘವನ ಅಪ್ಪಣೆಯನ್ನು ಪುರಸ್ಕರಿಸಿಕೊಂಡು ನಿನ್ನನ್ನು ರಕ್ಷಿಸುತ್ತಿದ್ದೇನೆ. ಇಂತಹ ನನ್ನನ್ನು ನೀನು ಮಾತೆಂಬ ಬಾಣದಿಂದ ಹೊಡೆಯುತ್ತಿದ್ದೀಯೆ. ಇದಕ್ಕೆ ಫಲವನ್ನು ಸ್ವಲ್ಪಹೊತ್ತಿನಲ್ಲಿಯೇ ಅನುಭವಿಸುತ್ತೀಯೆ.

೯೮. ಆದರೂ ಕೂಡ ನಾನು ಹೇಳುವುದನ್ನು ಕೇಳು. ನಾನು ನಿನಗೆ ಹಿತವಾದ ಮಾತನ್ನೇ ಹೇಳುತ್ತೇನೆ. ನಾನು ನನ್ನ ಈ ಧನುಸ್ಸಿನಿಂದ ನಿನ್ನ ಸುತ್ತಲೂ ಗೆರೆಯನ್ನು ಈಗ ಎಳೆಯುತ್ತೇನೆ.

೯೯. ಇದು ನಿನ್ನನ್ನು ಕಾಪಾಡುತ್ತದೆ. ದುಷ್ಟರಿಗೆ ಇದನ್ನು ದಾಟಲು ಆಗುವುದಿಲ್ಲ. ಇದು ಬಹು ಉತ್ತಮವಾದುದು. ನಿನಗೆ ಪ್ರಾಣಗಳು ಹೋಗುವ ಕಷ್ಟಬಂದರೂ ಕೂಡ ನೀನು ಈ ರೇಖೆಯನ್ನು ದಾಟಬೇಡ.

ಇತ್ಯುಕ್ತ್ವಾ ಧನುಷಃ ಕೋಟ್ಯಾ ಕೃತ್ವಾ ರೇಖಾಂ ಸಮಂತತಃ |
ಬಾಹ್ಯದೇಶೇ ಪಂಚವಟ್ಯಾ ಸೌಮಿತ್ರಿಃ ಪರಿಘೋಪಮಾಂ ‖ ೧೦೦ ‖

ನತ್ವಾ ಸೀತಾಂ ತತಸ್ತೂಷ್ಣೀಂ ಯಯೌ ರಾಮಂ ತ್ವರಾನ್ವಿತಃ |
ಏತಸ್ಮಿನ್ನಂತರೇ ತತ್ರ ರಾವಣೋ ಭಿಕ್ಷುರೂಪಧೃಕ್ ‖ ೧೦೧ ‖

ಗತ್ವಾ ಪಂಚವಟೀದ್ವಾರಂ ರೇಖಾಯಾಶ್ಚ ಬಹಿಃ ಸ್ಥಿತಃ |
ನಾರಾಯಣೇತಿ ವೈ ಚೋಕ್ತ್ವಾ ತೂಷ್ಣೀಂ ತಸ್ಥೌ ಸ ರಾವಣಃ ‖ ೧೦೨ ‖

ತಾವಚ್ಛಾಯಾಮಯೀ ಸೀತಾ ಭಿಕ್ಷಾಂ ತಸ್ಮೈ ಸಮರ್ಪಿತಂ |
ಯಯೌ ದ್ವಾರಂ ದೀರ್ಘಹಸ್ತಾ ಗೃಹ್ಣೀಷ್ವೇತ್ಯಬ್ರವೀಚ್ಚ ತಂ ‖ ೧೦೩ ‖

ತದಾ ಭಿಕ್ಷುಃ ಪುನಃ ಪ್ರಾಹ ಸೀತಾಂ ಪಂಕಜಲೋಚನಾಂ |
ನಾಂಗೀಕರೋಮ್ಯಂತರೇಣ ಭಿಕ್ಷಾಮೇತಾಂ ತ್ವಯಾರ್ಪಿತಾಂ ‖ ೧೦೪ ‖

---

೧೦೦. ಹೀಗೆಂದು ಹೇಳಿ ಧನುಸ್ಸಿನ ತುದಿಯಿಂದ ಅವಳಿರುವ ಆ ಪಂಚವಟಿಯ ಸುತ್ತಲೂ ದೊಡ್ಡದಾಗಿ ರೇಖೆಯನ್ನು ಎಳೆದನು.

೧೦೧. ಅನಂತರ ಆಕೆಗೆ ನಮಸ್ಕರಿಸಿ ಏನನ್ನೂ ಹೇಳದೆ ಜಾಗ್ರತೆಯಾಗಿ ರಾಮನಿರುವಲ್ಲಿಗೆ ಹೊರಟುಹೋದನು. ಇಷ್ಟರಲ್ಲಿ ರಾವಣನು ಅಲ್ಲಿಗೆ ಸನ್ಯಾಸಿರೂಪದಿಂದ ಬಂದನು.

೧೦೨. ಅಲ್ಲಿಗೆ ಬಂದು ಆ ಪಂಚವಟಿಯ ಹೊರಭಾಗದಲ್ಲಿಯೇ ನಿಂತನು. ಆನಂತರ ನಾರಾಯಣ ಎಂಬುದಾಗಿ ಹೇಳಿ ಆ ರಾವಣನು ಸುಮ್ಮನೆ ನಿಂತನು.

೧೦೩. ಆಗ ಈ ಛಾಯಾರೂಪಳಾದ ಸೀತೆಯು ಅವನಿಗೆ ಭಿಕ್ಷೆಯನ್ನು ಹಾಕಲು ಬಾಗಿಲಿಗೆ ಬಂದು ಕೈಯ್ಯನ್ನು ನೀಡುತ್ತ ತೆಗೆದುಕೊ. ಎಂಬುದಾಗಿ ಅವನಿಗೆ ಹೇಳಿದಳು.

೧೦೪. ಆಗ ಆ ಸನ್ಯಾಸಿಯು ಸೀತೆಯನ್ನು ಕುರಿತು ನೀನು ಹಾಕುವ ಭಿಕ್ಷೆಯನ್ನು ನನಗೂ ನಿನಗೂ ಅಡ್ಡಲಾಗಿ ರೇಖೆಯಿರುವಾಗ ನಾನು ತೆಗೆದು ಕೊಳ್ಳುವುದಲ್ಲ.

ಗಾರ್ಹಸ್ಥ್ಯಂಚೇದ್ರಾಘವಸ್ಯ ರಕ್ಷಿತುಂ ತ್ವಂ ಸಮಿಚ್ಛಸಿ ।
ತರ್ಹಿ ರೇಖಾಂ ಸಮುಲ್ಲಂಘ್ಯ ಮಾಂ ಭಿಕ್ಷಾಂ ದಾತುಮರ್ಹಸಿ ॥ ೧೦೫ ॥

ತದ್ಭಿಕ್ಷುವಚನಂ ಶ್ರುತ್ವಾಽಧರ್ಮೋ ಭೂನ್ಮೇತಿಶಂಕಿತಾ ।
ರೇಖಾಬಹಿಸ್ಸವ್ಯಪಾದಂ ದತ್ವಾ ದೀರ್ಘಲಸತ್ಕರಾ ॥ ೧೦೬ ॥

ಗೃಹ್ಣೀಷ್ವೇಮಾಂ ವರಾಂ ಭಿಕ್ಷಾಮಿತಿ ತಂ ಪ್ರಾಹ ಜಾನಕೀ ।
ತತೋ ದಶಾಸ್ಯಸ್ತಾಂ ಧೃತ್ವಾ ಭಿಕ್ಷುರೂಪಂ ವಿಸೃಜ್ಯ ಚ ॥ ೧೦೭ ॥

ಖರವಾಹೇ ರಥೇ ಸೀತಾಂ ಸಂಸ್ಥಾಪ್ಯಾಥ ನ್ಯವರ್ತತ ।
ಯಾವದ್ಗಚ್ಛತಿ ವೇಗೇನ ತಾವದ್ದೃಷ್ಟೋ ಜಟಾಯುಷಾ ॥ ೧೦೮ ॥

---

೧೦೫. ರಾಘವನ ಗೃಹಸ್ಥಧರ್ಮವನ್ನು ರಕ್ಷಿಸಲು ನಿನಗೆ ಇಚ್ಛೆಯಿದ್ದರೆ ನೀನು ಈ ರೇಖೆಯಿಂದ ಹೊರಗೆ ಬಂದು ನನಗೆ ಭಿಕ್ಷೆಯನ್ನು ಕೊಡು ಎಂದನು.

೧೦೬. ಸನ್ಯಾಸಿಯ ಆ ಮಾತನ್ನು ಕೇಳಿ ತನಗೆ ಅಧರ್ಮಬರುವುದೆಂಬ ಶಂಕೆಯು ಸೀತೆಗೆ ಬಂದಿತು. ಆದುದರಿಂದ ಆ ರೇಖೆಯ ಹೊರಕ್ಕೆ ಎಡಗಾಲನ್ನು ಇಟ್ಟು ಕೈಯ್ಯನ್ನು ನೀಡಿದಳು.

೧೦೭. ಮತ್ತು ಈ ಭಿಕ್ಷೆಯನ್ನು ತೆಗೆದುಕೊ ? ಎಂದಳು. ಒಡನೆಯೇ ಆ ರಾವಣನು ಸನ್ಯಾಸಿಯ ರೂಪವನ್ನು ಬಿಟ್ಟು ತನ್ನ ರಾಕ್ಷಸರೂಪವನ್ನು ಹೊಂದಿದನು.

೧೦೮. ಹೇಸರ ಕತ್ತೆಯನ್ನು ಕಟ್ಟಿದ್ದ ತನ್ನ ರಥದೊಳಕ್ಕೆ ಸೀತೆಯನ್ನು ಹಿಡಿದು ಹಾಕಿಕೊಂಡನು. ತಾನು ಕೃತಕೃತ್ಯನಾದೆನೆಂದು ತಿಳಿದುಕೊಂಡನು. ಮತ್ತು ಹಿಂದಿರುಗಿ ಹೊರಟನು. ಸೀತೆಯನ್ನು ತೆಗೆದುಕೊಂಡು ಹೋಗುತ್ತಿರುವಾಗ ಈತನನ್ನು ಜಟಾಯುವು ಕಂಡನು.

ಚಕಾರ ತುಮುಲಂ ಯುದ್ಧಂ ರಾವಣೇನ ಸ ಪಕ್ಷಿರಾಟ್ ।
ನಿಜಪದ್ಭ್ಯಾಂ ಮುಖೇನಾಥ ಚೂರ್ಣೀಕೃತ್ಯ ರಥೋತ್ತಮಂ ॥ ೧೦೯ ॥

ಖರಾನಷ್ಟೌ ವಿನಿಷ್ಪಿಷ್ಯ ಬಭಂಜ ತದ್ಧನುರ್ಮಹತ್ ।
ಮುಕುಟಾನ್ ದಶ ಸಂಭಿದ್ಯ ಕೃತ್ವಾ ದೇಹಂ ತು ಜರ್ಜರಂ ॥ ೧೧೦ ॥

ಮೂರ್ಛಿತಂ ರಾವಣಂ ಕೃತ್ವಾ ಸಸೀತಸ್ಸಂನ್ಯವರ್ತತ ।
ಸ್ವಸ್ಥೀಭೂತೋ ದಶಾಸ್ಯೋಽಪಿ ತಾಡಯಾಮಾಸ ತಂ ಪದಾ ॥ ೧೧೧ ॥

ಕ್ರೋಧೇನ ಮಹತಾವಿಷ್ಟಃ ಪಕ್ಷಿಣಾ ಜರ್ಜ್ಝರೀಕೃತಃ ।
ತತೋ ಜಟಾಯುಃ ಪತಿತೋ ವಮನ್ ರಕ್ತಂ ಮುಖೇನ ಸಃ ॥ ೧೧೨ ॥

---

೧೦೯. ಆಗ ಆ ಪಕ್ಷಿರಾಜನು ತುಮುಲಯುದ್ಧವನ್ನು ಆ ರಾವಣನೊಡನೆ ಮಾಡಿದನು. ತನ್ನ ಕಾಲಿನಿಂದಲೂ ಕೊಕ್ಕಿನಿಂದಲೂ ಆ ರಾವಣನ ರಥವನ್ನು ಪುಡಿ ಪುಡಿ ಮಾಡಿದನು.

೧೧೦. ಅವನ ಹೇಸರ ಕತ್ತೆಗಳು ಸತ್ತುಹೋದುವು. ಕೈಯ್ಯಲ್ಲಿದ್ದ ಧನುಸ್ಸು ಮುರಿದು ಹೋಯಿತು. ಹತ್ತು ಕಿರೀಟಗಳು ಚೂರು ಚೂರಾದುವು. ಈ ರೀತಿಯಾಗಿ ಆ ಜಟಾಯುವು ಮಾಡಿದುದಲ್ಲದೆ ಆ ರಾವಣನ ಶರೀರವನ್ನೂ ನಜ್ಜುಗುಜ್ಜು ಮಾಡಿದನು.

೧೧೧. ಕೊನೆಗೆ ರಾವಣನು ಮೂರ್ಛೆ ಹೋಗಲು ಸೀತೆಯನ್ನು ಕರೆದು ಕೊಂಡು ಜಟಾಯುವು ಹಿಂದಿರುಗಿದನು. ಅನಂತರ ದಶಾಸ್ಯನು ಸುಧಾರಿಸಿ ಕೊಂಡು ಆ ಹಕ್ಕಿಯನ್ನು ಕಾಲುಗಳಿಂದ ಒದ್ದನು.

೧೧೨. ಈ ರಾವಣನು ಕೋಪದಿಂದ ಕೂಡಿಕೊಂಡು ಪಕ್ಷಿಯನ್ನು ಒದೆಯಲು ಪಕ್ಷಿಗೆ ಬಹುವಾಗಿ ಏಟುಬಿದ್ದಿತು. ಅನಂತರ ಜಟಾಯುವು ರಕ್ತವನ್ನು ಕಾರುತ್ತ ನೆಲದಮೇಲೆ ಬಿದ್ದನು.

ತತೋ ವಿಹಾಯಸಾ ಸೀತಾಂ ನಿನಾಯ ರಾವಣಃ ಪುನಃ ।
ರಾಮರಾಮೇತಿ ಜಲ್ಪಂತೀ ಸೀತಾ ಭೂನ್ಯಸ್ತಲೋಚನಾ ॥ ೧೧೩ ॥

ಉತ್ತರೀಯೆ ಬಬಂಧಾಥ ಪಥಿ ಸ್ವಾಭರಣಾನಿ ಹಾ ।
ದೃಷ್ಟ್ವಾಧಃ ಪರ್ವತೇ ಪ್ರೋಚ್ಚೈಸ್ಸಂಸ್ಥಿತಾನ್ ಪಂಚ ವಾನರಾನ್ ॥ ೧೧೪ ॥

ಪ್ರಾಕ್ಷಿಪತ್ಕಪಿಮಧ್ಯೇಥ ಸೂಚನಾರ್ಥಂ ರಘೂತ್ತಮಂ ।
ತತೋ ದಶಾಸ್ಯಸ್ತಾಂ ನೀತ್ವಾ ಹ್ಯಶೋಕೇ ಸಂನ್ಯವೇಶಯತ್ ॥ ೧೧೫ ॥

ಪ್ರಾರ್ಥಯಾಮಾಸ ತಾಂ ಸೀತಾಂ ನೋತ್ತರಂ ಸಾ ದದೌ ತದಾ ।
ತಸ್ಯಾಸ್ಸಂರಕ್ಷಣಾರ್ಥಾಯ ರಾಕ್ಷಸೀಶ್ಚ ಸಹಸ್ರಶಃ ॥ ೧೧೬ ॥

---

೧೧೩. ಆಮೇಲೆ ರಾವಣನು ಸೀತೆಯನ್ನು ಮತ್ತೆ ತೆಗೆದುಕೊಂಡು ಅಂತರಿಕ್ಷಮಾರ್ಗದಲ್ಲಿ ಹೊರಟನು. ಆಗ ಸೀತೆಯು ರಾಮ ! ರಾಮ ! ಎಂದೆನ್ನುತ್ತಾ ಕಣ್ಣುಗಳನ್ನು ಬಿಟ್ಟು ಹೊರಳಿಸುತ್ತಾ ಕೆಳಗೆ ನೋಡಿದಳು.

೧೧೪. ಆಗ ತನ್ನ ಒಡವೆಗಳನ್ನು ತೆಗೆದು ತನ್ನ ಹೊದೆಯುವ ಬಟ್ಟೆಯಲ್ಲಿ ಕಟ್ಟಿ ಅಲ್ಲಿರುವ ಪರ್ವತದ ತುದಿಯಲ್ಲಿ ಐದುಜನ ಕಪಿಗಳು ಕುಳಿತಿರುವುದನ್ನು ನೋಡಿ ಅವುಗಳಿದ್ದಲ್ಲಿಗೆ ಅದನ್ನು ಎಸೆದಳು.

೧೧೫. ಇವರನ್ನು ನೋಡಿ ರಾಮನಿಗೆ ತನ್ನ ವಿಷಯವನ್ನು ತಿಳಿಸಲೆಂದೇ ಎಸೆದಳು. ಆಭರಣಗಳು ಆ ಕಪಿಗಳ ಮಧ್ಯದಲ್ಲಿ ಬಿದ್ದಿತು. ದಶಾಸ್ಯನು ಆ ಸೀತೆಯನ್ನು ತೆಗೆದುಕೊಂಡು ಹೋಗಿ ತನ್ನ ಊರಿನಲ್ಲಿ ಅಶೋಕವನದ ಮಧ್ಯದಲ್ಲಿಟ್ಟನು.

೧೧೬. ಅಲ್ಲಿ ರಾವಣನು ಅನೇಕ ಬಗೆಯಾಗಿ ಪ್ರಾರ್ಥಿಸಿಕೊಳ್ಳಲು ಆಕೆಯು ಉತ್ತರವನ್ನೇ ಕೊಡಲಿಲ್ಲ. ಆಗ ಆಕೆಯನ್ನು ಕಾಪಾಡಲು ಅವಳ ಸುತ್ತಲೂ ಅನೇಕ ಜನ ರಾಕ್ಷಸಿಯರನ್ನು ಕಾವಲಿಟ್ಟನು.

ಆಜ್ಞಾಪಯದ್ದಶಾಸ್ಯಸ್ಸಃ ಸ್ವಯಂ ಗೇಹಂ ವಿವೇಶ ಹ ।
ತದೇಂದ್ರೋ ಬ್ರಹ್ಮವಾಕ್ಯೇನ ಪಾಯಸಂ ವರ್ಷತುಷ್ಟಿದಂ ॥ ೧೧೭ ॥

ದದೌ ರಹಸಿ ಸೀತಾಯೈ ತೇನ ತುಷ್ಟಾ ಬಭೂವ ಸಾ ।
ಸಮರ್ಪ್ಯ ಪಾಯಸಂ ಕಿಂಚಿದ್ರಾಮಾಯ ಲಕ್ಷ್ಮಣಾಯ ಚ ॥ ೧೧೮ ॥

ಸುರಾನತಿಥಯೇ ದತ್ವಾ ದತ್ವಾ ಧೇನುಂ ಚ ಖೇಚರಾನ್ ।
ದತ್ವಾಥ ತ್ರಿಜಟಾಂ ಕಿಂಚಿದ್ಭಕ್ಷಯಾಮಾಸ ಜಾನಕೀ ॥ ೧೧೯ ॥

ಸಮ್ಮಂತ್ರ್ಯ ರಾವಣೇನಾಪಿ ರಾಕ್ಷಾಸಾಶ್ಚೈವ ಷೋಡಶ ।
ಪ್ರೇಷಿತಾ ರಾಮಘಾತಾರ್ಥಂ ತೇ ಕಬಂಧೇನ ಭಕ್ಷಿತಾಃ ॥ ೧೨೦ ॥

---

೧೧೭. ಅನಂತರ ತಾನು ಮನೆಗೆ ಹೊರಟುಹೋದನು. ಇತ್ತ ಆ ಸೀತೆಯ ಆಹಾರದ ವಿಷಯದಲ್ಲಿ ಏನುಮಾಡಬೇಕೆಂದು ಯೋಚಿಸಿ ಬ್ರಹ್ಮನು ಇಂದ್ರನಿಗೆ ಹೇಳಿ ಒಂದುವರ್ಷಕಾಲ ತೃಪ್ತಿಯನ್ನುಂಟುಮಾಡುವ ಪಾಯಸವನ್ನು ಕೊಡಿಸಿದನು.

೧೧೮-೧೧೯. ಆ ಪಾಯಸವನ್ನು ಗುಟ್ಟಾಗಿ ಸೀತೆಗೆ ಕೊಡಲು ಆಕೆಯು ಅದರಿಂದಲೇ ತೃಪ್ತಳಾದಳು. ಅಲ್ಲದೆ ಪಾಯಸವನ್ನು ತಿನ್ನುವಾಗ ರಾಮನಿಗೂ ಲಕ್ಷ್ಮಣನಿಗೂ ಸ್ವಲ್ಪ ಸ್ವಲ್ಪವನ್ನು ಕೊಟ್ಟಳು. ದೇವತೆಗಳಿಗೂ ಅತಿಥಿಗಳಿಗೂ ಸಮರ್ಪಿಸಿದಳು. ಧೇನುವಿಗೂ ಅಂತರಿಕ್ಷದಲ್ಲಿ ಸಂಚರಿಸುವವರಿಗೂ ಸ್ವಲ್ಪ ಸ್ವಲ್ಪವನ್ನು ಕೊಟ್ಟಳು. ತ್ರಿಜಟೆಗೂ ಸ್ವಲ್ಪವನ್ನು ಕೊಟ್ಟು ತಾನು ಅನಂತರ ಆ ಪಾಯಸವನ್ನು ಭಕ್ಷಿಸಿದಳು.

೧೨೦. ಅನಂತರ ರಾವಣನು ಮಂತ್ರಿಗಳೊಡನೆ ಯೋಚಿಸಿ ಹದಿನಾರು ಜನ ರಾಕ್ಷಸರನ್ನು ಆ ರಾಮಲಕ್ಷ್ಮಣರನ್ನು ಕೊಲ್ಲಲು ಕಳುಹಿಸಿದನು. ಅವರೆಲ್ಲರನ್ನೂ ಆ ಕಬಂಧನು ತಿಂದುಬಿಟ್ಟನು.

ಯತ್ರ ಯತ್ರ ಪಂಚವಟ್ಯಾಂ ರಾಮಬಾಣಭಯಾನ್ಮೃಗಃ ।
ಚಚಾರ ಗೌತಮೀತೀರೇ ಸಂಸ್ಥಾನಂ ತತ್ರ ತತ್ರ ಹಿ ॥ ೧೨೧ ॥

ಸ್ಥಾನ ಸಂಜ್ಞಾನ್ಯನೇಕಾನಿ ಜಾತಾನಿ ಚ ಪುರಾಣಿ ಹಿ ।
ಮೃಗಸ್ಯ ಪತಿತಂ ಯತ್ರ ನೂಪುರಂ ಪರಿಧಾವತಃ ॥ ೧೨೨ ॥

ನೂಪುರಾಖ್ಯೋ ಮಹಾಗ್ರಾಮಃ ಪ್ರೋಚ್ಯತೇ ಗೌತಮೀತಟೇ ।
ರಾಮಬಾಣಪ್ರಹಾರೇಣ ಚಪಲಾಕ್ಷೋಽಪತದ್ಭುವಿ ॥ ೧೨೩ ॥

ಮೃಗೋ ಯತ್ರ ಮಹಾಂಸ್ತತ್ರ ಚಾಪಲ್ಯಗ್ರಾಮ ಈರ್ಯತೇ ।
ಗೋದಾತಟೇ ಗ್ರಾಮಭೂಮ್ಯಾಂ ರಾಮಬಾಣಹತೋ ಮೃಗಃ ॥ ೧೨೪ ॥

ಪತಿತೋ ಯತ್ರ ತಚ್ಚಿಹ್ನಂ ದೃಶ್ಯತೇಽದ್ಯಾಪಿ ಮಾನವೈಃ ।
ಸೌಮಿತ್ರಿಚಾಪಜಾ ರೇಖಾ ಪಂಚವಟ್ಯಾಸ್ಸಮಂತತಃ ॥ ೧೨೫ ॥

---

೧೨೧. ಪಂಚವಟಿಯಲ್ಲಿ ರಾಮಬಾಣಭಯದಿಂದ ಆ ಮಾರೀಚ ಮೃಗವು ಗೌತಮೀನದಿಯ ದಡದಲ್ಲಿ ಎಲ್ಲೆಲ್ಲಿ ಓಡಾಡಿತೋ ಅಲ್ಲೆಲ್ಲವೂ ಒಂದೊಂದು ಕ್ಷೇತ್ರವಾಯಿತು.

೧೨೨–೧೨೪. ಆ ತೀರ್ಥಗಳ ಹೆಸರಿನಿಂದಲೇ ಅಲ್ಲಲ್ಲಿ ಅನೇಕ ಪಟ್ಟಣಗಳುಂಟಾದುವು. ಆ ಮೃಗವು ಓಡಿಹೋಗುತ್ತಿರುವಾಗ ಕಾಲಿನ ಬಳೆಯು ಬಿದ್ದ ಜಾಗದಲ್ಲಿ ನೂಪುರವೆಂಬ ಗ್ರಾಮವು ಉಂಟಾಯಿತು. ಅದೂ ಕೂಡ ಗೌತಮೀನದಿಯ ದಡದಲ್ಲಿದೆ. ರಾಮನ ಬಾಣದ ಏಟಿನಿಂದ ಆ ಮೃಗವು ಬಿದ್ದ ಜಾಗದಲ್ಲಿ ಚಾಪಲ್ಯವೆಂಬ ಗ್ರಾಮವು ನಿರ್ಮಿತವಾಗಿದೆ.

೧೨೫. ಗೋದಾವರಿ ನದಿಯ ದಡದಲ್ಲಿ ಆ ಮೃಗವು ರಾಮಬಾಣದಿಂದ ಸತ್ತುಬಿದ್ದ ಜಾಗದ ಚಿಹ್ನೆಯು ಈಗಲೂ ಜನರಿಗೆ ಕಂಡುಬರುತ್ತಿದೆ. ಸೌಮಿತ್ರಿಯು ಪಂಚವಟಿಯಲ್ಲಿ ಧನುಸ್ಸಿನಿಂದ ಮಾಡಿದ ರೇಖೆಯು ಈಗಲೂ ಕಾಣುತ್ತಿದೆ.

ಅದ್ಯಾಪಿ ದೃಶ್ಯತೇ ಸ್ಪಷ್ಟಾ ನದೀರೂಪಾ ಭಯಾವಹಾ ।
ಪಾಷಾಣಭೂಮ್ಯಾಂ ತತ್ರೈವ ರಾವಣಸ್ಯ ಪದಂ ಮಹತ್ ॥ ೧೨೬ ॥

ಅದ್ಯಾಪಿ ದೃಶ್ಯತೇ ಭೀಮಂ ಗರ್ತರೂಪಂ ನರೋತ್ತಮೈಃ ।
ಖರಾದ್ಯೈರ್ಯುದ್ಧಸಮಯೇ ಪಂಚವಟ್ಯಾಂ ವಿದೇಹಜಾ ॥ ೧೨೭ ॥

ಗುಹಾಯಾಂ ಗೋಪಿತಾ ಭರ್ತ್ರಾ ಸಾದ್ಯಾಪಿ ತತ್ರ ದೃಶ್ಯತೇ ।
ತಥಾ ರಾಮೋ ಲಕ್ಷ್ಮಣೋಽಪಿ ಪಂಚವಟ್ಯಾಂ ಸದೈವ ಹಿ ॥ ೧೨೮ ॥

ದೃಶ್ಯತೇದ್ಯಾಪಿ ಭೋ ದೇವಿ ಸಜ್ಜನೈರ್ಜ್ಞಾನದೃಷ್ಟಿಭಿಃ ।
ಅಜ್ಞಾನದೃಷ್ಟಿಭಿಸ್ತೇ ತು ದೃಶ್ಯಂತೇ ಗ್ರಾವರೂಪಿಣಃ ॥ ೧೨೯ ॥

ರಾಮತೀರ್ಥಂ ರಾಮಕೃತಂ ಸೀತಾಲಕ್ಷ್ಮಣಸಂಸ್ಕೃತೇ ।
ತೀರ್ಥೇ ತತ್ರ ತು ಗೌತಮ್ಯಾಂ ದೃಶ್ಯತೇದ್ಯಾಪಿ ಮಾನವೈಃ ॥ ೧೩೦ ॥

---

೧೨೬. ಆಗ ಲಕ್ಷ್ಮಣನು ಮಾಡಿದ ರೇಖೆಯು ನದಿಯಂತೆ ಭಯಂಕರವಾಗಿ ಕಂಡು ಬರುತ್ತಿದೆ. ಕಲ್ಲಿರುವ ಆ ಭೂಮಿಯಲ್ಲಿ ರಾವಣನ ಹೆಜ್ಜೆಯೂ ಕೂಡ ಚೆನ್ನಾಗಿ ಈಗಲೂ ಕಂಡು ಬರುತ್ತಿರುವುದು.

೧೨೭. ಆ ಹೆಜ್ಜೆಯು ಒಂದು ಹಳ್ಳದಂತಾಗಿ ಭಯಂಕರವಾಗಿ ಕಾಣುತ್ತಿರುವುದು. ಖರನೇ ಮುಂತಾದವರೊಡನೆ ರಾಮನು ಯುದ್ಧಮಾಡು ತ್ತಿರುವಾಗ ಸೀತೆಯನ್ನು ಗುಹೆಯಲ್ಲಿಟ್ಟು ಹೋದನಷ್ಟೆ! ಅದು ಕೂಡ ಈಗ ಕಂಡುಬರುತ್ತಿರುವುದು.

೧೨೮-೧೨೯. ಪಂಚವಟಿಯಲ್ಲಿ ರಾಮನೂ ಲಕ್ಷ್ಮಣನೂ ಈಗಲೂ ಕೂಡ ಯಾವಾಗಲೂ ಕಂಡು ಬರುತ್ತಿರುವರು. ಅವರು ಜ್ಞಾನದೃಷ್ಟಿಯುಳ್ಳ ಸತ್ಪುರುಷರಿಗೆ ಮಾತ್ರವೇ ಕಾಣುತ್ತಾರೆ. ಅಜ್ಞಾನಿಗಳಿಗೆ ಅವರು ಕಲ್ಲಿನ ರೂಪದಲ್ಲಿ ಕಂಡು ಬರುತ್ತಾರೆ.

೧೩೦. ಆ ಗೌತಮಿಯಲ್ಲಿ ರಾಮನು ಸ್ನಾನಮಾಡಿದ ರಾಮತೀರ್ಥವಿರುವುದು. ಸೀತೆ ಲಕ್ಷ್ಮಣರು ಮಾಡಿದ ತೀರ್ಥಗಳು ಅವರ ಹೆಸರಿನಿಂದ ಅಲ್ಲಿ ಈಗಲೂ ಕಾಣುತ್ತಿರುವುವು.

ರಾಮೇಣ ಸೀತಯಾ ಯತ್ರ ಶಯ್ಯಾಯಾಂ ಪರ್ವತೋಪರಿ ।
ಕೃತಂ ಪೂರ್ವಂ ತು ಶಯನಂ ರಾಮಶಯ್ಯಾಗಿರಿಃ ಸ್ಮೃತಃ ॥ ೧೩೧ ॥

ಶಯ್ಯಾರೂಪಾಣಿ ದೃಶ್ಯಂತೇಽದ್ಯಾಪಿ ತತ್ರ ತೃಣಾನಿ ಹಿ ।
ರಾಮೋಽಪಿ ಲಕ್ಷ್ಮಣಂ ದೃಷ್ಟ್ವಾ ಶ್ರುತ್ವಾ ಸೀತಾವಚೋಽಶುಭಂ॥ ೧೩೨ ॥

ನಿವೇದಿತಂ ಲಕ್ಷ್ಮಣೇನ ಕ್ರೋಧಾಶ್ರುಸ್ಮಯಚೇತಸಾ ।
ನಿಮಿತ್ತಾನ್ಯತಿಘೋರಾಣಿ ದೃಷ್ಟ್ವಾ ಚೈವ ಸಮಂತತಃ ॥ ೧೩೩ ॥

ಯಯೌ ಪಂಚವಟೀಂ ವ್ಯಗ್ರಸ್ತತ್ರ ಸೀತಾಂ ದದರ್ಶ ನ ।
ತತೋ ಮಾನುಷಭಾವಂ ತು ದರ್ಶಯನ್ ಸಕಲಾನ್ ಜನಾನ್ ॥ ೧೩೪ ॥

---

೧೩೧. ಅಲ್ಲಿರುವ ಬೆಟ್ಟದಲ್ಲಿ ರಾಮನು ಸೀತೆಯೊಡನೆ ಮಲಗಲು ಹಾಸಿಗೆಯನ್ನು ಮಾಡಿಕೊಂಡಿದ್ದನಷ್ಟೆ! ಅದು ಈಗಲೂ ಕಾಣುತ್ತಿದೆ. ಮತ್ತು ಆ ಸ್ಥಳಕ್ಕೆ ಈಗಲೂ ರಾಮಶಯ್ಯಾಗಿರಿಯೆಂದೇ ಹೆಸರು ಬಂದಿದೆ.

೧೩೨. ಅಲ್ಲಿರುವ ಹುಲ್ಲುಗಳೂ ಕೂಡ ಈಗ ಹಾಸಿಗೆಯನ್ನು ಹಾಸಿದಂತೆಯೇ ಕಾಣುತ್ತಿವೆ. ಇತ್ತ ರಾಮನು ಅಲ್ಲಿಗೆ ಬಂದ ಲಕ್ಷ್ಮಣನನ್ನು ನೋಡಿ ಕೇಳಲು ಅವನು ಸೀತೆಯು ಆಡಿದ ಬಿರುನುಡಿಗಳನ್ನು ಹೇಳಿದನು.

೧೩೩. ಇದರಿಂದ ರಾಮನಿಗೆ ಬಹುವಾಗಿ ಕೋಪಬಂದು ಕಣ್ಣಿನಲ್ಲಿ ನೀರೂ ಬಂದಿತು. ಆಶ್ಚರ್ಯವನ್ನೂ ಹೊಂದಿದನು. ಮತ್ತು ಸುತ್ತಲೂ ಅಪಶಕುನಗಳು ಘೋರವಾಗಿ ಆಗುತ್ತಿರುವುದನ್ನೂ ನೋಡಿದನು.

೧೩೪. ಇದರಿಂದ ಬಹುವಾಗಿ ಕಳವಳಗೊಂಡು ಪಂಚವಟಿಗೆ ಬೇಗನೆ ಬಂದನು. ಅಲ್ಲಿ ಎಲ್ಲಿಯೂ ಸೀತೆಯನ್ನು ಕಾಣಲಿಲ್ಲ. ಆಗ ಸ್ವಾಮಿಯು ಮಾನುಷಭಾವದಿಂದ ಎಲ್ಲರನ್ನೂ ಕೇಳುತ್ತ ಹುಡುಕಲು ಮೊದಲಿಟ್ಟನು.

ವಿಚಿನ್ವನ್ಸರ್ವತಸ್ಸೀತಾಂ ಗೃಧ್ರರಾಜಂ ದದರ್ಶ ಸಃ ।
ತತಸ್ಸ ಪಕ್ಷಿವಚಸಾ ರಾವಣೇನ ಹೃತಾಂ ಪ್ರಿಯಾಂ ॥ ೧೩೫ ॥

ಜ್ಞಾತ್ವಾ ತಂ ಯೋಜಯಾಮಾಸ ವಹ್ನಿನಾ ಜೀವಿತಕ್ಷಯೇ ।
ತತ್ತೃಪ್ತ್ಯರ್ಥಂ ವನ್ಯಮಾಂಸಂ ಕ್ಷಿಪ್ತ್ವಾ ಸ್ನಾತ್ವಾ ರಘೂತ್ತಮಃ ॥ ೧೩೬ ॥

ಯಯೌ ದಕ್ಷಿಣಮಾರ್ಗೇಣ ವಿಚಿನ್ವನ್ಮೂಢವತ್ಪ್ರಭುಃ ।
ಪೂರ್ವವದಗ್ನಿಹೋತ್ರಂ ಚ ಚಕಾರ ಕುಶಭಾರ್ಯಯಾ ॥ ೧೩೭ ॥

ಏತಸ್ಮಿನ್ನಂತರೇ ದೇವಿ ತ್ವಯಾ ಪ್ರೋಕ್ತಸ್ತ್ವಹಂ ಪುರಾ ।
ತ್ವಯಾ ಯಸ್ಯ ಜಪೋ ನಿತ್ಯಂ ರಾಮಸ್ಯ ಕ್ರಿಯತೇ ಸದಾ ॥ ೧೩೮ ॥

---

೧೩೫. ಹೀಗೆ ಎಲ್ಲಾ ಕಡೆಯಲ್ಲಿಯೂ ಹುಡುಕುತ್ತ ಹೋಗುತ್ತಿರಲು ಅಲ್ಲಿ ಗೃಧ್ರ ರಾಜನಾದ ಜಟಾಯುವನ್ನೂ ನೋಡಿದನು. ಆ ಪಕ್ಷಿಯು ಸೀತೆಯನ್ನು ರಾವಣನು ಕದ್ದುಕೊಂಡು ಹೋದನೆಂದು ಹೇಳಿದುದನ್ನು ಕೇಳಿದನು.

೧೩೬. ಹೀಗೆ ಹೇಳಿ ಆ ಪಕ್ಷಿಯು ಸತ್ತುಹೋಗಲು ಅದಕ್ಕೆ ರಾಮನು ಅಗ್ನಿ ಸಂಸ್ಕಾರವನ್ನು ಮಾಡಿದನು. ಅದಕ್ಕೆ ತೃಪ್ತಿಯಾಗಲು ಪಕ್ಷಿಗಳಿಗೆಲ್ಲಾ ಆ ಕಾಡಿನಲ್ಲಿ ಮಾಂಸವನ್ನು ತಂದು ಹಾಕಿದನು. ಮತ್ತು ಸ್ನಾನವನ್ನು ಮಾಡಿದನು.

೧೩೭. ಅನಂತರ ರಾಮನು ತಿಳುವಳಿಕೆಯಿಲ್ಲದವನಂತೆ ದಕ್ಷಿಣದ ಕಡೆಯಲ್ಲಿ ಸೀತೆಯನ್ನು ಹುಡುಕುತ್ತ ಹೊರಟನು. ಮತ್ತು ದರ್ಭೆಯಲ್ಲಿ ಹೆಂಡತಿಯಂತೆ ಬೊಂಬೆಯನ್ನು ಮಾಡಿಕೊಂಡು ಅಗ್ನಿ ಹೋತ್ರವನ್ನು ಮಾಡಿದನು.

೧೩೮. ಈ ಮಧ್ಯದಲ್ಲಿ ಎಲೈ ಪಾರ್ವತಿಯೆ ! ಯಾವ ರಾಮನ ಜಪವನ್ನೇ ನೀನು ನಿತ್ಯವೂ ಮಾಡುತ್ತಿದ್ದೀಯೋ ಆ ನೀನು ನನ್ನನ್ನು ಕುರಿತು ಇಂತೆಂದು ಕೇಳಿದೆ.

ಸೋಽಯಂ ಸ್ತ್ರೀವಿರಹಾತ್ಪಶ್ಯ ಮೂಢವದ್ಭ್ರಮತೇ ವನೇ ।
ತವೇತಿ ವಚನಂ ಶ್ರುತ್ವಾ ತದಾ ತ್ವಾಮಬ್ರುವಂ ತ್ವಹಂ ॥ ೧೩೯ ॥

ದೇವಿ ಸಾಕ್ಷಾನ್ಮಹಾವಿಷ್ಣುಸ್ತ್ವಯಂ ರಾಮೋ ಮಹೀತಲೇ ।
ಶಿಕ್ಷಾರ್ಥಂ ಸಕಲಾನ್ ಲೋಕಾನ್ ಮೂಢವದ್ಭ್ರಮತೇ ವನೇ ॥ ೧೪೦ ॥

ನಾರೀಸಂಗೋ ನರೈಸ್ತ್ಯಾಜ್ಯಸ್ಸರ್ವದಾತ್ರೇತಿ ಶಿಕ್ಷಯನ್ ।
ನಾರೀವಿಷಯಜಂ ದುಃಖಮೀದೃಶಂ ಭ್ರಮಕಾರಕಂ ॥ ೧೪೧ ॥

ದರ್ಶಯನ್ ಸಕಲಾನ್ ಲೋಕಾನಿತಿ ಸೋಽತ್ರಾಟತೇ ವನೇ ।
ಇತಿ ಮದ್ವಚನಂ ಶ್ರುತ್ವಾ ತತ್ಪರೀಕ್ಷಾರ್ಥಮುದ್ಯತಾ ॥ ೧೪೨ ॥

---

೧೩೯. ಎಲೈ ಶಿವನೆ! ನೀನು ಸರ್ವೋತ್ಕೃಷ್ಟನೆಂದು ಹೇಳುತ್ತಿರುವೆಯಲ್ಲ! ಅಂತಹ ರಾಮನು ಹೆಂಡತಿಯ ವಿರಹದಿಂದ ಮೂಢನಂತೆ ಕಾಡಿನಲ್ಲಿ ಸುತ್ತುತ್ತಿರುವನು. ಎನ್ನಲು ನಿನ್ನ ಈ ಮಾತನ್ನು ಕೇಳಿ ನಿನ್ನನ್ನು ಕುರಿತು ನಾನು ಇಂತೆಂದೆನು.

೧೪೦. ಎಲೈ ದೇವಿಯೆ! ರಾಮನು ಶ್ರೀಮನ್ನಾರಾಯಣನು. ಆ ಮಹಾವಿಷ್ಣುವೇ ರಾಮನೆಂಬ ಹೆಸರಿನಿಂದ ಭೂಮಿಯಲ್ಲಿ ಎಲ್ಲಾ ಜನರಿಗೂ ಬುದ್ಧಿಯನ್ನು ಕಲಿಸಲು ಮೂಢನಂತೆ ವನದಲ್ಲಿ ಸುತ್ತುತ್ತಿರುವನು.

೧೪೧-೧೪೨. ನಾರಿಯರ ಸಂಗವನ್ನು ನರರು ಬಿಟ್ಟು ಬಿಡಬೇಕು. ಯಾವಾಗಲೂ ಅವರ ಸಹವಾಸವನ್ನು ಮಾಡಲೇ ಬಾರದು. ನಾರಿಯರ. ಸಂಬಂಧವಾದ ದುಃಖವು ಈ ರೀತಿಯಾದುದು. ಅದು ಎಲ್ಲಾ ಕಡೆಯಲ್ಲಿಯೂ ಅಲೆಯುವಂತೆ ಮಾಡುತ್ತದೆ. ಎಂಬುದಾಗಿ ಎಲ್ಲರಿಗೂ ತೋರಿಸುತ್ತ ಸುತ್ತುತ್ತಿರುವನು.

ತ್ವಂ ಗತಾಸಿ ಸಮೀಪಂ ಶ್ರೀರಾಘವಸ್ಯ ತದಾ ವನೇ ।
ಸೀತಾರೂಪೇಣ ತಂ ರಾಮಂ ತ್ವಯಾ ಪ್ರೋಕ್ತಂ ಶುಭಂ ವಚಃ॥ ೧೪೩ ॥

ರಾಮ ರಾಜೀವಪತ್ರಾಕ್ಷ ಮಾಮಗ್ರೇ ಪಶ್ಯ ಜಾನಕೀಂ ।
ಕ್ರೀಡಸ್ವಾದ್ಯ ಮಯಾ ಸಾರ್ಧಮೇಹಿ ಶೀಘ್ರಂ ಸುಖೀಭವ ॥ ೧೪೪ ॥

ತ್ವದುಕ್ತಂ ರಾಘವಶ್ಶ್ರುತ್ವಾ ವಿಹಸ್ಯ ತ್ವಾಂ ವಚೋಽಬ್ರವೀತ್ ।
ಜಾನಾಮ್ಯಹಂ ಕಾಸೀತಿ ಸೀತಾ ತ್ವಂ ನಾಸಿ ವೇದ್ಮ್ಯಹಂ ॥ ೧೪೫ ॥

ತ್ವಂ ಕಿಂ ಸೀತಾಸ್ವರೂಪೇಣ ಮೋಹಯಸ್ಯತ್ರ ಮಾಂ ವನೇ ।
ಏವಂ ಪುನಃ ಪುನಃ ಪ್ರೋಕ್ತಾ ಯದಾ ತ್ವಂ ರಾಘವೇಣ ಹಿ ॥ ೧೪೬ ॥

---

೧೪೩. ಈ ರೀತಿಯಾಗಿ ಎಲ್ಲರಿಗೂ ತೋರಿಸುತ್ತ ಅವನು ಕಾಡಿನಲ್ಲೆಲ್ಲಾ ಓಡಾಡುತ್ತಿರುವನು. ಎಂದು ನಾನು ಹೇಳಲು ನನ್ನ ಮಾತನ್ನು ಪರೀಕ್ಷೆಮಾಡಲು ನೀನು ಪ್ರಯತ್ನಪಟ್ಟು ಆಗ ರಾಘವನ ಹತ್ತಿರಕ್ಕೆ ಆ ಕಾಡಿನಲ್ಲಿ ಹೋದೆ. ಆಗ ನೀನು ಸೀತೆಯ ರೂಪವನ್ನು ಧರಿಸಿಕೊಂಡಿದ್ದೆ. ರಾಮನನ್ನು ಕುರಿತು ಇಂತೆಂದು ಹೇಳಿದೆ.

೧೪೪. ಎಲೈ ರಾಜೀವ ಲೋಚನನಾದ ರಾಮನೆ! ನಾನು ಜಾನಕಿಯು. ನಿನ್ನ ಎದುರಿನಲ್ಲಿಯೇ ಇದ್ದೇನೆ. ನನ್ನೊಡನೆ ಕ್ರೀಡಿಸು. ಬೇಗ ಬಾ. ಸುಖವಾಗಿರು.

೧೪೫. ಹೀಗೆ ನೀನು ಹೇಳಿದುದನ್ನು ಕೇಳಿ ರಾಮನು ನಕ್ಕು ಇಂತೆಂದನು. ನೀನು ಯಾರೆಂಬುದನ್ನು ನಾನು ತಿಳಿದಿದ್ದೇನೆ. ನೀನು ಸೀತೆಯಲ್ಲವೆಂಬುದನ್ನೂ ತಿಳಿದಿದ್ದೇನೆ.

೧೪೬. ನೀನೇತಕ್ಕೆ ಸೀತೆಯವೇಷವನ್ನು ಹಾಕಿಕೊಂಡು ಈ ಕಾಡಿನಲ್ಲಿ ನನ್ನನ್ನು ಅಜ್ಞಾನದಲ್ಲಿ ಕೆಡಗುತ್ತಿದ್ದೀಯೆ! ಈ ರೀತಿಯಾಗಿ ರಾಘವನು ನಿನ್ನನ್ನು ಕುರಿತು ಅನೇಕ ಬಾರಿ ಹೇಳಿದನು.

ತದಾ ತ್ವಯಾ ತತ್ಸ್ವರೂಪಂ ಜ್ಞಾತಂ ಸತ್ಯಂ ಮಯೇರಿತಂ ।
ತತೋ ನತ್ವಾ ರಾಮಚಂದ್ರಂ ಪ್ರಾರ್ಥಯಿತ್ವಾ ಪುನಃ ಪುನಃ ॥ ೧೪೭ ॥

ಆಗತಾಸಿ ಪುನರ್ಮಾಂ ತ್ವಂ ಕೈಲಾಸಶಿಖರೇಽಮಲೇ ।
ತ್ವಂ ಕಾ ತ್ವಂ ಕಿಮಿತಿ ಪ್ರೋಕ್ತಾ ರಾಘವೇಣ ಪುನಃ ಪುನಃ ॥ ೧೪೮ ॥

ಯಾ ತ್ವಂ ಸಾ ದಂಡಕೇ ಜಾತಾ ತ್ವಂ ಕಾನಾಮ್ನಾಂಬಿಕಾವನೇ ।
ತ್ವಂ ಲಜ್ಜಿತಾಸಿ ರಾಮೇಣ ಯತ್ರ ತತ್ರ ವನಸ್ಥಲೇ ॥ ೧೪೯ ॥

ತ್ವಂ ಲಜ್ಜಾಪುರನಾಮ್ನಾಸೀನ್ನಗರಂ ದಂಡಕೇ ವನೇ ।
ತತಸ್ತೌ ರಾಮಸೌಮಿತ್ರೀ ಜಗ್ಮತುರ್ದಕ್ಷಿಣಾಂ ದಿಶಂ ॥ ೧೫೦ ॥

ಬಹವೋ ನಿಹತಾ ಮಾರ್ಗೇ ರಾಕ್ಷಸಾಃ ಕಾಮರೂಪಿಣಃ ।
ಏತಸ್ಮಿನ್ನಂತರೇಽರಣ್ಯೇ ಕಬಂಧೇನಧೃತೌ ತದಾ ॥ ೧೫೧ ॥

---

೧೪೭. ಈ ರೀತಿಯಾಗಿ ಹೇಳಿದಮೇಲೆ ಆ ರಾಮನ ಸರಿಯಾದ ಸ್ವರೂಪವನ್ನು ನೀನು ತಿಳಿದುಕೊಂಡೆ ಮತ್ತು ನಾನು ಹೇಳಿದುದು ಸತ್ಯವೆಂದು ತಿಳಿದುಕೊಂಡೆ. ಅನಂತರ ನೀನು ರಾಮಚಂದ್ರನಿಗೆ ನಮಸ್ಕರಿಸಿ ಮತ್ತೆ ಮತ್ತೆ ಪ್ರಾರ್ಥಿಸಿಕೊಂಡೆ.

೧೪೮–೧೫೦. ಅನಂತರ ಕೈಲಾಸ ಶಿಖರದಲ್ಲಿ ನಾನಿರುವ ಈ ಸ್ಥಳಕ್ಕೆ ನೀನು ಬಂದೆ. ನಿನ್ನನ್ನು ಆ ದಂಡಕಾವನದಲ್ಲಿ ರಾಮನು ನೀನು ಯಾರು? ನೀನೇಕೆ ಬಂದೆ? ಎಂಬುದಾಗಿ ಆ ಕಾಡಿನಲ್ಲಿ ಎಲ್ಲಿ ಕೇಳಿದನೋ ಮತ್ತು ಆ ದಂಡಕಾವನದಲ್ಲಿ ಸೀತೆಯ ಸ್ವರೂಪವಾಗಿ ನೀನು ಎಲ್ಲಿ ಹುಟ್ಟಿದೆಯೋ ಆ ಜಾಗದಲ್ಲಿ ನೀನು "ಕಾ" ದೇವಿಯೆಂಬ ಹೆಸರಿನಿಂದ ಅವತರಿಸಿದ್ದೀಯೆ. ನೀನು ರಾಮನಿಂದ ಕೇಳಲ್ಪಟ್ಟವಳಾಗಿ ಎಲ್ಲಿ ಲಜ್ಜೆಯನ್ನು ಹೊಂದಿದೆಯೋ ಆ ಜಾಗದಲ್ಲಿ ಲಜ್ಜಾಪುರವೆಂಬ ಹೆಸರಿನಿಂದ ಗ್ರಾಮವು ನಿರ್ಮಿತವಾಯಿತು.

೧೫೧. ಅನಂತರ ರಾಮಲಕ್ಷ್ಮಣರು ದಕ್ಷಿಣದಿಕ್ಕಿಗೆ ಹೊರಟರು. ಹೀಗೆ ಹೋಗುತ್ತಿರುವಾಗ ಬಹುಜನ ಕಾಮರೂಪಿಗಳಾದ ರಾಕ್ಷಸರನ್ನು ಕೊಂದರು. ಈ ಸಮಯದಲ್ಲಿ ಅದೇ ಕಾಡಿನಲ್ಲಿ ಕಬಂಧನು ಇವರಿಬ್ಬರನ್ನೂ ಹಿಡಿದುಕೊಂಡನು.

ಶ್ರೀರಾಮಲಕ್ಷ್ಮಣೌ ಮಾರ್ಗೇ ಯೋಜನಾಯತಬಾಹುನಾ ।
ದೃಷ್ಟ್ವಾ ತಂ ಶಿರಸಾ ಹೀನಂ ಬಾಹೂ ಚಿಚ್ಛೇದತುಸ್ತದಾ ॥ ೧೩೨ ॥

ತತಸ್ಸ ದ್ದಿವ್ಯರೂಪೋಽಭೂನ್ನತ್ವಾ ರಾಮಂ ವಚೋಽಬ್ರವೀತ್ ।
॥ ಕಬಂಧ ಉವಾಚ ॥
ಪುರಾ ಗಂಧರ್ವರಾಜೋಽಹಂ ಬ್ರಹ್ಮಣೋ ವರದಾನತಃ ॥ ೧೩೩ ॥

ಕೇನಾಪ್ಯವಧ್ಯಸ್ತ್ವಹಸಮಷ್ಟಾವಕ್ರಂ ಮುನೀಶ್ವರಂ ।
ರಕ್ಷೋ ಭವೇತಿ ಶಪ್ತೋಽಹಂ ಮುನಿನಾ ಪ್ರಾಹ ಮಾಂ ಪುನಃ ॥ ೧೩೪ ॥

ತ್ರೇತಾಯುಗೇ ಯದಾ ರಾಮಲಕ್ಷ್ಮಣೌ ಯೋಜನಾಯತೌ ।
ಛೇತ್ಸ್ಯತಸ್ತೇ ಮಹಾಬಾಹೂ ತದಾ ಶಾಪಾತ್ಪ್ರಮೋಕ್ಷ್ಯಸೇ ॥ ೧೩೫ ॥

---

೧೩೨. ಆ ಕಬಂಧನ ತೋಳುಗಳು ಯೋಜನದಗಲಕ್ಕೆ ಇದ್ದುವು. ಇಂತಹ ತೋಳುಗಳಿಂದ ಹಿಡಿದುಕೊಂಡುದನ್ನು ನೋಡಿ ಅವನಿಗೆ ತಲೆಯಿಲ್ಲದಿರಲು ಆ ರಾಮಲಕ್ಷ್ಮಣರು ಅವನ ತೋಳುಗಳನ್ನೇ ಕತ್ತರಿಸಿದರು. ಒಡನೆಯೇ ಅವನಿಗೆ ದಿವ್ಯವಾದ ದೇಹವು ಬಂದಿತು. ಆಗ ಅವನು ರಾಮನಿಗೆ ನಮಸ್ಕಾರ ಮಾಡಿ ಇಂತೆಂದನು.

೧೩೩–೧೩೪. ಕಬಂಧನು ಹೇಳಿದನು–ಎಲೈ ರಾಮನೆ ! ನಾನು ಪೂರ್ವದಲ್ಲಿ ಗಂಧರ್ವರಾಜನು. ತಪಸ್ಸನ್ನು ಮಾಡಿ ಬ್ರಹ್ಮನನ್ನು ಸಂತೋಷಪಡಿಸಿ ಆವನಿಂದ ವರವನ್ನು ಪಡೆದೆನು. ಯಾರಿಂದಲೂ ಸಾಯದಿರುವ ಉತ್ತಮವಾದ ವರವನ್ನು ಹೊಂದಿದೆನು. ಹೀಗಿರುತ್ತಿರಲು ಒಂದುಸಾರಿ ಅಷ್ಟಾವಕ್ರ ಮುನಿಯನ್ನು ನೋಡಿ ಹಾಸ್ಯಮಾಡಿದೆನು. ಆಗ ಅವನು ನನಗೆ ನೀನು ರಾಕ್ಷಸನಾಗು. ಎಂದು ಶಪಿಸಿದನು. ಅನಂತರ ನಾನು ನಮಸ್ಕರಿಸಿ ಕೇಳಿಕೊಳ್ಳಲು ಇಂತೆಂದನು.

೧೩೫. ತ್ರೇತಾಯುಗದಲ್ಲಿ ರಾಮಲಕ್ಷ್ಮಣರು ಯೋಜನದ ಉದ್ದವಿರುವ ನಿನ್ನ ತೋಳುಗಳನ್ನು ಯಾವಾಗ ಕತ್ತರಿಸುವರೋ ಆಗ ನಿನ್ನ ಶಾಪವು ಕೊನೆಗಾಣುತ್ತದೆ. ಎಂದು ವಿಶಾಪವನ್ನು ಕೊಟ್ಟನು.

ತತೋ ರಾಕ್ಷಸದೇಹೋಽಹಮಿಂದ್ರಮಭ್ಯದ್ರವಂ ರುಷಾ ।
ಸೋಽಪಿ ವಜ್ರೇಣ ಮಾಂ ತಾನು ಶಿರೋದೇಶೇ ಪ್ರತಾಡಯತ್ ॥ ೧೫೬ ॥

ತದಾ ಕುಕ್ಷೌ ಶಿರಃಪಾದಯುಗಳಂ ಚ ಗತಂ ಕ್ಷಣಾತ್ ।
ಬ್ರಹ್ಮದತ್ತವರಾನ್ಮೃತ್ಯುರ್ನಾಭೂನ್ಮೇ ವಜ್ರತಾಡನಾತ್ ॥ ೧೫೭ ॥

ಮುಖಾಭಾವೇ ಕಥಂ ಜೀವೇದಯಮಿತ್ಯಮರಾಧಿಪಃ ।
ತದಾ ಮಾಂ ಪ್ರಾಹ ಕೃಪಯಾ ಜಠರೇ ತೇ ಮುಖಂ ಭವೇತ್ ॥ ೧೫೮ ॥

ಬಾಹೂ ತೇ ಯೋಜನಾಯಾಮಾವದ್ಯ ಶೀಘ್ರಂ ಭವಿಷ್ಯತಃ ।
ತದಾರಭ್ಯ ಬಾಹುಭ್ಯಾಂ ಲಬ್ಧಂ ತದ್ಭಕ್ಷಯಾಮ್ಯಹಾಂ ॥ ೧೫೯ ॥

---

೧೫೬. ರಾಕ್ಷಸನಾಗಿದ್ದುಕೊಂಡು ಸುತ್ತುತ್ತಿರುವಾಗ ನಾನು ಇಂದ್ರನ ಮೇಲೆ ಬೀಳುವುದಕ್ಕೆ ಅವನನ್ನು ಎದುರಿಸಿದೆನು. ಆ ಇಂದ್ರನು ಕೋಪಗೊಂಡು ವಜ್ರಾಯುಧದಿಂದ ನನ್ನ ತಲೆಯಮೇಲೆ ಹೊಡೆದನು.

೧೫೭. ಆಗ ಏಟನಿಂದ ನನ್ನ ತಲೆಯೂ ನನ್ನ ಕಾಲುಗಳೂ ಹೊಟ್ಟೆಯೊಳಕ್ಕೆ ಹೊರಟು ಹೋದುವು. ಇಂದ್ರನು ವಜ್ರಾಯುಧದಿಂದ ಹೊಡೆದರೂ ಬ್ರಹ್ಮನು ಕೊಟ್ಟ ವರ ಬಲದಿಂದ ನನಗೆ ಮೃತ್ಯುವು ಬರಲಿಲ್ಲ.

೧೫೮. ಬಾಯಿಲ್ಲದಿದ್ದರೆ ಇವನು ಜೀವಿಸುವುದು ಹೇಗೆಂದು ಆ ಇಂದ್ರನು ಯೋಚಿಸಿ ಕೃಪೆಮಾಡಿ ಹೊಟ್ಟೆಯಲ್ಲಿಯೇ ಬಾಯಿರುವಂತೆ ವರವನ್ನು ಕೊಟ್ಟನು.

೧೫೯. ಮತ್ತು ನಿನ್ನ ತೋಳುಗಳು ಈಗಲೇ ಯೋಜನದಷ್ಟು ಉದ್ದವಾಗಿ ಆಗುವುವು. ಎಂದನು. ಅದು ಮೊದಲುಗೊಂಡು ಈ ತೋಳುಗಳಿಗೆ ಏನೇನು ಸಿಕ್ಕುವುವೋ ಅವುಗಳನ್ನು ತೆಗೆದುಕೊಂಡು ತಿನ್ನುತ್ತ ಜೀವಿಸುತ್ತಿದ್ದೇನೆ.

ತಿಷ್ಠತ್ಯಗ್ರೇ ಮತಂಗಾದಿಮುನೀನಾಂ ಪರಿಚಾರಿಕಾ ।
ಶಬರೀದರ್ಶನಾರ್ಥಂ ತ್ವಂ ತತ್ರ ಯಾಹಿ ರಘೂತ್ತಮ ॥ ೧೬೦ ॥

ಕಥಯಿಷ್ಯತಿ ಸಾ ಸೀತಾಶುದ್ಧಿಂ ತೇ ರಘುನಂದನ ।
ಇತ್ಯುಕ್ತ್ವಾ ರಾಘವಂ ನತ್ವಾ ಸ್ತುತ್ವಾ ಸ್ವರ್ಗಂ ಯಯೌ ಮುದಾ॥ ೧೬೧ ॥

ತತೋ ರಾಮೋ ಲಕ್ಷ್ಮಣೇನ ಶಬರೀಸನ್ನಿಧಿಂ ಯಯೌ ।
ಸಾಪಿ ಸಂಪೂಜ್ಯ ಶ್ರೀರಾಮಂ ವಿಶೇಷೈರ್ವನಸಂಭವೈಃ ॥ ೧೬೨ ॥

ಚಿತಾಮಾರೋಢುಮುದ್ಯುಕ್ತಾ ರಾಘವಂ ಪ್ರಾಹ ಹರ್ಷಿತಾ ।
ಋಷ್ಯಮೂಕಗಿರಾವಗ್ರೇ ಸುಗ್ರೀವೋ ಮಂತ್ರಿಭಿಃ ಸಹ ॥ ೧೬೩ ॥

---

೧೬೦. ಇಲ್ಲಿಂದ ಮುಂದೆ ಹೋದರೆ ಮತಂಗನೇ ಮುಂತಾದ ಋಷಿಗಳ ಪರಿಚಾರಕರಿದ್ದಾರೆ. ಅಲ್ಲಿ ಶಬರಿಯೆಂಬ ತಪಸ್ವಿನಿಯು ಇದ್ದಾಳೆ. ನಿನ್ನ ದರ್ಶನವನ್ನು ಎದುರು ನೋಡುತ್ತಿದ್ದಾಳೆ. ಅಲ್ಲಿಗೆ ಹೋಗಿ ಆಕೆಗೆ ದರ್ಶನವನ್ನು ಕೊಡು.

೧೬೧. ಆಕೆಯು ನಿನಗೆ ಸೀತೆಯ ವಿಷಯವನ್ನು ತಿಳಿಸುವಳು. ಹೀಗೆಂದು ಹೇಳಿ ಕಬಂಧನು ಅವನನ್ನು ಸ್ತುತಿಸಿ ನಮಸ್ಕರಿಸಿ ಅವನ ಅಪ್ಪಣೆಯನ್ನು ಹೊಂದಿ ಸ್ವರ್ಗಕ್ಕೆ ಹೋದನು.

೧೬೨. ಅನಂತರ ರಾಮನೂ ಲಕ್ಷ್ಮಣನೂ ಶಬರಿಯ ಬಳಿಗೆ ಹೋದರು. ಅವಳು ಕಾಡಿನಲ್ಲಿ ಉತ್ಪನ್ನವಾದ ಗೆಡ್ಡೆ ಗೆಣಸುಗಳಿಂದ ಅವರನ್ನು ಸತ್ಕರಿಸಿದಳು.

೧೬೩. ಅನಂತರ ಆಕೆಯು ಸಾಯುಲು ಸಿದ್ಧಳಾಗಿ ಚಿತೆಯನ್ನು ಒಡ್ಡಿ ಅದರಲ್ಲಿ ಹತ್ತಿ, ಆಗ ರಾಘವನನ್ನು ಕುರಿತು ಹರ್ಷದಿಂದ ಮುಂದೆ ಹೋದರೆ ಋಷ್ಯಮೂಕಪರ್ವತವು ಸಿಕ್ಕುತ್ತದೆ. ಅಲ್ಲಿ ಸುಗ್ರೀವನು ಮಂತ್ರಿಗಳೊಡನೆ ವಾಸವಾಗಿದ್ದಾನೆ.

ವರ್ತತೇ ತಸ್ಯ ಸಖ್ಯೇನ ಸೀತಾಶುದ್ಧಿಂ ಲಭಿಷ್ಯಸಿ ।
ಗಚ್ಛ ರಾಮ ಇತಸ್ತ್ವಗ್ರೇ ಪಂಪಾನಾಮ ಸರೋವರಂ ॥ ೧೬೪ ॥

ತತ್ತಟಾಕೇ ತು ವೃಕ್ಷಾಣಾಂ ಫಲಾನಿ ವಿವಿಧಾನಿ ಚ ।
ಭಕ್ಷಸ್ವ ತ್ವಂ ಜಲಂ ಪೀತ್ವಾ ಯಾಹಿ ಸುಗ್ರೀವಸನ್ನಿಧಿಂ ॥ ೧೬೫ ॥

ಇತ್ಯುಕ್ತ್ವಾ ಶಬರೀ ರಾಮಂ ನತ್ವಾ ವಹ್ನಿಂ ವಿವೇಶ ಸಾ ।
ರಾಮಸಂದರ್ಶನಾನ್ಮುಕ್ತಿಂ ಪ್ರಾಪ್ತಾ ವೈಕುಂಠಮಾಯಯೌ ॥ ೧೬೬ ॥

ತತೋ ರಾಮಶ್ಶನೈರ್ಭ್ರಾತ್ರಾ ಯಯೌ ಪಂಪಾಸರೋವರಂ ।
ಫಲಾನಿ ಭಕ್ಷಯಾಮಾಸ ಪೀತ್ವಾ ತಜ್ಜಲಮುತ್ತಮಂ ॥ ೧೬೭ ॥

---

೧೬೪. ಅವನ ಸ್ನೇಹವನ್ನು ಮಾಡಿಕೊಂಡರೆ ಸೀತೆಯ ಸಮಾಚಾರವು ನಿನಗೆ ಸಿಕ್ಕುತ್ತದೆ. ಎಲೈ ರಾಮನೆ! ಮುಂದೆ ಹೋದರೆ ಪಂಪಾ ಸರೋವರವೆಂಬ ಒಂದು ಸರೋವರವು ಸಿಕ್ಕುತ್ತದೆ.

೧೬೫. ಅದರ ದಡದಲ್ಲಿ ಬಹುವಾದ ಮರಗಳಿವೆ. ಅಲ್ಲಿ ಹಣ್ಣು ಹಂಪಲುಗಳು ಅನೇಕವಾಗಿವೆ. ಅವೆಲ್ಲವನ್ನೂ ತಿನ್ನು. ಅಲ್ಲಿ ನೀರನ್ನು ಕುಡಿದು ಅನಂತರ ಸುಗ್ರೀವನ ಬಳಿಗೆ ಹೋಗು.

೧೬೬. ಹೀಗೆಂದು ಹೇಳಿ ಆ ಶಬರಿಯು ರಾಮನಿಗೆ ನಮಸ್ಕರಿಸಿ ಅಗ್ನಿ ಪ್ರವೇಶವನ್ನು ಮಾಡಿದಳು. ರಾಮನ ದರ್ಶನದಿಂದ ಮುಕ್ತಿಯನ್ನು ಹೊಂದಿ ವೈಕುಂಠಕ್ಕೆ ಹೋದಳು.

೧೬೭. ಅನಂತರ ರಾಮನು ತಮ್ಮನೊಡನೆ ನಿಧಾನವಾಗಿ ಪಂಪಾ ಸರೋವರಕ್ಕೆ ಹೋದನು. ಅಲ್ಲಿದ್ದ ಅನೇಕವಾದ ಹಣ್ಣುಗಳನ್ನು ತಿಂದು ಅಲ್ಲಿನ ನಿರ್ಮಲವಾದ ನೀರನ್ನು ಕುಡಿದನು.

ತತಶ್ಚೈನ್ಯೈರ್ಯಯೌ ಮಾರ್ಗೇ ಋಷ್ಯಮೂಕಾಚಲಂ ಪ್ರತಿ ।
ಪಶ್ಯನ್ವನಾನಿ ಸರ್ವತ್ರ ಚಿಂತಯಾಮಾಸ ಜಾನಕೀಂ ॥ ೧೬೮ ॥

ಏವಂ ಗಿರೀಂದ್ರಜೇ ಪ್ರೋಕ್ತಮಾರಣ್ಯಂ ಚರಿತಂ ತವ ।
ಶ್ರೀರಾಮಸ್ಯ ಸಸೀತಸ್ಯ ಲಕ್ಷ್ಮಣೇನ ಯುತಸ್ಯ ಚ ॥ ೧೬೯ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ಸಾರಕಾಂಡೇ ಅರಣ್ಯ ಚರಿತ್ರೇ ಖರಾದಿ
ವಧೋ ನಾಮ ಸಪ್ತಮಸ್ಸರ್ಗಃ

---

೧೬೮. ಅನಂತರ ಋಷ್ಯಮೂಕ ಪರ್ವತಕ್ಕೆ ನಿಧಾನವಾಗಿ ಹೊರಟನು. ಅಲ್ಲಿರುವ ವನಗಳನ್ನು ನೋಡುತ್ತ ಈ ಜಾನಕಿಯನ್ನು ಜ್ಞಾಪಿಸಿಕೊಳ್ಳುತ್ತಿದ್ದನು.

೧೬೯. ಎಲೈ ಪಾರ್ವತಿಯೆ! ಈ ರೀತಿಯಾಗಿ ರಾಮನ ಅರಣ್ಯ ಚರಿತ್ರೆಯನ್ನು ನಿನಗೆ ಹೇಳಿದೆನು. ಅದರ ಸಂಗಡ ರಾಮ ಲಕ್ಷ್ಮಣ ಸೀತೆಯರ ವನವಾಸದ ಚರಿತ್ರೆಯನ್ನೂ ಹೇಳಿದೆನು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಸಾರಕಾಂಡದ ಅರಣ್ಯಚರಿತ್ರೆಯಲ್ಲಿ
ಖರಾದಿ ವಧೆಯೆಂಬ ಏಳನೆಯ ಸರ್ಗವು ಸಮಾಪ್ತವು

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

॥ ಏಳನೆಯ ಸರ್ಗದ ಸಾರಾಂಶವು ॥

ಶ್ರೀರಾಮನೂ ಲಕ್ಷ್ಮಣನೂ ಧನುಸ್ಸನ್ನು ಸಿದ್ಧಪಡಿಸಿಕೊಂಡು ಸೀತೆಯೊಡನೆ ದಂಡಕಾರಣ್ಯದಲ್ಲಿ ಹೊರಟರು. ರಾಮನು ಮುಂದೆಯೂ ಲಕ್ಷ್ಮಣನು ಹಿಂದೆಯೂ ಸೀತೆಯು ಮಧ್ಯದಲ್ಲಿಯೂ ಹೋಗುತ್ತಿದ್ದರು. ಅಲ್ಲಿ ಸಿಕ್ಕಿದ ಒಂದು ಸರೋವರ ದಲ್ಲಿ ಸ್ನಾನ ಪಾನಗಳನ್ನು ಮಾಡಿ ಹಣ್ಣುಹಂಪಲುಗಳನ್ನು ತಿಂದು ಕುಳಿತಿರಲು ಅಲ್ಲಿಗೆ ವಿರಾಧನೆಂಬ ರಾಕ್ಷಸನು ಬಂದನು. ಮತ್ತು ಆ ರಾಮಲಕ್ಷ್ಮಣರನ್ನು ನೀವಾರೆಂದು ಕೇಳಿದನು. ಅವರು ಅವನಿಗೆ ಎಲ್ಲವನ್ನೂ ಹೇಳಿದರು. ಅನಂತರ ಅವನು ರಾಮನಿಗೆ ತನ್ನ ಗುರುತನ್ನು ಹೇಳಿ ಸೀತೆಯನ್ನು ಬಿಟ್ಟು ಹೋಗುವಂತೆ ಹೇಳಿದನು ಅಲ್ಲದೆ ಸೀತೆಯನ್ನು ಹಿಡಿಯಲು ಹತ್ತಿರಕ್ಕೇ ಬಂದನು.

ಆಗ ರಾಮನು ಬಾಣದಿಂದ ಅವನ ಎರಡು ತೋಳುಗಳನ್ನೂ ಕತ್ತರಿಸಿದನು. ಅಲ್ಲದೆ ಅವನ ಎರಡು ಕಾಲುಗಳನ್ನೂ ಕತ್ತರಿಸಿದನು. ಆದರೂ ಸರ್ಪದಂತೆ ಹರಿದುಕೊಂಡು ಬರುತ್ತಿರಲು ರಾಮನು ಅರ್ಧಚಂದ್ರಾಕಾರದ ಬಾಣವನ್ನು ಬಿಟ್ಟು ಅವನ ದೇಹವನ್ನು ಕತ್ತರಿಸಿ ಕೊಂದನು.

ಅನಂತರ ಆ ವಿರಾಧನ ದೇಹದಿಂದ ಒಬ್ಬ ದಿವ್ಯ ಪುರುಷನು ಹೊರಗೆ ಹೊರಟು ರಾಮನನ್ನು ಕುರಿತು "ಎಲೈ ರಾಮನೆ! ನಾನು ಒಬ್ಬ ವಿದ್ಯಾಧರನು. ದೂರ್ವಾಸನ ಶಾಪದಿಂದ ಈ ರಾಕ್ಷಸಜನ್ಮವು ಬಂದಿದ್ದಿತು ಈಗ ಆ ಶಾಪವು ಹೋಯಿತು." ಎಂದು ಹೇಳಿ ತಾನು ಸ್ವರ್ಗಕ್ಕೆ ಹೋದನು.

ರಾಮನು ಅನಂತರ ಮುಂದೆ ಹೊರಟು ಶರಭಂಗನ ಆಶ್ರಮಕ್ಕೆ ಹೋಗಿ ಅಲ್ಲಿ ಒಂದು ರಾತ್ರಿಯಿದ್ದನು. ಆ ಶರಭಂಗನು ತನ್ನ ಪುಣ್ಯವನ್ನು ಶ್ರೀರಾಮನಿಗೆ ಕೊಟ್ಟು ತಾನು ಸ್ವರ್ಗಸ್ಥನಾದನು. ರಾಮನು ಮುಂದೆ ಸುತೀಕ್ಷ್ಣನ ಆಶ್ರಮಕ್ಕೆ ಹೋದನು. ಅಲ್ಲಿದ್ದುಕೊಂಡಿರಲು ಅಲ್ಲಿಗೆ ಅವನನ್ನು. ನೋಡಲು ಅನೇಕಜನ ಋಷಿಗಳು ಬರುತ್ತಿದ್ದರು. ಅಲ್ಲದೆ ಆ ಋಷಿಗಳು ಈ ರಾಮನನ್ನು ತಮ್ಮ ತಮ್ಮ ಆಶ್ರಮಗಳಿಗೆ ಕರೆದುಕೊಂಡು ಹೋಗಿ ತಮಗೆ ಬೇಕಾದಷ್ಟು ದಿವಸಗಳವರೆಗೆ ಇಟ್ಟುಕೊಳ್ಳುತ್ತಿದ್ದರು. ಆಗಲೂ ರಾಮನು ಅನೇಕಜನ ರಾಕ್ಷಸರನ್ನು ಕೊಂದನು.

ಹೀಗಿರುತ್ತಿರುವಂತೆಯೇ ಒಂಭತ್ತು ವರ್ಷಗಳು ಆ ದಂಡಕದ ವನವಾಸದಲ್ಲಿ ಕಳೆದುವು. ಅನಂತರ ಅಗಸ್ತ್ಯನ ತಮ್ಮನಾದ ಸುಮತಿಯ ಆಶ್ರಮಕ್ಕೆ ಹೋದನು. ಅಂತೆಯೇ ಅಗಸ್ತ್ಯನ ಆಶ್ರಮಕ್ಕೂ ಹೋದನು. ಅಲ್ಲಿ ಆ ಅಗಸ್ತ್ಯನು ರಾಮನಿಗೆ ಒಂದು ಧನುಸ್ಸನ್ನೂ ಆಕ್ಷಯಬಾಣಗಳುಳ್ಳ ಬತ್ತಳಿಕೆಗಳನ್ನೂ ಕೊಟ್ಟನು. ಮತ್ತು ಒಂದು ಖಡ್ಗವನ್ನೂ ಕೊಟ್ಟನು.

ರಾಮನು ಅಲ್ಲಿಂದ ಮುಂದೆ ಹೊರಟು ಪಂಚವಟಿಗೆ ಹೋದನು. ಅಲ್ಲಿ ಜಟಾಯುವೆಂಬ ಪಕ್ಷಿಯ ಸ್ನೇಹವಾಯಿತು. ಅಲ್ಲಿಯೇ ಆಶ್ರಮವನ್ನು ಕಲ್ಪಿಸಿಕೊಂಡನು. ಅಲ್ಲಿ ಮೂರುವರೆ ವರ್ಷಗಳ ಕಾಲವಿದ್ದನು. ಅಲ್ಲಿ ಆಶ್ರಮವನ್ನು ಮಾಡಿಕೊಳ್ಳುವಾಗ ಶೂರ್ಪಣಖಿಯ ಮಗನಾದ ಸಾಂಬನನ್ನು ಕೊಂದರು. ಶೂರ್ಪಣಖಿಯು ಪುತ್ರಶೋಕದಿಂದ ಸಂಚರಿಸುತ್ತಾ ಇವರನ್ನು ಮೋಸಪಡಿಸಲು ಉತ್ತಮತರದ ರೂಪವನ್ನು ಹೊಂದಿ ಬಂದಳು. ಮತ್ತು ಅವರ ವಿಷಯವನ್ನು ತಿಳಿದುಕೊಂಡಳು. ಅಲ್ಲದೆ ರಾಮನನ್ನು ಗಂಡನಾಗಬೇಕೆಂದು ಕೇಳಿಕೊಳ್ಳಲು ಅವನು ಒಪ್ಪಲಿಲ್ಲ. ರಾಮನಿಂದ ಸಂಜ್ಞೆಮಾಡಲ್ಪಟ್ಟ ಲಕ್ಷ್ಮಣನು ಅವಳ ಕಿವಿ ಮೂಗುಗಳನ್ನು ಕತ್ತರಿಸಿದನು.

ಹೀಗೆ ಅವಮಾನಿತಳೂ ನೊಂದವಳೂ ಆದ ರಾಕ್ಷಸಿಯು ಖರದೂಷಣರಲ್ಲಿಗೆ ಹೋದಳು. ಅವರು ತಾವೂ ತಮ್ಮ ಸೈನ್ಯದವರೂ ಯುದ್ಧಕ್ಕೆ ಬರಲು ರಾಮನು ಅವರೆಲ್ಲರನ್ನೂ ಕೊಂದನು. ಆ ರಾಕ್ಷಸರನ್ನು ಈ ರೀತಿಯಾಗಿ ಕೊಂದ ಜಾಗವು ತ್ರಿಕಂಟಕಕ್ಷೇತ್ರವೆಂದು ಈಗಲೂ ಪ್ರಸಿದ್ಧಿಯಾಗಿದೆ.

ಹೀಗಿರುತ್ತಿರಲು ರಾಮನು ಸೀತೆಯನ್ನು ಕುರಿತು "ಎಲೈ ಸೀತೆಯೇ! ನೀನು ಸತ್ವರಜಸ್ತಮೋರೂಪಳಾಗಿ ಮೂರುಭಾಗವಾಗು. ರಜೋರೂಪದಿಂದ ಅಗ್ನಿಯಲ್ಲಿಯೂ, ಸತ್ವರೂಪದಿಂದ ನನ್ನ ವಾಮಾಂಗದಲ್ಲಿಯೂ, ಕಾಣದಂತೆ ಸೇರಿಕೊ. ತಮೋರೂಪದಿಂದ ಇಲ್ಲಿದ್ದುಕೊಂಡು ರಾವಣನನ್ನು ಮೋಹಗಳಿಸು" ಎಂದನು. ಸೀತೆಯು ಅಂತೆಯೇ ಮಾಡಿದಳು.

ಅತ್ತ ಶೂರ್ಪಣಖಿಯು ಲಂಕೆಗೆ ಹೋಗಿ ರಾವಣನನ್ನು ಕುರಿತು "ಎಲೈ ರಾವಣನೆ! ಜನಸ್ಥಾನದಲ್ಲಿ ಹದಿನಾಲ್ಕುಸಾವಿರ ಸೈನ್ಯಗಳನ್ನೂ ನಿನ್ನ ಬಂಧುಗಳಾದ ಖರದೂಷಣತ್ರಿಶಿರರನ್ನೂ ರಾಮನು ಕೊಂದಿರುವನಲ್ಲ! ಅದನ್ನು ಚಾರರಿಂದ ತಿಳಿಯದಿರುವೆಯಲ್ಲ! ನೀನು ಏನೆಂದು ರಾಜ್ಯಭಾರವನ್ನು

ಮಾಡುತ್ತಿರುವೆ? '' ಎಂದೆನಲು, ರಾವಣನು ಅದಕ್ಕೆ ಕಾರಣವೇನೆಂದು ಕೇಳುತ್ತಾ ಆಕೆಯ ಆ ವಿರೂಪವನ್ನೂ ನೋಡಿದನು.

ಆಗ ಆಕೆಯು "ರಾಮನ ಹೆಂಡತಿಯಾದ ಜಾನಕಿಯು ಬಹು ಸುಂದರಿಯು. ಆಕೆಯನ್ನು ನಿನಗೆ ತಂದುಕೊಡಬೇಕೆಂದು ಅಲ್ಲಿಗೆ ಹೋಗಲು ಆಗ ನನಗೆ ಅವನು ಈ ರೀತಿಯಾದ ವಿರೂಪವನ್ನುಂಟುಮಾಡಿದನು. ಮತ್ತು ತಪಸ್ಸನ್ನು ಮಾಡುತ್ತಿದ್ದ ನನ್ನ ಮಗನಾದ ಸಾಂಬನನ್ನು ಕೊಂದನು. ಇದಕ್ಕೋಸ್ಕರವಾಗಿ ಆ ಖರದೂಷಣಾದಿಗಳು ಯುದ್ಧವನ್ನು ಮಾಡಲು ಅವರನ್ನು ಕೊಂದನು. ನಿನಗೆ ಪೌರುಷವಿದ್ದರೆ ಆ ಜಾನಕಿಯನ್ನು ತೆಗೆದುಕೊಂಡು ಬಾ. ಇಲ್ಲದಿದ್ದರೆ ಗಂಡನು ಸತ್ತ ಮುಂಡೆಯಂತೆ ಕುಳಿತಿರು'' ಎಂದಳು.

ರಾವಣನು ಆಕೆಯ ಈ ಮಾತನ್ನು ಕೇಳಿ ಅವಳನ್ನು ಸಮಾಧಾನ ಪಡಿಸಿದನು. ಮತ್ತು ಆ ರಾಮ ಲಕ್ಷ್ಮಣರನ್ನು ಕೊಲ್ಲುವುದಾಗಿಯೂ ಹೇಳಿದನು. ತನಗೆ ಹಿತವನ್ನು ಕೋರಿ ಅದರಂತೆ ನಡೆಸುವ ಸೋದರಮಾವ ನಾದ ಮಾರೀಚನ ಬಳಿಗೆ ಹೋಗಿ ಎಲ್ಲವನ್ನೂ ತಿಳಿಸಿದನು. ಆಗ ಆ ಮಾರೀ ಚನು ಆ ರಾಮನಿಂದ ತಾನು ವಿಶ್ವಾಮಿತ್ರನ ಯಾಗದ ಕಾಲದಲ್ಲಿ ಅನುಭವಿ ಸಿರುವ ತೊಂದರೆಯನ್ನು ತಿಳಿಸಿ ಅವನ ಸಹವಾಸವು ಬೇಡವೆಂದು ಹೇಳಿ ಹೆದರಿಸಿ ದನು. ಅಲ್ಲದೆ ರತ್ನ, ರಜತ ಮೊದಲಾದ ರಕಾರಾದಿಯಾದ ವಸ್ತುಗಳ ಹೆಸರನ್ನು ಕೇಳಿದರೇನೇ ರಾಮನ ಸ್ಮರಣೆ ಬಂದು ನನಗೆ ಹೆದರಿಕೆಯಾಗುತ್ತಿರುವುದೆಂದೂ ಹೇಳಿದನು. ಮತ್ತು ಈ ರಾಮನ ಸಂಗಡ ವೈರದ ಕೆಲಸವನ್ನು ಹೇಳಿದವನು ನಿನಗೆ ಆಪ್ತರೂಪನಾದ ಶತ್ರುವೆಂದೂ ಹೇಳಿ ಅವನ ಮಾತನ್ನೇ ಹೇಳಬೇಡ. ಅವನನ್ನು ನೋಡಿದರೇನೇ ನೀನು ಸಾಯುತ್ತೀಯೆ. ಎಂದೂ ಹೇಳಿದನು.

ಈ ಮಾತನ್ನು ಕೇಳಿದ ರಾವಣನು, "ನೀನು ಜಿಂಕೆಯ ರೂಪದಿಂದ ರಾಮನಿರುವೆಡೆಗೆ ಹೋಗು. ಅವನು ನಿನ್ನನ್ನು ಅನುಸರಿಸಿ ಬರುವನು. ಲಕ್ಷ್ಮಣನೂ ಬರುವಂತೆ ಮಾಡು. ಆಗ ನಾನು ಆ ಸೀತೆಯನ್ನು ಕದ್ದು ಲಂಕೆಗೆ ತರುವೆನು. ಅನಂತರ ಲಂಕಾರಾಜ್ಯದಲ್ಲಿ ಅರ್ಧರಾಜ್ಯವನ್ನೇ ನಿನಗೆ ಕೊಡುವೆನು. ನೀನು ನನ್ನೊಡನೆ ಆ ರಾಮನ ಬಳಿಗೆ ಬಾರದಿದ್ದರೆ ನಾನೇ ನಿನ್ನನ್ನು ಕೊಲ್ಲು ತ್ತೇನೆ.'' ಎಂದನು.

ರಾವಣನು ಇಂತೆಂದುದನ್ನು ಕೇಳಿ ಮಾರೀಚನು ರಾಮನ ಕೈಯ್ಯಿಂದ ಸಾಯುವುದು ಒಳ್ಳೆಯದೇ ಹೊರತು ಈ ರಾವಣನ ಕೈಯ್ಯಿಂದ ಮರಣವು

ಒಳ್ಳೆಯದಲ್ಲ. ಎಂದು ನಿಶ್ಚಯಿಸಿ ಹಾಗೆಯೇ ಆಗಲಿ ಎಂದನು. ಅನಂತರ ಇಬ್ಬರೂ ರಥದಲ್ಲಿ ಜನಸ್ಥಾನಕ್ಕೆ ಹೋದರು. ಮಾರೀಚನು ಚಿನ್ನದ ಜಿಂಕೆಯಾಗಿ ಜಾನಕಿಯನ್ನು ಮೋಹಪಡಿಸಿದನು. ಜಾನಕಿಯು ಮೃಗವನ್ನು ಅಪೇಕ್ಷಿಸಲು ರಾಮನು ಅದನ್ನು ತರಲು ಹೊರಟನು. ರಾಮನು ಬಾಣದಿಂದ ಹೊಡೆಯಲು ರಾಮನ ಧ್ವನಿಯಂತೆ ಧ್ವನಿಯನ್ನು ಮಾಡಿಕೊಂಡು "ಹಾ ಸೌಮಿತ್ರೆ" ಎಂದು ಕೂಗಿದನು. ಇದನ್ನು ಜಾನಕಿಯು ಕೇಳಿ ಲಕ್ಷ್ಮಣನಿಗೆ ಹೇಳಲು ಲಕ್ಷ್ಮಣನು ಅದನ್ನು ನಂಬದಿರಲು ಸೀತೆಯು ಕ್ರೂರವಾದ ಮಾತುಗಳಿಂದ ಬೈದು ಕಳುಹಿಸಿದಳು.

ಲಕ್ಷ್ಮಣನು ಧನುಸ್ಸಿನಲ್ಲಿ ಆಶ್ರಮದ ಸುತ್ತಲೂ ರೇಖೆಯನ್ನು ಮಾಡಿ ಇದನ್ನು ದಾಟಬೇಡವೆಂದು ಹೇಳಿ ಹೊರಟನು. ಅವನು ಹೊರಡಲು ರಾವಣನು ಸನ್ಯಾಸಿಯ ರೂಪದಿಂದ ಬಂದು ಸೀತೆಯು ಲಕ್ಷ್ಮಣನು ಮಾಡಿದ ಗೆರೆಯನ್ನು ದಾಟಬರುವಂತೆ ಮಾಡಿ ಆಕೆಯನ್ನು ಹೊತ್ತುಕೊಂಡು ಹೋದನು. ದಾರಿಯಲ್ಲಿ ಜಟಾಯುವು ಇದನ್ನು ನೋಡಿ ಅವನೊಡನೆ ಯುದ್ಧಮಾಡಿ ಅವನ ರಥವನ್ನು ಪುಡಿ ಪುಡಿಮಾಡಿ ಅವನಿಗೆ ಮೂರ್ಛೆಬರಲು ಸತ್ತನೆಂದು ತಿಳಿದು ಸೀತೆಯನ್ನು ಹಿಂದಿರುಗಿ ತಂದನು. ಅನಂತರ ರಾವಣನು ಎಚ್ಚೆತ್ತು ಮತ್ತೆ ಯುದ್ಧವನ್ನು ಮಾಡಿ ಅವನನ್ನು ಸೋಲಿಸಿ ರಕ್ತವನ್ನು ಕಕ್ಕುವಂತೆ ಮಾಡಿದನು. ಅನಂತರ ಸೀತೆಯನ್ನು ಅಂತರಿಕ್ಷಮಾರ್ಗದಲ್ಲಿ ತೆಗೆದುಕೊಂಡು ಹೊರಟನು. ಆಗ ಸೀತೆಯು ರಾಮ ರಾಮ ಎಂದೆನ್ನುತ್ತ ಒಡವೆಗಳನ್ನು ಒಂದು ಬಟ್ಟೆಯಲ್ಲಿ ಕಟ್ಟಿ ಒಂದು ಬೆಟ್ಟದಮೇಲೆ ಕೆಲವರು ಕುಳಿತಿರುವುದನ್ನು ನೋಡಿ ಅಲ್ಲಿಗೆ ಎಸೆದಳು. ರಾವಣನು ಆಕೆಯನ್ನು ಲಂಕೆಗೆ ಕರೆದುಕೊಂಡು ಹೋಗಿ ಅಶೋಕವನದಲ್ಲಿಟ್ಟನು. ಅವಳ ಸುತ್ತಲೂ ಅನೇಕಜನ ರಾಕ್ಷಸಿಯರನ್ನು ಕಾವಲಿಟ್ಟನು. ಅವರೆಲ್ಲರಿಗೂ ಆ ಸೀತೆಯನ್ನು ತನ್ನ ವಶಳಾಗುವಂತೆ ಮಾಡಬೇಕೆಂದು ಹೇಳಿದನು. ಆಗ ಇಂದ್ರನು ಸೀತೆಗೆ ವರ್ಷತುಷ್ಟಿಯನ್ನುಂಟುಮಾಡುವ ಪಾಯಸವನ್ನು ತಂದುಕೊಟ್ಟನು.

ಇತ್ತ ಲಕ್ಷ್ಮಣನನ್ನು ನೋಡಿ ರಾಮನು ವೃತ್ತಾಂತವನ್ನು ತಿಳಿದು ಹಿಂದಿರುಗಿ ಬಂದನು. ಅಲ್ಲಿ ಸೀತೆಯು ಇಲ್ಲದಿರಲು ಗೃಧ್ರರಾಜನಾದ ಜಟಾಯುವಿನಿಂದ ವಿಷಯಗಳನ್ನು ತಿಳಿದನು ಅನಂತರ ಸೀತೆಯನ್ನು ನೆನೆದು ದುಃಖಿಸುತ್ತಿರಲು ಪಾರ್ವತಿಯು ಸೀತೆಯ ವೇಷವನ್ನು ಹಾಕಿಕೊಂಡು ಬಂದು ರಾಘವನನ್ನು ಕುರಿತು ತಾನು ಬಂದಿರುವೆನೆಂದು ಹೇಳಲು ಅವನು ನೀನಾರೆಂಬುದು ನನಗೆ ಗೊತ್ತು. ಹೋಗೆಂದು ಹೇಳಿ ನಾಚಿಸಿದನು. ಅನಂತರ ಆ ದಂಡಕೆಯಲ್ಲಿ

ರಾಮನು ಸೀತೆಯನ್ನು ಹುಡುಕುತ್ತ ಅನೇಕಜನ ರಾಕ್ಷಸರನ್ನು ಕೊಂದನು. ಇಂತಹ ಸಂದರ್ಭದಲ್ಲಿಯೇ ಕಬಂಧನು ಇವರನ್ನು ಹಿಡಿದನು. ಆಗ ಅವನ ತೋಳನ್ನು ಕತ್ತರಿಸಿದರು. ಅವನು ತಾನು ಗಂಧರ್ವನೆಂದೂ ಬ್ರಹ್ಮನ ಶಾಪದಿಂದ ರಾಕ್ಷಸನಾಗಿದ್ದು ನಿನ್ನಿಂದ ಅದು ವಿಮೋಚನೆಯಾಯಿತೆಂದೂ ಹೇಳಿದನು. ಮತ್ತು ತಾನು ವಿಕಾರವಾದ ವಿಷಯವನ್ನೂ ತಿಳಿಸಿದನು.

ರಾಮನು ಮುಂದೆ ಹೊರಟು ಶಬರಿಯನ್ನು ನೋಡಿ ಆಕೆಯಿಂದ ಪೂಜಿತನಾಗಿ ಆಕೆಯ ಮಾತಿನಂತೆ ಋಷ್ಯಮೂಕ ಪರ್ವತಕ್ಕೆ ಹೊರಟನು. ರಾಮನು ಅಂತೆಯೇ ಹೊರಟು ಅಲ್ಲಿರುವ ಪಂಪಾಸರೋವರದಲ್ಲಿ ಸ್ನಾನಮಾಡಿ ಗೆಡ್ಡೆಗೆಣಸುಗಳಿಂದ ಹಸಿವನ್ನಡಗಿಸಿಕೊಂಡು ಸೀತೆಯನ್ನು ಹುಡುಕುತ್ತಿದ್ದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಸಾರಕಾಂಡೇ

॥ ಅಷ್ಟಮಸ್ಸರ್ಗಃ ॥

॥ ಶ್ರೀಶಿವ ಉವಾಚ

ಅಥ ರಾಮೋ ಲಕ್ಷ್ಮಣೇನ ಋಷ್ಯಮೂಕಾಚಲಂ ಪ್ರತಿ ।
ಯಯೌ ಧೃತಧನುರ್ಬಾಣೋ ನೇತ್ರೇ ಸರ್ವತ್ರ ಚಾಲಯನ್ ॥ ೧ ॥

ಋಷ್ಯಮೂಕಗಿರೇಃ ಪಾರ್ಶ್ವೇ ಗಚ್ಛಂತೌ ರಾಮಲಕ್ಷ್ಮಣೌ ।
ಸುಗ್ರೀವೇಣಾಥ ತೌ ದೃಷ್ಟೌ ಋಷ್ಯಮೂಕಸ್ಥಿತೇನ ಹಿ ॥ ೨ ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

ಎಂಟನೆಯ ಸರ್ಗವು

೧. ಶ್ರೀ ಶಿವನು ಹೇಳಿದನು–ರಾಮನು ಲಕ್ಷ್ಮಣನೊಡನೆ ಹೊರಟು ಧನುರ್ಬಾಣಗಳನ್ನು ಧರಿಸಿ ಎಲ್ಲಾ ಕಡೆಯಲ್ಲಿಯೂ ನೋಡುತ್ತ ಋಷ್ಯಮೂಕ ಪರ್ವತದ ದಾರಿಯಲ್ಲಿ ಹೊರಟನು.

೨. ಈ ರಾಮ ಲಕ್ಷ್ಮಣರು ಋಷ್ಯಮೂಕ ಪರ್ವತದ ಕಿಬ್ಬಿಯಲ್ಲಿ ಹೋಗುತ್ತಿರಲು ಋಷ್ಯಮೂಕ ಪರ್ವತದಲ್ಲಿದ್ದ ಆ ಸುಗ್ರೀವನು ಇವರನ್ನು ನೋಡಿದನು.

ಸುಗ್ರೀವಸ್ತೌ ತದಾ ದೃಷ್ಟ್ವಾ ಚತುರ್ಭಿರ್ಮಂತ್ರಿಭಿರ್ಯುತಃ ।
ಸಮ್ಮಂತ್ರ್ಯ ಮಾರುತಿಂ ಪ್ರಾಹ ವಾಲಿನಾ ಪ್ರೇಷಿತಾವುಭೌ ॥ ೩ ॥

ಮಾಂ ಹಂತುಂ ಧೃತಕೋದಂಡೌ ಸತೂಣೀರೌ ನರಾಕೃತೀ ।
ಇತೋಽಸ್ಮಾಭಿಃ ಪ್ರಗಂತವ್ಯಂ ಮಂತ್ರಂ ಶೃಣು ಮಯೋಚ್ಯತೇ ॥ ೪ ॥

ಗಚ್ಛ ಜಾನೀಹಿ ಭದ್ರಂ ತೇ ವಟುರ್ಭೂತ್ವಾ ದ್ವಿಜಾಕೃತಿಃ ।
ತಾಭ್ಯಾಂ ಸಂಭಾಷಣಂ ಕೃತ್ವಾ ಜಾನೀಹಿ ಹೃದಯಂ ತಯೋಃ ॥ ೫ ॥

ಯದಿ ತೌ ದುಷ್ಟಹೃದಯೌ ಸಂಜ್ಞಾಂ ಕುರು ಕರಾಗ್ರತಃ ।
ಸಾಧುತ್ವೇ ಸ್ಮಿತವಕ್ತ್ರೋಽಭೂರೇವಂ ಜಾನೀಹಿ ನಿಶ್ಚಯಂ ॥ ೬ ॥

---

೩. ಸುಗ್ರೀವನು ತನ್ನ ನಾಲ್ವರು ಮಂತ್ರಿಗಳೊಡನೆ ಇದ್ದುಕೊಂಡು ಇವರನ್ನು ನೋಡಿದೊಡನೆಯೇ ಅವರೊಡನೆ ಯೋಚನೆಮಾಡಿ ಮಾರುತಿಯನ್ನು ಕುರಿತು ಇವರನ್ನು ವಾಲಿಯು ಕಳುಹಿಸಿರುವನು.

೪. ಇವರು ನನ್ನನ್ನು ಕೊಲ್ಲಲು ಧನುಸ್ಸನ್ನು ಹಿಡಿದುಕೊಂಡು ಬತ್ತಳಿಕೆಗಳನ್ನು ಧರಿಸಿ ಮನುಷ್ಯರ ಆಕಾರವನ್ನು ಹೊಂದಿ ಬಂದಿರುವರು. ಆದುದರಿಂದ ನಾವು ಇಲ್ಲಿಂದ ಹೊರಟುಹೋಗಬೇಕು. ನಾನು ಹೇಳುವುದನ್ನು ಕೇಳಿರಿ.

೫. ಆದರೆ ಎಲೈ ಹನುಮಂತನೆ! ನೀನು ಬ್ರಹ್ಮಚಾರಿಯ ವೇಷವನ್ನು ಹಾಕಿಕೊಂಡು ಬ್ರಾಹ್ಮಣವೇಷದಿಂದ ಅವರ ವಿಷಯವನ್ನು ತಿಳಿದು ಬಾ. ಅವರಿಬ್ಬರೊಡನೆಯೂ ಮಾತನಾಡಿಕೊಂಡು ಅವರ ಮನಸ್ಸನ್ನು ತಿಳಿದುಕೊ.

೬. ಅವರು ನಮ್ಮ ವಿಷಯದಲ್ಲಿ ಕೆಟ್ಟ ಅಭಿಪ್ರಾಯವನ್ನು ಹೊಂದಿದ್ದರೆ ಬೆರಳಿನಿಂದ ಸನ್ನೆಯನ್ನು ಮಾಡು. ಒಳ್ಳೆಯ ಅಭಿಪ್ರಾಯವಿದ್ದರೆ ನಗುಮುಖದಿಂದ ಕೂಡಿಕೊಂಡಿರು. ಇದು ನಿಶ್ಚಯವು. ತಿಳಿದುಕೊ.

ತಥೇತಿ ವಟುರೂಪೇಣ ಗತ್ವಾ ನತ್ವಾ ರಘೂತ್ತಮಂ ।
ಕೌ ಯುವಾಂ ಪುರುಷವ್ಯಾಘ್ರಾವಿತಿ ಪಪ್ರಚ್ಛ ಮಾರುತಿಃ ॥ ೭ ॥

ತತಸ್ತಂ ಲಕ್ಷ್ಮಣಃ ಪ್ರಾಹ ಪೂರ್ವವೃತ್ತಂ ಸವಿಸ್ತರಂ ।
ಶಬರೀ ವಚನಾದತ್ರಾಮುಸ್ಸಖ್ಯಂ ಕರ್ತುಂ ಸಮಾಗತಃ ॥ ೮ ॥

ಸುಗ್ರೀವೇಣಾಥ ತಚ್ಛ್ರುತ್ವಾ ಸ್ವರೂಪಂ ಮಾರುತಿಸ್ತದಾ ।
ಚಕಾರ ನೈಜಂ ಪ್ರಕಟಂ ಸ್ವೀಯಂ ವೃತ್ತಂ ನ್ಯವೇದಯತ್ ॥ ೯ ॥

ಮತ್ಸ್ಕಂಧಮಧಿರುಹ್ಯಾದ್ಯ ಪರ್ವತಂ ಗಂತುಮರ್ಹಥಃ ।
ತಥೇತಿ ಮಾರುತೇಃ ಸ್ಕಂಧೇ ಸಂಸ್ಥಿತೌ ತೌ ಬಭೂವತುಃ ॥ ೧೦ ॥

---

೭. ಹೀಗೆಂದು ಸುಗ್ರೀವನು ಹೇಳಲು ಹನುಮಂತನು ಹಾಗೆಯೇ ಆಗಲೆಂದು ಬ್ರಹ್ಮಚಾರಿಯ ವೇಷದಿಂದ ಹೋಗಿ ಆ ರಾಮ ಲಕ್ಷ್ಮಣರಿಗೆ ನಮಸ್ಕರಿಸಿ ನೀವುಗಳು ಯಾರು ? ಎಂಬುದಾಗಿ ಅವರನ್ನು ಕೇಳಿದನು.

೮. ಆಗ ಲಕ್ಷ್ಮಣನು ತಮ್ಮ ಪೂರ್ವವೃತ್ತಾಂತವನ್ನೆಲ್ಲಾ ಅವನಿಗೆ ತಿಳಿಸಿದನು. ಶಬರಿಯ ಮಾತಿನಂತೆ ರಾಮನು ಸುಗ್ರೀವನೊಡನೆ ಸ್ನೇಹವನ್ನು ಮಾಡಿಕೊಳ್ಳಲು ಬಂದಿರುವನು. ಎಂಬುದನ್ನ ತಿಳಿಸಿದನು.

೯. ಮಾರುತಿಯು ಈ ವಿಷಯವನ್ನು ಕೇಳಿದೊಡನೆಯೇ ತನ್ನ ನಿಜರೂಪವನ್ನು ತೋರಿಸಿ ತನ್ನ ವಿಷಯಗಳೆಲ್ಲವನ್ನೂ ತಿಳಿಸಿದನು.

೧೦. ಎಲೈ ರಾಮನೆ ! ನನ್ನ ಹೆಗಲಿನಮೇಲೆ ಕುಳಿತುಕೊಂಡು ಬೆಟ್ಟದ ಮೇಲಕ್ಕೆ ಬಾ. ಎನ್ನಲು ಹಾಗೆಯೇ ಆ ರಾಮಲಕ್ಷ್ಮಣರಿಬ್ಬರೂ ಮಾರುತಿಯ ಹೆಗಲಿನಮೇಲೆ ಕುಳಿತುಕೊಂಡರು.

ಉತ್ಪಪಾತ ಗಿರೇರ್ಮೂರ್ಧ್ನಿ ಕ್ಷಣಾದೇವ ಮಹಾಕಪಿಃ ।
ವೃಕ್ಷಚ್ಛಾಯಾಂ ಸಮಾಶ್ರಿತ್ಯ ತೌ ಸ್ಥಿತೌ ರಾಮಲಕ್ಷ್ಮಣೌ ॥ ೧೧ ॥

ಸುಗ್ರೀವಂ ಮಾರುತಿರ್ಗತ್ವಾ ರಾಮವೃತ್ತಂ ನ್ಯವೇದಯತ್ ।
ತತಃ ಪ್ರಜ್ವಾಲ್ಯ ವಹ್ನಿಂ ಸ ಸುಗ್ರೀವೋ ಲಕ್ಷ್ಮಣೇನ ಹಿ ॥ ೧೨ ॥

ಚಕಾರ ಸಖ್ಯಂ ವೇಗೇನ ಸಮಾಲಿಂಗ್ಯ ಪರಸ್ಪರಂ ।
ವೃಕ್ಷಶಾಖಾಂ ಸ್ವಯಂ ಛಿತ್ವಾ ವಿಷ್ಟರಾರ್ಥಂ ಸ್ವಯಂ ಕಪಿಃ ॥ ೧೩ ॥

ಹರ್ಷೇಣ ಮಹತಾವಿಷ್ಟಾಸ್ಸರ್ವ ಏವಾವತಸ್ಥಿರೇ ।
ಲಕ್ಷ್ಮಣಸ್ತ್ವಬ್ರವೀತ್ಸರ್ವಂ ಸುಗ್ರೀವಂ ವೃತ್ತಮಾತ್ಮನಃ ॥ ೧೪ ॥

---

೧೧. ಆ ಹನುಮನು ಒಡನೆಯೇ ಆ ಬೆಟ್ಟದಮೇಲಕ್ಕೆ ಹಾರಿದನು. ಅಲ್ಲಿ ಒಂದು ಜಾಗದಲ್ಲಿ ಇಳಿಸಲು ಮರದ ನೆರಳಿನಲ್ಲಿ ರಾಮಲಕ್ಷ್ಮಣರು ಕುಳಿತುಕೊಂಡರು.

೧೨. ಮಾರುತಿಯು ಸುಗ್ರೀವನ ಬಳಿಗೆ ಹೋಗಿ ರಾಮನ ವಿಷಯವನ್ನು ಹೇಳಿದನು. ಆಗ ಸುಗ್ರೀವನು ಅಗ್ನಿಯನ್ನು ಹತ್ತಿಸಿ ಆ ಅಗ್ನಿಯನ್ನು ಪ್ರದಕ್ಷಿಣೆಮಾಡಿ ಅವನ ಸಾಕ್ಷಿಯಾಗಿ ರಾಮನೊಡನೆ ಸ್ನೇಹವನ್ನು ಮಾಡಿಕೊಂಡನು.

೧೩. ಮತ್ತು ಒಬ್ಬರಿಗೊಬ್ಬರು ಆಲಿಂಗಿಸಿಕೊಂಡರು. ಅನಂತರ ಸುಗ್ರೀವನು ರಾಮನು ಕುಳಿತುಕೊಳ್ಳುವುದಕ್ಕೆ ಮರದ ಚಿಗುರುಗಳನ್ನು ಕಿತ್ತು ಆಸನವನ್ನು ಕೊಟ್ಟನು.

೧೪. ಆಗ ಅವರೆಲ್ಲರೂ ಬಹುವಾದ ಹರ್ಷದಿಂದ ಕೂಡಿಕೊಂಡಿದ್ದರು. ಅನಂತರ ಲಕ್ಷ್ಮಣನು ತನ್ನ ವಿಷಯಗಳೆಲ್ಲವನ್ನೂ ಸುಗ್ರೀವನಿಗೆ ಹೇಳಿದನು.

ತಚ್ಛ್ರುತ್ವಾ ಸಕಲಂ ವೃತ್ತಂ ಸುಗ್ರೀವಸ್ಸ್ವಂ ನ್ಯವೇದಯತ್ ।
ಸಖೇ ಶ್ರುಣುಷ್ವ ಮೇ ವೃತ್ತಂ ವಾಲಿನಾ ಯತ್ಕೃತಂ ಪುರಾ ॥ ೧೫ ॥

ಮಯಪುತ್ರೋ ದುರ್ಮದಶ್ಚ ಕಿಷ್ಕಿಂಧಾಮೇಕದಾಗತಃ ।
ಕೃತ್ವಾ ಸ ದೀರ್ಘಶಬ್ದಂ ತು ವಾಲಿನಂ ಸಮುಪಾಹ್ವಯತ್ ॥ ೧೬ ॥

ತಂ ಶ್ರುತ್ವಾ ನಿರ್ಯಯೌ ವಾಲೀ ಜಘಾನ ದೃಢಮುಷ್ಟಿನಾ ।
ದುದ್ರಾವ ತೇನ ಸಂವಿಗ್ನೋ ಜಗಾಮ ಸ್ವಗುಹಾಂ ಪ್ರತಿ ॥ ೧೭ ॥

ಅನುದುದ್ರಾವ ತಂ ವಾಲೀ ವಾಲಿಪೃಷ್ಠೇ ತ್ವಹಂ ಗತಃ ।
ವಾಲೀ ಮಾಮಾಹ ತಿಷ್ಠ ತ್ವಂ ಬಹಿರ್ಗಚ್ಛಾಮ್ಯಹಂ ಗುಹಾಂ ॥ ೧೮ ॥

---

೧೫. ರಾಮನ ವಿಷಯವನ್ನು ಲಕ್ಷ್ಮಣದಿಂದ ಸುಗ್ರೀವನು ಕೇಳಿದನಂತರ ತನ್ನ ವಿಷಯವನ್ನೂ ಹೇಳಿದನು. ಎಲೈ ಮಿತ್ರನೆ! ಕೇಳು. ವಾಲಿಯು ನನಗೆ ಏನು ಮಾಡಿದನೆಂಬುದನ್ನು ಹೇಳುತ್ತೇನೆ.

೧೬. ಒಂದುಸಾರಿ ಮಯಪುತ್ರನಾದ ದುರ್ಮದನು ಕಿಷ್ಕಿಂಧೆಯ ಬಳಿಗೆ ಬಂದು ಹೊರಗೆ ನಿಂತುಕೊಂಡು ಗಟ್ಟಿಯಾಗಿ ಗರ್ಜಿಸುತ್ತಾ ವಾಲಿಯನ್ನು ಕರೆದನು.

೧೭. ಆ ಶಬ್ದವನ್ನು ಕೇಳಿ ವಾಲಿಯು ಹೊರಗೆಬಂದು ವಜ್ರಮುಷ್ಟಿಯಿಂದ ಆ ದುರ್ಮದನನ್ನು ಹೊಡೆದನು. ಮತ್ತು ಆ ದುರ್ಮದನನ್ನು ಕೊಲ್ಲಬೇಕೆಂದು ಓಡಿಸಿಕೊಂಡು ಹೋಗಲು ಅವನು ತನ್ನ ಗುಹೆಗೆ ಓಡಿಹೋದನು.

೧೮. ವಾಲಿಯು ಆ ದುರ್ಮದನ ಹಿಂದೆ ಓಡುತ್ತಿರಲು ವಾಲಿಯ ಹಿಂದೆ ನಾನೂ ಓಡಿದೆನು. ಆಗ ವಾಲಿಯು ಎಲೈ ಸುಗ್ರೀವನೆ! ನಾನು ಗುಹೆಯ ಒಳಕ್ಕೆ ಹೋಗುತ್ತೇನೆ. ನೀನು ಹೊರಗಿರು. ಎಂದನು.

ಇತ್ಯುಕ್ತ್ವಾ ವಿಶ್ಯ ಸ ಗುಹಾಂ ಮಾಸಮೇಕಂ ನ ನಿರ್ಯಯೌ |
ಗುಹಾದ್ವಾರಾನ್ಮಯಾ ರಕ್ತಂ ನಿರ್ಗತಂ ತನ್ನಿರೀಕ್ಷ್ಯ ಚ || ೧೯ ||

ನಿಶ್ಚಿತಂ ಮನಸಾ ವಾಲೀ ದುರ್ಮದೇನ ಹತಸ್ತ್ವಿತಿ |
ಏತಸ್ಮಿನ್ನಂತರೇ ಶ್ರುತ್ವಾ ಕಿಷ್ಕಿಂಧಾಂ ರಿಪುವೇಷ್ಟಿತಾಂ || ೨೦ ||

ಗುಹಾದ್ವಾರಿ ಶಿಲಾಮೇಕಾಂ ನಿಧಾಯ ದುರ್ಮದಸ್ಯ ಚ |
ಯತ್ನತೋ ಮಾರ್ಗರೋಧಾರ್ಥಂ ಕಿಷ್ಕಿಂಧಾಮಾಗತಸ್ಸ್ವಯಂ || ೨೧ ||

ಮಾಂ ದೃಷ್ಟ್ವಾ ರಿಪವಸ್ಸರ್ವೇ ವೇಗಾಚ್ಚಕ್ರುಃ ಪಲಾಯನಂ |
ಅನಿಚ್ಛಂ ತಂ ಮಂತ್ರಿಣೋ ಮಾಂ ತತ್ಪದೇ ಸಂನ್ಯವೇಶಯನ್ || ೨೨ ||

---

೧೯. ಹೀಗೆಂದು ಹೇಳಿ ಗುಹೆಗೆ ನುಗ್ಗಿ ಹೋದನು. ಒಂದುತಿಂಗಳವರೆಗೂ ಹಿಂದಿರುಗಿ ಬರಲೇ ಇಲ್ಲ. ಅನಂತರ ಗುಹೆಯ ಬಾಗಿಲಿನಿಂದ ಹೊರಕ್ಕೆ ರಕ್ತವು ಬಂದಿತು.

೨೦. ಅದನ್ನು ನಾನು ನೋಡಿ ವಾಲಿಯನ್ನು ದುರ್ಮದನು ಕೊಂಡಿರುವನು. ನಿಶ್ಚಯವು. ಎಂದು ತಿಳಿದೆನು. ಇಷ್ಟರೊಳಗೆ ಶತ್ರುಗಳು ಒಂದು ಕಿಷ್ಕಿಂಧೆಯನ್ನು ಮುತ್ತಿರುವರೆಂಬ ಸುದ್ದಿಯು ಬಂದಿತು.

೨೧. ಆಗ ಒಂದು ಕಲ್ಲನ್ನು ತಂದು ಗುಹೆಯಬಾಗಿಲಿಗೆ ಅಡ್ಡಲಾಗಿಟ್ಟು ತಡೆಮಾಡಿ ನಾನು ಕಿಷ್ಕಿಂಧೆಗೆ ಬಂದೆನು.

೨೨. ನಾನು ಬಂದುದನ್ನು ನೋಡಿ ಶತ್ರುಗಳೆಲ್ಲರೂ ಓಡಿಹೋದರು. ನಾನು ಇಚ್ಛಿಸದಿದ್ದರೂ ಮಂತ್ರಿಗಳು ಆ ರಾಜ್ಯದಲ್ಲಿ ನನಗೆ ಪಟ್ಟಾಭಿಷೇಕವನ್ನು ಮಾಡಿದರು.

ತತೋ ಹತ್ವಾ ರಿಪುಂ ವಾಲೀ ದೃಷ್ಟ್ವಾ ಮಾಂ ಸ್ವಪದಸ್ಥಿತಂ ।
ಸಂತಾಡ್ಯ ನಗರಾನ್ಮಾಂ ಸ ಬಹಿರ್ನಿಷ್ಕಾಸಯತ್ತದಾ ॥ ೨೩ ॥

ತತಸ್ಸ ಸರ್ವಲೋಕೇಷು ವಾದಯಾಮಾಸ ದುಂದುಭಿಂ ।
ಭೂಮ್ಯಾಂ ಸುಗ್ರೀವಪಾತಾ ಯಸ್ಸ ಮೇ ವಧ್ಯೋ ಭವೇದಿತಿ ॥ ೨೪ ॥

ತತೋ ಲೋಕಾನ್ ಪರಿಕ್ರಮ್ಯ ಋಷ್ಯಮೂಕೋ ಮಯಾ ಶ್ರಿತಃ ।
ಏಕದಾ ದುಂದುಭಿರ್ನಾಮ ದೈತ್ಯೋ ಮಹಿಷರೂಪಧೃತ್ ॥ ೨೫ ॥

ಯುದ್ಧಾಯ ವಾಲಿನಂ ರಾತ್ರೌ ಸಮಾಹ್ವಯತ ಭೀಷಣಃ ।
ತತೋ ವಾಲೀ ಸಮಾಗತ್ಯ ಧೃತ್ವಾ ಶೃಂಗಂ ಕರೇಣ ಸಃ ॥ ೨೬ ॥

---

೨೩. ಅನಂತರ ವಾಲಿಯು ಶತ್ರುವನ್ನು ಸಂಹರಿಸಿ ಬಂದು ನಾನು ಅವನ ಜಾಗದಲ್ಲಿರುವುದನ್ನು ನೋಡಿದನು. ಆಗ ಕೋಪಗೊಂಡು ನನ್ನನ್ನು ಹೊಡೆದು ನಗರದಿಂದ ಹೊರಕ್ಕೆ ಓಡಿಸಿಬಿಟ್ಟನು.

೨೪. ಅನಂತರ ವಾಲಿಯು "ಲೋಕದಲ್ಲಿ ಯಾವನು ಸುಗ್ರೀವನನ್ನು ರಕ್ಷಿಸುವನೋ ಅವನನ್ನು ಕೊಂದುಹಾಕುತ್ತೇನೆ" ಎಂಬುದಾಗಿ ಎಲ್ಲಾ ಕಡೆಯಲ್ಲಿಯೂ ಡಂಗುರವನ್ನು ಹೊಡೆಸಿದನು.

೨೫–೨೬. ನಾನೂ ಕೂಡ ಎಲ್ಲಾ ಕಡೆಯಲ್ಲಿಯೂ ಅಲೆದಾಡಿಕೊಂಡು ಬಂದು ಕೊನೆಗೆ ಈ ಋಷ್ಯಮೂಕ ಪರ್ವತವನ್ನು ಆಶ್ರಯಿಸಿದೆನು. ಒಂದುಸಾರಿ ದುಂದುಭಿಯೆಂಬ ದೈತ್ಯನು ಕೋಣನ ರೂಪವನ್ನು ಧರಿಸಿ ಯುದ್ಧಕ್ಕೋಸ್ಕರ ರಾತ್ರಿಯಲ್ಲಿ ವಾಲಿಯನ್ನು ಕರೆದನು. ಆಗ ವಾಲಿಯು ಬಂದು ಆ ಕೋಣನ ಕೊಂಬನ್ನು ಹಿಡಿದುಕೊಂಡನು.

ಹಸ್ತಾಭ್ಯಾಂ ತಚ್ಛಿರಶ್ಛಿತ್ವಾ ತೋಲಯಿತ್ವಾ ಕ್ಷಿಪದ್ಭುವಿ ।
ಪಪಾತ ತಚ್ಛಿರೋ ರಾಮ ಮತಂಗಾಶ್ರಮಸನ್ನಿಧೌ ॥ ೨೭ ॥

ರಕ್ತವೃಷ್ಟಿಃ ಪಪಾತೋಚ್ಚೈರ್ಮತಂಗಶ್ಚಾಶಪತ್ಕ್ರುಧಾ ।
ಯದ್ಯಾಗತೋಽಸಿ ಮೇ ವಾಲಿನ್ ಗಿರಿಂ ಶೀಘ್ರಂ ಮರಿಷ್ಯಸಿ ॥ ೨೮ ॥

ಏವಂ ಶಪ್ತಸ್ತದಾರಭ್ಯ ಋಷ್ಯಮೂಕಂ ನ ಯಾತ್ಯಸೌ ।
ಪ್ರತಿಜ್ಞಾಂ ತೇ ಕರೋಮ್ಯದ್ಯ ಸೀತಾಂ ಶೀಘ್ರಂ ಸಮಾನಯೇ ॥ ೨೯ ॥

ಯದಾ ನೀತಾ ರಾವಣೇನ ತದಾ ದೃಷ್ಟ್ವಾ ಮಯಾತ್ರ ಖೇ ।
ಬದ್ಧ್ವೋತ್ತರೀಯೇ ಕ್ಷಿಪ್ತಾನಿ ಪಶ್ಯ ತ್ವಂ ಭೂಷಣಾನಿ ಹಿ ॥ ೩೦ ॥

---

೨೭. ಅನಂತರ ಅವನ ಕತ್ತನ್ನು ಕತ್ತರಿಸಿ ತೂಗಿ ದೂರಕ್ಕೆ ಎಸೆದನು. ಆ ತಲೆಯು ಮತಂಗಋಷಿಯ ಆಶ್ರಮದ ಬಳಿಯಲ್ಲಿ ಬಿದ್ದಿತು.

೨೮. ಆ ದೇಹವನ್ನು ಎಸೆದಾಗ ಮತಂಗಋಷಿಯ ಆಶ್ರಮದಲ್ಲಿ ಮಳೆಯಂತೆ ರಕ್ತವು ಆ ದೇಹದಿಂದ ಸುರಿಯಿತು. ಆಗ ಆ ಋಷಿಯು ಎಲೈ ವಾಲಿಯೆ! ನೀನು ಇಲ್ಲಿಗೆ ಬಂದರೆ ಒಡನೆಯೇ ಮರಣವನ್ನು ಹೊಂದು. ಎಂದು ಶಪಿಸಿದನು.

೨೯. ಈ ರೀತಿಯಾದ ಶಾಪವನ್ನು ಹೊಂದಿದಾಗಿನಿಂದ ಆ ವಾಲಿಯು ಈ ಋಷ್ಯಮೂಕ ಪರ್ವತಕ್ಕೆ ಬರುವುದಿಲ್ಲ. ಸೀತೆಯನ್ನು ಜಾಗ್ರತೆಯಾಗಿ ತಂದು ಕೊಡುತ್ತೇನೆಂದು ನಾನು ನಿನಗೆ ಪ್ರತಿಜ್ಞೆಯನ್ನು ಮಾಡಿ ಹೇಳುತ್ತೇನೆ.

೩೦. ರಾವಣನು ಸೀತೆಯನ್ನು ಎತ್ತಿಕೊಂಡು ಹೋಗುತ್ತಿದ್ದಾಗ ನಾನು ಆಕಾಶದಲ್ಲಿ ನೋಡಿದೆನು. ಆಗ ಸೀತೆಯು ತನ್ನ ಆಭರಣಗಳನ್ನು ಒಂದು ಬಟ್ಟೆಯಲ್ಲಿ ಗಂಟು ಕಟ್ಟಿ ನಮ್ಮ ಬಳಿಗೆ ಎಸೆದಿರುವಳು. ಅವನ್ನು ತೋರಿಸುತ್ತೇನೆ. ನೋಡು.

ಇತ್ಯುಕ್ತ್ವಾ ದರ್ಶಯಾಮಾಸ ಸುಗ್ರೀವೋ ಭೂಷಣಾನಿ ಹಿ ।
ತಾನಿ ದೃಷ್ಟ್ವಾಬ್ರವೀದ್ಬಂಧುಂ ರಾಮಸ್ತ್ವಂ ನಿಶ್ಚಯಂ ವದ ॥ ೩೧ ॥

ತ್ವಯಾ ದೃಷ್ಟಾನಿ ಸೀತಾಯಾಂ ತಚ್ಛ್ರುತ್ವಾ ಲಕ್ಷ್ಮಣೋಽಬ್ರವೀತ್ ।
ನ ವೇದ್ಮ್ಯಹಂ ಸಮಸ್ತಾನಿ ವೇದ್ಮ್ಯಂಗುಳಿಭವಾನಿ ಹಿ ॥ ೩೨ ॥

ವಂದನೇ ಯಾನಿ ದೃಷ್ಟಾನಿ ಮಯಾ ನಿತ್ಯಂ ರಘೂದ್ವಹ ।
ತತೋ ರಾಮೋಽತಿಸಂತುಷ್ಟೋ ಲಬ್ಧಾಂ ಸೀತಾಮಮನ್ಯತ ॥ ೩೩ ॥

ಸುಗ್ರೀವವಚನಾದ್ರಾಮಃ ಪ್ರತ್ಯಯಾರ್ಥಂ ತದಾ ಕ್ಷಣಾತ್ ।
ಪಾದಾಂಗುಷ್ಠೇನಾಕ್ಷಿಪತ್ತದ್ದುಂದುಭೇಶ್ಶಿರ ಉತ್ತಮಂ ॥ ೩೪ ॥

---

೩೧. ಹೀಗೆಂದು ಹೇಳಿ ಸುಗ್ರೀವನು ಒಡವೆಗಳನ್ನು ತೋರಿಸಿದನು. ಅವನ್ನು ರಾಮನು ನೋಡಿ ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣನೆ! ನೀನು ಈ ಒಡವೆಗಳನ್ನು ನೋಡಿ ಗುರುತಿಸಿ ನಿಶ್ಚಯವನ್ನು ಹೇಳು.

೩೨–೩೩. ಸೀತೆಯು ಇವನ್ನು ಧರಿಸಿರುವಾಗ ಅವನ್ನು ನೀನು ನೋಡಿದ್ದೀಯಷ್ಟೆ! ಎನ್ನಲು ಅದನ್ನು ಲಕ್ಷ್ಮಣನು ಕೇಳಿ, ಎಲೈ ರಾಘವನೆ! ನನಗೆ ಎಲ್ಲವೂ ಗೊತ್ತಿಲ್ಲ. ಈ ಕಾಲು ಬೆರಳಿಗೆ ಹಾಕಿಕೊಳ್ಳುವ ಮಿಂಚುಗಳನ್ನು ಮಾತ್ರ ನೋಡಿದ್ದೇನೆ. ಅವನ್ನು ನಿತ್ಯವೂ ನಾನು ಆಕೆಗೆ ನಮಸ್ಕಾರ ಮಾಡುವಾಗ ನೋಡುತ್ತಿದ್ದೆನು. ಎಂದನು. ಆಗ ರಾಮನು ಬಹು ಸಂತೋಷಗೊಂಡು ಸೀತೆಯು ಕೈಗೆ ಸಿಕ್ಕಿದಳೆಂದು ತಿಳಿದನು.

೩೪. ಅನಂತರ ಸುಗ್ರೀವನಿಗೆ ರಾಮನು ತಾನು ಬಲಿಷ್ಠನೆಂದು ತಿಳಿಸಿ ನಂಬಿಕೆಯನ್ನುಂಟುಮಾಡುವುದಕ್ಕೋಸ್ಕರ ಸುಗ್ರೀವನ ಮಾತಿನಂತೆ ಒಂದೇ ಕ್ಷಣದಲ್ಲಿ ಆ ದುಂದುಭಿಯ ಆ ದೊಡ್ಡತಲೆಯನ್ನು ಕಾಲಿನ ಉಂಗುಷ್ಠದಿಂದಲೇ ಚಿಮ್ಮಿದನು. ಆ ತಲೆಯು ಹತ್ತು ಯೋಜನಗಳ ಆಚೆಗೆ ಹೋಗಿ ಬಿದ್ದಿತು.

ದಶಯೋಜನಪರ್ಯಂತಂ ತದಾ ಬಾಣೇನ ವೈ ಪುನಃ |
ಚಕ್ರಾಕಾರಾರ್ ಸಪ್ತತಾಳಾರ್ ದೃಷ್ಟ್ವಾ ದೇಹೇ ಹ್ಯಹೇ ಪ್ರಭುಃ ॥ ೩೫ ॥

ಸ್ವೀಯಾಂಗುಷ್ಠೇನ ಸೌಮಿತ್ರೇಃ ಪದಂ ಕಿಂಚಿದ್ವಿಮರ್ದ್ಯ ಚ ।
ಋಜುಂ ಕೃತ್ವಾ ಪನ್ನಗಂ ತಂ ಶೇಷಾಂಶೇನ ಸ್ಥಿತಂ ಭುವಿ ॥ ೩೬ ॥

ಸುಗ್ರೀವಪ್ರತ್ಯಯಾರ್ಥಂ ಹಿ ಸಪ್ತತಾಲಾನ್ ಬಿಭೇದ ಸಃ |
ಗುಹಾಯಾಮೇಕದಾ ತಾಳಫಲಾನಿ ಸ್ಥಾಪಿತಾನಿ ಹಿ ॥ ೩೭ ॥

ವಾಲಿನಾ ಸಪ್ತ ನೀತಾನಿ ಕೇನ ಸರ್ಪಂ ದದರ್ಶ ಸಃ |
ತಂ ಶಪತ್ತ್ವಯಿ ವೃಕ್ಷಾಶ್ಚ ಭವಿಷ್ಯಂತೀತಿ ವಾನರಃ ॥ ೩೮ ॥

೩೫–೩೬. ಸರ್ಪದ ದೇಹವಾಗಿ ಹುಟ್ಟಿ ಚಕ್ರಾಕಾರವಾಗಿ ಇರುವ ಏಳು ತಾಳೆಯ ಮರಗಳನ್ನು ನೋಡಿ ಆ ರಾಮನು ತನ್ನ ಅಂಗುಷ್ಠದಿಂದ ಸೌಮಿತ್ರಿಯ ಪಾದಗಳನ್ನು ತಿಕ್ಕಿದುದರಿಂದ ಆ ಮರಗಳು ನೇರವಾಗುವಂತೆ ಮಾಡಿದನು. ಲಕ್ಷ್ಮಣನು ಆದಿಶೇಷನ ಅಂಶದಿಂದ ಭೂಮಿಯಲ್ಲಿ ಹುಟ್ಟಿರುವುದರಿಂದ ಆದಿಶೇಷನ ಅಂಶವಾದ ಸರ್ಪದ ದೇಹವೂ ನೇರವಾಯಿತು.

೩೭. ಸುಗ್ರೀವನಿಗೆ ನಂಬಿಕೆಯುನ್ನುಂಟುಮಾಡಲು ಆ ಏಳು ತಾಳೆಯ ಮರಗಳನ್ನೂ ಒಂದೇ ಬಾಣದಿಂದ ಕತ್ತರಿಸಿದನು. ಹಿಂದೆ ಒಂದುಸಾರಿ ವಾಲಿಯು ಒಂದು ಗುಹೆಯಲ್ಲಿ ಏಳು ತಾಳೆಯ ಹಣ್ಣುಗಳನ್ನು ತಾನೇ ತಂದು ಇಟ್ಟಿದ್ದನು.

೩೮. ಆ ಏಳು ಹಣ್ಣುಗಳನ್ನು ತೆಗೆದುಕೊಳ್ಳಲು ವಾಲಿಯು ಮತ್ತೆ ಆ ಗುಹೆಗೆ ಹೋಗಿ ನೋಡಿದಾಗ ಅವುಗಳಲ್ಲಿ ಅವನಿಗೆ ಸರ್ಪವು ಕಂಡುಬಂದಿತು. ಆಗ ಅವನು ಅದನ್ನು ನಿನ್ನಮೇಲೆ ಇವು ಮರಗಳಾಗಿ ಹುಟ್ಟಲಿ ಎಂದು ಶಪಿಸಿದನು.

ಸರ್ಪೋಽಪ್ಯಾಹಾಥ ತಾಂ ಛೇತ್ತಾ ಯಸ್ತೇ ಹಂತಾ ನ ಸಂಶಯಃ |
ತದ್ದೃಷ್ಟ್ವಾ ರಾಮಸಾಮರ್ಥ್ಯಂ ತಸ್ಮಿನ್ಪ್ರತ್ಯಯಮಾಪ ಸಃ || ೩೯ ||

ಸುಗ್ರೀವಸ್ತಂ ಪುನಃ ಪ್ರಾಹ ರಾಘವಂ ತುಷ್ಟಮಾನಸಃ |
ವಾಲಿನೇ ಸುರನಾಥೇನ ಪುರಾ ದತ್ತಾಸ್ತಿ ಮಾಲಿಕಾ || ೪೦ ||

ಯಾಂ ದೃಷ್ಟ್ವಾ ರಿಪವೋ ಯುದ್ಧೇ ಗತವೀರ್ಯಾ ಭವಂತಿ ಹಿ |
ಯಾ ಪುರಾ ಕಶ್ಯಪೇನೈವ ತಪಸಾ ದುಷ್ಕರೇಣ ಚ || ೪೧ ||

ಶಿವಾಲ್ಲಬ್ಧಾರ್ಪಿತಾ ಪುತ್ರಮಿಂದ್ರಂ ತೇನಾಪಿ ವಾಲಿನೇ |
ಪ್ರೀತ್ಯಾರ್ಪಿತಾ ಮಾಲಿಕಾ ಸಾ ವಾಲೀ ಕಂಠೇ ದಧಾತ್ಯಸೌ || ೪೨ ||

---

೩೯. ಆ ಸರ್ಪವೂ ಕೂಡ ಆ ಮರಗಳನ್ನು ಕತ್ತರಿಸತಕ್ಕವನೇ ನಿನ್ನನ್ನೂ ಕೊಲ್ಲಲಿ. ಇದರಲ್ಲಿ ಸಂಶಯಬೇಡ. ಎಂದಿತು. ಹೀಗಾಗಿದ್ದ ಆ ತಾಳೆಯ ಮರವನ್ನು ಕತ್ತರಿಸಿದ ರಾಮನ ಈ ಸಾಮರ್ಥ್ಯವನ್ನು ನೋಡಿ ಸುಗ್ರೀವನು ಬಹುವಾಗಿ ಸಂತೋಷಪಟ್ಟನು. ಮತ್ತು ಅವನಿಗೆ ನಂಬಿಕೆಯೂ ಹುಟ್ಟಿತು.

೪೦. ಸುಗ್ರೀವನು ಸಂತೋಷಗೊಂಡು ಮತ್ತೆ ರಾಮನನ್ನು ಕುರಿತು ಎಲೈ ರಾಮನೆ ! ಇಂದ್ರನು ವಾಲಿಗೆ ಒಂದು ಮಾಲಿಕೆಯನ್ನು ಕೊಟ್ಟಿರುವನು. ಅದನ್ನು ನೋಡಿದ ಕೂಡಲೇ ಯುದ್ಧದಲ್ಲಿ ಶತ್ರುಗಳ ಬಲವೆಲ್ಲವೂ ನಾಶವಾಗುತ್ತದೆ. ಎಂದನು.

೪೧-೪೨. ಪೂರ್ವದಲ್ಲಿ ಕಶ್ಯಪನು ದುಷ್ಕರವಾದ ತಪಸ್ಸನ್ನು ಮಾಡಿ ಈ ಮಾಲೆಯನ್ನು ಶಿವನಿಂದ ಪಡೆದು ಇಂದ್ರನಿಗೆ ಕೊಟ್ಟನು. ಆ ಇಂದ್ರನು ವಾಲಿಯು ತನ್ನ ಮಗನಾದುದರಿಂದ ಅವನಲ್ಲಿರುವ ವಿಶ್ವಾಸದಿಂದ ಆ ಮಾಲಿಕೆಯನ್ನು ಕೊಟ್ಟನು. ಆ ಮಾಲಿಕೆಯನ್ನು ವಾಲಿಯು ಯಾವಾಗಲೂ ಕತ್ತಿನಲ್ಲಿ ಹಾಕಿಕೊಂಡೇ ಇರುವನು.

ತಸ್ಯಾಸ್ತ್ವಂ ದರ್ಶನಾದ್ರಾಮ ಗತಸತ್ತ್ವೋ ಭವಿಷ್ಯಸಿ ।
ತತ್ರೋಽಪಾಯಂ ಚಿಂತಯಸ್ವ ಯೇನ ತೇಽದ್ಯ ಜಯೋ ಭವೇತ್ ॥ ೪೩ ॥

ತತ್ತಸ್ಯ ವಚನಂ ಶ್ರುತ್ವಾ ರಾಮಸ್ಸರ್ಪಂ ತಮಬ್ರವೀತ್ ।
ಯಶ್ಶಾಪಾನ್ಮೋಽಚಿತಃ ಪೂರ್ವಂ ಸಪ್ತತಾಲಾನ್ವಿಭಿದ್ಯ ಚ ॥ ೪೪ ॥

ಗಚ್ಛ ತ್ವಂ ಮಮ ವಾಕ್ಯೇನ ಕಿಷ್ಕಿಂಧಾಯಾಂ ಚ ವಾಲಿನಂ ।
ನಿಶಿ ವಿನಿದ್ರಿತಂ ದೃಷ್ಟ್ವಾ ಹರ ತನ್ಮಾಲಿಕಾಂ ಶುಭಾಂ ॥ ೪೫ ॥

ತಥೇತಿ ರಾಮವಾಕ್ಯೇನ ಕಿಷ್ಕಿಂಧಾಮೇತ್ಯ ಪನ್ನಗಃ ।
ಮಂಚಕಸ್ಥಾಂ ಜಹಾರಾಥ ತಾಂ ಮಾಲಾಂ ವಾಸವಂ ದದೌ ॥ ೪೬ ॥

---

೪೩. ಎಲೈ ರಾಮನೆ! ಅದನ್ನು ನೀನು ನೋಡಿದೊಡನೆಯೇ ನಿನ್ನ ಬಲವೆಲ್ಲವೂ ಹೋಗುತ್ತದೆ. ನಿನಗೆ ಜಯವಾಗುವಂತೆ ಈ ವಿಷಯದಲ್ಲಿ ಒಂದು ಉಪಾಯವನ್ನು ಯೋಚಿಸು. ಎಂದನು.

೪೪. ಸುಗ್ರೀವನ ಆ ಮಾತನ್ನು ಕೇಳಿ ರಾಮನು ತಾನು ಆ ತಾಳೆಯ ಮರಗಳನ್ನು ಕಡಿದುದರಿಂದ ಶಾಪದಿಂದ ವಿಮೋಚಿತವಾದ ಆ ಸರ್ಪವನ್ನು ಕುರಿತು ಎಲೈ ಸರ್ಪವೆ! ನಾನು ಆ ಸಪ್ತತಾಳಗಳನ್ನು ಕಡಿದು ನಿನ್ನನ್ನು ಶಾಪದಿಂದ ಬಿಡಿಸಿದ್ದೇನೆ. ಆದುದರಿಂದ ನೀನು ನನಗೆ ಉಪಕಾರಮಾಡು.

೪೫. ಅದೇನೆಂದರೆ ನೀನು ಕಿಷ್ಕಿಂಧೆಗೆ ಹೋಗು. ಅಲ್ಲಿ ವಾಲಿಯು ನಿದ್ದೆಮಾಡುತ್ತಿರುವಾಗ ಅವನ ಆ ಮಾಲೆಯನ್ನು ಕದ್ದು ತೆಗೆದುಕೊಂಡು ಬಾ. ಎಂದನು.

೪೬. ರಾಮನ ಈ ಮಾತನ್ನು ಕೇಳಿ ಆ ಸರ್ಪವು ಹಾಗೆಯೇ ಆಗಲೆಂದು ಕಿಷ್ಕಿಂಧೆಗೆ ಹೋಗಿ ವಾಲಿಯು ನಿದ್ದೆಮಾಡುತ್ತಿರುವಾಗ ಮಂಚದಮೇಲಿಟ್ಟಿದ್ದ ಆ ಮಾಲೆಯನ್ನು ತೆಗೆದುಕೊಂಡು ಹೋಗಿ ಇಂದ್ರನಿಗೆ ಕೊಟ್ಟಿತು.

ತತೋ ರಾಮಾಜ್ಞಯಾ ಗತ್ವಾ ಸಮಾಹೂಯಾಥ ವಾಲಿನಂ ।
ಯುದ್ಧಂ ಚಕಾರ ಸುಗ್ರೀವಶ್ಚೈರಾಮೋಽಪಿ ದದರ್ಶ ತಂ ॥ ೪೭ ॥

ಸಮಾನರೂಪೌ ತೌ ದೃಷ್ಟ್ವಾ ಮಿತ್ರಘಾತವಿಶಂಕಯಾ ।
ನ ಮುಮೋಚ ತದಾ ಬಾಣಂ ರಾಮಸ್ತ್ರೋಽಪಿ ನ್ಯವರ್ತತ ॥ ೪೮ ॥

ಸುಗ್ರೀವೋ ರಾಘವಂ ಪ್ರಾಹ ಮಾಂ ಘಾತಯಸಿ ವಾಲಿನಾ ।
ಯದಿ ಮದ್ಧನನೇ ವಾಂಛಾ ತ್ವಮೇವ ಜಹಿ ಮಾಂ ವಿಭೋ ॥ ೪೯ ॥

ತತ್ತಸ್ಯ ವಚನಂ ಶ್ರುತ್ವಾ ಸುಗ್ರೀವಸ್ಯ ರಘೂತ್ತಮಃ ।
ಬಂಧಯಾಮಾಸ ಸುಗ್ರೀವಂ ಪುಷ್ಪವಲ್ಲೀಂ ತು ಬಂಧುನಾ ॥ ೫೦ ॥

---

೪೭. ಅನಂತರ ಸುಗ್ರೀವನು ರಾಮನ ಅಪ್ಪಣೆಯಂತೆ ಕಿಷ್ಕಿಂಧೆಗೆ ಹೋಗಿ ವಾಲಿಯನ್ನು ಯುದ್ಧಕ್ಕೆ ಕರೆದು ಅವನೊಡನೆ ಯುದ್ಧಮಾಡಿದನು. ರಾಮನು ಆ ಯುದ್ಧವನ್ನು ನೋಡುತ್ತಿದ್ದನು.

೪೮. ಅವರಿಬ್ಬರೂ ಒಂದೇ ರೀತಿಯಾದ ಆಕಾರವೂ ಬಣ್ಣವೂ ಉಳ್ಳವರಾಗಿದ್ದುದರಿಂದ ಅವರಿಬ್ಬರಲ್ಲಿ ಭೇದವು ರಾಮನಿಗೆ ತಿಳಿಯಲಿಲ್ಲ. ಆದುದರಿಂದ ರಾಮನು ವಾಲಿಯಮೇಲೆ ಬಾಣವನ್ನು ಬಿಡಲಿಲ್ಲ. ಸುಗ್ರೀವನು ಸೋತು ಹಿಂದಿರುಗಿದನು.

೪೯. ಆಗ ಸುಗ್ರೀವನು ಎಲೈ ರಾಮನೆ! ಇದೇನು? ನನ್ನನ್ನು ವಾಲಿಯ ಕೈಯ್ಯಲ್ಲಿ ಕೊಲ್ಲಿಸಬೇಕೆಂದು ಮಾಡಿರುವೆಯಾ? ಎಲೈ ಪ್ರಭುವೆ! ನನ್ನನ್ನು ಕೊಲ್ಲಬೇಕೆಂದು ನಿನಗೆ ಇಚ್ಛೆಯಿದ್ದರೆ ನೀನೇ ನನ್ನನ್ನು ಕೊಂದುಹಾಕು ಎಂದನು.

೫೦. ರಾಮನು ಸುಗ್ರೀವನು ಹೇಳಿದ ಈ ಮಾತನ್ನು ಕೇಳಿದನು. ಆಗ ಲಕ್ಷ್ಮಣನಿಗೆ ಹೇಳಿ ಸುಗ್ರೀವನಿಗೆ ಕೆಲವು ಹಂಬುಗಳನ್ನು ಗುರ್ತಿಗೋಸ್ಕರ ಕತ್ತಿಗೆ ಕಟ್ಟಿಸಿದನು.

ಪುನಸ್ತಂ ಪ್ರೇಷಯಾಮಾಸ ಸೋಽಪಿ ವಾಲಿನಮಾಹ್ವಯತ್ ।
ತತಶ್ಶ್ರುತ್ವಾ ಯಯೌ ವಾಲೀ ತಂ ತಾರಾ ಪ್ರಾರ್ಥಯತ್ತದಾ ॥ ೫೧ ॥

ಶ್ರುತಮಂಗದವಾಕ್ಯೇನ ಮಯಾ ರಾಮಸ್ಸಮಾಗತಃ ।
ಚಕಾರ ಮೈತ್ರಂ ಕಿಂ ತೇನ ಮಾಕುರುಷ್ವಾದ್ಯ ಸಂಗರಂ ॥ ೫೨ ॥

ಗಚ್ಛ ನತ್ವಾ ರಮಾನಾಥಂ ಬಂಧುಂ ಮಾನಯ ಸಾದರಂ ।
ಯೌವರಾಜ್ಯಪದಂ ದೇಹಿ ತಸ್ಮೈ ಮೇ ವಚನಂ ಶೃಣು ॥ ೫೩ ॥

ತತ್ತಾರಾವಚನಂ ಶ್ರುತ್ವಾ ವಾಲೀ ತಾಂ ವಾಕ್ಯಮಬ್ರವೀತ್ ।
ಜಾನಾಮ್ಯಹಂ ರಾಘವಂ ತಂ ನರರೂಪಧರಂ ಹರಿಂ ॥ ೫೪ ॥

ತಸ್ಯ ಹಸ್ತಾತ್ಸ್ಮೃತಿರ್ಮೇಽಸ್ತಿ ಗಚ್ಛಾಮಿ ಪರಮಂ ಪದಂ ।
ಸುಖಂ ತ್ವಂ ತಿಷ್ಠ ತಾರೇ ತ್ವ ಸುಗ್ರೀವಂ ಭಜ ಸರ್ವದಾ ॥ ೫೫ ॥

---

೫೧. ಸುಗ್ರೀವನನ್ನು ಮತ್ತೆ ಯುದ್ಧಕ್ಕೆ ಕಳುಹಿಸಲು ಅವನು ಆ ವಾಲಿಯನ್ನು ಯುದ್ಧಕ್ಕೆ ಕರೆದನು. ಅದನ್ನು ಕೇಳಿ ವಾಲಿಯು ಯುದ್ಧಕ್ಕೆ ಬರಲು ತಾರೆಯು ಅವನನ್ನು ಕುರಿತು ಇಂತೆಂದು ಪ್ರಾರ್ಥಿಸಿದಳು.

೫೨. ಎಲೈ ವಾಲಿಯೆ! ಶ್ರೀರಾಮನು ಕಾಡಿಗೆ ಬಂದಿರುವನೆಂದು ಅಂಗದನಿಂದ ನಾನು ಕೇಳಿರುವೆನು. ಸುಗ್ರೀವನು ಅವನೊಡನೆ ಸ್ನೇಹವನ್ನು ಬೆಳೆಸಿರುವನು. ಈಗ ಆ ಸುಗ್ರೀವನೊಡನೆ ಯುದ್ಧವನ್ನು ಮಾಡಬೇಡ.

೫೩. ನೀನು ಹೋಗಿ ಆ ರಮಾನಾಥನಾದ ರಾಮನಿಗೆ ನಮಸ್ಕಾರವನ್ನು ಮಾಡಿ ಸುಗ್ರೀವನನ್ನು ಕರೆದುಕೊಂಡು ಬಾ. ಅವನಿಗೆ ಯುವರಾಜ ಪದವಿಯನ್ನು ಕೊಡು. ನನ್ನ ಮಾತನ್ನು ಕೇಳಿ ಅದರಂತೆ ಮಾಡು.

೫೪-೫೫. ತಾರೆಯ ಈ ಮಾತನ್ನು ಕೇಳಿ ವಾಲಿಯು ಎಲೈ ತಾರೆಯೆ! ನಾನು ಆ ರಮಾನಾಥನನ್ನು ಬಲ್ಲೆನು. ಆ ಹರಿಯೇ ಈ ರೀತಿಯಾಗಿ ನರನ ರೂಪವನ್ನು ಧರಿಸಿ ಬಂದಿರುವನು. ಅವನ ಕೈಯ್ಯಲ್ಲಿ ನನಗೆ ಮರಣವಿದೆ. ಆದ್ದರಿಂದ ನಾನು ಪರಮಪದವಾದ ವೈಕುಂಠವನ್ನು ಹೊಂದುತ್ತೇನೆ. ನೀನು ಸುಖವಾಗಿರು. ಯಾವಾಗಲೂ ಸುಗ್ರೀವನನ್ನು ಸೇವಿಸಿಕೊಂಡಿರು.

ಯದಾ ತ್ವಯಾ ಸ ಸುಗ್ರೀವಃ ಕರಿಷ್ಯತಿ ರತಿಂ ಪ್ರಿಯೇ ।
ತದಾ ತತ್ಪತ್ನಿಭೋಗಸ್ಯಾನೃಣ್ಯಂ ಗಚ್ಛಾಮಿ ಭಾಮಿನಿ ॥ ೫೬ ॥

ಅತ ಏವ ಮಾಲಿಕಾ ಮೇ ಗುಪ್ತಾ ಭೂತ್ಪಶ್ಯ ಮತ್ಪ್ರಿಯೇ ।
ಅದ್ಯಾಹಂ ರಾಮಬಾಣೇನ ಪತಿಷ್ಯಾಮಿ ರಣಾಂಗಣೇ ॥ ೫೭ ॥

ಅದ್ಯ ಧನ್ಯೋಽಸ್ತ್ಯಹಂ ತಾರೇ ಧನ್ಯೌ ತೌ ಪಿತರೌ ಮಮ ।
ಯೋಽಯಂ ಶ್ರೀರಾಮಹಸ್ತೇನ ಮರಿಷ್ಯಾಮಿ ರಣಾಂಗಣೇ ॥ ೫೮ ॥

ಏವಮಾಶ್ವಾಸ್ಯ ತಾಂ ತಾರಾಂ ಯಯೌ ವಾಲೀ ತ್ವರಾನ್ವಿತಃ ।
ದೃಷ್ಟ್ವಾ ವಾಲೀ ಮಹೋತ್ಪಾತಾನ್ ಸಂತೋಷಂ ಪರಮಂ ಯಯೌ॥೫೯॥

---

೫೬. ಎಲೈ ಪ್ರಿಯಳೆ! ನೀನು ಸುಗ್ರೀವನಲ್ಲಿ ರತಿಯನ್ನು ಹೊಂದಿ ಭೋಗಿಸಿಕೊಂಡಿದ್ದರೆ ಆಗ ಆ ಸುಗ್ರೀವನ ಹೆಂಡತಿಯನ್ನು ನಾನು ಭೋಗಿಸಿದುದಕ್ಕೆ ಆನೃಣ್ಯವನ್ನು ಹೊಂದಿದಂತೆ ಆಗುತ್ತದೆ.

೫೭. ಆದುದರಿಂದಲೇ ಆ ನನ್ನ ಶತ್ರುವಿಧ್ವಂಸಿಯಾದ ಮಾಲಿಕೆಯು ಮಾಯವಾಯಿತು. ಈದಿನ ನಾನು ಯುದ್ಧರಂಗದಲ್ಲಿ ರಾಮಬಾಣದಿಂದ ಮರಣವನ್ನು ಹೊಂದುತ್ತೇನೆ.

೫೮. ಎಲೈ ತಾರೆಯೆ! ಇಂದು ನಾನು ಧನ್ಯನಾದೆನು. ಆ ನನ್ನ ತಂದೆತಾಯಿಗಳು ಧನ್ಯರಾದರು. ನಾನು ರಣಾಂಗಣದಲ್ಲಿ ಶ್ರೀರಾಮನ ಕೈಯ್ಯಿಂದ ಸಾಯುವುದರಿಂದ ಈ ರೀತಿಯಾದ ಶ್ರೇಯಸ್ಸು ನನಗೆ ಉಂಟಾಗುತ್ತದೆ.

೫೯. ವಾಲಿಯು ಆ ತಾರೆಯನ್ನು ಈ ರೀತಿಯಾಗಿ ಸಮಾಧಾನಮಾಡಿ ಜಾಗ್ರತೆಯಾಗಿ ಯುದ್ಧಕ್ಕೆ ಹೊರಟನು. ವಾಲಿಯು ಹೋಗುತ್ತಿರುವಾಗ ಅಪಶಕುನಗಳನ್ನು ನೋಡಿ ಸಂತೋಷಗೊಂಡನು.

ಚಕಾರ ಬಂಧುನಾ ಯುದ್ಧಂ ತದಾ ಬಾಣೇನ ರಾಘವಃ ।
ವೃಕ್ಷಖಂಡೇ ತಿರೋಭೂತ್ವಾ ಪಾತಯಾಮಾಸ ತಂ ಭುವಿ ॥ ೬೦ ॥

ತತಸ್ತಾರಾ ಸಮಾಗತ್ಯ ಶುಶೋಚ ವಾಲಿನಂ ಪ್ರತಿ ।
ವಾಲೀ ದೃಷ್ಟ್ವಾ ರಮಾನಾಥಂ ತದಾ ಪ್ರಾಹ ಸಗದ್ಗದಃ ॥ ೬೧ ॥

ವೃಕ್ಷಖಂಡೇ ತಿರೋಭೂತ್ವಾ ತ್ವಯಾಹಂ ತಾಡಿತೋ ಹೃದಿ ।
ತವಾದ್ಯ ದುರ್ಯಶೋ ಜಾತಂ ಮಮ ಜಾತೋ ಮಹೋದಯಃ ॥ ೬೨ ॥

ಕಿಂ ಮಯಾಪಕೃತಂ ತೇ ಹಿ ತ್ವಯಾ ಯಸ್ಮಾನ್ನಿಪಾತಿತಃ ।
ರಾಮಃ ಪ್ರಾಹ ವಾಲಿನಂ ತ್ವಂ ರುಮಾಯಾಂ ಲಂಪಟಸ್ಸದಾ ॥ ೬೩ ॥

---

೬೦. ಅಲ್ಲಿಗೆ ಹೋಗಿ ಸುಗ್ರೀವನೊಡನೆ ಯುದ್ಧವನ್ನು ಮಾಡಿದನು. ಆಗ ರಾಮನು ಒಂದು ಮರದ ಗುಂಪಿನ ಮರೆಯಲ್ಲಿದ್ದುಕೊಂಡು ವಾಲಿಯಮೇಲೆ ಬಾಣವನ್ನು ಬಿಟ್ಟು ಅವನನ್ನು ಕೆಡೆವಿದನು.

೬೧. ಆಗ ತಾರೆಯು ಬಂದು ವಾಲಿಯನ್ನು ಕುರಿತು ಬಹುವಾಗಿ ದುಃಖಿಸಿದಳು. ವಾಲಿಯು ಆ ರಮಾನಾಥನನ್ನು ನೋಡಿ ಗದ್ಗದಧ್ವನಿಯಿಂದ ಇಂತೆಂದನು.

೬೨. ಎಲೈ ರಾಮನೆ! ನೀನು ಮರಗಳ ಮರೆಯಲ್ಲಿ ನಿಂತುಕೊಂಡು ನನ್ನ ಎದೆಗೆ ಹೊಡೆದೆ. ನನಗೆ ಈಗ ಉತ್ತಮಲೋಕವು ಬಂದಿತು. ನಿನಗೆ ಮಾತ್ರ ಅಪಯಶಸ್ಸು ಬಂದಿತು.

೬೩. ನೀನು ನನ್ನನ್ನು ಹೊಡೆದೆಯಷ್ಟೆ! ನಾನು ನಿನಗೆ ಮಾಡಿದ ಅಪಕಾರವಾದರೂ ಏನು? ಎಂದು ವಾಲಿಯು ಕೇಳಲು ರಾಮನು ಎಲೈ ವಾಲಿಯೆ! ನೀನು ರಮೆಯಲ್ಲಿ ಯಾವಾಗಲೂ ಭೋಗಿಸುತ್ತ ಲಂಪಟನಾಗಿದ್ದೆ.

ಬಂಧುಭಾರ್ಯಾಂ ಗೃಹೇ ಸ್ಥಾಪ್ಯ ಬಂಧುಂ ಹಂತುಂ ತ್ವಮಿಚ್ಛಸಿ ।
ದುರ್ವೃತ್ತಂ ತ್ವಾಂ ಸಮಾಲೋಕ್ಯ ಮಯಾ ತಸ್ಮಾನ್ನಿಪಾತಿತಃ ॥ ೬೪ ॥

ಯಥಾ ತ್ವಯಾ ರುಮಾ ಭುಕ್ತಾ ತಥಾ ತಾರಾಂ ತವ ಪ್ರಿಯಾಂ ।
ಭೋಕ್ಷ್ಯತ್ಯಯಂ ಹಿ ಸುಗ್ರೀವೋ ವಚನಾನ್ಮೇ ಕಪೀಶ್ವರ ॥ ೬೫ ॥

ಯದ್ಯಪಿ ತ್ವಂ ದುರಾಚಾರೋ ನಿಹತೋಽಸಿ ರಣೇ ಮಯಾ ।
ತಥಾಪಿ ಭಿಲ್ಲರೂಪೇಣ ದ್ವಾಪರಾಂತೇ ಽಂಘ್ರಿಣಂ ಮಮ ॥ ೬೬ ॥

ಪ್ರಭಾಸೇ ತ್ವಂ ಶರಂ ಭಿತ್ವಾ ಪೂರ್ವವೈರೇಣ ವಾನರ ।
ತತೋ ಮದ್ಧಸ್ತಮರಣಸ್ಯಾಸ್ಯ ಕಾರಣಗೌರವಾತ್ ॥ ೬೭ ॥

---

೬೪. ತಮ್ಮನ ಹೆಂಡತಿಯನ್ನು ಮನೆಯಲ್ಲಿ ಭೋಗಕ್ಕೆ ಇಟ್ಟುಕೊಂಡು ಆ ತಮ್ಮನನ್ನು ಕೊಲ್ಲಲು ಅಪೇಕ್ಷಿಸುತ್ತಿದ್ದೆ. ನಿನ್ನ ದುಷ್ಟತನವನ್ನು ನೋಡಿ ನಾನು ನಿನ್ನನ್ನು ಕೊಂದೆನು.

೬೫. ನೀನು ಯಾವ ರೀತಿಯಾಗಿ ಸುಗ್ರೀವನ ಹೆಂಡತಿಯನ್ನು ಮನೆಯಲ್ಲಿಟ್ಟುಕೊಂಡು ರಮಿಸುತ್ತಿದ್ದೆಯೋ ಹಾಗೆಯೇ ನಿನ್ನ ಹೆಂಡತಿಯಾದ ತಾರೆಯನ್ನೂ ಈ ಸುಗ್ರೀವನು ಇನ್ನುಮೇಲೆ ಇಟ್ಟುಕೊಂಡು ಅವಳನ್ನು ಅನುಭವಿಸಲಿ. ಇದು ನನ್ನ ಅಪ್ಪಣೆಯು.

೬೬-೬೭. ನೀನೇನೋ ದುರಾಚಾರಿಯು. ಆದುದರಿಂದಲೇ ನಿನ್ನನ್ನು ನಾನು ಯುದ್ಧದಲ್ಲಿ ಕೊಂದಿದ್ದೇನೆ. ಇದಕ್ಕೆ ಪ್ರತಿಯಾಗಿ ನೀನು ದ್ವಾಪರಯುಗದಲ್ಲಿ ಬೇಡನ ರೂಪವನ್ನು ಧರಿಸಿ ಪ್ರಭಾಸಕ್ಷೇತ್ರದಲ್ಲಿದ್ದುಕೊಂಡಿದ್ದು ಈಗ ಉಂಟಾಗಿರುವ ವೈರದಿಂದ ನನ್ನ ಹೆಜ್ಜೆಯನ್ನು ಬಾಣದಿಂದ ಹೊಡೆದು ನನ್ನನ್ನು ಕೊಲ್ಲು. ಈಗ ನನ್ನ ಕೈಯ್ಯಿಂದ ಮರಣವನ್ನು ಹೊಂದಿದುದಕ್ಕೆ ನನ್ನನ್ನು ಕೊಂದಮೇಲೆ ನೀನು ಮುಕ್ತಿಯನ್ನು ಹೊಂದು.

ಮುಕ್ತಿಂ ಗಚ್ಛಸಿ ವಾಲಿನ್ ತ್ವಂ ಶುಭಾಂ ಜನ್ಮಾಂತರೇಣ ಹಿ ।
ತತಃ ಪ್ರಾಹ ಪುನರ್ವಾಲೀ ಮೇ ಭವಿಷ್ಯತ್ಯುದೀರಿತಂ ॥ ೬೮ ॥

ಸೀತಾವೃತ್ತಂ ತ್ವಯಾ ಪೂರ್ವಂ ರಾವಣೇನ ಕ್ಷಣೇನ ಹಿ ।
ದತ್ತಾ ಭವಿಷ್ಯದಾನೀಯ ಸೀತಾ ತವ ಮಯಾ ತದಾ ॥ ೬೯ ॥

ಅಧುನಾ ಪ್ರಾರ್ಥಯಾಮಿ ತ್ವಾಮಂಗದಂ ಪರಿಪಾಲಯ ।
ಇತ್ಯುಕ್ತ್ವಾ ಸ ತದಾ ವಾಲೀ ಜಹೌ ಪ್ರಾಣಾನ್ ರಣಾಂಗಣೇ ॥ ೭೦ ॥

ಅಂಗದೇನ ತದಾ ರಾಮಃ ಕಾರಯಾಮಾಸ ತತ್ಕ್ರಿಯಾಂ ।
ಅಥ ರಾಮಂ ಸ ಸುಗ್ರೀವೋ ರಾಜ್ಯಾರ್ಥಂ ಪ್ರಾರ್ಥಯತ್ತದಾ ॥ ೭೧ ॥

೬೮-೬೯. ಆದುದರಿಂದ ಆಗ ಬೇಡನ ಜನ್ಮದಲ್ಲಿ ನಿನಗೆ ಮುಕ್ತಿಯು ಸಿಕ್ಕುತ್ತದೆ. ಎಂದೆನಲು ವಾಲಿಯು ಎಲೈ ರಾಮನೆ! ನೀನು ಹೇಳಿದಂತೆಯೇ ಆಗಲಿ. ಆದರೆ ನೀನು ನಿನ್ನ ಅಭಿಪ್ರಾಯವನ್ನು ಮೊದಲೇ ನನಗೆ ತಿಳಿಸಿ ಸೀತೆಯ ವೃತ್ತಾಂತವನ್ನು ತಿಳಿಸಿದ್ದರೆ ಆ ರಾವಣನಿಂದ ಕ್ಷಣಕಾಲದಲ್ಲಿ ಸೀತೆಯನ್ನು ತಂದುಕೊಡುತ್ತಲಿದ್ದೆನು.

೭೦. ಈಗ ನಿನ್ನನ್ನು ಕೇಳಿಕೊಳ್ಳುವುದು ಒಂದಿದೆ. ಈ ಅಂಗದನನ್ನು ಕಾಪಾಡು. ಅದೇ ನನ್ನ ಪಾರ್ಥನೆಯು. ಎಂದು ಹೇಳಿ ಆ ವಾಲಿಯು ರಣರಂಗದಲ್ಲಿ ಪ್ರಾಣವನ್ನು ಬಿಟ್ಟನು.

೭೧. ರಾಮನು ಅಂಗದನಿಂದ ವಾಲಿಗೆ ಉತ್ತರಕ್ರಿಯೆಗಳನ್ನು ಮಾಡಿಸಿದನು. ಅನಂತರ ಸುಗ್ರೀವನು ರಾಮನನ್ನು ರಾಜ್ಯದಲ್ಲಿ ಅಭಿಷೇಕ ಮಾಡಿಕೊಳ್ಳುವಂತೆ ಕೇಳಿಕೊಂಡನು.

ರಾಮುಸ್ತುಮೇವ ರಾಜಾನಂ ಚಕಾರ ಲಕ್ಷ್ಮಣೇನ ಸಃ |
ಅಥ ವಾರ್ಷಿಕಮಾಸಾನ್ಸ ವಸ್ತುಂ ರಾಮೋ ವಿಚಾರಯತ್ ‖ ೭೨ ‖

ಪ್ರವರ್ಷಣಗಿರೇಃ ಪ್ರೋಚ್ಚ ಶಿಖರೇ ಸ್ಫಟಿಕೋದ್ಭವಾಂ |
ರಮ್ಯಾಂ ದೃಷ್ಟ್ವಾ ಗುಹಾಂ ರಾಮಃ ಪತ್ರಪುಷ್ಪಸಮನ್ವಿತಾಂ ‖ ೭೩ ‖

ನಿನಾಯ ವಾರ್ಷಿಕಾನ್ಮಾಸಾ ಚತುರಶ್ಚೀರಘೂದ್ವಹಃ |
ಏಕದಾ ಲಕ್ಷ್ಮಣಸ್ಸ್ನಾತ್ವಾ ಯಾವದ್ರಾಮಂ ಸಮಾಗತಃ ‖ ೭೪ ‖

ಸಾತ್ವಿಕ್ಯಾ ಸೀತಯಾ ಯುಕ್ತಸ್ತಾವದ್ರಾಮೋ ನಿರೀಕ್ಷಿತಃ |
ಸೌಮಿತ್ರಿಣಾ ವಂದಿತಾ ಸಾ ಪತ್ಯುರ್ವಾಮೇ ಲಯಂ ಯಯೌ ‖ ೭೫ ‖

---

೭೨. ಆದರೆ ರಾಮನು ತಾನು ಒಪ್ಪದೆ ಲಕ್ಷ್ಮಣನಿಂದ ಸುಗ್ರೀವನಿಗೆ ಕಿಷ್ಕಿಂಧೆಯಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿದನು. ಅನಂತರ ಮಳೆಗಾಲವು ಬಂದಿತು. ಮಳೆಗಾಲವನ್ನು ಕಳೆಯಲು ರಾಮನು ಏನು ಮಾಡಬೇಕೆಂದು ಯೋಚಿಸಿದನು.

೭೩. ಅಲ್ಲಿದ್ದ ಪ್ರವರ್ಷಣ ಗಿರಿಯಮೇಲೆ ಹೋಗಿ ನೋಡಲು ಅಲ್ಲಿ ಸ್ಫಟಿಕ ಶಿಲೆಯಿಂದ ಕೂಡಿದ ಒಂದು ಮನೋಹರವಾದ ಗುಹೆಯು ಇದ್ದಿತು. ಅಲ್ಲಿ ಪತ್ರಗಳೂ ಪುಷ್ಪಗಳೂ ಹೇರಳವಾಗಿದ್ದುವು.

೭೪. ಅಲ್ಲಿ ಆ ಶ್ರೀರಾಮನು ನಾಲ್ಕುತಿಂಗಳ ಕಾಲದ ಅವಧಿಯುಳ್ಳ ಮಳೆಗಾಲವನ್ನು ಕಳೆದನು. ಒಂದುಸಾರಿ ಲಕ್ಷ್ಮಣನು ಸ್ನಾನವನ್ನು ಮಾಡಿಕೊಂಡು ರಾಮನ ಬಳಿಗೆ ಬಂದನು

೭೫. ಆ ಲಕ್ಷ್ಮಣನ ಕಣ್ಣಿಗೆ ರಾಮನು ಸಾತ್ವಿಕಭಾವದ ಸೀತೆಯೊಡನೆ ಕೂಡಿಕೊಂಡಿದ್ದಂತೆ ಕಂಡುಬಂದಿತು. ಆ ಸೌಮಿತ್ರಿಯು ಒಡನೆಯೇ ಆಕೆಗೆ ವಂದಿಸಲು ಆಕೆಯು ಗಂಡನ ಎಡಭಾಗದಲ್ಲಿ ಸೇರಿಕೊಂಡು ಕಾಣದಂತಾದಳು.

ಏವಮಾಸೀತ್ತದಾ ಸೀತಾ ವಿಯೋಗೋ ರಾಘವಾಯ ಹಿ ।
ಸುಗ್ರೀವೋಽಥ ಪುರೀಮಧ್ಯೇ ಚಕಾರ ರಾಜ್ಯಮುತ್ತಮಂ ॥ ೭೬ ॥

ಏಕದಾ ಹನುಮದ್ವಾಕ್ಯಾದ್ವಾನರಾನ್ ಸ ಸಮಾಹ್ವಯತ್ ।
ಪ್ರವರ್ಷಣಗಿರಾವಾಸ್ತಾಂ ತೀರ್ಥೇ ದ್ವೇ ರಾಮಲಕ್ಷ್ಮಣೇ ॥ ೭೭ ॥

ಏತಸ್ಮಿನ್ನಂತರೇ ರಾಮೋ ದೃಷ್ಟ್ವಾ ಪ್ರಾಪ್ತಾಂ ಶರದೃತುಂ ।
ಕ್ರೋಧೇನ ಪ್ರೇಷಯಾಮಾಸ ಸುಗ್ರೀವಂ ಲಕ್ಷ್ಮಣಾಯ ಸಃ ॥ ೭೮ ॥

ಸೋಽಪಿ ಗತ್ವಾಥ ಕಿಷ್ಕಿಂಧಾಂ ಭೀಷಯಾಮಾಸ ವಾನರಾನ್ ।
ಆಗತಂ ಲಕ್ಷ್ಮಣಂ ಶ್ರುತ್ವಾ ಸುಗ್ರೀವೋ ಭಯವಿಹ್ವಲಃ ॥ ೭೯ ॥

---

೭೬. ಆ ವನವಾಸದಲ್ಲಿ ರಾಮನಿಗೆ ಸೀತೆಯ ವಿಯೋಗವೆಂಬುದು ಇಲ್ಲದೆ ಈ ರೀತಿಯಾಗಿದ್ದಿತು. ಇತ್ತ ಸುಗ್ರೀವನು ಕಿಷ್ಕಿಂಧೆಯಲ್ಲಿ ರಾಜ್ಯಭಾರವನ್ನು ಚೆನ್ನಾಗಿ ಮಾಡುತ್ತಿದ್ದನು.

೭೭. ಹೀಗಿರಲು ಒಂದುಸಾರಿ ಹನುಮಂತನಿಂದ ಎಚ್ಚರಿಸಲ್ಪಟವನಾಗಿ ಅವನ ಮಾತಿನಂತೆ ಕಪಿಗಳನ್ನು ಕರೆಸಿದನು. ಆಗ ಪ್ರವರ್ಷಣಗಿರಿಯಲ್ಲಿ ಈ ಉತ್ತಮರಾದ ರಾಮಲಕ್ಷ್ಮಣರಿಬ್ಬರೂ ಇದ್ದರು.

೭೮. ಈ ಸಮಯದಲ್ಲಿ ರಾಮನು ಶರದೃತುವು ಬಂದರೂ ಸುಗ್ರೀವನು ಸಿದ್ಧಪಡಿಸದಿರುವುದನ್ನು ನೋಡಿ ಕೋಪಗೊಂಡು ಲಕ್ಷ್ಮಣನನ್ನು ಸುಗ್ರೀವನ ಬಳಿಗೆ ಕಳುಹಿಸಿದನು.

೭೯. ಆ ಲಕ್ಷ್ಮಣನು ಕಿಷ್ಕಿಂಧೆಯ ಬಳಿಗೆ ಹೋಗಿ ಕಪಿಗಳನ್ನು ಹೆದರಿಸಿದನು. ಲಕ್ಷ್ಮಣನು ಕೋಪಗೊಂಡು ಬಂದಿರುವುದನ್ನು ಕೇಳಿ ಸುಗ್ರೀವನಿಗೆ ಬಹು ಭಯವಾಯಿತು.

ಮಾರುತಿಂ ಪ್ರೇಷಯಾಮಾಸ ಸಾಂತ್ವನಾರ್ಥಂ ಹಿ ಲಕ್ಷ್ಮಣಂ ।
ಸ ಗತ್ವಾ ತಂ ಸಾಂತಯಿತ್ವಾ ಕಿಷ್ಕಿಂಧಾಮಾನಯತ್ತದಾ ॥ ೮೦ ॥

ಏತಸ್ಮಿನ್ನಂತರೇ ತಾರಾಂ ಪ್ರೇಷಯಾಮಾಸ ವಾನರಃ ।
ಸಾಪಿ ಗತ್ವಾ ಮಧ್ಯಕಕ್ಷಾಂ ಸಂಸ್ಥಿತಾ ತಂ ದದರ್ಶ ಸಾ ॥ ೮೧ ॥

ಲಕ್ಷ್ಮಣಂ ಸಾಂತ್ವಯಾಮಾಸ ವಚೋಭಿರ್ಮಧುರೈರ್ನಿಜೈಃ ।
ಸಮಾಹೂತಾನಿ ಸೈನ್ಯಾನಿ ರಾಮಾರ್ಥಂ ಪ್ಲವಗೇನ ಹಿ ॥ ೮೨ ॥

ಸುಗ್ರೀವೇಣ ತ್ವಯಾ ಕೋಪೋ ಮಾ ಕಾರ್ಯೋಽದ್ಯ ಹಿ ದೇವರ ।
ತತೋ ಲಕ್ಷ್ಮಣಹಸ್ತಂ ಸಾ ಧೃತ್ವಾ ರಾಜಗೃಹಂ ಯಯೌ ॥ ೮೩ ॥

---

೮೦. ಆಗ ಮಾರುತಿಯನ್ನು ಲಕ್ಷ್ಮಣನನ್ನು ಸಮಾಧಾನಮಾಡಲು ಸುಗ್ರೀವನು ಕಳುಹಿಸಿದನು. ಆ ಮಾರುತಿಯು ಲಕ್ಷ್ಮಣನಲ್ಲಿಗೆ ಹೋಗಿ ಅವನನ್ನು ಸಮಾಧಾನಪಡಿಸಿ ಕಿಷ್ಕಿಂಧೆಗೆ ಕರೆತಂದನು.

೮೧. ಅಲ್ಲದೆ ಅಷ್ಟರೊಳಗೆ ತಾರೆಯನ್ನು ಕೂಡ ಸುಗ್ರೀವನು ಕಳುಹಿಸಿದನು. ಆಕೆಯು ಮಧ್ಯದ ತೊಟ್ಟಿಗೆ ಹೋಗಿ ಆ ಲಕ್ಷ್ಮಣನನ್ನು ನೋಡಿದಳು.

೮೨–೮೩. ಆಗ ತಾರೆಯು ತನ್ನ ಮಧುರವಾದ ಮಾತುಗಳಿಂದ ಲಕ್ಷ್ಮಣನನ್ನು ಸಮಾಧಾನಪಡಿಸುತ್ತಾ ರಾಮನ ಸಹಾಯಕ್ಕೋಸ್ಕರ ಸುಗ್ರೀವನು ಕಪಿಗಳೆಲ್ಲವನ್ನೂ ಕರೆಸಿರುವನು. ಆದುದರಿಂದ ನೀನು ಸುಗ್ರೀವನಮೇಲೆ ಕೋಪ ಮಾಡಬೇಡ. ಎಂದು ಹೇಳಿ ಲಕ್ಷ್ಮಣನ ಕೈಯ್ಯನ್ನು ಹಿಡಿದುಕೊಂಡು ಅರಮನೆಯೊಳಕ್ಕೆ ಕರೆದುಕೊಂಡು ಹೋದಳು.

ದೃಷ್ಟ್ವಾ ಸುಗ್ರೀವರಾಜಸ್ತಮಾಸನಾತ್ಸಂಚಚಾಲ ಸಃ ।
ಸುಗ್ರೀವಂ ಲಕ್ಷ್ಮಣಃ ಪ್ರಾಹ ವಿಸ್ಮೃತೋಽಸಿ ರಘೂತ್ತಮಂ ॥ ೮೪ ॥

ವಾಲೀ ಯೇನ ಹತೋ ವೀರಸ್ಸಬಾಣಸ್ತ್ವಾಂ ಪ್ರತೀಕ್ಷತೇ ।
ತ್ವಮದ್ಯ ವಾಲಿನೋ ಮಾರ್ಗಂ ಗಮಿಷ್ಯಸಿ ಮಯಾ ಹತಃ ॥ ೮೫ ॥

ಏವಮತ್ಯಂತಪರುಷಂ ವದಂತಂ ಲಕ್ಷ್ಮಣಂ ತದಾ ।
ಉವಾಚ ಹನುಮಾನ್ ವೀರಃ ಕಥಮೇವಂ ಪ್ರಭಾಷಸೇ ॥ ೮೬ ॥

ರಾಮಕಾರ್ಯಾರ್ಥಮನಿಶಂ ಜಾಗರ್ತಿ ನ ತು ವಿಸ್ಮೃತಃ ।
ಇತ್ಯುಕ್ತ್ವಾ ತಂ ಪೂಜಯಿತ್ವಾ ಸುಗ್ರೀವೇಣ ಸ ಮಾರುತಿಃ ॥ ೮೭ ॥

೮೪-೮೫. ಲಕ್ಷ್ಮಣನು ಬಂದುದನ್ನು ನೋಡಿ ರಾಜನಾದ ಸುಗ್ರೀವನು ಆಸನದಿಂದ ಎದ್ದನು. ಆಗ ಲಕ್ಷ್ಮಣನು ಸುಗ್ರೀವನನ್ನು ನೋಡಿ ಎಲೈ ಸುಗ್ರೀವನೆ! ರಾಮನನ್ನು ಮರೆತುಬಿಟ್ಟೆಯಾ! ವಾಲಿಯನ್ನು ಕೊಂದಬಾಣವೇ ನಿನ್ನನ್ನೂ ಎದುರುನೋಡುತ್ತಿದೆ. ನಾನೇ ನಿನ್ನನ್ನು ಹೊಡೆದು ವಾಲಿಯು ಮಾರ್ಗದಲ್ಲಿ ಕಳುಹಿಸುತ್ತೇನೆ. ಎಂದನು.

೮೬. ಈ ರೀತಿಯಾಗಿ ಲಕ್ಷ್ಮಣನು ಕಠಿಣವಾದ ಮಾತುಗಳನ್ನು ಆಡುತ್ತಿರುವುದನ್ನು ನೋಡಿ ಹನುಮಂತನು ಎಲೈ ಲಕ್ಷ್ಮಣನೆ! ಇದೇತಕ್ಕೆ ಈ ರೀತಿಯಾಗಿ ಮಾತನಾಡುತ್ತೀಯೆ?

೮೭. ಆ ಸುಗ್ರೀವನು ಯಾವಾಗಲೂ ರಾಮಕಾರ್ಯದಲ್ಲಿಯೇ ಮನಸ್ಸಿಟ್ಟು ಕೆಲಸಮಾಡುತ್ತಿರುವನು. ಮರೆತಿಲ್ಲ. ಹೀಗೆಂದು ಹೇಳಿ ಆ ಮಾರುತಿಯು ಸುಗ್ರೀವನೊಡನೆ ಸೇರಿಕೊಂಡು ಲಕ್ಷ್ಮಣನನ್ನು ಪೂಜಿಸಿದನು.

ಚಕಾರ ಲಕ್ಷ್ಮಣಂ ಶಾಂತಂ ಸುಗ್ರೀವೋಽಪ್ಯಥ ವಾನರೈಃ ।
ಗತ್ವಾ ತಂ ರಾಘವಂ ನತ್ವಾ ದರ್ಶಯಾಮಾಸ ವಾನರಾನ್ ॥ ೮೮ ॥

ರಾವಘಂ ಸ ತದಾ ಪ್ರಾಹ ಸುಗ್ರೀವಃ ಪ್ಲವಗಾಧಿಪಃ ।
ದೇವ ಪಶ್ಯ ಸಮಾಯಾಂತೀಂ ವಾನರಾಣಾಂ ಮಹಾಚಮೂಂ ॥ ೮೯ ॥

ಅತ್ರ ಯೂಥಾದಿಪತಯಃ ಪದ್ಮಾನ್ಯಷ್ಟಾದಶ ಸ್ಮೃತಾಃ ।
ತತೋ ರಾಮಾಜ್ಞಯಾ ಸೀತಾಶುದ್ಧ್ಯರ್ಥಂ ತಾನ್ ದಿದೇಶ ಸಃ ॥ ೯೦ ॥

ದಿಕ್ಷು ಸರ್ವಾಸು ವಿವಿಧಾನ್ ವಾನರಾನ್ಪ್ರೇಷ್ಯ ಸತ್ವರಂ ।
ಯಾಮ್ಯಾಂ ದಿಶಂ ಜಾಂಬವಂತಮಂಗದಂ ವಾಯುನಂದನಂ ॥ ೯೧ ॥

ನಳಂ ಸುಷೇಣಂ ಶರಭಂ ಮೈಂದಂ ಸಂಪ್ರೇಷಯತ್ತದಾ ।
ಮಾಸಾದರ್ವಾಜ್ನಿವರ್ತಧ್ವಂ ನೋ ಚೇದ್ವಧ್ಯಾ ಭವಿಷ್ಯಥ ॥ ೯೨ ॥

---

೮೮. ಸುಗ್ರೀವನೂ ಉಳಿದ ಕಪಿಗಳೂ ಸೇರಿ ಲಕ್ಷ್ಮಣನನ್ನು ಸಮಾಧಾನ ಪಡಿಸಿದರು. ಅನಂತರ ಸುಗ್ರೀವನು ರಾಮನ ಬಳಿಗೆ ಹೋಗಿ ಅವನಿಗೆ ನಮಸ್ಕರಿಸಿ ಎಲ್ಲಾ ಕಪಿಗಳೂ ಸಿದ್ಧರಾಗಿರುವುದನ್ನು ತೋರಿಸಿದನು.

೮೯-೯೦. ಮತ್ತು ರಾಮನನ್ನು ಕುರಿತು ಇಂತೆಂದನು. ಎಲೈ ರಾಮನೆ ! ಇತ್ತ ನೋಡು ! ವಾನರರ ಸೈನ್ಯವು ಬರುತ್ತಿದೆ. ಇದರಲ್ಲಿ ಹದಿನೆಂಟು ಪದ್ಮದ ಲೆಕ್ಕದಷ್ಟು ಯೂಥಾದಿಪತಿಗಳು ಇರುವರು. ಎಂದು ಹೇಳಿ ರಾಮನ ಅಪ್ಪಣೆಯಂತೆ ಅವರನ್ನು ಸೀತೆಯ ಸುದ್ದಿಯನ್ನು ತಿಳಿದು ಬರುವಂತೆ ಅಪ್ಪಣೆ ಮಾಡಿದನು.

೯೧-೯೨. ಎಲ್ಲಾ ದಿಕ್ಕಿಗೂ ಅನೇಕ ಬಗೆಯಾದ ಶಕ್ತರಾದ ಕಪಿಗಳನ್ನು ಬೇಗನೆ ಕಳುಹಿಸಿದನು. ಅದರಲ್ಲಿ ದಕ್ಷಿಣದಿಕ್ಕಿಗೆ ಜಾಂಬವಂತ, ಅಂಗದ, ಮಾರುತಿ, ನಳ, ಸುಷೇಣ, ಶರಭ, ಮೈಂದ, ಇವರನ್ನು ಕಳುಹಿಸಿದನು. ಒಂದು ತಿಂಗಳು ತುಂಬುವುದರೊಳಗೆ ನೀವು ಬರಬೇಕು. ಇಲ್ಲದಿದ್ದರೆ ಪ್ರಾಣಾಂತಕ ಶಿಕ್ಷೆಯನ್ನು ವಿಧಿಸುತ್ತೇನೆ. ಎಂದು ಅಪ್ಪಣೆಮಾಡಿದನು.

ತತೋ ರಾಮೋ ಮುಂದ್ರಿಕಾಂ ಸ್ವಾಂ ದದೌ ಮಾರುತಿಸತ್ಕರೇ ।
ಮನ್ನಾಮಾಕ್ಷರಯುಕ್ತೇಯಂ ಸೀತಾಯೈ ದೀಯತಾಂ ರಹಃ ॥ ೯೩ ॥

ತತೋ ರಾಮಸ್ಸ್ವೀಯಮಂತ್ರಂ ದದೌ ತಸ್ಮೈ ಹನೂಮತೇ ।
ತನ್ಮಂತ್ರಸ್ಯ ಲಕ್ಷಮಿತೇ ಕೃತ್ವಾ ತು ಜಪಲೇಖನೇ ॥ ೯೪ ॥

ಲಬ್ಧ್ವಾ ಸಾಮರ್ಥ್ಯಮತುಲಂ ಲಂಕಾಂ ಗಂತುಂ ಸ ಮಾರುತಿಃ ।
ನತ್ವಾ ರಾಮಂ ಪರಿಕ್ರಮ್ಯ ಜಗಾಮ ಕಪಿಭಿಸ್ಸಹ ॥ ೯೫ ॥

ಉದಂತಂ ರಾಘವಃ ಪ್ರಾಹ ಚಿತ್ರಕೂಟೇ ಪುರಾಕೃತಂ ।
ಮನಶ್ಶಿಲಾಯಾಸ್ತಿಲಕಂ ಸೀತಾಫಾಲೇ ವಿನಿರ್ಮಿತಂ ॥ ೯೬ ॥

ಗಂಡಯೋಃ ಪತ್ರವಲ್ಲ್ಯಾದಿ ಸೀತಾಯೈ ಕಥ್ಯತಾಂ ರಹಃ ।
ತತಸ್ತೇ ಪ್ರಸ್ಥಿತಾಸ್ಸರ್ವೇ ಪಶ್ಚಿಮಾದಿಷು ದಿಕ್ಷು ಚ ॥ ೯೭ ॥

---

೯೩. ಆಗ ರಾಮನು ತನ್ನ ಉಂಗುರವನ್ನು ಮಾರುತಿಯ ಕೈಯ್ಯಲ್ಲಿ ಕೊಟ್ಟು ಎಲೈ ಹನುಮಂತನೆ! ಈ ಉಂಗುರವು ನನ್ನ ಹೆಸರಿನಿಂದ ಕೂಡಿ ಕೊಂಡಿದೆ. ಇದನ್ನು ಸೀತೆಯ ಕೈಯ್ಯಲ್ಲಿ ಗುಟ್ಟಾಗಿ ಕೊಡು.

೯೪-೯೫. ಎಂಬುದಾಗಿ ಮುದ್ರಿಕೆಯನ್ನು ಕೊಟ್ಟು ತನ್ನ ಮಂತ್ರವನ್ನು ಉಪದೇಶ ಮಾಡಿದನು. ಆ ಮಂತ್ರವನ್ನು ಲಕ್ಷಸಂಖ್ಯೆಯಲ್ಲಿ ಜಪಮಾಡಿ ಲಕ್ಷಸಂಖ್ಯೆಯಲ್ಲಿ ಬರೆದರೆ ಬಹುವಾದ ಸಾಮರ್ಥ್ಯವನ್ನು ಹೊಂದಿ ಲಂಕೆಗೆ ಹೋಗಲು ಶಕ್ತನಾಗುತ್ತೀಯೆ. ಎನ್ನಲು ಅನಂತರ ಮಾರುತಿಯು ರಾಮನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಕಪಿಗಳೊಡನೆ ಹೊರಟನು.

೯೬-೯೭. ಮತ್ತು ಆ ರಾಘವನು ಚಿತ್ರಕೂಟಪರ್ವತದಲ್ಲಿ ತಾನು ಹಿಂದೆ ನಡೆಸಿದ ಸಮಾಚಾರಗಳನ್ನೂ ಸೀತೆಯ ಹಣೆಗೆ ಮನಶ್ಶಿಲೆಯ ತಿಲಕವನ್ನಿಟು ಕಪೋಲಗಳ ಮೇಲೆ ಹಸೆಗಳನ್ನು ಬರೆದಿದ್ದುದನ್ನೂ ತಿಳಿಸಿದನು. ಅನಂತರ ಆ ಕಪಿಗಳೆಲ್ಲರೂ ಎಲ್ಲಾ ದಿಕ್ಕುಗಳಿಗೂ ಹೊರಟರು.

ಪ್ರೇಷಿತಾಸ್ತೇ ಸಮಾಯಾತಾ ನ ದೃಷ್ಟೇತಿ ತಮಬ್ರುರ್ವ |
ತದಾಂಗದಾದ್ಯಾಃ ಪ್ಲವಗಾಃ ಸೀತಾರ್ಥೇ ಬಭ್ರಮುರ್ವನೇ ॥ ೯೮ ॥

ಮತ್ವಾಯಂ ರಾವಣಶ್ಚೇತಿ ರಾಕ್ಷಸಾನ್ ಶತಶೋರ್ದಯನ್ |
ಸಾದ್ರಾರ್ಸ್ಯಾನ್ ಖೇಚರಾನ್ದೃಷ್ಟ್ವಾ ಗುಹಾದ್ವಾರಾದ್ವಿನಿರ್ಗತಾನ್ ॥ ೯೯ ॥

ಜಲಾರ್ಥಂ ಸಂಪ್ರವಿಷ್ಟಾಸ್ತೇ ಗುಹಾಯಾಂ ವಾನರೋತ್ತಮಾಃ |
ತಸ್ಯಾಂ ತಾನ್ ಗಚ್ಛತಸ್ತೂಷ್ಣೀಂ ದಿನಾನ್ಯಷ್ಟಾದಶೈವ ಹಿ ॥ ೧೦೦ ॥

ಅತಿಕ್ರಾಂತಾನಿ ತಿಮಿರೇ ಬಭ್ರಮುಸ್ತ ಇತಸ್ತತಃ |
ತತ್ರ ರತ್ನಮಯೇ ದಿವ್ಯೇ ಗೇಹೇ ದೃಷ್ಟ್ವಾ ಸ್ತ್ರಿಯಂ ಶುಭಾಂ ॥ ೧೦೧ ॥

---

೯೮. ಕೆಲವು ದಿನಗಳಮೇಲೆ ಪೂರ್ವ, ಪಶ್ಚಿಮ, ಉತ್ತರ ದಿಕ್ಕುಗಳಿಗೆ ಕಳುಹಿಸಿದ್ದ ಕಪಿಗಳು ತಿಂಗಳೊಳಗೆ ಬಂದು ಸೀತೆಯನ್ನು ಕಾಣಲಿಲ್ಲವೆಂದು ಹೇಳಿದರು. ಇತ್ತ ಅಂಗದನೇ ಮುಂತಾದವರು ಸೀತೆಗೋಸ್ಕರ ಕಾಡಿನಲ್ಲಿ ಅಲೆಯುತ್ತಿದ್ದರು.

೯೯. ಅಲ್ಲದೆ ದಾರಿಯಲ್ಲಿ ಸಿಕ್ಕಿದ ರಾಕ್ಷಸರನ್ನು ಇವನೇ ರಾವಣನೆಂದು ಕೊಲ್ಲುತ್ತಿದ್ದರು. ಈ ರೀತಿಯಾಗಿ ಅನೇಕ ಜನ ರಾಕ್ಷಸರನ್ನು ಕೊಂದರು ಅನಂತರ ಕೆಲವು ಪಕ್ಷಿಗಳು ಮುಖವನ್ನು ನೀರಿನಲ್ಲಿ ನೆನೆಸಿಕೊಂಡು ಗುಹೆಯ ಬಾಗಿಲಿನಿಂದ ಬರುತ್ತಿರುವುದನ್ನು ನೋಡಿದರು.

೧೦೦–೧೦೧. ಆಗ ಇಲ್ಲಿ ನೀರಿರುವುದೆಂದು ತಿಳಿದು ಆ ಗುಹೆಯ ಬಾಗಿಲಿನಿಂದ ಒಳಗೆ ಹೋದರು. ಹಾಗೆ ಒಳಗೆ ಹೋಗುತ್ತಿರಲು ಹದಿನೆಂಟು ದಿನಗಳು ಕಳೆದುವು. ಆ ಗುಹೆಯೊಳಗೆ ಕತ್ತಲೆಯಾಗಿರಲು ದಾರಿಯನ್ನು ಕಾಣದೆ ಅವರು ಅತ್ತಿತ್ತ ಅಲೆದಾಡಿದರು. ಅಲ್ಲಿ ಒಂದು ರತ್ನಮಯವೂ ದಿವ್ಯವೂ ಆದ ಮನೆಯಲ್ಲಿ ಒಬ್ಬಳು ಉತ್ತಮಳಾದ ಸುಂದರಿಯಾದ ಹೆಂಗಸಿರುವುದನ್ನು ಕಂಡರು.

ಸಂಶ್ರಾವ್ಯ ತಾಂ ನಿಜಂ ವೃತ್ತಂ ತದ್ವೃತ್ತಂ ಶ್ರೋತುಮುದ್ಯತಾಃ ।
ತಾನ್ಸೂಪ್ಯಜ್ಯ ಕಥಯಾಮಾಸ ನೈಜಂ ವೃತ್ತಂ ತು ಯೋಗಿನೀ ॥ ೧೦೨ ॥

ಹೇಮಾ ನಾಮ್ನಾ ಸುತಾ ವಿಶ್ವಕರ್ಮಣಸ್ಸಾ ಮಹೇಶ್ವರಂ ।
ನೃತ್ಯೇನ ತೋಷಯಾಮಾಸ ದದೌ ತಸ್ಯೈ ಪುರಂ ಮಹತ್ ॥ ೧೦೩ ॥

ಅತ್ರ ಸ್ಥಿತ್ವಾ ಚಿರಂ ಕಾಲಂ ಯದಾ ಗಂತುಂ ಸಮುದ್ಯತಾ ।
ಸಾ ಮಾಂ ಪ್ರಾಹಾತ್ರ ರಾಮಸ್ಯ ಪ್ರತೀಕ್ಷಾಂ ಕುರು ಸದ್ಮನಿ ॥ ೧೦೪ ॥

ಸಮಾಗಚ್ಛಸ್ವ ರಾಮಸ್ಯ ಕೃತ್ವಾ ಪೂಜನಮುತ್ತಮಂ ।
ಇತ್ಯುಕ್ತ್ವಾ ಸಾ ದಿವಂ ಯಾತಾ ರಾಘವಂ ಗಮ್ಯತೇ ಮಯಾ ॥ ೧೦೫ ॥

---

೧೦೨. ಅವಳಿಗೆ ತಮ್ಮ ವಿಷಯಗಳನ್ನು ಹೇಳಿ ಅವಳ ವಿಷಯವನ್ನು ತಿಳಿಯಲು ಕೇಳಿದರು. ಆ ಯೋಗಿನಿಯು ಅವರನ್ನು ಸತ್ಕರಿಸಿ ತನ್ನ ವಿಷಯವನ್ನು ಹೇಳಲು ಮೊದಲಿಟ್ಟಳು.

೧೦೩. ವಿಶ್ವಕರ್ಮನಿಗೆ ಹೇಮಳೆಂಬ ಒಬ್ಬ ಮಗಳಿದ್ದಳು. ಆಕೆಯು ಮಹೇಶ್ವರನನ್ನು ನೃತ್ಯದಿಂದ ಸಂತೋಷಪಡಿಸಿದಳು. ಅವಳಿಗೆ ಮಹೇಶ್ವರನು ಒಂದು ದೊಡ್ಡಪಟ್ಟಣವನ್ನು ಕೊಟ್ಟನು. ಅವಳು ಅನೇಕ ಕಾಲದವರೆಗೆ ಇಲ್ಲಿದ್ದಳು.

೧೦೪. ಇಲ್ಲಿ ಬಹುಕಾಲ ಸುಖಪಟ್ಟು ಹೋಗಲುಪ್ರಯತ್ನಪಟ್ಟಾಗ ಆಕೆಯು ನನ್ನನ್ನು ಕುರಿತು ರಾಮನ ಬರುವಿಕೆಯನ್ನು ನಿರೀಕ್ಷಿಸುತ್ತಿರು. ಅದುವರೆಗೂ ನೀನು ಈ ಮನೆಯಲ್ಲಿದ್ದುಕೊಂಡಿರು.

೧೦೫. ರಾಮನನ್ನು ನೋಡಿ ಅವನನ್ನು ಪೂಜಿಸಿ ಅನಂತರ ನೀನೂ ಬಂದು ಬಿಡು. ಹೀಗೆಂದು ಹೇಳಿ ಅವಳು ಸ್ವರ್ಗಕ್ಕೆ ಹೊರಟುಹೋದಳು. ನಾನು ಈಗ ಆ ಶ್ರೀರಾಮನ ಬಳಿಗೆ ಹೋಗುತ್ತೇನೆ.

ಸ್ವಯಂಪ್ರಭೇತಿ ನಾಮ್ನಾಹಂ ಹೇಮಾಯಾಃ ಪರಿಚಾರಿಕಾ |
ಅಧುನಾ ಬ್ರೂತ ಯುಷ್ಮಾಕಂ ಸಾಹಾಯ್ಯಂ ಕಿಂ ಕರೋಮ್ಯಹಂ|| ೧೦೬ ||

ತತ್ತಸ್ಯಾ ವಚನಂ ಶ್ರುತ್ವಾ ಜ್ಞಾತ್ವಾ ಸ್ವೀಯದಿನವ್ಯಯಂ |
ತಾಮೂಚುರ್ವಾನರಾಸ್ಸರ್ವೇ ನಸ್ತ್ವಂ ಕುರು ಗೃಹಾದ್ಬಹಿಃ || ೧೦೭ ||

ಇತ್ಯುಕ್ತ್ವಾ ಸಾ ಕ್ಷಣೇನೈವ ತೈಸ್ಸಹೈವ ಯಯೌ ಬಹಿಃ |
ತದ್ಗಿರಾಚ್ಛಾದಿತಸ್ವೀಯನಯನೈರ್ವಾನರೈಸ್ತದಾ || ೧೦೮ ||

ನ ಜ್ಞಾತಂ ಚ ತಯಾ ಕೇನ ಮಾರ್ಗೇಣ ಚ ಬಹಿಷ್ಕೃತಂ |
ಸಾಪಿ ಗತ್ವಾ ಪೂಜ್ಯಂ ರಾಮ ದೇಹಂ ತ್ಯಕ್ತ್ವಾ ದಿವಂ ಯಯೌ || ೧೦೯ ||

---

೧೦೬. ನನ್ನ ಹೆಸರು ಸ್ವಯಂಪ್ರಭೆಯು. ನಾನು ಹೇಮೆಯ ಪರಿಚಾರಕಳು. ಈಗ ನಾನು ನಿಮಗೇನು ಸಹಾಯವನ್ನು ಮಾಡಬೇಕು? ಹೇಳಿರಿ. ಎಂದಳು.

೧೦೭. ಅವಳ ಆ ಮಾತುಗಳನ್ನು ಕೇಳಿ ಕಪಿಗಳು ತಾವು ಬಹುವಾದ ದಿವಸಗಳನ್ನು ಕಳೆದಿರುವುದನ್ನು ತಿಳಿದು ತಮ್ಮನ್ನು ಈ ಗುಹೆಯಿಂದ ಹೊರಗಡೆ ಕಳುಹಿಸಿಕೊಡುವಂತೆ ಕೇಳಿಕೊಂಡರು.

೧೦೮. ಹೀಗೆಂದು ಹೇಳಲು ಆ ಕ್ಷಣದಲ್ಲಿ ನೀವೆಲ್ಲರೂ ಕಣ್ಣುಮುಚ್ಚಿಕೊಳ್ಳಿರೆಂದು ಹೇಳಿ ಕಣ್ಣು ಮುಚ್ಚಿಸಿ ಅವಳು ಅವರೊಡನೆಯೇ ಹೊರಗೆ ಬಂದಳು.

೧೦೯. ಅವಳು ಯಾವ ದಾರಿಯಿಂದ ಹೊರಗೆ ಕರೆತಂದಳೆಂಬುದೇ ಆ ಕಪಿಗಳಿಗೆ ತಿಳಿಯಲಿಲ್ಲ. ಆ ಸ್ವಯಂಪ್ರಭೆಯು ರಾಮನ ಬಳಿಗೆ ಹೋಗಿ ಅವನನ್ನು ಪೂಜಿಸಿ, ಈ ದೇಹವನ್ನು ಬಿಟ್ಟು ಸ್ವರ್ಗಕ್ಕೆ ಹೋದಳು.

ತತಸ್ತೇ ವಾನರಾ ಜ್ಞಾತ್ವಾ ಗುಹಾಯಾಂ ಸ್ವದಿನವ್ಯಯಂ ।
ವಿಷಣ್ಣಾಸ್ಸಾಗರಂ ಗತ್ವಾ ತಸ್ಥುಃ ಪ್ರಾಯೋಪವೇಶನೇ ॥ ೧೧೦ ॥

ಜಟಾಯೋಃ ಕೀರ್ತನಂ ಚಕ್ರೂ ರಾಮಕಾರ್ಯೇ ಮೃತಂ ಪುರಾ ।
ತಚ್ಛ್ರುತ್ವಾಥ ಸ ಸಂಪಾತಿಸ್ತಾನ್ ಹಂತುಂ ಯಸ್ಸಮುದ್ಯತಃ ॥ ೧೧೧ ॥

ತೇಭ್ಯಶ್ಶ್ರುತ್ವಾ ಮೃತಿಂ ಬಂಧೋರ್ದತ್ವಾ ತಸ್ಮೈ ಜಲಾಂಜಲಿಂ ।
ತೇಷಾಂ ಶ್ರುತ್ವಾ ಸರ್ವವೃತ್ತಂ ಸೀತಾವೃತ್ತಂ ನ್ಯವೇದಯತ್ ॥ ೧೧೨ ॥

ಶತಯೋಜನಮಧ್ಯೇಽಬ್ಧೇರ್ಲಂಕಾಯಾಂ ವರ್ತತೇಽಧುನಾ ।
ಅಶೋಕವನಿಕಾಯಾಂ ತು ತೀರ್ತ್ವಾಽಬ್ಧಿಂ ತಾಂ ಪ್ರಪಶ್ಯಥ ॥ ೧೧೩ ॥

---

೧೧೦. ಅನಂತರ ಕಪಿಗಳು ಗುಹೆಯಲ್ಲಿ ತಾವು ಬಹು ದಿವಸವನ್ನು ಕಳೆದಿರುವುದನ್ನು ತಿಳಿದು ದುಃಖಗೊಂಡವರಾಗಿ ಸಮುದ್ರದ ಬಳಿಗೆ ಹೋಗಿ, ಎದುರಿಗೆ ಸಾಗರವು ಅಡ್ಡಲಾದುದನ್ನು ತಿಳಿದು ಅಲ್ಲಿ ಪ್ರಾಯೋಪವೇಶವನು ಮಾಡಿದರು.

೧೧೧. ಪ್ರಾಯೋಪವೇಶನಸಮಯದಲ್ಲಿ ರಾಮನ ವಿಷಯವನ್ನು ಹೇಳುತ್ತ ರಾಮನ ಕಾರ್ಯಕ್ಕೋಸ್ಕರ ಮೃತನಾದ ಜಟಾಯುವಿನ ವಿಷಯವನ್ನು ಮಾತನಾಡುತ್ತಿರಲು ಆ ಪ್ರಾಯೋಪವೇಶನವನ್ನು ಮಾಡಿದ ಕಪಿಗಳನ್ನು ತಿನ್ನುವುದಕ್ಕೆ ಹೊಂಚುಹಾಕುತ್ತಿದ್ದ ಸಂಪಾತಿಯು ಅದನ್ನು ಕೇಳಿದನು.

೧೧೨. ಅನಂತರ ಆ ಕಪಿಗಳಿಂದ ತನ್ನ ತಮ್ಮನಾದ ಜಟಾಯುವಿನ ಮರಣವನ್ನು ತಿಳಿದು ಅವನಿಗೆ ತರ್ಪಣವನ್ನು ಕೊಟ್ಟು ಅನಂತರ ಅವರು ಬಂದಿರುವ ವಿಷಯವನ್ನು ತಿಳಿದು ಅವರಿಗೆ ಸೀತೆಯ ವಿಷಯವನ್ನು ಹೇಳಿದನು.

೧೧೩. ಎಲೈ ಕಪಿಗಳಿರಾ! ಈ ಸಮುದ್ರದಲ್ಲಿ ನೂರು ಯೋಜನಗಳಷ್ಟು ದೂರದಲ್ಲಿ ಲಂಕಾಪಟ್ಟಣವಿರುವುದು. ಸೀತೆಯು ಆ ಪಟ್ಟಣದಲ್ಲಿ ಅಶೋಕವನದಲ್ಲಿರುವಳು. ನೀವು ಈ ಸಮುದ್ರವನ್ನು ದಾಟಿ ಆಕೆಯನ್ನು ನೋಡಿರಿ.

ಅಹಂ ಪಕ್ಷವಿಹೀನೋಽಸ್ಮಿ ಮಯಾ ಗಂತುಂ ನ ಶಕ್ಯತೇ ।
ಗೃಧ್ರತ್ವಾದ್ದೂರದೃಕ್ಚಾಹಂ ಸೀತಾ ಮಾಂ ದೃಶ್ಯತೇ ಗಿರೇಃ ॥ ೧೧೪ ॥

ಭ್ರಾತ್ರಾ ಜಟಾಯುಷಾ ಪೂರ್ವಮುಡ್ಡೀಯಾಹಂ ಬಲಾದ್ರವಿಂ ।
ಸ್ಪ್ರಷ್ಟುಕಾಮಸ್ತದಾ ತಪ್ತಸ್ತ್ರಾತೋ ಬಂಧುರ್ಮಯಾ ಸಖೆ ॥ ೧೧೫ ॥

ವಕ್ಷಾಭ್ಯಾಂ ಭಸ್ಮಸಾಜ್ಜಾತೌ ಮೇ ಪಕ್ಷೌ ಪತಿತಾವುಭೌ ।
ಜಟಾಯುಸ್ಸ ಸಪಕ್ಷಶ್ಚ ಗತೋ ದೇಶಾಂತರಂ ಪುನಃ ॥ ೧೧೬ ॥

ಅಹಂ ತದಾ ಪಕ್ಷಹೀನಶ್ಚಂದ್ರಶರ್ಮಾಣಮುತ್ತಮಂ ।
ಮುನಿಂ ನತ್ವಾ ಮಯಾ ತಸ್ಮೈ ನಿಜವೃತ್ತಂ ನಿವೇದಿತಂ ॥ ೧೧೭ ॥

---

೧೧೪. ನನಗೆ ರೆಕ್ಕೆಗಳು ನಾಶವಾಗಿಹೋಗಿರುವುದರಿಂದ ನಾನು ಅಲ್ಲಿಗೆ ಹೋಗಲಾರೆ. ನಾನು ಹದ್ದಾದುದರಿಂದ ನನಗೆ ಬಹುದೂರ ದೃಷ್ಟಿಯಿರುವುದು. ನನಗೆ ಆ ಬೆಟ್ಟದ ಮೇಲೆ ಸೀತೆಯು ಕಾಣಿಸುತ್ತಿರುವಳು.

೧೧೫. ಒಂದುಸಲ ನಾನೂ ನನ್ನ ತಮ್ಮನಾದ ಜಟಾಯುವೂ ಸೂರ್ಯನನ್ನು ಮುಟ್ಟಲು ಮೇಲಕ್ಕೆ ಹಾರಿದೆವು. ಆಗ ಸೂರ್ಯನ ಶಾಖದಿಂದ ಸುಟ್ಟು ಹೋಗುತ್ತಿದ್ದ ನನ್ನ ತಮ್ಮನಾದ ಜಟಾಯುವನ್ನು ಸುಡದಂತೆ ಕಾಪಾಡಿದೆನು.

೧೧೬. ಆಗ ನನ್ನ ರೆಕ್ಕೆಗಳು ಸುಟ್ಟು ಬೂದಿಯಾಗಿ ನೆಲದ ಮೇಲೆ ಬಿದ್ದುವು. ನನ್ನಿಂದ ಕಾಪಾಡಲ್ಪಟ್ಟ ಜಟಾಯುವಿಗೆ ರೆಕ್ಕೆಗಳು ಸರಿಯಾಗಿದ್ದುದರಿಂದ ಅವನು ಬೇರೆಯ ಜಾಗಕ್ಕೆ ಹೋದನು.

೧೧೭. ನನಗೆ ರೆಕ್ಕೆಗಳು ನಾಶವಾದುದರಿಂದ ಇಲ್ಲಿ ಬಿದ್ದೆನು. ಆಗ ಇಲ್ಲಿ ಚಂದ್ರಶರ್ಮನೆಂಬ ಮುನಿಯೊಬ್ಬನಿದ್ದನು. ಅವನಲ್ಲಿಗೆ ಹೋಗಿ ನನ್ನ ವಿಷಯವನ್ನು ವಿಜ್ಞಾಪಿಸಿಕೊಂಡೆನು.

ತದಾ ಮಾಂ ಸ ಮುನಿಃ ಪ್ರಾಹ ಯದಾ ತ್ವಂ ವಾನರೋತ್ತಮಾನ್ ।
ಸೀತಾಶುದ್ಧಿಂ ಕಥಯಸಿ ತದಾ ಪಕ್ಷೌ ಭವಿಷ್ಯತಃ ॥ ೧೧೮ ॥

ಪಶ್ಯತಾಂ ನಿರ್ಗತೌ ಪಕ್ಷೌ ಕೋಮಲೌ ಮಾಂ ಕ್ಷಣಾದಿಹ ।
ಯದಾ ನೀತಾ ರಾವಣೇನ ಪುರಾ ಸೀತಾ ವಿಹಾಯಸಾ ॥ ೧೧೯ ॥

ಮತ್ಪುತ್ರೇಣ ತದಾ ದೃಷ್ಟ್ವಾ ಕಥಿತಾಪಿ ಹಿ ಮಾಂ ತದಾ ।
ಧಿಕ್ಕೃತಸ್ಸ ಮಯಾ ಕ್ರೋಧಾತ್ಸಾ ತ್ವಯಾ ನ ವಿಮೋಚಿತಾ ॥ ೧೨೦ ॥

ತದಾರಭ್ಯ ಗತಃ ಕ್ರೋಧಾದದ್ಯಾಪಿ ನ ಸಮಾಗತಃ ।
ಇತ್ಯುಕ್ತ್ವಾ ತಾನ್ಕಪೀನ್ ದೃಷ್ಟ್ವಾ ಸ ಸಂಪಾತಿರ್ಗತಸ್ತದಾ ॥ ೧೨೧ ॥

---

೧೧೮. ಆಗ ಆ ಮುನಿಯು ನೀನು ಯಾವಾಗ ರಾಮಕಾರ್ಯಕ್ಕೋಸ್ಕರ ಬಂದ ವಾನರರಿಗೆ ಸೀತೆಯ ಸಮಾಚಾರವನ್ನು ಹೇಳುತ್ತೀಯೋ ಆಗ ನಿನ್ನ ರೆಕ್ಕೆಗಳು ಮತ್ತೆ ಹುಟ್ಟುತ್ತವೆ. ಎಂದನು.

೧೧೯. ಇಗೋ! ನೋಡಿರಿ. ಹಾಗೆ ಹೇಳಿದುದರಿಂದ ಈಗ ನನ್ನ ರೆಕ್ಕೆಗಳು ಹುಟ್ಟುತ್ತಿವೆ. ಅವು ಬಹು ಎಳಸಾಗಿ ಕೋಮಲವಾಗಿವೆ. ಹಿಂದೆ ರಾವಣನು ಸೀತೆಯನ್ನು ಆಕಾಶಮಾರ್ಗದಲ್ಲಿ ತೆಗೆದುಕೊಂಡು ಹೋಗುತ್ತಿದ್ದುದನ್ನು ನನ್ನ ಮಗನು ನೋಡಿದನು.

೧೨೦. ಅದನ್ನು ಅವನು ನನ್ನ ಸಂಗಡ ಹೇಳಿದನು. ಆಗ ನಾನು ಕೋಪಗೊಂಡು ಅವನನ್ನೇ ನೀನು ಆಕೆಯನ್ನು ಬಿಡಿಸಲಿಲ್ಲವಲ್ಲ! ಎಂದು ಧಿಕ್ಕರಿಸಿದೆನು.

೧೨೧. ಅದು ಮೊದಲುಗೊಂಡು ಕೋಪಗೊಂಡು ಆ ಮಗನು ಹೊರಟು ಹೋದನು. ಇನ್ನೂ ಬಂದೇ ಇಲ್ಲ ಹೀಗೆಂದು ಆ ಕಪಿಗಳಿಗೆ ಹೇಳಿ ಸಂಪಾತಿಯು ಹೊರಟುಹೋದನು.

ಅಥ ತೇ ವಾನರಾಸ್ಸರ್ವೇಪ್ರೋಚುಃ ಸ್ವಂ ಸ್ವಂ ಬಲಂ ತದಾ |
ನ ಕೋಽಪಿ ಗಮನೇ ಶಕ್ತಶ್ಶತಯೋಜನಸಾಗರೇ ॥ ೧೨೨ ॥

ತದಾ ಸ ಜಾಂಬವಾನ್ ವೃದ್ಧಃ ಸ್ತುತ್ವಾ ತಂ ಮಾರುತಿಂ ಮುಹುಃ |
ಜನ್ಮಕರ್ಮಾದಿ ಸಂಶ್ರಾವ್ಯ ಲಂಕಾಂ ಗಂತುಂ ದಿದೇಶ ತಂ ॥ ೧೨೩ ॥

ಸೋಽಪಿ ಶ್ರುತ್ವಾ ಸಮುದ್ಯೋಗಂ ಚಕಾರಾರುಹ್ಯ ಪರ್ವತಂ |
ನಿಜಭಾರಾದ್ಭೂಮಿಗತಂ ಕೃತ್ವಾ ಸಸ್ಮಾರ ರಾಘವಂ ॥ ೧೨೪ ॥

---

೧೨೨. ಅನಂತರ ಆ ಕಪಿಗಳು ಲಂಕೆಗೆ ಹೋಗಲು ತಮ್ಮ ತಮ್ಮ ಬಲಗಳನ್ನು ವಿವರಿಸುತ್ತಿದ್ದರು. ಆದರೂ ಕೂಡ ಆ ನೂರುಯೋಜನದಷ್ಟು ಸಮುದ್ರವನ್ನು ದಾಟಲು ಒಬ್ಬನೂ ಶಕ್ತನಾಗಲಿಲ್ಲ.

೧೨೩. ಆಗ ವೃದ್ಧನಾದ ಜಾಂಬುವಂತನು ಮಾರುತಿಯನ್ನು ಬಹುವಾಗಿ ಹೊಗಳಿದನು. ಅವನ ಜನ್ಮವನ್ನೂ ಅವನು ಮಾಡಿದ ಅದ್ಭುತವಾದ ಕೆಲಸಗಳನ್ನೂ ಹೇಳಿ ಹೊಗಳಿ ಲಂಕೆಗೆ ಹೋಗುವಂತೆ ಅವನಿಗೆ ಉಪದೇಶ ಮಾಡಿದನು.

೧೨೪ ಇದನ್ನು ಕೇಳಿದ ಮಾರುತಿಯು ಪರ್ವತದ ಮೇಲಕ್ಕೆ ಹತ್ತಿ ಸಾಗರವನ್ನು ದಾಟಲು ಪ್ರಯತ್ನವನ್ನು ಮಾಡಿದನು. ಇವನ ವೇಗವನ್ನೂ ಭಾರವನ್ನೂ ತಡೆಯಲಾರದೆ ಆ ಪರ್ವತವು ನೆಲದಮಟ್ಟಕ್ಕೆ ಇಳಿಯಿತು. ಆಗ ಹನುಮಂತನು ರಾಮನನ್ನು ಸ್ಮರಿಸಿದನು.

ಏವಂ ಗಿರೀಂದ್ರಜೇ ಪ್ರೋಕ್ತಂ ಕಿಷ್ಕಿಂಧಾವಿಷಯೋ ಕೃತಂ ।
ಚರಿತಂ ರಾಘವೇಣೇದಂ ಪುರಾ ಪಾಪಪ್ರಣಾಶನಂ ॥ ೧೨೫ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಸಾರಕಾಂಡೇ ಕಿಷ್ಕಿಂಧಾಚರಿತ್ರಂ
ನಾಮ ಅಷ್ಟಮಸ್ಸರ್ಗಸ್ಸಮಾಪ್ತಃ

---

೧೨೫. ಎಲೈ ಗಿರೀಂದ್ರಜೆಯೆ ! ರಾಮನು ಕಿಷ್ಕಿಂಧೆಯಲ್ಲಿ ಮಾಡಿದ ವಿಷಯವನ್ನು ಹೇಳಿದೆನು. ಈ ರಾಮನ ಚರಿತ್ರೆಯು ಪಾಪವನ್ನು ನಾಶಮಾಡುತ್ತದೆ.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದ ರಾಮಾಯಣದ ಸಾರಕಾಂಡದಲ್ಲಿ ಕಿಷ್ಕಿಂಧಾ ಚರಿತ್ರೆ
ಎಂಬ ಎಂಟನೆಯ ಸರ್ಗವು ಸಮಾಪ್ತವು

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

॥ ಎಂಟನೆಯ ಸರ್ಗದ ಸಾರಾಂಶವು ॥

ಶ್ರೀರಾಮನು ಲಕ್ಷ್ಮಣನೊಡನೆ ಋಷ್ಯಮೂಕ ಪರ್ವತಕ್ಕೆ ಹೋದನು. ಇವರಿಬ್ಬರೂ ಋಷ್ಯಮೂಕ ಪರ್ವತದ ತಪ್ಪಲಲ್ಲಿ ಸಂಚರಿಸುತ್ತಿರಲು ಸುಗ್ರೀವನು ಇವರನ್ನು ನೋಡಿ ವಾಲಿಯು ತನ್ನನ್ನು ಕೊಲ್ಲಲು ಕಳುಹಿಸಿರಬಹುದೆಂದು ಊಹಿಸಿ ಇವರ ಬಳಿಗೆ ಹನುಮಂತನನ್ನು ಕಳುಹಿದನು. ಅದರಂತೆಯೇ ಹನುಮಂತನು ಇವರ ಬಳಿಗೆ ಬಂದು "ನೀವು ಯಾರು?" ಎಂದು ಕೇಳಿದನು. ಲಕ್ಷ್ಮಣನು ತಮ್ಮ ವೃತ್ತಾಂತವೆಲ್ಲವನ್ನೂ ತಿಳಿಸಿ ಶಬರಿಯ ಮಾತಿನಂತೆ ಸುಗ್ರೀವನೊಡನೆ ಸಖ್ಯವನ್ನು ಬೆಳೆಸಲು ಬಂದಿರುವುದಾಗಿಯೂ ಹೇಳಿದನು.

ಇದರಿಂದ ಸಂತುಷ್ಟನಾದ ಮಾರುತಿಯು ಅವರಿಗೆ ತನ್ನ ವಿಷಯಗಳನ್ನು ತಿಳಿಸಿ ಅವರನ್ನು ಹೆಗಲಿನಮೇಲೆ ಕೂರಿಸಿಕೊಂಡು ಸುಗ್ರೀವನ ಬಳಿಗೆ ಹೋದನು ಸುಗ್ರೀವನು ಅಗ್ನಿಸಾಕ್ಷಿಕವಾಗಿ ಆ ರಾಮನೊಡನೆ ಸ್ನೇಹವನ್ನು ಮಾಡಿಕೊಂಡು ಅವರ ವೃತ್ತಾಂತವೆಲ್ಲವನ್ನೂ ತಿಳಿದುಕೊಂಡನು. ಅನಂತರ ತನ್ನ ವೃತ್ತಾಂತವೆಲ್ಲವನ್ನೂ ಹೇಳಲು ಮೊದಲು ಮಾಡಿ ಇಂತೆಂದನು.

"ಒಂದುಸಾರಿ ಮಯನ ಮಗನಾದ ದುರ್ಮದನೆಂಬುವನು ಕಿಷ್ಕಿಂಧೆಯ ಬಳಿಗೆ ಬಂದು ಗರ್ಜಿಸುತ್ತಾ ವಾಲಿಯನ್ನು ಯುದ್ಧಕ್ಕೆ ಕರೆದನು. ವಾಲಿಯು ಬಂದು ಅವನಿಗೆ ಮುಷ್ಟಿಯಿಂದ ಗುದ್ದಲು ಆ ಏಟನ್ನು ತಡೆಯಲಾರದೆ ಓಡಿದನು. ಅವನನ್ನು ಓಡಿಸಿಕೊಂಡು ವಾಲಿಯು ಹೋಗಲು ಆ ವಾಲಿಯ ಸಹಾಯಕ್ಕೆ ನಾನೂ ಅವನ ಹಿಂದೆ ಓಡಿದೆನು. ಆ ದುರ್ಮದನು ಕೊನೆಗೆ ಒಂದು ಗುಹೆಯನ್ನು ಹೊಕ್ಕನು. ಆಗ ವಾಲಿಯು ನನ್ನನ್ನು ಗುಹೆಯ ಹೊರಗಿರುವಂತೆ ಹೇಳಿ ತಾನು ಒಳಕ್ಕೆ ಹೋಗಿ ಆ ರಾಕ್ಷಸನೊಡನೆ ಯುದ್ಧಮಾಡುತ್ತಾ ಒಂದು ತಿಂಗಳವರೆಗೂ ಈಚೆಗೆ ಬರಲೇ ಇಲ್ಲ. ಒಂದು ತಿಂಗಳಾದಮೇಲೆ ಗುಹೆಯದ್ವಾರದಿಂದ ರಕ್ತವು ಈಚೆಗೆ ಬಂದಿತು. ಆಗ ವಾಲಿಯು ಸತ್ತನೆಂದು ನಿಶ್ಚಯಮಾಡಿಕೊಂಡೆನು. ಇಷ್ಟರೊಳಗೆ ನಮ್ಮ ಕಿಷ್ಕಿಂಧೆಯನ್ನು ಶತ್ರುಗಳು ಆಕ್ರಮಿಸಿಕೊಂಡಿದ್ದರು. ಒಡನೆಯೇ ಒಂದು ಬಲವಾದ ಮತ್ತು ದಪ್ಪವಾದ ಬಂಡೆಯನ್ನು ಆ ದುರ್ಮದನ

ಗುಹೆಯ ಬಾಗಿಲಿಗಿಟ್ಟು ಮುಚ್ಚಿ ಕಿಷ್ಕಿಂಧೆಗೆ ಬಂದೆನು. ನನ್ನನ್ನು ನೋಡಿದೊಡನೆಯೇ ಶತ್ರುಗಳು ಪಲಾಯನ ಮಾಡಿದರು. ನಾನು ಒಪ್ಪದಿದ್ದರೂ ಮಂತ್ರಿಗಳು ನನ್ನನ್ನು ರಾಜನನ್ನಾಗಿ ಮಾಡಿದರು.

ಅತ್ತ ವಾಲಿಯು ಶತ್ರುವನ್ನು ಸಂಹರಿಸಿ ಬಂದು ನಾನು ಅವನ ಪದವಿಯಲ್ಲಿರುವುದನ್ನು ನೋಡಿ ನನ್ನನ್ನು ಹೊಡೆದು ಪಟ್ಟಣದಿಂದ ಹೊರಗೆ ಓಡಿಸಿದನು. ಅಲ್ಲದೆ ಪ್ರಪಂಚದಲ್ಲಿ ಯಾರೂ ಸುಗ್ರೀವನಿಗೆ ಆಶ್ರಯ ಕೊಡಕೂಡದೆಂದೂ ಹಾಗೆ ಕೊಟ್ಟರೆ ಅವನನ್ನು ತಾನು ಕೊಲ್ಲುವುದಾಗಿಯೂ ಡಂಗೂರವನ್ನು ಹಾಕಿಸಿದನು. ಇದರಿಂದ ನಾನು ಎಲ್ಲಿಗೂ ಹೋಗುವ ಆಶೆಯನ್ನು ಬಿಟ್ಟು ಈ ಋಷ್ಯಮೂಕ ಪರ್ವತವನ್ನು ಆಶ್ರಯಿಸಿದೆನು.

ಒಂದುಸಾರಿ ದುಂದುಭಿಯೆಂಬ ದೈತ್ಯನು ಕೋಣನ ಆಕಾರವನ್ನು ಹೊಂದಿ ರಾತ್ರಿಯಲ್ಲಿ ವಾಲಿಯನ್ನು ಯುದ್ಧಕ್ಕೆ ಕರೆದನು. ಒಡನೆಯೇ ವಾಲಿಯು ಬಂದು ಆ ಕೋಣನ ಎರಡು ಕೊಂಬುಗಳನ್ನೂ ಎರಡು ಕೈಗಳಿಂದ ಹಿಡಿದು ಕತ್ತನ್ನು ಮುರಿದು ತೂಗಿ ಎಸೆದನು. ಆ ಕತ್ತು ಮತಂಗಋಷಿಯ ಆಶ್ರಮದ ಹತ್ತಿರದಲ್ಲಿ ಬಿದ್ದಿತು. ಆಗ ಆ ಮತಂಗನ ಆಶ್ರಮದಲ್ಲಿ ರಕ್ತದ ಮಳೆಯು ಸುರಿಯಲು ಅವನು ವಾಲಿಯನ್ನು ಕುರಿತು "ನೀನು ನನ್ನ ಆಶ್ರಮಕ್ಕೆ ಬಂದರೆ ಒಡನೆಯೇ ಸಾಯುತ್ತೀಯೆ" ಎಂದು ಶಪಿಸಿದನು. ಅದು ಮೊದಲುಗೊಂಡು ಅವನು ಇಲ್ಲಿಗೆ ಬರುವುದಿಲ್ಲ. ನಾನು ಹೆದರಿಕೆಯಿಲ್ಲದೆ ಇದ್ದುಕೊಂಡಿದ್ದೇನೆ. ನಾನು ಸೀತೆಯನ್ನು ತಂದುಕೊಡುತ್ತೇನೆಂದು ನಿನಗೆ ಪ್ರತಿಜ್ಞೆಮಾಡಿ ಹೇಳುತ್ತೇನೆ. ಆ ರಾವಣನು ಸೀತೆಯನ್ನು ತೆಗೆದುಕೊಂಡು ಹೋಗುತ್ತಿದ್ದಾಗ ನಾನು ನೋಡಿದೆನು. ಆಕೆಯು ಒಡವೆಗಳನ್ನು ಬಟ್ಟೆಯಲ್ಲಿ ಕಟ್ಟಿ ನಮ್ಮ ಬಳಿಗೆ ಎಸೆದಳು. ಅವನ್ನು ನೋಡು." ಎಂಬುದಾಗಿ ಅವನ್ನು ತೋರಿಸಿದನು.

ಆ ಒಡವೆಗಳನ್ನು ನೋಡಿ ರಾಮನು ಲಕ್ಷ್ಮಣನನ್ನು ಕುರಿತು "ಅವನ್ನು ನೋಡಿ ನಿಶ್ಚಯವನ್ನು ಹೇಳು" ಎಂದನು. ಅದಕ್ಕೆ ಲಕ್ಷ್ಮಣನು "ನನಗೆ ಈ ಒಡವೆಗಳೊಂದೂ ತಿಳಿಯದು. ಆದರೆ ನಿತ್ಯವೂ ವಂದನೆ ಮಾಡುತ್ತಿದ್ದಾಗ ಈ ಕಾಲಿನ ಬಳೆಗಳನ್ನು ನೋಡುತ್ತಿದ್ದೆನು. ಇವು ಅವೇ ಹೌದು. ನಿಶ್ಚಯವು" ಎಂದನು. ಆಗ ರಾಮನು ಸಂತೋಷಗೊಂಡು ಸೀತೆಯು ಸಿಕ್ಕಿದಳೆಂದೇ ತಿಳಿದನು.

ಅನಂತರ ರಾಮನು ಸುಗ್ರೀವನಿಗೆ ತನ್ನಲ್ಲಿ ನಂಬಿಕೆಯುಂಟಾಗಲು ಅವನ ಮಾತಿನಂತೆ ಆ ದುಂದುಭಿಯ ತಲೆಯನ್ನು ಕಾಲಿನ ಹೆಬ್ಬೆರಳಿನಿಂದಲೇ ಹತ್ತು ಯೋಜನಗಳ ದೂರಕ್ಕೆ ಎಸೆದನು. ಮತ್ತು ಚಕ್ರಾಕಾರವಾಗಿದ್ದ ಏಳು ತಾಳೆಯ ಮರಗಳನ್ನು ತಾನು ಲಕ್ಷ್ಮಣನ ಕಾಲುಗಳನ್ನು ಅಂಗುಷ್ಟದಿಂದ ತಿಕ್ಕುವುದರಿಂದಲೇ ನೇರವಾಗಿ ಮಾಡಿ ಅವನ್ನು ಒಂದೇ ಬಾಣದಿಂದ ಕತ್ತರಿಸಿದನು. ಒಂದುಸಾರಿ ವಾಲಿಯು ಗುಹೆಯಲ್ಲಿಟ್ಟಿದ್ದ ಏಳು ತಾಳೆಯಹಣ್ಣುಗಳನ್ನು ತೆಗೆದುಕೊಳ್ಳಲು ಹೋಗಿ ನೋಡಿದಾಗ ಅಲ್ಲಿ ಸರ್ಪವು ಕಾಣಿಸಿತು. ಅದನ್ನು ನೋಡಿದ ವಾಲಿಯು "ನಿನ್ನ ಮೇಲೆ ಈ ಏಳು ತಾಳೆಯ ಹಣ್ಣುಗಳೂ ಏಳು ತಾಳೆಯ ಮರಗಳಾಗಿ ಹುಟ್ಟಲಿ" ಎಂದು ಶಪಿಸಿದನು. ಆ ಸರ್ಪವೂ ಕೂಡ "ಇದನ್ನು ಕತ್ತರಿಸುವವನೇ ನಿನ್ನನ್ನೂ ಕೊಲ್ಲಲಿ" ಎಂದು ವಾಲಿಯನ್ನು ಪ್ರತಿಯಾಗಿ ಶಪಿಸಿತು. ಇಂತಹ ತಾಳೆಯಮರವನ್ನು ಕತ್ತರಿಸಿದುದರಿಂದ ರಾಮನ ಸಾಮರ್ಥ್ಯವು ವ್ಯಕ್ತವಾದುದನ್ನು ನೋಡಿ ಸುಗ್ರೀವನು ಸಂತೋಷಗೊಂಡನು. ಅನಂತರ ಸುಗ್ರೀವನು ರಾಮನನ್ನು ಕುರಿತು "ಎಲೈ ರಾಮನೆ! ಪೂರ್ವದಲ್ಲಿ ಇಂದ್ರನು ವಾಲಿಗೆ ಒಂದು ಮಾಲಿಕೆಯನ್ನು ಕೊಟ್ಟಿರುವನು. ಅದನ್ನು ನೋಡಿದೊಡನೆಯೇ ಶತ್ರುಗಳು ತಮ್ಮ ಪರಾಕ್ರಮವನ್ನು ಕಳೆದುಕೊಳ್ಳುತ್ತಾರೆ. ಹಿಂದೆ ಈ ಮಾಲೆಯನ್ನು ಕಶ್ಯಪನು ಶಿವನಿಂದ ಪಡೆದನು. ಅದನ್ನು ತ್ರಿಲೋಕೇಶ್ವರನಾದ ಇಂದ್ರನಿಗೆ ಕೊಟ್ಟನು. ಆ ಇಂದ್ರನು ಸಂತೋಷಗೊಂಡು ಅದನ್ನು ವಾಲಿಗೆ ಕೊಟ್ಟಿರುವನು. ಅವನು ಅದನ್ನು ಯಾವಾಗಲೂ ಧರಿಸಿರುವನು. ಅದನ್ನು ನೀನೂ ನೋಡಿದ ಕೂಡಲೆ ಪರಾಕ್ರಮವನ್ನು ಕಳೆದುಕೊಳ್ಳುತ್ತೀಯೆ. ನಿನಗೆ ಜಯವಾಗುವಂತೆ ಈ ವಿಷಯದಲ್ಲಿ ಒಂದು ಉಪಾಯವನ್ನು ಯೋಚಿಸು." ಎಂದನು.

ರಾಮನು ಇದನ್ನು ಕೇಳಿ ತಾನು ಮರಗಳನ್ನು ಕತ್ತರಿಸಿ ಶಾಪದಿಂದ ಬಿಡುಗಡೆಯನ್ನು ಮಾಡಿದ್ದ ಆ ಸರ್ಪವನ್ನು ಕುರಿತು, "ಎಲೈ ಸರ್ಪವೇ! ನೀನು ಕಿಷ್ಕಿಂಧೆಗೆ ಹೋಗಿ ವಾಲಿಯು ರಾತ್ರಿಯಲ್ಲಿ ನಿದ್ದೆಮಾಡುತ್ತಿರುವಾಗ ಆ ಮಾಲಿಕೆಯನ್ನು ತೆಗೆದುಕೊಂಡು ಬಾ." ಎಂದನು.

ಆ ಸರ್ಪವು ಹಾಗೆಯೇ ಆಗಲೆಂದು ಒಪ್ಪಿಕೊಂಡು ಕಿಷ್ಕಿಂಧೆಗೆ ಹೋಗಿ ಮಂಚದಲ್ಲಿಟ್ಟಿದ್ದ ಆ ಮಾಲೆಯನ್ನು ತಂದಿತು. ಮತ್ತು ಇಂದ್ರನಿಗೂ ತಿಳಿಸಿತು.

ಅನಂತರ ಸುಗ್ರೀವನು ರಾಮನ ಅಪ್ಪಣೆಯಂತೆ ಕಿಷ್ಕಿಂಧೆಗೆ ಹೋಗಿ ವಾಲಿಯನ್ನು ಯುದ್ಧಕ್ಕೆ ಕರೆದು ಯುದ್ಧವನ್ನು ಮಾಡಿದನು. ರಾಮನು ಅದನ್ನು

ನೋಡುತ್ತಿದ್ದನು. ಅವರಿಬ್ಬರೂ ಆಕಾರದಲ್ಲಿ ಒಂದೇರೀತಿಯಾಗಿರಲು ಮಿತ್ರನ ವಧೆಯಾದೀತೆಂಬ ಅಭಿಪ್ರಾಯದಿಂದ ಬಾಣವನ್ನೇ ಬಿಡಲಿಲ್ಲ ಸುಗ್ರೀವನು ಅನಂತರ ಸೋತು ಬಂದು "ಎಲೈ ರಾಮನೇ! ನನ್ನನ್ನು ಶತ್ರುವಿನ ಕೈಯ್ಯಿಂದ ಕೊಲ್ಲಿಸುತ್ತಿರುವೆಯಲ್ಲ! ನನ್ನನ್ನು ಕೊಲ್ಲಬೇಕೆಂದು ಇಚ್ಛೆಯಿದ್ದರೆ ನೀನೇ ನನ್ನನ್ನು ಕೊಂದುಬಿಡು" ಎಂದನು.

ರಾಮನು ಸುಗ್ರೀವನ ಈ ಮಾತನ್ನು ಕೇಳಿ ಲಕ್ಷ್ಮಣನಿಗೆ ಹೇಳಿ ಸುಗ್ರೀವನ ಕತ್ತಿಗೆ ಮಾಲೆಯನ್ನು ಹಾಕಿಸಿದನು. ಅನಂತರ ಮತ್ತೆ ಯುದ್ಧಕ್ಕೆ ಕಳುಹಿಸಿದನು. ಸುಗ್ರೀವನು ಬಂದು ವಾಲಿಯನ್ನು ಯುದ್ಧಕ್ಕೆ ಕರೆಯುತ್ತಿರಲು ತಾರೆಯು ಬೇಡವೆಂದು ತಡೆದಳು. ಮತ್ತು ರಾಮನು ಕಾಡಿಗೆ ಬಂದಿರುವುದಾಗಿಯೂ ಅವನೊಡನೆ ಸುಗ್ರೀವನು ಸ್ನೇಹವನ್ನು ಬೆಳೆಸಿಕೊಂಡಿರವನೆಂದೂ ಅಂಗದನಿಂದ ತಿಳಿದಿರುವುದಾಗಿ ಹೇಳಿದಳು. ಅಲ್ಲದೆ ಆ ರಮಾನಾಥನಿಗೂ ನಮಸ್ಕರಿಸಿ ಗೌರವಿಸಿ ನಿನ್ನ ತಮ್ಮನನ್ನು ಯುವರಾಜಪದವಿಯಲ್ಲಿಡು. ಎಂದೂ ಹೇಳಿದಳು.

ಇದನ್ನು ಕೇಳಿ ವಾಲಿಯು "ಎಲೈ ತಾರೆಯೇ! ರಾಮನು ನರರೂಪನಾದ ಹರಿಯೆಂಬುದನ್ನು ಬಲ್ಲೆನು. ಅವನ ಕೈಯ್ಯಿಂದ ನನಗೆ ಮರಣವಾದರೆ ನಾನು ಮುಕ್ತಿಯನ್ನು ಹೊಂದುತ್ತೇನೆ. ನೀನು ಸುಗ್ರೀವನನ್ನು ಹೊಂದಿ ಸುಖವಾಗಿರು. ನಾನು ರಾಮಬಾಣದಿಂದ ಸಾಯುವುದರಿಂದ ನನ್ನ ತಾಯಿತಂದೆಗಳೂ ನನ್ನ ಕುಲವೂ ನಾನೂ ಧನ್ಯರಾದೆವು." ಇಂತೆಂದು ಹೇಳಿ ಸಮಾಧಾನಪಡಿಸಿದನು.

ಹೀಗೆಂದು ಹೇಳಿ ವಾಲಿಯು ಯುದ್ಧಕ್ಕೆ ಹೊರಡಲು ಅಪಶಕುನಗಳಾದುವು. ಆಗ ಸುಗ್ರೀವನೊಡನೆ ಯುದ್ಧವನ್ನು ಮಾಡಿದನು. ರಾಮನು ಮರಗಳ ಗುಂಪಿನಲ್ಲಿ ಮರೆಯಾಗಿದ್ದುಕೊಂಡು ಬಾಣವನ್ನು ಬಿಟ್ಟು ಆ ವಾಲಿಯನ್ನು ಕೊಂದನು. ಇದನ್ನು ನೋಡಿ ವಾಲಿಯು "ಎಲೈ ರಾಮನೆ! ನೀನು ಮರೆಯಲ್ಲಿ ನಿಂತು ನನ್ನನ್ನು ಕೊಂದುದರಿಂದ ನಿನಗೆ ಲೋಕದಲ್ಲಿ ಅಪಯಶಸ್ಸು ಬಂದಿತು. ನನಗಾದರೋ ಮುಕ್ತಿಯು ಬಂದಿತು." ಎಂದನು. ಅಲ್ಲದೆ ಕೊಲ್ಲಲು ಕಾರಣ ವೇನೆಂದು ಕೇಳಲು ರಾಮನು "ನೀನು ತಮ್ಮನ ಹೆಂಡತಿಯನ್ನು ಮನೆಯಲ್ಲಿ ಭೋಗಿಸುತ್ತ ಅವನನ್ನು ಕೊಲ್ಲಲು ಅಪೇಕ್ಷಿಸಿದೆ. ಅದೇ ನಿನ್ನ ತಪ್ಪು. ಈಗ ನಿನ್ನ ಹೆಂಡತಿಯನ್ನು ಈ ಸುಗ್ರೀವನು ಅನುಭವಿಸಿ ಅದರ ಪ್ರತೀಕಾರವನ್ನು ಹೊಂದುವನು. ನೀನು ದುರಾಚಾರಿಯು. ಆದ್ದರಿಂದಲೇ ನಿನ್ನನ್ನು ಕೊಂದಿರುವೆನು. ಆದರೂ ಕೂಡ ದ್ವಾಪರಯುಗಾಂತ್ಯದಲ್ಲಿ ನೀನು ಬೇಡನಾ

ರೂಪದಿಂದ ಇದ್ದು ನನ್ನನ್ನು ಕೊಂದು ಪ್ರತೀಕಾರವನ್ನು ಹೊಂದು. ಅನಂತರವೇ ನಿನಗೆ ಮುಕ್ತಿಯು ಸಿಕ್ಕುತ್ತದೆ'' ಎಂದನು. ಅದಕ್ಕೆ ವಾಲಿಯು "ಎಲೈ ರಾಮನೆ! ನನ್ನ ಭವಿಷ್ಯವನ್ನು ನೀನು ಹೇಳಿದೆ. ನೀನು ನನಗೆ ಮೊದಲೇನೇ ಸೀತೆಯ ವಿಷಯವನ್ನು ಹೇಳಿದ್ದರೆ ಆ ರಾವಣನನ್ನು ಕೊಂದು ಸೀತೆಯನ್ನು ಮೊದಲೇ ತಂದುಕೊಡುತ್ತಿದ್ದೆನು. ಈಗಲೂ ಕೂಡ ಈ ಅಂಗದನನ್ನು ಕಾಪಾಡು. ನನ್ನ ಪ್ರಾರ್ಥನೆಯನ್ನು ನಡೆಸಿಕೊಡು" ಎಂದನು.

ಅನಂತರ ವಾಲಿಯು ಸ್ವರ್ಗಸ್ಥನಾಗಲು ರಾಮನು ಅಂಗದನಿಂದ ಕ್ರಿಯೆಗಳನ್ನು ಮಾಡಿಸಿದನು. ಮತ್ತು ಸುಗ್ರೀವನಿಗೆ ಪಟ್ಟವನ್ನೂ ಕಟ್ಟಿದನು. ಅನಂತರ ಮಳೆಗಾಲವು ಬರಲು ಅದನ್ನು ಕಳೆಯುವುದಕ್ಕೋಸ್ಕರ ರಾಮನು ಪ್ರವರ್ಷಣಗಿರಿಯಲ್ಲಿ ಒಂದು ಗುಹೆಯಲ್ಲಿದ್ದನು. ಅದೂ ಕಳೆಯಿತು. ಇತ್ತ ಸುಗ್ರೀವನು ಕಿಷ್ಕಿಂಧೆಯಲ್ಲಿ ರಾಜ್ಯವಾಳುತ್ತಲಿದ್ದನು.

ಆಗ ಹನುಮಂತನ ಸಲಹೆಯಮೇರೆಗೆ ಕಪಿಗಳೆಲ್ಲವನ್ನೂ ಕರೆಸಿದನು. ರಾಮನಿಗೆ ಸುಗ್ರೀವನ ಕೆಲಸವು ಗೊತ್ತಾಗದಿದ್ದುದರಿಂದ ಅವನ ಬಳಿಗೆ ಲಕ್ಷ್ಮಣನನ್ನು ಕಳುಹಿಸಿದನು. ಆ ಲಕ್ಷ್ಮಣನು ಕಿಷ್ಕಿಂಧೆಗೆ ಹೋಗಿ ಹೆದರಿಸಿದನು. ಸುಗ್ರೀವನು ಮಾರುತಿಯನ್ನು ಕಳುಹಿಸಲು ಅವನು ಸಮಾಧಾನಪಡಿಸಿ ಲಕ್ಷ್ಮಣನನ್ನು ಕರೆತಂದನು. ಸುಗ್ರೀವನನ್ನು ನೋಡಿ ಲಕ್ಷ್ಮಣನು ''ಎಲೈ ಸುಗ್ರೀವನೇ! ನೀನು ರಾಮಕಾರ್ಯವನ್ನು ಮರೆತಿದ್ದೀಯೆ. ವಾಲಿಯನ್ನು ಕೊಂದಬಾಣವು ನಿನ್ನನ್ನು ಎದುರುನೋಡುತ್ತಲಿದೆ'' ಎಂದನು. ಆಗಲೂ ಮಾರುತಿಯು ''ಇಂತಹ ಕಠಿಣವಾದ ಮಾತುಗಳನ್ನು ಆಡಬೇಡ'' ಎಂದು ಹೇಳಿ ಶಾಂತನನ್ನಾಗಿ ಮಾಡಿದನು. ಅನಂತರ ಸುಗ್ರೀವನು ರಾಮನ ಬಳಿಗೆ ಹೋಗಿ ಎಲ್ಲ ವಿಷಯವನ್ನು ವಿಜ್ಞಾಪಿಸಿದನು. ಅಲ್ಲದೆ ಕಪಿಸೈನ್ಯವೆಲ್ಲವನ್ನೂ ಕರೆಸಿದನು. ಮತ್ತು ಆ ರಾಮನ ಅಪ್ಪಣೆಯಂತೆ ಸೀತೆಯ ಸುದ್ದಿಯನ್ನು ತರಲು ಎಲ್ಲ ದಿಕ್ಕುಗಳಿಗೂ ಕಳುಹಿಸಿದನು.

ದಕ್ಷಿಣದಿಕ್ಕಿಗೆ ಆ ಸೀತೆಯನ್ನು ಹುಡುಕಲು ಜಾಂಬವ, ಹನುಮಂತ, ನಳ, ಸುಷೇಣ, ಶರಭ, ಮೈಂದ ಇವರೇ ಮುಂತಾದವರನ್ನು ಕಳುಹಿಸಿದನು. ಇವರೆಲ್ಲರಿಗೂ ''ತಿಂಗಳಿನೊಳಗೇ ಬರಬೇಕೆಂದೂ ಇಲ್ಲದಿದ್ದರೆ ಪ್ರಾಣಾಂತಕ ಶಿಕ್ಷೆ ಒದಗುವುದೆಂದೂ'' ಅಪ್ಪಣೆ ಮಾಡಿದನು. ರಾಮನು ತನ್ನ ಮುದ್ರಿಕೆಯನ್ನು ಸೀತೆಗೆ ಕೊಡುವಂತೆ ಮಾರುತಿಯ ಕೈಯ್ಯಲ್ಲಿ ಕೊಟ್ಟನು. ಆ ಹನುಮಂತನಿಗೆ

ತನ್ನ ಮಂತ್ರವನ್ನು ಉಪದೇಶಿಸಿದನು. ಮತ್ತು ಚಿತ್ರಕೂಟದಲ್ಲಿ ತಾನು ಸೀತೆಯು ಕಪೋಲಗಳಲ್ಲಿ ಚಿತ್ರಬರೆಯುತ್ತಿದ್ದುದನ್ನು ಹೇಳೆಂದು ಹೇಳಿದನು. ಅನಂತರ ಎಲ್ಲರೂ ಹೊರಟರು.

ಉಳಿದದಿಕ್ಕುಗಳಿಗೆ ಹೋದವರು ಬಂದು ಸೀತೆಯು ಕಾಣಲಿಲ್ಲವೆಂದು ಹೇಳಿದರು.

ಹನುಮಂತ ಅಂಗದ ಮುಂತಾದವರು ಹೊರಟು ಕಾಡಿನಲ್ಲೆಲ್ಲವೂ ಸುತ್ತಿ ಬಾಯಾರಲು ನೀರಿದೆಯೆಂದು ತಿಳಿದು ಅಲ್ಲಿರುವ ಗುಹೆಯೊಂದಕ್ಕೆ ನುಗ್ಗಿದರು. ಅಲ್ಲಿಯೇ ಹದಿನೆಂಟು ದಿನಗಳವರೆಗೂ ಸುತ್ತಿ ಕೊನೆಗೆ ಒಬ್ಬಳು ಸುಂದರಿಯಾದ ಹೆಂಗಸನ್ನು ಕಂಡರು. ಅವರು ಆ ಹೆಂಗಸಿಗೆ ತಮ್ಮ ವಿಷಯವನ್ನು ತಿಳಿಸಿದರು. ಆಕೆಯು ಅವರನ್ನು ಪೂಜಿಸಿ ಇಂತೆಂದಳು. "ವಿಶ್ವಕರ್ಮನಿಗೆ ಹೇಮಳೆಂಬ ಮಗಳಿರುವಳು. ಅವಳು ನೃತ್ಯದಿಂದ ಮಹೇಶ್ವರನನ್ನು ಸಂತೋಷ ಗೊಳಿಸಲು ಅವನು ಅವಳಿಗೆ ಈ ಪಟ್ಟವನ್ನು ಕೊಟ್ಟನು. ಆಕೆಯು ಇಲ್ಲಿ ಬಹುಕಾಲವಿದ್ದಳು. ಅವಳು ಹೋಗುವಾಗ ನನ್ನನ್ನು ಕುರಿತು ರಾಮನು ಇಲ್ಲಿಗೆ ಬರುವನು. ಆದನ್ನು ಎದುರು ನೋಡಿಕೊಂಡಿದ್ದು ಅವನಿಗೆ ಪೂಜೆಮಾಡಿ ಬಾ. ಎಂದು ಹೇಳಿದಳು. ನಾನು ಆ ಹೇಮೆಯ ಪರಿಚಾರಕಳು. ಸ್ವಯಂಪ್ರಭೆ ಎಂದು ನನ್ನ ಹೆಸರು. ಈಗ ನನ್ನಿಂದ ಏನಾಗಬೇಕೆಂಬುದನ್ನು ಹೇಳಿರಿ" ಎಂದಳು.

ಆಗ ವಾನರರು "ಅಮ್ಮಾ ನಮ್ಮೆಲ್ಲರನ್ನೂ ಈ ಮನೆಯಿಂದ ಹೊರಗೆ ಹೋಗುವಂತೆ ಮಾಡು" ಎನ್ನಲು ಅವರೆಲ್ಲರನ್ನೂ ಕಣ್ಣನ್ನು ಮುಚ್ಚಿಕೊಳ್ಳುವಂತೆ ಮಾಡಿ ಹೊರಗೆ ತಂದಳು. ಅದೊಂದೂ ಅವರಿಗೆ ಗೊತ್ತಾಗಲೇ ಇಲ್ಲ. ಅನಂತರ ಆಕೆಯು ರಾಮನ ಬಳಿಗೆ ಹೋಗಿ ನಮಸ್ಕರಿಸಿ ಅನಂತರದಲ್ಲಿ ಸ್ವರ್ಗಕ್ಕೆ ಹೋದಳು.

ಇತ್ತ ಕಪಿಗಳು ದಿನಗಳು ಕಳೆದುದನ್ನೂ ಸಮುದ್ರವು ಅಡ್ಡಲಾಗಿ ಸಿಕ್ಕಿರುವುದನ್ನೂ ತಿಳಿದು ಖೇದಗೊಂಡರು. ಆಗ ಪ್ರಸಂಗದಿಂದ ಜಟಾಯುವಿನ ವಿಷಯವು ಬರಲು ಆ ಕಪಿಗಳನ್ನು ತಿನ್ನಬೇಕೆಂದು ಇದ್ದ ಸಂಪಾತಿಗೆ ಇದು ದುಃಖಕರವಾಗಿ ಆಗಲು ಅವನು ಅವರಿಂದ ಎಲ್ಲವನ್ನೂ ತಿಳಿದು ತರ್ಪಣವನ್ನು ಕೊಟ್ಟನು. ಸೀತೆಯು ಸಾಗರದ ಮಧ್ಯೆ ಲಂಕೆಯಲ್ಲಿರುವ ಅಶೋಕ ವನದಲ್ಲಿ ತನಗೆ ಕಾಣುತ್ತಿರುವಂತೆಯೂ ಹೇಳಿದನು. ಮತ್ತು ತಾನೂ ತನ್ನ ತಮ್ಮನಾದ ಜಟಾಯುವೂ ಸೂರ್ಯಮಂಡಲದ ಹತ್ತಿರಕ್ಕೆ ಹಾರುತ್ತಿದ್ದಾಗ ಜಟಾಯುವನ್ನು

ಮರೆಮಾಡಿ ತನ್ನ ರೆಕ್ಕೆಯು ಸುಟ್ಟುದನ್ನೂ ತಿಳಿಸಿದನು. ಅಲ್ಲದೆ ಚಂದ್ರಶರ್ಮನು ಸೀತೆಯ ವಿಷಯವನ್ನು ವಾನರರಿಗೆ ಹೇಳಿದಾಗ ನಿನ್ನ ರೆಕ್ಕೆಗಳು ಬೆಳೆಯುತ್ತವೆ. ಎಂದು ವರಕೊಟ್ಟುದನ್ನೂ ತಿಳಿಸಿ ರೆಕ್ಕೆಗಳು ಬರಲು ಹಾರಿ ಹೊರಟುಹೋದನು.

ಅನಂತರ ಕಪಿಗಳು ಸಮುದ್ರವನ್ನು ದಾಟುವುದರಲ್ಲಿ ತಮ್ಮ ಬಲಗಳನ್ನು ಹೇಳಿಕೊಳುತ್ತಿರಲು ಜಾಂಬವನು ಹನುಮಂತನನ್ನು ಲಂಕೆಗೆ ಹೋಗುವಂತೆ ಹೇಳಿದನು. ಅಂತೆಯೇ ಅವನು ಒಪ್ಪಿಕೊಂಡು ಬೆಟ್ಟದಮೇಲೆ ನಿಂತು ಸಮುದ್ರವನ್ನು ದಾಟಲು ಪ್ರಯತ್ನಿಸಿದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಸಾರಕಾಂಡೇ

॥ ನವಮಸ್ಸರ್ಗಃ ॥

॥ ಶ್ರೀ ಶಿವ ಉವಾಚ ॥

ಅಥ ಉಡ್ಡೀಯ ಹನುಮಾನ್ ಯಯಾವಾಕಾಶವರ್ತ್ಮನಾ ।
ತದ್ದೃಷ್ಟ್ವಾ ತದ್ಬಲಂ ಜ್ಞಾತುಂ ಸುರಸಾಂ ನಾಗಮಾತರಂ ॥ ೧ ॥

ಪ್ರೇಷಯಾಮಾಸುರಮರಾಃ ಸಾ ಶೀಘ್ರಂ ತತ್ಪುರೋ ಯಯೌ ।
ತದಾ ಸಾ ಮಾರುತಿಂ ಪ್ರಾಹ ವಿಶ ತ್ವಂ ವದನಂ ಮಮ ॥ ೨ ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ
ಒಂಭತ್ತನೆಯ ಸರ್ಗವು

೧. ಶ್ರೀ ಶಿವನು ಹೇಳಿದನು–ಅನಂತರದಲ್ಲಿ ಹನುಮಂತನು ಆ ಪರ್ವತದಿಂದ ಹಾರಿ ಆಕಾಶಮಾರ್ಗದಲ್ಲಿ ಹೊರಟನು. ಇದನ್ನು ನೋಡಿ ಆ ಹನುಮಂತನ ಬಲವನ್ನು ತಿಳಿಯಲು ದೇವತೆಗಳು ನಾಗಮಾತೆಯಾದ ಸುರಸೆಯನ್ನು ಕಳುಹಿಸಿದರು.

೨. ಆ ಸುರಸೆಯು ಶೀಘ್ರವಾಗಿ ಆ ಹನುಮಂತನ ಎದುರಿಗೆ ಹೋದಳು. ಆಗ ಅವಳು ಎಲೈ ಮಾರುತಿಯೆ! ನೀನು ನನ್ನ ಬಾಯಲ್ಲಿ ಪ್ರವೇಶಿಸು. ಎಂದಳು.

ಸ ಪ್ರಾಹ ರಘುವೀರಸ್ಯ ಕಾರ್ಯಂ ಕೃತ್ವಾ ವಿಶಾಮ್ಯಹಂ |
ದೃಷ್ಟ್ವಾ ತಸ್ಯಾಸ್ತು ನಿರ್ಬಂಧಂ ವವರ್ಧತ ತದಾ ಕಪಿಃ || ೩ ||

ವಿವರ್ಧಿತಂ ತಯಾಪ್ಯಾಸ್ಯಂ ತದಾ ಸೂಕ್ಷ್ಮೋ ಬಭೂವ ಸಃ |
ಅಂಗುಷ್ಠಮಾತ್ರಸ್ತಸ್ಯಾಸ್ಸ ವಕ್ತ್ರೇ ಗತ್ವಾ ವಿನಿರ್ಗತಃ || ೪ ||

ಜ್ಞಾತ್ವಾ ಸಾಪಿ ಬಲಂ ತಸ್ಯ ಸ್ತುತ್ವಾ ತಂ ಪ್ರಯಯೌ ದಿವಂ |
ಅಥಾಬ್ಧಿವಚನಾನ್ಮಾರ್ಗೇ ಮೈನಾಕಃ ಪರ್ವತೋ ಮಹಾನ್ || ೫ ||

ಜಲಮಧ್ಯಾತ್ಪ್ರಾದುರಭೂದ್ವಿಶ್ರಾಂತ್ಯರ್ಥಂ ಹನೂಮತಃ ।
ನಾನಾಮಣಿಮಯೈಶ್ಶೃಂಗೈಸ್ತಸ್ಯೋಪರಿ ನರಾಕೃತಿಃ || ೬ ||

---

೩. ಆ ಹನುಮನು ಎಲೈ ಮಂಗಳೆಯೆ! ರಘುವೀರನ ಕೆಲಸವನ್ನು ಮಾಡಿಕೊಂಡು ಬಂದನಂತರದಲ್ಲಿ ನಿನ್ನ ಬಾಯಲ್ಲಿ ಪ್ರವೇಶಿಸುವೆನು. ಎಂದನು. ಆದರೂ ಆಕೆಯು ಪ್ರವೇಶಿಸಬೇಕೆಂದು ನಿರ್ಬಂಧಪಡಿಸಲು ಆಗ ಅವನು ಬಹುವಾಗಿ ಬೆಳೆದನು.

೪. ಅವನ ಆಕಾರಕ್ಕೆ ಸರಿಯಾಗಿ ಆಕೆಯು ಬಾಯನ್ನು ದೊಡ್ಡದು ಮಾಡಿದಳು. ಒಡನೆಯೇ ಅವನು ಸಣ್ಣನಾದನು. ಅಂಗುಷ್ಠ ಮಾತ್ರದಷ್ಟಾಗಿ ಆಕೆಯ ಬಾಯೊಳಕ್ಕೆ ನುಗ್ಗಿ ಹಿಂದಿರುಗಿ ಬಂದನು.

೫. ಅವಳು ಅವನ ಬಲವನ್ನು ನೋಡಿ ಅವನನ್ನು ಹೊಗಳಿ ಸ್ವರ್ಗಕ್ಕೆ ಹೊರಟು ಹೋದಳು. ಅನಂತರ ಮಧ್ಯಮಾರ್ಗದಲ್ಲಿ ಸಮುದ್ರನ ಮಾತಿನಿಂದ ಮೈನಾಕ ಪರ್ವತವು ನೀರಿನ ಮಧ್ಯದಿಂದ ಮೇಲಕ್ಕೆದ್ದಿತು.

೬. ಅದು ಹನುಮಂತನು ತನ್ನಲ್ಲಿ ನಿಂತು ವಿಶ್ರಾಂತಿಯನು ಹೊಂದಲೆಂದು ಹಾಗೆ ಸಮುದ್ರನ ಮಾತಿನಂತೆ ಎದ್ದಿತು. ಆ ಬೆಟ್ಟವು ಬಗೆ ಬಗೆಯಾದ ಮಣಿಗಳಿಂದ ಕೂಡಿದ ಕೋಡುಗಲ್ಲುಗಳಿಂದ ಕೂಡಿದ್ದಿತು. ಅದರಮೇಲೆ ನರಾಕೃತಿಯನ್ನು ಹೊಂದಿ ಪರ್ವತಾಭಿಮಾನದೇವತೆಯು ಪ್ರಯಾಣಮಾಡುತ್ತಿರುವ ಹನುಮಂತನನ್ನು ನೋಡಿ ಇಂತೆಂದಿತು.

ಭೂತ್ವಾ ಯಾಂತಂ ಹನೂಮಂತಂ ಪ್ರಾಹ ಮೈನಾಕಪರ್ವತಃ ।
ಆಗಚ್ಛಾಮೃತಕಲ್ಪಾನಿ ಜಗ್ಧ್ವಾ ಪಕ್ವಫಲಾನಿ ಮೇ ॥ ೭ ॥

ವಿಶ್ರಮ್ಯಾತ್ರ ಕ್ಷಣಂ ಪಶ್ಚಾದ್ಗಮಿಷ್ಯಸಿ ಯಥಾಸುಖಂ ।
ಪುರಾ ಗಿರೀಣಾಮಿಂದ್ರೇಣ ಯುದ್ಧಮಾಸೀತ್ಸುದಾರುಣಂ ॥ ೮ ॥

ತದಾ ದಶರಥೇನಾಹಂ ಮೋಚಿತೋಽಸ್ಮ್ಯತ್ರ ಸಂಸ್ಥಿತಃ ।
ಅತಸ್ತದುಪಕಾರಂ ಹಿ ನಿಸ್ತರ್ತುಂ ನಿರ್ಗತೋಽಸ್ಮ್ಯಹಂ ॥ ೯ ॥

ಗಚ್ಛತೋ ರಾಮಕಾರ್ಯಾರ್ಥಂ ತವ ವಿಶ್ರಾಂತಿಹೇತವೇ ।
ತದಾ ತಂ ಹನುಮಾನಾಹ ರಾಮಕಾರ್ಯೇ ನ ಮೇ ಶ್ರಮಃ ॥ ೧೦ ॥

ವಿಶ್ರಾಮಃ ಸ್ವಾಮಿಕಾರ್ಯೇಽತ್ರ ನ ಕರೋಮ್ಯದ್ಯ ಭಕ್ಷಣಂ ।
ಮೈನಾಕಸ್ತಂ ಪುನಃ ಪ್ರಾಹ ಸ್ವಸ್ಪರ್ಶಾತ್ಪಾವಯಸ್ವ ಮಾಂ ॥ ೧೧ ॥

---

೭. ಎಲೈ ಹನುಮಂತನೆ! ಇಲ್ಲಿ ಬಾ! ಅಮೃತದಂತಿರುವ ಪಕ್ವವಾಗಿರುವ ಹಣ್ಣುಗಳನ್ನು ತಿಂದು ಇಲ್ಲಿ ಒಂದು ಕ್ಷಣಕಾಲ ವಿಶ್ರಮಿಸಿಕೊ.

೮. ಅನಂತರ ನಿನ್ನ ಅನುಕೂಲವಿದ್ದಂತೆ ಸುಖವಾಗಿ ಹೋಗು. ಹಿಂದಿನ ಕಾಲದಲ್ಲಿ ಪರ್ವತಗಳಿಗೂ ಇಂದ್ರನಿಗೂ ದೊಡ್ಡ ಯುದ್ಧವು ನಡೆಯಿತು.

೯. ಆಗ ದಶರಥನು ನನ್ನನ್ನು ಬಿಡಿಸಿದುದರಿಂದ ನಾನು ಬಂದು ಇಲ್ಲಿದ್ದೇನೆ. ಆದುದರಿಂದ ಆ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಿ ಕೃತಕೃತ್ಯನಾಗಲು ನಾನು ಸಮುದ್ರದಿಂದ ಮೇಲಕ್ಕೆ ಬಂದಿದ್ದೇನೆ.

೧೦. ನೀನು ರಾಮನ ಕಾರ್ಯಕ್ಕೆ ಹೋಗುತ್ತಿದ್ದೀಯೆ. ಆದ್ದರಿಂದ ನೀನು ಇಲ್ಲಿ ವಿಶ್ರಾಂತಿಯನ್ನು ಹೊಂದಬೇಕೆಂದು ನಾನು ಬಂದಿದ್ದೇನೆ. ಎನ್ನಲು ಆಗ ಹನುಮಂತನು ಅದನ್ನು ಕುರಿತು ರಾಮನ ಕಾರ್ಯದಲ್ಲಿ ನನಗೆ ಶ್ರಮವೇ ಇಲ್ಲ.

೧೧. ಆ ಸ್ವಾಮಿಯ ಕಾರ್ಯದಲ್ಲಿ ನಾನು ವಿಶ್ರಮಿಸಿಕೊಳ್ಳುವಂತೆಯೇ ಇಲ್ಲ. ಅಲ್ಲದೆ ಯಾವುದನ್ನೂ ತಿನ್ನುವಂತೆಯೂ ಇಲ್ಲ. ಎಂದನು. ಅದನ್ನು ಕೇಳಿ ಮೈನಾಕವು ಎಲೈ ಹನುಮಂತನೆ! ನಿನ್ನ ಸ್ಪರ್ಶದಿಂದಲಾದರೂ ನನ್ನನ್ನು ಪುನೀತನನ್ನಾಗಿ ಮಾಡು ಎಂದಿತು.

ತಥೇತಿ ಸ್ಪೃಷ್ಟಶಿಖರಃ ಕರಾಗ್ರೇಣ ಯಯೌ ಕಪಿಃ ।
ಕಿಂಚಿದ್ದೂರಂ ಗತಸ್ಯಾಸ್ಯ ಛಾಯಾಂ ಛಾಯಾಗ್ರಹೋಗ್ರಹೀತ್ ॥ ೧೨ ॥

ಸಿಂಹಿಕಾ ನಾಮ ಸಾ ಘೋರಾ ಜಲಮಧ್ಯೇ ಸ್ಥಿತಾ ಸದಾ ।
ಆಕಾಶಗಾಮಿನಾಂ ಛಾಯಾಮಾಕ್ರಮ್ಯಾಕೃಷ್ಯ ಭಕ್ಷಯೇತ್ ॥ ೧೩ ॥

ತಯಾ ಗೃಹೀತೋ ಹನುಮಾಂಶ್ಚಿಂತಯಾಮಾಸ ವೀರ್ಯವಾನ್ ।
ಕೇನೇದಂ ಮೇ ಕೃತಂ ವೇಗರೋಧನಂ ವಿಘ್ನಕಾರಿಣಾ ॥ ೧೪ ॥

ಏವಂ ವಿಚಿಂತ್ಯ ಹನುಮಾನಧೋ ದೃಷ್ಟಿಂ ಪ್ರಸಾರಯನ್ ।
ತತ್ರ ದೃಷ್ಟ್ವಾ ಸಿಂಹಿಕಾಂ ತಾಂ ತದಾಸ್ಯೇ ನ್ಯಪತತ್ಕಪಿಃ ॥ ೧೫ ॥

---

೧೨. ಆಗ ಹನುಮನು ಹಾಗೆಯೇ ಆಗಲೆಂದು ತನ್ನ ಬೆರಳಿನಿಂದ ಶಿಖರವನ್ನು ಮುಟ್ಟಿ ಮುಂದಕ್ಕೆ ಹೊರಟನು. ಮುಂದಕ್ಕೆ ಸ್ವಲ್ಪದೂರ ಹೋಗಲು ಒಂದು ಛಾಯಾಗ್ರಹವು ಇವನನ್ನು ಛಾಯೆಯಿಂದ ಹಿಡಿಯಿತು.

೧೩. ಅದರ ಹೆಸರು ಸಿಂಹಿಕೆ. ಅದು ಯಾವಾಗಲೂ ನೀರಿನ ಮಧ್ಯದಲ್ಲಿದ್ದುಕೊಂಡು ಇರುವುದು. ಬಹು ಘೋರವಾದುದು. ಆಕಾಶದಲ್ಲಿ ಹೋಗುವ ಪ್ರಾಣಿಗಳ ನೆರಳನ್ನು ಹಿಡಿದು ಆ ಪ್ರಾಣಿಗಳನ್ನು ಕೆಳಕ್ಕೆ ಬೀಳುವಂತೆ ಮಾಡಿ ಅವನ್ನು ತಿನ್ನುವುದು.

೧೪. ಬಲಿಷ್ಠನಾದ ಹನುಮಂತನನ್ನೂ ಆಕೆಯು ಹಿಡಿಯಲು ಹನುಮನು ಆಗ ಯೋಚಿಸಿದನು. ಯಾರು ನನ್ನ ಈ ವೇಗವನ್ನು ತಡೆದು ವಿಘ್ನವನ್ನು ಮಾಡಿದರು ?

೧೫ ಹೀಗೆಂದು ಯೋಚಿಸಿ ಆ ಹನುಮಂತನು ಕೆಳಗೆ ನೋಡಿದನು. ಅಲ್ಲಿ ಸಿಂಹಿಕೆಯನ್ನು ನೋಡಿ ಅವಳ ಬಾಯೊಳಕ್ಕೆ ಬಿದ್ದನು.

ತಸ್ಯಾಂತ್ರಜಾಲಂ ನಿಷ್ಕಾಸ್ಯ ತಾಂ ಹತ್ವಾಗ್ರೇ ಯಯೌ ಪುನಃ ।
ತತೋಽಬ್ಧೇರ್ದಕ್ಷಿಣೇ ಕೂಲೇ ಲಂಕಾಂ ಕೃತ್ವಾ ತು ಪಾರ್ಶ್ವತಃ ॥ ೧೬ ॥

ಪಪಾತ ಪರಲಂಕಾಯಾಂ ತತ್ರ ತಾಂ ರಾವಣಸ್ವಸಾಂ ।
ಕ್ರೌಂಚಾಂ ಹತ್ವಾ ಸಿಂಹಿಕಾವಲ್ಲಂಕಾಂ ರಾತ್ರೌ ವಿವೇಶ ಸಃ ॥ ೧೭ ॥

ತದಾ ಲಂಕಾಪುರೀನಾಮ್ನೀ ರಾಕ್ಷಸೀ ತಂ ವ್ಯತರ್ಜಯತ್ ।
ಹನೂಮಾನಪಿ ತಾಂ ವಾಮಮುಷ್ಟಿನಾವಜ್ಞಯಾಹನತ್ ॥ ೧೮ ॥

ತದಾ ಸ್ಮೃತ್ವಾ ಬ್ರಹ್ಮವಾಕ್ಯಂ ಸಾ ಪ್ರಾಹಾಶ್ರುಮುಖೀ ಪುರೀ ।
ಬ್ರಹ್ಮಣೋಕ್ತಾ ಪುರಾ ಚಾಹಂ ಯದಾ ತ್ವಾಂ ಧರ್ಷಯೇತ್ಕಪಿಃ ॥ ೧೯ ॥

ತದಾ ರಾಮೋ ರಾವಣಸ್ಯ ವಧಾರ್ಥಮತ್ರ ಯಾಸ್ಯತಿ ।
ಜ್ಞಾತಂ ಮಯಾ ರಾವಣಸ್ಯ ವಧಂ ರಾಮಃ ಕರಿಷ್ಯತಿ ॥ ೨೦ ॥

---

೧೬. ಒಡನೆಯೇ ಆಕೆಯ ಕರುಳನ್ನು ಕಿತ್ತು ಹೊರಕ್ಕೆ ಬಿಸುಟು ಅವಳನ್ನು ಕೊಂದು ಮತ್ತೆ ಮುಂದಕ್ಕೆ ಹೊರಟನು. ಮುಂದೆ ಹೋಗಿ ಸಮುದ್ರದ ದಡದಲ್ಲಿ ಲಂಕೆಯನ್ನು ಒಂದು ಪಕ್ಕಕ್ಕೆ ಬಿಟ್ಟುಕೊಂಡು ಇಳಿದನು.

೧೭. ಆ ಲಂಕೆಯ ಹೊರಗಡೆಯಲ್ಲಿ ಅಲ್ಲಿ ರಾವಣನ ತಂಗಿಯಾದ ಕ್ರೌಂಚೆಯೆಂಬುವಳು ತೊಂದರೆಪಡಿಸಲು ಆಕೆಯನ್ನು ಸಿಂಹಿಕೆಯಂತೆ ಕೊಂದು ಲಂಕೆಯನ್ನು ರಾತ್ರಿಯಲ್ಲಿ ಪ್ರವೇಶಿಸಿದನು.

೧೮. ಅಲ್ಲಿ "ಲಂಕಾಪುರಿ'' ಎಂಬ ರಾಕ್ಷಸಿಯು ಆತನನ್ನು ಹೆದರಿಸಿದಳು. ಹನುಮಂತನು ಅವಳನ್ನು ಎಡಗೈಮುಷ್ಟಿಯಿಂದ ಲೀಲಾಜಾಲವಾಗಿ ಹೊಡೆದನು.

೧೯-೨೦. ಆಗ ಲಂಕಿಣಿಯು ಬ್ರಹ್ಮನ ಮಾತನ್ನು ಸ್ಮರಿಸಿಕೊಂಡು ಕಣ್ಣೀರನ್ನು ಬಿಡುತ್ತ ಎಲೈ ಕಪಿಯೆ ! ಬ್ರಹ್ಮನು ನನಗೆ ನಿನ್ನನ್ನು ಕಪಿಯು ತಿರಸ್ಕರಿಸಿ ಸೋಲಿಸಿದಾಗ ರಾಮನು ರಾವಣನನ್ನು ಕೊಲ್ಲುವುದಕ್ಕೆ ಇಲ್ಲಿಗೆ ಬರುವನು. ಎಂದು ಹೇಳಿರುವನು. ಇದರಿಂದ ರಾಮನು ರಾವಣನನ್ನು ಕೊಲ್ಲುವುದಕ್ಕೆ ಬರುವನು ಎಂದು ತಿಳಿಯಿತು.

ಜಿತಂ ತ್ವಯಾ ಗಚ್ಛ ಲಂಕಾಮಶೋಕೇ ಪಶ್ಯ ಜಾನಕೀಂ ।
ತತೋ ವಿವೇಶ ಹನುಮಾಂಲ್ಲಂಕಾಂ ಪಶ್ಯನ್ಯಯೌ ತದಾ ॥ ೨೧ ॥

ದದರ್ಶ ಲಂಕಾಂ ತಾಂ ರಮ್ಯಾಂ ಗೋಪುರಾಟ್ಟಾಲಮಂಡಿತಾಂ ।
ಹಟ್ಟವೀಥೀಚತುಷ್ಕಾಢ್ಯಾಂ ತ್ರಿಕೂಟಶಿಖರಸ್ಥಿತಾಂ ॥ ೨೨ ॥

ಪಶ್ಯನ್ಸಮಂತತಸ್ಸೀತಾಂ ಪ್ರತಿಗೇಹಂ ಸ ಮಾರುತಿಃ ।
ಗುಹಾಯಾಂ ನಿದ್ರಿತಂ ದೃಷ್ಟ್ವಾ ಕುಂಭಕರ್ಣಂ ಭಯಾನಕಂ ॥ ೨೩ ॥

ದೃಷ್ಟ್ವಾ ವಿಭೀಷಣಂ ರಾಮಕೀರ್ತತೇ ಹೃಷ್ಟಮಾನಸಂ ।
ದೃಷ್ಟ್ವಾ ಸುಲೋಚನಾಯುಕ್ತಂ ನಿದ್ರಿತಂ ಮೇಘನಿಸ್ವನಂ ॥ ೨೪ ॥

---

೨೧. ನೀನು ಗೆದ್ದಿದ್ದೀಯೆ. ಲಂಕೆಗೆ ಹೋಗು. ಅಶೋಕವನದಲ್ಲಿ ಜಾನಕಿಯು ಇರುವಳು. ಅಲ್ಲಿ ಆಕೆಯನ್ನು ನೋಡು. ಎನ್ನಲು ಆ ಹನುಮನು ಎಲ್ಲಾ ಕಡೆಯಲ್ಲಿಯೂ ನೋಡುತ್ತ ಲಂಕೆಯನ್ನು ಪ್ರವೇಶಿಸಿದನು.

೨೨. ಆ ಲಂಕೆಯು ಒಳ್ಳೆಯ ಹೆಬ್ಬಾಗಿಲಿನಿಂದಲೂ ಮಹಡಿಯ ಮನೆಗಳಿಂದಲೂ ರಮ್ಯವಾಗಿದ್ದಿತು. ಅಂಗಡಿ ಬೀದಿಗಳು ಚೆನ್ನಾಗಿದ್ದುವು. ತ್ರಿಕೂಟಪರ್ವತದ ಮೇಲಿದ್ದಿತು.

೨೩. ಆ ಊರನ್ನು ಹೊಕ್ಕು ಮಾರುತಿಯು ಒಂದೊಂದು ಮನೆಯಲ್ಲಿಯೂ ಸೀತೆಯನ್ನು ಹುಡುಕಿದನು. ಒಂದು ಗುಹೆಗೆ ಹೋಗಿ ಅಲ್ಲಿ ನಿದ್ದೆಮಾಡುತ್ತಿರುವ ಕುಂಭಕರ್ಣನನ್ನು ನೋಡಿದನು. ಅವನು ಬಹು ಭಯಂಕರನಾಗಿದ್ದನು.

೨೪. ಅಂತೆಯೇ ವಿಭೀಷಣನನ್ನು ನೋಡಿದನು. ಅವನು ರಾಮನನ್ನೇ ಸ್ಮರಿಸುತ್ತ ಅದರಿಂದಲೇ ಸಂತೋಷಪಡುತ್ತಿದ್ದನು. ಅನಂತರ ಮುಂದೆ ಹೋಗಿ ಸುಲೋಚನೆಯೆಂಬ ಹೆಂಡತಿಯೊಡನೆ ಮಲಗಿರುವ ಮೇಘನಾದನನ್ನು ನೋಡಿದನು.

ಯಯೌ ರಾಜಗೃಹಂ ರಾತ್ರೌ ರಾವಣಂ ಸದಸಿ ಸ್ಥಿತಂ ।
ದೃಷ್ಟ್ವಾ ಸ್ವಯಂ ವಾಯುರೂಪೋ ದೀಪರಾಜೀರ್ವ್ಯಲೋಪಯತ್॥ ೨೫ ॥

ಅಕರೋದ್ವಸ್ತ್ರಹೀನಾಂಸ್ತ್ರಾ ರಾವಣಾದೀಂತ್ಸ ಮಾರುತಿಃ ।
ಉಲ್ಮುಕೇನಾಕರೋದ್ಭಸ್ಮ ಕೂರ್ಚಂ ಸ ರಾವಣಸ್ಯ ಚ ॥ ೨೬ ॥

ರಾಕ್ಷಸೀಃ ಕೋಟಿಶೋ ನಗ್ನಾಃ ಕೃತ್ವಾ ತೋಯಘಟೀರ್ಕಪಿಃ ।
ಬಭಂಜ ಲೀಲಯಾ ತೂಷ್ಣೀಂ ದೂತಾನ್ಪುಚ್ಛೇನ ತರ್ಜಯತ್ ॥ ೨೭ ॥

ತದಾತಿವಿಹ್ವಲಾಸ್ಸರ್ವೇ ಪ್ರೋಚುಸ್ತೇಥ ಪರಸ್ಪರಂ ।
ಕ್ರುದ್ಧಾದ್ಯ ಜಾನಕೀ ಸತ್ಯಂ ನಃ ಪ್ರಾಣಾಂತಮುಪಾಗತಂ ॥ ೨೮ ॥

---

೨೫. ಅನಂತರ ರಾತ್ರಿಯಲ್ಲಿಯೇ ಅರಮನೆಗೂ ಹೋದನು. ಅಲ್ಲಿ ರಾವಣನು ಸಭಾಂಗಣದಲ್ಲಿ ಕುಳಿತಿದ್ದನು. ಅವನನ್ನು ನೋಡಿ ತಾನು ವಾಯುವಿನ ರೂಪವನ್ನು ಹೊಂದಿದನು. ಒಡನೆಯೇ ಅಲ್ಲಿದ್ದ ದೀಪಗಳನ್ನು ಆರಿಸಿದನು..

೨೬. ಅಲ್ಲಿದ್ದ ರಾವಣನೇ ಮುಂತಾದವರನ್ನು ವಸ್ತ್ರಹೀನರನ್ನಾಗಿ ಮಾಡಿದನು. ಒಂದು ಕೊಳ್ಳಿಯನ್ನು ತೆಗೆದುಕೊಂಡು ರಾವಣನ ಗಡ್ಡವನ್ನು ಸುಟ್ಟುಬೂದಿಯನ್ನಾಗಿ ಮಾಡಿದನು.

೨೭. ಅನಂತರ ಅಲ್ಲಿದ್ದ ಅನೇಕ ಜನ ರಾಕ್ಷಸಿಯರನ್ನು ಬೆತ್ತಲೆಯಿರುವವರನ್ನಾಗಿ ಮಾಡಿದನು. ಅಲ್ಲಿಟ್ಟುಕೊಂಡಿದ್ದ ನೀರಿನ ಬಿಂದಿಗೆಗಳನ್ನು ಒಡೆದು ಹಾಕಿದನು. ದೂತರನ್ನು ಬಾಲದಿಂದ ಹೊಡೆದು ಹೊರಡಿಸಿದನು.

೨೮. ಆಗ ಎಲ್ಲರೂ ಭಯದಿಂದ ಗಾಬರಿಗೊಂಡವರಾಗಿ ಈಗ ನಿಶ್ಚಯವಾಗಿಯೂ ಜಾನಕಿಯು ಕೋಪಗೊಂಡಿರುವಳು. ಈಗ ನಾವೆಲ್ಲರೂ ಸಾಯುವುದು ಖಂಡಿತ. ಎಂದು ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದರು.

ಶಚ್ಛೃುತ್ವಾ ತುಷ್ಟಚಿತ್ತಸ್ಸ ಯಯೌ ರಾವಣಸದ್ಮಹಂ ।
ಅದೃಷ್ಟ್ವಾ ಜಾನಕೀಂ ತತ್ರ ಯಯೌ ಪುಷ್ಪಕಮುತ್ತಮಂ ॥ ೨೯ ॥

ರಾವಣಂ ನಿದ್ರಿತಂ ದೃಷ್ಟ್ವಾ ವೇಷ್ಟಿತಂ ಸ್ತ್ರೀಕದಂಬಕೈಃ ।
ದೃಷ್ಟ್ವಾ ಮಂಡೋದರೀಂ ತತ್ರ ಸೀತೇಯಮಿತಿ ಶಂಕಿತಃ ॥ ೩೦ ॥

ಲಕ್ಷ್ಮಣೋಕ್ತಾನಿ ಚಿಹ್ನಾನಿ ಪಶ್ಯಂಸ್ತಸ್ಯಾಂ ದದರ್ಶ ನ ।
ತಥಾಪಿ ಸೀತಾ ಸದೃಶೀಂ ದೃಷ್ಟ್ವಾ ವ್ಯಗ್ರಮನಾಸ್ತ್ವಭೂತ್ ॥ ೩೧ ॥

॥ ಪಾರ್ವತ್ಯುವಾಚ ॥

ಕಥಂ ಮಂಡೋದರೀ ಸೀತಾಸದೃಶೀ ರಾಕ್ಷಸೀರಿತಾ ।
ಸೀತಾಂಶಾಂಶಾಂಶಜಾಸ್ಸರ್ವಾಃ ಸ್ತ್ರಿಯಶ್ಚೇತಿ ಶ್ರುತಂ ಮಯಾ ॥ ೩೨ ॥

---

೨೯. ಹನುಮಂತನು ಅದನ್ನು ಕೇಳುತ್ತ ರಾವಣನ ಅಂತಃಪುರಕ್ಕೆ ಹೋದನು. ಅಲ್ಲಿ ಸೀತೆಯು ಕಾಣದಿರಲು ಅಲ್ಲಿಂದ ಮುಂದೆ ಪುಷ್ಪಕಕ್ಕೆ ಹೋದನು.

೩೦. ಅಷ್ಟುವೇಳೆಗೆ ರಾವಣನು ಬಂದು ಮಲಗಿದ್ದನು. ಅವನ ಜೊತೆಯಲ್ಲಿ ಅನೇಕ ಜನ ಹೆಂಗಸರು ಮಲಗಿದ್ದರು. ಅವರೊಳಗೆ ಮಲಗಿದ್ದ ಮಂಡೋದರಿಯನ್ನು ನೋಡಿ ಇವಳು ಸೀತೆಯಿರಬಹುದೆಂದು ಸಂದೇಹಪಟ್ಟನು.

೩೧. ಲಕ್ಷ್ಮಣನು ಸೀತೆಯಲ್ಲಿರುವ ಚಿಹ್ನೆಗಳನ್ನು ಹೇಳಿದ್ದುದನ್ನು ಜ್ಞಾಪಿಸಿಕೊಂಡು ನೋಡಲು ಆ ಮಂಡೋದರಿಯಲ್ಲಿ ಅವುಗಳೊಂದೂ ಕಾಣಲಿಲ್ಲ. ಆದರೂ ಕೂಡ ಅವಳು ಸೀತೆಯಂತೆಯೇ ಇದ್ದುದರಿಂದ ಮನಸ್ಸಿಗೆ ಗಾಬರಿಯಾಯಿತು.

೩೨. ಪಾರ್ವತಿಯು ಹೇಳಿದಳು–ಎಲೈ ಪತಿಯೆ ! ರಾಕ್ಷಸಿಯಾದ ಮಂಡೋದರಿಯು ಸೀತೆಯಂತಿರುವಳೆಂದು ಹೇಳಿದೆಯಲ್ಲಾ ! ಅದು ಹೇಗೆ ? ಸೀತೆಯ ಅಂಶಾಂಶದಿಂದ ಈ ಸ್ತ್ರೀಯರೆಲ್ಲರೂ ಹುಟ್ಟಿರುವರೆಂದು ನೀನು ಹೇಳಿರುವುದನ್ನೇ ನಾನು ಕೇಳಿದ್ದೇನಲ್ಲ!

॥ ಶ್ರೀ ಶಿವ ಉವಾಚ ॥

ಶೃಣುಷ್ವ ಕಾರಣಂ ದೇವಿ ಸೀತೇಯಂ ವಿಷ್ಣುನಾ ಚಿರಾ ।
ತೇನೈವ ವಿಷ್ಣುನಾ ಪೂರ್ವಂ ಇಯಂ ಮಂಡೋದರೀ ಚಿತಾ ॥ ೩೬ ॥

ಏಕದಾ ಕೈಕಸೀ ಮಾತಾ ರಾವಣಂ ಪ್ರಾಹ ದುಃಖಿತಾ ।
ಶೇಷೋಚ್ಛ್ವಾಸೇನ ಮೇ ಲಿಂಗಂ ಗತಂ ಚಾದ್ಯ ರಸಾತಲಂ ॥ ೩೪ ॥

ಶಿವಾದಾನೀಯ ಮಾಂ ದೇಹಿ ಆತ್ಮಲಿಂಗಮನುತ್ತಮಂ ।
ತನ್ಮಾತೃವಚನಂ ಶ್ರುತ್ವಾ ಗಾಯನಾದ್ವರದೋನ್ಮುಖಂ ॥ ೩೫ ॥

ಮಾಮಾಹ ರಾವಣೋ ವಾಕ್ಯಂ ದ್ವೌ ವರೌ ದೇಹಿ ಮಾಂ ಪ್ರಭೋ ।
ಆತ್ಮಲಿಂಗಂ ಚ ಮನ್ಮಾತ್ರೇ ಪತ್ನ್ಯರ್ಥಂ ಪಾರ್ವತೀಂ ಮಮ ॥ ೩೬ ॥

---

೩೩. ಶಿವನು ಹೇಳಿದನು–ಎಲೈ ದೇವಿಯೆ ! ಈ ವಿಷಯದಲ್ಲಿ ಕಾರಣವನ್ನು ಕೇಳು. ಸೀತೆಯನ್ನು ನಿರ್ಮಿಸಿದವನೂ ವಿಷ್ಣುವೇ. ಮಂಡೋದರಿಯನ್ನು ನಿರ್ಮಿಸಿದವನೂ ವಿಷ್ಣುವೆ.

೩೪. ಒಂದುಸಾರಿ ತಾಯಿಯಾದ ಕೈಕಸಿಯು ಮಗನಾದ ರಾವಣನನ್ನು ಕುರಿತು ದುಃಖದಿಂದ ಇಂತೆಂದಳು. ಎಲೈ ರಾವಣನೇ! ಆದಿಶೇಷನು ಉಸಿರು ಬಿಟ್ಟದರಿಂದ ನಾನು ಪೂಜೆಮಾಡುತ್ತಿದ್ದ ಲಿಂಗವು ಪಾತಾಳಕ್ಕೆ ಹೊರಟು ಹೋಯಿತು.

೩೫. ಆದುದರಿಂದ ಶಿವನ ಬಳಿಯಿಂದ ಆತ್ಮಲಿಂಗವನ್ನು ತಂದುಕೊಡು. ಎನ್ನಲು ತಾಯಿಯ ಮಾತನ್ನು ಕೇಳಿ ಆ ಶಿವನಾದ ನನ್ನನ್ನು ಗಾನದಿಂದ ಸ್ತುತಿಸಿದನು. ಆಗ ನಾನು ಪ್ರಸನ್ನನಾಗಿ ಏನುಬೇಕೆಂದು ಕೇಳಿದೆನು.

೩೬. ಆಗ ರಾವಣನು ನನ್ನನ್ನು ಕುರಿತು ಸ್ವಾಮಿ ! ನೀನು ಪ್ರಸನ್ನನಾಗಿದ್ದರೆ ನನ್ನ ತಾಯಿಗೆ ಆತ್ಮಲಿಂಗವನ್ನೂ ನನಗೆ ಹೆಂಡತಿಯನ್ನಾಗಿ ನಿನ್ನ ಪಾರ್ವತಿಯನ್ನೂ ಕೊಡು. ಎಂದು ಎರಡು ವರಗಳನ್ನು ಕೇಳಿದನು.

ತತ್ತಸ್ಯ ವಚನಂ ಶ್ರುತ್ವಾ ತ್ವಂ ದತ್ತಾಸಿ ಗಿರೀಂದ್ರಜೇ ।
ದತ್ವಾತ್ಮಲಿಂಗಂ ಸಂಪ್ರೋಕ್ತೋ ಮಯಾ ತ್ವಂ ಯದಿ ರಾವಣ ॥ ೩೭ ॥

ಮಾರ್ಗೇ ಲಿಂಗಂ ಭೂಮಿಸಂಸ್ಥಂ ಕರೋಷಿ ತರ್ಹ್ಯಹಂ ಪುನಃ ।
ನಾಗ್ರೇ ಗಚ್ಛಾಮಿ ತತ್ಸ್ಥಾನಾತ್ತತ್ರೈವ ಚ ವಸಾಮ್ಯಹಂ ॥ ೩೮ ॥

ತಥೇತಿ ರಾವಣಶ್ಚೋಕ್ತ್ವಾ ದೇವ್ಯಾ ಲಿಂಗೇನ ಸೋ ಯಯೌ ।
ತದಾ ತ್ವಯಾ ಸ್ಮೃತೋ ವಿಷ್ಣುಸ್ತೇನಾಂಗಂ ಚಂದನಾದಿನಾ ॥ ೩೯ ॥

ಕೃತ್ವಾ ಮಂಡೋದರೀಂ ನಾಮ್ನಾಂ ಮಯಹಸ್ತೇರ್ಪಿತಾ ಶುಭಾ ।
ತಾಂ ನಿನಾಯ ಮಯಶ್ಶೀಘ್ರಂ ಪಾತಾಲೇ ಸ್ವೀಯಸದ್ಗೃಹಂ ॥ ೪೦ ॥

---

೩೭. ಆ ರಾವಣನ ಮಾತಿನಂತೆ ಆ ವರಗಳನ್ನು ಕೊಡಲು ನಿನ್ನನ್ನು ಅವನಿಗೆ ಕೊಟ್ಟೆನು. ಅನಂತರ ಆತ್ಮಲಿಂಗವನ್ನೂ ಕೊಟ್ಟು ಆ ರಾವಣನನ್ನು ಕುರಿತು ಇಂತೆಂದು ಹೇಳಿದೆನು.

೩೮. ಎಲೈ ರಾವಣನೆ! ನೀನು ಈ ಲಿಂಗವನ್ನು ತೆಗೆದುಕೊಂಡು ಹೋಗುವಾಗ ಇದನ್ನು ದಾರಿಯಲ್ಲಿ ಎಲ್ಲಿಯಾದರೂ ಇಟ್ಟರೆ ಆಗ ನಾನು ಮುಂದೆ ಹೋಗುವುದಿಲ್ಲ. ಅಲ್ಲಿಯೇ ಇದ್ದುಬಿಡುತ್ತೇನೆ. ಎಂದೆನು.

೩೯. ರಾವಣನು ಹಾಗೆಯೇ ಆಗಲೆಂದು ಹೇಳಿ ದೇವಿಯಾದ ನಿನ್ನನ್ನೂ ಕರೆದುಕೊಂಡು ಆತ್ಮಲಿಂಗವನ್ನೂ ತೆಗೆದುಕೊಂಡು ಹೋದನು. ಆಗ ನೀನು ನಮ್ಮಗಳ ಸ್ಥಿತಿಯು ಹೀಗಾಯಿತಲ್ಲ! ಎಂದು ವಿಷ್ಣುವನ್ನು ಸ್ಮರಿಸಿಕೊಂಡೆ.

೪೦. ಆ ವಿಷ್ಣುವು ಚಂದನದಲ್ಲಿ ಒಂದು ವಿಗ್ರಹವನ್ನು ಮಾಡಿ ಅದಕ್ಕೆ ಮಂಡೋದರಿ ಎಂದು ಹೆಸರಿಟ್ಟು ಮಯನ ಕೈಯ್ಯಲ್ಲಿ ಕೊಟ್ಟನು. ಅವಳನ್ನು ಕರೆದುಕೊಂಡು ಮಯನು ಪಾತಾಳಕ್ಕೆ ಬೇಗನೆ ಹೊರಟುಹೋದನು.

ತತೋ ದ್ವಿಜಸ್ವರೂಪೇಣ ವಿಷ್ಣುಃ ಪ್ರಾಹ ದಶಾನನಂ ।
ಪ್ರತಾರಿತಶ್ಶಿವೇನ ತ್ವಂ ದತ್ವಾ ದುರ್ಗಾಂ ತು ಕೃತ್ರಿಮಾಂ ॥ ೪೧ ॥

ಪಾತಾಲೇ ಮಯಗೇಹೇ ಸಾ ಗೋಪಿತಾಸ್ತಿ ಶಿವೇನ ಹಿ ।
ವಿವಿಚ್ಯಸಿ ತ್ವಂ ಸ್ವರ್ಲೋಕಂ ಭೂರ್ಲೋಕಂ ಚೇತಿ ಶಂಕಯಾ ॥ ೪೨ ॥

ಸ್ವೀಯಂ ಮತ್ವಾ ತು ಪಾತಾಲಂ ತತ್ರ ತ್ವಂ ನ ಗವೇಷ್ಯಸಿ ।
ತ್ಯಜೇಮಾಂ ಕೃತ್ರಿಮಾಂ ದುರ್ಗಾಂ ಪಶ್ಯ ತ್ವಂ ಮಯಸದ್ಮನಿ ॥ ೪೩ ॥

ಗಿರೀಂದ್ರಜಾಂ ಮಹಾರಮ್ಯಾಂ ಪತ್ನೀಂ ಕೃತ್ವಾ ಸುಖಂ ಭಜ ।
ತದ್ವಿಪ್ರವಚನಂ ಸತ್ಯಂ ಮತ್ವಾ ಮಾಮೇತ್ಯ ವೈ ಪುನಃ ॥ ೪೪ ॥

---

೪೧. ಅನಂತರ ವಿಷ್ಣುವು ಬ್ರಾಹ್ಮಣನ ವೇಷವನ್ನು ಹಾಕಿಕೊಂಡು ಈ ಎರಡು ಪದಾರ್ಥಗಳನ್ನೂ ತೆಗೆದುಕೊಂಡು ಹೋಗುತ್ತಿರುವ ರಾವಣನ ಬಳಿಗೆ ಬಂದು ಇಂತೆಂದನು. ಎಲೈ ರಾವಣನೆ! ಶಿವನು ನಿನಗೆ ಮೋಸಮಾಡಿದನು. ಅವನು ಈಕೆಯು ಹೆಂಡತಿಯಾದ ಪಾರ್ವತಿಯೆಂದು ಹೇಳಿ ನಿನಗೆ ಈ ಕೃತ್ರಿಮಳಾದ ಪಾರ್ವತಿಯನ್ನು ಕೊಟ್ಟಿರುವನು.

೪೨. ಪಾರ್ವತಿಯನ್ನು ಆ ಶಿವನು ಪಾತಾಳಲೋಕದಲ್ಲಿ ಮಯನ ಮನೆಯಲ್ಲಿ ಮುಚ್ಚಿಟ್ಟಿರುವನು. ನೀನು ಸ್ವರ್ಗವನ್ನೂ ಭೂಲೋಕವನ್ನೂ ಹುಡುಕಿ ತನ್ನ ಹುಳುಕನ್ನು ತಿಳಿಯುತ್ತೀಯೆ. ಎಂದು ತಿಳಿದು ಹಾಗೆ ಮಾಡಿರುವನು.

೪೩. ನೀನು ಪಾತಾಳಲೋಕವು ನನ್ನದೇ ಎಂದು ತಿಳಿದು ಅಲ್ಲಿ ಹುಡುಕಲು ಹೋಗುವುದಿಲ್ಲ. ಎಂದು ತಿಳಿದು ಅಲ್ಲಿಟ್ಟಿರುವನು. ಈ ಕಪಟ ರೂಪಿಣಿಯಾದ ದುರ್ಗೆಯನ್ನು ಬಿಟ್ಟುಬಿಡು. ಆ ಸರಿಯಾದ ಪಾರ್ವತಿಯನ್ನು ಪಾತಾಳದಲ್ಲಿ ಮಯನ ಮನೆಯಲ್ಲಿ ನೋಡು. ಅಲ್ಲಿರುವಳು.

೪೪. ಬಹು ಸುಂದರವತಿಯಾದ ಆ ಪರ್ವತಪುತ್ರಿಯನ್ನು ಹೆಂಡತಿಯನ್ನಾಗಿ ಮಾಡಿಕೊಂಡು ಬಹುವಾದ ಸುಖವನ್ನು ಹೊಂದು. ಎನ್ನಲು ಆ ಬ್ರಾಹ್ಮಣನ ಮಾತನ್ನು ಕೇಳಿ ಅದನ್ನು ನಿಜವೆಂದು ತಿಳಿದು ಮತ್ತೆ ನನ್ನ ಬಳಿಗೆ ಬಂದನು.

ವಿಹಸ್ಯ ರಾವಣಃ ಪ್ರಾಹ ಜ್ಞಾತಂ ತೇಂತರ್ಗತಂ ಮಯಾ ।
ಅರ್ಪಿತಾ ಕೃತ್ರಿಮಾ ದೇವೀ ಮಾಂ ತಾಂ ಗೋಪ್ಯ ರಸಾತಲೇ ॥ ೪೫ ॥

ತನ್ನೈವಾಸ್ತ್ವಧುನಾ ಚೇಯಂ ತ್ವಹಂ ನೇಷ್ಯಾಮಿ ಗೋಪಿತಾಂ ।
ಇತ್ಯುಕ್ತ್ವಾ ತಾಂ ವಿಸೃಜ್ಯಾಥ ಪಾತಾಲಂ ಗಂತುಮುದ್ಯತಃ ॥ ೪೬ ॥

ತಾವನ್ಮಾರ್ಗೇ ಹ್ಯಲ್ಪಶಂಕಾಗ್ರಸ್ತಃ ಪ್ರಾಹ ದ್ವಿಜಂ ತಥಾ ।
ಆತ್ಮಲಿಂಗಂ ಕ್ಷಣಂ ಹಸ್ತೇ ಗೃಹ್ಣೀಷ್ವ ವಚನಾನ್ಮಮ ॥ ೪೭ ॥

ಯಾವನ್ನಿರ್ವರ್ತ್ಯ ಶಂಕಾಂ ತ್ವಾಮುಪನೇಷ್ಯಾಮಿ ವೇಗತಃ ।
ದ್ವಿಜವೇಷಧರೋ ವಿಷ್ಣುಸ್ತದಾ ಪ್ರಾಹ ದಶಾನನಂ ॥ ೪೮ ॥

---

೪೫. ಆಗ ನನ್ನನ್ನು ಹಾಸ್ಯಮಾಡಿ ನಗುತ್ತ ಎಲೈ ಶಿವನೆ! ನಿನ್ನ ಗುಟ್ಟು ನನಗೆ ತಿಳಿಯಿತು. ಆ ದೇವಿಯನ್ನು ಪಾತಾಳದಲ್ಲಿ ಬಚ್ಚಿಟ್ಟು ಈ ಕೃತ್ರಿಮ ದೇವಿಯನ್ನು ಕೊಟ್ಟಿರುವೆಯಲ್ಲ! ಈಕೆಯು ನನಗೆ ಬೇಡ.

೪೬. ಈಕೆಯನ್ನು ನೀನೇ ತೆಗೆದುಕೊ. ನೀನು ಮುಚ್ಚಿಟ್ಟಿರುವ ಆಕೆಯನ್ನು ನಾನು ತೆಗೆದುಕೊಂಡು ಹೋಗುತ್ತೇನೆ. ಎಂದು ಹೇಳಿ ಆ ನಿನ್ನನ್ನು ನನಗೆ ಕೊಟ್ಟುಬಿಟ್ಟು ಪಾತಾಳಕ್ಕೆ ಹೊರಡಲು ಪ್ರಯತ್ನಿಸಿದನು.

೪೭. ಅಷ್ಟರಲ್ಲಿ ಜಲಬಾಧೆಗೆ ಹೋಗಲು ಅವಸರವಾಯಿತು. ಆಗ ಆ ಬ್ರಾಹ್ಮಣನನ್ನು ಕುರಿತು ಇಂತೆಂದನು ಎಲೈ ಬ್ರಾಹ್ಮಣನೆ! ಈ ಆತ್ಮಲಿಂಗವನ್ನು ಒಂದು ಕ್ಷಣಕಾಲ ಹಿಡಿದುಕೊ.

೪೮. ನಾನು ಜಲಬಾಧೆಯನ್ನು ನಿವೃತ್ತಿಕೊಂಡು ಬೇಗನೆ ನಿನ್ನ ಬಳಿಗೆ ಬಂದು ಈ ಲಿಂಗವನ್ನು ತೆಗೆದುಕೊಳ್ಳುತ್ತೇನೆ ಎನ್ನಲು ದ್ವಿಜನರೂಪಿನ ವಿಷ್ಣುವು ದಶಾನನನನ್ನು ಕುರಿತು ಇಂತೆಂದನು.

ಅತಿಕ್ರಾಂತೇ ಮುಹೂರ್ತೇಽಥ ಲಿಂಗಂ ಸ್ಥಾಪ್ಯ ವ್ರಜಾಮ್ಯಹಂ ।
ತಥೇತಿ ರಾವಣಶ್ಚೋಕ್ತ್ವಾ ತತ್ಕರೇ ಲಿಂಗಮರ್ಪಯತ್ ॥ ೪೯ ॥

ತತೋ ಮೂತ್ರಸ್ಯ ಸಾ ಧಾರಾಽಖಂಡಿತಾಭೂಚ್ಚಿರಂ ಪ್ರಿಯೇ ।
ಅತಿಕ್ರಾಂತೇ ಮುಹೂರ್ತೇಽಥ ಲಿಂಗಂ ಸಾಗರರೋಧಸಿ ॥ ೫೦ ॥

ಪಶ್ಚಿಮೇ ಸ್ಥಾಪ್ಯ ಭೂಮ್ಯಾಂ ಸ ಯಯೌ ಸ್ವೀಯಸ್ಥಲಂ ಹರಿಃ ।
ತತಸ್ಸ ರಾವಣಶ್ಚಾಪಿ ಮೂತ್ರಂ ಕೃತ್ವಾ ಯಥಾವಿಧಿ ॥ ೫೧ ॥

ಲಿಂಗಂ ದೃಷ್ಟ್ವಾ ಭೂಮಿಸಂಸ್ಥಂ ತಚ್ಛಿರಶ್ಚಾಲಯತ್ತದಾ ।
ತದಾ ಭೂಮ್ಯಾಂ ಗತಂ ಲಿಂಗಂ ಶಿರಃ ಕಿಂಚಿಚ್ಚಚಾಲ ನ ॥ ೫೨ ॥

---

೪೯. ಅಯ್ಯಾ, ಹಾಗೆಯೇ ಆಗಲಿ! ನಾನು ಒಂದು ಮುಹೂರ್ತಕಾಲ ನೀರಿಕ್ಷಿಸುತ್ತಿರುವೆನು. ಅಷ್ಟರಲ್ಲಿ ನೀನು ಬಾರದಿದ್ದರೆ ಇಲ್ಲಿ ಈ ಲಿಂಗವನ್ನಿಟ್ಟು ನಾನು ಹೊರಟು ಹೋಗುತ್ತೇನೆ. ಎನ್ನಲು ರಾವಣನು ಹಾಗೆಯೇ ಆಗಲೆಂದು ಅವನ ಕೈಯ್ಯಲ್ಲಿ ಆ ಲಿಂಗವನ್ನು ಕೊಟ್ಟನು.

೫೦. ಅನಂತರ ಜಲಬಾಧೆಗೆ ಹೋಗಲು ಆ ಮೂತ್ರಧಾರೆಯು ಅಖಂಡಿತವಾಗಿ ಬಹುಕಾಲ ಬಂದಿತು. ಆಗ ಒಂದು ಮುಹೂರ್ತವು ಕಳೆಯಲು ಆ ಬ್ರಾಹ್ಮಣನು ಆ ಲಿಂಗವನ್ನು ಸಾಗರದ ಪಶ್ಚಿಮ ದಡದಲ್ಲಿಟ್ಟು ಹೊರಟು ಹೋದನು.

೫೧-೫೨. ಅನಂತರ ರಾವಣನು ಜಲಬಾಧೆಯನ್ನು ನಿವೃತ್ತಿಮಾಡಿಕೊಂಡು ಶುಚಿಯಾಗಿ ಬಂದು ನೋಡಲು ಆ ಲಿಂಗವು ನೆಲದಮೇಲೆ ಇಡಲ್ಪಟ್ಟಿದ್ದಿತು. ಆಗ ತೆಗೆದುಕೊಳ್ಳಲು ಹೋಗಿ ಅದರ ತಲೆಯನ್ನು ಅಲ್ಲಾಡಿಸಲು ಆ ಲಿಂಗವು ಭೂಮಿಯೊಳಕ್ಕೆ ಹೋಗಿದ್ದುದರಿಂದ ತಲೆಯು ಅಲ್ಲಾಡಲೇ ಇಲ್ಲ.

ಅಭೂದ್ಗರ್ತಾ ಕರ್ಣರಂಧ್ರಸದೃಶೀ ತಚ್ಛಿರಸ್ಥಲೇ ।
ಗರ್ತಾಯಾಂ ತಚ್ಛಿರಶ್ಚಾಪಿ ಕರ್ಣಶಂಕೂಪಮಂ ಕೃಶಂ ॥ ೫೩ ॥

ಭುವಃ ಕರ್ಣೋಪಮಂ ಲಿಂಗಂ ಗೋಕರ್ಣಂ ತದ್ವದಂತಿ ಹಿ ।
ತತಃ ಖಿನ್ನಮನಾಸ್ತೂಷ್ಣೀಂ ಪಾತಾಲಂ ರಾವಣೋ ಯಯೌ ॥ ೫೪ ॥

ಮಯಗೇಹೆ ನಿರೀಕ್ಷ್ಯಾಥ ದೇವೀಂ ಮಂಡೋದರೀಂ ವರಾಂ ।
ಮಯಂ ಸಂಪ್ರಾರ್ಥಯಾಮಾಸ ದದೌ ತಾಂ ರಾವಣಾಯ ಸಃ ॥ ೫೫ ॥

ತತೋ ವಿವಾಹಂ ನಿರ್ವರ್ತ್ಯ ಪಾರಿಬರ್ಹಂ ದದೌ ಮಯಃ ।
ರಾವಣಾಯ ದೃಢಾಂ ಶಕ್ತಿಮಮೋಘಾಂ ಶತ್ರುಘಾತಿನೀಂ ॥ ೫೬ ॥

೫೩–೫೪. ಅವನು ಹಿಡಿದುಕೊಂಡು ಎಳೆದ ಜಾಗದಲ್ಲಿ ತಲೆಯ ಬಳಿಯಲ್ಲಿ ಎರಡು ಕಡೆಯೂ ಎರಡು ಹಳ್ಳಗಳಾದುವು. ಅವು ಕಿವಿಯಂತಿದ್ದುವು. ಕಿವಿಗಳಂತೆ ಎರಡು ಚಿಕ್ಕಗಳು ಮೇಲಕ್ಕೆ ಕಾಣುತ್ತ ಆ ಸಳ್ಳಪ್ರದೇಶದಲ್ಲಿ ತಲೆಯು ಇದ್ದಿತು. ಆ ಲಿಂಗವು ಭೂಮಿಯಲ್ಲಿ ಕಿವಿಯಂತೆ ಇದ್ದುದರಿಂದ ಅದನ್ನು ಗೋಕರ್ಣವೆಂದು ಎಲ್ಲರೂ ಕರೆದರು. ಇದನ್ನು ನೋಡಿ ರಾವಣನು ಖಿನ್ನಮನಸ್ಕನಾಗಿ ಪಾತಾಳಲೋಕಕ್ಕೆ ಹೋದನು.

೫೫. ಮಯನ ಮನೆಯಲ್ಲಿ ಸುಂದರಿಯಾದ ಮಂಡೋದರಿಯನ್ನು ನೋಡಿ ಮಯನನ್ನು ಕೇಳಲು ಅವನು ರಾವಣನಿಗೆ ಆಕೆಯನ್ನು ಕೊಟ್ಟನು.

೫೬. ಆ ಮಯನು ಅವಳನ್ನು ವಿವಾಹರೂಪದಲ್ಲಿ ಆ ರಾವಣನಿಗೆ ಕೊಟ್ಟು ಅನೇಕವಾದ ಉಡುಗೆರೆಗಳನ್ನು ಕೊಟ್ಟನು. ಅಲ್ಲದೆ ಆ ಮಯನು ರಾವಣನಿಗೆ ಒಂದು ಉತ್ತಮೋತ್ತಮವಾದ ಶತ್ರುಘಾತಕವಾದ ಶಕ್ತ್ಯಾಯುಧವನ್ನೂ ಕೊಟ್ಟನು.

ದೃಷ್ಟ್ವಾ ಮಂದೋದರಂ ತಸ್ಯಾಃ ಪ್ರಾಹ ಮಂದೋದರೀಮಿತಿ ।
ತಾಂ ನಾಮ್ನಾ ರಾವಣಸ್ತುಷ್ಟಸ್ತಯಾ ಸ್ವೀಯಸ್ಥಲಂ ಯಯೌ ॥ ೫೭ ॥

ತತೋ ಮಾತ್ರಾ ಧಿಕ್ಕೃತಸ್ಸ ಪುನಸ್ತಪ್ತುಂ ತ್ವರಾನ್ವಿತಃ ।
ಗೋಕರ್ಣಂ ರಾವಣೋ ಗತ್ವಾ ತಪ್ತ್ವಾ ಲಬ್ಧ್ವಾ ವಿಧೇರ್ವರಾನ್ ॥ ೫೮ ॥

ತ್ರೈಲೋಕ್ಯಂ ಸ್ವವಶಂ ಕೃತ್ವಾ ಲಂಕಾಯಾಂ ರಾಜ್ಯಮಾಪ ಸಃ ।
ತಸ್ಮಾತ್ಸೀತಾಸಮಾನೇಯಂ ದೃಷ್ಟಾ ಮಂದೋದರೀ ಪ್ರಿಯೇ ॥ ೫೯ ॥

ಲಂಕಾಯಾಂ ವಾಯುಪುತ್ರೇಣ ರಾವಣಾಗ್ರೇ ವಿನಿದ್ರಿತಾ ।
ಮಯೋಪ್ಯಾಗಾತ್ಸ ಲಂಕಾಯಾಂ ಗೃಹಂ ಕೃತ್ವಾ ಯಥಾಸುಖಂ ॥ ೬೦ ॥

---

೫೭. ಆ ಹುಡುಗಿಗೆ ಹೊಟ್ಟೆಯು ಮಂದವಾಗಿದ್ದುದರಿಂದ ಆಕೆಯನ್ನು ಮಂಡೋದರಿಯೆಂದು ಹೆಸರಿಟ್ಟು ಕರೆದರು. ಇದರಿಂದ ರಾವಣನು ತುಷ್ಟನಾಗಿ ಆಕೆಯನ್ನು ಕರೆದುಕೊಂಡು ತನ್ನ ಸ್ಥಳವಾದ ಲಂಕೆಗೆ ಹೊರಟು ಹೋದನು.

೫೮. ತಾಯಿಗೆ ಎಲ್ಲವನ್ನೂ ಹೇಳಲು ತಾಯಿಯು ಅವನನ್ನು ನಿಂದಿಸಿದಳು. ಅನಂತರ ರಾವಣನು ಮತ್ತೆ ತಪಸ್ಸನ್ನು ಮಾಡಲು ಗೋಕರ್ಣಕ್ಕೆ ಹೋಗಿ ಬಹುವಾಗಿ ತಪಸ್ಸುಮಾಡಿ ಬ್ರಹ್ಮನಿಂದ ವರವನ್ನು ಪಡೆದನು.

೫೯. ಆ ವರದಿಂದ ಮೂರು ಲೋಕಗಳನ್ನೂ ತನ್ನ ಅಧೀನವನ್ನಾಗಿ ಮಾಡಿಕೊಂಡು ಲಂಕೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರಮಾಡಿದನು. ಎಲೈ ಪಾರ್ವತಿಯೆ! ಆದುದರಿಂದಲೇ ಮಂಡೋದರಿಯು ಸೀತೆಯಂತೆ ಕಂಡು ಬಂದಳು.

೬೦. ಈ ರೀತಿಯಾಗಿದ್ದ ರಾವಣನ ಬಳಿಯಲ್ಲಿ ನಿದ್ದೆಮಾಡುತ್ತಿದ್ದ ಆ ಮಂಡೋದರಿಯನ್ನು ವಾಯುಪುತ್ರನು ನೋಡಿದನು. ಮಯನೂ ಕೂಡ ಲಂಕೆಯಲ್ಲಿಯೇ ಮನೆಯನ್ನು ಮಾಡಿಕೊಂಡು ಸುಖವಾಗಿದ್ದನು.

ಮಯಬಂಧುರ್ಗಯೋ ನಾಮ ಮಹಾನ್ವೀರಃ ಪ್ರತಾಪವಾನ್ ।
ರಾತ್ರೌ ವಿನಿದ್ರಿತೋ ಗೇಹೇ ಬ್ರಹ್ಮದತ್ತ ವರಾತ್ಸುಧೀಃ ॥ ೬೧ ॥

ದಶಾಸ್ಯಹಸ್ತಾತ್ತನ್ಮೃತ್ಯುರ್ವಿಧಿನೋಕ್ತಂ ವಿಚಿಂತ್ಯ ಚ ।
ತಸ್ಯ ವಸ್ತ್ರಂ ಮಾರುತಿನಾ ಹೃತಂ ಸದಸಿ ವೈ ಪುರಾ ॥ ೬೨ ॥

ಪ್ರಕ್ಷಿಪದ್ಧೇಮ ಪರ್ಯಂಕೇ ರಾವಣಸ್ಯ ಕಪಿಸ್ತದಾ ।
ವಿಭೀಷಣಸ್ಯ ಪರ್ಯಂಕೇ ವಸನಂ ರಾವಣಸ್ಯ ಚ ॥ ೬೩ ॥

ಕ್ಷಿಪ್ತ್ವಾ ಪರ್ಶ್ಯ ಜಾನಕೀಂ ಸ ಲಂಕಾಯಾಂ ಚ ಮುಹುಃ ಕಪಿಃ ।
ಯಯಾವಶೋಕವನಿಕಾಂ ವೃಕ್ಷಪ್ರಾಸಾದಮಂಡಿತಾಂ ॥ ೬೪ ॥

---

೬೧. ಮಯನ ಸಹೋದರನಾದ ಗಯನೆಂಬುವನೊಬ್ಬನಿದ್ದನು. ಅವನು ಬಹು ವೀರನು. ಪ್ರತಾಪಿಯು. ಅವನು ಬ್ರಹ್ಮನಿಂದ ವರವನ್ನು ಪಡೆದಿದ್ದನು. ಇವನು ಆ ರಾತ್ರಿಯಲ್ಲಿ ಸುಖವಾಗಿ ಮನೆಯಲ್ಲಿ ಮಲಗಿದ್ದನು.

೬೨. ಈ ಗಯನಿಗೆ ದಶಾಸ್ಯನ ಕೈಯ್ಯಲ್ಲಿ ಮೃತ್ಯುವು ಇದೆಯೆಂದು ಬ್ರಹ್ಮನು ಹೇಳಿದ್ದನೆಂದು ಈ ಹನುಮಂತನು ತಿಳಿದಿದ್ದನು. ರಾತ್ರಿಯಲ್ಲಿ ಸಭೆಯಲ್ಲಿ ವಾಯುರೂಪದಿಂದ ಇವನ ಬಟ್ಟೆಯನ್ನೂ ಅಪಹರಿಸಿದ್ದನು.

೬೩-೬೪. ಆ ಗಯನ ವಸ್ತ್ರಗಳನ್ನು ರಾವಣನ ಉತ್ತಮೋತ್ತಮವಾದ ಮಂಚದಮೇಲೆ ಹಾಕಿದನು. ವಿಭೀಷಣನ ಮಂಚದಮೇಲೆ ರಾವಣನ ಬಟ್ಟೆಗಳನ್ನೂ ಹಾಕಿದನು. ಹೀಗೆ ಅಸ್ತವ್ಯಸ್ತಮಾಡುತ್ತ ಜಾನಕಿಯನ್ನು ಲಂಕೆಯಲ್ಲೆಲ್ಲಾ ಹುಡುಕಿದನು. ಅನಂತರ ಮರಗಳ ಮಧ್ಯದಲ್ಲಿ ಮನೆಗಳೂ ಇದ್ದ ಅಶೋಕವನಕ್ಕೆ ಹೋದನು.

ದದರ್ಶ ತತ್ರ ಪ್ರಾಸಾದಂ ಶಿಂಶುಪಾನಾಮ ಪಾದಪಂ ।
ತನ್ಮೂಲೇ ರಾಕ್ಷಸೀಮಧ್ಯೇ ದದರ್ಶಾವನಿಕನ್ಯಕಾಂ ॥ ೬೫ ॥

ಏಕವೇಣೀಂ ಕೃಶಾಂ ದೀನಾಂ ಮಲಿನಾಂಬರಧಾರಿಣೀಂ ।
ಭೂಮೌ ಶಯಾನಾಂ ಶೋಚಂತೀಂ ರಾಮರಾಮೇತಿ ಭಾಷಿಣೀಂ ॥ ೬೬ ॥

ಕೃತಾರ್ಥೋಽಹಮಿತಿ ಪ್ರಾಹ ದೃಷ್ಟ್ವಾ ಸೀತಾಂ ಸ ಮಾರುತಿಃ ।
ಶಿಂಶಿಪಾನಗಶಾಖಾಗ್ರಮುಪಲಾಭ್ಯಾಂತರಸ್ಥಿತಃ ॥ ೬೭ ॥

ಪುರಾ ದೃಷ್ಟಾ ನಲಂಕಾರಾನ್ ತಸ್ಯಾ ದೇಹೇ ದದರ್ಶ ನ ।
ತತಃ ಕಿಲಕಿಲಾಶಬ್ದೈರ್ಯಯೌ ತತ್ರ ದಶಾನನಃ ॥ ೬೮ ॥

---

೬೫. ಆ ಮರಗಳೊಳಗೆ ಶಿಂಶುಪವೆಂಬ ಮರವೊಂದಿದ್ದಿತು. ಅಲ್ಲಿ ಒಂದು ಮನೆಯೂ ಇದ್ದಿತು. ಆ ಶಿಂಶುಪವೃಕ್ಷದ ಬುಡದಲ್ಲಿ ರಾಕ್ಷಸಿಯರ ಮಧ್ಯದಲ್ಲಿ ಭೂಮಾತೆಯ ಪುತ್ರಿಯಾದ ಸೀತೆಯನ್ನು ನೋಡಿದನು.

೬೬. ಆಕೆಯು ತಲೆಗೂದಲನ್ನು ಒಂದೇ ಜಡೆಯನ್ನಾಗಿ ಮಾಡಿಕೊಂಡಿದ್ದಳು. ದುಃಖಿನಿಯಾಗಿದ್ದಳು. ಕೃಶಳಾಗಿದ್ದಳು. ಕೊಳೆಯ ಬಟ್ಟೆಯನ್ನು ಧರಿಸಿದ್ದಳು. ನೆಲದಮೇಲೆ ಮಲಗಿದ್ದಳು. ಅಳುತ್ತಿದ್ದಳು. ಯಾವಾಗಲೂ ರಾಮ ರಾಮ ಎಂದೆನ್ನುತ್ತಿದ್ದಳು.

೬೭. ಆ ಸೀತೆಯನ್ನು ನೋಡಿ ಮಾರುತಿಯು ನಾನು ಕೃತಾರ್ಥನಾದೆನೆಂದು ಎಂದುಕೊಂಡನು. ಆಗ ಶಿಂಶುಪಾಮರದ ಕೊಂಬೆಯನ್ನು ಹಿಡಿದುಕೊಂಡು ಅದರಲ್ಲಿ ಅಡಗಿದವನಾಗಿ ಅವಿತುಕೊಂಡನು.

೬೮. ಹಿಂದೆ ಧರಿಸಿದ್ದ ಅಲಂಕಾರಗಳಾವುವೂ ಅವಳ ಮೈಮೇಲಿರಲಿಲ್ಲ. ಹೀಗೆ ನೋಡುತ್ತಿರಲು ಕಲಕಲ ಶಬ್ದವನ್ನು ಮಾಡುತ್ತ ದಶಾನನನು ಅಲ್ಲಿಗೆ ಬಂದನು.

ದದರ್ಶ ರಾವಣಸ್ಸ್ವಪ್ನೇ ಕಪಿಃ ಕಶ್ಚಿತ್ಸಮಾಗತಃ ।
ಅಶೋಕವನಿಕಾಯಾಂ ಸಾ ದೃಷ್ಟಾ ತೇನ ವಿದೇಹಜಾ ॥ ೧೯ ॥

ರಾಮಹಸ್ತಾನ್ಮೃತಿಶ್ಶೀಘ್ರಂ ಲಬ್ಧುಂ ತಾಂ ಧರ್ಷಯಾಮ್ಯಹಂ ।
ಕಪಿರ್ದೃಷ್ಟ್ವಾ ರಾಘವಾಯ ನಿವೇದಯತು ಮತ್ಕೃತಂ ॥ ೨೦ ॥

ಆಗಮಿಷ್ಯತಿ ತಚ್ಛ್ರುತ್ವಾ ರಾಮೋ ಮಾಂ ನಿಹನಿಷ್ಯತಿ ।
ಇತಿ ನಿಶ್ಚಿತ್ಯ ಸ ಯಯೌ ಸ್ತ್ರೀಭಿಸ್ಸಂವೇಷ್ಟಿತೋ ಮುದಾ ॥ ೨೧ ॥

ನೂಪುರಾಣಾಂ ಧ್ವನಿಂ ಶ್ರುತ್ವಾ ವಿಹ್ವಲಾಸೀದ್ವಿದೇಹಜಾ ।
ರಾವಣೋ ಜಾನಕೀಮಾಹ ಮಾಂ ದೃಷ್ಟ್ವಾ ಕಿಂ ವಿಲಜ್ಜಸೇ ॥ ೨೨ ॥

---

೧೯. ಆಗ ತಾನೇ ರಾವಣನು ಮಲಗಿದ್ದಾಗ ಸ್ವಪ್ನದಲ್ಲಿ ಒಂದು ಕಪಿಯು ಬಂದಿದ್ದಂತೆ ನೋಡಿದನು. ಅನಂತರ ಅಶೋಕವನದಲ್ಲಿರುವ ಸೀತೆಯನ್ನು ನೋಡಲು ಅಲ್ಲಿಗೆ ಬಂದನು.

೨೦. ಆಗ ರಾವಣನು ರಾಮನ ಕೈಯ್ಯಿಂದ ಮರಣವನ್ನು ಬೇಗನೆ ಅಪೇಕ್ಷಿಸಿ ಸೀತೆಯನ್ನು ತಿರಸ್ಕರಿಸಲು ಬಂದನು. ಮತ್ತು ಆ ಕಪಿಯು ಇದನ್ನು ನೋಡಿ ನಾನು ಮಾಡಿದ ಕೆಲಸವನ್ನೆಲ್ಲಾ ರಾಮನಿಗೆ ಹೇಳಲಿ. ಎಂದೂ ಬಂದನು.

೨೧. ನಾನು ಮಾಡಿದ ತಿರಸ್ಕಾರವನ್ನು ಈ ಕಪಿಯಿಂದ ಕೇಳಿ ರಾಮನು ಬಂದು ನನ್ನನ್ನು ಕೊಲ್ಲುವನು. ಎಂಬುದಾಗಿ ನಿಶ್ಚಯಿಸಿಕೊಂಡು ಹೆಂಗಸರಿಂದ ಕೂಡಿಕೊಂಡು ಆ ರಾವಣನು ಅಲ್ಲಿಗೆ ಬಂದನು.

೨೨. ಕಾಲುಬಳೆಗಳ ಮತ್ತು ಮಿಂಚುಗಳ ಶಬ್ದವನ್ನು ಕೇಳಿ ಸೀತೆಯು ಬಹು ಭಯಗೊಂಡಳು. ಆಗ ರಾವಣನು ಜಾನಕಿಯನ್ನು ನೋಡಿ ಎಲೈ ಜಾನಕಿಯೆ ! ನನ್ನನ್ನು ನೋಡಿ ಏಕೆ ನಾಚಿಕೆಗೊಳ್ಳುತ್ತೀಯೆ !

ರಾಮಂ ವನಚರಂ ರಾಜ್ಯಭ್ರಷ್ಟಂ ತ್ಯಕ್ತಸುಹೃಜ್ಜನಂ ।
ಪಿತ್ರಾ ಹೀನಂ ಭೋಗಹೀನಂ ಸದಾ ತ್ವಯ್ಯತಿನಿಷ್ಠುರಂ ॥ ೭೩ ॥

ಏಕಾಂತವಾಸಿನಂ ಪಿಂಗಜಟಾವಲ್ಕಲಧಾರಿಣಂ ।
ತಂ ತ್ಯಕ್ತ್ವಾ ಮಾಂ ಭಜಸ್ವಾದ್ಯ ತ್ರೈಲೋಕ್ಯೇಶಂ ಮಹಾಬಲಂ ॥ ೭೪ ॥

ಅಪ್ಸರೋಭಿಸ್ಸೇವಿತಂ ಮಾಂ ಭಾಗ್ಯಯುಕ್ತಂ ಪದಸ್ಥಿತಂ ।
ಸ್ತ್ರೀಯೋ ಮಂಡೋದರೀಮುಖ್ಯಸ್ತ್ವಾಂ ಭಜಿಷ್ಯಂತಹರ್ನಿಶಂ ॥ ೭೫ ॥

ಮಯಾ ರಾಜ್ಯಂ ತ್ವದಧೀನಂ ಕೃತಮಸ್ತಿ ಭಜಸ್ವ ಮಾಂ ।
ಮಯಾ ಸ್ವಜೀವಿತಂ ಚಾಪಿ ತ್ವದಧೀನಂ ಕೃತಂ ಮಹತ್ ॥ ೭೬ ॥

---

೭೩. ರಾಮನು ಕಾಡಿನಲ್ಲಿ ಓಡಾಡುತ್ತಿರುವನು. ರಾಜ್ಯದಿಂದ ಭ್ರಷ್ಟನಾಗಿರುವನು. ಸ್ನೇಹಿತರೆಲ್ಲರೂ ಅವನನ್ನು ಬಿಟ್ಟಿರುವರು. ಅವನಿಗೆ ತಂದೆಯೂ ಇಲ್ಲ. ಸುಖವೆಂಬುದನ್ನೇ ಕಾಣನು. ನಿನ್ನ ವಿಷಯದಲ್ಲಿ ಬಹು ನಿಷ್ಠುರವಾಗಿರುವನು.

೭೪. ಒಬ್ಬರ ಜೊತೆಯನ್ನೂ ಸೇರದೆ ಯಾವಾಗಲೂ ಒಬ್ಬಂಟಿಗನಾಗಿರುವನು. ತಲೆಯಾದರೋ ಜಡೆಕಟ್ಟಿಕೊಂಡು ಹೊಂಬಣ್ಣವಾಗಿ ಹೋಗಿರುವುದು. ನಾನು ಮೂರು ಲೋಕಕ್ಕೂ ಒಡೆಯನಾಗಿ ಮಹಾ ಬಲಿಷ್ಠನಾಗಿರುವೆನು. ಆ ನೀಚನಾದ ರಾಮನನ್ನು ಬಿಟ್ಟು ನನ್ನನ್ನು ಹೊಂದಿ ಸುಖಿಸು.

೭೫. ನನ್ನನ್ನು ಅಪ್ಸರರೂ ಸೇವಿಸುತ್ತಿರುವರು. ಬೇಕಾದಂತೆ ಭಾಗ್ಯವಿರುವುದು. ಉತ್ತಮವಾದ ಅಧಿಕಾರವಿದೆ. ಮಂಡೋದರಿಯೇ ಮುಂತಾದ ಹೆಂಗಸರು ನಿನ್ನನ್ನು ಹಗಲೂ ರಾತ್ರಿಯೂ ಸೇವಿಸುವರು.

೭೬. ನಾನು ನನ್ನ ರಾಜ್ಯವನ್ನೆಲ್ಲಾ ನಿನ್ನ ಅಧೀನವನ್ನಾಗಿಯೇ ಮಾಡುತ್ತೇನೆ. ನನ್ನನ್ನು ಸೇವಿಸು. ನಾನು ನನ್ನ ಜೀವಿತವನ್ನೇ ನಿನ್ನ ಅಧೀನವನ್ನಾಗಿ ಮಾಡಿದ್ದೇನೆ.

ಇತಿ ನಾನಾವಿಧೈರ್ವಾಕ್ಯೈಃ ಪ್ರಾರ್ಥಯಾಮಾಸ ರಾವಣಃ ।
ಉವಾಚಾಧೋಮುಖೀ ಸೀತಾ ನಿಧಾಯ ತೃಣಮಂತರೇ ॥ ೭೭ ॥

ರಾಘವಾದ್ವಿಭ್ಯತಾ ನೂನಂ ಭಿಕ್ಷುರೂಪಂ ಧೃತಂ ತ್ವಯಾ ।
ರಹಿತೇ ರಾಘವಾಭ್ಯಾಂ ತ್ವಂ ಶುನೀವ ಹವಿರಧ್ವರೇ ॥ ೭೮ ॥

ಹೃತವಾನಸಿ ಮಾಂ ನೀಚ ತತ್ಫಲಂ ಪ್ರಾಪ್ಸ್ಯಸೇ ಚಿರಾತ್ ।
ಯದಾ ರಾಮಶರಾಘಾತವಿದಾರಿತವಪುರ್ಭವಾನ್ ॥ ೭೯ ॥

ಭವಿಷ್ಯಸಿ ರಣೇ ರಾಮಂ ಜ್ಞಾನೀಷೇ ಮಾನುಷಂ ತದಾ ।
ಶ್ರುತ್ವಾ ರಕ್ಷೋಽಧಿಪಃ ಕ್ರುದ್ಧೋ ಜಾನಕ್ಯಾಃ ಪರುಷಾಕ್ಷರಂ ।
ವಾಕ್ಯಂ ಕ್ರೋಧಸಮಾವಿಷ್ಟಃ ಪುನರ್ವಚನಮಬ್ರವೀತ್ ॥ ೮೦ ॥

---

೭೭. ಇವೇ ಮುಂತಾದ ಅನೇಕ ಮಾತುಗಳಿಂದ ಆ ರಾವಣನು ಸೀತೆಯನ್ನು ಪ್ರಾರ್ಥಿಸಿದನು. ಆಗ ಸೀತೆಯು ಒಂದು ಹುಲ್ಲುಕಡ್ಡಿಯನ್ನು ಮಧ್ಯದಲ್ಲಿಟ್ಟುಕೊಂಡು ರಾವಣನನ್ನು ಕುರಿತು ಇಂತೆಂದಳು.

೭೮. ಎಲೈ ರಾವಣನೆ! ರಾಮನಿಂದ ಹೆದರಿದವನಾಗಿ ಸನ್ಯಾಸಿಯ ವೇಷವನ್ನು ಹಾಕಿಕೊಂಡೆ! ರಾಮಲಕ್ಷ್ಮಣರು ಮನೆಯಲ್ಲಿಲ್ಲದಿರುವಾಗ ನಾಯಿಯು ಯಾಗದಲ್ಲಿ ಹವಿಸ್ಸನ್ನು ಕದ್ದು ತರುವಂತೆ ನನ್ನನ್ನು ತಂದಿದ್ದೀಯೆ.

೭೯. ಇದಕ್ಕೆ ಫಲವನ್ನು ಬೇಗನೆ ಹೊಂದುತ್ತೀಯೆ. ರಣಾಂಗದಲ್ಲಿ ರಾಮನ ಬಾಣದ ಏಟನಿಂದ ನಿನ್ನ ದೇಹವು ಸೀಳಿಹೋದಾಗ ರಾಮನೆಂತಹ ವನೆಂಬುದನ್ನು ತಿಳಿದುಕೊಳ್ಳುತ್ತೀಯೆ.

೮೦. ಎಂದು ಸೀತೆಯು ಹೇಳಿದ ಕಠಿಣವಾದ ಮಾತನ್ನು ರಕ್ಷೋಽಧಿಪನಾದ ರಾವಣನು ಕೇಳಿದನು. ಇದರಿಂದ ಬಹು ಕೋಪಗೊಂಡನು. ಈ ಕೋಪದಿಂದ ಕೆರಳಿದವನಾಗಿ ಮತ್ತೆ ಅವಳನ್ನು ಕುರಿತು ಇಂತೆಂದನು.

ಭವಿತ್ರೀ ಲಂಕಾಯಾಂ ತ್ರಿದಶವದನಗ್ಲಾರಚಿರಾತ್ ।
ಸ ರಾಮೋಽಪಿ ಸ್ಥಾತಾ ನ ಯುಧಿ ಪುರತೋ ಲಕ್ಷ್ಮಣಸಖಃ ।
ತಥಾ ಯಾಸ್ಯತ್ಯುಚ್ಚೈರ್ವಿಪದಮನುಜೇನಾತ್ರ ಜಟಿಲೋ ।
ಜಯಃ ಶ್ರೀರಾಮೇ ಸ್ಯಾನ್ನ ಮಮ ಬಹುತೋಷೋಽತ್ರ ತು ಭವೇತ್ ॥ ೮೧ ॥

ತದ್ರಾವಣವಚಶ್ಶ್ರುತ್ವಾ ಜಾನಕೀ ಪ್ರಾಹ ತಂ ಪುನಃ ।
ಷಷ್ಠಾಕ್ಷರಪರಾಣ್ಯೇವ ಚತುರ್ಷು ಚರಣೇಷ್ವಪಿ ॥ ೮೨ ॥

ತ್ವಮಕ್ಷರಾಣಿ ಚತ್ವಾರಿ ಲೋಪ್ಯ ಶ್ಲೋಕಮಮುಂ ಪಠ ।
ಏವಂ ತಯಾ ಜಿತೋ ವಾಕ್ಯಮಾರ್ಗಣೈಸ್ಸ ದಶಾನನಃ ॥ ೮೩ ॥

---

೮೧ ಎಲೈ ಸೀತೆಯೆ ! ಈ ಲಂಕೆಯಲ್ಲಿ ಸ್ವಲ್ಪಕಾಲದಲ್ಲಿಯೇ ದೇವತೆಗಳ ಮುಖವು ಬಾಡುವಂತೆ ಆಗುತ್ತದೆ. ಲಕ್ಷ್ಮಣನಿಂದ ಕೂಡಿದ ಆ ರಾಮನು ಯುದ್ಧದಲ್ಲಿ ನಿಲ್ಲಲಾರನು. ಆ ಜಡೆಯನ್ನು ಧರಿಸಿರುವ ರಾಮನು ತನ್ನ ತಮ್ಮನೊಡನೆ ಬಹು ಹೆಚ್ಚಾದ ವಿಪತ್ತಿಗೆ ಗುರಿಯಾಗುತ್ತಾನೆ. ರಾಮನಿಗೆ ಜಯವೆಂಬುದು ಆಗುವುದಿಲ್ಲ. ಆಗ ನನಗೆ ಬಹು ಸಂತೋಷವಾಗುತ್ತದೆ.

೮೨-೮೩. ರಾವಣನ ಈ ಮಾತನ್ನು ಕೇಳಿ ಸೀತೆಯು ನೀನು ಹೇಳಿದ ಮಾತಿನಲ್ಲಿ ನಾಲ್ಕು ಪಾದಗಳಲ್ಲಿಯೂ ಏಳನೆ ಅಕ್ಷರವನ್ನು ತೆಗೆದುಹಾಕು. ಅನಂತರ ಈ ಶ್ಲೋಕವನ್ನು ಹೇಳು. ಎನ್ನಲು ಈ ಮಾತಿನಿಂದ ಅವನು ಸೋತವನಾಗಿ ವಾಕ್ಶಲ್ಯದಿಂದ ನೊಂದವನೂ ಆದನು.

[೮೧. ಸೀತೆಯು ಹೇಳಿದ ಅರ್ಥವು:— ಲಂಕೆಯಲ್ಲಿ ಸ್ವಲ್ಪಕಾಲದಲ್ಲಿಯೇ ರಾವಣನ ಮುಖವು ಬಾಡುತ್ತದೆ. ಲಕ್ಷ್ಮಣನನ್ನು ಕರೆದುಕೊಂಡು ರಾಮನು ಯುದ್ಧರಂಗದಲ್ಲಿ ನಿಲ್ಲುವನು. ಅಂತೆಯೇ ಆ ರಾಮನು ತಮ್ಮನೊಡನೆ ಒಳ್ಳೆಯ ಸ್ಥಿತಿಯನ್ನು ಹೊಂದುವನು. ರಾಮನಿಗೆ ಜಯವಾಗುತ್ತದೆ. ಆಗ ನನಗೆ (ಸೀತೆಗೆ) ಬಹುವಾದ ಸಂತೋಷವಾಗುತ್ತದೆ.]

ದುದ್ರಾವ ಭೀಷಯಂತ್ಸೀತಾಂ ಖಡ್ಗಮುದ್ಯಮ್ಯ ಸತ್ವರಃ ।
ಧೃತ್ವಾ ಕರೇಣ ತತ್ಪಾಣಿಂ ಮಂದೋದರ್ಯಾ ನಿಷೇಧಿತಃ ॥ ೮೪ ॥

ಮಾದೃಶ್ಯೋ ಬಹವಸ್ಸಂತಿ ತ್ಯಜೈನಾಂ ಕೃಪಣಾಂ ಕೃಶಾಂ ।
ತತೋಽಬ್ರವೀದ್ದಶಗ್ರೀವೋ ರಾಕ್ಷಸೀಃ ವಿಕೃತಾನನಾಃ ॥ ೮೫ ॥

ಯಥಾ ಮೇ ವಶಗಾ ಸೀತಾ ಭವಿಷ್ಯತಿ ಸಕಾಮುನಾ ।
ತಥಾ ಯುತಧ್ವಂ ತ್ವರಿತಂ ತರ್ಜನಾದರಣಾದಿಭಿಃ ॥ ೮೬ ॥

ಯದಿ ಮಾಸದ್ವಯಾದೂರ್ಧ್ವಂ ಮಚ್ಛಯ್ಯಾಂ ನಾಭಿನಂದತಿ ।
ತದಾ ಮೇ ಪ್ರಾತರಾಶಾಯ ಹತ್ವಾ ಕುರುತ ಮಾನುಷೀಂ ॥ ೮೭ ॥

---

೮೪. ಆಗ ಒಡನೆಯೇ ಕೋಪದಿಂದ ಖಡ್ಗವನ್ನು ಹಿರಿದು ತೆಗೆದುಕೊಂಡು ಜಾಗ್ರತೆಯಾಗಿ ಕಡಿಯಲು ಎತ್ತಿಕೊಂಡು ಹೋದನು. ಆಗ ಮಂಡೋದರಿಯು ಅವನ ಕೈಯ್ಯನ್ನು ಹಿಡಿದು ತಡೆದಳು.

೮೫. ಎಲೈ ನಾಥನೆ! ನನ್ನಂತಹ ಸುಂದರಿಯರು ಬಹು ಮಂದಿ ಇದ್ದಾರೆ. ಈ ಬಡಕಲಳೂ ದುಃಖಿನಿಯೂ ಆಗಿರುವ ಇವಳನ್ನು ಕಟ್ಟಿಕೊಂಡು ಏನಾಗಬೇಕು? ಬಿಟ್ಟುಬಿಡು. ಎಂದಳು. ಅನಂತರ ದಶಾನನನು ವಿಕಾರವಾದ ಮುಖವುಳ್ಳ ರಾಕ್ಷಸಿಯರನ್ನು ಕುರಿತು ಇಂತೆಂದನು.

೮೬. ಎಲೈ ರಾಕ್ಷಸಿಯರಿರಾ! ಈ ಸೀತೆಯನ್ನು ನನ್ನಲ್ಲಿ ಅಪೇಕ್ಷೆಯುಳ್ಳವಳಾಗಿ ಕಾಮಿಸುವಂತೆ ಆಗುವ ಹಾಗೆ ನೀವು ಜಾಗ್ರತೆಯಾಗಿ ಒಳ್ಳೆಯ ಮತ್ತು ಕೆಟ್ಟಮಾತುಗಳಿಂದ ಮಾಡಿರಿ.

೮೭. ಇನ್ನು ಎರಡುತಿಂಗಳ ಅವಧಿಯನ್ನು ಕೊಡುತ್ತೇನೆ. ಅಷ್ಟರೊಳಗೆ ನನ್ನೊಡನೆ ಭೋಗಿಸಲು ಈಕೆಯು ಇಚ್ಛಿಸದಿದ್ದರೆ ಆಗ ಈಕೆಯನ್ನು ಕೊಂದು ನನ್ನ ಬೆಳಗಿನ ತಿಂಡಿಗೆ ಸಿದ್ಧಪಡಿಸಿರಿ.

ತದಾ ಸೀತಾ ಪುನಃ ಪ್ರಾಹ ವಚನಂ ತಂ ದಶಾನನಂ ।
ಬಾಲ್ಯತ್ವೇಹಂ ಸಮಾನೀತಾ ಪೇಟಿಕಾಸ್ಥಾ ತ್ವಯಾ ಪುರಾ ॥ ೮೮ ॥

ತದಾ ಮಯಾ ವಚಃ ಪ್ರೋಕ್ತಂ ತತ್ತ್ವಂ ಕಿಂ ವಿಸ್ಮೃತೋಸಿ ಹಿ ।
ಅಧುನಾಹಂ ಗಮಿಷ್ಯಾಮಿ ಯಾಸ್ಯಾಮಿ ತ್ವರಿತಂ ಪುನಃ ॥ ೮೯ ॥

ತ್ವಾಂ ಬಂಧುಪುತ್ರಸೈನ್ಯಾದ್ಯೈರ್ಹಂತುಂ ಚೇತಿ ಮಯೇರಿತಂ ।
ತತ್ಸ್ವೀಯಂ ವಚನಂ ಸತ್ಯಂ ಕರ್ತುಮತ್ರಾಗತಾಸ್ಮ್ಯಹಂ ॥ ೯೦ ॥

ತ್ವಾಂ ಬಂಧುಪುತ್ರಸೈನ್ಯಾದ್ಯೈರ್ನಿಹತ್ಯ ರಾಮಹಸ್ತತಃ ।
ತತೋಯೋಧ್ಯಾಂ ಪುರೀಂ ಗತ್ವಾ ಪುನರ್ಯಾಸ್ಯಾಮಿ ತ್ವತ್ಪುರೀಂ ॥ ೯೧ ॥

೮೮–೮೯. ಇದನ್ನು ಕೇಳಿ ಸೀತೆಯು ದಶಾನನನನ್ನು ಕುರಿತು ಇಂತೆಂದಳು. ಎಲೈ ರಾವಣನೆ! ನನ್ನನ್ನು ಪೆಟ್ಟಿಗೆಯಲ್ಲಿ ನೀನು ಪೂರ್ವದಲ್ಲಿ ತಂದೆ. ಆಗಲೇ ನಾನು ನಿನಗೆ ಒಂದು ಮಾತನ್ನು ಹೇಳಿದೆನು. ಅದನ್ನು ನೀನು ಮರೆತಿದ್ದೀಯೇನು? ಈಗಲೂ ನಾನು ಹೋಗುತ್ತೇನೆ. ಮತ್ತೊಂದು ಬಾರಿಯೂ ಬರುತ್ತೇನೆ. ಅದೂ ಜಾಗ್ರತೆಯಾಗಿಯೇ ಬರುತ್ತೇನೆ.

೯೦. ಬಂಧುಗಳು ಸೈನ್ಯ ಮಕ್ಕಳುಗಳೊಡನೆ ನಿನ್ನನ್ನು ಕೊಲ್ಲಿಸುತ್ತೇನೆ. ಎಂದು ನಾನು ಹೇಳಿದೆನು. ಅದನ್ನು ಸತ್ಯವನ್ನಾಗಿ ಮಾಡಲು ನಾನು ಮತ್ತೆ ಇಲ್ಲಿಗೆ ಬಂದೆನು.

೯೧. ನಿನ್ನ ಬಂಧುಗಳನ್ನೂ ನಿನ್ನನ್ನೂ ರಾಮನ ಕೈಯ್ಯಿಂದ ಕೊಲ್ಲಿಸಿ ಅನಂತರ ಅಯೋಧ್ಯಾಪಟ್ಟಣಕ್ಕೆ ಹೋಗಿ ಮತ್ತೆ ನಿನ್ನ ಪಟ್ಟಣಕ್ಕೆ ಬರುತ್ತೇನೆ.

ನಿಕುಂಭಜಂ ಪೌಂಡ್ರಕಂ ತಂ ಮಾತಾಮಹಗೃಹೇ ಸ್ಥಿತಂ ।
ಶತಶೀರ್ಷಂ ರಾವಣಂ ಚ ದ್ವೀಪಾಂತರನಿವಾಸಿನಂ ॥ ೯೨ ॥

ಸಾಹಾಯ್ಯಾರ್ಥಂ ಪೌಂಡ್ರಕೇಣ ಲಂಕಾಯಾಂ ಚಾರಿತಂ ಪುನಃ ।
ಅಹಂ ತೃತೀಯವೇಲಾಯಾಂ ಸಂವಧಿಷ್ಯಾಮಿ ತಾವುಭೌ ॥ ೯೩ ॥

ತತಸ್ಸ್ವೀಯಂ ಸ್ಥಲಂ ಗತ್ವಾ ಪುನರ್ಯಾಸ್ಯಾಮ್ಯಹಂ ಜವಾತ್ ।
ಕುಂಭಕರ್ಣೋದ್ಭವಂ ವೀರಂ ಮೂಲಕಾಸುರನಾಮಕಂ ॥ ೯೪ ॥

ಅತ್ರೈವ ತುರ್ಯವೇಲಾಯಾಮಾಗತ್ಯ ಪುಷ್ಪಕೇಣ ಹಿ ।
ಅಹಮೇವ ಹನಿಷ್ಯಾಮಿ ಶಿತಬಾಣೈ ರಣಾಂಗಣೇ ॥ ೯೫ ॥

ಅನ್ಯಚ್ಚಾಪಿ ಸ್ಮರಾದ್ಯ ತ್ವಂ ಪುರಾಂ ಯದ್ವಿಧಿನೋದಿತಂ ।
ಯದ್ವಾಕ್ಯಾಚ್ಚ ತ್ವಯಾ ಗತ್ವಾ ಕೌಸಲ್ಯಾನೃಪತೀ ಹೃತೌ ॥ ೯೬ ॥

೯೨–೯೩. ತಾಯಿಯ ತಂದೆಯ ಮನೆಯಲ್ಲಿರುವ ನಿಕುಂಭನ ಮಗನಾದ ಪೌಂಡ್ರಕನನ್ನೂ ದ್ವೀಪಾಂತರದಲ್ಲಿರುವ ಮತ್ತು ಲಂಕೆಯಲ್ಲಿರುವ ಪೌಂಡ್ರಕನಿಗೆ ಸಹಾಯವನ್ನು ಮಾಡುತ್ತಿರುವ ನೂರು ತಲೆಗಳಿರುವ ರಾವಣನನ್ನೂ ಮೂರನೆಯಬಾರಿ ಬಂದು ಕೊಲ್ಲಿಸುತ್ತೇನೆ.

೯೪–೯೫. ಮತ್ತೆ ನಾನು ನನ್ನ ಸ್ಥಳಕ್ಕೆ ಹೋಗಿ ನಾಲ್ಕನೆಯಬಾರಿ ಪುಷ್ಪಕದಲ್ಲಿ ಬಂದು ಕುಂಭಕರ್ಣನ ಮಗನಾದ ಮೂಲಕಾಸುರನನ್ನು ನಾನೇ ಬಾಣಗಳಿಂದ ಹೊಡೆದು ಕೊಲ್ಲುತ್ತೇನೆ.

೯೬. ಇದಲ್ಲದೆ ನೀನು ಇನ್ನೊಂದನ್ನು ಜ್ಞಾಪಿಸಿಕೊ! ಅದನ್ನು ಬ್ರಹ್ಮನೇ ಹೇಳಿರುವನಲ್ಲವೆ? ಆ ಬ್ರಹ್ಮನ ಮಾತಿನಂತೆಯೇ ನೀನು ಹೋಗಿ ಕೌಸಲ್ಯೆಯನ್ನೂ ದಶರಥನನ್ನೂ ಕದ್ದು ತಂದೆಯಷ್ಟೆ!

ಪೇಟಿಕಾಸ್ಥೌ ಪುನಸ್ತ್ಯಕ್ತೌ ಸಾಕೇತೇ ದೈವಯೋಗತಃ ।
ಅತಸ್ತ್ವಂ ಮರ್ತುಕಾಮೋಽಸಿ ಯತೋಽಹಮಾಹೃತಾ ತ್ವಯಾ ॥ ೯೭ ॥

ಗಚ್ಛ ಗೇಹೇ ಸುಖಂ ಭುಂಕ್ಷ್ವ ರಾಮಶ್ಶೀಘ್ರಂ ಹನಿಷ್ಯತಿ ।
ಇತಿ ಸೀತಾವಾಕ್ಯಬಾಣೈರ್ಭಿನ್ನಮರ್ಮಸ್ಥಲೋಽಪಿ ಸಃ ॥ ೯೮ ॥

ಯಯೌ ತೂಷ್ಣೀಂ ನಿಜಂ ಗೇಹಂ ಲಜ್ಜಿತಶ್ಚ ದಶಾನನಃ ।
ಏವಂ ದಶಾನನೇ ಯಾತೇ ರಾಕ್ಷಸ್ಯೋ ರಾವಣಾಜ್ಞಯಾ ॥ ೯೯ ॥

ಜಾನಕೀಂ ತಾಂ ಸ್ವಶಬ್ದೈಶ್ಚ ತಥಾ ಕ್ರೂರೋಕ್ತಿಭಿರ್ಮುಹುಃ ।
ಆಸ್ಯೈರ್ವಿದೀರ್ಣೈಃ ಖಡ್ಗಾದ್ಯೈರ್ಭೀಷಯನ್ ಸ್ವಕರಾದಿಭಿಃ ॥ ೧೦೦ ॥

---

೯೭. ಅವರನ್ನು ಪೆಟ್ಟಿಗೆಯಲ್ಲಿಟ್ಟು ಅಯೋಧ್ಯೆಗೆ ಕಳುಹಿಸಿದೆಯಲ್ಲವೆ! ಇದರಿಂದ ದೈವಯೋಗವು ದೊಡ್ಡದೆಂದು ತಿಳಿ. ನೀನು ನನ್ನನ್ನು ಇಲ್ಲಿಗೆ ತಂದುದರಿಂದಲೇ ಸಾಯುವುದಕ್ಕೆ ಸಿದ್ಧವಾಗಿದ್ದೀಯೆ ಎಂದಾಯಿತು.

೯೮. ನೀನು ಮನೆಗೆ ಹೋಗು. ಸುಖವಾಗಿ ಊಟಮಾಡು. ರಾಮನು ಬೇಗನೆ ಬರುವನು. ಮತ್ತು ನಿನ್ನನ್ನು ಕೊಲ್ಲುವನು. ಎನ್ನಲು ಸೀತೆಯ ಈ ಮಾತುಗಳಿಂದ ರಾವಣನ ಮನಸ್ಸಿಗೆ ಬಹು ನೋವಾಯಿತು.

೯೯-೧೦೦. ಆಗ ಲಜ್ಜೆಗೊಂಡವನಾಗಿ ದಶಾನನನು ಮನೆಗೆ ಹೊರಟು ಹೋದನು. ರಾವಣನು ಹೊರಟುಹೋದಮೇಲೆ ರಾಕ್ಷಸಿಯರು ಆತನ ಅಪ್ಪಣೆಯಂತೆ ತಮ್ಮ ಕಠಿಣವಾದ ಮಾತುಗಳಿಂದಲೂ ಬೈಗುಳಿನಿಂದಲೂ ಬೇರೆಯಾಗಿಯೂ ಒಟ್ಟಿಗೂ ಶಕ್ತಿಯೇ ಮುಂತಾದ ಆಯುಧಗಳನ್ನು ತೋರಿಸುತ್ತಲೂ ಕೈಯ್ಯಿಂದ ಹೊಡೆಯುವಂತೆಯೂ ಹೆದರಿಸಿದರು.

ನಿವಾರ್ಯ ತ್ರಿಜಟಾನಾವಿರ್ನಾ ವಿಭೀಷಣಪ್ರಿಯಾನುಗಾ ।
ತಾಸ್ಸರ್ವಾಃ ರಾಕ್ಷಸೀರ್ವೇಗಾದ್ವಾಕ್ಯಮಾಹಾಥ ಸಾದರಂ ॥ ೧೦೧ ॥

ನ ಭೀಷಯದ್ವಂ ರುದತೀಂ ನಮಸ್ಕುರುತ ಜಾನಕೀಂ ।
ಸುಚಿಹ್ನೈ ರಾಘವಸ್ಸ್ವಪ್ನೇ ಮಯಾ ದೃಷ್ಟೋದ್ಯ ಜಾನಕೀಂ ॥ ೧೦೨ ॥

ಮೋಚಯಾಮಾಸ ದಗ್ಧ್ವೇಮಾಂ ಲಂಕಾಂ ಹತ್ವಾ ತು ರಾವಣಂ ।
ರಾವಣೋ ಗೋಮಯಹ್ರದೇ ತೈಲಾಭ್ಯಕ್ತೋ ದಿಗಂಬರಃ ॥ ೧೦೩ ॥

ಮಯಾದ್ಯ ದೃಷ್ಟಸ್ಸ್ವಪ್ನೇ ಹಿ ತಸ್ಮಾದೇನಾಂ ನ ಸ್ವಾಹಸಂ ।
ಕಾರ್ಯಂ ಸೇವ್ಯಾ ಸದಾ ಚೇಯಂ ರಾಮಾದಭಯದಾಯಿನೀ ॥ ೧೦೪ ॥

---

೧೦೧. ವಿಭೀಷಣನ ಪ್ರಿಯೆಗೆ ಸಖಿಯಾದ ತ್ರಿಜಟೆಯು ಅವರನ್ನೆಲ್ಲಾ ತಡೆದು ಅವರಿಗೆ ಆದರದಿಂದ ಇಂತೆಂದು ಹೇಳಿದಳು.

೧೦೨. ಆ ಜಾನಕಿಯು ಅಳುತ್ತಿದ್ದಾಳೆ. ಅವಳನ್ನು ಹೆದರಿಸಬೇಡಿರಿ. ಅವಳಿಗೆ ನಮಸ್ಕರಿಸಿರಿ. ರಾಘವನು ಒಳ್ಳೆಯ ಚಿಹ್ನೆಗಳಿಂದ ಕೂಡಿಕೊಂಡು ಈಗ ಸ್ವಪ್ನದಲ್ಲಿ ಕಂಡನು. ಅವನು ಜಾನಕಿಯುನ್ನು ಬಂಧನದಿಂದ ಬಿಡಿಸಿದನು.

೧೦೩. ಅವನು ಈ ಲಂಕಾಪಟ್ಟಣವನ್ನೇ ಸುಟ್ಟನು. ರಾಕ್ಷಸರೆಲ್ಲರನ್ನೂ ಕೊಂದನು. ರಾವಣನನ್ನೂ ಕೊಂದನು. ಆ ರಾವಣನು ಸಗಣಿಯ ಬಗ್ಗಡದಲ್ಲಿ ಎಣ್ಣೆಯನ್ನು ಬಳಿದುಕೊಂಡು ಬಿದ್ದಿದ್ದನು. ಅವನ ಮೈಮೇಲೆ ಬಟ್ಟೆಗಳೊಂದೂ ಇರಲಿಲ್ಲ. ಈ ರೀತಿಯಾಗಿ ನನಗೆ ಸ್ವಪ್ನವಾಯಿತು.

೧೦೪. ಇವಳ ವಿಷಯದಲ್ಲಿ ಕೆಡುಕನ್ನೇನೂ ಮಾಡಬೇಡಿರಿ. ಇವಳನ್ನು ಯಾವಾಗಲೂ ಸೇವಿಸಿರಿ. ರಾಮನಿಗೆ ಹೇಳಿ ಅಭಯವನ್ನು ಕೊಡಿಸುವಳು.

ಯುಷ್ಮಾಭಿರ್ದುಃಖಿತಾ ಚೇದ್ವೋ ಭರ್ತ್ರೇಯಂ ಘಾತಯಿಷ್ಯತಿ ।
ಇತಿ ತತ್ತ್ರಿಜಟಾವಾಕ್ಯಂ ಶ್ರುತ್ವಾ ತಸ್ಥುರ್ಭಯಾಕುಲಾಃ ॥ ೧೦೫ ॥

ತೂಷ್ಣೀಮೇವ ತದಾ ಸೀತಾ ದುಃಖಾತ್ಕಿಂಚಿದುವಾಚ ಸಾ ।
ಇದಾನೀಮೇವ ಮರಣಂ ಕೇನೋಪಾಯೇನ ಮೇ ಭವೇತ್ ॥ ೧೦೬ ॥

ಧಿಘ್ಘಾಂ ವೇಣೀ ಮಮಾತ್ಯರ್ಥಮುದ್ಬಂಧಾಯ ಭವಿಷ್ಯತಿ ।
ಯನ್ಮಯಾ ಸ್ವೀಯವಾಗ್ಬಾಣೈಃ ಲಕ್ಷ್ಮಣಃ ಸ್ತಾಡಿತಃ ಪುರಾ ॥ ೧೦೭ ॥

ತಸ್ಮಾದಿಮಾಃ ಪೀಡಯಂತಿ ಭೋಕ್ಷ್ಯತೇ ಸ್ವಕೃತಂ ಮಯಾ ।
ಮಯಾ ನಿರಾಗಸ್ಸೌಮಿತ್ರಿಸ್ತ್ರಾಸಿತೋ ಗೌತಮೀತಟೇ ॥ ೧೦೮ ॥

---

೧೦೫. ನೀವು ಇವಳನ್ನು ದುಃಖಪಡಿಸಿದರೆ ಇವಳು ತನ್ನ ಗಂಡನಿಗೆ ಹೇಳಿ ನಿಮ್ಮಗಳನ್ನು ಕೊಲ್ಲಿಸುವಳು. ತ್ರಿಜಟೆಯು ಹೀಗೆಂದು ಹೇಳಲು ಆಗ ರಾಕ್ಷಸಿಯರೆಲ್ಲರೂ ಭಯಪಟ್ಟು ಸುಮ್ಮನಾದರು.

೧೦೬. ಆ ಸೀತೆಯು ದುಃಖದಿಂದ ಸುಮ್ಮನಿದ್ದರೂ ಒಂದಾನೊಂದು ಮಾತನ್ನು ಯೋಚಿಸಿದಳು. ಈಗಲೇ ನಾನು ಸಾಯಬೇಕು. ಅದನ್ನು ಯಾವ ರೀತಿಯಲ್ಲಿ ಹೊಂದಲಿ ? ಉಪಾಯವೇನಿರುವುದು ?

೧೦೭-೧೦೮. ಓಹೊ ! ತಿಳಿಯಿತು. ಈ ನನ್ನ ಜಡೆಯು ಉದ್ದವಾಗಿದೆ. ಇದೇ ನೇಣುಹಾಕಿಕೊಳ್ಳಲು ಸಾಕಾಗುವುದು. ನಾನು ಹಿಂದೆ ವಾಕ್ಕೆಂಬ ಬಾಣದಿಂದ ಲಕ್ಷ್ಮಣನನ್ನು ನೋಯಿಸಿದೆನು. ಆದುದರಿಂದಲೇ ರಾಕ್ಷಸಿಯರೆಲ್ಲರೂ ನನ್ನನ್ನು ತೊಂದರೆ ಪಡಿಸುತ್ತಿದ್ದಾರೆ. ನಾನು ಹಿಂದೆ ಮಾಡಿದುದನ್ನು ಈಗ ಅನುಭವಿಸುತ್ತಿದ್ದೇನೆ. ಗೌತಮೀನದಿಯ ದಡದಲ್ಲಿ ಲಕ್ಷ್ಮಣನಲ್ಲಿ ಯಾವ ತಪ್ಪಿಲ್ಲದಿದ್ದರೂ ಅವನನ್ನು ನಾನು ನೋಯಿಸಿದೆನು.

ಪ್ರಾಯಶ್ಚಿತ್ತಂ ಕರೋಮ್ಯದ್ಯ ತಸ್ಯ ತ್ಯಕ್ತ್ವಾ ಸ್ವಜೀವಿತಂ ।
ಏವಂ ನಿಶ್ಚಿತಬುದ್ಧಿಂ ತಾಂ ಮರಣಾಯಾಥ ಜಾನಕೀಂ ॥ ೧೦೯ ॥

ದೃಷ್ಟ್ವಾ ಶನೈರ್ವಾಯುಪುತ್ರೋ ರಾಮವೃತ್ತಂ ನ್ಯವೇದಯತ್ ।
ಆಸಾಕೇತನಿರ್ಗಮಾಚ್ಚ ಸ್ವಸೀತಾದರ್ಶನಾವಧಿ ॥ ೧೧೦ ॥

ಸವಿಸ್ತಾರಂ ಕ್ರಮೇಣೈವ ಸೀತಾತೋಷಾರ್ಥಮಾದರಾತ್ ।
ಸೀತಾ ಕ್ರಮೇಣ ತತ್ಸರ್ವಂ ಶ್ರುತ್ವಾಽಽಶ್ಚರ್ಯಮಾನಸಾ ॥ ೧೧೧ ॥

ಕಿಂ ಮಯೇದಂ ಶ್ರುತಂ ವ್ಯೋಮ್ನಿ ಸ್ವಪ್ನೋ ದೃಷ್ಟೋಽಥವಾ ನಿಶಿ ।
ಯೇನ ಮೇ ಕರ್ಣಪೀಯೂಷವಚನಂ ಸಮುದೀರಿತಂ ॥ ೧೧೨ ॥

---

೧೦೯. ಈ ಜಡೆಯಿಂದಲೇ ನೇಣುಹಾಕಿಕೊಂಡು ಪ್ರಾಣವನ್ನು ಬಿಟ್ಟು ಆಗ ನಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತೇನೆ. ಜಾನಕಿಯು ಈ ರೀತಿಯಾಗಿ ಹೇಳಿಕೊಳ್ಳುತ್ತ ನೇಣುಹಾಕಿಕೊಂಡು ಪ್ರಾಣಬಿಡಲು ನಿಶ್ಚಯಿಸಿಕೊಂಡಳು.

೧೧೦. ವಾಯುಪುತ್ರನಾದ ಹನುಮಂತನು ಇದನ್ನು ನೋಡಿದನು. ಅನಂತರ ಮೆಲ್ಲ ಮೆಲ್ಲಗೆ ರಾಮನ ಚರಿತ್ರೆಯನ್ನು ಹೇಳಲು ಮೊದಲು ಮಾಡಿದನು. ಅದನ್ನು ರಾಮನು ಅಯೋಧ್ಯೆಯಿಂದ ಹೊರಟುದನ್ನು ಮೊದಲುಗೊಂಡು ತಾನು ಸೀತೆಯನ್ನು ನೋಡಿದ ಪರ್ಯಂತರವೂ ಹೇಳಿದನು.

೧೧೧. ಸೀತೆಯ ಸಂತೋಷಕ್ಕೋಸ್ಕರ ಕ್ರಮವಾಗಿಯೂ ವಿಸ್ತಾರವಾಗಿಯೂ ಹೇಳಿದನು. ಸೀತೆಯು ಅದೆಲ್ಲವನ್ನೂ ಕೇಳಿ ಆಶ್ಚರ್ಯಪಟ್ಟಳು.

೧೧೨. ಆಗ ಸೀತೆಯು ಇದೇನು ? ಅಂತರಿಕ್ಷದಿಂದ ನಾನು ಇದೆಲ್ಲವನ್ನೂ ಕೇಳುತ್ತಿರುವೆನೆ ? ಇದೇನಾದರೂ ರಾತ್ರಿಯಲ್ಲಿ ನೋಡಿದ ಸ್ವಪ್ನವೊ ? ಇದಾರು ! ನನ್ನ ಕಿವಿಗೆ ರಸಾಯನ ರೂಪವಾದ ಈ ಮಾತನ್ನು ಹೇಳುತ್ತಿರುವರು !

ಸ ದೃಶ್ಯತಾಂ ಮಹಾಭಾಗಃ ಪ್ರಿಯವಾದೀ ಮಮಾಗ್ರತಃ ।
ತಚ್ಛ್ರುತ್ವಾ ತತ್ಪುರೋ ಗತ್ವಾ ನತ್ವಾ ತಾಮಬ್ರವೀತ್ಪುನಃ ॥ ೧೧೩ ॥

ರಾಮವೃತ್ತಂ ದದೌ ತಸ್ಯೈ ರಾಘವಸ್ಯಾಂಗುಲೀಯಕಂ ।
ತಾಂ ರಾಮಮುದ್ರಿಕಾಂ ದೃಷ್ಟ್ವಾ ನತ್ವಾ ತಮಬ್ರವೀತ್ಕಪಿಂ ॥ ೧೧೪ ॥

ಸರ್ವಂ ಕಥಯ ಮದ್ವೃತ್ತಂ ಯಥಾದೃಷ್ಟಂ ತ್ವಯಾತ್ರ ಹಿ ।
ತದಾ ತಾಂ ಸಾಂತ್ವಯಾಮಾಸ ರಾನೋ ಮತ್‌ಸ್ಕಂಧಸಂಸ್ಥಿತಃ ॥ ೧೧೫ ॥

ವಾನರೇಂದ್ರೈಸ್ಸಮಾಗತ್ಯ ಹಿತ್ವಾ ರಾವಣಮಾಹವೇ ।
ತ್ವಾಂ ನೇಷ್ಯತಿ ಭಯಂ ಸೀತೇ ತ್ಯಜ ತ್ವಂ ಮಮ ವಾಕ್ಯತಃ ॥ ೧೧೬ ॥

---

೧೧೩. ಆ ಮಹಾಪುರುಷನು ನನಗೆ ಕಾಣಿಸಿಕೊಳ್ಳಲಿ. ಅವನು ನನಗೆ ಪ್ರಿಯವಾದಿಯಾಗಿರುವನು. ಇದನ್ನು ಕೇಳಿ ಮಾರುತಿಯು ಅವಳೆದುರಿಗೆ ಹೋಗಿ ಅವಳಿಗೆ ನಮಸ್ಕರಿಸಿ ರಾಮನ ಸಮಾಚಾರವೆಲ್ಲವನ್ನೂ ಹೇಳಿದನು.

೧೧೪. ಇದೆಲ್ಲವನ್ನೂ ಹೇಳಿ ರಾಮನು ಕೊಟ್ಟಿದ್ದ ಉಂಗುರವನ್ನು ಕೊಟ್ಟನು. ಆಕೆಯು ರಾಮಮುದ್ರಿಕೆಯನ್ನು ನೋಡಿ ಅದಕ್ಕೆ ನಮಸ್ಕರಿಸಿ ಮಾರುತಿಯನ್ನು ಕುರಿತು ಇಂತೆಂದಳು.

೧೧೫. ಎಲೈ ಹನುಮಂತನೆ! ನೀನು ಇಲ್ಲಿ ನೋಡಿದಂತೆಯೇ ನನ್ನ ವಿಷಯವೆಲ್ಲವನ್ನೂ ರಾಮನಿಗೆ ತಿಳಿಸು. ಎಂದಳು. ಆಗ ಆಕೆಯನ್ನು ಒಳ್ಳೆಯ ಮಾತುಗಳಿಂದ ಸಮಾಧಾನಪಡಿಸಿದನು.

೧೧೬. ಎಲೈ ಸೀತೆಯೆ! ಶ್ರೀರಾಮನು ನನ್ನ ಹೆಗಲಮೇಲೆ ಕುಳಿತು ಕೊಂಡು ಕಪಿವೀರರೊಡನೆ ಬಂದು ಯುದ್ಧದಲ್ಲಿ ರಾವಣನನ್ನು ಕೊಂದು ನಿನ್ನನ್ನು ಕರೆದುಕೊಂಡು ಹೋಗುತ್ತಾನೆ. ಎಲೈ ಸೀತೆಯೆ! ನನ್ನ ಮಾತಿನಲ್ಲಿ ನಂಬಿಕೆ ಯನ್ನಿಟ್ಟು ನೀನು ಭಯವನ್ನು ಬಿಟ್ಟುಬಿಡು. ಎಂದನು.

ತತಸ್ಸೀತಾಪ್ರತ್ಯಯಾರ್ಥಂ ಸ್ವಯಂ ರೂಪಂ ಪ್ರದರ್ಶಯತ್ ।
ತತಃ ಪುನಃ ಪ್ರತ್ಯಯಾರ್ಥಂ ಸೀತಾಯೈ ರಾಘವೋದಿತಂ ॥ ೧೧೭ ॥

ಮನಶ್ಶಿಲಾಯಾಸ್ತಿಲಕಂ ಚಿತ್ರಕೂಟಗಿರೌ ಕೃತಂ ।
ತತಸ್ತತ್ಕಥಯಾಮಾಸ ಪೂರ್ವವೃತ್ತಂ ಸವಿಸ್ತರಂ ॥ ೧೧೮ ॥

ತತಸ್ತುಷ್ಟಾಂ ಜಾನಕೀಂ ತಾಂ ಮಾರುತಿರ್ವಾಕ್ಯಮಬ್ರವೀತ್ ।
ಅನುಜ್ಞಾಂ ದೇಹಿ ಮೇ ಮಾತಸ್ತ್ವಭಿಜ್ಞಾನಂ ದದಸ್ವ ಮಾಂ ॥ ೧೧೯ ॥

ಸಾ ತಂ ಚೂಡಾಮಣಿಂ ಪಿತ್ರಾ ದತ್ತಂ ಕೇಶಾಂತರಸ್ಥಿತಂ ।
ನಿಷ್ಕೃಷ್ಯ ತತ್ಕರೇ ದತ್ವಾ ಪೂರ್ವಂ ಕಾಕೇನ ಯತ್ಕೃತಂ ॥ ೧೨೦ ॥

ಚಿತ್ರಕೂಟಗಿರೌ ವೃತ್ತಂ ಕಥಯಾಮಾಸ ತತ್ಕಪಿಂ ।
ತತೋ ನತ್ವಾ ರಾಮಪತ್ನೀಂ ಚಿಂತಯಾಮಾಸ ಚೇತಸಿ ॥ ೧೨೧ ॥

೧೧೭–೧೧೮. ಆನಂತರ ಹನುಮನು ಸೀತೆಗೆ ನಂಬುಗೆಯುನ್ನುಂಟು ಮಾಡಲು ತನ್ನ ರೂಪವನ್ನು ತೋರಿಸಿದನು. ಇನ್ನೂ ಕೂಡ ಸರಿಯಾಗಿ ನಂಬುಗೆಯಾಗಬೇಕೆಂಬುದಾಗಿ ರಾಘವನು ತನ್ನೊಡನೆ ಹೇಳಿದ ಚಿತ್ರಕೂಟ ಪರ್ವತದಲ್ಲಿ ಮಣ್ಣಿಶಿಲೆಯಿಂದ ತಿಲಕವನ್ನು ಸೀತೆಗೆ ರಚಿಸಿದ ವಿಷಯವನ್ನೂ ಹೇಳಿದನು. ಇನ್ನೂ ಹಿಂದಿನ ವಿಷಯುಗಳನ್ನೂ ವಿಸ್ತಾರವಾಗಿ ಹೇಳಿದನು.

೧೧೯. ಇದೆಲ್ಲವನ್ನೂ ಕೇಳಿ ಸೀತೆಯು ನಂಬಿಕೆಯನ್ನು ಹೊಂದಿ ಸಂತೋಷಗೊಳ್ಳಲು ಮಾರುತಿಯು ಎಲೈ ತಾಯಿಯೆ! ನನಗೆ ಹೋಗಲು ಅಪ್ಪಣೆಯನ್ನು ಕೊಡು. ಮತ್ತು ನನಗೆ ಯಾವುದಾದರೂ ಗುರುತನ್ನು ರಾಮನಿಗೆ ಕೊಡುವುದಕ್ಕೆ ದಯಪಾಲಿಸು. ಎಂದು ಕೇಳಿದನು.

೧೨೦–೧೨೧. ಆಗ ಸೀತೆಯು ತಲೆಯಲ್ಲಿಟ್ಟುಕೊಂಡಿದ್ದ ತನ್ನ ತಂದೆಯು ಕೊಟ್ಟಿದ್ದ ಚೂಡಾಮಣಿಯನ್ನು ತೆಗೆದು ಕಪಿಯ ಕೈಯ್ಯಲ್ಲಿ ಕೊಟ್ಟು ತನಗೆ ಚಿತ್ರಕೂಟದಲ್ಲಿ ಕಾಕಾಸುರನು ಮಾಡಿದ ತೊಂದರೆಯ ವಿಷಯವೆಲ್ಲವನ್ನೂ ಹೇಳಿದಳು ಹನುಮಂತನು ಸೀತೆಗೆ ನಮಸ್ಕರಿಸಿ ತನ್ನ ಮನಸ್ಸಿನಲ್ಲಿಯೇ ಇಂತೆಂದು ಯೋಚಿಸಿದನು.

ಸ್ವಾಮಿಕಾರ್ಯಂ ಕೃತಂ ಚೈತದನ್ಯತ್ಕಿಂಚಿತ್ಕರೋಮ್ಯಹಂ |
ಇತಿ ನಿಶ್ಚಿತ್ಯ ಮನಸಾ ಜಾನಕೀಂ ಪುನರಬ್ರವೀತ್ ॥ ೧೨೨ ॥

ಮಾತರ್ಮೇಸ್ತ್ಯತಿಕ್ಷುದ್ಬಾಧಸ್ತ್ವದ್ಯ ವಿಕ್ಲಮದೋ ಮಹಾನ್ |
ಅಸ್ಮಿನ್ ವನೇತಿಮಧುರಂ ಫಲಂ ಸದ್ಯೋತಿದುರ್ಲಭಂ ॥ ೧೨೩ ॥

ತವಾಜ್ಞಯಾದ್ಯ ಸೀತೇಹಂ ಕರಿಷ್ಯೇ ಭಕ್ಷಣಂ ಧ್ರುವಂ |
ಇತಿ ತದ್ವಚನಂ ಶ್ರುತ್ವಾ ಜಾನಕೀ ಸ್ವೀಯಕಂಕಣಂ ॥ ೧೨೪ ॥

ನಿಷ್ಕಾಸ್ಯ ಹಸ್ತಾತ್ತಂ ಪ್ರಾಹ ಗೃಹೀಷ್ವೇದಂ ಪ್ಲವಂಗಮ |
ಅನೇನ ಫಲಸಂಭಾರಾನ್ಲಂಕಾಹಟ್ಟಾತ್ಪ್ರಗೃಹ್ಯ ಚ ॥ ೧೨೫ ॥

ಭುಕ್ತ್ವಾ ಪೀತ್ವಾ ಸುಖಂ ಗಚ್ಛ ವನೇಸ್ಮಿನ್ತ್ರೋಟಯಸ್ವ ಮಾ |
ತದಾ ಕಪಿಃ ಪುನಃ ಪ್ರಾಹ ಪರಹಸ್ತಫಲಾನಿ ಹಿ ॥ ೧೨೬ ॥

---

೧೨೨. ನಾನು ಇಲ್ಲಿಗೆ ಬಂದು ಸ್ವಾಮಿಕಾರ್ಯವನ್ನೇನೋ ಮಾಡಿದೆನು. ಮತ್ತು ನಾನು ಬಂದುದಕ್ಕೆ ಏನಾದರೂ ಗುರುತನ್ನು ತೋರಿಸಬೇಕು. ಹೀಗೆಂದು ನಿಶ್ಚಯಿಸಿಕೊಂಡು ಜಾನಕಿಯನ್ನು ಕುರಿತು ಮತ್ತೆ ಇಂತೆಂದನು.

೧೨೩. ಅಮ್ಮಾ! ನನಗೆ ಬಹುವಾಗಿ ಹಸಿವಾಗುತ್ತಿದೆ. ಅದರಿಂದ ಬಹಳವಾಗಿ ಬಳಲಿದ್ದೇನೆ. ಈ ವನದಲ್ಲಿ ಬಹು ಮಧುರವಾದ ಫಲಗಳಿವೆ. ಇಂತಹವು ಮತ್ತೆಲ್ಲಿಯೂ ಸಿಕ್ಕುವುದಿಲ್ಲ.

೧೨೪–೧೨೫. ಎಲೈ ಸೀತೆಯೆ! ನಿನ್ನ ಅಪ್ಪಣೆಯಾದರೆ ಈಗ ಅವನ್ನು ತಿನ್ನುತ್ತೇನೆ. ಎಂದನು. ಈ ಮಾತನ್ನು ಕೇಳಿ ಸೀತೆಯು ತನ್ನ ಕೈಯ್ಯಿಂದ ಕೈಬಳೆಯನ್ನು ತೆಗೆದುಕೊಟ್ಟು ಎಲೈ ಕಪಿಯೆ! ಇದನ್ನು ಮಾರಿ ಲಂಕೆಯ ಅಂಗಡಿಯಲ್ಲಿ ಹಣ್ಣುಗಳನ್ನು ಕೊಂಡುಕೊ.

೧೨೬. ಅವನ್ನು ತಿಂದು ಸುಖವಾದ ಪಾನೀಯಗಳನ್ನು ಕುಡಿದು ಸುಖವಾಗಿ ಹೋಗು. ಈ ವನಗಳಲ್ಲಿ ಒಂದನ್ನೂ ಕೀಳಬೇಡ. ಸೀತೆಯು ಹೀಗೆಂದು ಹೇಳಿದುದನ್ನು ಕಪಿಯು ಕೇಳಿ ಎಲೈ ಸೀತೆಯೆ! ಪರರು ಕೊಯ್ದುಕೊಟ್ಟ ಹಣ್ಣುಗಳನ್ನು ನಾನು ತಿನ್ನುವುದಿಲ್ಲ.

ನಾಹಂ ಭುಂಜಾಮಿ ಸೀತೇ ಮೇ ವ್ರತಮಸ್ತಿ ವ್ರಜಾಮ್ಯಹಂ ।
ವ್ರಜಂತಂ ಮಾರುತಿಂ ದೃಷ್ಟ್ವಾ ಸೀತಾ ವಚನಮಬ್ರವೀತ್ ॥ ೧೨೭ ॥

ಭೋ ಬಾಲಕ ಕಪಿಶ್ರೇಷ್ಠ ರಾವಣೋಸ್ತಿ ವನಾಧಿಪಃ ।
ನ ಶಕ್ತಿರ್ನ ಚ ಶಕ್ಯಂತೇ ಕಥಂ ತ್ವಂ ಭಕ್ಷಯಿಷ್ಯಸಿ ॥ ೧೨೮ ॥

ತತ್ತಸ್ಯಾ ವಚನಂ ಶ್ರುತ್ವಾ ಮಾರುತಿಃ ಪ್ರಾಹ ಜಾನಕೀಂ ।
ಶ್ರೀರಾಮೇತಿ ಪರಂ ಮಂತ್ರಶಸ್ತ್ರಂ ಯೇ ಹೃದಯಾಂತರೇ ॥ ೧೨೯ ॥

ತೇಷ ಸರ್ವಾಣಿ ರಕ್ಷಾಂಸಿ ತೃಣರೂಪಾಣಿ ಸಾಂಪ್ರತಂ ।
ತದಾ ತಂ ಜಾನಕೀ ಪ್ರಾಹ ಪತಿತಾನ್ಯತ್ರ ವೈ ಭುವಿ ॥ ೧೩೦ ॥

ಭುಂಜ್ಯೈತಾನಿ ಫಲಾನಿ ತ್ವಂ ತೂಷ್ಣೀಂ ಮಾ ತ್ರೋಟಯಾತ್ರ ವೈ ।
ತಥೇತಿ ಮಾರುತಿಶ್ಚೋಕ್ತ್ವಾ ವೃಕ್ಷಾನ್ಪುಚ್ಛೇನ ಚಾಲಯತ್ ॥ ೧೩೧ ॥

---

೧೨೭. ಇದು ನನ್ನ ವ್ರತವು. ಹಾಗಾದರೆ ನಾನು ಹೋಗುತ್ತೇನೆ. ಎಂದು ಹೊರಟನು. ಹನುಮಂತನು ಹೊರಟುದನ್ನು ನೋಡಿ ಸೀತೆಯು ಇಂತೆಂದಳು.

೧೨೮. ಎಲೈ ಬಾಲಕನಾದ ಕಪಿಯೆ ! ಈ ವನಕ್ಕೆ ರಾವಣನು ಯಜಮಾನನು. ನನಗೆ ಕೊಡುವುದಕ್ಕೆ ಶಕ್ತಿಯಿಲ್ಲ. ನೀನು ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ. ನೀನು ಹೇಗೆ ತಾನೆ ತಿನ್ನುತ್ತೀಯೆ ? ಎಂದಳು.

೧೨೯-೧೩೦. ಆಕೆಯ ಈ ಮಾತನ್ನು ಕೇಳಿ ಮಾರುತಿಯು ಜಾನಕಿಯನ್ನು ಕುರಿತು ಎಲೈ ಜಾನಕಿಯೆ ! ಶ್ರೀರಾಮನೆಂಬ ಮಂತ್ರಶಸ್ತ್ರವು ಯಾರ ಮನಸ್ಸಿನಲ್ಲಿರುವುದೋ ಅವರಿಗೆ ಎಲ್ಲಾ ರಾಕ್ಷಸರೂ ತೃಣಪ್ರಾಯರು. ಎಂದು ತಿಳಿ. ಎಂದೆನಲು ಜಾನಕಿಯು ಎಲೈ ಮಾರುತಿಯೆ ! ಇಲ್ಲಿ ಅನೇಕ ಹಣ್ಣುಗಳು ಕೆಳಗೆ ಬಿದ್ದಿವೆ. ಅವನ್ನು ತಿನ್ನು.

೧೩೧. ಇಲ್ಲಿರುವುವುಗಳಲ್ಲಿ ಒಂದನ್ನೂ ಕೀಳಬೇಡ. ಎಂದೆನಲು ಮಾರುತಿಯು ಹಾಗೆಯೇ ಆಗಲೆಂದು ಹೇಳಿ ಮರಗಳನ್ನು ಬಾಲದಿಂದ ಹಿಡಿದು ಅಲ್ಲಾಡಿಸಿದನು.

ವೃಕ್ಷಾಂದೋಲನಮಾತ್ರೇಣ ನಿಪೇತುಶ್ಚ ಫಲಾನಿ ಹಿ ।
ಭಕ್ಷಯಾಮಾಸ ತಾನ್ಯೇವ ಸ ಫಲಾನಿ ಕ್ಷಣೇನ ವೈ ॥ ೧೩೨ ॥

ತತೋ ವೃಕ್ಷಾನ್ ಸಮುತ್ಪಾಟ್ಯ ಲಾಂಗೂಲೇನ ಸ ಮಾರುತಿಃ ।
ಕ್ಷಿಪ್ತ್ವಾ ತಾನನ್ಯವೃಕ್ಷೇಷು ಸಮಸ್ತಾನಿ ಫಲಾನಿ ವೈ ॥ ೧೩೩ ॥

ಪಾತಯಾಮಾಸ ಭೂಮ್ಯಾಂ ತು ಭಕ್ಷಯಾಮಾಸ ತಾನಿ ಸಃ ।
ಭಕ್ಷಿತಾನಿ ಸಮಸ್ತಾನಿ ಫಲಾನಿ ವನಜಾನಿ ಹಿ ॥ ೧೩೪ ॥

ದೃಷ್ಟ್ವಾ ತಂ ದುದ್ರುವುರ್ಧರ್ತುಂ ಮಾರುತಿಂ ವನರಕ್ಷಕಾಃ ।
ರಾಕ್ಷಸಾನಾಗತಾನ್ ದೃಷ್ಟ್ವಾ ವೃಕ್ಷೈಸ್ತಾನ್ ತಾಡಯತ್ಕಪಿಃ ॥ ೧೩೫ ॥

ಉತ್ಪಾಟ್ಯಾಶೋಕವನಿಕಾಂ ನಿರ್ವೃಕ್ಷಾಮಕರೋತ್ ಕ್ಷಣಾತ್ ।
ಸೀತಾಶ್ರಯನಗಂ ತ್ಯಕ್ತ್ವಾ ವನಂ ಶೂನ್ಯಂ ಚಕಾರ ಸಃ ॥ ೧೩೬ ॥

---

೧೩೨. ಮರಗಳನ್ನು ಅಲ್ಲಾಡಿಸಿದ ಮಾತ್ರದಿಂದಲೇ ಹಣ್ಣುಗಳೆಲ್ಲವೂ ಬಿದ್ದುವು. ಆ ಫಲಗಳನ್ನು ಕ್ಷಣಕಾಲದಲ್ಲಿ ತಿನ್ನಲು ಅವು ತಾವು ಹುಟ್ಟಿದುದಕ್ಕೆ ಸಫಲವಾದುವು.

೧೩೩. ಅನಂತರ ಮಾರುತಿಯು ಬಾಲದಿಂದ ಒಂದು ಮರವನ್ನು ಕಿತ್ತು ಅದನ್ನು ಮತ್ತೊಂದು ಮರಕ್ಕೆ ಹೊಡೆದು ಹಣ್ಣುಗಳನ್ನೆಲ್ಲಾ ಕೆಡವಿದನು.

೧೩೪. ಆ ಹಣ್ಣುಗಳು ನೆಲದಮೇಲೆ ಬೀಳಲು ಅವೆಲ್ಲವನ್ನೂ ಅವನು ತಿಂದನು. ಹೀಗೆ ಆ ವನದಲ್ಲಿದ್ದ ಹಣ್ಣುಗಳನ್ನೆಲ್ಲಾ ಕೆಡವಿ ತಿಂದುಬಿಟ್ಟನು.

೧೩೫. ಈ ಕಪಿಯು ಹೀಗೆ ಮಾಡುತ್ತಿದ್ದುದನ್ನು ಆ ವನರಕ್ಷಕರು ನೋಡಿ ಅದನ್ನು ಹಿಡಿದುಕೊಳ್ಳಲು ಓಡಿಬಂದರು. ಆ ರಾಕ್ಷಸರು ಹತ್ತಿರಕ್ಕೆ ಬರಲು ಹನುಮನು ಮರವನ್ನು ಕಿತ್ತುಕೊಂಡು ಅವರನ್ನು ಹೊಡೆದನು.

೧೩೬. ಅನಂತರ ಆ ಅಶೋಕವನದ ಮರಗಳೆಲ್ಲವನ್ನೂ ಕಿತ್ತು ಮರಗಳಿಲ್ಲದಂತೆಯೇ ಮಾಡಿದನು. ಕೊನೆಗೆ ಸೀತೆಯು ಕುಳಿತಿದ್ದ ಆ ಒಂದು ಮರವು ಹೊರತಾಗಿ ಆ ವನವು ಮರಗಳಿಲ್ಲದೆ ಶೂನ್ಯವಾಯಿತು.

ಬಭಂಜ ಚೈತ್ಯಪ್ರಾಸಾದಂ ಹತ್ವಾ ತದ್ರಕ್ಷಕರ್ಾ ಕ್ಷಣಾತ್ ।
ತತಸ್ತಾ ರಾಕ್ಷಸೀಸ್ಸರ್ವಾ ವನಭಂಗಂ ನಿರೀಕ್ಷ್ಯ ಚ ॥ ೧೩೭ ॥

ಪಪ್ರಚ್ಛುರ್ಜಾನಕೀಂ ಸರ್ವಾಃ ಕೋಽಯಂ ಕಸ್ಯ ಕುತಸ್ತ್ವಿಹ ।
ತಾಸ್ಸರ್ವಾ ಜಾನಕೀ ಪ್ರಾಹ ರಾಕ್ಷಸಾಃ ಕಾಮರೂಪಿಣಃ ॥ ೧೩೮ ॥

ವಿಚರಂತಿ ಮುದಾ ಭೂಮ್ಯಾಂ ವೇದ್ಮ್ಯಹಂ ಭಿಕ್ಷುರೂಪಿಣಾ ।
ಯದಾ ಹೃತಾ ಪಂಚವಟ್ಯಾಂ ರಾವಣೇನ ಹಿ ತದ್ವನಾತ್ ॥ ೧೩೯ ॥

ತಸ್ಮಾತ್ ಜ್ಞೇಯಸ್ತು ಯುಷ್ಮಾಭಿಃ ಕೋಽಯಂ ಮಾಂ ಪೃಚ್ಛತೇದ್ಯ ಕಿಂ ।
ಇತಿ ತಸ್ಯಾ ವಚಶ್ಶ್ರುತ್ವಾ ರಾಕ್ಷಸ್ಯೋಽ ಭಯವಿಹ್ವಲಾಃ ॥ ೧೪೦ ॥

---

೧೩೭. ಚೈತ್ಯಪ್ರಾಸಾದವೆಂಬ ಅಲ್ಲಿರುವ ಮನೆಯಲ್ಲಿದ್ದ ಆಳುಗಳನ್ನು ಕೊಂದು ಆ ಮನೆಯನ್ನು ಮುರಿದುಹಾಕಿದನು. ಆಮೇಲೆ ರಾಕ್ಷಸಿಯರು ಆ ವನವು ನಾಶವಾದುದನ್ನು ನೋಡಿದರು.

೧೩೮. ಅವರೆಲ್ಲರೂ ಜಾನಕಿಯನ್ನು ಕುರಿತು ಎಲೈ ಜಾನಕಿಯೆ ! ಇವನಾರು ? ಯಾರಕಡೆಯವನು ? ಎಲ್ಲಿಂದ ಬಂದಿರುವನು ? ಎಂದು ಕೇಳಲು ನನಗೇನು ಗೊತ್ತು ? ರಾಕ್ಷಸರು ಇಷ್ಟಬಂದಂತೆ ಅವತಾರವನ್ನು ತಾಳಬಲ್ಲರು.

೧೩೯. ಅವರೆಲ್ಲರೂ ಕಾಮರೂಪವನ್ನು ಹೊಂದಿ ಸಂತೋಷವಾಗಿ ಲೋಕದಲ್ಲಿ ಸಂಚರಿಸುತ್ತಾರೆ. ಇದನ್ನು ಸನ್ಯಾಸಿಯ ರೂಪವನ್ನು ಧರಿಸಿದ್ದ ರಾವಣನಿಂದಲೇ ನಾನು ತಿಳಿದುಕೊಂಡಿದ್ದೇನೆ. ಆ ರೀತಿಯಲ್ಲಿದ್ದುಕೊಂಡು ತಾನೆ ಅವನು ವನದಿಂದ ನನ್ನನ್ನು ಕದ್ದು ತಂದನು.

೧೪೦. ಆದುದರಿಂದ ನೀವೇ ಅವನನ್ನು ಕೇಳಿ ತಿಳಿದುಕೊಳ್ಳಬೇಕು. ಈಗ ನನ್ನನ್ನು ಏಕೆ ಕೇಳುತ್ತೀರಿ ? ಎನ್ನಲು ಈಕೆಯ ಮಾತನ್ನು ಕೇಳಿ ರಾಕ್ಷಸಿಯರು ಭಯಗೊಂಡರು.

ದಶಾನನಂ ಹಿ ತದ್ವೃತ್ತಂ ಯಯುಶ್ಶೀಘ್ರಂ ನಿವೇದಿತುಂ ।
ಏತಸ್ಮಿನಂತರೇ ಪ್ರಾತರ್ಮಂಚಕೇ ಕಟಿಬಂಧನಂ ॥ ೧೪೧ ॥

ನಿರೀಕ್ಷ್ಯ ರಾವಣಶ್ಚಾಥ ಗಯಸ್ಯ ಚ ಕಿತಿತಸ್ತದಾ ।
ಭುಕ್ತಾಂ ಮಂಡೋದರೀಂ ಜ್ಞಾತ್ವಾ ತಾಂ ಹಂತುಂ ಖಡ್ಗಮಾದಧೇ॥೧೪೨॥

ತದಾ ನಿವಾರಿತಸ್ತ್ರೀಭಿಃ ಸ್ತ್ರೀಹತ್ಯಾಂ ಮಾ ಕರೋತ್ವಿತಿ ।
ತದಾ ಕ್ರುದ್ಧೋ ದಶಗ್ರೀವಸ್ತೂಷ್ಣೀಂ ಗತ್ವಾ ಗಯು ಗೃಹಂ ॥ ೧೪೩ ॥

ಅವಧೀನ್ನಿದ್ರಿತಂ ವೀರಂ ಖಡ್ಗೇನ ಸ್ವಗೃಹಂ ಯಯೌ ।
ತದಾ ವಿಭೀಷಣಃ ಪ್ರಾತರ್ಬಂಧೋರ್ವಸ್ತ್ರಂ ಸ್ವಮಂಚಕೇ ॥ ೧೪೪ ॥

---

೧೪೧. ಅನಂತರ ದಶಾನನನಿಗೆ ಈ ವಿಷಯವನ್ನು ತಿಳಿಸಲು ಕೂಡಲೇ ಓಡಿಹೋದರು. ಇಷ್ಟರಲ್ಲಿಯೇ ದಶಕಂಠನು ಬೆಳಗ್ಗೆ ಎದ್ದು ತನ್ನ ಮಂಚದ ಮೇಲೆ ಗಯನು ಕಟ್ಟಿಕೊಳ್ಳುವ ಸೊಂಟದ ಪಟ್ಟಿಯು ಬಿದ್ದಿರುವುದನ್ನು ನೋಡಿದನು.

೧೪೨. ಅನಂತರ ರಾವಣನು ಆಶ್ಚರ್ಯಪಡುತ್ತಾ ಇವನು ಮಂಡೋದರಿಯಲ್ಲಿ ರಮಿಸಿರುವನೆಂದು ತಿಳಿದು ಆ ಮಂಡೋದರಿಯನ್ನು ಕೊಲ್ಲಲು ಕತ್ತಿಯನ್ನು ತೆಗೆದುಕೊಂಡನು.

೧೪೩. ಆಗ ಅಲ್ಲಿದ್ದ ಹೆಂಗಸರು ಸ್ತ್ರೀಹತ್ಯೆಯನ್ನು ಮಾಡಬೇಡವೆಂದು ತಡೆದರು. ಕೋಪಗೊಂಡಿದ್ದ ದಶಗ್ರೀವನು ಸುಮ್ಮನೆ ಗಯನ ಮನೆಗೆ ಹೋದನು.

೧೪೪. ಅಲ್ಲಿ ನಿದ್ದೆಮಾಡುತ್ತಿದ್ದ ಆ ಗಯನನ್ನು ಕೊಂದು ಬಿಟ್ಟನು. ಆಮೇಲೆ ತನ್ನ ಮನೆಗೆ ಬಂದನು. ವಿಭೀಷಣನು ಬೆಳಗ್ಗೆ ಎದ್ದು ಅಣ್ಣನ ಬಟ್ಟೆಯು ತನ್ನ ಮಂಚದಮೇಲಿರುವುದನ್ನು ನೋಡಿದನು.

ದೃಷ್ಟ್ವಾ ತಾಂ ಸರಮಾಂ ಹಂತುಂ ದುದ್ರುವೇ ವರ್ಜಿತಸ್ತದಾ ।
ಸ್ತ್ರೀಭಿಃ ಧೃತ್ವಾ ತಸ್ಯ ಹಸ್ತಂ ಸ್ತ್ರೀಹತ್ಯಾ ಗರ್ಹಿತಾ ತ್ವಿತಿ ॥ ೧೪೫ ॥

ವಿಭೀಷಣಸ್ತದಾರಭ್ಯ ಬಂಧೋಸ್ತ್ರಾಸಮುಮನ್ಯತ ।
ಏವಮಾಸೀಚ್ಚ ಲಂಕಾಯಾಂ ಕೌತುಕಂ ಕಪಿನಾ ಕೃತಂ ॥ ೧೪೬ ॥

ಅಥ ವೇಗೇನ ರಾಕ್ಷಸ್ಯಃ ಸಭಾಸಂಸ್ಥಂ ದಶಾನನಂ ।
ವೃತ್ತಂ ನಿವೇದಯಾಮಾಸುಃ ಸ್ಖಲದ್ಬಾಷ್ಪಾ ವನೋದ್ಭವಂ ॥ ೧೪೭ ॥

ತಚ್ಛ್ರುತ್ವಾ ರಾವಣಃ ಕ್ರೋಧಾತ್ಕಪಿನೋತ್ಪಾಟಿತಂ ವನಂ ।
ವನಪಾಲಂ ಸಮಾಹೂಯ ಜಂಬುಮಾಲಿನಮಬ್ರವೀತ್ ॥ ೧೪೮ ॥

---

೧೪೫. ಆಗ ವಿಭೀಷಣನು ಹೆಂಡತಿಯಾದ ಸರಮೆಯನ್ನು ಕೊಲ್ಲಲು ಹೋದನು. ಅಲ್ಲಿದ್ದ ಹೆಂಗಸರು ಅವನ ಕೈಯ್ಯನ್ನು ಹಿಡಿದುಕೊಂಡು ತಡೆದರು. ಮತ್ತು ಸ್ತ್ರೀಹತ್ಯೆಯು ಕೆಟ್ಟದ್ದೆಂದು ಎಚ್ಚರಿಸಿದರು.

೧೪೬. ಅದು ಮೊದಲುಗೊಂಡು ವಿಭೀಷಣನು ರಾವಣನಿಂದ ತೊಂದರೆಯುಂಟೆಂದು ತಿಳಿದನು. ಈ ರೀತಿಯಾಗಿ ಲಂಕೆಯಲ್ಲಿ ಆ ಕಪಿಯು ಆಶ್ಚರ್ಯಕರವಾದ ಕೆಲಸವನ್ನು ಮಾಡಿತು.

೧೪೭. ಇತ್ತ ರಾಕ್ಷಸಿಯರು ಸಭೆಯಲ್ಲಿದ್ದ ದಶಾನನನಿಗೆ ವನದಲ್ಲಿ ನಡೆದ ಸಂಗತಿಯನ್ನು ಕಣ್ಣೀರು ಸುರಿಸುತ್ತಾ ತೊದಲು ತೊದಲು ನುಡಿಯಿಂದ ಅಂಜುತ್ತ ಹೇಳಿದರು.

೧೪೮. ಅದನ್ನು ಕೇಳಿ ರಾವಣನು ಕೋಪದಿಂದ ವನಪಾಲಕನಾದ ಜಂಬುಮಾಲಿಯನ್ನು ಕರೆದು ಇಂತೆಂದನು.

ರಾಕ್ಷಸೈರ್ನಿಯುತೈರ್ಗಚ್ಛ ಕೀಶಂ ಧೃತ್ವಾ ಸಮಾನಯ ।
ತಥೇತಿ ಸ ಯಯೌ ವೇಗಾದಶೋಕವನಿಕಾಂ ಪ್ರತಿ ॥ ೧೪೯ ॥

ದೃಷ್ಟ್ವಾ ಸೈನ್ಯಂ ಧೀರ್ಘನಾದಂ ಚಕಾರ ಕಪಿಕುಂಜರಃ ।
ತತಸ್ತೇ ರಾಕ್ಷಸಾಶ್ಶಸ್ತ್ರೈರ್ನಿಜಘ್ನುರ್ವಾನರೋತ್ತಮಂ ॥ ೧೫೦ ॥

ತತ ಉತ್ಪ್ಲುತ್ಯ ಹನುಮಾನ್ ತೋರಣೇನ ಸಮಂತತಃ ।
ನಿಷ್ಪಿಪೇಷ ಕ್ಷಣಾದೇವ ಮಶಕಾನಿವ ಯೂಥಪಃ ॥ ೧೫೧ ॥

ಹತ್ವಾ ತಾನ್ ರಾಕ್ಷಸಾನ್ಸರ್ವಾಂಸ್ತತೋ ವೇಗೇನ ಮಾರುತಿಃ ।
ತಾಲವೃಕ್ಷಂ ಸಮುತ್ಪಾಟ್ಯ ಜಘಾನ ಜಂಬುಮಾಲಿನಂ ॥ ೧೫೨ ॥

---

೧೪೯. ಎಲೈ ಜಂಬುಮಾಲಿಯೆ! ಸಾವಿರ ಜನ ರಾಕ್ಷಸರನ್ನು ಕರೆದು ಕೊಂಡು ಹೋಗಿ ಆ ಕಪಿಯನ್ನು ಹಿಡಿದು ತೆಗೆದುಕೊಂಡು ಬಾ ಎಂದೆನಲು ಅವನು ಅಶೋಕವನಕ್ಕೆ ಹೋದನು.

೧೫೦. ಈ ಹನುಮಂತನು ಆ ಸೈನ್ಯವನ್ನು ನೋಡಿ ಸಿಂಹಗರ್ಜನೆಯನ್ನು ಮಾಡಿದನು. ಆಮೇಲೆ ಆ ರಾಕ್ಷಸರು ತಮ್ಮ ತಮ್ಮ ಶಸ್ತ್ರಗಳಿಂದ ಆ ಕಪಿಯನ್ನು ಹೊಡೆದರು.

೧೫೧. ಆಗ ಹನುಮಂತನು ನೆಗೆದು ಊರು ಬಾಗಿಲಿನಮೇಲೆ ಕುಳಿತು ಆ ಬಾಗಿಲನ್ನು ಕಿತ್ತುಕೊಂಡು ಅವರೆಲ್ಲರನ್ನೂ ಸಲಗನು ಸೊಳ್ಳೆಗಳನ್ನು ತಿಕ್ಕುವಂತೆ ತಿಕ್ಕಿ ನಾಶಮಾಡಿದನು.

೧೫೨. ಮಾರುತಿಯು ಅವರೆಲ್ಲರನ್ನೂ ಬೇಗನೆ ಕೊಂದು ಒಂದು ತಾಳೆಯ ಮರವನ್ನು ಕಿತ್ತು ತೆಗೆದುಕೊಂಡು ಆ ಜಂಬುಮಾಲಿಯನ್ನು ಹೊಡೆದು ಕೊಂದನು.

ತಾನ್ ಸರ್ವಾನ್ ನಿಹತಾನ್ ಶ್ರುತ್ವಾ ಪಂಚಸೇನಾಪತೀನ್ಪುನಃ ।
ರಾವಣಃ ಪ್ರೇಷಯಾಮಾಸ ಹತಾಸ್ತೇ ತೋರಣೇನ ಚ ॥ ೧೫೩ ॥

ವಾಯುಪುತ್ರೇಣ ವೇಗೇನ ಲಕ್ಷರಾಕ್ಷಸಸಂಯುತಾಃ ।
ಸ ತಾನಪಿ ಮೃತಾನ್ ಶ್ರುತ್ವಾಕ್ಷಂ ಪುತ್ರಂ ಪ್ರೇಷಯುತ್ತದಾ ॥ ೧೫೪ ॥

ಕಪಿನಾ ಮಾರಿತಸ್ಸೋಽಪಿ ಸಸೈನ್ಯೋ ಮುದ್ಗರೇಣ ಚ ।
ತತಸ್ಸಂಪ್ರೇಷಯಾಮಾಸ ಪುತ್ರಮಿಂದ್ರಜಿತಂ ಪುನಃ ॥ ೧೫೫ ॥

ತತಸ್ಸ ರಥಮಾರೂಢಃ ಕೋಟಿರಾಕ್ಷಸವೇಷ್ಟಿತಃ ।
ಯುದ್ಧಂ ಚಕಾರ ಕಪಿನಾ ಶಸ್ತ್ರೈರಸ್ತ್ರೈಸ್ಸುದುರ್ಧರೈಃ ॥ ೧೫೬ ॥

---

೧೫೩. ರಾವಣನು ಇವರೆಲ್ಲರೂ ಸತ್ತುದನ್ನು ತಿಳಿದು ಐದುಜನ ಸೇನಾಪತಿಗಳನ್ನು ಕಳುಹಿಸಿದನು. ಅವರೆಲ್ಲರನ್ನೂ ಮಾರುತಿಯು ಆ ಬಾಗಿಲುವಾಡದಿಂದಲೇ ಹೊಡೆದು ಕೊಂದನು.

೧೫೪. ಮತ್ತು ಆ ಐದುಜನ ಸೇನಾಪತಿಗಳ ಜೊತೆಯಲ್ಲಿ ಬಂದಿದ್ದ ಲಕ್ಷಜನ ರಾಕ್ಷಸ ಸೈನಿಕರನ್ನೂ ಬೇಗನೆ ಕೊಂದನು. ರಾವಣನು ಈ ಐದುಮಂದಿ ಸೇನಾಪತಿಗಳೂ ಸತ್ತುದನ್ನು ಕೇಳಿ ಅಕ್ಷಯಕುಮಾರನನ್ನು ಕಳುಹಿಸಿದನು.

೧೫೫. ಕಪಿಯು ಸೈನ್ಯದೊಡನೆ ಬಂದ ಅಕ್ಷಯಕುಮಾರನನ್ನೂ ಅವನ ಅನುಯಾಯಿಗಳನ್ನು ಕೊಂದಿತು. ಇದನ್ನು ಕೇಳಿ ರಾವಣನು ಇಂದ್ರಜಿತು ವೆಂಬ ಮಗನನ್ನು ಕಪಿಯಮೇಲೆ ಯುದ್ಧಕ್ಕೆ ಕಳುಹಿಸಿದನು.

೧೫೬. ಆ ಇಂದ್ರಜಿತುವು ರಥವನ್ನು ಹತ್ತಿ ಕೋಟಿಜನ ರಾಕ್ಷಸರನ್ನೂ ಜೊತೆಯಲ್ಲಿ ಕರೆದುಕೊಂಡು ಹೊರಟನು. ಅವನು ಕಪಿಯೊಡನೆ ಶಸ್ತ್ರಗಳಿಂದಲೂ ಅಸ್ತ್ರಗಳಿಂದಲೂ ಯುದ್ಧವನ್ನು ಮಾಡಿದನು.

ತದಾ ಪುಚ್ಛೇನ ಸೈನ್ಯಾಯು ಕೃತ್ವಾ ಪ್ರಾಕಾರಮುತ್ತಮಂ ।
ನಿಷ್ಪಿಪೇಷ ತೋರಣೇನ ರಾಕ್ಷಸಾನ್ ಮಾರುತಿಃ ಕ್ಷಣಾತ್ ॥ ೧೫೭ ॥

ತತೋ ವೃಕ್ಷಂ ಸಮುತ್ಪಾಟ್ಯ ಮೇಘನಾದಮತಾಡಯತ್ ।
ವೃಕ್ಷೇಣ ಭಿನ್ನಸರ್ವಾಂಗೋ ಮೇಘನಾದೋಽವಿಶದ್ಗೃಹಂ ॥ ೧೫೮ ॥

ಏತಸ್ಮಿನ್ನಂತರೇ ಬ್ರಹ್ಮಾ ಪ್ರಾರ್ಥಯಾಮಾಸ ಮಾರುತಿಂ ।
ಬ್ರಹ್ಮಾಸ್ತ್ರಂ ಮಾನಯನ್ ಮೇದ್ಯ ತ್ವಂ ಲಂಕಾಂ ಯಾಹಿ ರಾವಣಂ॥೧೫೯

ತಥೇತ್ಯಂಗೀಚಕಾರಾಸೌ ಮೇಘನಾದಂ ಯಯೌ ವಿಧಿಃ ।
ವಿಧಿಃ ಪ್ರಾಹ ಮೇಘನಾದಂ ಕ್ವ ಗತೋದ್ಯ ಪರಾಕ್ರಮಃ ॥ ೧೬೦ ॥

---

೧೫೭. ಆಗ ಹನುಮಂತನು ಆ ಸೈನ್ಯಗಳ ಸುತ್ತಲೂ ತನ್ನ ಬಾಲದಿಂದ ಕೋಟೆಯನ್ನು ಕಟ್ಟಿ ಬಾಗಿಲಿನ ಕಂಭವನ್ನು ಕಿತ್ತುಕೊಂಡು ಅವರೆಲ್ಲರನ್ನೂ ಕೊಂದನು.

೧೫೮. ಅನಂತರ ಮರವನ್ನು ಕಿತ್ತುಕೊಂಡು ಮೇಘನಾದನನ್ನು ಹೊಡೆದನು. ಆ ಮರದಿಂದ ಏಟು ಬಹುವಾಗಿ ಬೀಳಲು ಆ ಮೇಘನಾದನು ಮನೆಗೆ ಹೊರಟು ಹೋದನು.

೧೫೯. ಇಷ್ಟರಲ್ಲಿ ಬ್ರಹ್ಮನು ಬಂದು ಮಾರುತಿಯನ್ನು ಕುರಿತು "ನೀನು ಬ್ರಹ್ಮಾಸ್ತ್ರವನ್ನು ಗೌರವಿಸಿ ಲಂಕೆಯನ್ನು ಸುತ್ತಿಕೊಂಡು ರಾವಣನ ಬಳಿಗೆ ಹೋಗು." ಎಂದು ಪ್ರಾರ್ಥಿಸಿದನು.

೧೬೦. ಮಾರುತಿಯು ಹಾಗೆಯೇ ಆಗಲೆಂದು ಒಪ್ಪಿಕೊಂಡನು. ಆನಂತರ ಮೇಘನಾದನ ಬಳಿಗೆ ಬ್ರಹ್ಮನು ಹೋದನು. ಎಲೈ ಮೇಘನಾದನೆ ! ನಿನ್ನ ಪರಾಕ್ರಮವು ಎಲ್ಲಿ ಹೋಯಿತು ?

ಗಚ್ಛ ಮೇಸ್ತ್ರೇಣ ತಂ ಬಧ್ವಾ ಪಿತುರಗ್ರೇ ಸಮಾನಯ ।
ತದ್ಬ್ರಹ್ಮವಚನಂ ಶ್ರುತ್ವಾ ಮೇಘನಾದಃ ಪುನರ್ಯಯೌ ॥ ೧೬೧ ॥

ಬ್ರಹ್ಮಾಸ್ತ್ರೇಣಾಥ ಬಧ್ವಾ ತಮಾನಯಾಮಾಸ ರಾವಣಂ ।
ತತೋ ರಾವಣವಾಕ್ಯೇನ ಪ್ರಹಸ್ತಃ ಪ್ರಾಹ ಮಾರುತಿಂ ॥ ೧೬೨ ॥

ಕಸ್ತ್ವಂ ಕುತಃ ಸಮಾಯಾತಃ ಪ್ರೇಷಿತಃ ಕೇನ ವಾ ವದ ।
ತತಃ ಸ ರಾಮವೃತ್ತಾಂತಂ ಕಥಯಾಮಾಸ ವಿಸ್ತರಾತ್ ।
ಪುನಸ್ತಂ ಬೋಧಯಾಮಾಸ ರಾವಣಂ ವಾಯುನಂದನಃ ॥ ೧೬೩ ॥

ವಿಸೃಜ್ಯ ಮೌರ್ಖ್ಯಾದ್ಧೃದಿ ಶತ್ರುಭಾವನಾಂ
ಭಜಸ್ವ ರಾಮಂ ಶರಣಾಗತಪ್ರಿಯಂ ।
ಸೀತಾಂ ಪುರಸ್ಕೃತ್ಯ ಸಪುತ್ರಬಾಂಧವೋ
ರಾಮಂ ನಮಸ್ಕೃತ್ಯ ವಿಮುಚ್ಯಸೇ ಭಯಾತ್ ॥ ೧೬೪ ॥

---

೧೬೧. ಈಗ ಹೋಗಿ ನನ್ನ ಅಸ್ತ್ರದಿಂದ ಕಟ್ಟಿ ತಂದೆಯ ಬಳಿಗೆ ಕರೆದುಕೊಂಡು ಬಾರೆನ್ನಲು ಬ್ರಹ್ಮನ ಈ ಮಾತಿನಂತೆ ಮೇಘನಾದನು ಮತ್ತೆ ಬಂದನು.

೧೬೨. ಬ್ರಹ್ಮಾಸ್ತ್ರದಿಂದ ಆ ಕಪಿಯನ್ನು ಕಟ್ಟಿ ರಾವಣನ ಬಳಿಗೆ ತಂದನು. ಆಗ ರಾವಣನ ಅಪ್ಪಣೆಯಂತೆ ಪ್ರಹಸ್ತನು ಮಾರುತಿಯನ್ನು ಕುರಿತು ಇಂತೆಂದನು.

೧೬೩. ನೀನಾರು? ಎಲ್ಲಿಂದ ಬಂದೆ? ಏತಕ್ಕೆ ಬಂದೆ? ಯಾರು ಕಳುಹಿಸಿದರು? ಹೇಳು. ಎನ್ನಲು ಅನಂತರ ಮಾರುತಿಯು ರಾಮನ ವೃತ್ತಾಂತವನ್ನೆಲ್ಲಾ ವಿಸ್ತಾರವಾಗಿ ಹೇಳಿದನು. ಮತ್ತು ಈ ವಾಯುನಂದನನಾದ ಹನುಮಂತನು ಆ ರಾವಣನನ್ನು ಕುರಿತು ಇಂತೆಂದು ಮತ್ತೆ ಬುದ್ಧಿ ಹೇಳಿದನು.

೧೬೪. ಎಲೈ ರಾವಣನೆ! ನಿನ್ನ ಮನಸ್ಸಿನಲ್ಲಿರುವ ಆ ರಾಮನ ವಿಷಯಕವಾದ ಶತ್ರುಭಾವನೆಯನ್ನು ಬಿಟ್ಟು ಬಿಡು. ಶರಣಾಗತರಲ್ಲಿ ವಿಶ್ವಾಸವುಳ್ಳ ಆತನನ್ನು ಸೇವಿಸು. ಸೀತೆಯನ್ನು ತೆಗೆದುಕೊಂಡು ಹೋಗಿ ಆ ರಾಮನಿಗೆ ಒಪ್ಪಿಸಿ ನಮಸ್ಕರಿಸಿಬರೆ ಆಗ ನಿನಗೂ ನಿನ್ನ ಬಂಧುಗಳಿಗೂ ಯಾರಿಗೂ ಭಯವೆಂಬುದೇ ಇರುವುದಿಲ್ಲ.

ಯಾವನ್ನಗಾಭಾಃ ಕಪಯೋ ಮಹಾಬಲಾ
ಹರೀಂದ್ರತುಲ್ಯಾ ನಖದಂಷ್ಟ್ರಯೋಧಿನಃ ।
ಲಂಕಾಂ ಸಮಾಕ್ರಮ್ಯ ವಿನಾಶಯಂತಿ ತೇ
ತಾವದ್ದ್ರುತಂ ದೇಹಿ ರಘೂತ್ತಮಾಯ ತಾಂ ॥ ೧೬೫ ॥

ಜೀವನ್ನ ರಾಮೇಣ ವಿಮೋಕ್ಷ್ಯಸೇ ತ್ವಂ
ಗುಪ್ತಸ್ಸುರೇಂದ್ರೈರಪಿ ಶಂಕರೇಣ ।
ನ ದೇವರಾಜಾಂಕಗತೋ ನ ಮೃತ್ಯೋಃ
ಪಾತಾಳಲೋಕಾನಪಿ ಸಂಪ್ರವಿಷ್ಟಃ ॥ ೧೬೬ ॥

ಶುಭಂ ಹಿತಂ ಪವಿತ್ರಂ ಚ ವಾಯುಪುತ್ರವಚಃ ಖಲಃ ।
ಪ್ರತಿಜಗ್ರಾಹ ನೈವಾಸೌ ಮ್ರಿಯಮಾಣ ಇವೌಷಧಂ ॥ ೧೬೭ ॥

---

೧೬೫. ಬೆಟ್ಟದಂತಿರುವ ಮಹಾಬಲಿಷ್ಠರಾದ ಇಂದ್ರೋಪೇಂದ್ರರಿಗೆ ಸಮರಾದ ನಖದಂಷ್ಟ್ರವೇ ಆಯುಧವಾಗಿ ಉಳ್ಳ ಕಪಿಗಳು ಬಂದು ಲಂಕೆಯನ್ನು ಮುತ್ತಿಗೆಹಾಕುವುದಕ್ಕೆ ಮೊದಲೇ ನೀನು ಬೇಗನೆ ಆ ಶ್ರೀರಾಮನಿಗೆ ಸೀತೆಯನ್ನು ಒಪ್ಪಿಸು.

೧೬೬. ನೀನು ರಾಮನೊಡನೆ ವೈರವನ್ನು ಕಟ್ಟಿಕೊಂಡರೆ ಇಂದ್ರನ ಮರೆಹೊಕ್ಕರಾಗಲಿ ಶಂಕರನ ಮರೆಹೊಕ್ಕರಾಗಲಿ ದೇವತೆಗಳ ಮರೆಹೊಕ್ಕರಾಗಲಿ ಕೊನೆಗೆ ಮೃತ್ಯುವಿನ ಮರೆಹೊಕ್ಕರೇ ಆಗಲಿ ಏನುಮಾಡಿದರೂ ಪ್ರಾಣಗಳಿಂದ ಉಳಿಯುವುದಿಲ್ಲ.

೧೬೭. ಶುಭವೂ ಹಿತವೂ ಪವಿತ್ರವೂ ಆದ ಈ ವಾಯುಪುತ್ರನ ಈ ಮಾತನ್ನು ಆ ರಾವಣನು ಸಾಯುವವನು ಔಷಧವನ್ನು ಗ್ರಹಿಸದಿರುವಂತೆ ಗ್ರಹಿಸಲಿಲ್ಲ.

ಇತಿ ತದ್ವಚನಂ ಶ್ರುತ್ವಾ ಮಾರುತಿಂ ಪ್ರಾಹ ರಾವಣಃ ।
ಯೇ ನೈವ ನಿರ್ಜಿತಾ ದೇವಾಸ್ತಸ್ಯ ಮೇ ಪೌರುಷಂ ತ್ವಯಾ ॥ ೧೬೮ ॥

ನ ದೃಷ್ಟಂ ವಲ್ಗಸೇ ವ್ಯರ್ಥಂ ಶ್ರುಣು ಕಿಂಚಿದ್ವದಾಮಿ ತೇ ।
ಪಂಚಾಂಗಪಾಠಕಶ್ಚಾಯಂ ಪಶ್ಯ ಬ್ರಹ್ಮಾ ಕೃತೋ ಮಯಾ ॥ ೧೬೯ ॥

ಪ್ರತೀಹಾರಸ್ತ್ವಯಂ ಸೂರ್ಯಶ್ಶಶೀ ಛತ್ರಧರಃ ಕೃತಃ ।
ವರುಣೋಽಯಂ ಜಲಗ್ರಾಹೀ ಮಾರ್ಜಕಃ ಪವನಸ್ತ್ವಿಹ ॥ ೧೭೦ ॥

ಅಗ್ನಿಃ ಕೃತೋಽಯಂ ರಜಕೋ ಮಾಲಾಕಾರಶ್ಶಚೀಪತಿಃ ।
ದಂಡಪಾಣಿರ್ಯಮಶ್ಚಾತ್ರ ದಾಸ್ಯಶ್ಚಾತ್ರ ಸುರಸ್ತ್ರಿಯಃ ॥ ೧೭೧ ॥

---

೧೬೮. ಮಾರುತಿಯು ಹೇಳಿದ ಈ ಮಾತನ್ನು ಕೇಳಿ ರಾವಣನು ಇಂತೆಂದನು. ಎಲೈ ಕಪಿಯೆ ! ದೇವತೆಗಳೆಲ್ಲರನ್ನೂ ಗೆದ್ದಿರುವ ನನ್ನ ಪೌರುಷವನ್ನು ನೀನು ನೋಡಿಲ್ಲವಲ್ಲ.

೧೬೯. ಆದುದರಿಂದ ವ್ಯರ್ಥವಾಗಿ ಹರಟುತ್ತೀಯೆ. ಇದೂ ಅಲ್ಲದೆ ಒಂದು ವಿಷಯವನ್ನು ಹೇಳುತ್ತೇನೆ. ಕೇಳು. ಸಕಲ ಲೋಕವನ್ನೂ ಸೃಷ್ಟಿಸಿದ ಬ್ರಹ್ಮನೇ ನನ್ನ ಮನೆಯಲ್ಲಿ ಪಂಚಾಂಗವನ್ನು ಹೇಳುವಂತೆ ಮಾಡಿಕೊಂಡಿದ್ದೇನೆ. ನೋಡು.

೧೭೦. ಸೂರ್ಯನನ್ನು ಬಾಗಿಲು ಕಾಯುವುದಕ್ಕೆ ಇಟ್ಟುಕೊಂಡಿದ್ದೇನೆ. ಚಂದ್ರನು ನನಗೆ ಛತ್ರಿಹಿಡಿಯುವ ಆಳಾಗಿದ್ದಾನೆ. ವರುಣನು ನನ್ನ ಮನೆಗೆ ನೀರುತರುವ ಪರಿಚಾರಕನಾಗಿದ್ದಾನೆ. ವಾಯುವು ನನ್ನ ಮನೆಯನ್ನೆಲ್ಲಾ ಗುಡಿಸುತ್ತಿರುವನು.

೧೭೧. ಅಗ್ನಿಯೇ ನನ್ನ ಮನೆಯಲ್ಲಿ ಅಗಸನಾಗಿರುವನು. ಶಚೀಪತಿಯಾದ ಇಂದ್ರನು ಹೂವನ್ನು ಕಟ್ಟುವವನಾಗಿದ್ದಾನೆ. ಯಮನು ಕೋಲುಕಾರನಾಗಿದ್ದಾನೆ. ದೇವತಾಸ್ತ್ರೀಯರೆಲ್ಲರೂ ನನ್ನ ಮನೆಯಲ್ಲಿ ದಾಸಿಯರಾಗಿರುವರು.

ಮಾರ್ತಂಡೋ ನಾಪಿತಶ್ಚಾಯಂ ಗಣಪಃ ಖರರಕ್ಷಕಃ ।
ಮಂಗಲಾದ್ಯಾ ಗೃಹಾಸ್ಸಪ್ತ ಮೇ ಸೋಪಾನ ಇವಾಸನೇ ॥ ೧೭೨ ॥

ಶಿಶುಸೇವಾತತ್ಪರೇಯಂ ಷಷ್ಠೀ ದೇವೀ ಮಯಾ ಕೃತಾ ।
ಆಂಧೋಳಿತಶ್ಚ ಕೈಲಾಸಃ ಕುಬೇರೋಪಿ ವಿನಿರ್ಜಿತಃ ॥ ೧೭೩ ॥

ಕಥಂ ಮಮಾಗ್ರೇ ವಿಲಪಸ್ಯಭೀತವತ್
ಪ್ಲವಂಗಮಾನಾಮ ಧಮೋಸಿ ದುಷ್ಟಧೀಃ ।
ಕ ಏಷ ರಾಮಃ ಕತಮೋ ವನೇಚರೋ
ನಿಹನ್ಮಿ ಸುಗ್ರೀವಯುತಂ ನರಾಧಮಂ ॥ ೧೭೪ ॥

ಇತ್ಯುಕ್ತ್ವಾ ಹಂತುಮುದ್ಯುಕ್ತಸ್ತಂ ದಶಾಸ್ಯಸ್ಸಭಾಸ್ಥಿತಃ ।
ತದಾ ನಿವಾರಯಾಮಾಸ ರಾವಣಂ ಸ ವಿಭೀಷಣಃ ॥ ೧೭೫ ॥

---

೧೭೨. ಮಾರ್ತಂಡನು ಕ್ಷೌರಿಕನಾಗಿರುವನು. ಗಣಪತಿಯು' ನನ್ನ ಕತ್ತಿಗಳನ್ನು ಕಾಯುತ್ತಾನೆ ಮಂಗಳನೇ ಮುಂತಾದ ಏಳುಜನ ಗ್ರಹಗಳು ನನ್ನ ಸಿಂಹಾಸನಕ್ಕೆ ಸೋಪಾನಗಳಾಗಿದ್ದಾರೆ.

೧೭೩. ಷಷ್ಠೀದೇವಿಯು ಮಕ್ಕಳನ್ನು ರಕ್ಷಿಸುವ ದಾದಿಯಾಗಿದ್ದಾಳೆ. ನಾನು ಆ ಕೈಲಾಸವನ್ನೇ ಕೈಯ್ಯಿಂದ ಎತ್ತಿ ತೂಗಿದ್ದೇನೆ. ಕುಬೇರನನ್ನೇ ಗೆದ್ದಿರುವೆನು.

೧೭೪. ಇಂತಹ ನನ್ನ ಎದುರಿಗೆ ಸ್ವಲ್ಪವೂ ಹೆದರದೆ ಹರಟುತ್ತಿರುವೆಯಲ್ಲ! ನೀನು ಕಪಿಗಳೊಳಗೆ ನೀಚನು. ದುಷ್ಟನು. ಆ ರಾಮನೆಂಬುವನಾರು? ಕಾಡಿನಲ್ಲಿ ಓಡಾಡುವವರಲ್ಲಿ ಇವನು ಎಷ್ಟರವನು? ಈ ನರಾಧಮನನ್ನು ಸುಗ್ರೀವನೊಡನೆ ಕೊಂದು ಹಾಕುವೆನು.

೧೭೫ ರಾವಣನು ಹೀಗೆಂದು ಹೇಳುತ್ತಾ ಆ ಕಪಿಯನ್ನು ಕೊಲ್ಲುವುದಕ್ಕೆ ಹೋದನು. ಆಗ ಸಭೆಯಲ್ಲಿದ್ದ ವಿಭೀಷಣನು ದೂತನನ್ನು ಕೊಲ್ಲಬೇಡವೆಂದು ರಾವಣನನ್ನು ತಡೆದನು.

ಪರದೂತೋ ನ ಹಂತವ್ಯ ಇತ್ಯಾದಿವಚನೈಸ್ತದಾ ।
ತತಃ ಕ್ರೋಧಸಮಾವಿಷ್ಟೋ ರಾವಣೋ ಲೋಕರಾವಣಃ ॥ ೧೭೬ ॥

ದೂತಾನಾಜ್ಞಾಪಯಾಮಾಸ ಛೇದನೀಯಂ ತು ಲಾಂಗುಲಂ ।
ತದ್ರಾವಣವಚಶ್ಶ್ರುತ್ವಾ ತಕ್ಷಕಾಸ್ತೇ ಸಹಸ್ರಶಃ ॥ ೧೭೭ ॥

ಸ್ವಾಯುಧೈಶ್ಛೇದಯಾಮಾಸುಃ ಕುಠಾರಕ್ರಕಚಾದಿಭಿಃ ।
ಆಯುಧಾನ್ಯೇವ ಶತಶಸ್ತತ್ಪುಚ್ಛಾಘಾತಮಾತ್ರತಃ ॥ ೧೭೮ ॥

ಬಭೂವುಶ್ಚೂರ್ಣಾನಿ ತಸ್ಯ ರೋಮೋಪಿ ನ ವ್ಯಥಾ ।
ತನ್ನಿರೀಕ್ಷ್ಯ ದಶಾಸ್ಯಸ್ಸ ಮಾರುತಿಂ ವಾಕ್ಯಮಬ್ರವೀತ್ ॥ ೧೭೯ ॥

ನ ವೀರಾ ಗೋಪಯಂತ್ಯತ್ರ ಸ್ವೀಯಂ ಮೃತ್ಯುಮಪಿ ಕ್ವಚಿತ್ ।
ಅಥ ಸ್ವಂ ವದ ಪುಚ್ಛಸ್ಯ ಯೇನ ಘಾತೋದ್ಯ ತೇ ಭವೇತ್ ॥ ೧೮೦ ॥

---

೧೭೬. ಪರರ ದೂತರನ್ನು ಕೊಲ್ಲಬಾರದು ಎಂದು ಶಾಸ್ತ್ರವಿರುವುದು. ಎಂದು ಅನೇಕ ರೀತಿಯಾದ ವಚನಗಳನ್ನು ಹೇಳಿ ಸಮಾಧಾನಪಡಿಸಿದನು. ಆದರೂ ರಾವಣನಿಗೆ ಕೋಪವು ಶಮನವಾಗದೆ ಹೋಯಿತು.

೧೭೭-೧೭೮. ಆಗ ಆಳುಗಳನ್ನು ಕರೆದು ಈ ಕಪಿಯ ಬಾಲವನ್ನು ಕತ್ತರಿಸಿರಿ. ಎಂದು ಅಪ್ಪಣೆಮಾಡಿದನು. ರಾವಣನ ಈ ಮಾತುಗಳನ್ನು ಕೇಳಿ ಬಡಗಿಗಳು ಅನೇಕ ಜನರು ಬಂದು ಬಾಚಿಗಳಿಂದಲೂ ಗರಗಸದಿಂದಲೂ ಅವನ ಬಾಲವನ್ನು ಕತ್ತರಿಸಿದರು. ಆದರೆ ಅವನ ಬಾಲದ ಏಟಿನಿಂದ ಆ ಆಯುಧಗಳೇ ಮುರಿದುಹೋದುವು.

೧೭೯. ಈ ಆಯುಧಗಳು ಸಾವಿರಾರು ಚೂರಾದುವೇ ಹೊರತು ಅವನ ರೋಮಕ್ಕೂ ಕೂಡ ತೊಂದರೆಯಾಗಲಿಲ್ಲ. ಇದನ್ನು ದಶಾಸ್ಯನು ನೋಡಿ ಮಾರುತಿಯನ್ನು ಕುರಿತು ಇಂತೆಂದನು.

೧೮೦. ಎಲೈ ಕಪಿಯೆ! ವೀರರು ತಮ್ಮ ಮೃತ್ಯುವನ್ನೂ ಕೂಡ ಮರೆಮಾಚುವುದಿಲ್ಲ. ನೀನು ವೀರನಾಗಿದ್ದೀಯೆ. ಆದುದರಿಂದ ನಿನ್ನ ಪುಚ್ಛಕ್ಕೆ ತೊಂದರೆಯಾಗಬೇಕಾಗಿದ್ದರೆ ಏನುಮಾಡಬೇಕೆಂಬುದನ್ನು ತಿಳಿಸು.

ತದಾಮರತ್ವಂ ಸ್ವಂ ಪ್ರಾಹ ಕಪಿಸ್ತಚ್ಚ ಮೃಷೇತಿ ಸಃ ।
ಮತ್ವಾ ದಶಾಸ್ಯಸ್ತಂ ಪ್ರಾಹ ಪುನಸ್ಸತ್ಯಂ ವದೇತಿ ಚ ॥ ೧೮೧ ॥

ತದಾ ಸ ಮಾರುತಿಸ್ತೂಷ್ಣೀಂ ಕ್ಷಣಂ ಚಿತ್ತೇ ವ್ಯಚಿಂತಯತ್ ।
ಮತ್ಪಿತುಶ್ಚ ಸಖಾ ವಹ್ನಿಸ್ತಸ್ಮಾನ್ನಾಸ್ತಿ ಭಯಂ ಮಮ ॥ ೧೮೨ ॥

ತಸ್ಮಾತ್ಪುಚ್ಛಂ ದೀಪಯಿತ್ವಾ ಲಂಕಾಂ ದಗ್ಧಾಂ ಕರೋಮ್ಯಹಂ ।
ತತಸ್ತಂ ರಾವಣಂ ಪ್ರಾಹ ಮಾರುತಿಸ್ಸದಸಿ ಸ್ಥಿತಃ ॥ ೧೮೩ ॥

ಪುಚ್ಛಂ ಮೇ ವಹ್ನಿನಾ ದಗ್ಧಂ ಭವಿಷ್ಯತಿ ನ ಸಂಶಯಃ ।
ತತ್ತಸ್ಯ ವಚನಂ ಶ್ರುತ್ವಾ ರಾವಣೋ ನಿಜಕಿಂಕರಾನ್ ॥ ೧೮೪ ॥

---

೧೮೧. ಅದನ್ನು ಕೇಳಿದ ಹನುಮಂತನು ತನಗೆ ಸಾವೇ ಇಲ್ಲವೆಂದು ಹೇಳಲು ಆ ರಾವಣನು ಅದನ್ನು ಸುಳ್ಳೆಂದು ತಿಳಿದು ಸುಳ್ಳನ್ನು ಹೇಳಬೇಡ. ಮತ್ತೆ ಸತ್ಯವಾದ ಮಾತನ್ನು ಹೇಳು. ಎಂದನು.

೧೮೨. ಆಗ ಮಾರುತಿಯು ಸುಮ್ಮನೆ ಒಂದು ಕ್ಷಣಕಾಲ ತನ್ನ ಮನಸ್ಸಿನಲ್ಲಿ ಯೋಚಿಸಿದನು. ಅಗ್ನಿಯು ನನ್ನ ತಂದೆಗೆ ಸ್ನೇಹಿತನು. ಅವನಿಂದ ನನಗೆ ತೊಂದರೆಯಾಗುವುದಿಲ್ಲ.

೧೮೩. ಅವನಿಂದ ಬಾಲವನ್ನು ಹತ್ತಿಸಿಕೊಂಡು ನಾನು ಲಂಕೆಯನ್ನೆಲ್ಲಾ ಸುಟ್ಟುಬಿಡುತ್ತೇನೆ. ಎಂದು ನಿಶ್ಚಯಿಸಿ ಸಭೆಯಲ್ಲಿ ಕುಳಿತಿರುವ ರಾವಣನನ್ನು ಕುರಿತು ಇಂತೆಂದನು.

೧೮೪. ಎಲೈ ರಾವಣನೆ! ನನ್ನ ಬಾಲಕ್ಕೆ ಬೆಂಕಿಯನ್ನು ಹತ್ತಿಸಿದರೆ ಅದು ಬೆಂದುಹೋಗುತ್ತದೆ. ಇದಕ್ಕೆ ಸಂಶಯವಿಲ್ಲ. ಎನ್ನಲು ಅವನ ಮಾತನ್ನು ಕೇಳಿ ರಾವಣನು ತನ್ನ ಆಳುಗಳನ್ನು ಕರೆದು ಇಂತೆಂದು ಅಪ್ಪಣೆ ಮಾಡಿದನು.

ಆಜ್ಞಾಪಯಾಮಾಸ ಪುಚ್ಛಂ ದೀಪಯಿತ್ವಾ ಪ್ರಯತ್ನತಃ ।
ಲಂಕಾಯಾಂ ದರ್ಶನೀಯೋಽಯಂ ದೃಷ್ಟ್ವೈನಂ ಮದ್ಭಯಂ ಭವೇತ್ ೧೮೫

ಸರ್ವೇಷಾಂ ಮದ್ರಿಪೂಣಾಂ ಚ ತಥಾ ಚಕ್ರುಸ್ತ್ವರಾನ್ವಿತಾಃ ।
ತೈಲಾಕ್ತೈಃ ಶಣಪಟ್ಟೈಶ್ಚ ರಾಕ್ಷಸಾ ವಸನೈರಪಿ ॥ ೧೮೬ ॥

ಪುಚ್ಛಂ ಸಂವೇಷ್ಟಯಾಮಾಸುಸ್ತದಾ ಪುಚ್ಛಂ ವ್ಯವರ್ಧತ ।
ತತೋ ವಸನಹಟ್ಟಾತ್ತು ವಸ್ತ್ರಕೋಶಾನ್ವಿಲುಂಠ್ಯ ಚ ॥ ೧೮೭ ॥

ತತ್ಪುಚ್ಛಂ ವೇಷ್ಟಯಾಮಾಸುರ್ಗೃಹವಸ್ತ್ರೈರನೇಕಶಃ ।
ತತಃ ಪುರುಷನಾರೀಣಾಂ ಲಂಕಾಸ್ಥಾನಾಂ ನೃಪಾಜ್ಞಯಾ ॥ ೧೮೮ ॥

---

೧೮೫. ಎಲೈ ದೂತರಿರಾ! ಇವನ ಬಾಲಕ್ಕೆ ಹೇಗಾದರೂ ಮಾಡಿ ಬೆಂಕಿಯನ್ನು ಹತ್ತಿಸಿರಿ. ಅನಂತರ ಲಂಕೆಯಲ್ಲಿ ಮೆರವಣಿಗೆ ಮಾಡಿರಿ. ಇದನ್ನು ನೋಡಿ ಜನರು ನನ್ನಿಂದ ಭಯವುಂಟೆಂದು ತಿಳಿಯಲಿ. ಶತ್ರುಗಳಿಗೂ ನನ್ನ ಪರಾಕ್ರಮವು ಚೆನ್ನಾಗಿ ತಿಳಿಯಲಿ.

೧೮೬. ಅದೇ ರೀತಿಯಾಗಿ ಆ ಆಳುಗಳು ಬೇಗ ಬೇಗನೆ ಅವನ ಬಾಲವನ್ನು ಎಣ್ಣೆಯಿಂದ ನೆನೆಸಿದ ಶಣಬಿನ ನಾರಿನಿಂದಲೂ ಬಟ್ಟೆಗಳಿಂದಲೂ ಸುತ್ತಿದರು.

೧೮೭. ಇವರು ಸುತ್ತುತ್ತಿದ್ದಂತೆಲ್ಲಾ ಆ ಬಾಲವು ಬೆಳೆಯುತ್ತಲೇ ಇದ್ದಿತು. ಬಟ್ಟೆಯ ಮನೆಯಿಂದ ಬಟ್ಟೆಗಳೆಲ್ಲವನ್ನೂ ತಂದು ಆ ಬಾಲಕ್ಕೆ ಸುತ್ತಿದಳು.

೧೮೮–೧೯೦. ಇದೂ ಅಲ್ಲದೆ ಮನೆ ಮನೆಗೂ ಹೋಗಿ ಬಟ್ಟೆಗಳನ್ನು ತಂದು ಸುತ್ತಿದರು. ಅದೂ ಸಾಲದೆ ಇರಲು ರಾವಣನ ಅಪ್ಪಣೆಯಂತೆ ಲಂಕೆಯಲ್ಲಿದ್ದ ಹೆಂಗಸರು ಗಂಡಸರ ಬಟ್ಟೆಗಳನ್ನೂ ಬಲಾತ್ಕಾರದಿಂದ ಕಿತ್ತು

ಬಲಾದಾಚ್ಛಿದ್ಯ ವಸ್ತ್ರಾಣಿ ಚಕ್ರುಸ್ಸರ್ವಾನ್ ದಿಗಂಬರಾನ್ ।
ತತಶ್ಶಯ್ಯಾಮಂಟಪಾಚ್ಚ ಕಂಚುಕೀಃ ಕಂಚುಕಾನಪಿ ॥ ೧೮೯ ॥

ಪೌರಾಣಾಂ ರಾಜಗೇಹಾಚ್ಚ ತೇ ವಸ್ತ್ರಾಣಿ ಸಮಾನಯನ್ ।
ದೃಷ್ಟ್ವಾಪೂರ್ತಿಂ ತು ಪುಚ್ಛಸ್ಯ ಸಭಾಸ್ಥಾನಾಂ ನೃಪಸ್ಯ ಚ ॥ ೧೯೦ ॥

ವಸ್ತ್ರಮಾತ್ರೈಸ್ಸಮಸ್ತೈಶ್ಚ ಲಾಂಗೂಲಂ ವೇಷ್ಟಯಂಸ್ತದಾ ।
ಧ್ವಜೋಷ್ಣೀಷ ಪತಾಕಾಭಿರ್ವಿಪ್ರಾಣಾಂ ವಸನೈರಪಿ ॥ ೧೯೧ ॥

ಮಂಡೋದರ್ಯಾದಿವಸ್ತ್ರೈಶ್ಚ ಭಿಕ್ಷೂಣಾಂ ವಸನಾದಿಭಿಃ ।
ವೇಷ್ಟಯನ್ ಕಪಿಲಾಂಗೂಲಂ ತತಸ್ಸೀತಾಂ ಯಯುಯುಶ್ಚರಾಃ ॥ ೧೯೨ ॥

ತ ಜ್ಜ್ಞಾತ್ವಾ ಮಾರುತಿಶ್ಚಾಪಿ ಪುಚ್ಛಪೂರ್ತಿಂ ಪ್ರದರ್ಶಯತ್ ।
ತದಾ ಕೋಲಾಹಲಶ್ಚಾಸೀದ್ವಸ್ತ್ರಾರ್ಥಂ ಪ್ರತಿಸದ್ಮನಿ ॥ ೧೯೩ ॥

ತಂದುದರಿಂದ ಆ ಪಟ್ಟಣಿಗರೆಲ್ಲರೂ ದಿಗಂಬರರಾದರು. ಆದೂ ಸಾಲದಿರಲು ಹಾಸಿಗೆಯ ಬಟ್ಟೆಗಳನ್ನೂ ಅಂಗಿ ರವುಕೆಗಳನ್ನೂ ಪಟ್ಟಣಿಗರ ಬಳಿಯಿಂದಲೂ ಅರಮನೆಯಿಂದಲೂ ತಂದರು. ಇದರಿಂದಲೂ ತುಂಬದಿರಲು ಸಭೆಯಲ್ಲಿರುವವರ ಬಟ್ಟೆಗಳನ್ನೂ ರಾಜನ ಬಟ್ಟೆಗಳನ್ನೂ ತೆಗೆದುಕೊಂಡರು.

೧೯೧–೧೯೨. ಇಷ್ಟು ಬಟ್ಟೆಗಳನ್ನು ಸುತ್ತಿದರೂ ಬಾಲಕ್ಕೆ ಮರೆಯಾಗಿ ಮಾತ್ರ ಬಟ್ಟೆಯನ್ನು ಸುತ್ತಿದಂತಾಯಿತೇ ಹೊರತು ಸರಿಯಾಗಿ ಸುತ್ತಿದಂತಾಗಲಿಲ್ಲ. ಧ್ವಜ ರುಮಾಲು ಪಾತಾಕೆ ಬ್ರಾಹ್ಮಣರ ಬಟ್ಟೆಗಳು ಮಂಡೋದರಿಯ ಬಟ್ಟೆ ಕೊನೆಗೆ ಮಕ್ಕಳ ಬಟ್ಟೆ ಇವುಗಳನ್ನೂ ತಂದು ಸುತ್ತಿದರು. ಕೊನೆಗೆ ಚರರು ಸೀತೆಯ ಬಟ್ಟೆಯನ್ನೂ ತರಲು ಹೊರಟರು.

೧೯೩. ಇದನ್ನು ನೋಡಿ ಮಾರುತಿಯು ಪುಚ್ಛವು ಪೂರ್ತಿಯಾದಂತೆ ತೋರ್ಪಡಿಸಿದನು. ಆಗ ಆ ಊರಿನಲ್ಲಿ ಮನೆ ಮನೆಯಲ್ಲೂ ಕೋಲಾಹಲ ವುಂಟಾಯಿತು.

ತೈಲಾರ್ಥಂ ಚ ಘೃತಾರ್ಥಂ ಚ ಸ್ನೇಹಮಾತ್ರಂ ಸಮಾನಯನ್ ।
ನಾಸೀನ್ನಿಶಾಯಾಂ ದೀಪಾರ್ಥಂ ಶಿಶೂನಾಮಪಿ ನೋ ಘೃತಂ ॥ ೧೯೪ ॥

ಆಸನ್ ಸ್ತ್ರೀಪುರುಷಾ ನಗ್ನಾ ಲಜ್ಜಾ ನಾಸೀತ್ಪರಸ್ಪರಂ ।
ತತಸ್ತದ್ದೀಪಯಾಮಾಸುರ್ವಹ್ನಿನಾ ಭಸ್ತ್ರಕಂಪನೈಃ ॥ ೧೯೫ ॥

ಪ್ರದೀಪ್ತಂ ನಾಭವತ್ಪುಚ್ಛಂ ತತೋ ಮಾರುತಿರಬ್ರವೀತ್ ।
ಯದಾ ಸ್ವೀಯಮುಖೇನಾಯಂ ಯಜಮಾನೋದ್ಯ ರಾವಣಃ ॥ ೧೯೬ ॥

ವಹ್ನಿಂ ಪ್ರಜ್ವಾಲಯೇದತ್ರ ತದಾ ಜ್ವಾಲಾ ಭವಿಷ್ಯತಿ ।
ತನ್ಮಾರುತಿ ವಚಶ್ಶ್ರುತ್ವಾ ಯಯಾವಗ್ರೇ ದಶಾನನಃ ॥ ೧೯೭ ॥

---

೧೯೪. ಎಣ್ಣೆಯೂ, ತುಪ್ಪವೂ, ಬೆಣ್ಣೆಯೂ, ಒಂದೂ ಇಲ್ಲದಂತೆ ಮುಗಿದು ಹೊಗಲು ಕೊನೆಗೆ ಜಿಡ್ಡಾಗಿರುವುದೆಲ್ಲವನ್ನೂ ತಂದುಬಿಟ್ಟರು. ರಾತ್ರಿಯಲ್ಲಿ ಒಂದು ದೀಪಕ್ಕೂ ಎಣ್ಣೆಯಿಲ್ಲದಂತಾಯಿತು. ಮಕ್ಕಳಿಗೂ ತುಪ್ಪವಿಲ್ಲ ದಂತಾಯಿತು.

೧೯೫. ಹೆಂಗಸರು ಗಂಡಸರೆಲ್ಲರೂ ಬೆತ್ತಲೆಯಾಗಿ ತಿರುಗುತ್ತಿದ್ದರು. ಎಲ್ಲರೂ ಬೆತ್ತಲೆಯಾಗಿದ್ದುದರಿಂದ ಲಜ್ಜೆಯೆಂಬುದೇ ಇಲ್ಲದಂತಾಯಿತು. ಆಮೇಲೆ ಆ ಬಾಲಕ್ಕೆ ಬೆಂಕಿಯನ್ನು ಹಚ್ಚಿದರು. ಅದನ್ನು ಬೀಸಣಿಗೆಯಿಂದ ಬೀಸುತ್ತಲೂ ತಿದಿಗಳಿಂದ ಒತ್ತುತ್ತಲೂ ಹಚ್ಚಿಸಿದರು.

೧೯೬–೧೯೭. ಆದರೂ ಕೂಡ ಬಾಲವು ಹತ್ತಿಕೊಳ್ಳಲೇ ಇಲ್ಲ. ಆಗ ಮಾರುತಿಯು ಎಲೈ ಸೇವಕರಿರಾ! ರಾವಣನು ತಾನಾಗಿಯೇ ಬಂದು ತನ್ನ ಮುಖದಿಂದಲೇ ಊದಿ ಬೆಂಕಿಯನ್ನು ಹಚ್ಚಿಸಿದರೆ ಆಗ ಬೆಂಕಿಯು ಹತ್ತಿಕೊಳ್ಳುತ್ತದೆ. ಎಂದನು. ಮಾರುತಿಯು ಈ ಮಾತನ್ನು ಕೇಳಿ ದಶಾನನನು ಮುಂದೆ ಬಂದನು.

ಯಾವತ್ಫೂತ್ಕಾರಯಾಮಾಸ ತತ್ಪುಚ್ಛಾನಲಮಾನನೈಃ ।
ತಾವತ್ತಚ್ಛಿರಜಾಶ್ಮಶ್ರೂಕೂರ್ಚಾ ದಗ್ಧಾ ದಶಾಭರ್ವ ॥ ೧೯೮ ॥

ತದಾ ವಿಂಶದ್ಭುಜೈಃ ಸ್ವೀಯಮುಖೋಪರಿ ದಶಾನನಃ ।
ತಾಡಯದ್ವಹ್ನಿಶಾಂತ್ಯರ್ಥಂ ಜಹಸೂ ರಾಕ್ಷಸಾಸ್ತದಾ ॥ ೧೯೯ ॥

ಹಾಸ್ಯಂ ಚಕಾರ ಹನುಮಾಂಸ್ತದಾ ಕ್ರುದ್ಧಸ್ಸ ರಾವಣಃ ।
ನೀಯತಾಂ ಮರ್ಕಟಶ್ಚಾಯಮಿತಿ ದೂತಾನ್ವಚೋಽಬ್ರವೀತ್ ॥ ೨೦೦ ॥

ತತೋ ದೂತಾಃ ಕಪಿಂ ನಿನ್ಯುರ್ಲಂಕಾಯಾಂ ತೇ ಸಮಂತತಃ ।
ಶೃಂಖಲಾಭಿಃ ದೃಢಂ ಬಧ್ವಾ ಭ್ರಾಮಯಾಮಾಸುರಾದರಾತ್ ॥ ೨೦೧ ॥

---

೧೯೮. ಅವನು ತನ್ನ ಬಾಯಿಯಿಂದ ಊದಿದಾಗ ಆ ಜ್ವಾಲೆಯಿಂದ ಆ ರಾವಣನ ತಲೆಗೂದಲೂ ಗಡ್ಡವೂ ಮೀಸೆಯೂ ಕೂಡ ತುದಿಯಲ್ಲಿ ಬೆಂದು ಹೋಯಿತು.

೧೯೯. ಆಗ ರಾವಣನು ತನ್ನ ಇಪ್ಪತ್ತು ಕೈಗಳಿಂದಲೂ ತನ್ನ ತಲೆಯನ್ನೂ ಮುಖವನ್ನೂ ಬೆಂಕಿಯನ್ನು ಆರಿಸುವುದಕ್ಕೋಸ್ಕರ ಬಡಿದನು. ಆಗ ರಾಕ್ಷಸರೆಲ್ಲರೂ ನಕ್ಕರು.

೨೦೦. ಹನುಮಂತನು ಹಾಸ್ಯಮಾಡಿದನು. ಆದರಿಂದ ರಾವಣನಿಗೆ ಕೋಪವು ಬಂದಿತು. ಆ ಕಪಿಯನ್ನು ಕರೆದುಕೊಂಡು ಹೋಗಿ. ಎಂದು ದೂತರಿಗೆ ಹೇಳಿದನು.

೨೦೧. ಆಗ ದೂತರು ಆ ಕಪಿಯನ್ನು ಲಂಕೆಯಲ್ಲಿ ಎಲ್ಲಾ ಕಡೆಗೂ ಕರೆದುಕೊಂಡು ಹೋದರು. ಆ ಕಪಿಯನ್ನು ಸರಪಣಿಗಳಿಂದ ಬಿಗಿಯಾಗಿ ಕಟ್ಟಿ ಬಹುವಾದ ಆದರದಿಂದ ಊರಲ್ಲೆಲ್ಲವೂ ಸುತ್ತಿಸಿದರು.

ವಾದ್ಯಘೋಷೈರ್ದೀರ್ಘಶಬ್ದೈಃ ವೇಷ್ಟಿತಂ ಶಸ್ತ್ರಧಾರಿಭಿಃ ।
ಏವಂ ದಿವಾ ಸರ್ವಲಂಕಾಂ ದೃಷ್ಟ್ವೋಡ್ಡೀಯ ಸ ಮಾರುತಿಃ || ೨೦೨ ||

ಧೃತ್ವಾತಿಸೂಕ್ಷ್ಮರೂಪಂ ತು ದೃಢಬಂಧವಿನಿರ್ಗತಃ ।
ಯಥಾಸ್ಥಾನಂ ಬ್ರಹ್ಮಣೋಸ್ತ್ರಂ ತದ್ಯಯೌ ಪೂರ್ವಮೇವ ಹಿ || ೨೦೩ ||

ತತಃ ಪಶ್ಚಿಮದೇಶಸ್ಥಂ ಲಂಕಾದ್ವಾರಂ ಸಮಾಶ್ರಯತ್ ।
ನಿಷ್ಕಾಸ್ಯ ತೋರಣಂ ದ್ವಾರಾಜಘಾನ ದ್ವಾರರಕ್ಷಕಾನ್ || ೨೦೪ ||

ಹತ್ವಾ ಸ್ವರಕ್ಷಕಾಂಶ್ಚಾಪಿ ಪ್ರಾಸಾದೇಷು ಸಮಂತತಃ ।
ದದಾವಗ್ನಿಂ ಸ್ವಪುಚ್ಛೇನ ಲಂಕಾಂ ದಗ್ಧಾಂ ಚಕಾರ ಸಃ || ೨೦೫ ||

---

೨೦೨. ಆಗ ಕಪಿಯ ಮುಂದೆ ವಾದ್ಯವನ್ನು ಬಾರಿಸುತ್ತಿದ್ದರು. ದೀರ್ಘವಾಗಿಯೂ ಗಟ್ಟಿಯಾಗಿಯೂ ಕೂಗುತ್ತಿದ್ದರು. ಸುತ್ತಲೂ ಬಿಚ್ಚು ಕತ್ತಿ ಪಾರವಿದ್ದಿತು. ಹೀಗೆ ಹಗಲಲ್ಲೆಲ್ಲಾ ಆ ಮಾರುತಿಯನ್ನು ಸುತ್ತಿಸಲು ಅದೆಲ್ಲವನ್ನೂ ಹಗಲಿನಲ್ಲಿ ನೋಡಿದನು.

೨೦೩. ಅನಂತರ ಒಡನೆಯೇ ಹಾರಿದನು. ಸೂಕ್ಷ್ಮರೂಪವನ್ನು ಹೊಂದಲು ಕಟ್ಟಿದ್ದ ಕಟ್ಟುಗಳೆಲ್ಲವೂ ಬಿಚ್ಚಿಹೋದುವು. ಬ್ರಹ್ಮಾಸ್ತ್ರವು ಮೊದಲೇ ತನ್ನ ಜಾಗಕ್ಕೆ ಹೊರಟು ಹೋಗಿದ್ದಿತು.

೨೦೪. ನೆಗೆದುಹೋಗಿ ಊರಿನ ಪಶ್ಚಿಮದಲ್ಲಿರುವ ಊರುಬಾಗಿಲಿನ ಮೇಲೆ ಕುಳಿತನು. ಅಲ್ಲಿರುವ ಬಾಗಿಲುವಾಡಗಳನ್ನೇ ಬಾಗಿಲಿನಿಂದ ಕಿತ್ತು ಕೊಂಡು ಊರುಬಾಗಿಲು ಕಾಯುವವರನ್ನು ಕೊಂದನು.

೨೦೫. ಅನಂತರ ತನ್ನನ್ನು ಕಾಯುತ್ತಿದ್ದವರನ್ನು ಕೊಂದನು. ಅನಂತರ ಎಲ್ಲಾ ಮಹಡಿ ಮನೆಗಳಿಗೂ ಬೆಂಕಿಯನ್ನು ಹಚ್ಚಿದನು. ಕೊನೆಗೆ ಲಂಕೆಯೆಲ್ಲವೂ ಉರಿಯುವಂತೆ ಮಾಡಿದನು.

ತದಾ ಕೋಲಾಹಲಶ್ಚಾಸೀಲ್ಲಂಕಾಯಾಂ ಪ್ರತಿಸದ್ಮನಿ ।
ನಿದ್ರಿತಾನ್ಯಪಿ ಬಾಲಾನಿ ತ್ಯಕ್ತ್ವಾ ನಾರ್ಯೋ ಗೃಹಾದ್ಬಹಿಃ ॥ ೨೦೬ ॥

ದುದ್ರುವುಃ ಪ್ರಾಣರಕ್ಷಾರ್ಥಂ ದಗ್ಧವಸ್ತ್ರಾಲಕಾಸ್ತದಾ ।
ಕ್ರಮೇಣ ರಾವಣಾದೀನಾಂ ಪ್ರಾಸಾದಾನ್ ಜ್ವಲಯನ್ಕಪಿಃ ॥ ೨೦೭ ॥

ತಾಂ ರಾವಣ ಸಭಾಂ ದಗ್ಧ್ವಾ ಜನಾನ್ ಪುಚ್ಛೇನ ತಾಡಯತ್ ।
ಅಭವನ್ ರಾಕ್ಷಸಾ ದಗ್ಧಾ ಮುಖವಾದ್ಯಾನಿ ಚಕ್ರಿರೇ ॥ ೨೦೮ ॥

ತದಾ ಸ ರಾವಣಃ ಕ್ರುದ್ಧೋ ರಾಕ್ಷಸೈರ್ದಶಕೋಟಿಭಿಃ ।
ಯಯೌ ಯೋದ್ಧುಂ ಮಾರುತಿನಾ ತಾನ್ಸರ್ವಾನ್ ತೋರಣೇನ ಸಃ ॥ ೨೦೯ ॥

---

೨೦೬. ಆಗ ಮನೆ ಮನೆಯಲ್ಲಿಯೂ ಲಂಕೆಯಲ್ಲಿ ಕೋಲಾಹಲವು ಉಂಟಾಯಿತು. ನಿದ್ದೆ ಮಾಡುತ್ತಿದ್ದ ಮಕ್ಕಳನ್ನೂ ಬಿಟ್ಟು ತಾಯಿಯರು ಹೊರಗೆ ಓಡಿಬರುತ್ತಿದ್ದರು

೨೦೭. ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಓಡಿಬರುತ್ತಲಿದ್ದಾಗ ತಮ್ಮ ಬಟ್ಟೆಗಳೂ ಮುಂಗುರುಳೂ ಹತ್ತಿ ಉರಿಯುತ್ತಿದ್ದುವು. ಆ ಕಪಿಯು ಬಾಲದ ಬೆಂಕಿಯಿಂದ ಒಂದು ಕಡೆಯಿಂದ ರಾವಣನೇ ಮುಂತಾದವರ ಮನೆಗಳನ್ನು ಸುಡುತ್ತ ಹೊರಟನು.

೨೦೮. ಆ ರಾವಣನ ಸಭೆಯನ್ನೂ ಸುಟ್ಟು ಜನಗಳನ್ನೂ ಆ ಉರಿಯುತ್ತಿದ್ದ ಬಾಲದಿಂದಲೇ ಹೊಡೆದನು. ಆ ರಾಕ್ಷಸರೂ ಬೆಂಕಿಯಿಂದ ಉರಿಯುತ್ತಾ ಮುಖವಾದ್ಯಗಳನ್ನು ಬಾರಿಸಿದರು (ಬಾಯಿ ಬಡಿದುಕೊಂಡರು.)

೨೦೯. ಆಗ ರಾವಣನಿಗೆ ಕೋಪಬಂದು ಹತ್ತುಕೋಟಿ ರಾಕ್ಷಸರನ್ನು ಕರೆದುಕೊಂಡು ಆ ಮಾರುತಿಯೊಡನೆ ಯುದ್ಧಮಾಡಲು ಹೊರಟನು. ಮಾರುತಿಯು ಬಾಗಿಲುವಾಡದಿಂದಲೇ ಅವರೆಲ್ಲರನ್ನೂ ಹೊಡೆದನು.

ಘಾತಯಾಮಾಸ ಪುಚ್ಛೇನ ಬಧ್ವಾ ಚೈಕತ್ರ ಕೋಟಿಶಃ ।
ತಥೈವ ಲೀಲಯಾ ಪುಚ್ಛಂ ರಾವಣಸ್ಯ ಚ ಮಸ್ತಕೇ　　॥ ೨೧೦ ॥

ಸಂತಾಡ್ಯ ತತ್ತ್ವಚಂ ದಗ್ಧಾಮಕೋನ್ಮಾರುತಿಃ ಕ್ಷಣಾತ್ ।
ತತ್ಪುಚ್ಛವಹ್ನಿನಾ ದಗ್ಧೋ ಮೂರ್ಛಿತೋಽಭೂತ್ ದಶಾನನಃ　　॥ ೨೧೧ ॥

ಕಪಿಶ್ರೀರಾಮಕೀರ್ತ್ಯರ್ಥಂ ರಾವಣಂ ನ ಜಘಾನ ಸಃ ।
ಪತಿತಂ ಪಿತರಂ ದೃಷ್ಟ್ವಾ ದೃಷ್ಟ್ವಾ ದಗ್ಧಾನ್ ಸ್ವರಾಕ್ಷಸಾನ್　　॥ ೨೧೨ ॥

ಆತ್ಮನಃ ಪ್ರಾಣರಕ್ಷಾರ್ಥಮಿಂದ್ರಜಿದ್ವಿವರಂ ಯಯೌ ।
ಕಪಿರ್ಲಕ್ಷ್ಮಣಪ್ರೀತ್ಯರ್ಥಂ ಮೇಘನಾದಂ ಜಘಾನ ನ　　॥ ೨೧೩ ॥

ಏವಂ ಸರ್ವಾನ್ವಿನಿರ್ಜಿತ್ಯ ಗೋಪುರಾಟ್ಟಾಲಮಂಡಿತಾಂ ।
ದಗ್ಧ್ವಾ ಲಂಕಾಂ ಸವಿಸ್ತಾರಾಂ ಯಯೌ ಸಾಗರಮುತ್ತಮಂ　　॥ ೨೧೪ ॥

೨೧೦–೨೧೧. ಇವರೆಲ್ಲರೂ ಓಡಿಹೋಗದಂತೆ ಬಾಲದಿಂದ ಕೋಟಿಯನ್ನು ಕಟ್ಟಿದ್ದನು. ಎಲ್ಲಾ ಕಡೆಯಲ್ಲಿಯೂ ದುಂಡಗೆ ಕಟ್ಟಿ ಅವರನ್ನು ಸುಡುತ್ತಾ ಆ ಬಾಲದಿಂದಲೇ ರಾವಣನ ತಲೆಯಮೇಲೆ ಹೊಡೆದು ಅವನ ಚರ್ಮವನ್ನೆಲ್ಲಾ ಸುಡುವಂತೆ ಮಾಡಿದನು. ಆ ಬೆಂಕಿಯಿಂದ ಸುಡಲ್ಪಟ್ಟ ರಾವಣನು ಮೂರ್ಛೆಗೊಂಡನು.

೨೧೨–೨೧೩. ಆ ಕಪಿಯು ರಾಮನೇ ರಾವಣನನ್ನು ಕೊಂದು ಕೀರ್ತಿಯನ್ನು ಸಂಪಾದಿಸಲೆಂದು ಅವನನ್ನು ಕೊಲ್ಲಲಿಲ್ಲ. ತಂದೆಯು ಬಿದ್ದುದನ್ನೂ ತನ್ನ ರಾಕ್ಷಸರು ಸುಟ್ಟುಹೋದುದನ್ನೂ ನೋಡಿ ಇಂದ್ರಜಿತುವು ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಗುಹೆಯನ್ನು ಹೊಕ್ಕನು. ಲಕ್ಷ್ಮಣನು ಆತನನ್ನು ಕೊಂದು ಖ್ಯಾತಿಯನ್ನು ಹೊಂದಲೆಂದು ಆ ಮಾರುತಿಯು ಅವನನ್ನೂ ಕೊಲ್ಲಲಿಲ್ಲ.

೨೧೪. ಮಾರುತಿಯು ಹೀಗೆ ಎಲ್ಲರನ್ನೂ ಜಯಿಸಿ ಗೋಪುರಗಳಿಂದಲೂ ಮಹಡಿಯಿಂದಲೂ ಕೂಡಿರುವ ವಿಸ್ತಾರವಾದ ಲಂಕೆಯನ್ನು ಸುಟ್ಟು ಸಮುದ್ರಕ್ಕೆ ಹೋದನು.

ಪ್ರಸಾರ್ಯ ತತ್ತಟೇ ಪುಚ್ಛಂ ಜಲಜಾ೯ ರಕ್ಷಯ೯ ಕಪಿಃ ।
ತತ್ತರಂಗೈಸ್ಸೀತಲಂ ಸ್ವಂ ಕೃತ್ವಾ ಲಾಂಗೂಲಮುತ್ತಮಂ ॥ ೨೧೫ ॥

ನಿಜಕಂಠಾಚ್ಚ ಧೂಮ್ರೇಣ ಶ್ಲೇಷ್ಮಾಣಂ ಸಾಗರೇಽಕ್ಷಿಪತ್ ।
ತತಃ ಕಪಿಃ ಕ್ಷಣಂ ತೂಷ್ಣೀಂ ಸ್ಥಿತ್ವಾ ಸೀತಾಂ ವಿಚಿಂತ್ಯ ಚ ॥ ೨೧೬ ॥

ತಾಡಯಾಮಾಸ ಹೃದಯೇ ಮತ್ವಾ ದಗ್ಧಾಂ ವಿದೇಹಜಾಂ ।
ಆತ್ಮಾನಂ ಗಹ೯ಯಾಮಾಸ ಸ್ಥಿತ್ವಾ ಸಾಗರರೋಧಸಿ ॥ ೨೧೭ ॥

ಧಿಕ್ ಧಿಕ್ ಮಾಂ ವಾನರಂ ಮೂಢಂ ಸ್ವಾಮಿಪತ್ನ್ಯಾಶ್ಚ ದಾಹಕಂ ।
ನಿಶ್ಚಯೇನ ಮಯಾ ದಗ್ಧಾ ಜಾನಕೀ ರಾಮತೋಷದಾ ॥ ೨೧೮ ॥

---

೨೧೫. ಆ ಸಮುದ್ರದ ದಡದಲ್ಲಿ ಬಾಲವನ್ನು ನೀಡಿ ಜಲಚರ ಪ್ರಾಣಗಳಿಗೆ ತೊಂದರೆ ಬರದಂತೆ ಮಾಡಿ ಆ ಸಮುದ್ರದ ಅಲೆಗಳಿಂದ ತನ್ನ ಬಾಲವನ್ನು ತಣ್ಣಗೆ ಮಾಡಿಕೊಂಡನು.

೨೧೬. ತಾನು ಆ ಹೊಗೆಯನ್ನು ಕುಡಿದಿದ್ದ ಕಫವನ್ನು ಕ್ಯಾಕರಿಸಿಸುತ್ತ ಅದನ್ನು ಆ ಸಾಗರದಲ್ಲಿ ಉಗುಳಿದನು. ಅನಂತರ ಒಂದು ಕ್ಷಣಕಾಲ ಸುಮ್ಮನಿದ್ದು ಸೀತೆಯ ವಿಷಯವನ್ನು ಯೋಚಿಸಿದನು.

೨೧೭. ಸೀತೆಯು ಈ ನನ್ನ ಅಕೃತ್ಯದಿಂದ ಸುಟ್ಟುಹೋಗಿರಬೇಕೆಂದು ತಿಳಿದು ಎದೆಯನ್ನು ಬಡಿದುಕೊಂಡನು. ಆ ಸಮುದ್ರದ ದಡದಲ್ಲಿ ಕುಳಿತು ಕೊಂಡು ತನ್ನನ್ನು ತಾನೇ ನಿಂದಿಸಿಕೊಂಡನು.

೨೧೮. ಧಿಕ್. ಧಿಕ್. ತಾನು ಮೂಢನಾದ ಕಪಿಯು. ನನ್ನ ಸ್ವಾಮಿಯ ಹೆಂಡತಿಯನ್ನು ಸುಟ್ಟೆನಲ್ಲಾ ! ರಾಮನಿಗೆ ಸಂತೋಷವನ್ನುಂಟುಮಾಡುವ ಆ ಸೀತೆಯನ್ನು ನಿಶ್ಚಯವಾಗಿಯೂ ಸುಟ್ಟಿರುವೆನು.

ನ ವಿಚಾರಃ ಕೃತಃ ಪೂರ್ವಂ ಲಂಕಾದಾಹೇಽವಿವೇಕಿನಾ |
ಆತ್ಮಘಾತಂ ಕರೋಮ್ಯದ್ಯ ಪುಚ್ಛಬಂಧೇನ ಚಾತ್ರ ವೈ || ೨೧೯ ||

ಕಿಂ ರಾಮಾಯೇದೃಶಂ ಸ್ವಾಸ್ಯಂ ದರ್ಶಯೇದ್ಯ ಹಿ ಗರ್ಹಿತಂ |
ರಾಮಶ್ಶ್ರುತ್ವಾ ಸ ಸೀತಾಯಾ ವೃತ್ತಂ ಶೀಘ್ರಂ ಮರಿಷ್ಯತಿ || ೨೨೦ ||

ತದ್ದುಃಖೇನ ಸ ಸೌಮಿತ್ರಿರ್ಮರಿಷ್ಯತಿ ನ ಸಂಶಯಃ |
ತಯೋರ್ದುಃಖೇನ ಸುಗ್ರೀವಸ್ತದರ್ಥಂ ಸಚಿವೈರುಮಾ || ೨೨೧ ||

ತಂ ಶ್ರುತ್ವಾ ಸೋಽಂಗದಶ್ಚಾಪಿ ಮರಿಷ್ಯತ್ಯತಿಲಾಲಿತಃ |
ತಾರಾಪಿ ಪುತ್ರಶೋಕೇನ ನೃಪೇ ನಷ್ಟೇಽಥ ವಾನರಾಃ || ೨೨೨ ||

---

೨೧೯. ನಾನು ಮೊದಲು ಯೋಚಿಸಲೇ ಇಲ್ಲವಲ್ಲಾ! ಲಂಕೆಯನ್ನು ಸುಡುವಾಗ ಅವಿವೇಕವನ್ನು ಮಾಡಿದೆನು. ಆದುದರಿಂದ ನನ್ನ ಪುಚ್ಛದಿಂದಲೇ ಕತ್ತಿಗೆ ಬಿಗಿದುಕೊಂಡು ಪ್ರಾಣವನ್ನು ಕಳೆದುಕೊಳ್ಳುತ್ತೇನೆ.

೨೨೦. ಈ ರೀತಿಯಾಗಿ ಮಾಡಿ ನನ್ನ ಈ ಅಯೋಗ್ಯವಾದ ಮುಖವನ್ನು ರಾಮನಿಗೆ ಹೇಗೆ ತಾನೆ ತೋರಿಸಲಿ! ರಾಮನಾದರೋ ಸೀತೆಯು ಸತ್ತಳೆಂದು ಕೇಳಿದೊಡನೆಯೇ ಸಾಯುವನು.

೨೨೧. ರಾಮನು ಸತ್ತ ದುಃಖದಿಂದ ಲಕ್ಷ್ಮಣನು ಸಾಯುವನು. ಸಂಶಯವಿಲ್ಲ. ಅವರಿಬ್ಬರ ದುಃಖದಿಂದ ಸುಗ್ರೀವನು ಸಾಯುವನು. ಅವನ ದುಃಖದಿಂದ ಅವನ ಮಂತ್ರಿಗಳೂ ರುಮೆಯೂ ಸಾಯುವರು.

೨೨೨. ಅದನ್ನು ಕೇಳಿ ಅಂಗದನು ಸಾಯುವನು. ತಾರೆಯು ಪುತ್ರ ಶೋಕದಿಂದ ಸಾಯುವಳು. ರಾಜನು ಸತ್ತಮೇಲೆ ಕಪಿಗಳೆಲ್ಲರೂ ಸಾಯುವರು.

ಪ್ರಾಪ್ತೇ ಪಂಚದಶೇ ವರ್ಷೇ ಭರತೋಽಪಿ ಮರಿಷ್ಯತಿ ।
ರಾಮದುಃಖೇನ ಕೌಸಲ್ಯಾ ಸುಮಿತ್ರಾ ಪುತ್ರ ದುಃಖತಃ ॥ ೧೧೩ ॥

ತದಾ ಸಾ ಕೈಕಯೀ ದುಷ್ಟಾ ಸರ್ವಾನರ್ಥಕರೀ ತು ಯಾ ।
ಶತ್ರುಘ್ನೋ ಬಂಧುದುಃಖೇನ ರಾಮಾರ್ಥಂ ಮುನಯಶ್ಚ ತೇ ॥ ೧೧೪ ॥

ರಾಘವೋ ರಾಮಭಕ್ತಾಶ್ಚ ಮಂತ್ರಿಣಸ್ಸುಹೃದಸ್ತಥಾ ।
ಸೀತಾಪಿತುಃ ಕುಲಂ ಸರ್ವಂ ಕೌಸಲ್ಯಾಯಾಃ ಪಿತುಃ ಕುಲಂ ॥ ೧೧೫ ॥

ಸುಮಿತ್ರಾಯಾಶ್ಚ ಕೈಕೇಯ್ಯಾಸ್ತೇಷಾಂ ಸಂಬಂಧಿನಸ್ತಥಾ ।
ನಷ್ಟೇ ರಾಜಕುಲೇ ಜಾತೇ ಪ್ರಜಾ ಸ್ವೇಚ್ಛಾನುವರ್ತಿನೀ ॥ ೧೧೬ ॥

ಮರಿಷ್ಯತಿ ನ ಸಂದೇಹಸ್ತತಃ ಸ್ಥಾವರಜಂಗಮಂ ।
ಭೂಮಿಸ್ಥಾಃ ಪ್ರಾಣಿನಸ್ಸರ್ವೇ ಯದಾ ನಷ್ಟಾಸ್ತದಾ ದಿವಿ ॥ ೧೧೭ ॥

೧೧೩–೧೧೪. ಹದಿನೈದನೆಯ ವರ್ಷವು ಮೊದಲಾಗುತ್ತಲೂ ಭರತನು ಸಾಯುವನು. ರಾಮನ ದುಃಖದಿಂದ ಕೌಸಲ್ಯೆಯೂ ಲಕ್ಷ್ಮಣನ ದುಃಖದಿಂದ ಸುಮಿತ್ರೆಯೂ ಸಾಯುವರು. ಭರತನ ದುಃಖದಿಂದ ಕೈಕೆಯಿಯೂ ಸಾಯುವಳು. ಇವರೆಲ್ಲರ ದುಃಖದಿಂದ ಶತ್ರುಘ್ನನೂ ಸಾಯುವನು. ರಾಮನು ಸತ್ತನೆಂದು ಕೇಳಿ ಮುನಿಗಳೆಲ್ಲರೂ ಸಾಯುವರು.

೧೧೫–೧೧೬. ಅನಂತರ ರಾಮಭಕ್ತರೂ, ಮಂತ್ರಿಗಳೂ, ಸ್ನೇಹಿತರೂ ಸತ್ತುಹೋಗುವರು ಸೀತೆಯ ತಂದೆಯಾದ ಜನಕನೂ ಅವರ ಕಡೆಯವರೂ ಇಂತೆಯೇ ಸಾಯುವರು. ಅಂತೆಯೇ ಕೌಸಲ್ಯೆಯ ತಂದೆಯ ವಂಶವೂ ನಾಶವಾಗುವುದು. ಸುಮಿತ್ರೆ, ಕೈಕೇಯಿಯರ ಕುಲವೂ ನಷ್ಟವಾಗುವುದು. ಅವರ ಸಂಬಂಧಿಗಳೆಲ್ಲರೂ ನಾಶವಾಗುವರು. ರಾಜರೆಲ್ಲರೂ ನಾಶವಾದ ಮೇಲೆ ಪ್ರಜೆಗಳೆಲ್ಲರೂ ಸ್ವೇಚ್ಛಾಚಾರಿಗಳಾಗುವರು.

೧೧೭. ಇದರಿಂದ ಅವರೂ ನಷ್ಟವಾಗುವರು. ಸಂದೇಹವಿಲ್ಲ. ಅನಂತರ ಸ್ಥಾವರಜಂಗಮಗಳೂ ನಷ್ಟವಾಗುವುವು. ಕೊನೆಗೆ ಭೂಮಿಯಲ್ಲಿರುವ ಪ್ರಾಣಿಗಳೆಲ್ಲವೂ ನಾಶವಾಗುವುವು.

ಹವ್ಯಕವ್ಯ ವಿಹೀನಾಸ್ತೇ ದೇವಾ ನಾಶಂ ಗತಾ ಇವ ।
ಅಕಾಲೇ ಪ್ರಲಯಂ ದೃಷ್ಟ್ವಾ ನಷ್ಟಾಂ ಸೃಷ್ಟಿಂ ಸ್ವನಿರ್ಮಿತಾಂ ॥ ೨೨೮ ॥

ಪಶ್ಚಾತ್ತಾಪೇನ ಧಾತಾಪಿ ಮರಿಷ್ಯತಿ ನ ಸಂಶಯಃ ।
ಏವಂ ಕ್ರಮೇಣ ಬ್ರಹ್ಮಾಂಡಂ ನಶ್ಯತ್ಯೇವ ನ ಸಂಶಯಃ ॥ ೨೨೯ ॥

ಏತದ್ನಾಶನಿಮಿತ್ತೋಽಹಂ ವಿಧಿನಾ ನಿರ್ಮಿತಃ ಪುರಾ ।
ಇತ್ಯುಕ್ತವಂತಂ ಖೇದೇನ ದೇಹತ್ಯಾಗಾರ್ಥಮುದ್ಯತಂ ॥ ೨೩೦ ॥

ದೃಷ್ಟ್ವಾ ಸಾಕಾಶಜಾ ವಾಣೀ ಬಭೂವ ಬಹುಹರ್ಷದಾ ।
ಮಾ ಕುರುಷ್ವ ಕಪೇ ಖೇದಂ ನ ದಗ್ಧಾ ಜಾನಕೀ ಶುಭಾ ॥ ೨೩೧ ॥

ಆತ್ಮಾನಂ ದರ್ಶಯಿತ್ವಾ ತಾಂ ಶೀಘ್ರಂ ಗಚ್ಛ ರಘೂದ್ವಹಂ ।
ತಾಂ ವಾಣೀಂ ಹನುಮಾನ್ ಶ್ರುತ್ವಾ ಬಭೂವ ಹರ್ಷಪೂರಿತಃ ॥ ೨೩೨ ॥

೨೨೮-೨೨೯. ಇವೆಲ್ಲವೂ ನಾಶವಾದಮೇಲೆ ಹವ್ಯಕವ್ಯಗಳು ನಡೆಯುದಿದ್ದರೆ ದೇವತೆಗಳೂ ನಾಶವಾದಂತೆಯೇ ಸರಿ. ಈ ಅಕಾಲದಲ್ಲಿ ಪ್ರಳಯವಾಗಲು ತನ್ನಿಂದ ನಿರ್ಮಿತವಾದ ಸೃಷ್ಟಿಯು ನಾಶವಾದುದನ್ನು ನೋಡಿ ಪಶ್ಚಾತ್ತಾಪದಿಂದ ಬ್ರಹ್ಮನೂ ಸಾಯುವನು. ಸಂದೇಹವಿಲ್ಲ. ಈ ರೀತಿಯಾಗಿ ಬ್ರಹ್ಮಾಂಡವೆಲ್ಲವೂ ನಾಶವಾಗುತ್ತದೆ. ಸಂಶಯವಿಲ್ಲ.

೨೩೦. ಈ ರೀತಿಯಾಗಿ ಸರ್ವನಾಶಕ್ಕೋಸ್ಕರವೇ ನಾನು ಬ್ರಹ್ಮನಿಂದ ನಿರ್ಮಿತನಾಗಿರುವೆನು. ಅವನು ಈ ರೀತಿಯಾಗಿ ಹೇಳುತ್ತ ದುಃಖದಿಂದ ಪ್ರಾಣವನ್ನು ಬಿಡಲು ಪ್ರಯತ್ನಪಡುತ್ತಿದ್ದನು.

೨೩೧. ಇದನ್ನು ನೋಡಿ ಒಂದು ಆಕಾಶವಾಣಿಯಾಯಿತು. ಅದು ಬಹು ಹರ್ಷವನ್ನು ಕೊಟ್ಟಿತು. ಎಲೈ ಕಪಿಯೆ! ದುಃಖಪಡಬೇಡ. ಆ ಸೀತೆಯು ಸುಟ್ಟುಹೋಗಿಲ್ಲ.

೨೩೨. ನೀನು ಆ ಸೀತೆಯನ್ನು ನೋಡಿ ಬೇಗನೆ ರಾಮನಬಳಿಗೆ ಹೋಗು. ಎಂಬುದಾಗಿದ್ದಿತು. ಇದನ್ನು ಕೇಳಿ ಹನುಮಂತನು ಹರ್ಷದಿಂದ ಕೂಡಿಕೊಂಡನು.

ದ್ರುತಂ ತಾಂ ಜಾನಕೀಂ ದ್ರಷ್ಟುಮಶೋಕವನಿಕಾಂ ಯಯೌ ।
ತಾವದ್ದದರ್ಶ ಲಂಕಾಯಾಂ ಸುವರ್ಣವೇಷ್ಟಿತಾಂ ಭುವಂ ॥ ೨೩೩ ॥

ತತ್ಕಾರಣಂ ವದಾಮ್ಯದ್ಯ ತಚ್ಛೃಣುಷ್ವ ಗಿರೀಂದ್ರಜೇ ।
ಆಸೀದ್ಗಿರಿವರೋ ದೇವಿ ತ್ರಿಕೂಟ ಇತಿ ವಿಶ್ರುತಃ ॥ ೨೩೪ ॥

ಕ್ಷೀರೋದೇನಾವೃತಃ ಶ್ರೀಮಾನ್ಯೋಜನಾಯುತಮುಚ್ಛ್ರಿತಃ ।
ತಾವತಾ ವಿಸ್ತೃತಃ ಪರ್ಯಕ್ ತ್ರಿಭಿಶ್ಶೃಂಗೈಃ ಪಯೋನಿಧಿಂ ॥ ೨೩೫ ॥

ದಿಶಃ ಖಂ ರೋಚಯನ್ನಾಸ್ತೇ ರೌಪ್ಯಾಯಸಹಿರಣ್ಮಯೈಃ ।
ತಸ್ಯ ದ್ರೋಣ್ಯಾಂ ಭಗವತೋ ವರುಣಸ್ಯ ಮಹಾತ್ಮನಃ ॥ ೨೩೬ ॥

---

೨೩೩. ಕಪಿಯು ಸೀತೆಯನ್ನು ನೋಡಲು ಬೇಗನೆ ಅಶೋಕವನಕ್ಕೆ ಹೋದನು. ಅಲ್ಲಿಗೆ ಹೋದೊಡನೆಯೇ ಆ ಲಂಕೆಯೆಲ್ಲವೂ ಚಿನ್ನದ ನೆಲವಾಗಿರುವುದನ್ನು ನೋಡಿದನು.

೨೩೪. ಎಲೈ ಗಿರೀಂದ್ರಜೆಯೆ! ಅದರ ಕಾರಣವನ್ನು ಹೇಳುತ್ತೇನೆ. ಕೇಳು. ತ್ರಿಕೂಟಾಚಲವೆಂಬ ಪ್ರಸಿದ್ಧವಾದ ಒಂದು ಬೆಟ್ಟವಿದ್ದಿತು.

೨೩೫. ಅದರ ಸುತ್ತಲೂ ಕ್ಷೀರಸಮುದ್ರವಿದ್ದಿತು. ಆ ಬೆಟ್ಟವು ಒಂದು ಯೋಜನದಷ್ಟು ಎತ್ತರವಿದ್ದಿತು. ಅದಕ್ಕೆ ಅನುಗುಣವಾಗಿ ಅಗಲವಾಗಿಯೂ ಇದ್ದಿತು. ಅದಕ್ಕೆ ಮೂರು ಶಿಖರಗಳಿದ್ದುವು. ಅವು ದಿಕ್ಕಗಳನ್ನೂ ಅಂತರಿಕ್ಷವನ್ನೂ ವ್ಯಾಪಿಸಿ ಅಲಂಕರಿಸಿದ್ದುವು.

೨೩೬. ಆ ಬೆಟ್ಟದಲ್ಲಿದ್ದ ಮೂರು ಶಿಖರಗಳಲ್ಲಿ ಒಂದು ಬೆಳ್ಳಿಯಿಂದಲೂ, ಒಂದು ಚಿನ್ನದಿಂದಲೂ ಮತ್ತೊಂದು ಕಬ್ಬಿಣದಿಂದಲೂ ಕೂಡಿದ್ದುವು. ಆ ಬೆಟ್ಟದ ಕಿಬ್ಬಿಯಲ್ಲಿ ದೋಣಿಯಂತಿರುವ ಸ್ಥಳದಲ್ಲಿ ಪೂಜ್ಯನಾದ ವರುಣನ ಉದ್ಯಾನವನವಿದ್ದಿತು.

ಉದ್ಯಾನಮೃತುಮನ್ನಾಮ ಆಕ್ರೀಡಂ ಸುರಯೋಷಿತಾಂ ।
ತಸ್ಮಿನ್ಸರಸ್ಸುವಿಪುಲಂ ಲಸತ್ಕಾಂಚನಪಂಕಜಂ ॥ ೨೩೭ ॥

ಕುಮುದೋತ್ಪಲಕಲ್ಹಾರಶತಪತ್ರಶ್ರಿಯೋರ್ಜ್ಜಿತಂ ।
ನೈತತ್ಕೃತಘ್ನಾಃ ಪಶ್ಯಂತಿ ನ ನೃಶಂಸಾ ನ ನಾಸ್ತಿಕಾಃ ॥ ೨೩೮ ॥

ತಸ್ಮಿನ್ಸರಸಿ ದುಷ್ಟಾತ್ಮಾ ವಿರೂಪೋಂತರ್ಜಲಾಶಯಃ ।
ಆಸೀದ್ಗ್ರಾಹೋ ಗಜೇಂದ್ರಾಣಾಂ ದುರಾಧರ್ಷೋ ಮಹಾಬಲಃ ॥ ೨೩೯ ॥

ಅಥ ದಂತೋಜ್ವಲಮುಖಃ ಕದಾಚಿದ್ಗಜಯೂಥಪಃ ।
ಆಜಗಾಮ ತೃಷಾಕ್ರಾಂತಃ ಕರೇಣುಪರಿವಾರಿತಃ ॥ ೨೪೦ ॥

---

೨೩೭. ಅದಕ್ಕೆ ಋತುಮತ್ತೆಂದು ಹೆಸರಿದ್ದಿತು. ಅದು ದೇವತಾಸ್ತ್ರೀಯರಿಗೆ ರಮಿಸುವ ಸ್ಥಳವಾಗಿದ್ದಿತು. ಅದರಲ್ಲಿ ರಮ್ಯವಾದ ಒಂದು ಸರೋವರವಿದ್ದಿತು. ಅದರಲ್ಲಿ ಮನೋಹರವಾದ ಚಿನ್ನದ ಕಮಲವಿದ್ದಿತು.

೨೩೮. ಅದರಲ್ಲಿ ಶತಪತ್ರವೆಂಬ ಕಮಲಗಳೂ, ಕಲ್ಹಾರಗಳೂ, ಕುಮುದಗಳೂ ಅನೇಕವಾಗಿದ್ದುವು. ಅದು ಕೃತಘ್ನರಿಗೂ, ನೃಶಂಸರಿಗೂ, ನಾಸ್ತಿಕರಿಗೂ, ಕಾಣಿಸುತ್ತಿರಲಿಲ್ಲ.

೨೩೯. ಆ ಸರೋವರದಲ್ಲಿ ಒಂದು ಮೊಸಳೆಯಿದ್ದಿತು. ಅದು ದುಷ್ಟವಾದುದು. ವಿರೂಪವಾದುದು. ಅದು ನೀರಿನೊಳಗೆ ವಾಸಮಾಡಿಕೊಂಡು ಆನೆಗಳಿಗೂ ಸಗ್ಗದಷ್ಟು ಬಲವುಳ್ಳದ್ದಾಗಿದ್ದಿತು.

೨೪೦. ಹೀಗಿರುತ್ತಿರಲು ದಂತಗಳಿಂದ ಪ್ರಕಾಶಿಸುತ್ತಿರುವ ಮುಖವುಳ್ಳ ಒಂದು ಸಲಗಾನೆಯು ಬಾಯಾರಿದುದಾಗಿ ತನ್ನ ಹೆಣ್ಣಾನೆಗಳ ಗುಂಪಿನಿಂದ ಕೂಡಿಕೊಂಡು ನೀರುಕುಡಿಯಲು ಅಲ್ಲಿಗೆ ಬಂದಿತು.

ತೃಷಿತಃ ಪಾನಕಾಮೋಽಯಮವತೀರ್ಣಶ್ಚ ತತ್ಸರಃ ।
ಪಿಬತಸ್ತಸ್ಯ ತತ್ರೋಽಯಂ ಗ್ರಾಹಸ್ತಮುಪಪದ್ಯತ ॥ ೨೪೧ ॥

ಸುಲೀನಃ ಪಂಕಜವನೇ ಯೂಥಮಧ್ಯಗತಃ ಕರೀ ।
ಗೃಹೀತಸ್ತೇನ ರೌದ್ರೇಣ ಗ್ರಾಹೇಣಾತಿಬಲೀಯಸಾ ॥ ೨೪೨ ॥

ಗಜ ಆಕರ್ಷತೇ ತೀರಂ ಗ್ರಾಹ ಆಕರ್ಷತೇ ಜಲಂ ।
ಪಶ್ಯಂತೀನಾಂ ಕರೇಣೂನಾಂ ಕ್ರೋಶಂತೀನಾಂ ಸುದಾರುಣಂ ।
ನೀಯತೇ ಪಂಕಜವನೇ ಗ್ರಾಹೇಣಾವ್ಯಕ್ತಮೂರ್ತಿನಾ ॥ ೨೪೩ ॥

---

೨೪೧. ಬಾಯಾರಿದುದರಿಂದ ನೀರುಕುಡಿಯಲು ಇಚ್ಛೆಯಿಂದ ಆ ಸರೋವರಕ್ಕೆ ಇಳಿಯಿತು. ಅದರಲ್ಲಿ ನೀರುಕುಡಿಯುತ್ತಲಿರುವ ಆನೆಯ ಕಾಲಿನ ಬಳಿಯಲ್ಲಿಯೇ ಒಂದು ಮೊಸಳೆಯು ಅವಿತುಕೊಂಡಿದ್ದಿತು.

೨೪೨. ಈ ಸಲಗನು ನೀರನ್ನು ಕುಡಿದು ಕಮಲವನದಲ್ಲಿ ಹೆಣ್ಣಾನೆಗಳೊಡನೆ ಕ್ರೀಡಿಸುತ್ತಿರಲು ಆ ಬಲಿಷ್ಠನೂ ದುಷ್ಟನೂ ಆದ ಮೊಸಳೆಯಿಂದ ಹಿಡಿಯಲ್ಪಟ್ಟಿತು.

೨೪೩. ಆಗ ಆನೆಯು ದಡದಕಡೆ ಎಳೆಯುವುದಕ್ಕೂ ಮೊಸಳೆಯು ನೀರಿನೊಳಕ್ಕೆ ಎಳೆಯುವುದಕ್ಕೂ ಮೊದಲು ಮಾಡಿದುವು. ಇದನ್ನು ತಿಳಿದ ಹೆಣ್ಣಾನೆಗಳು ಅದರ ಕಷ್ಟವನ್ನು ನೋಡುತ್ತ ಬಹುವಾಗಿ ಕಿರಿಚಿಕೊಂಡು ಅಳುತ್ತಿದ್ದುವು. ಕಣ್ಣಿಗೆ ಕಾಣದಿರುವ ಆ ಮೊಸಳೆಯು ಆ ಪಂಕಜವನಕ್ಕೆ ಎಳೆಯುತ್ತಲೇ ಇದ್ದಿತು.

ತಥಾತುರಂ ಯೂಥಪತಿಂ ಕರೇಣವೋ
ವಿಕೃಷ್ಯಮಾಣಂ ತರಸಾ ಬಲೀಯಸಾ ।
ವಿಚಕ್ರುಶುರ್ದೀನಧಿಯೋ ಪರೇ ಗಜಾಃ
ಪಾರ್ಷ್ಣಿಗ್ರಹಾಸ್ತಾರಯಿತುಂ ನ ಚಾಶಕನ್ ॥ ೨೪೪ ॥

ತಯೋರ್ಯುದ್ಧಮಭೂದ್ಘೋರಂ ದಿವ್ಯವರ್ಷಸಹಸ್ರಕಂ ।
ವಾರುಣೈಸ್ಸಂಯುತಃ ಪಾಶೈರ್ನಿಷ್ಪ್ರಯತ್ನಗತಿಃ ಕೃತಃ ॥ ೨೪೫ ॥

ವೇಷ್ಟ್ಯಮಾನಸ್ಸುಘೋರೈಸ್ತು ಪಾಶೈರ್ನಾಗೈರ್ದೃಢೈಸ್ತಥಾ ।
ವಿಸ್ಫೂರ್ಜಿತಮಹಾಶಕ್ತಿರ್ವಿಕ್ರೋಶಂಶ್ಚ ಮಹಾರವಾನ್ ॥ ೨೪೬ ॥

ವ್ಯಥಿತಸ್ಸ ನಿರುತ್ಸಾಹೋ ಗೃಹೀತೋ ಘೋರಕರ್ಮಣಾ ।
ಪರಮಾಪದಮಾಪನ್ನೋ ಮನಸಾ ಚಿಂತಯದ್ಧರಿಂ ॥ ೨೪೭ ॥

---

೨೪೪. ಹೆಣ್ಣಾನೆಗಳೂ ಕೂಡ ಗುಂಪಾಗಿ ಸೇರಿಕೊಂಡು ಕಷ್ಟದಲ್ಲಿ ಸಿಕ್ಕಿರುವ ಆ ಸಲಗವನ್ನು ಹಿಡಿದೆಳೆಯುತ್ತಿದ್ದುವು. ಆದರೂ ಕೂಡ ಅದನ್ನು ಬಿಡಿಸಲು ಸಾಧ್ಯವಾಗಲಿಲ್ಲ.

೨೪೫. ಹೀಗೆ ಹಿಡಿದುಕೊಂಡ ಇವುಗಳು ದೇವತೆಗಳ ಸಾವಿರವರ್ಷಗಳ ವರೆಗೂ ಹೋರಾಡಿದುವು. ಆ ಮೊಸಳೆಯು ಎಳೆಯುತ್ತಿದ್ದುದರ ಜೊತೆಗೆ ನೀರಿನಲ್ಲಿರುವ ಹಂಬುಗಳೂ ಕಾಲಿಗೆ ಸುತ್ತಿಕೊಂಡು ಆ ಆನೆಗೆ ಅಲ್ಲಾಡ ದಂತಾಯಿತು.

೨೪೬. ಇತ್ತ ಈ ಆನೆಯನ್ನು ಉಳಿದ ಆನೆಗಳು ತಮ್ಮ ನಾಗಪಾಶದಿಂದ ಗಟ್ಟಿಯಾಗಿ ಹಿಡಿದು ಒಳಕ್ಕೆ ಹೋಗದಂತೆ ಮಾಡಿದ್ದುವು. ಆಗ ತನ್ನ ಶಕ್ತಿಯನ್ನು ಬಿಟ್ಟು ಸಲಗನು ಕೂಗಲೂ ಅಳಲೂ ಮೊದಲು ಮಾಡಿತು.

೨೪೭. ಆದರೂ ಕೂಡ ಆ ಕ್ರೂರಿಯಾದ ಮೊಸಳೆಯಿಂದ ಹಿಡಿಯಲ್ಪಟ್ಟ ದ್ದಾಗಿ ವ್ಯಥೆಗೊಂಡು ಜೀವನದಲ್ಲಿ ಉತ್ಸಾಹವನ್ನು ಬಿಟ್ಟಿತು. ಕೊನೆಗೆ ಆಪತ್ತು ದೊಡ್ಡದಾಗಿ ಸಾಯುವುದು ನಿಶ್ಚಯವಾಗಲು ಹರಿಯನ್ನು ಮನಸ್ಸಿನಲ್ಲಿ ನೆನೆಸಿಕೊಂಡಿತು.

ಏಕಾಗ್ರೋ ನಿಗೃಹೀತಾತ್ಮಾ ವಿಶುದ್ಧೇನಾಂತರಾತ್ಮನಾ ।
ಪ್ರಗೃಹ್ಯ ಪುಷ್ಕರಾಗ್ರೇಣ ಕಾಂಚನಂ ಕಮಲೋತ್ತಮಂ ॥ ೨೪೮ ॥

ನೈವೇದ್ಯಂ ಮನಸಾ ಧ್ಯಾತ್ವಾ ಪೂಜಯಿತ್ವಾ ಜನಾರ್ದನಂ ।
ಆಪದ್ವಿಮೋಕ್ಷಮನ್ವಿಚ್ಛನ್ಗಜಃ ಸ್ತೋತ್ರಮುದೀರಯತ್ ॥ ೨೪೯ ॥

ತತ್ಕೃತೇನ ಸ್ತವೇನೈವ ಸುಪ್ರೀತಃ ಪರಮೇಶ್ವರಃ ।
ಆರುಹ್ಯ ಗರುಡಂ ವಿಷ್ಣುರಾಜಗಾಮ ಸುರೋತ್ತಮಃ ॥ ೨೫೦ ॥

ಗ್ರಾಹಗ್ರಸ್ತಂ ಗಜೇಂದ್ರಂ ಚ ತಂ ಗ್ರಾಹಂ ಚ ಜಲಾಶಯಾತ್ ।
ಉಜ್ಜಹಾರಾಪ್ರಮೇಯಾತ್ಮಾ ತರಸಾ ಮಧುಸೂದನಃ ॥ ೨೫೧ ॥

ಜಲಸ್ಥಂ ದಾರಯಾಮಾಸ ಗ್ರಾಹಂ ಚಕ್ರೇಣ ಮಾಧವಃ ।
ಮೋಚಯಾಮಾಸ ನಾಗೇಂದ್ರಂ ಪಾಶೇಭ್ಯಶ್ಶರಣಾಗತಂ ॥ ೨೫೨ ॥

೨೪೮–೨೪೯. ಏಕಾಗ್ರತೆಯಿಂದಲೂ ಶುದ್ಧವಾದ ಮನಸ್ಸಿನಿಂದಲೂ ಹರಿಯನ್ನು ಧ್ಯಾನಿಸುತ್ತ ಒಂದು ಚಿನ್ನದ ಕಮಲವನ್ನು ಸೊಂಡಿಲಿನಿಂದ ಹಿಡಿದು ಮನಸ್ಸಿನಿಂದಲೇ ನೈವೇದ್ಯವನ್ನು ಧ್ಯಾನಿಸುತ್ತ ಜನಾರ್ದನನನ್ನು ಪೂಜಿಸಲು ಮೊದಲು ಮಾಡಿತು. ಮತ್ತು ಆ ಆಪತ್ತಿನಿಂದ ಪಾರಾಗಲು ಇಚ್ಛಿಸಿ ಸ್ವಾಮಿಯನ್ನು ಸ್ತುತಿಸಿತು.

೨೫೦. ಆಗ ಆನೆಯು ಮಾಡಿದ ಸ್ತೋತ್ರದಿಂದ ಆ ಸ್ವಾಮಿಯು ಸಂತೋಷಪಟ್ಟನು. ಅನಂತರ ಆ ಸ್ವಾಮಿಯು ಗರುಡನಮೇಲೆ ಕುಳಿತು ಅಲ್ಲಿಗೆ ಬಂದನು.

೨೫೧. ಹೀಗೆ ಗರುಡನಮೇಲೆ ಬಂದು ಆ ಸ್ವಾಮಿಯು ಮೊಸಳೆಯು ಹಿಡಿದಿದ್ದ ಆನೆಯನ್ನೂ ಮೊಸಳೆಯನ್ನೂ ಸರೋವರದಿಂದ ಜಾಗ್ರತೆಯಾಗಿ ಉದ್ಧಾರ ಮಾಡಿದನು.

೨೫೨. ನೀರಿನಲ್ಲಿರುವ ಮೊಸಳೆಗೆ ಚಕ್ರವನ್ನು ಬಿಟ್ಟು ಸೀಳಿ ಕೊಂದು ಶರಣಾಗತನಾದ ಆ ಆನೆಯನ್ನು ಕಾಪಾಡಿದನು.

ಆಸೀದ್ಗಜಃ ಪುರಾ ಪಾಂಡ್ಯ ಇಂದ್ರದ್ಯುಮ್ನ ಇತಿ ಶ್ರುತಃ ।
ಏಕದಾ ಸ ತಪೋನಿಷ್ಠೋ ಬಭೂವ ಧ್ಯಾನತತ್ಪರಃ ॥ ೨೫೩ ॥

ಯದೃಚ್ಛಯಾ ಯಯೌ ತತ್ರ ಕುಂಭಜಸ್ತ್ಮಾ ನೃಪಾಂತಿಕಂ ।
ಧ್ಯಾನಸ್ಥಸ್ಸ ನೃಪೋ ನೈವ ಮುನಿಂ ವೇದ ಸಮಾಗತಂ ॥ ೨೫೪ ॥

ದದೌ ಶಾಪಂ ಮುನಿರ್ಭೂಪಂ ದೃಷ್ಟ್ವಾತ್ಮಾನಂ ತು ನೋತ್ಥಿತಂ ।
ತಪೋಮದೇನ ಸಂಭ್ರಾಂತಸ್ತ್ವಂ ಯಸ್ಮಾನ್ನೋತ್ಥಿತೋಽಸಿ ಮಾಂ ॥ ೨೫೫ ॥

ಅತೋ ಗಜೋ ಭವ ಭ್ರಾಂತೋ ಮದೇನ ವಿಪಿನೇ ಚಿರಾತ್ ।
ತಂ ಶ್ರುತ್ವಾ ನೃಪತಿಶ್ಶಾಪಂ ತಂ ಪ್ರಣಮ್ಯ ಪುನಃ ಪುನಃ ॥ ೨೫೬ ॥

ವಿಶಾಪಂ ಪ್ರಾರ್ಥಯಾಮಾಸ ಮುನಿಃ ಪ್ರಾಹ ಹರೇಃ ಕರಾತ್ ।
ಭವಿಷ್ಯತಿ ವಿಮುಕ್ತಿಸ್ತೇ ಯದಾ ಗ್ರಾಹೋ ಧರಿಷ್ಯತಿ ॥ ೨೫೭ ॥

---

೨೫೩. ಪೂರ್ವದಲ್ಲಿ ಪಾಂಡ್ಯದೇಶದಲ್ಲಿ ಇಂದ್ರದ್ಯುಮ್ನನೆಂಬ ರಾಜನಿದ್ದನು. ಅವನು ತಪೋನಿಷ್ಠನಾಗಿ ಧ್ಯಾನಮಾಡುತ್ತಲಿದ್ದನು.

೨೫೪. ಆಗ ಅಗಸ್ತ್ಯನು ಅಕಸ್ಮಾತ್ತಾಗಿ ಆ ರಾಜನ ಬಳಿಗೆ ಹೋದನು. ಆ ರಾಜನು ಧ್ಯಾನದಲ್ಲಿದ್ದುದರಿಂದ ಅಗಸ್ತ್ಯಮುನಿಯು ಬಂದುದನ್ನು ತಿಳಿಯಲಿಲ್ಲ.

೨೫೫–೨೫೬. ಆ ರಾಜನು ತನ್ನನ್ನು ಎದುರುಗೊಂಡು ಅತಿಥಿಸತ್ಕಾರವನ್ನು ಮಾಡಲಿಲ್ಲವೆಂದು ಕೋಪಿಸಿಕೊಂಡು ಅವನಿಗೆ ಶಾಪವನ್ನು ಕೊಟ್ಟನು. ನೀನು ತಪಸ್ಸಿನ ಮದದಿಂದ ಹೆಮ್ಮೆಗೊಂಡು ನಾನು ಬಂದರೂ ಸತ್ಕರಿಸದಿದ್ದುದರಿಂದ ನೀನು ಕಾಡಿನಲ್ಲಿ ಮದ್ದಾನೆಯಾಗಿ ಹುಟ್ಟು. ಎನ್ನಲು ರಾಜನು ಈ ಶಾಪವನ್ನು ಕೇಳಿ ದುಃಖಗೊಂಡು ಅವನಿಗೆ ಬಹುವಾಗಿ ನಮಸ್ಕರಿಸಿದನು.

೨೫೭. ಅನಂತರ ವಿಶಾಪವನ್ನು ದಯಪಾಲಿಸಬೇಕೆಂದು ಕೇಳಿಕೊಳ್ಳಲು ನಿನ್ನನ್ನು ಮೊಸಳೆಯು ಹಿಡಿದುಕೊಂಡಾಗ ಹರಿಯ ಕೈಯ್ಯಿಂದ ನಿನಗೆ ಮುಕ್ತಿಯು ಬರುತ್ತದೆ.

ಪುರಾ ತದೈವ ಗಂಧರ್ವಸ್ತ್ವಪ್ಸರೋಗಣಸೇವಿತಃ ।
ಸರಸ್ಯಸ್ಮಿನ್ ಜಲಕ್ರೀಡಾಂ ಕರ್ತುಂಹೂಹೂಸ್ಸಮಾಸತಃ ॥ ೨೫೮ ॥

ಸರಸ್ಯಘಮರ್ಷಣಾರ್ಥಂ ದೃಷ್ಟ್ವಾ ಸ ದೇವಲಂ ಚಿರಂ ।
ಸಂಸ್ಥಿತಂ ತಂ ಬಹಿಃ ಕರ್ತುಂ ಗಂಧರ್ವಸ್ಸವ್ಯಚಿಂತಯತ್ ॥ ೨೫೯ ॥

ಸ್ವಯಂ ಭೂತ್ವಾ ಜಲೇ ಲೀನಸ್ತತ್ಪಾದೌ ಸ್ವಕರೇಣ ಹಿ ।
ದೃಢಂ ಧೃತ್ವಾ ಕರ್ಷಯಂತಂ ಜ್ಞಾತ್ವಾ ತಮಶಪನ್ಮುನಿಃ ॥ ೨೬೦ ॥

ಗ್ರಾಹವನ್ಮೇ ಧೃತೌ ಪಾದೌ ತಸ್ಮಾದ್ಗ್ರಾಹೋ ಭವಾತ್ರ ವೈ ।
ತೇನ ಸಂಪ್ರಾರ್ಥಿತಃ ಪ್ರಾಹ ಹರಿಸ್ತ್ವಾಮುದ್ಧರಿಷ್ಯತಿ ॥ ೨೬೧ ॥

ಏವಂ ತೌ ಪೂರ್ವಶಾಪೇನ ಪತಿತಾವತಿಸಂಕಟೇ ।
ಹರಿರುದ್ಧೃತ್ಯ ತೌ ತಾಭ್ಯಾಂ ಯಯೌ ಸ್ವೀಯಸ್ಥಲಂ ಪುನಃ ॥ ೨೬೨ ॥

---

೨೫೮. ಪೂರ್ವದಲ್ಲಿ ಅದೇ ಸಮಯದಲ್ಲಿ ಹೂ ಹೂ ಎಂಬ ಗಂಧರ್ವನು ಅಪ್ಸರಸ್ತ್ರೀಯರಿಂದ ಕೂಡಿ ಈ ಸರೋವರದಲ್ಲಿ ಜಲಕ್ರೀಡೆಯನ್ನಾಡಲು ಬಂದನು.

೨೫೯. ಈ ಸರೋವರದಲ್ಲಿ ಅಘಮರ್ಷಣ ಸ್ನಾನವನ್ನು ಮಾಡುತ್ತಿರುವ ದೇವಲನೆಂಬ ಋಷಿಯನ್ನು ಆ ಗಂಧರ್ವನು ಬಹುಹೊತ್ತು ನೋಡಿ ಅನಂತರ ಅಲ್ಲಿಂದ ಓಡಿಸಲು ಯೋಚಿಸಿದನು.

೧೬೦. ಅನಂತರ ಈ ಗಂಧರ್ವನು ನೀರಿನಲ್ಲಿ ಮುಳುಗಿಕೊಂಡು ಆ ಋಷಿಯ ಕಾಲುಗಳನ್ನು ಕೈಗಳಿಂದ ಹಿಡಿದುಕೊಂಡು ಎಳೆದನು ಇದನ್ನು ಆ ಮುನಿಯು ತಿಳಿದು ಅವನಿಗೆ ಶಾಪವನ್ನು ಕೊಟ್ಟನು.

೨೬೧. ನೀನು ನನ್ನ ಕಾಲುಗಳನ್ನು ಮೊಸಳೆಯಂತೆ ಹಿಡಿದುಕೊಂಡು ದರಿಂದ ಇಲ್ಲಿಯೇ ಮೊಸಳೆಯಾಗು. ಎನ್ನಲು ಅವನು ಅದರಿಂದ ದುಃಖಪಟ್ಟು ಮೇಲಕ್ಕೆ ಬಂದು ಕೇಳಿಕೊಳ್ಳಲು ಹರಿಯು ನಿನ್ನನ್ನು ಉದ್ಧರಿಸುವನು. ಎಂದನು.

೨೬೨. ಈ ರೀತಿಯಾಗಿ ಅವರಿಬ್ಬರೂ ಪೂರ್ವಶಾಪದಿಂದ ಈ ರೀತಿಯಾದ ಬಹು ಸಂಕಟದಲ್ಲಿ ಸಿಕ್ಕಿಕೊಂಡರು. ಹರಿಯು ಅವರಿಬ್ಬರನ್ನೂ ಈ ಶಾಪಗಳಿಂದ ಉದ್ಧಾರಮಾಡಿ ಹೊರಟು ಹೋದನು.

ಕ್ಷುಧಿತೇನಾಥ ತಾರ್ಕ್ಷ್ಯೇಣ ಪ್ರಾರ್ಥಿತಃ ಪ್ರಾಹ ತಂ ಹರಿಃ |
ಗಚ್ಛ ಭಕ್ಷಸ್ವ ಪತಿತೇ ಗಜನಕ್ರಕಲೇವರೇ ॥ ೨೬೩ ॥

ಯಯೌ ತಾರ್ಕ್ಷ್ಯಸ್ಸರಃ ಪುಣ್ಯಂ ತಾವದ್ಭ್ರೂಭಂಗಗೃಧ್ರರಾಟ್ |
ಕಳೇವರಾಂತಿಕಂ ಪ್ರಾಪ್ತಸ್ತಂ ನಿಹತ್ಯ ಖಗೇಶ್ವರಃ ॥ ೨೬೪ ॥

ಪದೇನೈಕೇನ ಭ್ರೂಭಂಗಮಪರೇಣ ಕಳೇವರೇ |
ಧೃತ್ವಾ ತಾರ್ಕ್ಷ್ಯಃ ಶುದ್ಧದೇಶಂ ಭಕ್ಷಣಾರ್ಥಮಪಶ್ಯತ ॥ ೨೬೫ ॥

ತಾವತ್ ಕ್ಷೀರಾರ್ಣವೇ ಜಾಂಬೂನದವೃಕ್ಷಂ ಸವೀಕ್ಷ್ಯ ಸಃ |
ಆಯಾಮವಿಸ್ತರೋಚ್ಚೈಸ್ತು ಸಹಸ್ರಂ ಯೋಜನಂ ಶುಭಂ ॥ ೨೬೬ ॥

---

೨೬೩. ಒಂದುಸಾರಿ ಹಸಿವುಗೊಂಡ ಗರುಡನು ನನಗೆ ಹಸಿವಾಗುತ್ತಿದೆ. ಎಂದು ಹರಿಯನ್ನು ಕೇಳಲು ಅವನು ತ್ರಿಕುಟಾಚಲಕ್ಕೆ ಹೋಗು. ಅಲ್ಲಿ ಆನೆ ಮತ್ತು ಮೊಸಳೆಗಳ ದೇಹವು ಬಿದ್ದಿದೆ. ಅವನ್ನು ತಿಂದು ಹಸಿವನ್ನು ಹೋಗಲಾಡಿಸಿಕೊ. ಎಂದನು.

೨೬೪. ಅನಂತರ ಆ ಗರುಡನು ಅ ಸರೋವರಕ್ಕೆ ಹೋಗಿ ನೋಡಲು ಅಲ್ಲಿ ಭ್ರೂಭಂಗನೆಂಬ ಗೃಧ್ರರಾಜನು ಆ ಎರಡು ಹೆಣಗಳ ಬಳಿಗೆ ತಿನ್ನುವುದಕ್ಕೆ ಬಂದಿದ್ದನು.

೨೬೫. ಆ ಗರುಡನು ಆ ಭ್ರೂಭಂಗನನ್ನು ಕೊಂದು ಅವನನ್ನು ಒಂದು ಕಾಲಿನಲ್ಲಿಯೂ ಈ ಎರಡು ಹೆಣಗಳನ್ನು ಮತ್ತೊಂದು ಕಾಲಿನಲ್ಲಿಯೂ ಹಿಡಿದು ಕೊಂಡು ಅವನ್ನು ತಿನ್ನಲು ಶುದ್ಧದೇಶವನ್ನು ನೋಡುತ್ತ ಹೊರಟನು.

೨೬೬. ಹೀಗೆ ನೋಡುತ್ತ ಹೋಗುತ್ತಿರುವಾಗ ಕ್ಷೀರಸಮುದ್ರದಲ್ಲಿ ಒಂದು ನೇರಿಳೆಯ ಮರವನ್ನು ನೋಡಿದನು. ಅದು ವಿಸ್ತಾರವಾಗಿದ್ದು ಸಾವಿರ ಯೋಜನಗಳಷ್ಟು ಎತ್ತರವಾಗಿದ್ದಿತು.

ತಚ್ಛಾಖಾಯಾಂ ವಿಶಾಲಾಯಾಂ ಯಾವತ್ತಸ್ಥೌ ಸ ಪಕ್ಷಿರಾಟ್ ।
ತಾವದ್ಬಭಂಜ ತಚ್ಛಾಖಾ ವಾಲಖಿಲ್ಯೈರಧೋಮುಖೈಃ ॥ ೨೬೭ ॥

ತಪದ್ಭಿಃ ಷಷ್ಟಿಸಾಹಸ್ರೈಶ್ಚಿರಕಾಲಂ ಸಮಾಶ್ರಿತಾ ।
ತಾಂಸ್ತಾದೃಶಾನ್ವಿಲೋಕ್ಯಾಥ ತಚ್ಛಾಪಭಯಶಂಕಿತಃ ॥ ೨೬೮ ॥

ಧೃತ್ವಾ ಸ್ವಚಂಚುನಾ ಶಾಖಾಂ ಬಭ್ರಾಮ ಗಗನೇ ಪುನಃ ।
ತತೋ ದೃಷ್ಟ್ವಾ ಕಶ್ಯಪಂ ಸ್ವತಾತಂ ನತ್ವಾ ವ್ಯಜಿಜ್ಞಪತ್ ॥ ೨೬೯ ॥

ವದ ಶದ್ಧಾಂ ಭುವಂ ಮೇದ್ಯ ಕುರ್ವೇಹಂ ಯತ್ರಭೋಜನಂ ।
ತದಾ ತಂ ಕ್ಯಪಃ ಪ್ರಾಹ ಶತಯೋಜನಸಾಗರೇ ॥ ೨೭೦ ॥

---

೨೬೭. ಆ ಗರುಡನು ಅವನ್ನು ತಿನ್ನಲು ವಿಶಾಲವಾದ ಅದರ ಶಾಖೆಯಲ್ಲಿ ಕುಳಿತುಕೊಳ್ಳಲು ಅಷ್ಟರಲ್ಲಿಯೇ ಆ ಕೊಂಬೆಯು ಮುರಿದುಹೋಯಿತು.

೨೬೮. ಕೊಂಬೆಯಲ್ಲಿ ವಾಲಖಿಲ್ಯರು ತಲೆಕೆಳಗಾಗಿ ನೇತುಹಾಕಿಕೊಂಡು ಅರವತ್ತು ಸಾವಿರ ವರ್ಷಗಳಿಂದಲೂ ತಪಸ್ಸುಮಾಡುತ್ತ ಆಶ್ರಯಿಸಿಕೊಂಡಿದ್ದರು ಅವರು ನೇತುಹಾಕಿಕೊಂಡಿದ್ದ ಈ ರೆಂಬೆಯು ಮುರಿದು ಹೋಗಲು ಅವರ ಶಾಪದಿಂದ ಹೆದರಿದನು.

೨೬೯. ಆದ್ದರಿಂದ ಆ ಕೊಂಬೆಯನ್ನು ಕೊಕ್ಕಿನಲ್ಲಿ ಹಿಡಿದುಕೊಂಡು ಅಂತರಿಕ್ಷದಲ್ಲಿ ತಿರುಗಲು ಮೊದಲು ಮಾಡಿದನು. ಹೀಗೆ ಸುತ್ತುತ್ತಿರುವಾಗ ತನ್ನ ತಂದೆಯಾದ ಕಶ್ಯಪನು ಸಿಕ್ಕಲು ಅವನಿಗೆ ನಮಸ್ಕರಿಸಿ ಅವನನ್ನು ಕೇಳಿದನು.

೨೭೦. ಎಲೈ ತಂದೆಯೆ! ನನಗೆ ಶುದ್ಧವಾದ ಸ್ಥಳವನ್ನು ಹೇಳು. ಎಲ್ಲಿ ನಿಂತು ನಾನು ಇವನ್ನು ತಿನ್ನಲಿ? ಎಂದು. ಆಗ ಕಶ್ಯಪನು ಅವನನ್ನು ಕುರಿತು ಇಂತೆಂದನು.

ಲಂಕಾನಾಮ್ನಾ ಶುದ್ಧಭೂಮಿಸ್ತತ್ರ ತ್ವಂ ಕುರು ಭೋಜನಂ।
ತತ್ಪಿತುರ್ವಚನಾಲ್ಲಂಕಾಂ ಯಯೌ ತಾರ್ಕ್ಷ್ಯಃ ಕ್ಷಣೇನ ಸಃ ॥ ೨೭೧ ॥

ಪ್ರೋಚ್ಚಯೋಃ ಪಕ್ಷಯೋಃ ಶಾಖಾಂ ಸ್ಥಾಪ್ಯ ತಾನ್ಭಕ್ಷಯನ್ಮುದಾ।
ತತ್ತ್ಯಕ್ತೈರಸ್ಥಿಭಿಸ್ತತ್ರ ಶೃಂಗಾಣಿ ತ್ರೀಣಿ ಚಾಭವನ್ ॥ ೨೭೨ ॥

ತ್ರಿಕೂಟ ಇತಿ ನಾಮ್ನಾ ಸ ಲಂಕಾಯಾಂ ಗಿರಿರಾಡಭೂತ್।
ತೇಷು ಶೃಂಗೇಷು ತಾಂ ಶಾಖಾಂ ತಾರ್ಕ್ಷ್ಯಸ್ಸಂಸ್ಥಾಪ್ಯ ಸಂಯಯೌ ॥ ೨೭೩

ವಾಲಖಿಲ್ಯಾಸ್ತಪೋಂತೇ ತೇ ಯಯುರ್ವಿಷ್ಣೋಃ ಪರಂ ಪದಂ।
ಆಸೀಚ್ಛಾಖಾಂತರಾಲೇ ಸಾ ಲಂಕಾಯಾಂ ಶೃಂಗಮೂರ್ಧಸು ॥ ೨೭೪ ॥

---

೨೭೧. ಈ ಸಾಗರದಲ್ಲಿ ನೂರುಯೋಜನದ ದೂರದಲ್ಲಿ ಲಂಕೆಯೆಂಬ ಶುದ್ಧವಾದ ಸ್ಥಳವಿರುವುದು. ಅಲ್ಲಿ ವಿಶ್ರಮಿಸಿಕೊಂಡು ನೀನು ಇವನ್ನು ತಿನ್ನು. ಎಂದನು. ತಂದೆಯ ಈ ಮಾತನ್ನು ಕೇಳಿ ಗರುಡನು ಕ್ಷಣಕಾಲದಲ್ಲಿಯೇ ಆ ಲಂಕೆಗೆ ಹೋದನು.

೨೭೨. ಅಲ್ಲಿ ಕುಳಿತು ಆ ಆನೆ, ಮೊಸಳೆ, ಹದ್ದುಗಳನ್ನಿಟ್ಟು ರೆಕ್ಕೆಗಳನ್ನು ಹರಡಿ ಅದರ ಮೇಲೆ ಆ ಕೊಂಬೆಯನ್ನಿಟ್ಟುಕೊಂಡು ಆ ಹೆಣಗಳನ್ನು ತಿಂದನು. ಅವುಗಳನ್ನು ತಿಂದು ಬಿಸುಟ ಆ ಮೂರು ಹೆಣಗಳ ಮೂಳೆಯೂ ಮೂರು ಗುಡ್ಡಗಳಾದುವು.

೨೭೩. ಅದೇನೇ ಆ ಲಂಕೆಯಲ್ಲಿ ತ್ರಿಕೂಟವೆಂದು ಪ್ರಸಿದ್ಧವಾಯಿತು. ಅನಂತರ ಆ ಗರುಡನು ಆ ಗುಡ್ಡಗಳಮೇಲೆ ತನ್ನ ರೆಕ್ಕೆಗಳಮೇಲಿದ್ದ ಆ ಕೊಂಬೆಯನ್ನಿಟ್ಟು ಹೊರಟು ಹೋದನು.

೨೭೪. ಅದರಲ್ಲಿದ್ದ ಆ ವಾಲಖಿಲ್ಯರು ತಪಸ್ಸು ಮುಗಿದಮೇಲೆ ವಿಷ್ಣುಪದವನ್ನು ಹೊಂದಿದರು. ಆ ಕೊಂಬೆಯು ಲಂಕೆಯ ಗುಡ್ಡೆಗಳ ತುದಿಯಲ್ಲಿದ್ದಿತು.

ಗ್ರಾವಭೂತಾಂ ಶೈವಲೇನ ನ ವಿದುಸ್ತಾಂ ತು ರಾಕ್ಷಸಾಃ |
ಲಂಕಾಗ್ನಿನಾ ದ್ರವೀಭೂತಾ ಮರ್ದಯತೀ ಕ್ಷಪಾಚರಾನ್ || ೨೭೫ ||

ಪಪಾತ ತದ್ರಸೇನಾಸೀಲ್ಲಂಕಾಭೂಮಿರ್ಹಿರಣ್ಮಯೀ |
ತಾಂ ದೃಷ್ಟ್ವಾ ಚಕಿತೋ ವೇಗಾದ್ವನೇ ಸೀತಾಂ ಯಯೌ ಕಪಿಃ|| ೨೭೬ ||

ದೃಷ್ಟ್ವಾಽಶೋಕೇ ಪುನಸ್ಸೀತಾಂ ತಾವಾಹ ಕಪಿಕುಂಜರಃ |
ಮತ್ ಸ್ಕಂಧಸಂಸ್ಥಿತಾ ರಾಮಮದ್ಯ ಪಶ್ಯಸಿ ಜಾನಕಿ || ೨೭೭ ||

ಸಾ ಪ್ರಾಹ ನೋಚಿತಾಮನ್ಯೈರ್ಮಾಂ ರಾಮೋ ನ ಸಹಿಷ್ಯತಿ |
ನೀತ್ವಾ ಪುನರ್ಮುದ್ರಿಕಾಂ ತ್ವಂ ರಾಘವಾಯ ಸಮರ್ಪಯ || ೨೭೮ ||

---

೨೭೫. ಆ ಕೊಂಬೆಯು ಪಾಚಿಹಿಡಿದುಕೊಂಡು ಕಲ್ಲಾಗಿ ಹೋಯಿತು. ಅದು ರಾಕ್ಷಸರಿಗೆ ತಿಳಿಯಲೇ ಇಲ್ಲ. ಈಗ ಲಂಕೆಯನ್ನು ಹತ್ತಿಸಿದುದರಿಂದ ಆ ಕೊಂಬೆಯು ಬೆಂಕಿಯಿಂದ ಕರಗಿ ಹರಿಯುತ್ತ ರಾಕ್ಷಸರನ್ನು ತೊಂದರೆ ಪಡಿಸಿತು.

೨೭೬. ಮತ್ತು ಅದು ಅಲ್ಲಿಯೇ ಹರಿದುಬಿದ್ದು ಲಂಕೆಯ ಭೂಮಿಯೆಲ್ಲ ಚಿನ್ನದಿಂದ ಕೂಡಿ ಕೊಂಡಿತು. ಅಂತಹ ಭೂಮಿಯನ್ನು ನೋಡುತ್ತಾ ಆಶ್ಚರ್ಯ ಪಡುತ್ತಾ ಸೀತೆಯ ಬಳಿಗೆ ಹೋದನು.

೨೭೭. ಅಶೋಕವನಕ್ಕೆ ಹೋಗಿ ಅಲ್ಲಿ ಸೀತೆಯನ್ನು ನೋಡಿ ಎಲೈ ಜಾನಕಿಯೇ! ನನ್ನ ಹೆಗಲಮೇಲೆ ಕುಳಿತುಕೊ. ಈಗಲೇ ರಾಮನನ್ನು ನೋಡು ತ್ತೀಯಂತೆ. ಎಂದನು.

೨೭೮. ನನ್ನನ್ನು ಮತ್ತೊಬ್ಬರು ಬಿಡಿಸಿದರೆ ಅದನ್ನು ಅವನು ಸಹಿಸುವುದಿಲ್ಲ. ನೀನು ನನ್ನ ಮುದ್ರಿಕೆಯನ್ನು ತೆಗೆದುಕೊಂಡು ಹೋಗಿ ರಾಘವನಿಗೆ ಕೊಡು. ಎಂದು ಅವನಿಗೆ ಸೀತೆಯು ಹೇಳಿದಳು.

ಇತ್ಯುಕ್ತ್ವಾ ತತ್ಕರೇ ಸೀತಾ ದದೌ ಶ್ರೀರಾಮಮುದ್ರಿಕಾಂ |
ತತಸ್ತಾಂ ಮಾರುತಿಃ ಸ್ಪೃಷ್ಟ್ವಾ ನತ್ವಾ ಶೀಘ್ರಂ ಯಯೌ ಪುನಃ || ೨೭೯ ||

ಆರುರೋಹ ಸುವೇಲಾದ್ರಿಂ ಚೂರ್ಣಂ ಸಮಕರೋದ್ಗಿರಿಂ |
ಏತಸ್ಮಿಂತರೇ ಬ್ರಹ್ಮಾ ದದೌ ಪತ್ರಂ ಸವಿಸ್ತರಂ || ೨೮೦ ||

ಯದ್ಯತ್ಕೃತಂ ಮಾರುತಿನಾ ಲಂಕಾಯಾಂ ತಸ್ಯ ಸೂಚಕಂ |
ತದ್ಗೃಹ್ಯ ಮಾರುತಿರ್ವೇಗಾನ್ನತ್ವಾ ಪೃಷ್ಟ್ವಾ ವಿಧಿಂ ಮುಹುಃ || ೨೮೧ ||

ತತ ಉಡ್ಡೀಯ ವೇಗೇನ ಯಯಾವಾಕಾಶವರ್ತ್ಮನಾ |
ಕುರ್ವನ್ ಶಬ್ದಂ ಮಹಾಘೋರಂ ಕಪೀನಾಮೂರ್ಧ್ವತಸ್ತದಾ || ೨೮೨ ||

---

೨೭೯. ಹೀಗೆಂದು ಹೇಳಿ ಸೀತೆಯು ಆ ಹನುಮಂತನ ಕೈಯ್ಯಲ್ಲಿ ರಾಮಮುದ್ರಿಕೆಯನ್ನು ಕೊಟ್ಟಳು. ಅನಂತರ ಅದನ್ನು ತೆಗೆದುಕೊಂಡು ಅವಳಿಗೆ ನಮಸ್ಕರಿಸಿ ಹಿಂದಿರುಗಿ ಹೊರಟನು.

೨೮೦. ಅಲ್ಲಿದ್ದ ಸುವೇಲವೆಂಬ ಪರ್ವತಕ್ಕೆ ಹೋಗಿ ಅದರಮೇಲಕ್ಕೆ ಹತ್ತಲು ಅದು ಭಾರವನ್ನು ತಡೆಯಲಾರದೆ ಪುಡಿ ಪುಡಿಯಾಯಿತು. ಮಾರುತಿಯು ಲಂಕೆಯಲ್ಲಿ ಏನೇನು ಮಾಡಿದನೋ ಅದರ ಸೂಚಕವಾದ ಒಂದು ಪತ್ರವನ್ನು ಬ್ರಹ್ಮನು ಬರೆದು ರಾಮನಿಗೆ ಕೊಡುವಂತೆ ಮಾರುತಿಯ ಕೈಗೆ ಕೊಟ್ಟನು.

೨೮೧. ಅದನ್ನು ಹನುಮಂತನು ತೆಗೆದುಕೊಂಡು ಆ ಬ್ರಹ್ಮನಿಗೆ ನಮಸ್ಕರಿಸಿ ಅವನಿಗೆ ಹೋಗಿ ಬರುತ್ತೇನೆಂದು ಹೇಳಿ ಹೊರಟನು.

೨೮೨. ಅಲ್ಲಿಂದ ಆಕಾಶಕ್ಕೆ ಹಾರಿ ಬಹುವಾಗಿ ಶಬ್ದಮಾಡುತ್ತ ಹೊರಟನು. ಅನಂತರ ಕಪಿಗಳ ಮೇಲುಭಾಗದಲ್ಲಿ ಸ್ವಲ್ಪ ಉತ್ತರದಿಕ್ಕಿಗೆ ಹೋಗಿ ನೆಲದಮೇಲೆ ಇಳಿದನು.

ಉದಧ್ಯಶ್ಯಂತರಾ ಕಿಂಚಿತ್ಪಪಾತ ಭುವಿ ಮಾರುತಿಃ ।
ತತೋ ದೃಷ್ಟ್ವಾ ಕಪೀಂಸ್ತತ್ರ ದೃಷ್ಟ್ವೈಕಂ ಮುನಿಸತ್ತಮಂ ॥ ೨೮೩ ॥

ಕಿಂಚಿದ್ಗರ್ವಸಮಾವಿಷ್ಟಸ್ತಂ ಮುನಿಂ ಪ್ರಾಹ ಮಾರುತಿಃ ।
ಮಯಾ ಶ್ರೀರಾಮಕಾರ್ಯಂ ತು ಕೃತಮಸ್ತಿ ಮುನೀಶ್ವರ ॥ ೨೮೪ ॥

ಪಾನೀಯಂ ಪಾತುಮಿಚ್ಛಾಮಿ ದರ್ಶಯಸ್ವ ಜಲಾಶಯಂ ।
ತರ್ಜನ್ಯಾ ದರ್ಶಯಾಮಾಸ ಮುನಿಃ ತಸ್ಮೈ ಜಲಾಶಯಂ ॥ ೨೮೫ ॥

ತತಸ್ಸ ಮಾರುತಿರ್ಮುದ್ರಾಂ ಮಣಿಂ ಪತ್ರಂ ಮುನೇಃ ಪುರಃ ।
ಸಂಸ್ಥಾಪ್ಯ ನೀರಂ ಪಾತುಂ ವೈ ಯಯೌ ಕಾಸಾರಮುತ್ತಮಂ ॥ ೨೮೬ ॥

ತತಸ್ತತ್ರ ಕಪಿಃ ಕಶ್ಚಿನ್ಮುದ್ರಿಕಾಂ ಮುನಿಸನ್ನಿಧೌ ।
ಕಮಂಡಲೌ ಪ್ರಾಕ್ಷಿಪತ್ಸ ಯಯೌ ತಾವಚ್ಚ ಮಾರುತಿಃ ॥ ೨೮೭ ॥

---

೨೮೩. ಅಲ್ಲಿ ಆ ಕಪಿಗಳೆಲ್ಲವನ್ನೂ ನೋಡಿದನು. ಅಲ್ಲಿ ಒಬ್ಬ ಮುನಿಯು ಕುಳಿತಿರಲು ಅವನನ್ನೂ ನೋಡಿದನು. ಆಗ ಸ್ವಲ್ಪ ಗರ್ವದಿಂದ ಕೂಡಿಕೊಂಡು ಅವನನ್ನು ನೋಡಿ ಇಂತೆಂದನು.

೨೮೪–೨೮೫. ಎಲೈ ಮುನೀಶ್ವರನೆ! ನಾನು ಶ್ರೀರಾಮನ ಕೆಲಸವನ್ನು ಮಾಡಿದ್ದೇನೆ. ಬಾಯಾರಿಕೆಯಿಂದ ನೀರು ಕುಡಿಯಬೇಕಾಗಿದೆ. ಸರೋವರವನ್ನು ತೋರಿಸು. ಎಂದೆನ್ನಲು ಆ ಮುನಿಯು ಎರಡನೆಯ ಬೆರಳಿನಿಂದ ಅವನಿಗೆ ಸರೋವರವನ್ನು ತೋರಿಸಿದನು.

೨೮೬. ಆಗ ಆ ಮಾರುತಿಯು ರಾಮಮುದ್ರಿಕೆಯನ್ನೂ ಚೂಡಾಮಣಿಯನ್ನೂ ಕಾಗದವನ್ನೂ ಆ ಋಷಿಯ ಮುಂದಿಟ್ಟು ನೀರನ್ನು ಕುಡಿಯಲು ಕೊಳಕ್ಕೆ ಹೋದನು.

೨೮೭. ಋಷಿಯ ಬಳಿಯಲ್ಲಿದ್ದ ಒಂದು ಕಪಿಯು ಆ ಮುದ್ರಿಕೆಯನ್ನು ಆ ಮುನಿಯ ಕಮಂಡಲುವಿನಲ್ಲಿ ಹಾಕಿ ಹೊರಟುಹೋಯಿತು. ಅಷ್ಟರಲ್ಲಿ ಹನುಮಂತನು ಅಲ್ಲಿಗೆ ಬಂದನು.

ಗೃಹೀತ್ವಾ ತಂ ಮಣಿಂ ಪತ್ರಂ ಮುನಿಂ ಪಪ್ರಚ್ಛ ಮುದ್ರಿಕಾಂ ।
ಮುನಿರ್ಭ್ರೂಸಂಜ್ಞಯಾ ತಸ್ಮೈ ಕಮಂಡಲುಮದರ್ಶಯತ್ ॥ ೨೮೮ ॥

ತತಃ ಕಮಂಡಲೌ ತೂಷ್ಣೀಂ ಮುದ್ರಿಕಾಮವಲೋಕಯತ್ ।
ತಾವದ್ದದರ್ಶಾಂಜನೇಯಸ್ತಸ್ಮಿನ್ ಶ್ರೀರಾಮಮುದ್ರಿಕಾಃ ॥ ೨೮೯ ॥

ದೃಷ್ಟ್ವಾ ಸಹಸ್ರಶಸ್ತತ್ರ ಚಕಿತಃ ಪ್ರಾಹ ತಂ ಮುನಿಂ ।
ಕುತಸ್ತ್ವಿಮಾ ಮುದ್ರಿಕಾಶ್ಚ ವದ ಕಾ ಮಮ ಮುದ್ರಿಕಾ ॥ ೨೯೦ ॥

ಏತಾಸು ತ್ವಂ ಮುನಿಶ್ರೇಷ್ಠ ತದಾ ತಂ ಮುನಿರಬ್ರವೀತ್ ।
ಯದಾ ಯದಾ ವಾಯುಪುತ್ರೈಸ್ಸೀತಾನಾಂ ರಾಘವಾಜ್ಞಯಾ ॥ ೨೯೧ ॥

ಲಂಕಾಂ ಗತ್ವಾ ಸಮಾನೀತ್ವಾ ಶುದ್ಧಿಮುದ್ರಾಸ್ತದಾ ಮುದಾ ।
ಮದಗ್ರೇ ಸ್ಥಾಪಿತಾಸ್ತಾಶ್ಚ ಕಪಿಭಿಶ್ಚ ಕಮಂಡಲೌ ॥ ೨೯೨ ॥

---

೨೮೮. ಹನುಮಂತನು ಚೂಡಾಮಣಿಯನ್ನೂ ಪತ್ರವನ್ನೂ ಕೈಗೆ ತೆಗೆದುಕೊಂಡು ಮುದ್ರಿಕೆಯನ್ನು ಕೇಳಲು ಆ ಮುನಿಯು ಹುಬ್ಬಿನ ಸನ್ನೆಯಿಂದ ಕಮಂಡಲವನ್ನು ತೋರಿಸಿದನು.

೨೮೯. ಹನುಮಂತನು ಕಮಂಡಲುವಿನಲ್ಲಿ ಸುಮ್ಮನೆ ಮುದ್ರಿಕೆಯನ್ನು ನೋಡಿದನು. ಆಗ ಆ ಕಮಂಡಲುವಿನಲ್ಲಿ ಶ್ರೀರಾಮ ಮುದ್ರಿಕೆಗಳು ಬಹುವಾಗಿ ಕಂಡು ಬಂದುವು.

೨೯೦. ಅದರಲ್ಲಿ ಸಾವಿರಾರು ಮುದ್ರಿಕೆಗಳನ್ನು ನೋಡಿ ಆಶ್ಚರ್ಯಗೊಂಡು ಮಾರುತಿಯು ಎಲೈ ಮುನಿಯೆ ! ನಿನಗೆ ಈ ಮುದ್ರಿಕೆಗಳೆಲ್ಲ ಎಲ್ಲಿಂದ ಬಂದುವು? ಇವುಗಳಲ್ಲಿ ನನ್ನ ಮುದ್ರಿಕೆ ಯಾವುದು ?

೨೯೧–೨೯೨. ಎಂದು ಕೇಳಲು ಮುನಿಯು ಅವನನ್ನು ಕುರಿತು ರಾಮನ ಅಪ್ಪಣೆಯಿಂದ ವಾಯುಪುತ್ರರು ಸೀತೆಯ ಸುದ್ದಿಯನ್ನು ತರಲು ಲಂಕೆಗೆ ಹೋದಾಗಲೆಲ್ಲಾ ಸಮಾಚಾರದ ಮುದ್ರೆಯನ್ನು ತಂದು ನನ್ನ ಮುಂದೆ ಇಡುತ್ತಿದ್ದರು. ಅದನ್ನು ಕಪಿಗಳು ಈ ಕಮಂಡಲುವಿನಲ್ಲಿ ಹಾಕುತ್ತಿದ್ದುವು.

ನಿಕ್ಷಿಪ್ತಾಸ್ತಾಸ್ತ್ವಮಾಸ್ಸರ್ವಾಃ ಪಶ್ಯೈತಾಸು ಸ್ವಮುದ್ರಿಕಾಂ ।
ತನ್ಮುನೇರ್ವಚನಂ ಶ್ರುತ್ವಾ ಗತಗರ್ವಸ್ತಮಬ್ರವೀತ್ || ೨೯೩ ||

ಕಿಯಂತೋ ರಾಘವಾಶ್ಚಾತ್ರ ಸಮಾಯಾತಾ ಮುನೀಶ್ವರ ।
ಮುನಿಸ್ತಂ ಪ್ರಾಹ ನಿಷ್ಕಾಸ್ಯ ಗಣಯಸ್ವಾದ್ಯಮುದ್ರಿಕಾಃ || ೨೯೪ ||

ಕಮಂಡಲೋರಂಜಲಿಭಿಸ್ತದಾಥ ಮುದ್ರಿಕಾ ಮುಹುಃ ।
ಬಹಿಃ ಕ್ಷಿಪನ್ಮಾರುತಿಸ್ಸ ನಾಂತಂ ತಾಸಾಂ ದದರ್ಶ ವೈ || ೨೯೫ ||

ಪುನಃ ಕಮಂಡಲೌ ಕೃತ್ವಾ ಮುನಿಂ ನತ್ವಾ ಕಪಿಃ ಕ್ಷಣಂ ।
ಚಿಂತಯಾಮಾಸ ಮನಸಿ ಮಾದೃಶೈಶ್ಶತಶೈಃ ಪುರಾ || ೨೯೬ ||

ಸಮಾನೀತಾಸ್ತಿ ಸೀತಾಯಾಃ ಶುದ್ಧಿಃ ಕಾ ಗಣನಾದ್ಯ ಮೇ ।
ಇತಿ ನಿಶ್ಚಿತ್ಯ ಮನಸಿ ಗತಗರ್ವಸ್ತದಾ ಕಪಿಃ || ೨೯೭ ||

---

೨೯೩. ಇವೆಲ್ಲವೂ ಅವುಗಳೇನೆ! ಎಂದೆನಲು ಮಾರುತಿಯು ಈ ಮಾತನ್ನು ಕೇಳಿ ಗರ್ವವನ್ನು ಬಿಟ್ಟವನಾಗಿ ಇಂತೆಂದನು.

೨೯೪. ಎಲೈ ಮುನೀಶ್ವರನೆ! ಇಲ್ಲಿಗೆ ಎಷ್ಟು ಜನ ರಾಘವರು ಬಂದಿದ್ದರು? ಎನಲು ಮುನಿಯು ಆ ಮುದ್ರಿಕೆಗಳನ್ನು ತೆಗೆದು ಎಣಿಸಿ ನೋಡೆಂದನು.

೨೯೫. ಆಗ ಹನುಮಂತನು ಕಮಂಡಲುವಿನೊಳಕ್ಕೆ ಕೈಹಾಕಿ ಮುದ್ರಿಕೆಗಳನ್ನು ತೆಗೆಯುತ್ತ ಬರಲು ಅವು ಕೊನೆಗಾಣಲೇ ಇಲ್ಲ.

೨೯೬. ಅನಂತರ ಆ ಮುದ್ರಿಕೆಗಳನ್ನು ಮತ್ತೆ ಕಮಂಡಲುವಿನೊಳಗೆ ಹಾಕಿ ಆ ಮುನಿಗೆ ನಮಸ್ಕರಿಸಿ ಮನಸ್ಸಿನಲ್ಲಿಯೇ ಯೋಚಿಸಿದನು.

೨೯೭. ಹಿಂದೆ ನನ್ನಂತಹವರು ಬಹು ಮಂದಿ ಸೀತೆಯ ಸುದ್ದಿಯನ್ನು ತಂದಿರುವರು. ಈಗ ನನ್ನದು ಯಾವ ಲೆಕ್ಕವು? ಎಂಬುದಾಗಿ ಮನಸ್ಸಿನಲ್ಲಿಯೇ ನಿಶ್ಚಯಿಸಿಕೊಂಡು ಗರ್ವವನ್ನು ಬಿಟ್ಟುಬಿಟ್ಟನು.

ಪುನರ್ದಕ್ಷಿಣಮಾರ್ಗೇಣ ಯಯೌ ಯತ್ರಾಂಗದಾದಯಃ ।
ಪ್ರಾಯೋಪವೇಶನಸ್ಥಾಸ್ತೇ ತಂ ದೃಷ್ಟ್ವಾ ತುಷ್ಟಮಾನಸಾಃ ॥ ೨೯೮ ॥

ಬಭೂವುರ್ವಾನರಾಸ್ಸರ್ವೇ ಸಮಾಲಿಂಗ್ಯಾಥ ತಂ ಮುಹುಃ ।
ಜ್ಞಾತ್ವಾ ತನ್ಮುಖತಸ್ಸೀತಾ ದೃಷ್ಟಾಶೋಕವನೇ ತ್ವಿತಿ ॥ ೨೯೯ ॥

ಯಯುಸ್ತೇ ರಾಘವಂ ಶೀಘ್ರಂ ಮಾರ್ಗೇ ಸುಗ್ರೀವಪಾಲಿತಂ ।
ದೃಷ್ಟ್ವಾ ಮಧುವನಂ ಸರ್ವೇ ಪೃಷ್ಟ್ವಾ ತಂ ವಾಲಿನಂದನಂ ॥ ೩೦೦ ॥

ಫಲಾನಿ ಭಕ್ಷಯಾಮಾಸುರ್ದಧಿವಕ್ತ್ರೋ ನ್ಯಷೇಧಯತ್ ।
ತತಸ್ತೇ ತಾಡಯಾಮಾಸುರ್ದಧಿವಕ್ತ್ರಂ ಕಪೀಶ್ವರಂ ॥ ೩೦೧ ॥

---

೨೯೮. ಅನಂತರ ದಕ್ಷಿಣಕ್ಕೆ ತಿರುಗಿ ಅಂಗದಾದಿಗಳು ಇದ್ದ ಸ್ಥಳಕ್ಕೆ ಹೊರಟನು. ಪ್ರಾಯೋಪವೇಶಮಾಡುತ್ತಿದ್ದ ಅವರು ಇವನನ್ನು ನೋಡಿ ಬಹುವಾಗಿ ಸಂತೋಷಗೊಂಡರು.

೨೯೯. ಎಲ್ಲ ಕಪಿಗಳೂ ಆಂಜನೇಯನನ್ನು ಆಲಿಂಗಿಸಿಕೊಂಡು ಸಂತೋಷ ಪಟ್ಟುವು. ಅಶೋಕವನದಲ್ಲಿ ಸೀತೆಯನ್ನು ನೋಡಿದೆನು. ಎಂದು ಅವನ ಬಾಯಿಂದಲೇ ಕೇಳಿದರು.

೩೦೦-೩೦೧. ಒಡನೆಯೇ ಅವರೆಲ್ಲರೂ ರಾಘವನ ಬಳಿಗೆ ಹೊರಟರು. ದಾರಿಯಲ್ಲಿ ಸುಗ್ರೀವನಿಂದ ರಕ್ಷಿತವಾದ ಮಧುವನವನ್ನು ನೋಡಿದರು. ವಾಲಿ ನಂದನನಾದ ಅಂಗದನ ಅಪ್ಪಣೆಯನ್ನು ಪಡೆದು ಆ ವನದಲ್ಲಿದ್ದ ಹಣ್ಣುಗಳನ್ನು ತಿಂದರು. ಆಗ ವನರಕ್ಷಕನಾದ ದಧಿವಕ್ತ್ರನು ತಡೆದನು. ಆಗ ಅವರೆಲ್ಲರೂ ಆ ದಧಿವಕ್ತ್ರನನ್ನು ಹೊಡೆದರು.

ಜ್ಞಾತ್ವಾ ತಂ ಮಾತುಲಮಪಿ ಸುಗ್ರೀವಸ್ಯಾಂಗದಾದಯಃ ।
ಸ ಗತ್ವಾ ಸಕಲಂ ವೃತ್ತಂ ಸುಗ್ರೀವಾಯ ನ್ಯವೇದಯತ್ ॥ ೩೦೨ ॥

ಸೋಽಪಿ ಶ್ರುತ್ವಾ ಜನಕಜಾ ದೃಷ್ಟ್ವಾ ತೈರಿತ್ಯಮನ್ಯತ ।
ನೋ ಚೇನ್ಮಧುವನಂ ರಮ್ಯಂ ಕಥಮಶ್ನಂತಿ ವಾನರಾಃ ॥ ೩೦೩ ॥

ತತೋ ವಿಸರ್ಜಯಾಮಾಸ ದಧಿವಕ್ತ್ರಂ ಕಪೀಶ್ವರಃ ।
ಮಾ ನಿಷೇಧಸ್ತ್ವಯಾ ಕಾರ್ಯಸ್ತ್ವಂ ಶೀಘ್ರಂ ಪ್ರೇಷಯಸ್ವ ತಾನ್ ॥ ೩೦೪ ॥

ಮಮಾಂತಿಕಂ ತತೋ ಗತ್ವಾ ದಧಿವಕ್ತ್ರಸ್ತಥಾಕರೋತ್ ।
ತತಸ್ಸುಗ್ರೀವವಚನಂ ಶ್ರುತ್ವಾ ತೇನ ಸಮೀರಿತಂ ॥ ೩೦೫ ॥

---

೩೦೨. ದಧಿವಕ್ತ್ರನು ಸುಗ್ರೀವನಿಗೆ ಸೋದರಮಾವನೆಂಬುದು ಎಲ್ಲರಿಗೂ ಗೊತ್ತಿದ್ದಿತು. ಆದರೂ ಅವನನ್ನು ಹೊಡೆದರು. ಆ ದಧಿಮುಖನು ಸುಗ್ರೀವನಲ್ಲಿಗೆ ಹೋಗಿ ಎಲ್ಲಾ ವಿಷಯಗಳನ್ನೂ ತಿಳಿಸಿದನು.

೩೦೩. ಆ ಸುಗ್ರೀವನು ಅದೆಲ್ಲವನ್ನೂ ಕೇಳಿ ಅವರು ಸೀತೆಯನ್ನು ನೋಡಿರುವರು. ಎಂದು ತಿಳಿದುಕೊಂಡನು. ಹಾಗಿಲ್ಲದಿದ್ದರೆ ರಮ್ಯವಾದ ಮಧುವನವನ್ನು ನಾಶಮಾಡುತ್ತಿರಲಿಲ್ಲ. ಎಂದುಕೊಂಡನು.

೩೦೪. ಆಮೇಲೆ ಆ ದಧಿವಕ್ತ್ರನನ್ನು ಸುಗ್ರೀವನು ಕಳುಹಿಸಿ ನೀನು ಅವರನ್ನು ತಡೆಯಬೇಡ. ಬೇಗ ನನ್ನಲ್ಲಿಗೆ ಕಳುಹಿಸು. ನನ್ನ ಬಳಿಗೆ ಬಂದು ಎಲ್ಲವನ್ನೂ ತಿಳಿಸಿ. ಹೋಗಲಿ. ಎಂದನು.

೩೦೫. ದಧಿವಕ್ತ್ರನು ಅಲ್ಲಿಗೆ ಹೋಗಿ ಸುಗ್ರೀವನು ಹೇಳಿದಂತೆಯೇ ಹೇಳಿ ಅವರನ್ನು ಸುಗ್ರೀವನ ಬಳಿಗೆ ಕಳುಹಿಸಿದನು.

ಯಯುಸ್ತೇ ವಾನರಾಸ್ಸರ್ವೇ ರಾಮಂ ನತ್ವಾ ಪುರಃ ಸ್ಥಿತಾಃ |
ತತೋ ಹರ್ಷಾನ್ಮಾರುತಿಸ್ಸ ಬ್ರಹ್ಮಪತ್ರಂ ನ್ಯವೇದಯತ್ || ೩೦೬ ||

ದತ್ವಾ ಚೂಡಾಮಣಿಂ ರಾಮಂ ಕಾಕವೃತ್ತಂ ನ್ಯವೇದಯತ್ |
ತಚ್ಛ್ರುತ್ವಾ ಸಕಲಂ ವೃತ್ತಂ ಜ್ಞಾತ್ವಾ ಮಾರುತಿನಾ ಕೃತಂ || ೩೦೭ ||

ಲಂಕಾಯಾಂ ಬ್ರಹ್ಮಪತ್ರೇಣ ರಾಮಸ್ತುಷ್ಟೋ ಬಭೂವ ಸಃ |
ಸಮಾಲಿಂಗ್ಯ ಹನೂಮಂತಂ ರಾಘವೋ ವಾಕ್ಯಮಬ್ರವೀತ್ || ೩೦೮ ||

ತವೋಪಕಾರಿಣಶ್ಚಾಹಂ ನ ಪಶ್ಯಾಮ್ಯದ್ಯ ಮಾರುತೇ |
ಕರ್ತುಂ ಪ್ರತ್ಯುಪಕಾರಂ ತೇ ಧನ್ಯೋಸಿ ಜಗತೀತಲೇ || ೩೦೯ ||

---

೩೦೬. ಆ ಕಪಿಗಳೆಲ್ಲರೂ ರಾಮನ ಬಳಿಗೆ ಹೋಗಿ ಅವನಿಗೆ ನಮಸ್ಕರಿಸಿ ಎದುರಿಗೆ ನಿಂತುಕೊಂಡರು. ಆಮೇಲೆ ಮಾರುತಿಯು ಸಂತೋಷದಿಂದ ಬ್ರಹ್ಮನ ಕಾಗದವನ್ನು ರಾಮನ ಕೈಗೆ ಕೊಟ್ಟನು.

೩೦೭–೩೦೮. ಮತ್ತು ಆ ಚೂಡಾಮಣಿಯನ್ನೂ ರಾಮನಿಗೆ ಕೊಟ್ಟು ಕಾಕಾಸುರನ ವಿಷಯವನ್ನೂ ಹೇಳಿದನು. ರಾಮನು ಆ ವಿಷಯಗಳೆಲ್ಲವನ್ನೂ ಕೇಳಿ ಬ್ರಹ್ಮನ ಕಾಗದದಿಂದ ಮಾರುತಿಯು ಲಂಕೆಯಲ್ಲಿ ಮಾಡಿದ ಕೆಲಸಗಳನ್ನೆಲ್ಲಾ ತಿಳಿದು ಸಂತೋಷಗೊಂಡನು. ಆಗ ಹನುಮಂತನನ್ನು ಆಲಿಂಗಿಸಿಕೊಂಡು ರಾಮನು ಇಂತೆಂದನು.

೩೦೯. ಎಲೈ ಮಾರುತಿಯೆ! ಉಪಕಾರಮಾಡಿದ ನಿನಗೆ ಪ್ರತ್ಯುಪಕಾರವನ್ನು ಮಾಡಲು ಏನುಮಾಡುವುದಕ್ಕೂ ನನಗೆ ತಿಳಿಯುವುದೇ ಇಲ್ಲ. ನೀನು ಈ ಪ್ರಪಂಚದಲ್ಲಿಯೇ ಧನ್ಯನಾಗಿದ್ದೀಯೆ.

ಪರೀರಂಭೋ ಹಿ ಮೇ ಲೋಕೇ ದುರ್ಲ್ಲಭಃ ಪರಮಾತ್ಮನಃ |
ಅತಸ್ತ್ವಂ ಮಮ ಭಕ್ತೋಽಸಿ ಪ್ರಿಯೋಽಸಿ ಹರಿಪುಂಗವ ॥ ೩೧೦ ॥

ಯತ್ಪಾದಪದ್ಮಯುಗಳಂ ತುಳಸೀದಳಾದ್ಯೈಃ
ಸಂಪೂಜ್ಯ ವಿಷ್ಣುಪದವೀಮತುಲಾಂ ಪ್ರಯಾಂತಿ |
ತೇನೈವ ಕಿಂ ಪುನರಸೌ ಪರಿರಬ್ಧಮೂರ್ತೀ
ರಾಮೇಣ ವಾಯುತನಯಃ ಕೃತಪುಣ್ಯಪುಂಜಃ ॥ ೩೧೧ ॥

ರಾಮಂ ಸ ಮಾರುತಿಃ ಪ್ರಾಹ ಭೀತಭೀತೋಽತಿಕಂಪಿತಃ |
ಮಯಾಽಪರಾಧಿತಮಿತಿ ಮುದ್ರಾವೃತ್ತಂ ಮುನೇರ್ವಚಃ ॥ ೩೧೨ ॥

ತಚ್ಛ್ರುತ್ವಾ ರಾಮಚಂದ್ರೋಽಪಿ ವಿಹಸ್ಯೋವಾಚ ಮಾರುತಿಂ |
ಮಯೈವ ದರ್ಶಿತಂ ಮಾರ್ಗೇ ಕೌತುಕಂ ಮುನಿರೂಪಿಣಾ ॥ ೩೧೩ ॥

---

೩೧೦. ಎಲೈ ಮಾರುತಿಯೆ! ಪರಮಾತ್ಮನಾದ ನನ್ನಿಂದ ಆಲಿಂಗನ ಸಿಕ್ಕುವುದು ಲೋಕದಲ್ಲಿ ದುರ್ಲಭವು. ಆದುದರಿಂದಲೇ ನೀನು ನನಗೆ ಭಕ್ತನೂ ಪ್ರಿಯನೂ ಆಗಿದ್ದೀಯೆ.

೩೧೧. ಲೋಕದಲ್ಲಿ ಯಾವ ಸ್ವಾಮಿಯ ಪಾದ ಪದ್ಮವನ್ನು ತುಲಸೀದಳವೇ ಮುಂತಾದುವುಗಳಿಂದ ಪೂಜಿಸಿ ಜನಗಳು ಉತ್ತಮೋತ್ತಮವಾದ ಪದವಿಯನ್ನು ಹೊಂದುತ್ತಾರೆಯೋ ಅಂತಹ ಸ್ವಾಮಿಯಾದ ರಾಮನಿಂದಲೇ ಆಲಿಂಗನವನ್ನು ಹೊಂದಿದ ಶರೀರವುಳ್ಳ ಈ ಹನುಮಂತನು ಪುಣ್ಯಮೂರ್ತಿಯಲ್ಲವೆ!

೩೧೨. ಅನಂತರ ಮಾರುತಿಯು ಹೆದರಿಕೊಂಡು ನಡುಗುತ್ತಾ ನಾನು ತಮಗೆ ಅಪರಾಧಮಾಡಿದ್ದೇನೆ. ಎಂದು ಹೇಳುತ್ತ ಮುದ್ರೆಯ ಉಂಗುರದ ವಿಷಯವನ್ನೂ ಮುನಿಯ ವಿಷಯವನ್ನೂ ಹೇಳಿದನು.

೩೧೩–೩೧೪. ಆ ಮಾತನ್ನು ರಾಮನು ಕೇಳಿ ನಕ್ಕು ಎಲೈ ಹನುಮಂತನೆ! ನಾನೇನೇ ಮುನಿಯ ರೂಪದಿಂದ ಮಾರ್ಗದಲ್ಲಿ ನಿನ್ನ ಗರ್ವವನ್ನು ಮುರಿಯಲು

ತ್ವದ್ಗರ್ವಪರಿಹಾರಾಯ ಮುದ್ರಿಕಾಂ ಮತ್ಕರೇ ತ್ವಿಮಾಂ ।
ಕನಿಷ್ಠಿಕಾಯಾಂ ತ್ವಂ ಪಶ್ಯ ಸಮಾನೀತಾ ತ್ವಯಾದ್ಯ ವೈ ॥ ೩೧೪ ॥

ತಾಂ ರಾಮಮುದ್ರಿಕಾಂ ದೃಷ್ಟ್ವಾ ಶ್ರೀರಾಮಸ್ಯ ಕರಾಂಗುಲೌ ।
ನನಾಮ ಗತಗರ್ವಸ್ಸ ರಾಮಂ ವಿಷ್ಣುಮಮನ್ಯತ ॥ ೩೧೫ ॥

ಮಯ್ಯಪ್ಯಸ್ಯೈವ ಕೃಪಯಾ ಪೌರುಷಂ ಚೇತ್ಯಮನ್ಯತ ।
ಏವಂ ಗಿರೀಂದ್ರಜೇ ಪ್ರೋಕ್ತಂ ಚರಿತ್ರಂ ಸುಂದರಾಭಿದಂ ॥ ೩೧೬ ॥

ರಾಮಾರ್ಥಂ ವಾಯುಪುತ್ರೇಣ ಕೃತಂ ಸರ್ವಾರ್ಥದಾಯಕಂ ॥ ೩೧೭ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಸಾರಕಾಂಡೇ ಹನುಮತ್ಸುಂದರ ಚರಿತ್ರೇ
ಸೀತಾಶುದ್ಧಿರ್ನಾಮ ನವಮಸ್ಸರ್ಗಸ್ಸಮಾಪ್ತಃ

ಕೌತುಕವನ್ನು ತೋರಿಸಿದೆನು. ಆ ಮುದ್ರಿಕೆಯನ್ನು ನಾನು ಕಿರುಬೆರಳಿಗೆ ಹಾಕಿಕೊಂಡಿದ್ದೇನೆ. ನೋಡು! ಇದೇ ಅಲ್ಲವೆ? ನೀನು ತಂದುದು? ಎಂದನು.

೩೧೫. ಆಗ ಹನುಮಂತನು ಶ್ರೀರಾಮನ ಕೈ ಬೆರಳಿನಲ್ಲಿ ಆ ಉಂಗುರವನ್ನು ನೋಡಿ ಗರ್ವವನ್ನು ಬಿಟ್ಟು ನಮಸ್ಕರಿಸಿದನು. ಮತ್ತು ರಾಮನನ್ನು ವಿಷ್ಣುವೇ ಎಂದು ತಿಳಿದನು.

೩೧೬. ನನಗೂ ಕೂಡ ಈತನ ಕೃಪೆಯಿಂದಲೇ ಇಷ್ಟೊಂದು ಪೌರುಷವೂ ಉಂಟಾಗಿದೆ ಎಂದೂ ತಿಳಿದನು. ಎಲೈ ಪಾರ್ವತಿಯೆ! ಸುಂದರವೆಂಬ ಚರಿತ್ರೆಯನ್ನು ಹೀಗೆ ಹೇಳಿದ್ದೇನೆ.

೩೧೭. ರಾಮನಿಗೆ ವಾಯುಪುತ್ರನಿಂದ ಮಾಡಲ್ಪಟ್ಟ ಉಪಕಾರವುಳ್ಳ ಈ ಚರಿತ್ರೆಯು ಸಕಲ ಇಷ್ಟಾರ್ಥಗಳನ್ನೂ ಕೊಡುತ್ತದೆ.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದ ರಾಮಾಯಣದ ಸಾರಕಾಂಡದಲ್ಲಿ ಹನುಮತ್ಸುಂದರ
ಚರಿತ್ರೆಯಲ್ಲಿ ಸೀತಾಸುದ್ಧಿ ಎಂಬ ಒಂಭತ್ತನೆಯ ಸರ್ಗವು ಸಮಾಪ್ತವು

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

॥ ಒಂಭತ್ತನೆಯ ಸರ್ಗದ ಸಾರಾಂಶವು ॥

ಹನುಮಂತನು ಬೆಟ್ಟದಮೇಲಿನಿಂದ ನೆಗೆದು ಆಕಾಶದ ದಾರಿಯಲ್ಲಿ ಹೊರಟನು. ಆಗ ದೇವತೆಗಳಿಂದ ಕಳುಹಿಸಲ್ಪಟ್ಟ ಸುರಸೆಯು ಅವನ ಬಲವನ್ನು ತಿಳಿಯಲು ಎದುರಿಗೆ ಬಂದು "ಎಲೈ ಹನುಮನೇ! ನನ್ನ ಬಾಯೊಳಕ್ಕೆ ಪ್ರವೇಸಿಸು" ಎಂದಳು. ಹನುಮನು "ತನ್ನ ಕೆಲಸವನ್ನು ಮಾಡಿಕೊಂಡು ಬಂದು ಪ್ರವೇಶಿಸುತ್ತೇನೆ." ಎನ್ನಲು ಆಕೆಯು ಈಗಲೇ ಪ್ರವೇಶಿಸಬೇಕೆಂದು ಹಿಂಸಿಸಿದಳು.

ಆಗ ಹಾಗೆಯೇ ಆಗಲೆಂದು ದೊಡ್ಡದಾಗಿ ಬೆಳೆಯಲು ಆಕೆಯೂ ದೊಡ್ಡದಾಗಿ ಬಾಯಿ ಬಿಡಲು ಒಡನೆಯೇ ಸೂಕ್ಷ್ಮವಾಗಿ ಒಳಗೆ ಹೋಗಿ ಹೊರಗೆ ಬಂದನು ಆಗ ಅವಳು ಅವನನ್ನು ಸ್ತುತಿಸಿ ಹೊರಟುಹೋದಳು.

ಅನಂತರ ಸಮುದ್ರಮಧ್ಯದಲ್ಲಿ ಮೈನಾಕಪರ್ವತವು ಮೇಲಕ್ಕೆ ಬಂದು ಹನುಮಂತನನ್ನು ತನ್ನಮೇಲೆ ನಿಂತು ವಿಶ್ರಮಿಸಿಕೊಂಡು ಹೋಗುವಂತೆ ಹೇಳಿತು. ಅವನು ಅಲ್ಲಿ ವಿಶ್ರಮಿಸಿಕೊಳ್ಳದೆ ಅದಕ್ಕೆ ಉಪಚಾರವನ್ನು ಹೇಳಿ ಸ್ಪರ್ಶಿಸಿ ಹೊರಟನು. ಮುಂದೆ ಹೊರಡಲು ಅವನ ಛಾಯೆಯನ್ನು ನೋಡಿ ಛಾಯಾಗ್ರಹವು ಆ ಛಾಯೆಯ ಮೂಲಕ ಅವನನ್ನು ಹಿಡಿಯಿತು. ಆ ಛಾಯಾಗ್ರಹವು ಸಿಂಹಿಕೆಯೆಂಬ ರಾಕ್ಷಸಿಯು. ನೆರಳಿನ ಮೂಲಕ ಎಲ್ಲವನ್ನೂ ಹಿಡಿದು ತಿನ್ನುತ್ತಿದ್ದಳು. ಇದನ್ನು ತಿಳಿದು ಆ ಹನುಮನು ಆಕೆಯ ಬಾಯೊಳಕ್ಕೆ ಬಿದ್ದು ಅವಳನ್ನು ಕೊಂದು ಮುಂದೆ ಹೊರಟನು. ಲಂಕೆಯ ಬಳಿಗೆ ಹೋಗಿ ಲಂಕೆಯಲ್ಲಿ ಇಳಿದನು.

ಅಲ್ಲಿ ರಾವಣನ ತಂಗಿಯಾದ ಕ್ರೌಂಚಿಯನ್ನು ಕೊಂದು ಅನಂತರ ರಾತ್ರಿಯಲ್ಲಿ ಲಂಕೆಯನ್ನು ಹೊಕ್ಕನು. ಆಗ ಲಂಕಾಪುರೀ ಎಂಬ ರಾಕ್ಷಸಿಯು ಅವನನ್ನು ಎದುರಿಸಿದಳು. ಇವಳನ್ನು ಮುಷ್ಟಿಯಿಂದಲೇ ಹೊಡೆದನು. ಆಗ ಅವಳು ಬ್ರಹ್ಮನು ಹೇಳಿದುದನ್ನು ಸ್ಮರಿಸಿಕೊಂಡು "ಎಲೈ ಕಪಿಯೆ! ಬ್ರಹ್ಮನು ನನ್ನನ್ನು ಕುರಿತು 'ಎಲೈ ಲಂಕಿಣಿಯೆ! ನಿನ್ನನ್ನು ಕಪಿಯು ಸೋಲಿಸಿದಾಗ ರಾಮನು ರಾವಣನನ್ನು ಕೊಲ್ಲಲು ಬರುವನು.' ಎಂದು ಹೇಳಿದ್ದನು. ಅದು ಈಗ

ನನಗೆ ಜ್ಞಾಪಕಕ್ಕೆ ಬಂದಿತು. ನೀನು ನನ್ನನ್ನು ಜಯಿಸಿದ್ದೀಯೆ. ನೀನು ಲಂಕೆಯ ಬಳಿಗೆ ಹೋಗು. ಅಶೋಕ ವನದಲ್ಲಿರುವ ಜಾನಕಿಯನ್ನು ನೋಡು." ಎಂದಳು.

ಅನಂತರ ಹನುಮಂತನು ಲಂಕೆಯನ್ನು ನೋಡುತ್ತ ಹೊರಟನು. ಎಲ್ಲಾ ಕಡೆಗಳಲ್ಲಿಯೂ ಜಾನಕಿಯನ್ನು ಹುಡುಕುತ್ತಿದ್ದನು. ಕುಂಭಕರ್ಣನು ಮಲಗಿರುವ ಗುಹೆಗೆ ಹೋಗಿ ಅವನನ್ನೂ ಅಂತೆಯೇ ವಿಭೀಷಣನ ಮನೆಯಲ್ಲಿ ವಿಭೀಷಣನನ್ನೂ ನೋಡಿ ಅದೇ ರಾತ್ರಿಯಲ್ಲಿಯೇ ರಾವಣನ ಅರಮನೆಗೆ ಹೋದನು. ಅಲ್ಲಿ ರಾವಣನು ಸಭೆಯಲ್ಲಿದ್ದನು. ಈ ಮಾರುತಿಯು ಗಾಳಿಯ ಆಕಾರವನ್ನು ಹೊಂದಿ ಅಲ್ಲಿನ ದೀಪಗಳನ್ನು ಆರಿಸಿ ರಾವಣನೇ ಮುಂತಾದವರ ಬಟ್ಟೆಗಳನ್ನು ಹಾರಿಸಿ ಬೆತ್ತಲೆ ಇರುವಂತೆ ಮಾಡಿದನು. ಅಲ್ಲಿದ್ದ ಒಂದು ಪಂಜಿನಿಂದ ರಾವಣನ ಗಡ್ಡವನ್ನು ಸುಟ್ಟುಬಿಟ್ಟನು. ಅಲ್ಲಿದ್ದ ನೀರಿನ ಬಿಂದಿಗೆಗಳನ್ನು ಒಡೆದು ದೂತರನ್ನು ಬಾಲದಿಂದ ಹೊಡೆದು ಹೆದರಿಸಿದನು.

ಅನಂತರ ರಾವಣನು ಮಲಗಲು ಮನೆಗೆ ಹೋಗಿ ಮಲಗಿರಲು ಅಲ್ಲಿಗೂ ಈತನು ಹೋಗಿ ಸೀತೆಯನ್ನು ಹುಡುಕುತ್ತ ಮಂಡೋದರಿಯನ್ನು ನೋಡಿ ಈಕೆಯೇ ಸೀತೆಯಿರಬಹುದೆಂದು ಶಂಕಿಸಿ ಲಕ್ಷ್ಮಣನು ಹೇಳಿದ ಚಿಹ್ನೆಗಳನ್ನು ಆಕೆಯಲ್ಲಿ ಕಾಣದೆ ಹೋದನು.

ಆಗ ಪಾರ್ವತಿಯು "ಎಲೈ ಶಿವನೇ! ರಾಕ್ಷಸಿಯಾದ ಮಂಡೋದರಿಯು ಸೀತೆಯ ಸದೃಶಳು ಎಂದು ಹೇಳಿದೆಯಲ್ಲ! ಹೆಂಗಸರು ಸೀತೆಯ ಅಂಶಾಂಶದವರು ಎಂದು ನಾನು ಕೇಳಿರುವೆನೆಲ್ಲ!" ಎನ್ನಲು ಶಿವನು "ಎಲೈ ದೇವಿಯೆ! ಈ ಸೀತೆಯನ್ನೂ ವಿಷ್ಣುವು ನಿರ್ಮಿಸಿದನು. ಅದೇ ವಿಷ್ಣುವು ಮಂಡೋದರಿಯನ್ನೂ ನಿರ್ಮಿಸಿದನು. ಆ ವಿಷಯವನ್ನು ಹೇಳುತ್ತೇನೆ" ಕೇಳು.

ಒಂದುಸಾರಿ ತಾಯಿಯಾದ ಕೈಕಸಿಯು ಮಗನಾದ ರಾವಣನ್ನು ಕುರಿತು ದುಃಖದಿಂದ "ಎಲೈ ಪುತ್ರನೆ! ಶೇಷನು ನಿಟ್ಟುಸಿರು ಬಿಟ್ಟುದರಿಂದ ನಾನು ಪೂಜಿಸುತ್ತಿದ್ದ ಲಿಂಗವು ಪಾತಾಳಕ್ಕೆ ಹೊರಟುಹೋಯಿತು. ಆದ್ದರಿಂದ ಶಿವನ ಬಳಿಯಿಂದ ಆತ್ಮಲಿಂಗವನ್ನು ತಂದುಕೊಡು" ಎಂದಳು.

ತಾಯಿಯ ಆ ಮಾತನ್ನು ಕೇಳಿ ರಾವಣನು ಬಂದು ನನ್ನನ್ನು ಕುರಿತು ಗಾಯನ ಮಾಡಲು ನಾನು ವರವನ್ನು ಕೊಡಲು ಬಂದೆನು. ಆಗ ರಾವಣನು

ನನ್ನನ್ನು ಎರಡು ವರಗಳನ್ನು ಕೊಡೆಂದು ಕೇಳಿ ತನ್ನ ತಾಯಿಗೆ ಪೂಜೆಗೆ ಆತ್ಮಲಿಂಗವನ್ನೂ, ಪಾರ್ವತಿಯನ್ನು ತನಗೆ ಹೆಂಡತಿಯಾಗಿರುವುದಕ್ಕೋಸ್ಕರ ವಾಗಿಯೂ ಅಪೇಕ್ಷಿಸಿದನು. ಆಗ ನಾನು ಆತ್ಮಲಿಂಗವನ್ನೂ ನಿನ್ನನ್ನೂ ಕೊಟ್ಟು ಬಿಟ್ಟೆನು. ಆಗ "ಎಲೈ ರಾವಣನೇ! ಈ ಆತ್ಮಲಿಂಗವನ್ನು ನೆಲದಮೇಲಿಟ್ಟರೆ ನಾನು ಅಲ್ಲಿರುವೆನೇ ಹೊರತು ಮುಂದೆ ಹೊರಡುವುದಿಲ್ಲ" ಎಂದೆನು.

ರಾವಣನು ಹಾಗೆಯೇ ಆಗಲೆಂದು ಹೇಳಿ ಲಿಂಗವನ್ನು ತೆಗೆದುಕೊಂಡು ಆ ಪಾರ್ವತಿಯನ್ನೂ ಕರೆದುಕೊಂಡು ಹೊರಟನು. ಆಗ ನೀನು ವಿಷ್ಣುವನ್ನು ಸ್ಮರಿಸಿಕೊಂಡೆ. ಆಗ ಆ ವಿಷ್ಣುವು ತಾನು ಮೈಗೆ ಹಚ್ಚಿಕೊಂಡಿದ್ದ ಗಂಧವನ್ನು ತೆಗೆದುಕೊಂಡು ಮಂಡೋದರಿಯನ್ನು ಸೃಷ್ಟಿಸಿ ಮಯನ ಕೈಗೆ ಕೊಡಲು ಅವನು ಅವಳನ್ನು ಪಾತಾಳದಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋದನು. ಅನಂತರ ವಿಷ್ಣುವು ಬ್ರಾಹ್ಮಣನ ವೇಷವನ್ನು ಹಾಕಿಕೊಂಡು ರಾವಣನ ಬಳಿಗೆ ಬಂದು "ಎಲೈ ರಾವಣನೇ! ಶಿವನು ನಿನಗೆ ಮೋಸಮಾಡಿರುವನು. ಮಾಯಾ ಪಾರ್ವತಿಯನ್ನು ನಿನಗೆ ಕೊಟ್ಟು ಸರಿಯಾದ ಪಾರ್ವತಿಯನ್ನು ಪಾತಾಳದಲ್ಲಿಟ್ಟಿ ರುವನು. ಈ ಕೃತ್ರಿಮ ಪಾರ್ವತಿಯನ್ನು ಬಿಟ್ಟು ಮಯನ ಮನೆಯಲ್ಲಿ ಪಾತಾಳದಲ್ಲಿರುವ ಆ ಪಾರ್ವತಿಯನ್ನು ಹೆಂಡತಿಯನ್ನಾಗಿ ಮಾಡಿಕೊಂಡು ಸುಖವಾಗಿರು" ಎಂದನು.

ಬ್ರಾಹ್ಮಣನ ಈ ಮಾತನ್ನು ಕೇಳಿ ರಾವಣನು ಮತ್ತೆ ನನ್ನ ಬಳಿಗೆ ಬಂದು "ಎಲೈ ಶಿವನೇ! ನಿನ್ನ ಕಪಟ ವಿದ್ಯೆಯು ತಿಳಿಯಿತು. ನನಗೆ ಮಾಯಾ ಪಾರ್ವತಿಯನ್ನು ಕೊಟ್ಟು ಸರಿಯಾದವಳನ್ನು ಪಾತಾಳದಲ್ಲಿ ಬಚ್ಚಿಟ್ಟಿದ್ದೀಯೆ. ಈಕೆಯು ನಿನಗೇ ಇರಲಿ. ಆಕೆಯನ್ನು ನಾನು ಕರೆದುಕೊಂಡು ಹೋಗುತ್ತೇನೆ." ಎಂದು ಹೇಳಿ ಆಕೆಯನ್ನು ಬಿಟ್ಟು ಪಾತಾಳಕ್ಕೆ ಹೊರಟನು ದಾರಿಯಲ್ಲಿ ಜಲಬಾಧೆಗೆ ಅವಸರವಾಗಲು ಈ ಬ್ರಾಹ್ಮಣನನ್ನು ನೋಡಿ ಈ ಆತ್ಮಲಿಂಗವನ್ನು ಕೊಟ್ಟು ಹೋಗಲು ಆ ಬ್ರಾಹ್ಮಣನು ಒಂದು ಮುಹೂರ್ತಕಾಲದ ಅವಧಿಯನ್ನು ಹೇಳಿ ಕಳುಹಿಸಿದನು. ರಾವಣನು ಮೂತ್ರವಿಸರ್ಜನೆಗೆ ಕುಳಿತುಕೊಳ್ಳಲು ಮೂತ್ರವು ಒಂದು ಮುಹೂರ್ತವಾದರೂ ನಿಲ್ಲದೆ ಧಾರಾಕಾರವಾಗಿ ಹೋಗುತ್ತಲೇ ಇದ್ದಿತು ರಾವಣನು ಬಾರದಿರಲು ಬ್ರಾಹ್ಮಣರೂಪಿಯಾದ ಹರಿಯು ಆ ಲಿಂಗವನ್ನು ಅಲ್ಲಿಟ್ಟು ತನ್ನ ಸ್ಥಳಕ್ಕೆ ಹೊರಟು ಹೋದನು.

ಇತ್ತ ರಾವಣನು ಮೂತ್ರವಿಸರ್ಜನೆಯನ್ನು ಮುಗಿಸಿಕೊಂಡು ಬಂದು ಲಿಂಗವು ನೆಲದಮೇಲಿರುವುದನ್ನು ನೋಡಿ ತಲೆಯನ್ನು ಹಿಡಿದು ಅಲ್ಲಾಡಿಸಿದನು.

ಆ ಲಿಂಗವು ಅಲ್ಲಾಡದೆ ರಾವಣನು ಹಿಡಿದಿದ್ದ ಬೆರಳುಗಳ ಜಾಗದಲ್ಲಿ ಎರಡು ಹಳ್ಳಗಳಾದುವು. ಮೇಲಕ್ಕೆ ಎತ್ತರವಾಗಿ ಕಿವಿಗಳಂತಾಯಿತು. ಅದನ್ನೇ ಗೋಕರ್ಣವೆಂದೆನ್ನುತ್ತಾರೆ. ಅನಂತರ ರಾವಣನು ಖಿನ್ನನಾಗಿ ಪಾತಾಳಕ್ಕೆ ಹೋದನು. ಮಯನ ಮನೆಯಲ್ಲಿರುವ ಮಂಡೋದರಿಯನ್ನು ನೋಡಿದನು. ಮಯನನ್ನು ಕೇಳಲು ಆತನು ಆಕೆಯನ್ನು ವಿವಾಹಮಾಡಿ ಕೊಟ್ಟನು. ಆಗ ರಾವಣನಿಗೆ ಒಂದು ಉತ್ತಮವಾದ ಶಕ್ತ್ಯಾಯುಧವನ್ನೂ ಬಳುವಳಿಯನ್ನಾಗಿ ಕೊಟ್ಟನು. ಅನಂತರ ರಾವಣನು ಊರಿಗೆ ಬಂದನು. ತಾಯಿಯು ಮಗನ ವಿಷಯವನ್ನು ಕುರಿತು ತಿರಸ್ಕರಿಸಲು ಅವನು ಗೋಕರ್ಣಕ್ಕೆ ತಪಸ್ಸಿಗೆ ಹೋದನು. ಅಲ್ಲಿ ತಪಸ್ಸಿನಿಂದ ವರವನ್ನು ಹೊಂದಿ ಮೂರುಲೋಕವನ್ನು ತನ್ನ ಅಧೀನವನ್ನಾಗಿ ಮಾಡಿಕೊಂಡು ಲಂಕೆಯಲ್ಲಿ ರಾಜ್ಯವಾಳುತ್ತಿದ್ದನು. ಆದ್ದರಿಂದಲೇ ಮಂಡೋದರಿಯು ಸೀತೆಯ ಸಮಾನಳೆಂದು ಹೇಳಿದುದು.

ಮಯನೂ ಲಂಕೆಯಲ್ಲಿ ಮನೆಮಾಡಿಕೊಂಡಿದ್ದನು. ಇವನಿಗೆ ಗಯನೆಂಬ ಬಂಧುವಿದ್ದನು ಅವನಿಗೆ ರಾವಣನ ಕೈಯ್ಯಿಂದ ವಧೆಯಾಗುವಂತೆ ಬ್ರಹ್ಮನು ವರವನ್ನು ಕೊಟ್ಟದ್ದುದನ್ನು ಯೋಚಿಸಿ ತಾನು ಸಭೆಯಲ್ಲಿ ಅಪಹರಿಸಿದ್ದ ಗಯನ ವಸ್ತ್ರವು ರಾವಣನ ಮಂಚದಲ್ಲಿರುವಂತೆ ಹಾಕಿದನು. ಇಂತೆಯೇ ಒಬ್ಬರ ಬಟ್ಟೆಯನ್ನು ಮತ್ತೊಬ್ಬರ ಹಾಸಿಗೆಯಲ್ಲಿ ಹಾಕುತ್ತ ಹೊರಟು ಕೊನೆಗೆ ಅಶೋಕವನದಲ್ಲಿ ದುಃಖಿಸುತ್ತಿರುವ ಸೀತೆಯನ್ನು ನೋಡಿದನು. ರಾವಣನು ಕನಸಿನಲ್ಲಿ ಕಪಿಯು ಬಂದಿರುವುದನ್ನು ತಿಳಿದು, ತಾನು ಮಾಡುವ ದುಷ್ಟತನವನ್ನು ರಾಮನಿಗೆ ಹೇಳಿ ಇನ್ನು ಕೊಲ್ಲಿಸಲೆಂದು ನಿಶ್ಚಯಿಸಿ, ಆ ಅಶೋಕವನಕ್ಕೆ ಬಂದನು. ಅನಂತರ ರಾಮನನ್ನು ಬಿಡುವಂತೆಯೂ ತನ್ನನ್ನು ವರಿಸುವಂತೆಯೂ ಸೀತೆಯನ್ನು ಕೇಳಿದನು. ಅದಕ್ಕೆ ಜಾನಕಿಯು ಅವನನ್ನು ತಿರಸ್ಕರಿಸಿದಳು. ಅದರಿಂದ ರಾವಣನು ಕೋಪಗೊಂಡು ಕತ್ತಿಯನ್ನೆತ್ತಿ ಕೊಂಡು ಕೊಲ್ಲಲು ಹೋದನು. ಮಂಡೋದರಿಯು ತಡೆದಳು. ಅನಂತರ ದೂತಿಯರನ್ನು ಕುರಿತು "ಈಕೆಗೆ ಒಂದು ತಿಂಗಳು ಅವಧಿಯನ್ನು ಕೊಟ್ಟಿರುವೆನು. ಅಷ್ಟರೊಳಗೆ ನನಗೆ ಅಧೀನಳಾಗದೆ ಹೋದರೆ ಇವಳನ್ನು ಕತ್ತರಿಸಿ ನನಗೆ ಬಡಿಸಿರಿ" ಎಂದು ಹೇಳಿ ಹೊರಟುಹೋದನು.

ಆಗ ಸೀತೆಯು "ಎಲೈ ರಾವಣನೆ! ನನ್ನನ್ನು ಬಾಲ್ಯದಲ್ಲಿ ಪೆಟ್ಟಿಗೆಯಲ್ಲಿಟ್ಟು ತಂದೆಯಷ್ಟೆ! ಆಗ ನಾನು ಹೇಳಿದ ಮಾತುಗಳನ್ನು ಮರೆತೆಯಾ? ಈಗ ನಾನು ಹೋಗುತ್ತೇನೆ. ಮತ್ತೆ ಬಂದು ನಿನ್ನ ಬಂಧುಮಿತ್ರರನ್ನೂ ನಿನ್ನನ್ನೂ ಕೊಲ್ಲಿಸು

ತ್ರೇನೆಂದು ಹೇಳಿದ್ದೆನಲ್ಲಾ! ಅದಕ್ಕೋಸ್ಕರವೇ ಈಗ ಬಂದಿರುವೆನು. ಮತ್ತೆ ಹೋಗಿ ಬರುವೆನು. ಆಗ ನಿಕುಂಭನ ಮಗನಾದ ಪೌಂಡ್ರಕನನ್ನು ಕೊಲ್ಲುವೆನು. ಅನಂತರ ಹೋಗಿ ಮತ್ತೆ ಬಂದು ಕುಂಭಕರ್ಣನ ಮಗನಾದ ಮೂಲಕಾಸುರನನ್ನು ಕೊಲ್ಲುವೆನು. ಈಗ ಸುಖವಾಗಿ ಮನೆಗೆ ಹೋಗು. ರಾಮನು ಬೇಗನೆ ಬಂದು ನಿನ್ನನ್ನು ಕೊಲ್ಲುವನು." ಎಂದು ಸೀತೆಯು ಹೇಳಿದ ವಾಕ್ಯಗಳಿಂದ ತಿರಸ್ಕೃತನಾಗಿ ಹೊರಟುಹೋದನು.

ಇತ್ತ ಸೀತೆಯು ಪ್ರಾಣವನ್ನು ಕಳೆದುಕೊಳ್ಳಲು ನೇಣುಹಾಕಿಕೊಳ್ಳಲು ಉದ್ಯುಕ್ತಳಾದಳು. ಆಗ ಮಾರುತಿಯು ನಿಧಾನವಾಗಿ ರಾಮಚರಿತ್ರೆಯನ್ನು ಹೇಳುತ್ತ ಬಂದನು. ಅನಂತರ ಕಣ್ಣಿಗೂ ಕಾಣಿಸಿಕೊಂಡು ಮುದ್ರಿಕೆಯನ್ನು ಕೊಟ್ಟನು. ಇದರಿಂದ ನಂಬಿದ ಸೀತೆಯು ಅವನ ಕೈಗೆ ಚೂಡಾಮಣಿಯನ್ನು ಕೊಟ್ಟು ಕಾಕಾಸುರನ ವಿಷಯವನ್ನು ಹೇಳಿದಳು. ಅನಂತರ ಮಾರುತಿಯು ಹೊರಟನು. ಅಲ್ಲಿದ್ದ ಮರಗಳಲ್ಲಿ ಹಣ್ಣುಗಳನ್ನು ತಿನ್ನುತ್ತಾ ಕೊಂಬೆಗಳನ್ನು ಮುರಿದುಹಾಕಿದನು. ಈ ವಿಷಯವನ್ನು ಆಳುಗಳು ರಾವಣನಿಗೆ ಹೇಳಿದರು. ಇತ್ತ ರಾವಣನು ಗಯನ ಬಟ್ಟೆಯನ್ನು ತನ್ನ ಮಂಚದಲ್ಲಿ ನೋಡಿ ಗಯನಲ್ಲಿ ಸಂದೇಹ ಬಂದು ಅವನನ್ನು ಕೊಂದನು. ಕಪಿಯ ಹಾವಳಿಯನ್ನು ಕೇಳಿದ ರಾವಣನು ಆ ಕಪಿಯನ್ನು ಹಿಡಿತರುವಂತೆ ಜಂಬುಮಾಲಿಗೆ ಹೇಳಿದನು.

ಹನುಮಂತನು ತನ್ನನ್ನು ಹಿಡಿಯಲು ಬಂದವರೆಲ್ಲರನ್ನೂ ಕೊಂದನು. ಅನಂತರ ರಾವಣನ ಅಪ್ಪಣೆಯಂತೆ ಮಗನಾದ ಅಕ್ಷನು ಹೋಗಲು ಅವನನ್ನೂ ಕೊಂದನು. ಅನಂತರ ತಂದೆಯ ಮಾತಿನಂತೆ ಇಂದ್ರಜಿತುವು ಹೋದನು. ಆಗ ಬ್ರಹ್ಮನಿಂದ ಪ್ರಾರ್ಥಿತನಾದ ಹನುಮನು ಆ ಇಂದ್ರಜಿತುವಿನ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದನು. ಅನಂತರ ಅವನನ್ನು ರಾವಣನ ಬಳಿಗೆ ಕೊಂಡೊಯ್ದರು. ಅಲ್ಲಿ ಅವನು ರಾವಣನಿಗೆ ಹಿತವಾದವನ್ನು ಹೇಳಿದನು. ಅವನು ಕೇಳಲೇ ಇಲ್ಲ. ಅನಂತರ ಅವನ ಬಾಲಕ್ಕೆ ಬಟ್ಟೆಯನ್ನು ಸುತ್ತಿ ಬೆಂಕಿಯನ್ನು ಹತ್ತಿಸಿದರು. ಊರಿನಲ್ಲೆಲ್ಲವೂ ಮೆರವಣಿಗೆ ಮಾಡಿದರು. ಸಾಯಂಕಾಲದವೇಳೆಗೆ ಪಶ್ಚಿಮದ ಬಾಗಿಲಿಗೆ ತರಲು ಅಲ್ಲಿ ಬ್ರಹ್ಮಾಸ್ತ್ರವನ್ನು ಕಳಚಿ ಬಿಸುಟು ಬಾಗಿಲುವಾಡವನ್ನು ತೆಗೆದುಕೊಂಡು ರಕ್ಷಕರನ್ನು ಕೊಂದನು. ಮತ್ತು ತನ್ನ ಬಾಲದ ಬೆಂಕಿಯಿಂದ ಎಲ್ಲರ ಮನೆಗೂ ಬೆಂಕಿಯನ್ನು ಹತ್ತಿಸಿ ಸುಟ್ಟುಬಿಟ್ಟನು. ಎಲ್ಲವನ್ನೂ ಸುಟ್ಟ ಮೇಲೆ ಸಮುದ್ರಕ್ಕೆ ಹೋಗಿ ಅಲ್ಲಿ ತನ್ನ ಬಾಲದ ಬೆಂಕಿಯನ್ನು ಆರಿಸಿಕೊಂಡನು. ಮತ್ತು ತನ್ನ ಗಂಟಲಿನಲ್ಲಿ ಸಿಕ್ಕಿಕೊಂಡಿದ್ದ ಹೊಗೆಸುತ್ತಿದ್ದ ಶ್ಲೇಷ್ಮವನ್ನು

ಆ ಸಮುದ್ರಕ್ಕೆ ಉಗಿದನು. ಅನಂತರ ಸೀತೆಯು ಸುಟ್ಟುಹೋಗಿರುವಳೆಂದು ಊಹಿಸಿ ಆದರಿಂದ ಎಲ್ಲ ಅನರ್ಥಗಳೂ ಉಂಟಾಗುವುದೆಂದೂ ಊಹಿಸಿದನು. ಅದಕ್ಕೋಸ್ಕರ ತಾನು ಪ್ರಾಣಬಿಡಲು ಪ್ರಯತ್ನಪಟ್ಟಾಗ ಸೀತೆಯು ಸುಟ್ಟುಹೋಗಿಲ್ಲವೆಂದು ಆಕಾಶವಾಣಿಯಾಗಲು ಸುಮ್ಮನಾದನು.

ಅನಂತರ ಜಾನಕಿಯನ್ನು ನೋಡಲು ಅಶೋಕವನದಬಳಿಗೆ ಹೋದನು. ಆಗ ಅಲ್ಲಿನ ನೆಲವೆಲ್ಲವೂ ಚಿನ್ನದಿಂದ ಕೂಡಿರುವುದನ್ನು ಕಂಡನು. ಅದರ ಕಾರಣವೇನೆಂದರೆ, ಕ್ಷೀರಸಮುದ್ರದ ನಡುವೆ ತ್ರಿಕೂಟಾಚಲವೆಂಬ ಬೆಟ್ಟವಿದ್ದಿತು. ಅದು ಎತ್ತರವಾಗಿಯೂ ಅಗಲವಾಗಿಯೂ ಇದ್ದಿತು. ಅದಕ್ಕೆ ಮೂರು ಶಿಖರಗಳಿದ್ದುವು. ಅದರಲ್ಲಿ ಒಂದು ಚಿನ್ನದ್ದು. ಮತ್ತೊಂದು ಬೆಳ್ಳಿಯದು. ಇನ್ನೊಂದು ಕಬ್ಬಿಣದ್ದು. ಅದರ ಮಧ್ಯದಲ್ಲಿ ವರುಣನ ಉದ್ಯಾನವನವಿದ್ದಿತು. ಅಲ್ಲಿ ಒಂದು ಸರೋವರವೂ ಇದ್ದಿತು. ಅದರಲ್ಲಿ ಬಹು ಬಲಿಷ್ಠವಾದ ಒಂದು ಮೊಸಳೆ ಇದ್ದಿತು. ಆ ಸುತ್ತಿನ ಕಾಡಿನಲ್ಲಿ ಒಂದು ಗಂಡಾನೆಯು ಬಹು ಬಲಿಷ್ಠನಾಗಿದ್ದುಕೊಂಡು ಒಂದುಸಾರಿ ಬಾಯಾರಿ ಜೊತೆಯ ಆನೆಗಳೊಡನೆ ನೀರು ಕುಡಿಯಲು ಅಲ್ಲಿಗೆ ಬಂದಿತು. ನೀರನ್ನು ಕುಡಿಯುತ್ತಿದ್ದಾಗ ಮೊಸಳೆಯು ಆನೆಯನ್ನು ಹಿಡಿದುಕೊಂಡಿತು. ಈ ಸಲಗನು ತಾನು ತನ್ನ ಬಲವನ್ನು ಬಿಟ್ಟು ಪ್ರಯೋಗಿಸಿ ಎಷ್ಟು ಎಳೆದರೂ ಬಿಡಿಸಿಕೊಳ್ಳಲಾಗಲಿಲ್ಲ. ಅಲ್ಲದೆ ಇದರ ಸಹಾಯಕ್ಕೆ ಬೇರೆಯ ಆನೆಗಳು ಬಂದರೂ ಆಗಲೂ ಬಿಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಆಗ ಅದಕ್ಕೆ ಬಹುದುಃಖವು ಪ್ರಾಪ್ತವಾಗಿ ಜೀವದಮೇಲೆ ಆಸೆಯನ್ನು ಬಿಟ್ಟು ಅದು ಹರಿಯನ್ನು ಧ್ಯಾನಿಸತೊಡಗಿತು. ಆ ಕೊಳದಲ್ಲಿದ್ದ ಹೂವುಗಳನ್ನು ಒಂದೊಂದನ್ನಾಗಿ ಕಿತ್ತು ಮನಸ್ಸಿನಲ್ಲಿಯೇ ಇದರಿಂದ ಹರಿಯನ್ನು ಪೂಜಿಸುತ್ತೇನೆಂದು ಹೇಳುತ್ತ ಎಸೆಯುತ್ತಿದ್ದಿತು. ಅಲ್ಲದೆ ಮನಸ್ಸಿನಲ್ಲಿಯೇ ಎಲ್ಲಾ ಬಗೆಯಲ್ಲಿಯೂ ಪೂಜೆ ಮುಂತಾದುವುಗಳನ್ನು ನೆರವೇರಿಸಿತು. ಮತ್ತು ಅವನನ್ನು ಅನೇಕ ಬಗೆಯಾಗಿ ಸ್ತುತಿಸಿತು.

ಆಗ ಅದರ ದೀನತೆಯಿಂದ ದಯೆಗೊಂಡ ವಿಷ್ಣುವು ಗರುಡನಮೇಲೆ ಹತ್ತಿ ಬಂದು ಒಡನೆಯೇ ಚಕ್ರದಿಂದ ಆ ಮೊಸಳೆಯನ್ನು ಕೊಂದು ಆನೆಯನ್ನು ಬಿಡಿಸಿದನು ಈ ಆನೆಯು ಪೂರ್ವದಲ್ಲಿ ಪಾಂಡ್ಯದೇಶದಲ್ಲಿ ಇಂದ್ರದ್ಯುಮ್ನನೆಂಬ ರಾಜನಾಗಿದ್ದನು. ಒಂದುಸಾರಿ ಅವನು ತಪಸ್ಸಿನಲ್ಲಿದ್ದು ಧ್ಯಾನಮಾಡುತ್ತಿದ್ದಾಗ ಅಲ್ಲಿಗೆ ಅಗಸ್ತ್ಯಋಷಿಯು ಹೋದನು. ಧ್ಯಾನದಲ್ಲಿದ್ದ ಆ ರಾಜನು ಮುನಿಯು

ಬಂದುದನ್ನು ತಿಳಿಯದೆ ಮಾತನಾಡಿಸದಿರಲು ಅವನು ನೀನು ಮದಗಜವಾಗೆಂದು ಶಾಪವನ್ನು ಕೊಟ್ಟನು. ಅನಂತರ ಈ ವಿಷಯವನ್ನು ತಿಳಿದು ಋಷಿಯನ್ನು ಕೇಳಿಕೊಳ್ಳಲು ನಿನ್ನನ್ನು ಮೊಸಳೆಯು ಹಿಡಿದಾಗ ಶಾಪವು ಹೋಗುವದೆಂದು ಹೇಳಿದನು.

ಪೂರ್ವದಲ್ಲಿ ಹೂ ಹೂ ಎಂಬ ಒಬ್ಬ ಗಂಧರ್ವನಿದ್ದನು ಅವನು ಈ ಸರೋವರಕ್ಕೆ ಜಲಕ್ರೀಡೆಯಾಡಲು ಅಪ್ಸರಸ್ತ್ರೀಯರೊಡನೆ ಬಂದನು. ಆಗ ಅಲ್ಲಿ ದೇವಲನೆಂಬ ಋಷಿಯು ಸ್ನಾನಕ್ಕೆ ಇಳಿದಿರಲು ಅವನನ್ನು ಹೊರಗೋಡಿಸಲು ಈ ಗಂಧರ್ವನು ಯೋಚಿಸಿ ನೀರಿನಲ್ಲಿ ಮುಳುಗಿ ಅವನ ಕಾಲುಗಳನ್ನು ಹಿಡಿದೆಳೆದನು. ಇದನ್ನು ಆ ಋಷಿಯು ತಿಳಿದು ನೀನು ಮೊಸಳೆಯಾಗೆಂದು ಶಪಿಸಿದನು. ಅವನು ಅನಂತರ ಪ್ರಾರ್ಥಿಸಿ ಕೇಳಿಕೊಳ್ಳಲು ಹರಿಯು ನಿನ್ನ ಶಾಪವನ್ನು ಬಿಡುಗಡೆ ಮಾಡುತ್ತಾನೆ ಎಂದನು.

ಈ ರೀತಿಯಾಗಿ ಇವೆರಡೂ ಕಷ್ಟದಲ್ಲಿದ್ದಾಗ ಹರಿಯು ಅವೆರಡನ್ನೂ ಪಾರು ಮಾಡಿದನು. ಅನಂತರ ಅವರಿಬ್ಬರೂ ಆ ದೇಹವನ್ನು ಬಿಟ್ಟು ಮತ್ತೆ ತಮ್ಮ ತಮ್ಮ ಪೂರ್ವಸ್ಥಳಗಳಿಗೆ ಹೊರಟುಹೋದರು

ಅನಂತರ ಒಂದುಸಾರಿ ಗರುಡನು ತನಗೆ ಹಸಿವಾಗಿರುವುದೆಂದೂ ಆಹಾರವನ್ನು ಕೊಡಬೇಕೆಂದೂ ವಿಷ್ಣುವನ್ನು ಕೇಳಲು ಅವನು ಆ ಆನೆ ಮತ್ತು ಮೊಸಳೆಗಳ ದೇಹವನ್ನು ತಿನ್ನುವಂತೆ ಹೇಳಿ ಕಳುಹಿಸಿದನು. ಇವನು ಬರುವಷ್ಟರೊಳಗೆ ಭ್ರೂಭಂಗನೆಂಬ ಹದ್ದು ಅದನ್ನು ತಿನ್ನುತ್ತಿದ್ದಿತು. ಅಲ್ಲಿಗೆ ಬಂದ ಗರುಡನು ಆ ಹದ್ದನ್ನು ಕೊಂದು ಅದನ್ನು ಒಂದು ಕಾಲಿನಿಂದಲೂ, ಉಳಿದ ಆನೆ ಮೊಸಳೆಗಳ ಹೆಣವನ್ನು ಮತ್ತೊಂದು ಕಾಲಿನಿಂದಲೂ ಹಿಡಿದುಕೊಂಡು, ತಿನ್ನುವುದಕ್ಕೆ ಜಾಗವನ್ನು ಹುಡುಕುತ್ತ ಹೊರಟನು. ಅನಂತರ ಕ್ಷೀರಸಮುದ್ರದಲ್ಲಿ ಒಂದು ನೇರಳೆ ಮರವನ್ನು ನೋಡಿ ಅದರ ಒಂದು ದೊಡ್ಡ ಕೊಂಬೆಯಮೇಲೆ ಕುಳಿತನು. ಒಡನೆ ಕೊಂಬೆಯು ಮುರಿದುಹೋಯಿತು. ಅದರಲ್ಲಿ ಅನೇಕಜನ ವಾಲಖಿಲ್ಯಋಷಿಗಳು ತಲೆಕೆಳಗಾಗಿ ತಪಸ್ಸು ಮಾಡುತ್ತಿದ್ದರು. ಅವರ ಶಾಪದಿಂದ ಹೆದರಿ ಗರುಡನು ಮುರಿದ ಕೊಂಬೆಯನ್ನು ಕೊಕ್ಕಿನಲ್ಲಿಯೇ ಹಿಡಿದುಕೊಂಡು ಹಾರಿದನು. ಹಾಗೆ ಹಾರುತ್ತಿರುವಾಗ ಕಶ್ಯಪನನ್ನು ನೋಡಿ ನಮಸ್ಕರಿಸಿ ಕೇಳಿಕೊಳ್ಳಲು ಲಂಕೆಯೆಂಬ ಜಾಗದಲ್ಲಿ ಹೋಗಿ ಕುಳಿತು ತಿನ್ನುವಂತೆ ಹೇಳಿದನು.

ಕಶ್ಯಪನ ಮಾತಿನಂತೆ ಗರುಡನು ಲಂಕೆಗೆ ಹೋಗಿ ರೆಕ್ಕೆಯನ್ನು ಅಗಲಿಸಿಕೊಂಡು ಅವುಗಳಮೇಲೆ ಆ ಕೊಂಬೆಯನ್ನಿಟ್ಟುಕೊಂಡು ಆ ಮೂರು ಹೆಣಗಳನ್ನು ತಿಂದನು. ಆ ಮೂರು ಪ್ರಾಣಿಗಳ ಮೂಳೆಗಳೂ ಮೂರು ಗುಡ್ಡಗಳಾದುವು. ಇದೇ ಲಂಕೆಯ ತ್ರಿಕೂಟಾಚಲವು. ಅನಂತರ ಗರುಡನು ಆ ಬೆಟ್ಟಗಳಮೇಲೆ ಕೊಂಬೆಯನ್ನಿಟ್ಟು ಹೊರಟುಹೋದನು. ವಾಲಖಿಲ್ಯರು ತಪಸ್ಸು ಮುಗಿದಮೇಲೆ ವೈಕುಂಠವನ್ನು ಹೊಂದಿದರು.

ಅನಂತರ ಆ ಕೊಂಬೆಯು ಪಾಚಿ ಹಿಡಿದು ಕಲ್ಲಿನಂತಾಯಿತು. ಅದು ಯಾರಿಗೂ ತಿಳಿಯಲೇ ಇಲ್ಲ. ಈಗ ಲಂಕೆಗೆ ಬೆಂಕಿ ಬಿದ್ದಾಗ ಸುಡುವಿಕೆಯಿಂದ ಅದು ಸ್ರವಿಸಿ ಆ ಲಂಕೆಯೆಲ್ಲವೂ ಚಿನ್ನದ ಮಯವಾಯಿತು. ಇದನ್ನು ನೋಡಿ ಆ ಹನುಮಂತನಿಗೆ ಆಶ್ಚರ್ಯವಾಯಿತು.

ಕಪಿಯು ಅಶೋಕವನದಲ್ಲಿ ಸೀತೆಯನ್ನು ನೋಡಿ ತನ್ನ ಹೆಗಲಿನ ಮೇಲೆ ಕುಳಿತುಕೊಂಡರೆ ರಾಮನ ಬಳಿಗೆ ಕರೆದುಕೊಂಡು ಹೋಗುವಂತೆ ಹೇಳಿದನು. ಅದಕ್ಕೆ ಆಕೆಯು ಹಾಗಾಗುವುದಿಲ್ಲವೆಂದು ಹೇಳಿ ಒಂದು ಮುದ್ರಿಕೆಯನ್ನು ಕೊಡುವಂತೆ ಹೇಳಿ ಕೊಟ್ಟಳು. ಅದನ್ನು ತೆಗೆದುಕೊಂಡು ಮಾರುತಿಯು ನೆಗೆದು ಹೊರಟನು. ಆಗ ಬ್ರಹ್ಮನು ಲಂಕೆಯಲ್ಲಿ ನಡೆದ ವಿಷಯಗಳನ್ನು ಒಂದು ಕಾಗದದಲ್ಲಿ ಬರೆದು ಅವನ ಕೈಯಲ್ಲಿ ಕೊಟ್ಟನು. ಹೀಗೆ ನೆಗೆದು ಹೊರಟ ಕಪಿಯು ಉತ್ತರ ದಿಕ್ಕಿನಲ್ಲಿ ಸ್ವಲ್ಪ ನಿಲ್ಲಲು, ಅಲ್ಲಿ ಒಬ್ಬ ಮುನಿಯಿದ್ದುದನ್ನು ತಿಳಿದು ಹೆಮ್ಮೆಯಿಂದ “ಎಲೈ ಮುನಿಯೆ! ನಾನು ರಾಮನ ಕಾರ್ಯವನ್ನು ಮಾಡಿದ್ದೇನೆ. ಕುಡಿಯಲು ನೀರು ಬೇಕು” ಎಂದನು. ಆ ಮುನಿಯು ಸನ್ನೆ ಮಾಡಿ ನೀರಿರುವ ಜಾಗವನ್ನು ತೋರಿಸಲು ಹನುಮನು ಮುದ್ರೆ, ಮಣಿ, ಪತ್ರಗಳನ್ನು ಆ ಮುನಿಯ ಮುಂದಿಟ್ಟು ನೀರಿದ್ದಲ್ಲಿಗೆ ಹೋದನು. ಆಗ ಆ ಮುನಿಯ ಬಳಿಯಲ್ಲಿದ್ದ ಒಂದು ಕಪಿಯು ಆ ಮುದ್ರಿಕೆಯನ್ನು ಅವನ ಕಮಂಡಲುವಿನಲ್ಲಿ ಹಾಕಿಬಿಟ್ಟಿತು. ಹನುಮಂತನು ಬಂದು ನೋಡಲು ಮುದ್ರಿಕೆಯಿರಲಿಲ್ಲ. ಮುನಿಯು ಹುಬ್ಬಿನ ಸಂಜ್ಞೆಯಿಂದ ತೋರಿಸಲು ಕಮಂಡಲುವಿನಲ್ಲಿ ಹುಡುಕಿದನು. ಅದರಲ್ಲಿ ಶ್ರೀರಾಮ ಮುದ್ರಿಕೆಗಳು ಬಹುವಾಗಿದ್ದವು. ಅದರಿಂದ ಚಕಿತನಾಗಿ “ಎಲೈ ಋಷಿಯೇ? ಈ ಮುದ್ರಿಕೆಗಳೆಲ್ಲಾ ಎಲ್ಲಿಯವು? ಇವುಗಳಲ್ಲಿ ನನ್ನದು ಯಾವುದು?” ಎಂದೆನಲು ಮುನಿಯು “ನಿನ್ನಂತೆಯೇ ಎಷ್ಟೋ ಜನರು ರಾಮರ ಕೆಲಸವನ್ನು ಮಾಡಿರುವರು. ಇವನ್ನು ಕಪಿಗಳು ಈ ಕಮಂಡಲದಲ್ಲಿ ಹಾಕುತ್ತಿವೆ. ಇವುಗಳಲ್ಲಿ ನಿನ್ನದಾವುದೆಂದು ನೋಡಿ ತೆಗೆದುಕೋ” ಎಂದನು. ಇದರಿಂದ ಹನುಮಂತನ ಗರ್ವವು ಹೋಯಿತು.

ಕಮಂಡುಲುವಿನಲ್ಲಿದ ಆ ಮುದ್ರಿಕೆಗಳನ್ನು ಎಣಿಸಲು ಅವನಿಗಾಗಲೇ ಇಲ್ಲ. ಅನಂತರ ಆ ಮುದ್ರಿಕೆಯನ್ನು ಬಿಟ್ಟು ಬಿಟ್ಟು ಜೊತೆಯ ಕಪಿಗಳಿದ್ದಲ್ಲಿಗೆ ಹೋದನು.

ಕಪಿಗಳೆಲ್ಲವೂ ಸೀತೆಯ ವಿಷಯನ್ನು ತಿಳಿದು ಸಂತೋಷಪಟ್ಟು ರಾಮನ ಬಳಿಗೆ ಹೊರಟವು. ದಾರಿಯಲ್ಲಿ ಸುಗ್ರೀವನ ಮಧವನವನ್ನು ಹೊಕ್ಕು ಅಲ್ಲಿನ ಹಣ್ಣನ್ನೆಲ್ಲಾ ಲೂಟಿಮಾಡಿದುವು. ನಂತರ ರಾಮನ ಬಳಿಗೆ ಹೋಗಿ ಹನುಮನು ಬ್ರಹ್ಮನ ಪತ್ರವನ್ನು ರಾಮನಿಗೆ ಕೊಟ್ಟನು. ಅಲ್ಲದೆ ಚೂಡಾಮಣಿಯನ್ನೂ ಕೊಟ್ಟು ಕಾಕಾಸುರನ ವಿಷಯುವನ್ನೂ ವಿಜ್ಞಾಪಿಸಿದನು. ಇದರಿಂದ ರಾಮನಿಗೆ ಅತ್ಯಂತ ಸಂತೋಷವುಂಟಾಗಿ ಉತ್ತಮೊತ್ತಮವಾದ ಆಲಿಂಗನವನ್ನು ಕೊಟ್ಟನು. ಅನಂತರ ಮಾರುತಿಯು ಹೆದರುತ್ತ ತಾನು ಹಾಳುಮಾಡಿದ ಮುದ್ರಿಕೆಯ ವಿಷಯುವನ್ನು ವಿಜ್ಞಾಪಿಸಿದನು. ಆ ಮುನಿಯ ವಿಷಯುವನ್ನೂ ತಿಳಿಸಿದನು. ಅದಕ್ಕೆ ರಾಮನು ತಾನೇ ಆ ರೀತಿಯಲ್ಲಿ ಬಂದಿದ್ದೆನೆಂದು ತಿಳಿಸಿ ಸಮಾಧಾನ ಪಡಿಸಿದನು. ಮತ್ತು ಬೆರಳಿನಲ್ಲಿದ್ದ ಉಂಗುರವನ್ನು ತೋರಿಸಿದನು. ಇದರಿಂದ ಹನುಮನು ರಾಮನನ್ನು ಸಾಕ್ಷಾದ್ವಿಷ್ಣುವೆಂದೇ ತಿಳಿದನು. ಮತ್ತು ಈ ರಾಮನ ಕೃಪೆಯಿಂದಲೇ ನನ್ನಲ್ಲಿ ಈ ರೀತಿಯಾದ ಪೌರುಷವು ಇರುವುದೆಂದೂ ತಿಳಿದನು.

ಮೈಸೂರು ಶಿವರಾಂಪೇಟೆಯಲ್ಲಿರುವ ಶ್ರೀ ಹನುಮಾನ್ ಪ್ರೆಸ್‌ನಲ್ಲಿ
ಪ್ರೊಪ್ರೈಟರ್ ಎಸ್. ನಾರಾಯಣರಾಜು ಇವರಿಂದ ಮುದ್ರಿಸಲ್ಪಟ್ಟಿತು. ೧೪–೪–೪೭

...ನನ್ನ ಅಥವಾ ನನ್ನ ಹೆಸರಿನಲ್ಲಿ ಇಲ್ಲ, ಸಾರಕ್ಕಿ ... ಯಾವ ಕಲ್ಯಾಣ ... ನನ್ನ ಹೆಂಡತಿ ಹೆಸರಿನಲ್ಲಿ ...ಗಾರಿಕಾ ಕಟ್ಟಡ, ಬೇನಾಮಿ ...ಮನೆಯನ್ನು ಖರೀದಿಸಿಲ್ಲ''

...ಧೆ, ರಾಜಕೀಯ ಜೀವನಕ್ಕೆ ... ಸುಳ್ಳು ದಾಖಲೆಗಳನ್ನೂ, ...ಳನ್ನು ಸೃಷ್ಟಿಸಿ ನನ್ನ ... ಪ್ರೇರಣೆಯ ಮೇರೆಗೆ ಈ ...ರಾಜಕೀಯವಾಗಿ ಅವರು ... ಎಂದು ಗೌಡರು

...ನೂನು ಉಲ್ಲಂಘನೆ

... ನಂಜುಂಡಸ್ವಾಮಿ ಅವರು ಮಾನನಷ್ಟ ಮೊಕದ್ದಮೆ ಎದುರಿಸುತ್ತಿದ್ದಾರೆ. ಸುಳ್ಳು ಹೇಳಿಕೆಗಳನ್ನು ನೀಡದಂತೆ ನ್ಯಾಯಾಲಯ ಅವರನ್ನು ನಿರ್ಬಂಧಿಸಿದೆ. ಕಾನೂನು ಪಂಡಿತರೆನಿಸಿಕೊಳ್ಳುವ ಇವರೇ ಕಾನೂನನ್ನು ಉಲ್ಲಂಘಿಸಿದ್ದಾರೆ.

ಇವರ ವಿರುದ್ಧ ನ್ಯಾಯಾಲಯ ನಿಂದನೆ ಮೊಕದ್ದಮೆ ಹೂಡುವ ಎಚ್ಚರಿಕೆಯನ್ನು ಪುಟ್ಟಸ್ವಾಮಿಗೌಡ ನೀಡಿದ್ದಾರೆ.

ಗಾಜಿನ ಮನೆಯಲ್ಲಿ ಕುಳಿತು ನಂಜುಂಡಸ್ವಾಮಿ ಬೇರೆಯವರನ್ನು ದೂರಲು ಹೊರಟಿದ್ದಾರೆ. ಮೊದಲು ತಾವು ಹೊಂದಿರುವ ಆಸ್ತಿ-ಪಾಸ್ತಿಯನ್ನು ತನಿಖೆಗೆ ಗುರಿಪಡಿಸಿಕೊಳ್ಳಲಿ. ನಂತರ ಬೇರೆಯವರನ್ನು ಕುರಿತು ಆರೋಪಿಸಿ, ತನಿಖೆಗೆ ಆಗ್ರಹಪಡಿಸಲಿ ಎಂದು ಪುಟ್ಟಸ್ವಾಮಿಗೌಡ ಹೇಳಿದ್ದಾರೆ.

...ರಿ -ಬಸ್ ಡಿಕ್ಕಿ ಇಬ್ಬರ ಸಾವು

...ಾಮನಗರ, ಸ.27

... ಸಮೀಪದ ಬಸವನಪುರ ...ಳಿ ಆಸಿಡ್ ತುಂಬಿದ್ದ ಟ್ಯಾಂಕರ್ ... ರಸ್ತೆ ಸಾರಿಗೆ ಬಸ್ ನಡುವೆ ಸಂಭವಿಸಿದ ಸ್ಥಳದಲ್ಲೇ ಟ್ಯಾಂಕರ್‌ನ ಚಾಲಕ ರಮೇಶ್ (40) ಮೃತಪಟ್ಟರೆ ಮತ್ತೊಬ್ಬನು ಬೆಂಗಳೂರಿನ ಸಂಜಯ್‌ಗಾಂಧೀ ಆಸ್ಪತ್ರೆ ಕೊಂಡೊಯ್ಯುವ ಮಾರ್ಗಮಧ್ಯದಲ್ಲಿ ... 8 ಮಂದಿ ಬೆಂಗಳೂರಿನ ...

ಹತ್ಯೆ

...ವು ಸ್ಪಷ್ಟೀಕರಣ ನೀಡಿದೆ.

...ರೈತ ಸಂಘದ ನಾಯಕ ಹಾಗೂ ...ಸಕ ಬಾಬಾಗೌಡ ಪಾಟೀಲರು ...ಾರ ಇಲ್ಲಿ ಸುದ್ದಿಗಾರರೊಂದಿಗೆ ...ತನಾಡಿ ತಮ್ಮ ಸಂಘಟನೆಯು ...ರ್ತಿಯುತ ಚಳವಳಿಯಲ್ಲಿ ನಂಬುಗೆ ಇರಿಸಿದೆ. ಕೆಲವು ವ್ಯಕ್ತಿಗಳು ರೈತ ಸಂಘದ ಹೆಸರಿನಲ್ಲಿ ಲಾಭ ಪಡೆಯಲು ಯತ್ನಿಸಿದ್ದಾರೆ. 'ಬುಡಾ' ಅಧಿಕಾರಿಗಳ ಮೇಲಿನ ಹಲ್ಲೆಯನ್ನು ರೈತ ಸಂಘವು ಖಂಡಿಸುವುದೆಂದು ಅವರು ತಿಳಿಸಿದರು.

ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅನಗೋಳ ಗ್ರಾಮಕ್ಕೆ ಗುರುವಾರ ತೆರಳಿದ್ದ ಕಮಿಶನರ್ ಒಳಗೊಂಡ 'ಬುಡಾ'ದ 13 ಅಧಿಕಾರಿಗಳ ತಂಡವನ್ನು ಗ್ರಾಮಸ್ಥರು ಮರಕ್ಕೆ ಕಟ್ಟಿ ಹೊಡೆದಿರುವುದನ್ನು ಇಲ್ಲಿ ಸ್ಮರಿಸಬಹುದು.

ಘಟನೆಯ ಬಗ್ಗೆ ಪೂರ್ಣಮಟ್ಟದ ತನಿಖೆ ನಡೆಸುವಂತೆ ಅವರು ಆಗ್ರಹಪಡಿಸಿ ಸೂಕ್ತ ದಾಖಲೆ ಪತ್ರಗಳಿಲ್ಲದೇ ರೈತರ ಹೊಲವನ್ನು ಪ್ರವೇಶಿಸಿದ ಅಧಿಕಾರಿಗಳ ಕ್ರಮವೂ ಸಹ ತಪ್ಪು ಎಂದು ಅವರು ವಿವರಿಸಿದರು.

ಈ ಮಧ್ಯೆ ಗುರುವಾರ ಬಂಧಿಸಿದ್ದ ಎಲ್ಲ 83 ಆರೋಪಿಗಳನ್ನು ಮ್ಯಾಜಿಸ್ಟ್ರೇಟರು ಹಾಜರುಪಡಿಸಿದಾಗ ಅವರನ್ನು ನವೆಂಬರ್ 30ರವರೆಗೆ ...

ಇ.ಎಸ...

ಕನ್ನಡಪ್ರಭ ... ಬೆಂಗಳೂರು...

ರಾಜ್ಯದ ತ... ಬೆಳಗಾವಿಯಲ್ಲಿ ಇ.ಎಸ... ಪ್ರಾರಂಭಿಸಲು ಸರ್ಕಾ... ಎಂದು. ಕಾರ್ಮಿಕ ... ಡಿಸೋಜಾ ಶುಕ್ರವಾರ...

ಆದರೆ ಈ ಆ... ಹಾಸಿಗೆಗಳಿರಬೇಕು ... ನಿರ್ಧರಿಸಿಲ್ಲ ಎಂದು ಅ... ತಿಳಿಸಿದರು.

''ರಾಜ್ಯದ ... ಕೈಗಾರಿಕೋದ್ಯಮಗಳಲ್ಲಿ ... ಅಪ್ರೆಂಟೀಸ್‌ಗಳು ತರಬೇ... ಪ್ರಸಕ್ತ ವರ್ಷ ತರಬೇ... ಸ್ಥಳಗಳನ್ನು ಗುರುತಿಸ... ಹೇಳಿದ ಅವರು ''ಈ ... ನೀಡಲಾಗುವ ... ಅರ್ಥದಷ್ಟನ್ನು ಕೆ... ನೀಡುತ್ತಿದ್ದು ಇವ... ಪ್ರಸ್ತಾವನೆಯು ಸರ್ಕಾ... ಎಂದರು.

...ಆಸ್ಪತ್ರೆ ಸ್ಥಾಪನೆ

ಆಧಾರಿತ ತರಬೇತಿ ಸಂಸ್ಥೆಗಳನ್ನಾಗಿ ಪರಿವರ್ತಿಸಲು ತೀರ್ಮಾನಿಸಿದ್ದೇವೆ. ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಕಾರ್ಮಿಕ ಇಲಾಖೆಯಲ್ಲಿ ತಕ್ಷಣ ಕನಿಷ್ಠ ವೇತನ ಸಲಹಾ ಮಂಡಳಿಯು ಸೇರಿದಂತೆ ಹಲವು ಮಂಡಳಿಗಳನ್ನು ಪುನರ್ ರಚಿಸಬೇಕಾಗಿದೆ. ಮುಂದಿನ ಹದಿನೈದು ದಿನಗಳಲ್ಲಿ ಈ ಪುನರ್ ರಚನೆಯ ಕೆಲಸವನ್ನು ಪೂರೈಸುತ್ತೇನೆ'' ಎಂದರು.

ಇ.ಎಸ್.ಐ. ಆಸ್ಪತ್ರೆಗಳಲ್ಲಿ ಅವ್ಯವಹಾರ ನಡೆಯುತ್ತಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ, ಈ ಆಸ್ಪತ್ರೆಗಳಿಗೆ ಭೇಟಿ ನೀಡಿ ತಾವು ಪರಿಶೀಲನೆ ನಡೆಸುವುದಾಗಿ ಅವರು ಭರವಸೆ ನೀಡಿದರು.

ಹಕ್ಕುಚ್ಯುತಿ ಸೂಚನೆ

(ಒಂದನೇ ಪುಟದಿಂದ)

ಸಾರ್ವಜನಿಕ ಹಿತಾಸಕ್ತಿಯ [illegible] ಸಮಿತಿಗೆ

[illegible] ಭಾಗಗಳನ್ನು

ರಾ... ಗರದಲ್ಲಿ ಅದ್ದೂರಿ ರಾಜ್ಯೋತ್ಸವ

ಕನ್ನಡಪ್ರಭ ವಾರ್ತೆ
ರಾಮನಗರ, ನ. 27

ಕನ್ನಡಿಗರಿಗೆ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಕಲೆಗಳ ಬಗ್ಗೆ ಅಭಿಮಾನ ಬೆಳೆಸಲು ರಾಜ್ಯೋತ್ಸವ ಆಚರಣೆ ಅಗತ್ಯ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಗೊ.ರು. ಚನ್ನಬಸಪ್ಪ ಹೇಳಿದ್ದಾರೆ.

ರಾಮನಗರದಲ್ಲಿ ರಾಜ್ಯೋತ್ಸವ ಹಾಗೂ ಗಣ್ಯರ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ರಾಜ್ಯದ ಯಾವ ಭಾಗದಲ್ಲೂ ಇಂಥ ಸಂಭ್ರಮ ಮತ್ತು ಸಡಗರದ ಅದ್ದೂರಿ ರಾಜ್ಯೋತ್ಸವ ನೋಡಿರಲಿಲ್ಲ ಎಂದು ಪ್ರಶಂಸಿಸಿದರು.

ಮಾಗಡಿ ಕ್ಷೇತ್ರದ ಶಾಸಕ ಎಚ್.ಎಂ. ರೇವಣ್ಣ, ಚಿತ್ರ ನಟರಾದ ಅಂಬರೀಷ್, ವಜ್ರಮುನಿ, ಮಾನು ಮತ್ತು ಪುರಸಭಾಧ್ಯಕ್ಷ ಸೈಯದ್ ಜಿಯಾವುಲ್ಲಾ ಅವರು ಮಾತನಾಡಿ ಕನ್ನಡಿಗರಲ್ಲಿ ಭಾಷಾಭಿಮಾನದ ಜತೆಗೆ ಕಲೆ, ಸಾಹಿತ್ಯಗಳು ಬೆಳಗಬೇಕು. ಕನ್ನಡಿಗರಿಗೆ ಎಲ್ಲ ಕ್ಷೇತ್ರಗಳಲ್ಲೂ ಮಾನ್ಯತೆ ದೊರೆಯಬೇಕು. ರಾಜ್ಯೋತ್ಸವದ ಈ ಸ್ಫೂರ್ತಿ, ಹುಮ್ಮಸ್ಸು ಸದಾ ಕಾಲ ಜಾಗೃತವಾಗಿರಬೇಕೆಂದರು.

ಸನ್ಮಾನ

ನಂಜುಂಡಸ್ವಾಮಿಗೆ ಪುಟ್ಟಸ್...

ಕನ್ನಡಪ್ರಭ ವಾರ್ತೆ
ಬೆಂಗಳೂರು, ನ. 27

''ನನ್ನ ವಿರುದ್ಧ ಮಾಡಿರುವ ಆರೋಪಗಳನ್ನು ಶಾಸಕ ಪ್ರೊ. ಎಂ. ಡಿ. ನಂಜುಂಡಸ್ವಾಮಿ ಅವರು ದಾಖಲೆ ಸಹಿತ ಸಾಬೀತು ಪಡಿಸಿದರೆ, ಅವರ ಕ್ಷಮೆ ಯಾಚಿಸಿ, ಸಾರ್ವಜನಿಕ ಜೀವನದಿಂದ ನಿವೃತ್ತಿಯಾಗುತ್ತೇನೆ'' ಎಂದು ಮಾಜಿ ಮಂತ್ರಿ ಜಿ. ಪುಟ್ಟಸ್ವಾಮಿಗೌಡ ಶುಕ್ರವಾರ ಹೇಳಿದ್ದಾರೆ.

''ಇಲ್ಲವಾದರೆ, ಅವರು ಸಾರ್ವಜನಿಕ ಜೀವನದಿಂದ ನಿವೃತ್ತಿಯಾಗುವ ಪಂಥಾಹ್ವಾನವನ್ನು ಸ್ವೀಕರಿಸಬೇಕೆಂದು ಪುಟ್ಟಸ್ವಾಮಿಗೌಡರು ನಂಜುಂಡಸ್ವಾಮಿ ಅವರಿಗೆ ತಿಳಿಸಿದ್ದಾರೆ.

''ನನ್ನ ಮೇಲೆ ಮಾಡಿರುವ ಆರೋಪಗಳನ್ನು ಸ್ಥಿರಪಡಿಸಿದರೆ, ತನಿಖೆಯನ್ನು ಎದುರಿಸಲು ಸಿದ್ಧ ಹೊಣೆಗಾರಿಕೆ ಸ್ಥಾನದಲ್ಲಿದ್ದುಕೊಂಡು ಬೇಜವಾಬ್ದಾರಿ ಹೇಳಿಕೆ ನೀಡಿ, ಚಾರಿತ್ರ್ಯ ವಧೆಯನ್ನು ನಿರಂತರವಾಗಿ ಮಾಡಿ, ಸ್ಥಾನದ ಘನತೆಯನ್ನು ನಂಜುಂಡಸ್ವಾಮಿ ಕಳೆದುಕೊಳ್ಳುತ್ತಿದ್ದಾರೆ'' ಎಂದು ಅವರು ಪತ್ರಿಕಾ ಹೇಳಿಕೆ ನೀಡಿ ಖಂಡಿಸಿದ್ದಾರೆ.

ರಾಜಕೀಯವಾಗಿ ನನ್ನ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದಿದ್ದರೆ, ಬಾಯಿ ಚಟ ಬಿಟ್ಟು ದಾಖಲಾತಿಗಳನ್ನು ಹಾಜರುಪಡಿಸುವಂತೆ ಅವರು ಸವಾಲು ಹಾಕಿದ್ದಾರೆ.

ಬೇನಾಮಿ ಆಸ್ತಿ ಮಾಡಿಲ್ಲ

''ಬಂಗಾರಪ್ಪನವರ ಸಂಪುಟದಲ್ಲಿದ್ದಾಗ ನಾನು ಅಕ್ರಮವಾಗಿ ಅಥವಾ ಬೇನಾಮಿಯಲ್ಲಿ ಆಸ್ತಿ ಗಳಿಸಿಲ್ಲ, ಗೇಲಾಕ್ಸಿ ಚಿತ್ರಮಂದಿರದ ಎದುರು ಜಯಲಕ್ಷ್ಮಿ



ಸಮುಚ್ಚ...
ಕುಟುಂಬ...
ಬಡಾವಣೆ...
ಮಂಟಪ...
ನಿರ್ಮಿಸಿ...
ಹೆಸರಿನಲ್ಲಿ...
ಎಂದಿದ್ದಾ...

ಚಾರಿ...
ಕಳಂಕ...
ಛಾಯಾ...
ವಿರೋ...
ಕೃತ್ಯವನ್ನು...
ಮಾಡಿಪ...
ಟೀಕಿಸಿದ...

ಈಗ...